# ದೇವರ ಮನೆ

## ದೇವರ ನೀಲನಕ್ಷೆಗನುಸಾರವಾಗಿ ಸ್ಥಳೀಯ ಸಭೆಗಳನ್ನು ಕಟ್ಟುವುದು

ಆಶಿಷ್ ರಾಯ್‌ಚೂರ್



ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಜೂನ್ 2018

ಮುಖಪುಟ ಮತ್ತು ವರ್ಣವಿನ್ಯಾಸ: ಬಿಜೋ ಥಾಮಸ್
ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ .ಎಂ

**ಸಂಪರ್ಕಿಸಬೇಕಾದ ವಿಳಾಸ:**
ಆಲ್ ಪೀಪಲ್ಸ್ ಚರ್ಚ್ ಅಂಡ್ ವರ್ಲ್ಡ್ ಔಟ್‌ರೀಚ್
319, 2ನೇ ಮಹಡಿ, 7ನೇ ಮೈನ್, ಹೆಚ್.ಆರ್.ಬಿ.ಆರ್. ಲೇಔಟ್,
2ನೇ ಬ್ಲಾಕ್, ಕಲ್ಯಾಣ ನಗರ, ಬೆಂಗಳೂರು - 560 043
ಕರ್ನಾಟಕ, ಭಾರತ.

ದೂರವಾಣಿ: +91-80-25452617
ಇ-ಮೇಲ್: contact@apcwo.org
ವೆಬ್‌ಸೈಟ್: www.apcwo.org

Unless otherwise indicated, all Scripture quotations are taken from the Holy Bible, New King James Version. Copyright © 1982 by Thomas Nelson, Inc., Used by permission. All rights reserved.

Scriptures marked as "(MSG)" are taken from THE MESSAGE: The Bible in Contemporary Language copyright 2002 by Eugene H. Peterson.

Scriptures marked as "(GNB)" are taken from the GNB – Second Edition © 1992 by American Bible Society. Used by permission.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

**ಮೇಲಿಂಗ್ ಪಟ್ಟಿ ಮತ್ತು ಉಚಿತ ಹೆಚ್ಚುವರಿ ಪುಸ್ತಕಗಳಿಗಾಗಿ**

ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ, ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.

(Kannada Book - House of God)

ಸತ್ಯವೇದ ಶಾಲೆ
ಮತ್ತು ಸೇವಾತರಬೇತಿಕೇಂದ್ರ

# ಆಲ್ ಪೀಪಲ್ಸ್ ಚರ್ಚ್
# ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ತೇಜಿಸುವಿಕೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೈವಿಕ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತಕರವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು - ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೈವಿಕ ಗುಣನಡತೆಗೆ ಒತ್ತು ನೀಡುವಂತಹ ಸೇವೆಗಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿಸುವುದನ್ನು ನಾವು ನಂಬುತ್ತೇವೆ.

ಎ.ಪಿ.ಸಿ-ಬಿ.ಸಿ.ಯಲ್ಲಿ ಉತ್ತಮವಾದ ಬೋಧನೆಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1ರವರೆಗೆ ಜರುಗುತ್ತದೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರೆಸಬಹುದು.

ವಸತಿನಿಲಯ ಇಚ್ಛಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಾಕಾರ್ಯಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ ಪ್ರತಿವಾರದ ದಿನ ಮಧ್ಯಾಹ್ನ 2 ರಿಂದ 5ರವರೆಗೆ ಭಾಗವಹಿಸಬೇಕು. ಮಧ್ಯಾಹ್ನದ ತರಗತಿಗಳು ದಿನದ ವಿದ್ಯಾರ್ಥಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾತ್ಯಂದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಟ್ಟಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್‌ಲೋಡ್ ಮಾಡಲು apcwo.org/biblecollege ಅನ್ನು ಸಂಪರ್ಕಿಸಿರಿ.

# ದೇವರ ಮನೆ

## ದೇವರ ನೀಲನಕ್ಷೆಗನುಸಾರವಾಗಿ ಸ್ಥಳೀಯ ಸಭೆಗಳನ್ನು ಕಟ್ಟುವುದು

## ಒಂದು ವಾರಾಂತ್ಯದ ಶಾಲೆಗೆ ಹಾಜರಾಗಿರಿ

ವಾರಾಂತ್ಯದ ಶಾಲೆಗಳು ಬೆಂಗಳೂರಿನಲ್ಲಿ ಜರುಗುತ್ತವೆ. ಸೇವೆ ಮತ್ತು ನಿರ್ದಿಷ್ಟವಾದ ಜೀವಿತದ ಕ್ಷೇತ್ರಗಳಲ್ಲಿ ವಿಶ್ವಾಸಿಗಳನ್ನು ಸಜ್ಜುಗೊಳಿಸಲು ಮತ್ತು ತರಬೇತಿ ನೀಡಲು ಸಜ್ಜಾಗಿಸುವುದಾಗಿದೆ. ಇವುಗಳು ಅನುಕೂಲಕರವಾಗಿ ಒಂದು ವಾರಾಂತ್ಯದಲ್ಲಿ ನಡೆಯುತ್ತವೆ. (ಶನಿವಾರ/ಭಾನುವಾರ) ಬೆಳ್ಳಿಗೆ 10:00 ರಿಂದ ಸಂಜೆ 5:00ರವರೆಗೆ ವಾರಂತ್ಯದ ಶಾಲೆಗಳು ತರಬೇತಿ ಹೊಂದಲೂ ಆಸಕ್ತಿಯುಳ್ಳವರಿಗೆ ಮತ್ತು ಸಜ್ಜುಗೊಳ್ಳಲೂ ಆಸಕ್ತಿಯಿರುವಂತಹ ಸಂಘಸಂಸ್ಥೆಗಳ ಮತ್ತು ಎಲ್ಲಾ ಸಭೆಗಳ ವಿಶ್ವಾಸಿಗಳಿಗೂ ಆಹ್ವಾನವಿರುತ್ತದೆ. ಪ್ರಸಕ್ತವಾಗಿ ಜರುಗುವಂತಹ ವಾರಾಂತ್ಯದ ಶಾಲೆಗಳ ಪಟ್ಟಿಯು ಕೆಳಕಂಡಂತಿದೆ.

ಪ್ರವಾದನಾ ಸೇವೆಯ ವಾರಾಂತ್ಯದ ಶಾಲೆ

ಸ್ವಸ್ಥತೆ ಮತ್ತು ಬಿಡುಗಡೆಯ ವಾರಾಂತ್ಯದ ಶಾಲೆ

ಆತ್ಮನ ವರಗಳನ್ನು ತೋರ್ಪಡಿಸುವುದರ ಮೇಲೆ ವಾರಾಂತ್ಯದ ಶಾಲೆ

ಪ್ರಾರ್ಥನೆ ಮತ್ತು ಮಧ್ಯಸ್ಥಿಕೆಯ ವಾರಾಂತ್ಯದ ಶಾಲೆ

ಆಂತರಿಕ ಸಂಪೂರ್ಣತೆಯ ಮೇಲೆ ವಾರಾಂತ್ಯದ ಶಾಲೆ

ಜೀವನ ಶೈಲಿ ಸುವಾರ್ತೆಸೇವೆಯ ಮೇಲೆ ವಾರಾಂತ್ಯದ ಶಾಲೆ

ದೇವರು ಕಾರ್ಯನಿರತನಾಗಿದ್ದಾನೆಂಬುದರ ಮೇಲೆ ವಾರಾಂತ್ಯದ ಶಾಲೆ

ನಗರ ಸೇವೆಗಳು ಮತ್ತು ಸಭಾ ಸ್ಥಾಪನೆಯ ವಾರಾಂತ್ಯದ ಶಾಲೆ

ಕ್ರೈಸ್ತ ಕ್ಷಮೆಶಾಸ್ತ್ರದ ವಾರಾಂತ್ಯದ ಶಾಲೆ

ದಯುವಿಟ್ಟು apcwo.org/weekendschool ನ್ನು ಪ್ರಸಕ್ತವಾದ ವೇಳಾಪಟ್ಟಿ ಮತ್ತು ಆನ್‌ಲೈನ್ ನೋಂದಣಿಗಾಗಿ ಸಂಪರ್ಕಿಸಿ.

## ಕ್ರೈಸ್ತ ನಾಯಕರ ಸಮಾವೇಶವನ್ನು ಏರ್ಪಡಿಸಿರಿ

ಆತ ಪೀಪಲ್ಸ್ ಸಭೆಯು, ಸಭಾಪಾಲಕರು, ಸ್ಥಳೀಯ ಸಭಾ ನಾಯಕತ್ವದಲ್ಲಿರುವವರು, ಕ್ರೈಸ್ತ ಸೇವೆಯಲ್ಲಿ ತೊಡಗಿಸಿಕೊಂಡಿರುವ ಇತರರಿಗೆ ಆತ್ಮನ ಅಭಿಷೇಕದ ಸಜ್ಜುಗೊಳ್ಳುವಿಕೆ ಮತ್ತು ಪಾಲುಕೊಡುವಿಕೆಯನ್ನು ಒದಗಿಸುತ್ತದೆ. ಅಭಿಷೇಕ ಹೊಂದಿದ ಬೋಧನೆ, ಆತ್ಮನ ನಡೆಸುವಿಕೆಯ ಸೇವೆ ಮತ್ತು ಪಾಲುಕೊಡುವಿಕೆಯ ಜೊತೆಗೆ ನಮ್ಮ ತಂಡವು ವೈಯಕ್ತಿಕವಾದ ಸಂಭಾಷಣೆ ಮತ್ತು ಭಾಗವಹಿಸುವವರೊಡನೆ ಚರ್ಚೆಯಲ್ಲಿ ತೊಡಗಿಸಿಕೊಳ್ಳುತ್ತಾರೆ. ಪ್ರತಿಯೊಂದು ಕ್ರೈಸ್ತ ಸಮಾವೇಶವು ಒಂದು ನಿರ್ದಿಷ್ಟ ವಿಷಯದ ಮೇಲೆ ಕೇಂದ್ರಿಕರಿಸಿ 2 ಅಥವಾ 3 ದಿವಸಗಳು ವಿಶಿಷ್ಟವಾಗಿ ಜರುಗುತ್ತದೆ ಭಾಗವಹಿಸುವವರು ನವೀಕೃತಗೊಂಡವರಾಗಿ, ಅಧಿಕಾರ ಹೊಂದಿದವರಾಗಿ ಮತ್ತು ಮಹತ್ತಾದ ರೀತಿಯಲ್ಲಿ ಪರಿಣಾಮ ಬೀರಲೂ ಸಜ್ಜುಗೊಳ್ಳುತ್ತಾರೆ ಮತ್ತು ಅವರ ಸೇವೆಯಲ್ಲಿ ಬಹಳ ಪರಿಣಾಮಕಾರಿಯುಳ್ಳವರಾಗಿ ಹೋಗುತ್ತಾರೆ. ಕ್ರೈಸ್ತ ನಾಯಕರುಗಳ ಸಮಾವೇಶವು ವಿಶಿಷ್ಟವಾಗಿ ಒಂದು ಸ್ಥಳೀಯ ಸಭೆಯಿಂದ, ಒಂದು ಸೇವಾ ಸಂಘಸಂಸ್ಥೆ ಅಥವಾ ಸಂಘಸಂಸ್ಥೆಯ ಆ ಪ್ರದೇಶದ ಸಭಾಪಾಲಕರು, ಸಭೆಗಳ ಮುಖ್ಯ ಸಂಘಸಂಸ್ಥೆಯ ಕಛೇರಿ ಅಥವಾ ಸಂಘಸಂಸ್ಥೆ ಅಥವಾ ಅದರ ಸಂಕೀರ್ಣ ವ್ಯವಸ್ಥೆಯಲ್ಲಿ ಏರ್ಪಡಿಸುತ್ತಾರೆ. ಏರ್ಪಡಿಸುವಂತಹ ಸಂಘ ಸಂಸ್ಥೆಯು ಸಮಾವೇಶದ ಸಂಪೂರ್ಣ ವೆಚ್ಚವನ್ನು ನೋಡಿಕೊಳ್ಳುತ್ತಾರೆ ಅದರ ಜೊತೆಗೆ ಭಾಗವಹಿಸುವವರನ್ನು ಆಹ್ವಾನಿಸುತ್ತಾರೆ. ಆಲ್ ಪೀಪಲ್ಸ್ ಸಭೆಯು ಕ್ರೈಸ್ತ ನಾಯಕರುಗಳ ಸಮಾವೇಶದಲ್ಲಿ ಭಾಗವಹಿಸುವವರಿಗಾಗಿ ಸೇವೆ ಸಲ್ಲಿಸಲು ತಂಡವನ್ನು ಕಳುಹಿಸಿ ಕೊಡುತ್ತದೆ.

ನಮ್ಮ ತಂಡವು ಸಾಮಾನ್ಯವಾಗಿ ಸೇವೆಸಲ್ಲಿಸುವ ಕೆಲವು ವಿಷಯಾಂಶಗಳು:

- **ಉಜ್ಜೀವನಗಳು, ಸಂದರ್ಶನಗಳು ಮತ್ತು ದೇವರ ಚಲನೆಗಳು:** ಪಂಚಾಶತ್ತಾಮ ದಿನದಿಂದ ಇಂದಿನವರೆಗೂ ದೇವರ ಮುಖ್ಯ ಚಲನೆಗಳ ಒಂದು ಸ್ಪೂರ್ತಿದಾಯಕ ನೋಟ ಮತ್ತು ಆತ್ಮಿಕ ಒಳನೋಟಗಳನ್ನು ನಾವು ಪಡೆಯುತ್ತೇವೆ. ಅಪೊಸ್ತಲರ ಕೃತ್ಯಗಳ ಪುಸ್ತಕದ ಪ್ರಾರಂಭದಿಂದ ಶತಮಾನಗಳ ಉದ್ದಕ್ಕೂ ಅಸಂಖ್ಯಾತ ಸಂದರ್ಶನಗಳು ಮತ್ತು ದೇವರ ಚಲನೆಗಳು ಇದ್ದವು. ಉಜ್ಜೀವನಗಳು, ಸಂದರ್ಶನಗಳು ಮತ್ತು ದೇವರ ಚಲನೆಗಳ ಸಭಾ ಇತಿಹಾಸದಿಂದ ನಾವು ಯಾವುದನ್ನು ಕಲಿಯುತ್ತೇವೆ? ದೇವರ ಸಂದರ್ಶನವು ಒಂದು ದೇವರ ಚಲನೆಯಾಗಿ ಕಂಡುಬರಲೂ ಇದು ಏನನ್ನು ತೆಗೆದುಕೊಳ್ಳುತ್ತದೆ? ದೇವರ ಒಂದು ಯಥಾರ್ಥವಾದ ಸಂದರ್ಶನದ ಸೂಚನೆಗಳೇನು? ದೇವರ ಒಂದು ಚಲನೆ ಮತ್ತು

ಒಂದು ಸಂದರ್ಶನ ಮತ್ತು ಒಂದು ಉಜ್ಜೀವನವನ್ನು ನಾವು ಹೇಗೆ ಮನೆವಾರ್ತೆಯವರಾಗಿ ನೋಡಿಕೊಳ್ಳುತ್ತೇವೆ? ದೇವರು ಒಂದು ಬಲಿಷ್ಟ ಸುರಿಸುವಿಕೆ, ಒಂದು ದೊಡ್ಡ ಸಂದರ್ಶನಕ್ಕಾಗಿ ಸಿದ್ಧಪಡಿಸುತ್ತಿದ್ದಾನೆ ಎಂಬುದನ್ನು ನಾವು ನಂಬುವುದಾದರೆ, ಆಮೇಲೆ ನಮ್ಮನ್ನು ಮತ್ತು ನಮ್ಮ ಸಭಿಕರುಗಳನ್ನು ನಾವು ಸಿದ್ಧಪಡಿಸಿರಬೇಕು. ಈ ಸಮಾವೇಶವು ನಮ್ಮನ್ನು ಸಿದ್ಧಗೊಳಿಸುವ ಕಡೆಗೆ ಒಂದು ಹೆಜ್ಜೆಯಾಗಿದೆ. ಒಂದು ಸ್ಫೂರ್ತಿದಾಯಕತೆಯನ್ನು ಸೃಷ್ಟಿಸುತ್ತದೆ ಮತ್ತು ಉಜ್ಜೀವನವನ್ನು ಹೇಗೆ ಹಿಂಬಾಲಿಸಬೇಕೆಂಬ ಪ್ರಜ್ಞೆಯೊಡನೆ ಉಜ್ಜೀವನಕ್ಕಾಗಿ ಒಂದು ಪ್ರಚೋದನೆಯನ್ನು ಬಿಡುಗಡೆ ಮಾಡುತ್ತದೆ.

- **ಪ್ರಸನ್ನತೆ ಮತ್ತು ಮಹಿಮೆ**: ದೇವರ ಪ್ರಸನ್ನತೆ ಮತ್ತು ಮಹಿಮೆಯ ಪ್ರಜ್ಞೆಯನ್ನು ನೀಡುತ್ತದೆ. ದೇವರ ತೋರ್ಪಡಿಸುವ ಪ್ರಸನ್ನತೆಗೆ ಹೆಜ್ಜೆಯನ್ನಿಡುವುದು ಹೇಗೆ, ದೇವರ ಮಹಿಮೆಯನ್ನು ತೋರ್ಪಡಿಸುವುದು ಹೇಗೆ, ಮತ್ತು ಆತನ ಪ್ರಸನ್ನತೆಯು ನೆಲಸುವ ಮತ್ತು ಆತನ ಮಹಿಮೆಯು ತೋರ್ಪಡಿಸುವಂತಹ ಆತನ ಜನರನ್ನು, ಆತನ ನಿವಾಸಸ್ಥಾನವಾಗಿ ಮಾಡಬೇಕು.
- **ದೇವರ ರಾಜ್ಯ ಕಟ್ಟುವವರು** (ದೇವರ ರಾಜ್ಯ ಮತ್ತು ದೇವರ ರಾಜ್ಯದ ಕಟ್ಟಡ) ದೇವರ ರಾಜ್ಯದ ನಿಕರವಾದ ಅರ್ಥವನ್ನು ಒದಗಿಸುತ್ತದೆ ಮತ್ತು ಜನರನ್ನು ಕಟ್ಟುವುದರ ಮೇಲೆ ಮತ್ತು ದೇವರ ರಾಜ್ಯದ ಉದ್ದೇಶಗಳ ಮುಂದುವರೆಯುವಿಕೆಗಾಗಿ ಆಳವಾದ ಒಂದು ಐಕ್ಯತೆಯ ಪ್ರಜ್ಞೆಯನ್ನು ತರುತ್ತದೆ.
- **ಸಮದಟ್ಟಾದ ನೆಲ**: (ಲೆವಲ್ ಗ್ರೌಂಡ್): ವೈಯಕ್ತಿಕ ರೂಪಾಂತರವನ್ನು, ಬಿಡುಗಡೆಯನ್ನು ಮತ್ತು ಶುದ್ಧತೆಯ ಅಸ್ತಿವಾರಗಳನ್ನು ಸ್ಥಾಪಿಸುವುದನ್ನು ತರುವುದರ ಕುರಿತಾಗಿದೆ. ದೇವರೊಂದಿಗಿನ ವೈಯಕ್ತಿಕ ನಡೆ, ಪ್ರಾಮಾಣಿಕತೆ ಮತ್ತು ಕ್ರೈಸ್ತ ನಾಯಕರುಗಳ ಜೀವಿತದಲ್ಲಿನ ಗುಣನಡತೆ.
- **ದೇವರ ಮನೆ**: ದೇವರ ನೀಲನಕ್ಷೆಗನುಸಾರವಾಗಿ ಸ್ಥಳೀಯ ಸಭೆಯನ್ನು ಹೇಗೆ ಕಟ್ಟಬೇಕು ಮತ್ತು ಅದು ಯಾವರೀತಿ ಇರಬೇಕೆಂಬುದಾಗಿ ಉದ್ದೇಶಿಸಲಾಗಿದೆಯೋ ಆ ರೀತಿಯಾಗಿ ಮಾಡಲೂ ಸ್ಥಳೀಯ ಸಭೆಗಾಗಿ ದೇವರ ರಚನೆಯ ಬಗ್ಗೆ ಒಂದು ಕ್ರಮವಾದ ಪ್ರಜ್ಞೆಯನ್ನು ಒದಗಿಸುತ್ತದೆ.
- **ಅಪೊಸ್ತಲ ಮತ್ತು ಪ್ರವಾದನಾ ಸೇವೆ**: ಅಪೊಸ್ತಲ ಮತ್ತು ಪ್ರವಾದನಾ ಸೇವೆಯನ್ನು ಸಕ್ರಿಯಗೊಳಿಸುವುದು ಮತ್ತು ಇಂತಹ ಸೇವಾಕ್ಷೇತ್ರಗಳು ಹೇಗೆ ಕಾರ್ಯ ಮಾಡಬಹುದೆಂಬುದರ ಒಂದು ಕ್ರಮವಾದ ಪ್ರಜ್ಞೆಯನ್ನು ಬಿಡುಗಡೆಗೊಳಿಸುತ್ತದೆ.

- **ಸ್ವಸ್ಥತೆ ಮತ್ತು ಬಿಡುಗಡೆಯ ಸೇವೆ:** ಸಜ್ಜುಗೊಳಿಸುತ್ತದೆ, ಕ್ರಮವಾದ ಪ್ರಜ್ಞೆಯ, ಕೃಪೆ ಮತ್ತು ಸ್ವಸ್ಥತೆ ಮತ್ತು ಬಿಡುಗಡೆಯ ಸೇವೆಗೆ ಅಭಿಷೇಕವನ್ನು ಒದಗಿಸುತ್ತದೆ.
- **ಆತ್ಮನ ವರಗಳು:** ಆತ್ಮನ ವರಗಳು ನಮ್ಮ ''ಉಪಕರಣ ಪೆಟ್ಟಿಗೆ'' ಆಗಿವೆ, ಪವಿತ್ರಾತ್ಮನ ಬಲವನ್ನು ತೋರ್ಪಡಿಸಲು ನಮಗೆ ಉಪಕರಣಗಳು ಕೊಡಲ್ಪಟ್ಟಿವೆ, ಆದ್ದರಿಂದ ಕರ್ತನಾದ ಯೇಸುವಿಗೆ ಮಹಿಮೆ ಉಂಟಾಗುತ್ತದೆ ಮತ್ತು ಜನರು ಸ್ಪರ್ಶಿಸಲ್ಪಡುತ್ತಾರೆ. ನಾವು ಹೋಗುವಲ್ಲೆಲ್ಲಾ ಸೇವೆ ಸಲ್ಲಿಸಲ್ಪಡುತ್ತದೆ ರೂಪಾಂತರ ಉಂಟಾಗುತ್ತದೆ. ಈ ಒಂದು ಸಮಾವೇಶದಲ್ಲಿ ಆತ್ಮನ ವರಗಳಲ್ಲಿ ನೀವು ಸಕ್ರಿಯಗೊಳ್ಳುತ್ತೀರಿ, ಹೇಗೆ ಕ್ರಮವಾಗಿ ಪ್ರವಿತ್ರಾತ್ಮನ ವರಗಳನ್ನು ತೋರ್ಪಡಿಸಬೇಕೆಂಬುದರಲ್ಲಿ ತರಬೇತಿ ಹೊಂದುತ್ತೀರಿ. ಪ್ರಚೋದನೆ ಹೊಂದಿರಿ, ತೇಲಿರಿ ಮತ್ತು ಆತ್ಮನ ಅಭಿಷೇಕದಲ್ಲಿ ಹೆಚ್ಚಳಗೊಳ್ಳಿರಿ ಆತ್ಮನ ವರಗಳನ್ನು ಇತರರು ಸಹ ತೋರ್ಪಡಿಸಲು ಮತ್ತು ಕಾರ್ಯರೂಪಕ್ಕೆ ತರಲೂ ನೀವು ಸಹ ಪಾಲು ಕೊಡಲೂ ಸಜ್ಜುಗೊಳ್ಳುತ್ತೀರಿ. ಆದ್ದರಿಂದ ಸಂಪೂರ್ಣ ಸಭಿಕರು ಸತ್ಯವಾಗಿ ''ಆತ್ಮನಿಂದ-ತುಂಬಿಸಲ್ಪಡುತ್ತಾರೆ'' ಮತ್ತು ಪವಿತ್ರಾತ್ಮನ ಬಲಯುತವಾದ ಕಾರ್ಯವನ್ನು ಅನುಭವಿಸಿರಿ.
- **ಮದುವೆ ಮತ್ತು ಕುಟುಂಬ:** ಮದುವೆ ಮತ್ತು ಕುಟುಂಬವನ್ನು ಯಾವ ರೀತಿ ಕಟ್ಟಬೇಕು, ಪೋಷಿಸಬೇಕು ಮತ್ತು ಸಂರಕ್ಷಿಸಬೇಕೆಂಬುದಾಗಿ ಎಲ್ಲರಿಗಾಗಿ ಇರುವ ಒಂದು ಪ್ರಾಮುಖ್ಯ ಸರಣಿಯಾಗಿದೆ.
- **ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು ಮತ್ತು ಮಾರುಕಟ್ಟೆ ಕ್ಷೇತ್ರದ ರೂಪಾಂತರ:** ಏಳು ಪರ್ವತದ ನಿಯೋಜನೆಯ ಮೇಲೆ ಅದರ ಪ್ರಜ್ಞೆಯನ್ನು ತರುವುದು ನಗರದ ಸೇವೆಗಳು ಮತ್ತು ವಿಶ್ವಾಸಿಗಳನ್ನು ಹೇಗೆ ಸಜ್ಜುಗೊಳಿಸುವುದು ಮತ್ತು ಅವರನ್ನು ಮಾರುಕಟ್ಟೆ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿರಲು ಬಿಡುಗಡೆಗೊಳಿಸುವುದು, ಮುಂದಿನ ದೇವರ ದೊಡ್ಡ ಚಲನೆಗಾಗಿ ಸಭೆಯನ್ನು ಸಿದ್ಧಗೊಳಿಸುವುದು.
- **ಇತರೆ ವಿಷಯಾಂಶಗಳು:** ಕರ್ತನು ನಡೆಸಿದಂತೆ ಮತ್ತು ಮಾರ್ಗದರ್ಶಿಸಿದ್ದಂತೆ ಹೊಸ ವಿಷಯಾಂಶಗಳನ್ನು ಸೇರಿಸಲಾಗುತ್ತದೆ.

ಪ್ರಸಕ್ತವಾದ ಕ್ರೈಸ್ತ ನಾಯಕರುಗಳ ಸಮಾವೇಶದ ವಿಷಯಾಂಶಗಳ ಪಟ್ಟಿಗಾಗಿ: ದಯವಿಟ್ಟುapcwo.org/CLC ಯನ್ನು ಸಂಪರ್ಕಿಸಿರಿ.

ಕ್ರೈಸ್ತ ನಾಯಕರುಗಳ ಸಮಾವೇಶದ ಯೋಜನೆ ಮತ್ತು ವೇಳಾಪಟ್ಟಿಗಾಗಿ ನಮಗೆ ದಯವಿಟ್ಟು contact@apcwo.org ಗೆ ಇ-ಮೇಲ್ ಕಳುಹಿಸಿ.

# ಪರಿವಿಡಿ

**ಭಾಗ 1: ಮೂಲಗಳು ಮತ್ತು ಉದ್ದೇಶ**

1. ಸಭೆ-ಇದರ ಆತ್ಮಿಕ ಮತ್ತು ಸ್ವಾಭಾವಿಕ ಅಳತೆಗಳು 5
2. ಸ್ಥಳೀಯ ಸಭೆಯ ಉದ್ದೇಶ-ಅದರ ಸೇವೆ, ಸಂದೇಶ ಪದ್ಧತಿಗಳು 16
3. ಸ್ಥಳೀಯ ಸಭೆಯ ರಚನೆ ಮತ್ತು ಸರ್ಕಾರ 25
4. ಬೆಳವಣಿಗೆಯ ಹಂತ ಮತ್ತು ಅಭಿವೃದ್ಧಿ 44
5. ಪ್ರಬಲ ಸ್ಥಳೀಯ ಸಭೆಯನ್ನಾಗಿ ಮಾಡುವುದು ಯಾವುದು 54
6. ಸಭೆ ಬೆಳವಣಿಗೆಯ ತತ್ವಗಳು 67

**ಭಾಗ 2: ದೇವರ ನೀಲನಕ್ಷೆ**

7. ಸ್ಥಳೀಯ ಸಭೆಗಾಗಿರುವ ದೇವರ ನೀಲನಕ್ಷೆ 79
8. ಸ್ಥಳೀಯ ಸಭೆ-ಕ್ರಿಸ್ತನ ದೇಹವಾಗಿದೆ 82
9. ಸ್ಥಳೀಯ ಸಭೆ-ದೇವರ ಕುಟುಂಬವಾಗಿದೆ 91
10. ಸ್ಥಳೀಯ ಸಭೆ-ಸತ್ಯದ ಸ್ಥಂಭವಾಗಿದೆ 113
11. ಸ್ಥಳೀಯ ಸಭೆ-ಒಂದು ಸೈನ್ಯವಾಗಿದೆ 118
12. ಸ್ಥಳೀಯ ಸಭೆ-ಮದಲಗಿತ್ತಿಯಾಗಿದೆ 127
13. ಸ್ಥಳೀಯ ಸಭೆ-ಪ್ರಾರ್ಥನೆ ಮತ್ತು ಆರಾಧನೆಯ ಒಂದು ಮನೆ 140
14. ಸ್ಥಳೀಯ ಸಭೆ-ದೇವರ ಆಲಯವಾಗಿದೆ 156
15. ಸ್ಥಳೀಯ ಸಭೆ-ಚೀಯೋನ್: ದೇವರು ಆರಿಸಿಕೊಂಡ ಜನರು 173
16. ಸ್ಥಳೀಯ ಸಭೆ-ದ್ರಾಕ್ಷೆಬಳ್ಳಿ ಮತ್ತು ಕೊಂಬೆಗಳಾಗಿದೆ 180
17. ಸ್ಥಳೀಯ ಸಭೆ-ದೀಪ ಸ್ತಂಭವಾಗಿದೆ 184
18. ದೇವರ ರಚನೆಗೆ ಅನುಸಾರವಾಗಿ ಕಟ್ಟುವುದು 189

**ಭಾಗ 3: ದೈವಿಕ ಕ್ರಮ**

19. ಸಭೆಯ ಸಂಸ್ಕಾರಗಳು 197

20. ಸಭೆಯ ಶಿಸ್ತು 204

21. ಸೇರಿಬರುವುದರಲ್ಲಿ ಸಭೆಯ ಕ್ರಮ 216

22. ಸೇವೆಯಲ್ಲಿ ಸ್ತ್ರೀಯರು 220

**ಭಾಗ 4: ಸೇವಾ ಸಂಘಸಂಸ್ಥೆ ಮತ್ತು ಅಭಿವೃದ್ಧಿ**

23. ಸ್ಥಳೀಯ ಸಭೆಗಳೊಳಗೆ ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳು 233

24. ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು ಮತ್ತು ಪೋಷಣೆ 244

25. ನಾಯಕರುಗಳನ್ನು ಪೋಷಣೆ ಮಾಡುವುದು ಮತ್ತು ಅಭಿವೃದ್ಧಿಪಡಿಸುವುದು 249

26. ಸಭಾ ಆಡಳಿತ 257

27. ಸಣ್ಣ ಗುಂಪುಗಳನ್ನು ಸಂಘಟಿಸುವುದು 267

28. ಮಹಾಸಭೆ ಮತ್ತು ಬಹುಪ್ರದೇಶದ ಸಭೆ (ಮೆಗಾ ಸಭೆ ಮತ್ತು ಮಲ್ಟಿಸೈಟ್ ಸಭೆ) 271

**ಭಾಗ 5: ಹೊರ ಸಂಧಿಸುವಿಕೆ**

29. ಸ್ಥಳೀಯ ಸಭೆ ಇತರೆ ಸಭೆಗಳೊಂದಿಗಿನ ಸಂಬಂಧದಲ್ಲಿ 277

30. ನಗರವನ್ನು ಕುರುಬನಂತೆ ಪಾಲನೆ ಮಾಡುವುದು 279

31. ನಗರ ಸುವಾರ್ತಿಕರಣ 284

32. ಸಭೆ ಸ್ಥಾಪಿಸುವುದು ಮತ್ತು ಸೇವೆಗಳು 289

**ಭಾಗ 6: ಮುಕ್ತಾಯದ ಆಲೋಚನೆಗಳು**

33. ತಡೆಗಟ್ಟಲು ಮೋಸಗಳು: ಏಳು ಸಭೆಗಳಿಂದ ಪಾಠಗಳು 301

**ನೀವು ಹೊಂದಿಕೊಳ್ಳಲು ಮಾದರಿಗಳು** 305

## ಸಮರ್ಪಣೆ

ಈ ಪುಸ್ತಕವು ಕ್ರಿಸ್ತನ ಅಂಗಕ್ಕೂ, ನಮ್ಮ ಸುಂದರ ದೇಶವಾದ ಭಾರತದಲ್ಲಿನ ದೇವರ ಜನರಿಗೆ ಸಮರ್ಪಿಸಲ್ಪಟ್ಟಿದೆ. ನಮ್ಮ ದೇಶದಾದ್ಯಂತ ಇರುವ ಎಲ್ಲಾ ಸಭಾಪಾಲಕರು ಮತ್ತು ಎಲ್ಲಾ ದೇವರ ಸೇವಕರುಗಳು ಅವರ ಸಭಿಕರುಗಳಾದ ವಿಶ್ವಾಸಿಗಳ ಜೊತೆಯಲ್ಲಿ ಒಟ್ಟಾಗಿ ದೇವರ ನೀಲನಕ್ಷೆಗನುಸಾರವಾಗಿ ಸ್ಥಳೀಯ ಸಭೆಗಳನ್ನು ಕಟ್ಟಲಿ ಎಂಬುದು ನಮ್ಮ ಪ್ರಾರ್ಥನೆಯಾಗಿದೆ.

ಇದು ಜರುಗಲು, ಆತ್ಮನಿಂದ ಅಧಿಕಾರಹೊಂದಿದ ಸಭಾಪಾಲಕರು ಮತ್ತು ವಿಶ್ವಾಸಿಗಳು ಒಗ್ಗಟ್ಟಾಗಿ ಕೆಲಸ ಮಾಡುವಾಗ, ನಮ್ಮ ದೇಶವು ಅದೇ ರೀತಿಯಲ್ಲಿ ಇರುವುದಿಲ್ಲ!

# ಪೀಠಿಕೆ

## ನೀಲನಕ್ಷೆ

ನೀಲನಕ್ಷೆಯು ಏನಾದರೊಂದನ್ನು ಮಾಡುವುದಕ್ಕೆ ಮಾರ್ಗದರ್ಶಿಯಾಗಿದೆ. ಇದು ಒಂದು ರಚನೆ ಅಥವಾ ಅನುಸರಿಸುವ ಒಂದು ಮಾದರಿಯಾಗಿದೆ. ನಾವು ಏನಾದರೊಂದನ್ನು ಕಟ್ಟಲು ಕುಳಿತುಕೊಂಡರೆ, ನಾವು ಸಾಮಾನ್ಯವಾಗಿ ಅದರ ನೀಲನಕ್ಷೆಯನ್ನು ಹಾಕುತ್ತೇವೆ. ಎಳೆಯುತ್ತೇವೆ ಮತ್ತು ಆಮೇಲೆ ಎಚ್ಚರಿಕೆಯಿಂದ ಅದರ ವಿನ್ಯಾಸವನ್ನು ಅನುಸರಿಸುತ್ತೇವೆ. ನೀಲನಕ್ಷೆಯು ಏನನ್ನು ಮಾಡಬೇಕೆಂಬುದನ್ನು ನಿಶ್ಚಯಿಸುತ್ತದೆ. ಈ ಸ್ಥಳೀಯ ಸಭೆಗಳು ವಿಶ್ವಾಸಿಗಳ ಸ್ಥಳೀಯ ಸಮುದಾಯಗಳಿಗಾಗಿ ದೇವರ ನೀಲನಕ್ಷೆಯನ್ನು ದೇವರ ಮನೆ ಎಂಬ ಈ ಒಂದು ಕೈಪಿಡಿಯಲ್ಲಿ ಕಂಡು ಹಿಡಿಯಬಹುದಾಗಿದೆ ದೇವರ ನೀಲನಕ್ಷೆಗನುಸಾರವಾಗಿ ಸ್ಥಳೀಯ ಸಭೆಗಳನ್ನು ಕಟ್ಟುವ ಪ್ರಾಯೋಗಿಕ ಮಾರ್ಗಗಳನ್ನು ಸಹ ನಾವು ಹಂಚಿಕೊಳ್ಳುತ್ತೇವೆ.

ನಮ್ಮ ಗುರಿಯು, ವಿಧಾನಗಳು ಮತ್ತು ತಂತ್ರಗಳನ್ನು ಪ್ರಸ್ತುತ ಪಡಿಸುವುದಲ್ಲ ಆದರೆ ಬದಲಾಗಿ ಸ್ಥಳೀಯ ಸಭೆಯು ಯಾವ ರೀತಿ ಇರಬೇಕೆಂಬುದಾಗಿ ದೇವರು ಅಪೇಕ್ಷಿಸುವುದನ್ನು ಕಂಡುಹಿಡಿಯುವುದಾಗಿದೆ. ನಮ್ಮ ಸ್ಥಳೀಯ ಸಭೆಗಳನ್ನು ದೇವರ ನೀಲನಕ್ಷೆಗನುಸಾರವಾಗಿ ಅಭಿವೃದ್ಧಿಪಡಿಸುವಾಗ, ನಮ್ಮಲ್ಲಿ ಪ್ರತಿಯೊಬ್ಬರೂ ದೇವರೊಂದಿಗೆ ನಮ್ಮ ವೈಯಕ್ತಿಕ ಪ್ರಯಾಣ ಮಾಡಬೇಕು. ಪ್ರತಿಯೊಬ್ಬರು ನಮ್ಮ ಸ್ಥಳೀಯ ಸಮುದಾಯಗಳಲ್ಲಿ ಈ ಒಂದು ನೀಲನಕ್ಷೆಯ, ನಮ್ಮ ಸ್ವಂತ ಅಭಿವ್ಯಕ್ತತೆಯನ್ನು ಕಂಡುಹಿಡಿಯಬೇಕು. ದೇವರು ಸೃಜನಾತ್ಮಕನಾಗಿರುವುದರಿಂದ ಆತನು ನೀಲನಕ್ಷೆಯ ಬಗ್ಗೆ ಅನೇಕ ಅಭಿವ್ಯಕ್ತತೆಯನ್ನು ಹೊಂದಿದ್ದಾನೆ.

ಒಂದು ಸಾಮಾನ್ಯ ಗುಣವೇನೆಂದರೆ, ನಾವೆಲ್ಲರು ಸ್ಥಳೀಯ ಸಭೆಗಳಿಗಾಗಿ ಅದೇ ನೀಲನಕ್ಷೆಯನ್ನು ಮುಂದುವರಿಸುತ್ತಿರುವುದಾಗಿದೆ. ನೀಲನಕ್ಷೆಯು ದೇವರ ವಿನ್ಯಾಸವನ್ನು ವಿವರಿಸುತ್ತದೆ. ಇದು ದೇವರ ಒಂದು ಮೂಲ ಉದ್ದೇಶ. ಮುಖ್ಯ ಗುಣಲಕ್ಷಣಗಳು ಇದರ ಮುಖ್ಯಾಂಶಗಳಾಗಿವೆ. ಪ್ರಮುಖ ಲಕ್ಷಣಗಳನ್ನು ಇದು ವಿವರಿಸುತ್ತದೆ. ಇದು ಪ್ರಮುಖವಾಗಿ ದೃಷ್ಟಿಸುವ ಕ್ಷೇತ್ರಗಳನ್ನು ಇದು ತೋರಿಸುತ್ತದೆ. ನಾವು ಆತನ ನೀಲನಕ್ಷೆಯನ್ನು ಹಿಂಬಾಲಿಸುವಾಗ, ನಾವು ಸರಿಯಾದ ಮಾರ್ಗದಲ್ಲಿ

ಚಲಿಸುವವರಾಗಿರುತ್ತೇವೆ. ಮತ್ತು ನಮ್ಮ ಸ್ಥಳೀಯ ಸಭೆಗಳಿಗಾಗಿರುವ ಸರಿಯಾದ ನಿರ್ದಿಷ್ಟ ಸ್ಥಳಕ್ಕೆ ಅಂತಿಮವಾಗಿ ಬರುತ್ತೇವೆ.

## ನಿಮ್ಮ ಸೇವೆ ಮತ್ತು ದೇವರ ನೀಲನಕ್ಷೆ

ಒಳಗಡೆ ನಿಮ್ಮ ಸೇವೆಯು ಏನು ಎಂಬುದನ್ನು ಲೆಕ್ಕಿಸದೆ ಅಥವಾ ಸ್ಥಳೀಯ ಸಭೆಯ ಸಂಬಂದದಲ್ಲಿ, ನೀವು ಮಾಡುತ್ತಿರುವಂತಹವುಗಳು ಆತನ ಜನರಿಗಾಗಿ ಇರುವ ದೇವರ ನೀಲನಕ್ಷೆಗೆ ಸಮನಾಂತರವಾಗಿರಬೇಕು. ಸಭಾಪಾಲಕರು/ಹಿರಿಯ ಸಭಾಪಾಲಕರುಗಳಾಗಿ, ಸ್ಥಳೀಯ ಸಭೆಯು ದೇವರ ನೀಲನಕ್ಷೆಗನುಗುಣವಾಗಿ ಎಲ್ಲಾ ಆಯಾಮಗಳಲ್ಲಿ ಅಭಿವೃದ್ಧಿಯಾಗುತ್ತಿದೆಯಾ ಮತ್ತು ಬೆಳೆಯುತ್ತಿದೆಯಾ ಎಂಬುದನ್ನು ಖಚಿತಪಡಿಸಿಕೊಳ್ಳುವ ಜವಬ್ದಾರಿಯನ್ನು ವಹಿಸಿಕೊಳ್ಳಬೇಕು.

ಸಂಚಾರಿ ಸುವಾರ್ತಿಕರು, ಬೋಧಕರು, ಪ್ರವಾದಿಗಳು, ಅಥವಾ ಅಪೊಸ್ತಲರುಗಳಾಗಿ, ನೀವು ಸಭಿಕರಿಗೆ ಸೇವೆ ಸಲ್ಲಿಸುವಾಗ ನಿಮ್ಮ ಗುರಿಯು, ಸ್ಥಳೀಯ ಸಭೆಗಾಗಿ ಇರುವ ದೇವರ ವಿನ್ಯಾಸಕ್ಕನುಸಾರವಾಗಿ ಹಲವು ರೀತಿಗಳಲ್ಲಿ ಸಭಿಕರನ್ನು ಹೆಚ್ಚಳಗೊಳಿಸುವುದು ಮತ್ತು ಭಾಗ ಕೊಡುವುದಾಗಿರಬೇಕು. ಯೌವ್ವನಸ್ಥರ ಸಭಾಪಾಲಕರಾಗಿ ಆರಾಧನಾ ನಾಯಕರು, ಮಕ್ಕಳ ಸಭೆಯಲ್ಲಿ, ಸ್ತ್ರೀಯರ ಸೇವೆಯಲ್ಲಿ, ಪುರುಷರ ಸೇವೆಯಲ್ಲಿ ಅಥವಾ ಸಣ್ಣಗೋಪುರಗಳಲ್ಲಿ ಸೇವೆಸಲ್ಲಿಸುತ್ತಿರಲಿ ಆದಾಗ್ಯೂ ಆ ಸ್ಥಳೀಯ ಸಭೆಯಲ್ಲಿನ ಆತನ ಜನರುಗಳ ಜೀವಿತಗಳಲ್ಲಿ ದೇವರ ನೀಲನಕ್ಷೆಯನ್ನು ಸ್ಥಾಪಿಸುವ ಕಡೆಗೆ ನೀವು ಕಾರ್ಯ ಮಾಡುತ್ತಿದ್ದಿರಿ.

ನಿಕಟವಾಗಿ ದೇವರ ವಿನ್ಯಾಸವನ್ನು ಅನುಸರಿಸಿರಿ ಮತ್ತು ನೀವು ತಪ್ಪಾಗಿ ಹೋಗುವುದಿಲ್ಲ.

ಆಶೀರ್ವಾದಗಳೊಂದಿಗೆ
ಆಶಿಷ್ ರಾಯ್‌ಚೂರ್

# ಭಾಗ 1

# ಮೂಲಗಳು ಮತ್ತು ಉದ್ದೇಶ



# 1

# ಸಭೆ - ಇದರ ಆತ್ಮಿಕ ಮತ್ತು ಸ್ವಾಭಾವಿಕ ಅಳತೆಗಳು

## ‘‘ನನ್ನ ಸಭೆಯನ್ನು ಕಟ್ಟುತ್ತೇನೆ’’

ಮತ್ತಾಯ 16:15-19

**ಆತನು ಅವರನ್ನು ಆದರೆ ನೀವು ನನ್ನನ್ನು ಯಾರನ್ನುತ್ತೀರಿ ಎಂದು ಕೇಳಲಾಗಿ ಸೀಮೋನ್ ಪೇತ್ರನು - ನೀನು ಬರಬೇಕಾಗಿರುವ ಕ್ರಿಸ್ತನು ಜೀವಸ್ವರೂಪನಾದ ದೇವರ ಕುಮಾರನು ಎಂದು ಉತ್ತರಕೊಟ್ಟನು ಅದಕ್ಕೆ ಯೇಸು ಯೋನನ ಮಗನಾದ ಸೀಮೋನನೇ, ನೀನು ಧನ್ಯನು ಈ ಗುಟ್ಟು ನಿನಗೆ ತಿಳಿಸಿದವನು ನರ ಮನುಷ್ಯನಲ್ಲ, ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು ಮತ್ತು ನಾನೂ ನಿನಗೆ ಒಂದು ಮಾತನ್ನುಹೇಳುತ್ತೇನೆ. ಅದೇನೆಂದರೆ ನೀನು ಪೇತ್ರನು ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು. ಪಾತಾಳಲೋಕದ ಬಲವು ಅದನ್ನುಸೋಲಿಸಲಾರದು ಪರಲೋಕ ರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು ಭೂಲೋಕದಲ್ಲಿ ನೀನು ಯಾವದನ್ನು ಕಟ್ಟುತ್ತೀಯೋ ಅದು ಪರಲೋಕದಲ್ಲಿಯೂ ಕಟ್ಟಿರುವದು ಮತ್ತು ಭೂಲೋಕದಲ್ಲಿ ನೀನು ಯಾವುದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವುದು ಅಂದನು.**

ಯೇಸುವು, ಕ್ರಿಸ್ತನು ಎಂಬುದು ಸತ್ಯಕರವಾಗಿದೆ. (ಮೆಸ್ಸಿಯನು, ದೇವರಿಂದ ಅಭಿಷೇಕಿಸಲ್ಪಟ್ಟವನು) ಪ್ರಕಟನೆಯಿಂದ ಕೊಡಲ್ಪಟ್ಟ ಜೀವಿಸುವ ದೇವರ ಮಗನು. ಆತನು ಏನಾಗಿದ್ದಾನೊ ಎಂಬುದರ ಪ್ರಕಟನೆಯ (ಬಂಡೆ) ಮೇಲೆ ಆತನು ಸಭೆಯನ್ನು ಕಟ್ಟುತ್ತೇನೆ ಎಂಬುದಾಗಿ ಕರ್ತನಾದ ಯೇಸುವು ಹೇಳಿದನು.

ಯೇಸುವು, ‘‘ನನ್ನ ಸಭೆಯನ್ನು ನಾನು ಕಟ್ಟುವೆನು’’ ಎಂದು ಹೇಳಿದ್ದಾನೆ. ಸಭೆಯು ದೇವರ ಕಲ್ಪನೆ, ಸಂಘ ಸಂಸ್ಥೆಗಳು ಮಾನವ ನಿರ್ಮಿತವಾದವು.

‘‘ನನ್ನ ಸಭೆಯನ್ನು ನಾನು ಕಟ್ಟುತ್ತೇನೆ’’ ಎಂಬುದಾಗಿ ಯೇಸುವು ಹೇಳಿದ್ದಾನೆ ಸಭೆಯು ಆತನದು ಯಾವ ಮನುಷ್ಯ ಅಥವಾ ಸಂಘ ಸಂಸ್ಥೆಗಳು ಸಭೆಯ (ದೇವರ ಜನರು) ಮಾಲೀಕತ್ವವನ್ನು ಪಡೆಯಲು ಸಾಧ್ಯವಿಲ್ಲ.

‘‘ಬಾಗಿಲುಗಳು’’ ಪ್ರವೇಶವು ನಿಯಂತ್ರಣಗೊಂಡಿರುವ ಸ್ಥಳವನ್ನು ನಿರೂಪಿಸುತ್ತದೆ. ಹಳೇ ಒಡಂಬಡಿಕೆಯ ಕಾಲದಲ್ಲಿ ಬಾಗಿಲುಗಳು ನಗರವನ್ನು ಸಂರಕ್ಷಿಸುತ್ತಿದ್ದವು.

ಹಲವು ನಗರಗಳ ಬಾಗಿಲುಗಳು ಬಹಳ ದೊಡ್ಡದಾಗಿದ್ದು, ಪ್ರವೇಶದ್ವಾರಗಳನ್ನು ಸಂರಕ್ಷಿಸಲು ಒಳಾಂಗಣದಲ್ಲಿ ಸೈನಿಕರುಗಳಿಗಾಗಿ ದೊಡ್ಡದಾದ ಸಾಕಾಗುವಷ್ಟು ಕೊಠಡಿಗಳು ಇದ್ದವು. ನಾಯಕರುಗಳು ಕುಳಿತು ಸಮಸ್ಯೆಗಳನ್ನು ಬಗೆಹರಿಸುವ ಬಾಗಿಲುಗಳು ಅವೇ ಆಗಿದ್ದವು.

ನಾಯಕರುಗಳು ಬಾಗಿಲುಗಳ ಬಳಿ ಕುಳಿತು, ಜನರಿಗಾಗಿ ನ್ಯಾಯವನ್ನು ಕಾರ್ಯಗತಗೊಳಿಸುವ, ಸಮಸ್ಯೆಗಳನ್ನು ಬಗೆಹರಿಸುವ ವಿನಿಯೋಗಿಸುವ ಸ್ಥಳವಾಗಿತ್ತು. ಕರ್ತನಾದ ಯೇಸುಸ್ವಾಮಿಯು ಪಾತಾಳದ ಬಾಗಿಲು ಎಂಬ ಪದವನ್ನು ಉಪಯೋಗಿಸುವಾಗ, ಇದು ದುರಾತ್ಮ ಮತ್ತು ಅವನ ದುಷ್ಕರುಗಳಿಂದ ನಿಯಂತ್ರಿಸಲ್ಪಟ್ಟ ಬಲಕೇಂದ್ರಗಳನ್ನು ಮೂಲಭೂತವಾಗಿ ಪ್ರತಿನಿಧಿಸುತ್ತದೆ. ಬಾಗಿಲುಗಳು ನಿಶ್ಚಲವಾದವು, ನಾವು ಬಾಗಿಲುಗಳಿಂದ ಮುನ್ನಡೆಯುತ್ತೇವೆ. ಬಾಗಿಲುಗಳು ನಮ್ಮ ಬಳಿಗೆ ಬರುವುದಿಲ್ಲ - ಪಾತಾಳದ (ದೆವ್ವಗಳ ಬಲಗಳು) ಬಾಗಿಲುಗಳು (ಬಲಕೇಂದ್ರಗಳು) ಉರುಳಿಸಲ್ಪಟ್ಟಂತಹ ಮತ್ತು ಬಲವಂತವಾಗಿ ಮುಂದೆ ಸಾಗುವಂತಹ ಬಲಯುತವಾದ ಸಭೆಯನ್ನು ಯೇಸುವು ಕಟ್ಟುತ್ತಾನೆ. ಸ್ಥಳೀಯ ಸಮುದಾಯಗಳಲ್ಲಿ ಅಥವಾ ನಗರಗಳಲ್ಲಿ ನಾವು ಸುಲಭವಾಗಿ ಬಲಕೇಂದ್ರಗಳು, ಅಭ್ಯಾಸಗಳು, ವಿಚಾರಗಳು, ಸ್ಥಳಗಳು, ಸಾಮಾಜಿಕ ರಚನೆಗಳು ಮುಂತಾದವುಗಳನ್ನು ಗುರ್ತಿಸುತ್ತೇವೆ. ಅದು ಪ್ರಸಕ್ತವಾಗಿ ಶಕ್ತಿಯುತವಾಗಿವೆ ಮತ್ತು ದುರಾತ್ಮಗಳ ಬಲದಿಂದ ಪ್ರಾಬಲ್ಯ ಹೊಂದಿದೆ. ಸಭೆಯ ಇದರ ವಿರೋಧವಾಗಿ ಮುನ್ನಡೆಯಬೇಕು. ಯೇಸುವು ಕಟ್ಟುತ್ತಿರುವಂತಹ ಸಭೆಯ ಪ್ರಗತಿಯನ್ನು ಕತ್ತಲೆಯ ಬಲಗಳು ನಿಲ್ಲಿಸಲು ಸಾಧ್ಯವಿಲ್ಲ.

ಕೀಲಿಕೈ ಅಧಿಕಾರವನ್ನು ಪ್ರತಿನಿಧಿಸುತ್ತದೆ. ಪ್ರಕಟನೆ 1:18 ರಲ್ಲಿ ಮರಣದ ಮತ್ತು ಪಾತಾಳದ ಬೀಗದ ಕೈಗಳು ನನ್ನಲ್ಲಿ ಅವೆ ಎಂಬುದಾಗಿ ಯೇಸುವು ಘೋಷಿಸಿದ್ದಾನೆ. ಪರಲೋಕ ರಾಜ್ಯದ ಬೀಗದ ಕೈ ದೇವರ ರಾಜ್ಯದ ಅಧಿಕಾರವನ್ನು ಉಲ್ಲೇಖಿಸುತ್ತದೆ. ಯೇಸುವು ಕಟ್ಟುತ್ತಿರುವ ಬಗೆಯು ಸಭೆಯಲ್ಲಿ ದೇವರ ರಾಜ್ಯದ-ಅಧಿಕಾರವು ನಿಯೋಜನೆಗೊಂಡಿದೆ. ''ಭೂಲೋಕದಲ್ಲಿ ನೀನು ಯಾವದನ್ನು ಕಟ್ಟುತ್ತೀಯೋ, ಅದು ಪರಲೋಕದಲ್ಲಿಯೂ ಕಟ್ಟಿರುವದು ಮತ್ತು ಭೂಲೋಕದಲ್ಲಿ ನೀನು ಯಾವದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವುದು'' ಎಂಬುದರ ಸರಿಯಾದ ಭಾಷಾಂತರವು ಪರಲೋಕದಲ್ಲಿ ಯಾವುದು ಕಟ್ಟಲ್ಪಟ್ಟಿದೆ ಎಂಬುದಾಗಿ ಘೋಷಿಸಲಾಗಿದೆಯೋ ಅದನ್ನು ಭೂಲೋಕದಲ್ಲಿ ನಾವು ಕಟ್ಟುತ್ತೇವೆ, ಮತ್ತು

ಪರಲೋಕದಲ್ಲಿ ಯಾವುದು ಬಿಚ್ಚಲ್ಪಟ್ಟಿದೆ. ಎಂಬುದಾಗಿ ಘೋಷಿಸಲಾಗಿದೆಯೋ ಅದನ್ನು ಭೂಲೋಕದಲ್ಲಿ ನಾವು ಬಿಚ್ಚುತ್ತೇವೆ.

ನಮ್ಮಲ್ಲಿ ನಿಯೋಜಿಸಲಾದ ದೇವರ ರಾಜ್ಯದ ಅಧಿಕಾರದಲ್ಲಿ ನಾವುಗಳು (ಸಭೆಯಾಗಿ) ದೇವರು ಪರಲೋಕದಲ್ಲಿ ನಿಶ್ಚಯಿಸಲ್ಪಟ್ಟಿರುವುದನ್ನು ಭೂಮಿಯ ಮೇಲೆ ಜಾರಿಗೆ ತರುತ್ತೇವೆ.

ಸಭೆ ಎಂಬ ಪದದ ಅರ್ಥ

ಸಭೆ ಗ್ರೀಕ್‌ನಲ್ಲಿ ‘‘ಎಕ್ಲೆಸಿಯಾ’’ ಏಕ್=ಹೊರಗೆ, ಕ್ಲೆಸಿಸ್=ಕರೆಯುವುದು, ಕೂಗುವುದು.

- ರಾಜ್ಯದ ವ್ಯವಹಾರಗಳ ಕುರಿತು ಚರ್ಚಿಸಲು ಕೂಡಿ ಬರುತ್ತಿದ್ದಂತಹ ಗ್ರೀಕ್ ನಾಗರೀಕರ ಮಧ್ಯದಲ್ಲಿ ಉಪಯೋಗಿಸಲ್ಪಟ್ಟಿತು.
- ಇಸ್ರಾಯೇಲ್ಯರು ‘‘ಸೇರುವುದು’’ ನಿಖರವಾದ ಉದ್ದೇಶಕ್ಕಾಗಿ ಕರೆಸಿಕೊಳ್ಳಲಾಗಿರುವದು.
- ಅದರ ಅಕ್ಷರಶಃ ಅರ್ಥದಲ್ಲಿ ‘ಸಭೆ’ ಎಂಬ ಪದವು ನಿಶ್ಚಯ ಉದ್ದೇಶಕ್ಕಾಗಿ ಕರೆಯಲ್ಪಟ್ಟವರು ಒಟ್ಟಾಗಿ ಸೇರುವುದು ಎಂಬ ಸಾಮಾನ್ಯ ಅರ್ಥ ಹೊಂದಿದೆ.
- ಕರೆಯುವುದು - ಪರಲೋಕದ ಕರೆಗೆ ಪ್ರತಿಕ್ರಿಯೆ ತೋರುವ ಜನರುಗಳು.
- ಕರೆಯಲ್ಪಟ್ಟವರು - ಪ್ರಪಂಚದಿಂದ ಹೊರ ಬಂದಂತಹ ಜನರು.
- ಒಟ್ಟಾಗಿ ಸೇರುವುದಕ್ಕೆ ಕರೆಯಲ್ಪಟ್ಟವರು - ವ್ಯಕ್ತಿಗತವಾಗಿ ಹೋಗದೆ ಒಟ್ಟಾಗಿ ಹೋಗುವ ಜನರು.
- ನಿಖರವಾದ ಉದ್ದೇಶಕ್ಕಾಗಿ ಒಟ್ಟಾಗಿ ಸೇರುವುದಕ್ಕೆ ಕರೆಯಲ್ಪಟ್ಟವರು.

## ಸಭೆಯ ಆತ್ಮಿಕ ಅಳತೆಗಳು

ಸಭೆಯ ಕುರಿತು ಅನೇಕ ಸಂಗತಿಗಳನ್ನು ದೇವರ ವಾಕ್ಯವು ಪ್ರಕಟಿಸುತ್ತದೆ. ಸಭೆಯ ಆತ್ಮಿಕ ಅಳತೆಗಳ ಕೆಲವು ಅಂಶಗಳನ್ನು ಮಾತ್ರ ನಾವು ಪರಿಗಣಿಸೋಣ. ದೇವರ ನೀಲನಕ್ಷೆಯ ಭಾಗದಲ್ಲಿ ಇತರ ಅನೇಕ ಸಭೆಯ ಮುಖಗಳ ಕುರಿತು ನಾವು ಪರಿಗಣಿಸುತ್ತೇವೆ.

## *ಸಭೆಯು ಕ್ರಿಸ್ತನ ದೇಹವಾಗಿದೆ*

ಕೊಲೊಸ್ಸೆಯವರಿಗೆ 1:18,24

**ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು ಆತನು ಆದಿ ಸಂಭೂತನು ಎಲ್ಲಾದರಲ್ಲಿ ಪ್ರಮುಖನಾಗುವಂತೆ ಮೊದಲು ಎದ್ದು ಬಂದವನು ಆತನೇ ಪೌಲನೆಂಬ ನಾನು ಈ ಸುವಾರ್ತೆಗೆ ಸೇವಕನಾದೆನು. ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷಪಟ್ಟು ಕ್ರಿಸ್ತನ ಸಂಕಟಗಳೊಳಗೆ ಇನ್ನೂ ಉಳಿದದ್ದನ್ನು ಸಭೆಯೆಂಬ ಆತನ ದೇಹಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ.**

ಎಫೆಸದವರಿಗೆ 1:22,23

**ಆತನು ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ. ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ. ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ.**

ಆತ್ಮಿಕವಾಗಿ ಎಲ್ಲಾ ವಿಶ್ವಾಸಿಗಳು ಕರ್ತನೊಂದಿಗೆ ಸೇರಿಸಲ್ಪಟ್ಟವರಾಗಿದ್ದಾರೆ. (1 ಕೊರಿಂಥದವರಿಗೆ 6:17) ಪವಿತ್ರಾತ್ಮನು ನಮಗೆ ದೀಕ್ಷಾಸ್ನಾನ ನೀಡಿದ್ದಾನೆ (ಮುಳುಗಿ ಅಥವಾ ನಮ್ಮನ್ನು ಸೇರಿಸಿದ್ದಾನೆ) ಕ್ರಿಸ್ತನ ದೇಹಕ್ಕೆ ಸೇರಿಸಿದ್ದಾನೆ. (1 ಕೊರಿಂಥದವರಿಗೆ 12:13) ಸಭೆಯು ಕ್ರಿಸ್ತನ ದೇಹವಾಗಿದೆ. ನಾವು ಆತನ ಅಂಗಗಳಾಗಿದ್ದೇವೆ. ಆತನೊಂದಿಗೆ ಐಕ್ಯಗೊಂಡಿದ್ದೇವೆ. ಆತನೊಂದಿಗೆ ಒಂದೇ ಆಗಿದ್ದೇವೆ.

ಯಾರಾದರೂ ನಮ್ಮನ್ನು ಸೇರಿಸಿಕೊಂಡರೆ, ಅವರು ಯೇಸುವನ್ನು ಸೇರಿಸಿಕೊಳ್ಳುತ್ತಾರೆ. (ಮತ್ತಾಯ 10:40) ಯಾರಾದರೂ ನಮ್ಮನ್ನು ಕೇಳುವಾಗ, ಅವರು ಆತನನ್ನು ಕೇಳುವವರಾಗಿದ್ದಾರೆ, ಅವರು ನಮ್ಮನ್ನು ತಿರಸ್ಕರಿಸಿದರೆ, ಆತನನ್ನು ಅವರು ತಿರಸ್ಕರಿಸುತ್ತಾರೆ. (ಲೂಕ 10:16)

ಯಾರಾದರೂ ನಮಗೆ ಹಾನಿಯನ್ನುಂಟು ಮಾಡುವಾಗ ಅವರು ಕ್ರಿಸ್ತನನ್ನು ಹಾನಿಗೊಳಪಡಿಸಿದಂತೆ (ಅಪೊಸ್ತಲರ ಕೃತ್ಯಗಳು 9:5)

ಆತನ ದೇಹವಾಗಿರುವುದರ ಅರ್ಥವೇನೆಂಬುದರ ಕೆಲವು ಅಂಶಗಳು ಇಲ್ಲಿವೆ.

## *ಸಭೆಯು ನಿತ್ಯತ್ವವುಳ್ಳದ್ದಾಗಿದೆ ಯಾಕೆಂದರೆ ಶಿರಸ್ಸಾದ ಕ್ರಿಸ್ತನು ನಿತ್ಯತ್ವವಾಗಿರುವವನು*

ಸಭೆಯು ಕ್ರಿಸ್ತನ ದೇಹವಾಗಿರುವುದರಿಂದ ಮತ್ತು ಕ್ರಿಸ್ತನು ನಿತ್ಯತ್ವವುಳ್ಳವನಾಗಿರುವುದರಿಂದ ಸಭೆಯು ಸಹ ನಿತ್ಯತ್ವವುಳ್ಳದ್ದು ನಾವುಗಳು ಯಾವಾಗಲೂ, ಎಂದೆಂದಿಗೂ ಆತನ ದೇಹವಾಗಿದ್ದೇವೆ.

ಆತನು ಏನಾಗಿದ್ದಾನೋ ಅದರ ಭಾಗಗಳಾಗಿದ್ದೇವೆ. ಸಭೆಯು ಒಂದು ತಾತ್ಕಾಲಿಕವಾದ ವ್ಯವಸ್ಥೆಯಲ್ಲ, ಆದರೆ ಇದು ದೇವರ ಸಮೃದ್ಧ ಕೃಪೆಗೆ ಯಾವಾಗಲೂ ಸೇವೆಯನ್ನು ಸೂಚಿಸುವ ದೇವರ ನಿತ್ಯತ್ವವುಳ್ಳ ಕೈಗೆಲಸವಾಗಿದೆ.

ಎಫೆಸದವರಿಗೆ 2:7

**ಮುಂದಣ ಯುಗಗಳಲ್ಲಿ ತೋರಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ.**

## ಸಭೆಯು ಆತನ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವ ಸಾಧನವಾಗಿದೆ.

ಪ್ರಸಕ್ತಯುಗ ಮತ್ತು ಮಿಲೇನಿಯಮ್ ಯುಗದಲ್ಲೂ ಸಹ ತಲೆಯ ಆಜ್ಞಾಪಿಸುವುದನ್ನು ದೇಹವು ಕಾರ್ಯಗತಗೊಳಿಸುತ್ತದೆ. (ದಾನಿಯೇಲನು 7:18) ಸಭೆಯು ಕ್ರಿಯಾಶೀಲವಾದದ್ದು ಕ್ರಿಯಾತ್ಮಕ, ಅಸ್ತಿತ್ವದಲ್ಲಿ ಕಾರ್ಯ ಮಾಡುವುದಾಗಿದೆ. ನಾವುಗಳು ಭೂಮಿಯಮೇಲೆ ನಿಷ್ಕ್ರಿಯರಾಗಿ, ನಿರ್ಜೀವವುಳ್ಳವರಾಗಿ, ಭೂಮಿಯ ಮೇಲೆ ಸುಪ್ತ (ನಿದ್ರೆ) ಮಾಡುವವರಲ್ಲ. ಭೂಮಿಯ ಮೇಲೆ ಕರ್ತನಾದ ಯೇಸುವು ನಮ್ಮ ಮೂಲಕವಾಗಿ ಮಾಡಲು ಅಪೇಕ್ಷಿಸುವುದನ್ನು ಕೊಂಡೊಯ್ಯಲು ನಾವಿಲ್ಲಿದ್ದೇವೆ. ಆತನು ಏನನ್ನು ಹೇಳುತ್ತಿದ್ದಾನೆ ಎಂಬುದನ್ನು ಕ್ರಿಯಾತ್ಮಕವಾಗಿ ಕೇಳಬೇಕು ಮತ್ತು ಅವುಗಳು ನೆರವೇರುವುದನ್ನು ನೋಡಲು ಮುಂದುವರೆಯಬೇಕು. ಒಂದು ಸಾರಿ ಆತನಿಂದ ಕೇಳಲ್ಪಟ್ಟಾಗ ನಮಗೆ ಪರಿಪೂರ್ಣ ಅಧಿಕಾರವಿದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಮತ್ತು ಭೂಮಿಯ ಮೇಲೆ ಇದನ್ನು ಸಾಗಿಸಲು ಸರ್ವಶಕ್ತನಾದ ದೇವರು ಬೆಂಬಲ ನೀಡುತ್ತಾನೆ. ನಮ್ಮನ್ನು ಯಾವುದು ನಿಲ್ಲಿಸಲು ಸಾಧ್ಯವಿಲ್ಲ ದೇವರು ದೇವದೂತರನ್ನು ಉಪಯೋಗಿಸಿದ್ದಿರಬಹುದು ಅಥವಾ ಆತನ ಸೃಷ್ಟಿಯಲ್ಲಿ ಇತರ ಅನೇಕ ಸಂಗತಿಗಳನ್ನು ಬಳಸಿರಬಹುದು ಆದರೆ ಆತನು ನಮ್ಮನ್ನು ಆತನ ಭಾಗಗಳಾಗಿರುವುದಕ್ಕಾಗಿ ಆರಿಸಿಕೊಂಡಿದ್ದಾನೆ. ಆದ್ದರಿಂದ ಪರಲೋಕದಲ್ಲಿರುವ ಪ್ರಕಾರ ಆತನ ಚಿತ್ತವನ್ನು ನಾವುಗಳು ಇಲ್ಲಿ ಮಾಡಬಹುದು.

## *ಸಭೆಯು ಕ್ರಿಸ್ತನ ಸಂಪೂರ್ಣ ಪ್ರಾತಿನಿಧ್ಯವಾಗಿದೆ.*

ಎಫೆಸದವರಿಗೆ 1:23
**ಸಭೆಯು ಆತನ ದೇಹವಾಗಿದೆ. ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ.**

ಎಫೆಸದವರಿಗೆ 1:23 (ಮೆಸೆರ್ಝ್ ಬೈಬಲ್)
**ನೀವು ನೋಡುವಂತಹ ಸಭೆಯು ಪ್ರಪಂಚದ ಬಾಹ್ಯದ ದೃಷ್ಟಿಯಲ್ಲಿಲ್ಲ ಪ್ರಪಂಚವು ಸಭೆಯ ಬಾಹ್ಯದೃಷ್ಟಿಯಲ್ಲಿದೆ. ಸಭೆಯು ಕ್ರಿಸ್ತನ ದೇಹವಾಗಿದೆ. ಇದರ ಮೂಲಕವಾಗಿ ಆತನು ಮಾತಾಡುತ್ತಾನೆ ಮತ್ತು ಕಾರ್ಯಮಾಡುತ್ತಾನೆ. ಆತನ ಪ್ರಸನ್ನತೆಯೊಡನೆ ಎಲ್ಲವನ್ನು ತುಂಬಿಸುತ್ತಾನೆ.**

ಎಫೆಸದವರಿಗೆ 1:23 (ಆ್ಯಂಪ್ಲಿಫೈಡ್ ಬೈಬಲ್)
**ಅದು ಆತನ ದೇಹವಾಗಿದೆ, ಆತನ ಸಂಪೂರ್ಣತೆಯು, ಒಟ್ಟಾರೆ ಎಲ್ಲವನ್ನು ತುಂಬಿಸುವಾತನು (ಎಲ್ಲವನ್ನು ಪರಿಪೂರ್ಣವಾಗಿ ಮಾಡುವಾತನು, ಮತ್ತು ಎಲ್ಲೆಡೆ ಎಲ್ಲವೂ ಆತನೊಡನೆ ತುಂಬಿಸುವಾತನ, ಪೂರ್ಣ ಅಳತೆಯಲ್ಲಿ ದೇಹವು ಜೀವಿಸುತ್ತದೆ.)**

ಸಭೆಯು ಕ್ರಿಸ್ತನ ಸಂಪೂರ್ಣತೆಯಾಗಿದೆ. ಕ್ರಿಸ್ತನ ಪೂರ್ಣ ಅಳತೆಯು ಸಭೆಯು ಮೂಲಕವಾಗಿ ಪ್ರಕಟಿಸಲ್ಪಟ್ಟಿದೆ. ಸಭೆಯ ಮೂಲಕವಾಗಿ ಕರ್ತನಾದ ಯೇಸುವು ಭೂಲೋಕದ ಮೇಲೆ ಪ್ರತಿನಿಧಿಸಲ್ಪಟ್ಟಿದ್ದಾನೆ. ಸಭೆಯ ಮೂಲಕವಾಗಿ ಆತನು ಮಾತಾಡುತ್ತಾನೆ. ಮತ್ತು ಕಾರ್ಯಮಾಡುತ್ತಾನೆ.

ದೇಹದ ಪ್ರತಿಯೊಂದು ಭಾಗವು ಆತನ ಪರಿಪೂರ್ಣತೆಯಿಂದ ತುಂಬಿದೆ ಪ್ರತಿಯೊಬ್ಬ ವಿಶ್ವಾಸಿಯನ್ನು ಸ್ವತಃ ತನ್ನೊಡನೆ ತುಂಬಿಸುತ್ತಾನೆ. ನಮ್ಮಲ್ಲಿ ಪ್ರತಿಯೊಬ್ಬರು ಆತನ ಭಾಗಗಳಾಗಿ ಯೇಸುವನ್ನು ಪ್ರಪಂಚಕ್ಕೆ ಪ್ರಕಟಪಡಿಸುತ್ತೇವೆ.

## *ಪ್ರತಿಯೊಬ್ಬ ವಿಶ್ವಾಸಿಯು ಕ್ರಿಸ್ತನ ದೇಹದ ಸದಸ್ಯರು - ನಿತ್ಯತ್ವದ ಸಭೆ*

**1 ಕೊರಿಂಥದವರಿಗೆ 12:27**
**ನೀವು ಕ್ರಿಸ್ತನ ದೇಹವು ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ.**

ಪ್ರತಿಯೊಬ್ಬ ವಿಶ್ವಾಸಿಯು ಕ್ರಿಸ್ತನ ದೇಹದ ಭಾಗಗಳಾಗಿದ್ದಾರೆ. ಒಂದೇ ದೇಹಕ್ಕೆ ನಮ್ಮನ್ನು ಸೇರಿಸಲು (1 ಕೊರಿಂಥದವರಿಗೆ 12:13) ದಿಕ್ಷಾಸ್ನಾನ ನೀಡಿದಂತಹ (ಮುಳುಗಿ, ಜೊತೆಗೂಡಿ) ಪವಿತ್ರಾತ್ಮನ ಕಾರ್ಯಗಳಿಂದ ನಾವು ಕ್ರಿಸ್ತನ ದೇಹಕ್ಕೆ ತರಲ್ಪಟ್ಟಿದ್ದೇವೆ.

## *ಸಭೆಯ ಭಾಗವು ಪರಲೋಕದಲ್ಲಿದೆ ಮತ್ತು ಇದರ ಭಾಗವು ಭೂಲೋಕದಲ್ಲಿದೆ*

ಎಫೆಸದವರಿಗೆ 3:14,15

**ಹೀಗಿರಲಾಗಿ ಯಾವ ತಂದೆಯಿಂದ ಭೂಪರಲೋಕಗಳಲ್ಲಿರುವ ಪ್ರತಿಜನವೂ ಹೆಸರು ತೆಗೆದುಕೊಳ್ಳುತ್ತದೋ ತಂದೆಯ ಮುಂದೆ ನಾನು ಮೊಣಕಾಲೂರಿಕೊಂಡು**

ಸತ್ತು ಕರ್ತನೊಂದಿಗೆ ಇರಲು ಹೋದಂತಹ ವಿಶ್ವಾಸಿಗಳು, ಇನ್ನೂ ಪರಲೋಕದಲ್ಲಿ, ದೇವರ ಕುಟುಂಬವಾದ ಸಭೆಯ ಭಾಗಗಳಾಗಿದ್ದಾರೆ. ಇಲ್ಲಿರುವಂತಹ ನಾವುಗಳು ಭೂಲೋಕದ ಮೇಲೆ ದೇವರ ಕುಟುಂಬವಾದ ಸಭೆಯನ್ನು ಸೌಂದರ್ಯವರ್ಧಕಗೊಳಿಸಬೇಕು.

## ಸಭೆಯ ನೈಸರ್ಗಿಕ ಆಯಾಮಗಳು

1 ತಿಮೊಥೆಯನಿಗೆ 3:14,15

**ಬೇಗನೆ ನಿನ್ನ ಬಳಿಗೆ ಬರುವೆನೆಂದು ನನಗೆ ನಿರೀಕ್ಷೆಯುಂಟು ಆದರೆ ಒಂದು ವೇಳೆ ನಾನು ತಡಮಾಡಿದರೂ ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಸಭೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯು ನಿನಗೆ ಗೊತ್ತಾಗಬೇಕೆಂದು ಈ ಸಂಗತಿಗಳನ್ನು ಬರೆದಿದ್ದೇನೆ ಆ ಸಭೆಯು ಸತ್ಯಕ್ಕೆ ಸ್ತಂಭವೂ ಆಧಾರವೂ ಆಗಿದೆ.**

ಅಪೊಸ್ತಲನಾದ ಪೌಲನು ಎಫೆಸ ಸಭೆಯ ಉಸ್ತುವಾರಿ ವಹಿಸಿಕೊಂಡಿದ್ದ ತಿಮೊಥೆಯನಿಗೆ ಬರಯುತ್ತಿದ್ದಾನೆ. ಎಫೆಸದ ಸ್ಥಳೀಯ ವಿಶ್ವಾಸಿಗಳ ಸಮುದಾಯವನ್ನು ಉಲ್ಲೇಖಿಸುವಾಗ ಕ್ರಿಸ್ತನ ದೇಹದ ಆತ್ಮಿಕ ಕ್ರಿಸ್ತನ ದೇಹವನ್ನು ಉಲ್ಲೇಖಿಸಲು ಉಪಯೋಗಿಸಿದ ಅದೇ ಪರಿಭಾಷೆಯನ್ನು ಅಪೊಸ್ತಲನಾದ ಪೌಲನು ಬಳಸುತ್ತಾನೆ. ಅವನು ಸ್ಥಳೀಯ ಸಭೆಯನ್ನು ''ದೇವರ ಮನೆ'' ಮತ್ತು ''ಜೀವಿಸುವ ದೇವರ ಸಭೆ''ಎಂಬುದಾಗಿ ಕರೆಯುತ್ತಾನೆ.

ಸ್ಥಳೀಯ ಸಭೆಯು, ಆತ್ಮಿಕ ಸಭೆಯ ನೈಸರ್ಗಿಕ ಅಭಿವ್ಯಕ್ತತೆಯಾಗಿದೆ.

## ಸ್ಥಳೀಯ ಸಭೆಯು ''ದೇವರ ಮನೆ'' ಎಂಬುದಾಗಿ ಕರೆಯಲಾಗುತ್ತದೆ.

''ದೇವರ ಮನೆತನ'' ಅಥವಾ ''ನಂಬಿಕೆಯ ಮನೆತನ'' ಎಂಬ ಪದವು ಎಫೆಸದವರಿಗೆ 2:19 ಮತ್ತು ಗಲಾತ್ಯದವರಿಗೆ 6:10 ರಲ್ಲಿ ನಾವು ನೋಡುವಂತಹ ಸ್ಥಳೀಯ ಸಭೆ ಮತ್ತು ಆತ್ಮಿಕ ಸಭೆಗಳಿಗೆ ಉಪಯೋಗಿಸಲ್ಪಟ್ಟಿದೆ.

ಎಫೆಸದವರಿಗೆ 2:19

**ಹೀಗಿರಲಾಗಿ ನೀವು ಇನ್ನೂ ಮೇಲೆ ಪರದೇಶದವರೂ ಅನ್ಯರೂ ಆಗಿರದೆ ದೇವಜನರೊಂದಿಗೆ ಒಂದೇ ಸಂಸ್ಥಾನದವರೂ ದೇವರ ಮನೆಯವರೂ ಆಗಿದ್ದೀರಿ.**

ಗಲಾತ್ಯದವರಿಗೆ 6:10

**ಆದದರಿಂದ ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನ ನಂಬಿಕೆಯುಳ್ಳವರಿಗೆ ಮಾಡೋಣ.**

ಮನೆ ಅಥವಾ ಮನೆತನ ಕುಟುಂಬವನ್ನು ಸೂಚಿಸುತ್ತದೆ. ದೇವರ ನೀಲನಕ್ಷೆಯ ಭಾಗದಲ್ಲಿ ಸ್ಥಳೀಯ ಸಭೆಯ ದೇವರ ಕುಟುಂಬ ಎಂಬುದನ್ನು ನಾವು ಅನ್ವೇಷಿಸುವಾಗ ಇದರ ಕುರಿತು ಅಧಿಕವಾಗಿ ಚರ್ಚಿಸೋಣ.

## *ಸ್ಥಳೀಯ ಸಭೆಯ ''ಜೀವಿಸುವ ದೇವರ ಸಭೆ''ಎಂದು ಕರೆಯಲಾಗಿದೆ.*

ಕ್ರಿಸ್ತನ ಆತ್ಮಿಕ ದೇಹ ಮತ್ತು ಸ್ಥಳೀಯ ಸಭೆಗಳು ಇವೆರಡು ಜೀವಿಸುವ ದೇವರ ಸಭೆಗೆ ಉಲ್ಲೇಖಿಸಲಾಗಿದೆ. ಆತ್ಮಿಕ ಸಭೆಯ ಬಗ್ಗೆ ಹೇಳಲ್ಪಟ್ಟಂತಹ ಅನೇಕ ಸಂಗತಿಗಳು ನೇರವಾಗಿ ಸ್ಥಳೀಯ ಸಭೆಗಳಿಗೆ ಅನ್ವಯಿಸುತ್ತವೆ.

## *ಸ್ಥಳೀಯ ಸಭೆಯ ಕೆಲವು ಭೌಗೋಳಿಕ ಪ್ರದೇಶಗಳಲ್ಲಿನ ಆತ್ಮಿಕ ಕ್ರಿಸ್ತನ ದೇಹದ, ದೈಹಿಕ ಅಭಿವ್ಯಕ್ತತೆಯಾಗಿದೆ.*

ಆದುದರಿಂದ ನಾವುಗಳು ಕೆಲವು ಪ್ರದೇಶಗಳು ಆತ್ಮಿಕ ಕ್ರಿಸ್ತನ ದೇಹದ ದೈಹಿಕ ಅಭಿವ್ಯಕ್ತತೆಯು ಸ್ಥಳೀಯ ಸಭೆಗಳಾಗಿವೆ. ಎಂಬುದಾಗಿ ನಾವು ಭರವಸೆಯಿಂದ ಹೇಳಬಹುದಾಗಿದೆ. ಕರ್ತನಾದ ಯೇಸುವು ಕೆಲವು ಪ್ರದೇಶಗಳನ್ನು ನೋಡುವಾಗ ಆತನು ನಮ್ಮ ಸಂಘಸಂಸ್ಥೆಗಳು, ಭೂಮಿಯ ಮೇಲೆ ನಮಗಿರುವಂತಹ ನಾವು ಉಪಯೋಗಿಸುವ ಗುರುತುಗಳು, ಹೆಸರು ಸೂಚಿಪಟಗಳು, ಮತ್ತು ಇತರೆ ಯಾವುದನ್ನು ನೋಡುವುದಿಲ್ಲ ಎಂಬುದಾಗಿ ನಾನು ಖಚಿತವಾಗಿ ಹೇಳುತ್ತೇನೆ. ಆತನ ಜನರುಗಳಾಗಿ ಆತನ ರಕ್ತದಿಂದ ತೊಳೆಯಲ್ಪಟ್ಟಂತಹ ಜನರಾಗಿ ಆತನು ನೋಡುತ್ತಾನೆ. ನಗರದಲ್ಲಿ (ಅಥವಾ ಪ್ರದೇಶದಲ್ಲಿ) ಒಂದೇ ಸಭೆ - ನಗರವ್ಯಾಪ್ತಿ ಸಭೆ ಎಲ್ಲಾ ಸ್ಥಳೀಯ ಸಭೆಗಳಿಂದ ವಿಶ್ವಾಸಿಗಳನ್ನು ಒಳಗೊಂಡಿರುವುದನ್ನು ಆತನು ನೋಡುತ್ತಾನೆ. ನಮ್ಮ ನಿರ್ದಿಷ್ಟ ಪಾತ್ರಗಳು, ಕರೆಗಳು ಮತ್ತು ಪ್ರಭಾವದ ಕರ್ತವ್ಯಗಳನ್ನು ಪ್ರತಿಯೊಬ್ಬರಿಗೂ ದೇವರು ಹಂಚಿರುತ್ತಾನೆ. ನಗರದಲ್ಲಿ ಆತನ ಸಭೆಯ ಮೂಲಕವಾಗಿ ದೇವರು

ಅಪೇಕ್ಷಿಸಿದ್ದನ್ನು ನೆರವೇರಿಸಲು ನಾವು ಅಂಗಗಳಾಗಿದ್ದೇವೆ. ಪ್ರತಿಯೊಂದು ಸ್ಥಳೀಯ ಸಭೆಯ ಮತ್ತು ಆ ಸ್ಥಳೀಯ ಸಭೆಗಳ ಅಂಗಗಳಾಗಿರುವಂತಹವರು. ನಗರವ್ಯಾಪ್ತಿ ಸಭೆಗಳ ಕಡೆಗೆ ಅವರವರ ಕಾರ್ಯಗಳನ್ನು ಅನುಕ್ರಮವಾಗಿ ಮಾಡಬೇಕು.

### *ಸ್ಥಳೀಯ ಸಭೆಯು ಕೆಲವು ಪ್ರದೇಶಗಳಲ್ಲಿ, ನಿತ್ಯತ್ವದ ಸಭೆಯ ಸದಸ್ಯರಿಂದ ಮಾಡಲ್ಪಟ್ಟಿದೆ.*

ಸ್ಥಳೀಯ ಸಭೆಯು, ನಿತ್ಯತ್ವದ ಸಭೆಯು, ಆತ್ಮಿಕ ಕ್ರಿಸ್ತನ ಅಂಗಗಳಾಗಿರುವ ವಿಶ್ವಾಸಿಗಳಿಂದ ಮಾಡಲ್ಪಟ್ಟಿದೆ.

### *ಸ್ಥಳೀಯ ಸಭೆಯು, ಕೆಲವು ಪ್ರದೇಶಗಳಲ್ಲಿ ಕ್ರಿಸ್ತನ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವ ಕ್ರಿಸ್ತನ ಸಾಧನವಾಗಿದೆ.*

ಆತ್ಮಿಕ ದೇಹದ ಬಗ್ಗೆ ಹೇಳಿದಂತೆ, ಸ್ಥಳೀಯ ಸಭೆಯು, ಕೆಲವು ಪ್ರದೇಶಗಳಲ್ಲಿ ಪ್ರಾಂತ್ಯಗಳಲ್ಲಿ, ಅಥವಾ ನಗರದಲ್ಲಿ ಆ ಒಂದು ಪ್ರದೇಶ ಮತ್ತು ಕ್ರಿಸ್ತನ ಸಾಧನವಾಗಿದೆ. ನಾವುಗಳು ಆತನ ಕೈಗಳು, ಕಾಲುಗಳು, ಮತ್ತು ಸ್ವರವಾಗಿ ಆ ಒಂದು ಪ್ರದೇಶಕ್ಕೆ ಕಂಡುಬರುತ್ತೇವೆ. ಆದ್ದರಿಂದ ಸ್ಥಳೀಯ ಸಭೆಯು ತನ್ನನ್ನು ಪರಲೋಕದ ನಿಯೋಜನೆಗನುಸಾರವಾಗಿ ನೋಡಿಕೊಳ್ಳಬೇಕು. ದೇವರ ಕಡೆಗೆ, ನಮ್ಮ ಸಮುದಾಯ ಮತ್ತು ಅದಕ್ಕಿಂತ ಮಿಗಿಲಾಗಿ ಯೇಸುವು ಅಪೇಕ್ಷಿಸಿದ್ದನ್ನು ಮಾಡಲೂ ನಾವು ಜವಬ್ದಾರಿ ಹೊಂದಿದ್ದೇವೆ.

### *ಸ್ಥಳೀಯ ಸಭೆಯು ಕೆಲವು ಪ್ರದೇಶದಲ್ಲಿ, ಕ್ರಿಸ್ತನನ್ನು ಸ್ವತಃ ಆ ಪ್ರದೇಶದಲ್ಲಿ ಪ್ರತಿನಿಧಿಸುವುದಾಗಿದೆ.*

ಕೆಲವು ಪ್ರದೇಶ ಅಥವಾ ಪ್ರಾಂತದ ಜನರು, ಸ್ಥಳೀಯ ಸಭೆಯ, ಸಮುದಾಯ ವಿಶ್ವಾಸಿಗಳನ್ನು ನೋಡುವಾಗ ಅವರು ಯೇಸುವನ್ನು ನೋಡುವವರಾಗಿರಬೇಕು. ಆತನ ದೇಹವಾಗಿ, ಅವರಿಗೆ ನಾವು ಕ್ರಿಸ್ತನ ಅಭಿವ್ಯಕ್ತತೆಯಾಗಿದ್ದೇವೆ. ನಮ್ಮ ಸುತ್ತಲಿರುವ ಜನರಿಗೆ ನಾವುಗಳು ಆತನ ಪ್ರೀತಿ ಮತ್ತು ಆಶೀರ್ವಾದದ ಚಿಲುಮೆಗಳಾಗಿದ್ದೇವೆ.

### *ಸ್ಥಳೀಯ ಸಭೆಯು ಕೆಲವು ಪ್ರದೇಶಗಳಲ್ಲಿ ಆ ಪ್ರದೇಶದ ದೇವರ ಕುಟುಂಬವಾಗಿದೆ.*

ಸ್ಥಳೀಯ ಸಭೆಯು, ದೇವರ ಕುಟುಂಬವಾಗಿ ನಾವುಗಳು ಒಟ್ಟಾಗಿ ದೇವರ ಮಗ ಮತ್ತು ಮಗಳಾಗಿ ಜೀವಿಸುವ ಸ್ಥಳವಾಗಿದೆ. ಇದು ಒಂದು ಸ್ಥಳೀಯ ವಿಶ್ವಾಸಿಗಳ

ಸಮುದಾಯವಾಗಿದೆ. ಆದ್ದರಿಂದ ಚಿಕ್ಕದಾಗಿರಬಹುದು. ಅಥವಾ ದೊಡ್ಡದಾಗಿರಬಹುದು, ನಾವು ಅರ್ಥಗರ್ಬಿತವಾದ ಸಂಬಂಧಗಳನ್ನು ಕಟ್ಟುತ್ತೇವೆ. ಒಬ್ಬರಿಗೊಬ್ಬರು ಸೇವೆ ಸಲ್ಲಿಸುತ್ತೇವೆ ಒಬ್ಬರಿಗೊಬ್ಬರು ಕಾಳಜಿ ವಹಿಸುತ್ತೇವೆ ಮತ್ತು ಕ್ರಿಸ್ತನ ಸಾರೂಪ್ಯಕ್ಕೆ ಒಬ್ಬರಿಗೊಬ್ಬರು ಪೋಷಿಸುತ್ತೇವೆ.

## ನೀನು ಏಕೆ ಸ್ಥಳೀಯ ಸಭೆಯಭಾಗವಾಗಿರಬೇಕು

ವಿಶ್ವಾಸಿಯು ಯಾವುದಾದರೂ ಸ್ಥಳೀಯ ಸಭೆಯ ಅಂಗವಾಗಿರಬೇಕು, ಆ ಒಂದು ಸ್ಥಳೀಯ ಸಭೆಗೆ ಬದ್ಧತೆಯಿಂದಿರುವುದರ ಪ್ರಾಮುಖ್ಯತೆಯನ್ನು ನಾವು ಅರ್ಥಮಾಡಿಕೊಳ್ಳಬೇಕು.

ಕ್ರಿಸ್ತನ ಆತ್ಮಿಕ ದೇಹವಾದ ಸಭೆಯಲ್ಲಿ, ನಮ್ಮ ದಿನನಿತ್ಯದ ಸದಸ್ಯತ್ವದಲ್ಲಿ ಜೀವಿಸುತ್ತೇವೆ. ನಾನು ಮತ್ತು ನೀವುಗಳು ಆ ಸ್ಥಳೀಯ ಸಭೆಯೊಳಗೆ ಇರುತ್ತೇವೆ. ಆತ್ಮಿಕ ದೇಹಕ್ಕೆ ಸಂಬಂದಿಸಿದ್ದು ಇದು ಒಂದು ವಿಷಯವಾಗಿದೆ. ಸ್ಥಳ, ಕಾರ್ಯ, ಕರೆ, ಅಭಿಷೇಕ ಮತ್ತು ವರಗಳು ವೈಯಕ್ತಿಕವಾಗಿ ನಿಯೋಜಿಲ್ಪಟ್ಟಿದೆ. ನೈಸರ್ಗಿಕ ಜಗತ್ತಿನಲ್ಲಿ ಎಲ್ಲವನ್ನೂ ಯಾವುದೇ ಮೌಲ್ಯವನ್ನು ಅದು ಹೊಂದಿಲ್ಲ ಎಂಬುದಾಗಿ ನೆನಸಿ ಜೀವಿಸಬೇಕು. ಸ್ಥಳೀಯ ಸಭೆಯು, ಅಣುರೂಪವಾಗಿ ನಾವು ವಾಸ್ತವವಾಗಿ ಮತ್ತು ಪ್ರಾಯೋಗಿಕವಾಗಿ ವಾಸಿಸುವ ಸ್ಥಳವಾಗಿದೆ ಮತ್ತು ಆತನ ದೇಹದಲ್ಲಿ ಕರ್ತನು ಕೊಟ್ಟಿರುವುದನ್ನು ಕಾರ್ಯಗತಗೊಳಿಸುವುದಾಗಿದೆ. ಕರ್ತನು ನಿಶ್ಚಯಿಸುವಂತೆ ನಮ್ಮಲ್ಲಿ ಹಲವರು ಅನೇಕ ಸ್ಥಳೀಯ ಸಭೆಗಳಿಗೆ ವಿಸ್ತಾರಗೊಳಿಸುವ ಪಾತ್ರಗಳನ್ನು ಹೊಂದಿದ್ದೇವೆ. ಮತ್ತು ಬಹುಶಃ ರಾಷ್ಟ್ರೀಯವಾಗಿ ಮತ್ತು ಪ್ರಪಂಚಗಳ ಪ್ರದೇಶಗಳಲ್ಲಿಯೂ ಸಹ.

ದೇಹದ ಅಂಗಗಳು ತೇಲುವುದಿಲ್ಲ ಆದರೆ ಒಟ್ಟಾಗಿರುತ್ತವೆ. ಸ್ಥಳೀಯ ಸಭೆ (ಉದಾಃ ಕೊರಿಂಥದ ಸಭೆ) ಮನುಷ್ಯನ ದೇಹಕ್ಕೆ ಹೋಲಿಕೆಯಾಗಿದೆ. ಪ್ರತಿಯೊಬ್ಬ ವಿಶ್ವಾಸಿಯು ದೇಹದ ಅಂಗವಾಗಿದ್ದಾರೆ ಪ್ರಯೋಗಿಕ ಆಲೋಚನೆಗಳನ್ನು ಚಿತ್ರಿಸಲು ಈ ಸಾದೃಶ್ಯವನ್ನು ನಾವು ಉಪಯೋಗಿಸಿದರೆ, ಒಂದು ಸ್ಪಷ್ಟವಾದ ನಿರ್ಣಯವೇನೆಂದರೆ ಭಾಗಗಳು ಸುತ್ತಲೂ ತೇಲುವುದಿಲ್ಲ. ಅವರು ಭದ್ರಪಡಿಸಲ್ಪಟ್ಟಿದ್ದಾರೆ; ಅರ್ಥವೇನೆಂದರೆ ಒಂದು ದೈಹಿಕ ದೇಹಕ್ಕೆ ಬದ್ದವಾಗಿರುವುದಾಗಿದೆ ಹೌದು ಕೆಲವು ನಿರ್ದಿಷ್ಟ ಪರಿಸ್ಥಿತಿಗಳಲ್ಲಿ ದೇಹದ ಅಂಗಗಳು ಕಸಿಮಾಡಬಹುದಾಗಿದೆ. ಆದರೆ ಸಾಮಾನ್ಯ ದೇಹದ ಅಂಗಗಳು ಸುತ್ತಲೂ ತೇಲುವುದಿಲ್ಲ. ಇದೇ ರೀತಿಯಲ್ಲಿ ಸ್ಥಳೀಯ ಅಂಗಗಳಾದ ವಿಶ್ವಾಸಿಗಳು, ಚಿಕ್ಕದಿರಬಹುದು ಅಥವಾ ದೊಡ್ಡದಿರಬಹುದು ವಿಶ್ವಾಸಿಗಳು,

ಚಿಕ್ಕದಿರಬಹುದು ಅಥವಾ ದೊಡ್ಡದಿರಬಹುದು ವಿಶ್ವಾಸಿಗಳು ಅದಕ್ಕೆ ಬದ್ಧರಾಗಿರಬೇಕು ಎಂಬುದು ಸತ್ಯವೇದಕ್ಕನುಸಾರವಾದ ಒತ್ತಾಯವಾಗಿದೆ.

ಕ್ರಿಸ್ತೀಯ ಜೀವಿತದಲ್ಲಿ ಒಟ್ಟಾಗಿ ಇರುವುದರ, ಒಟ್ಟಾಗಿ ಬೆಳಯುವ ಮತ್ತು ಒಟ್ಟಾಗಿ ಕೆಲಸಮಾಡುವಂತಹ ಸಮುದಾಯದ ಸನ್ನಿವೇಶದಲ್ಲಿ ಅನೇಕ ಸಂಗತಿಗಳು ಜರುಗುತ್ತವೆ. ಮಾನವನ ದೇಹದಂತೆ ಒಟ್ಟಾರೆ ಬದುಕುಳಿಯುವಿಕೆ ಮತ್ತು ದೇಹದ ಬೆಳವಣಿಗೆಗೆ ಪ್ರತಿಯೊಂದು ಅಂಗಕ್ಕೂ ಮತ್ತೊಂದು ಅಂಗದ ಅಗತ್ಯತೆ ಇದೆ ಆದ್ದರಿಂದ ಸ್ಥಳೀಯ ಸಭೆಯಲ್ಲೂ ನಾವೆಲ್ಲರೂ ಒಟ್ಟಾಗಿ ಬೆಳೆಯಲೂ, ಪ್ರಗತಿಗೆ, ಪ್ರೌಢತೆಗೆ ಮತ್ತು ದೇವರ ರಾಜ್ಯದಲ್ಲಿ ಫಲಕಾರಿಯಾಗಿರಲು ನಮಗೆ ಪರಸ್ಪರ ಮತ್ತೊಬ್ಬರು ಬೇಕು. ನಮ್ಮ ಪ್ರಾಥಮಿಕ ಅವಲಂಬನೆಯು ಸ್ವತಃ ಕರ್ತನ ಮೇಲಾಗಿದೆ. ಜೊತೆಗೆ ನಾವು ಒಬ್ಬರಿಗೊಬ್ಬರು ಸಾಮರ್ಥ್ಯ ಪೂರೈಸಬೇಕು ಮತ್ತು ಪೋಷಣೆ ಮಾಡಬೇಕೆಂಬುದಾಗಿ ಆತನು ನಿರ್ಧರಿಸಿದ್ದಾನೆ.

ನಾವು ಪರಸ್ಪರ ತೀಕ್ಷ್ಣಗೊಳಿಸುವುದರಿಂದ ಗುಣ ನಡತೆಯು ಅಭಿವೃದ್ಧಿಪಡಿಸಲಾಗಿದೆ.

ನಾವು ಪರಸ್ಪರ ಕಲಿಯುವುದರಿಂದ ಪರಿಪಕ್ವತೆ ಜರುಗುತ್ತದೆ.

ನಮ್ಮ ಜೀವಿತದ ಕರೆಯ ನಮ್ಮ ಪ್ರಮಾಣವು ಏಕಾಂತವಾಗಿ ಜರುಗುವುದಿಲ್ಲ ಆದರೆ ಬೇರೆಯವರು ಅದರೊಳಗೆ ಚಲಿಸಲು ಸಹಾಯ ಮಾಡುವುದರಿಂದ ಜರುಗುತ್ತದೆ.

ಗೊಂಚಲಿನಲ್ಲಿ ಹೊಸ ದ್ರಾಕ್ಷಾರಸವು ದೊರಕಿದೆ (ಯೆಶಾಯ 65:8). ಒಂದೇ ದ್ರಾಕ್ಷೆಹಣ್ಣು, ಸ್ವತಃ ಸ್ವಲ್ಪ ರಸವನ್ನು ಉತ್ಪಾದಿಸುತ್ತದೆ. ಆದರೆ ಯಾವಾಗ ಗೊಂಚಲು ಒತ್ತಿದರೆ ಅತೀ ಹೆಚ್ಚಾದ ದ್ರಾಕ್ಷಾರಸ ನಮಗೆ ದೊರೆಯುತ್ತದೆ.

ಸಹೋದರರು ಐಕ್ಯತೆಯಿಂದ ವಾಸಿಸುವ ಸಮುದಾಯದ ಜನರ ಮಧ್ಯದಲ್ಲಿ ದೇವರ ಅಭಿಷೇಕವು ಮತ್ತು ಆಶೀರ್ವಾದವು ಬಿಡುಗಡೆಗೊಳ್ಳಲು ಆದೇಶಿಸಲ್ಪಟ್ಟಿದೆ. (ಕೀರ್ತನೆಗಳು 133:1-3)

ನಾವು ಹಸನಾಗಿ ಬೆಳೆಯಬೇಕಾದರೆ  ನಾವು ನಾಟಿ ಮಾಡಿದವರಾಗಿರಬೇಕು ‘‘ಯೆಹೋವನ ಆಲಯದಲ್ಲಿ (ಸಸಿಗಳಂತೆ) ನೆಡೆಲ್ಪಟ್ಟವರು ನಮ್ಮ ದೇವರ ಅಂಗಳದಲ್ಲಿ ಚೆನ್ನಾಗಿ ಬೆಳೆಯುವರು (ಕೀರ್ತನೆಗಳು 92:13)

# 2

# ಸ್ಥಳೀಯ ಸಭೆಯ ಉದ್ದೇಶ - ಅದರ ಸೇವೆ, ಸಂದೇಶ, ಪದ್ಧತಿಗಳು

## ಸೇವೆ

ಮತ್ತಾಯ 28:18-20

**ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ ಅವರಿಗೆ ತಂದೆಯ, ಮಗನ ಪವಿತ್ರಾತ್ಮನ ಹೆಸರಿನಲ್ಲಿ ದಿಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ ನೋಡಿರಿ ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು.**

ಮಹಾ ಆದೇಶಾಧಿಕಾರದಲ್ಲಿ, ಕರ್ತನಾದ ಯೇಸುವು ಆತನ ಶಿಷ್ಯರಿಗೆ ಎಲ್ಲಾ ದೇಶದ ಜನರನ್ನು ವಿಶ್ವಾಸಿಗಳನ್ನಾಗಿ ಮಾಡಿರಿ ಎಂಬುದಾಗಿ ಉಪದೇಶಿಸಿದನು. ಆತನು ಅವರಿಗೆ ಪವಿತ್ರಾತ್ಮನಿಂದ ಬಲ ಹೊಂದುವಿರಿ ಎಂಬುದಾಗಿ ಹೇಳಿದನು ಹಾಗಿದ್ದರೂ ಆತನು ಹೋಗಿರಿ ಉಪದೇಶಿಸಿ ಮತ್ತು ಬೋಧಿಸಿ ಎಂಬುದನ್ನು ಹೊರತು ಬೇರೆ ಯಾವ ವಿಧಿ ವಿಧಾನಗಳನ್ನು ಕೊಡಲಿಲ್ಲ.

ಅಪೊಸ್ತಲರ ಕೃತ್ಯಗಳು ಪುಸ್ತಕವನ್ನು ನೋಡುವಾಗ, ದೇವರ ಅಂಕಿ ಅಂಶವು ಮುಚ್ಚಿರಲಿಲ್ಲ ಸುವಾರ್ತೆ ಸಾರುವ ಮೂಲಕವಾಗಿ ಜನರು ಕ್ರಿಸ್ತನ ನಂಬಿಕೆಗೆ ಬಂದರು ಆ ಮೇಲೆ ವಿಶ್ವಾಸಿಗಳ ಸಮುದಾಯಗಳು ಏಕೀಕರಿಸಲು, ಶಿಷ್ಯತ್ವ ಮತ್ತು ಪ್ರಾರಂಭಗೊಂಡಿದ್ದು ದ್ವಿಗುಣಗೊಳ್ಳಲು ಸಭೆಗಳನ್ನು ಸ್ಥಾಪಿಸಲಾಯಿತು. ಮಹಾ ಆದೇಶಾಧಿಕಾರವನ್ನು ಹೊರಗೆ ಕೊಂಡೊಯ್ಯುವುದು ಸ್ಥಳೀಯ ಸಭೆಗಳನ್ನು ಸ್ಥಾಪಿಸುವ ಫಲಿತಾಂಶವನ್ನು ಹೊಂದಿತ್ತು.

ಸಭೆಯ ಪ್ರಾಥಮಿಕ ಸೇವೆಯು, ಪ್ರಪಂಚದ ಸುವಾರ್ತೆ ಮತ್ತು ಶಿಷ್ಯತ್ವದ ಮೂಲಕವಾಗಿ ಪ್ರತಿಯೊಂದು ಸುವಾರ್ತೆಸಾರಿದ ಪ್ರದೇಶಗಳಲ್ಲಿ ವಿಶ್ವಾಸಿಗಳ ಸಮುದಾಯಗಳನ್ನು - ಅಂತಿಮವಾಗಿ ಸಭೆಗಳನ್ನು ಸ್ಥಾಪಿಸುವಂತಹದ್ದಾಗಿದೆ.

## ಸಂದೇಶ

### *ಸುವಾರ್ತೆ*

ಕರ್ತನಾದ ಯೇಸುಕ್ರಿಸ್ತನ ಸುವಾರ್ತೆಯನ್ನು ಸಾರಲೂ ನಾವಿದ್ದೇವೆ ಸುವಾರ್ತೆಯು ಯೇಸುಕ್ರಿಸ್ತನ ಶಿಲುಬೆಯ ಸಂದೇಶವಾಗಿದೆ ಆತನು ಪೂರ್ಣಗೊಳಿಸಿದ ಕಾರ್ಯಗಳು ಮತ್ತು ರಕ್ಷಣೆ, ಸ್ವಸ್ಥತೆ, ಬಿಡುಗಡೆ ಮತ್ತು ಆತನು ಮಾಡಿದ್ದರಿಂದ ನಮಗಾಗಿರುವ ವಿಮೋಚನೆಯಾಗಿದೆ.

1 ಕೊರಿಂಥದವರಿಗೆ 1:17-24

**ಸುವಾರ್ತೆಯನ್ನು ಸಾರುವುದಕ್ಕೆ ಕ್ರಿಸ್ತನು ನನ್ನನ್ನು ಕಳುಹಿಸಿದನು ಆದರೆ ವಾಕ್ಚಾತುರ್ಯದಿಂದ ಸಾರಬೇಕೆಂದು ಕಳುಹಿಸಲಿಲ್ಲ ಹಾಗೆ ಸಾರಿದರೆ ಕ್ರಿಸ್ತನ ಶಿಲುಬೆಯು ನಿರರ್ಥಕವಾಗುವುದು. ಶಿಲುಬೆಯ ವಿಷಯವಾದ ಮಾತು ನಾಶನದ ಮಾರ್ಗದಲ್ಲಿರುವವರಿಗೆ ಹುಚ್ಚು ಮಾತಾಗಿದೆ. ರಕ್ಷಣೆಯ ಮಾರ್ಗದಲ್ಲಿರುವ ನಮಗಾದರೋ ದೇವರ ಶಕ್ತಿಯಾಗಿದೆ. ಜ್ಞಾನಿಗಳ ಜ್ಞಾನವನ್ನು ನಾಶ ಮಾಡುವೆನು ವಿವೇಕಿಗಳ ವಿವೇಕವನ್ನು ನಿರಾಕರಿಸುವೆನು ಎಂಬದಾಗಿ ಶಾಸ್ತ್ರೋಕ್ತಿಯುಂಟಲ್ಲಾ ಜ್ಞಾನಿಯು ಎಲ್ಲಿ? ಶಾಸ್ತ್ರಿಯೆಲ್ಲಿ? ಇಹಲೋಕದ ತರ್ಕವಾದಿ ಎಲ್ಲಿ? ದೇವರು ಇಹಲೋಕಜ್ಞಾನವನ್ನು ಹುಚ್ಚುತನವಾಗ ಮಾಡಿದ್ದಾನಲ್ಲವೇ ಹೇಗೆಂದರೆ ಲೋಕವು ಜ್ಞಾನವನ್ನು ಹುಚ್ಚುತನವಾಗಿ ಮಾಡಿದ್ದಾನಲ್ಲವೇ ಹೇಗೆಂದರೆ ಲೋಕವು ಜ್ಞಾನವೆನಿಸುವ ಮಾರ್ಗದಿಂದ ದೇವರನ್ನು ತಿಳುಕೊಳ್ಳದೆ ಹೋದದ್ದು ದೇವರ ಜ್ಞಾನದ ಸಂಕಲ್ಪವೆ ಹೀಗಾದ ಮೇಲೆ ಹುಚುಪಿ ಮಾತು ಎಣಿಸಿಕೊಂಡಿರುವ ನಮ್ಮ ಪ್ರಸಂಗದಿಂದಲೇ ನಂಬುವವರನ್ನು ರಕ್ಷಿಸುವದು ದೇವರಿಗೆ ಒಳ್ಳೇದೆಂದು ತೋಚಿತು ಯೆಹೋದ್ಯರು ಸೂಚಕ ಕಾರ್ಯಗಳನ್ನು ಕೇಳುತ್ತಾರೆ, ಗ್ರೀಕರು ಜ್ಞಾನವನ್ನು ಹುಡುಕುತ್ತಾರೆ. ನಾವಾದರೊ ಶಿಲುಬೆಗೆ ಹಾಕಲ್ಪಟ್ಟವನಾದ ಕ್ರಿಸ್ತನನ್ನು ಪ್ರಚುರಪಡಿಸುತ್ತೇವೆ. ಇಂಥ ಕ್ರಿಸ್ತನ ಸಂಗತಿಯು ಯೆಹೂದ್ಯರಿಗೆ ವಿಘ್ನವೂ ಅನ್ಯಜನರಿಗೆ ಹುಚ್ಚು ಮಾತೂ ಆಗಿದೆ ಆದರೆ ದೇವರಿಂದ ಕರಿಸಿಕೊಂಡವರು ಯೆಹೂದ್ಯರಾಗಲಿ ಗ್ರೀಕರಾಗಲಿ ಅವರಿಗೆ ಇಂಥವನು ದೇವರ ಶಕ್ತಿಯೂ ದೇವರ ಜ್ಞಾನವೂ ಆಗಿರುವ ಕ್ರಿಸ್ತನೇ.**

ಯೇಸುಕ್ರಿಸ್ತನ ಸಂದೇಶವಾದ್ದಂತಹ ಸುವಾರ್ತೆಯನ್ನು ಸಾರುವುದೇ ತನ್ನ ಪ್ರಾರ್ಥಮಿಕ ನಿಯೋಜನೆ ಎಂಬುದನ್ನು ಅಪೊಸ್ತಲನಾದ ಪೌಲನು ನಿಖರವಾಗಿ ಹೇಳುತ್ತಾನೆ. ನಮ್ಮ ಪ್ರೇಕ್ಷಕರ ಅಪೇಕ್ಷೆ - ''ಸೂಚಕ ಕಾರ್ಯ'' ಅಥವಾ ''ಜ್ಞಾನ'' ಲೆಕ್ಕಿಸದೆ ನಮ್ಮ ಸಂದೇಶವು ಅದೇ ರೀತಿಯಲ್ಲಿರುತ್ತದೆ. ಕ್ರಿಸ್ತನು ಶಿಲುಬೆಗೆ ಹಾಕಲ್ಪಟ್ಟಿದ್ದನ್ನು ಕುರಿತು ಸಂದೇಶ ಕೊಡುತ್ತೇವೆ ಕೆಲವರು ಇದರಲ್ಲಿ ಎಡವಬಹುದು ಮತ್ತು ಇತರರು ಮೂರ್ಖತನವೆಂದು ಗುರ್ತಿಸಬಹುದು ಶಿಲುಬೆಯ ಸಂದೇಶವು ದೇವರ ಜ್ಞಾನವು ಮತ್ತು ದೇವರ ಬಲವು ಆಗಿದೆ.

## ದೇವರ ಸಂಪೂರ್ಣ ಸಲಹೆ

ದೇವರ ಸೇವಕರುಗಳಾಗಿ, ದೇವರ ಇಡೀ ಸಲಹೆಗಳನ್ನು ಸಾರಲೂ ಮತ್ತು ಕಲಿಸಲು ಇದ್ದೇವೆ. ಯೇಸುಕ್ರಿಸ್ತನ ಹೆಸರಿಗೆ ಘನತೆಯಲ್ಲಿ ಕೊಡುವ ಹಾಗೆ ಯಾವ ರೀತಿಯಲ್ಲಿ ಉತ್ತಮ ಜೀವಿತವನ್ನು ಜನರು ಜೀವಿಸಬೇಕೆಂಬ ಬೋಧನೆಗಳನ್ನು ಒಳಗೊಂಡ ''ಸ್ವಸ್ಥ ದೈವ ಸಿದ್ಧಾಂತಗಳನ್ನು'' ಬೋಧಿಸಲು ನಾವು ಇದ್ದೇವೆ.

ಅಪೊಸ್ತಲರ ಕೃತ್ಯಗಳು 20:20,21,27

**ನಾನು ನಿಮಗೆ ಹಿತಕರವಾದದ್ದೆಲ್ಲವನ್ನು ಹೇಳುವದಕ್ಕೂ ಸಭೆಯಲ್ಲಿಯೂ ಮನೆ ಮನೆಯಲ್ಲಿಯೂ ಉಪದೇಶಿಸುವದಕ್ಕೂ ಹಿಂತೆಗಿಯದೆ ಯೆಹೂದ್ಯರಿಗೂ ಗ್ರೀಕರಿಗೂ ದೇವರ ಕಡೆಗೆ ತಿರುಗಬೇಕೆಂತಲೂ ನಮ್ಮ ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡಬೇಕೆಂತಲೂ ಖಂಡಿತವಾಗಿ ಬೋಧಿಸುವವನಾಗಿದ್ದೆನು. ಯಾಕೆಂದರೆ ಒಂದನ್ನೂ ಮರೆಮಾಡದೆ ದೇವರ ಸಂಕಲ್ಪವೆನ್ನೆಲ್ಲಾ ನಿಮಗೆ ತಿಳಿಸಿದೆನು.**

1 ತಿಮೊಥೆಯನಿಗೆ 4:6,16

**ಈ ಸಂಗತಿಗಳನ್ನು ಸಹೋದರರಿಗೆ ತಿಳಿಸಿದರೆ ನೀನು ಅನುಸರಿಸಿರುವ ಕ್ರಿಸ್ತ ನಂಬಿಕೆಯ ಮತ್ತು ಸುಭೋಧನೆಯ ವಾಕ್ಯಗಳಲ್ಲಿ ಅಭ್ಯಾಸಹೊಂದುವವನಾಗಿ ಕ್ರಿಸ್ತ ಯೇಸುವಿನ ಒಳ್ಳೇ ಸೇವಕನಾಗಿರುವಿ. ನಿನ್ನ ವಿಷಯದಲ್ಲಿಯೂ ನಿನ್ನ ಉಪದೇಶದ ವಿಷಯದಲ್ಲಿಯೂ ಎಚ್ಚರಿಕೆಯಾಗಿರು ನೀನು ಈ ಕಾರ್ಯಗಳಲ್ಲಿ ನಿರತನಾಗಿರು ಹೀಗಿರುವುದರಿಂದ ನಿನ್ನನ್ನೂ ನಿನ್ನ ಉಪದೇಶ ಕೇಳುವವರನ್ನೂ ರಕ್ಷಿಸುವಿ.**

## ಪ್ರತಿ ಗಾಳಿಯ ದೈವಿಕ ಸಿದ್ಧಾಂತಗಳ ವಿರುದ್ಧ ಕಾಯ್ದುಕೊಳ್ಳುವುದು

ನಮ್ಮ ಪ್ರಸಂಗ ಮತ್ತು ಬೋಧನೆಯ ಭಾಗವಾಗಿ ವಿಶ್ವಾಸಿಗಳು ಮತ್ತು ಅಪರಿಚಿತ ಸಿದ್ಧಾಂತಗಳು ಮತ್ತು ಮಾನವನ ತಪ್ಪಾದ ತತ್ವಶಾಸ್ತ್ರಗಳಿಂದ ಸಂರಕ್ಷಿಸಿಕೊಳ್ಳಬೇಕು.

ನಾವು ತಪ್ಪಿನ ಮೇಲೆ ಸತ್ಯವನ್ನು ವರ್ಧಿಸುತ್ತೇವೆ. ನಾವು ದೋಷವನ್ನು ವಿವರಿಸುವದರಿಂದ ದೋಷದಿಂದ ಹೊರಬರುವುದಿಲ್ಲ ಆದರೆ ಸತ್ಯವನ್ನು ವಿವರಿಸುವುದರಿಂದ ಹೊರಬರುತ್ತೇವೆ. ಯಾವಾಗ ಜನರು ಸತ್ಯವನ್ನು ಅರ್ಥಮಾಡಿಕೊಳ್ಳುತ್ತಾರೋ, ಅವರು ದೋಷವನ್ನು ಗುರ್ತಿಸಲು ಶಕ್ತರಾಗಿದ್ದಾರೆ ಮತ್ತು ಅದರಿಂದ ದೂರವಿರುತ್ತಾರೆ.

**ಎಫೆಸದವರಿಗೆ 4:14,15**

**ನಾವು ಇನ್ನು ಮೇಲೆ ಕೂಸುಗಳಾಗಿರಬಾರದು ದುರ್ಜನರ ವಂಚನೆಗೂ ದುರ್ಬೋಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಸಿಕೊಂಡು ಹೋಗುವವರ**

**ಹಾಗಿರಬಾರದು ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು.**

**1 ತಿಮೊಥೆಯನಿಗೆ 6:3-5**
**ಯಾವನಾದರೂ ಬೇರೆ ವಿಧವಾದ ಉಪದೇಶವನ್ನು ಮಾಡಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಸ್ವಸ್ಥವಾದ ಮಾತುಗಳಿಗೂ ಭಕ್ತ್ಯನುಸಾರವಾದ ಉಪದೇಶಕ್ಕೂ ಸಮ್ಮತಿಸದೆ ಹೋದರೆ ಅವನು ಒಂದನ್ನೂ ತಿಳಿಯದೆ ಕುತರ್ಕ ವಾಗ್ವಾದಗಳನ್ನು ಮಾಡುವ ಭ್ರಾಂತಿಯಲ್ಲಿದ್ದು ಮದದಿಂದ ಕಣ್ಣುಗಾಣದವನಾಗಿದ್ದಾನೆ. ಇವುಗಳಿಂದ ಹೊಟ್ಟೇ ಕಿಚ್ಚು ಜಗಳ ದೋಷಣೆ ದುಸ್ಸಂಶಯ ಇವುಗಳು ಉಂಟಾಗುತ್ತವೆ ಇದಲ್ಲದೆ ಬುದ್ಧಿಗೆಟ್ಟು ಸತ್ಯವಿಹೀನರಾಗಿದ್ದು ದೇವಭಕ್ತಿಯನ್ನು ಲಾಭ ಸಾಧನವೆಂದೆಣಿಸುವ ಈ ಮನುಷ್ಯರಲ್ಲಿ ನಿತ್ಯವಾದ ಕಚ್ಚಾಟಗಳು ಉಂಟಾಗುತ್ತವೆ.**

## ವಿಧಾನಗಳು

ನಾವು ಉಪಯೋಗಿಸುವಂತಹ ವಿಧಾನಗಳು ದೇವರ ವಾಕ್ಯದಲ್ಲಿ ನಿಗದಿತವಾದ ನಿರ್ದೇಶನಗಳು ಮತ್ತು ಗುಣಮಟ್ಟಗಳೊಂದಿಗೆ ಸಮಾಂತರವಾಗಿರಬೇಕು. ಸುವಾರ್ತೆಯನ್ನು ಸಾರಲು ಮತ್ತು ಸ್ಥಳೀಯ ಸಭೆಯನ್ನು ಸ್ಥಾಪಿಸಲು ಔಪಚಾರಿಕವಾದ ಅರ್ಥಗಳನ್ನು ಉಪಯೋಗಿಸಲು ಸಾಧ್ಯವಿಲ್ಲ.

## ಪವಿತ್ರ

ನಾವು ಉಪಯೋಗಿಸುವ ವಿಧಾನಗಳು ದೇವರು ಮತ್ತು ಮನುಷ್ಯರ ಮುಂದೆ ಪವಿತ್ರವಾಗಿರಬೇಕು. ನಮ್ಮ ಗುರಿಗಳನ್ನು ಸಾಧಿಸಲು ಕುಶಲತೆಯನ್ನು ಸರಾಸರಿ ಎಂದು ಅಥವಾ ಉಪಾಯ (ಸಂಚು) ಉಪಯೋಗಿಸಬಾರದು.

ದೇವರ ವಾಕ್ಯವನ್ನು ಸಂಪರ್ಕಿಸುವುದರಲ್ಲಿಯೂ ನಾವು ಪವಿತ್ರರಾಗಿರಬೇಕು. ನಾವು ಇದನ್ನು ಪ್ರಾಮಾಣಿಕತೆಯಿಂದ ಮಾಡಬೇಕು ಮತ್ತು ದೇವರ ಮುಂದೆ ಮಾಡುತ್ತಿದ್ದೇನೆ ಎಂಬುದಾಗಿ ಮಾಡಬೇಕು. ನಮ್ಮ ಸ್ವಂತ ಅಜೆಂಡಾಗಳನ್ನು ಅಥವಾ ನಮ್ಮ ಸ್ವಂತ ಲಾಭಕ್ಕಾಗಿ ದೇವರ ವಾಕ್ಯವನ್ನು ನಾವು ಉಪಯೋಗಿಸಬಾರದು.

ಆದರೆ ನಾವು ದೇವರ ವಾಕ್ಯವನ್ನು ಕಲಬೆರಿಕೆ ಮಾಡುವವರಾದ ಹೆಚ್ಚು ಪಾಲಿನ ಜನರ ಹಾಗಿರದೆ ನಿಷ್ಕಪಟಿಗಳಾಗಿ ದೇವರಿಂದ ಉಪದೇಶ ಹೊಂದಿದವರಿಗೆ ತಕ್ಕ ಹಾಗೆ ಕ್ರಿಸ್ತನ ಅನ್ಯೋನ್ಯತೆಯಲ್ಲಿದ್ದುಕೊಂಡು ದೇವರ ಸಮಕ್ಷಮದಲ್ಲಿಯೇ ಮಾತಾಡುತ್ತೇವೆ.

2 ಕೊರಿಂಥದವರಿಗೆ 4:1,2

**ಆದದರಿಂದ ನಾವು ದೇವರ ಕರುಣೆಯಿಂದ ಈ ಸೇವೆಯನ್ನು ಹೊಂದಿದವರಾಗಿರಲಾಗಿ ಧೈರ್ಯಗೆಟ್ಟು ಹಿಂದೆಗೆಯುವದಿಲ್ಲ. ನಾಚಿಕೆಯನ್ನು ಹುಟ್ಟಿಸುವ ಗುಪ್ತ ಕಾರ್ಯಗಳನ್ನು ನಾವು ಬಿಟ್ಟು ಬಿಟ್ಟು ತಂತ್ರದಲ್ಲಿ ನಡೆಯದೆ ದೇವರ ವಾಕ್ಯವನ್ನು ಕೆಡಿಸದೆ ಸತ್ಯವನ್ನು ಪರಿಷ್ಕಾರವಾಗಿ ಬೋಧಿಸುತ್ತಾ ನಾವು ಸಜ್ಜನರೆಂದು ಪ್ರತಿ ಮನುಷ್ಯನ ಮನಸ್ಸು ದೇವರ ಮುಂದೆ ಒಪ್ಪಬೇಕಾದ ರೀತಿಯಲ್ಲಿ ನಡೆಯುತ್ತೇವೆ.**

ಸೇವೆಯಲ್ಲಿ ನಮ್ಮನ್ನು ನಾವೇ ಯಾವರೀತಿ ನಿರ್ವಹಿಸುತ್ತೇವೆ ಎಂಬುದರಲ್ಲಿ ನಾವು ಬಹು ಜಾಗರೂಕರಾಗಿರಬೇಕು ಆದ್ದರಿಂದ ಸೇವೆಗೆ ಯಾವುದೇ ಕೆಟ್ಟ ಹೆಸರು ತರಬಾರದು ಆದರೆ ನಮ್ಮ ನಡವಳಿಕೆಯಲ್ಲಿ ನಾವು ದೇವರ ಸೇವಕರುಗಳೆಂಬುದನ್ನು ತೋರಿಸಬೇಕು.

2 ಕೊರಿಂಥದವರಿಗೆ 6:3-4

**ನಿಂದೆಗೆ ಅವಕಾಶಕೊಡದೆ ಎಲ್ಲಾ ಸಂಗತಿಗಳಲ್ಲಿ ದೇವರ ಸೇವಕರೆಂದು ನಮ್ಮನ್ನು ಸಮ್ಮತರಾಗಿ ಮಾಡಿಕೊಳ್ಳುತ್ತೇವೆ. ನಾವು ಸಂಕಟಗಳಲ್ಲಿಯೂ, ಕೊರತೆಗಳಲ್ಲಿಯೂ ಇಕ್ಕಟ್ಟುಗಳಲ್ಲಿಯೂ, ಪೆಟ್ಟುಗಳಲ್ಲಿಯೂ, ಸೆರೆಮನೆಗಳಲ್ಲಿಯೂ, ಕಲಹಗಳಲ್ಲಿಯೂ ಕಷ್ಟವಾದ ಕೆಲಸಗಳಲ್ಲಿಯೂ ನಿದ್ದೆಗೇಡುಗಳಲ್ಲಿಯೂ ಉಪವಾಸಗಳಲ್ಲಿಯೂ ಬಹುತಾಳ್ಮೆಯನ್ನು ತೋರಿಸುತ್ತೇವೆ.**

ನಾವು ಸಂಗತಿಗಳನ್ನು ಯಾವ ರೀತಿಯಲ್ಲಿ ಬಹುಜಾಗರೂಕತೆಯಿಂದ ಮಾಡಬೇಕೆಂಬುದಕ್ಕೆ ಕೆಲವು ಉದಾಹರಣೆಗಳು ಇಲ್ಲಿವೆ. ತೀತನು, ಯೆರೂಸಲೇಮ್ ಮತ್ತು ಯೂದಾಯ ವಿಶ್ವಾಸಿಗಳ ಅಗತ್ಯತೆಗಳಿಗಾಗಿ ಸಹಾಯ ಪಡೆಯಲು ಕೊರಿಂಥವರಿಂದ ಸಹಾಯ ಪಡೆಯಲು ಕೊರಿಂಥಕ್ಕೆ ಹೋಗಲು ಸಿದ್ಧವಾಗಿದ್ದನು. ಆದಾಗ್ಯೂ ಪೌಲನು, ತೀತನ ಜೊತೆಯಲ್ಲಿ ಒಳ್ಳೆಯ ಗೌರವವನ್ನು ಹೊಂದಿರುವುದು ಮಾತ್ರವಲ್ಲದೇ, ತೀತನ ಜೊತೆ ಹಣವನ್ನು ತರಲು ಸಭೆಗಳಿಂದ ಆರಿಸಲ್ಪಟ್ಟಂತಹ ಮತ್ತೊಬ್ಬ ಸಹೋದರನು ತೀತನೊಂದಿಗೆ ಪ್ರಯಾಣಿಸಲು ಕಳುಹಿಸಿದನು. ಪೌಲನು ಇದನ್ನು ಮಾಡಿದ್ದರ ಕುರಿತು ವಿವರಿಸುತ್ತಾನೆ. ಆದ್ದರಿಂದ (ಪೌಲನು ಅಥವಾ ತೀತನು) ಅವರಿಗಾಗಿ ಹಣವನ್ನು ತೆಗೆದುಕೊಂಡರೆಂಬ ಆರೋಪಗಳನ್ನು ತಪ್ಪಿಸಲು ವಿವರಿಸುತ್ತಾನೆ. ಅವನು ದೇವರ ದೃಷ್ಟಿಯಲ್ಲಿ ಮಾತ್ರವಲ್ಲದೆ ಮನುಷ್ಯರ ದೃಷ್ಟಿಯಲ್ಲೂ ಸರಿಯಾಗಿರಬೇಕೆಂಬುದನ್ನು ಖಚಿತಪಡಿಸಿಕೊಳ್ಳುತ್ತಾನೆ.

2 ಕೊರಿಂಥದವರಿಗೆ 8:18-21

**ಅವನ ಜೊತೆಯಲ್ಲಿ ಮತ್ತೊಬ್ಬ ಸಹೋದರನನ್ನು ಕಳುಹಿಸಿದ್ದೇವೆ; ಈ ಸಹೋದರನು ಸುವಾರ್ತಾ ಸೇವೆಯಲ್ಲಿ ಎಲ್ಲಾ ಸಭೆಗಳೊಳಗೆ ಕೀರ್ತಿ ಪಡಕೊಂಡವನಾಗಿದ್ದಾನೆ. ಇದು ಮಾತ್ರವಲ್ಲದೆ ನಾವು ನಡಿಸುವ ಈ ಕಾರ್ಯ ಸಂಬಂಧವಾಗಿ ಸಭೆಗಳವರು ಈತನನ್ನು ನಮ್ಮ ಸಂಗಡ ಪ್ರಯಾಣ ಮಾಡುವಂತೆ**

**ಗೊತ್ತುಮಾಡಿದ್ದಾರೆ. ಅವರು ಹೀಗೆ ಮಾಡಿದ್ದರಿಂದ ಕರ್ತನಿಗೆ ಘನವೂ ನಮ್ಮಲ್ಲಿ ಸಿದ್ಧ ಮನಸ್ಸೂ ಉಂಟಾಗುವದು. ನಾವು ಪಾರಪತ್ಯ ಮಾಡುವ ಈ ದ್ರವ್ಯ ಸಂಚಯದ ವಿಷಯದಲ್ಲಿ ಒಬ್ಬರೂ ನಮ್ಮ ಮೇಲೆ ತಪ್ಪು ಹೊರಿಸುವುದಕ್ಕೆ ಆಸ್ಪದವಿರಬಾರದು. ಯಾಕೆಂದರೆ ಕರ್ತನ ದೃಷ್ಟಿಯಲ್ಲಿ ಮಾತ್ರವಲ್ಲದೆ ಮನುಷ್ಯರ ದೃಷ್ಟಿಯಲ್ಲಿಯೂ ಗೌರವವಾದದ್ದನ್ನು ಯೋಚನೆಗೆ ತಂದುಕೊಳ್ಳುವವರಾಗಿದ್ದೇವೆ.**

## *ಆಕ್ರಮಣಕಾರಿಯಲ್ಲ, ಇನ್ನೂ ರಾಜಿ ಮಾಡಿಕೊಳ್ಳಲಾಗದ್ದು*

ಸೇವೆಯಲ್ಲಿ ನಮ್ಮ ವಿಧಾನಗಳು ಮತ್ತು ನಮ್ಮ ಸಂದೇಶವು ಉದ್ದೇಶಪೂರ್ವಕವಾಗಿ ಜನರಿಗೆ ನೋವುಂಟು ಮಾಡಬಾರದು ಎಂಬುದು ನಮ್ಮ ಗುರಿಯು, ಜನರನ್ನು ದೇವರ ವಾಕ್ಯ ಮತ್ತು ಯೇಸುಕ್ರಿಸ್ತನಲ್ಲಿರುವ ಸತ್ಯಕ್ಕೆ ಜನರು ದೃಷ್ಟಿಯನ್ನಿಡುವತ್ತ ನಡೆಸುವುದಾಗಿರಬೇಕು. ನಾವು ಸತ್ಯವನ್ನು ರಾಜಿ ಮಾಡಿಕೊಳ್ಳುವುದಿಲ್ಲ ಆದರೆ ಪ್ರೀತಿಯಿಂದ ಮಾತಾಡುತ್ತೇವೆ. ಪ್ರೀತಿಯಿಂದ ಮಾತಾಡಿದಾಗಲೂ ಜನರು ಸತ್ಯದಿಂದ ಇನ್ನೂ ಮನನೊಂದಿದ್ದರೆ ನಾವು ಅಧಿಕವಾಗಿ ಏನನ್ನೂ ಮಾಡಲಾಗದು.

1 ಕೊರಿಂಥದವರಿಗೆ 10:32,33

**ಯೆಹೂದ್ಯರಿಗಾಗಲಿ ಗ್ರೀಕರಿಗಾಗಲಿ ದೇವರ ಸಭೆಗಾಗಲಿ ವಿಘ್ನವಾಗಬೇಡಿರಿ ನಾನಂತೂ ಸ್ವಪ್ರಯೋಜನಕ್ಕಾಗಿ ಚಿಂತಿಸದೆ ಮನುಷ್ಯರೆಲ್ಲರೂ ರಕ್ಷಣೆ ಹೊಂದಬೇಕೆಂದು ಅವರ ಪ್ರಯೋಜನಕ್ಕಾಗಿ ಚಿಂತಿಸಿ ಎಲ್ಲರನ್ನು ಎಲ್ಲಾ ವಿಷಯಗಳಲ್ಲಿ ಮೆಚ್ಚಿಸುವವನಾಗಿದ್ದೇನೆ.**

## *ಆತ್ಮ ಮತ್ತು ಬಲದ ಪ್ರದರ್ಶನದಲ್ಲಿ*

ಕ್ರೈಸ್ತ ಸೇವೆಯು, ಆತನ ಜನರ ಮೂಲಕವಾಗಿ ದೇವರ ಆತ್ಮನು ನಿಜವಾಗಿಯೂ ಕಾರ್ಯ ಮಾಡುತ್ತಾನೆ. ಆದುದರಿಂದ ಇದು ಅಪ್ರಾಕೃತವಾದದ್ದು. ನಮ್ಮ ಮೂಲಕವಾಗಿ ಕಾರ್ಯ ಮಾಡುವಂತಹ ದೇವರ ಬಲವು, ಸೂಚಕಕಾರ್ಯಗಳು, ಅದ್ಭುತಕಾರ್ಯಗಳು ಮತ್ತು ಮಹತ್ಕಾರ್ಯಗಳು ಜರುಗುವಂತಹ ಫಲಿತಾಂಶ ನೀಡುತ್ತದೆ ಮತ್ತು ಇದೇ ರೀತಿಯಾಗಿ ಮಾಡಬೇಕೆಂಬುದಾಗಿ ಶಿಷ್ಯರಿಗೆ ಆತನು ಕಲಿಸಿದನು. ಆಧಿ ಸಭೆಯು, ಯೇಸುವು ಕಟ್ಟಲು ಪ್ರಾರಂಭಿಸಿದಂತಹ ಬಗೆಯ ಸಭೆಯು, ಆತ್ಮನ ಮತ್ತು ಬಲದ ತೋರ್ಪಡಿಸುವಿಕೆಯಲ್ಲಿ ಮುಂದುವರೆದು ಸೇವೆಯನ್ನು ಸಲ್ಲಿಸಿತು.

1 ಕೊರಿಂಥದವರಿಗೆ 2:4,5

**ನಿಮ್ಮ ನಂಬಿಕೆಯು ಮಾನುಷ ಜ್ಞಾನವನ್ನು ಆಧಾರ ಮಾಡಿಕೊಳ್ಳದೆ ದೇವರ ಶಕ್ತಿಯನ್ನು ಆಧಾರಕೊಂಡಿರಬೇಕೆಂದು ನನ್ನ ಬೋಧನೆಯಲ್ಲಿಯೂ ಪ್ರಸಂಗದಲ್ಲಿಯೂ ಮನವೊಲಿಸುವ ಜ್ಞಾನವಾಕ್ಯಗಳನ್ನು ನಾನು ಪ್ರಯೋಗಿಸದೆ ದೇವರಾತ್ಮನ ಬಲವನ್ನು ತೋರ್ಪಡಿಸುವ ವಾಕ್ಯಗಳನ್ನೇ ಪ್ರಯೋಗಿಸಿದೆನು.**

1 ಕೊರಿಂಥದವರಿಗೆ 4:20

**ದೇವರ ರಾಜ್ಯವು ಮಾತಿನಲ್ಲಿ ಇಲ್ಲ. ಶಕ್ತಿಯಲ್ಲಿಯೇ ಆಧಾರಗೊಂಡಿದೆ**

**ಇಂದಿನ ದಿನಗಳಲ್ಲಿ ಆಧುನಿಕ ಉಪಕರಣಗಳು ವಿಧಾನಗಳು ಇರುವಂತದ್ದು ಸತ್ಯಕರವಾಗಿದೆ. ಮತ್ತು ಅನೇಕ ಸಂಘ ಸಂಸ್ಥೆಗಳ ಕುಶಲತೆ ಮತ್ತು ತಂತ್ರಗಳೊಡನೆ ಸೇವೆಗಾಗಿ ಬಂದಿದ್ದಾರೆ. - ಇಂತಹವುಗಳು ಎಂದಿಗೂ ಆತ್ಮನ ಮತ್ತು ಬಲದ ತೋರ್ಪಡಿಸುವಿಕೆಗಳಲ್ಲಿ ಸೇವೆ ಮಾಡುವುದನ್ನು ಪರ್ಯಾಯವಾಗಿಸಲು ಸಾಧ್ಯವಿಲ್ಲ.**

## *ಆತ್ಮನಿಂದ ನಿರ್ದೇಶಿಸಲಾಗಿದೆ*

ಯೋಜನೆಗಳು, ಕಾರ್ಯತಂತ್ರಗಳು ಮತ್ತು ವಿಧಾನಗಳು, ಸೇವೆಯಲ್ಲಿ ಸ್ಥಳೀಯ ಸಭೆಗಳಿಂದ ಉಪಯೋಗಿಸಲ್ಪಟುವಂತಹವು ಪವಿತ್ರಾತ್ಮನಿಂದ ಮಾರ್ಗದರ್ಶಿ-ಸಲ್ಪಟ್ಟಿರಬೇಕು. ಅಪೊಸ್ತಲರ ಕೃತ್ಯಗಳು ಪುಸ್ತಕವು ಇದನ್ನು ಕುರಿತು ನಮಗೆ ನಿಖರವಾಗಿ ಚಿತ್ರಿಸುತ್ತದೆ. ವಿಶ್ವಾಸಿಗಳು ಇದನ್ನು ಮಾಡಲು ಹೋದಾಗ ಅವರು ಮಾಡಬೇಕಾಗಿರುವುದು ಅವರಿಗೆ ತಿಳಿದಿತ್ತು ಪವಿತ್ರಾತ್ಮನು ಅವರಿಗೆ ನಿರ್ದಿಷ್ಟ ಮಾರ್ಗದರ್ಶನ ನೀಡುತ್ತಿದ್ದನು, ಅವರು ಕೆಲವೊಮ್ಮೆ ತಮ್ಮ ಯೋಜನೆಗಳನ್ನು ಬದಲಿಸಿಕೊಳ್ಳುತ್ತಿದ್ದರು ಮತ್ತು ಏನು ಮಾಡಲಾಗುತ್ತಿತ್ತೋ ಅದರ ನಿರ್ದೇಶಕನು ಆಗಿದ್ದನು. ಇಂದು ಸಹ ನಾವು ಯೋಜನೆ, ಕಾರ್ಯತಂತ್ರ ಮತ್ತು ಕಾರ್ಯರೂಪಕ್ಕೆ ತರುವಾಗ ನಾವುಗಳು ದೇವರ ಆತ್ಮನ ನಿರ್ದೇಶನಕ್ಕೆ ಮತ್ತು ನೆಡೆಸುವಿಕೆಗೆ ಫಲಕೊಡುವವರಾಗಿ ಉಳಿದುಕೊಂಡಿರಬೇಕು.

ಅಪೊಸ್ತಲರ ಕೃತ್ಯಗಳು 8:29

**ದೇವರಾತ್ಮನು ಫಿಲಿಪ್ಪನಿಗೆ ನೀನು ಆ ರಥದ ಹತ್ತಿರ ಹೋಗಿ ಅದರ ಸಂಗಡಲೇ ನಡೆ ಎಂದು ಹೇಳಿದನು.**

ಅಪೊಸ್ತಲರ ಕೃತ್ಯಗಳು 11:12

**ದೇವರಾತ್ಮನು ನೀನು ಏನೂ ಭೇದ ಮಾಡದೆ ಅವರ ಜೊತೆಯಲ್ಲಿ ಹೋಗು ಎಂದು ನನಗೆ ಹೇಳಿದನು. ಈ ಆರು ಮಂದಿ ಸಹೋದರರು ಸಹ ನನ್ನ ಸಂಗಡ ಬಂದರು.**

ಅಪೊಸ್ತಲರ ಕೃತ್ಯಗಳು 16:6-10

**ಆಸ್ಯ ಸೀಮೆಯಲ್ಲಿ ವಾಕ್ಯವನ್ನು ಹೇಳಬಾರದೆಂದು ಪವಿತ್ರಾತ್ಮನು ಅವರು ಫ್ರುಗ್ಯ ಗಲಾತ್ಯ ಸೀಮೆಯನ್ನು ಹಾದು ಹೋಗಿ ಮೂಸ್ಯಕ್ಕೆ ಎದುರಾಗಿ ಬಂದಾಗ ಬಿಥೋನ್ಯಕ್ಕೆ ಹೋಗುವ ಪ್ರಯತ್ನ ಮಾಡಿದರು ಅಲ್ಲಿಯೂ ಯೇಸುವಿನ ಆತ್ಮನು ಅವರನ್ನು ಹೋಗಗೂಡಿಸಲಿಲ್ಲ ಆಗ ಅವರು ಮೂಸ್ಯವನ್ನು ಸುಮ್ಮನೆ ದಾಟಿ ತ್ರೋವಕ್ಕೆ ಬಂದರು. ಅಲ್ಲಿ ರಾತ್ರಿಕಾಲದಲ್ಲಿ ಪೌಲನಿಗೆ ಒಂದು ದರ್ಶನವಾಯಿತು. ಏನೆಂದರೆ**

**ಮೆಕೆದೋನ್ಯ ದೇಶದವನಾದ ಒಬ್ಬ ಮನುಷ್ಯನು ನಿಂತುಕೊಂಡು ನೀನು ಸಮುದ್ರವನ್ನು ದಾಟಿ ಮೆಕೆದೋನ್ಯಕ್ಕೆ ಬಂದು ನಮಗೆ ನೆರವಾಗಬೇಕೆಂದು ಅವನನ್ನು ಬೇಡಿಕೊಳ್ಳುತ್ತಿದ್ದನು ಅವನಿಗೆ ಆ ದರ್ಶನವಾದ ಮೇಲೆ ಆ ಸೀಮೆಯವರಿಗೆ ಸುವಾರ್ತೆಯನ್ನು ಸಾರುವುದಕ್ಕೆ ದೇವರು ನಮ್ಮನ್ನು ಕರೆದಿದ್ದಾನೆಂದು ನಾವು ನಿಶ್ಚಯಿಸಿಕೊಂಡು ಕೂಡಲೇ ಮೆಕೆದೋನ್ಯಕ್ಕೆ ಹೊರಟು ಹೋಗುವ ಪ್ರಯತ್ನ ಮಾಡಿದೆವು ನಾವು ತ್ರೋವದಿಂದ ಸಮುದ್ರ ಪ್ರಯಾಣಮಾಡಿ ನೆಟ್ಟಗೆ ಸಮೋಥ್ರಾಕೆಗೆ ಬಂದು ಮರುದಿನ ನೆಯಾಪೊಲಿಗೆ ಸೇರಿ ಅಲ್ಲಿಂದ ಫಿಲಿಪ್ಪಿಗೆ ಮುಟ್ಟಿದೆವು.**

## *ಕಾರ್ಯತಂತ್ರಗಳು*

ಸ್ಥಳೀಯ ಸಭೆಯು ಅದರೆ ವಿಧಾನಗಳಲ್ಲಿ ಕಾರ್ಯತಂತ್ರ ಹೊಂದಿರಬೇಕು ಕಾರ್ಯತಂತ್ರದಿಂದಿರುವುದು ಎಂಬುದರ ಅರ್ಥವು ಆತನೊಂದಿಗೆ ಹೆಜ್ಜೆಯಿಡುವುದರಲ್ಲಿ, ಆತನೊಂದಿಗೆ ಸಮಯದಲ್ಲಿ ಮತ್ತು ಆತನ ನಡೆಸುವಿಕೆಗೆ ಜೋಡಣೆಯಾಗಿ, ದೇವರೊಂದಿಗೆ ಚಲಿಸುವುದಾಗಿದೆ. ಆದ್ದರಿಂದ ಸರಿಯಾದ ಸಮಯದಲ್ಲಿ ಸರಿಯಾದ ಸ್ಥಳದಲ್ಲಿ, ಜನರಿಗೆ ಸೇವೆ ಸಲ್ಲಿಸುವಾಗ ಸರಿಯಾದದನ್ನು ಮಾಡುವುದರಲ್ಲಿ ಇರುವ ಸ್ಥಾನದಲ್ಲಿ ನಾವಿರುತ್ತೇವೆ. ತೆರಬೇಕಾದ ಋತುವಿನಲ್ಲಿ ಮತ್ತು ಉದ್ದೇಶಪೂರ್ವಕವಾಗಿ ದೇವರು ಯಾವಾಗಲೂ ಕಾರ್ಯನಿರ್ವಹಿಸುತ್ತಾನೆ.

- ಉದ್ದೇಶಪೂರ್ವಕ- ದೇವರು ಮಾಡಬೇಕೆಂಬುದಾಗಿ ಬಯಸುವ ಕಾರ್ಯವನ್ನು ಸರಿಯಾಗಿ ಮಾಡುವುದು
- ಸಕಾಲಿಕ - ಸೂಕ್ತವಾದ ಸಮಯದಲ್ಲಿ ಇದನ್ನು ಮಾಡುವುದು
- ಹೊಂದಿಸಿಕೊಳ್ಳಬಲ್ಲ - ದೇವರಿಂದ ಮಾರ್ಗದರ್ಶಿಸಲ್ಪಟ್ಟಂತೆ ನಮ್ಮ ಸಾಮೀಪ್ಯವನ್ನು ಬದಲಾಯಿಸಿಕೊಳ್ಳುವದು. ವಿವಿಧ ಬಗೆಯ ಜನರಿಗೆ ವಿವಿಧ ವಿಧಾನಗಳು
- ಚೆನ್ನಾಗಿ ಯೋಜಿಸಲಾಗಿದೆ. - ಮುಂದಾಲೋಚನೆ ಹೊಂದಿರುವುದು ಮತ್ತು ಸಂಗತಿಗಳ ಮುನ್ನೆಚ್ಚರಿಕೆ ಮತ್ತು ಸಿದ್ಧವಾಗಿರುವುದು
- ಉತ್ತಮವಾಗಿ ಕಾರ್ಯಗತಗೊಳಿಸುವುದು - ಶ್ರೇಷ್ಟ್ರತೆಯಿಂದ
- ವಿಷಯಗಳನ್ನು ಮಾಡುವುದು ಆದ್ದರಿಂದ ದೇವರಿಗೆ ಮಹಿಮೆ ಉಂಟಾಗುತ್ತದೆ.

## *ಸಂಬಂಧಿತ*

ನಾವು ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ದೇವರು ನಮ್ಮೊಂದಿಗೆ ಸಂಪರ್ಕಿಸುತ್ತಾನೆ. ಆತನು ನಮ್ಮ ಭಾಷೆಯನ್ನು ಮಾತಾಡುತ್ತಾನೆ. ಸ್ಥಳೀಯ ಸಭೆಯು, ಜನರ

ಸಮುದಾಯಗಳಿಗೆ ಮಾತಾಡಬೇಕು ಮತ್ತು ಅವರಿಗೆ ಪ್ರಸಕ್ತ ದಿನಕ್ಕೆ ಅನ್ವಯಿಸುವಂತಹ ಮಾರ್ಗಗಳಲ್ಲಿ ಅವರನ್ನು ತಲುಪಬೇಕು.

1 ಕೊರಿಂಥದವರಿಗೆ 9:19-23

**ನಾನು ಎಲ್ಲಾ ವಿಷಯದಲ್ಲಿ ಸ್ವತಂತ್ರನಾಗಿದ್ದರೂ ಹೆಚ್ಚು ಜನರನ್ನು ಸಂಪಾದಿಸಿಕೊಳ್ಳಬೇಕೆಂದು ನನ್ನನ್ನು ಎಲ್ಲರಿಗೂ ಅಧೀನ ಮಾಡಿದೆನು ಯೆಹೂದ್ಯರನ್ನು ಸಂಪಾದಿಸಿಕೊಳ್ಳುವುದಕ್ಕೆ ಯೆಹೂದ್ಯರಿಗೆ ಯೆಹೂದ್ಯನಂತಾದೆನು. ನಾನು ನಿಯಮಗಳಿಗೆ ಅಧೀನನಲ್ಲವನಾದರೂ ನಿಯಮಗಳಿಗೆ ಅಧೀನರಾದವರನ್ನು ಸಂಪಾದಿಸಿಕೊಳ್ಳುವುದಕ್ಕಾಗಿ ಅವರಿಗೆ ನಿಯಮಗಳಿಗೆ ಅಧೀನನಂತಾದೆನು. ನಾನು ದೇವರ ನೇಮವಿಲ್ಲದವನಲ್ಲ ಕ್ರಿಸ್ತನ ನಿಯಮಕ್ಕೊಳಗಾದವನೇ ಆದರೂ ನಿಯವಿಲ್ಲದವನಂತಾದೆನು. ಬಲವಿಲ್ಲದವರನ್ನು ಸಂಪಾದಿಸುವದಕ್ಕೆ ಅವರಿಗೆ ಬಲವಿಲ್ಲದವನಾದೆನು. ಯಾವ ವಿಧದಲ್ಲಿಯಾದರೂ ಕೆಲವರನ್ನು ರಕ್ಷಿಸಬೇಕೆಂದು ಯಾರಾರಿಗೆ ಎಂಥೆಂಥವನಾಗಬೇಕೋ ಅಂಥಂಥವನಾಗಿದ್ದೇನೆ. ನಾನು ಇತರರ ಸಂಗಡ ಸುವಾರ್ತೆಯ ಫಲದಲ್ಲಿ ಪಾಲುಗಾರನಾಗಬೇಕೆಂದು ಇದೆಲ್ಲವನ್ನು ಸುವಾರ್ತೆಗೋಸ್ಕರವೇ ಮಾಡುತ್ತೇನೆ.**

- ಸಂದೇಶವನ್ನು ರಾಜಿ ಮಾಡಿಕೊಳ್ಳದೆ ನಾವುಗಳು ಸಂಬಂಧಿತರಾಗಬೇಕು.
- ಸಂದೇಶವನ್ನು ಜನರು ಅರ್ಥಮಾಡಿಕೊಳ್ಳಲು ಮತ್ತು ಅನ್ವಯಿಸಿಕೊಳ್ಳುವಂತೆ ಸಹಾಯಿಸಲು ಅರ್ಥಗಳನ್ನು ಮತ್ತು ವಿಧಾನಗಳನ್ನು ಉಪಯೋಗಿಸಬೇಕು.
- ಸಂಸ್ಕೃತಿಯಿಂದ ಹತೋಟಿಗೆ ಒಳಗಾಗದೆ ಸಂಸ್ಕೃತಿಗೆ ಸೂಕ್ಷ್ಮವಾಗಿ ಉಳಿದುಕೊಳ್ಳಬೇಕು ದೇವರು ಸಂಸ್ಕೃತಿಗಿಂತಲೂ ಮಿಗಿಲಾದವನಾಗಿದ್ದಾನೆ.

# 3

# ಸ್ಥಳೀಯ ಸಭೆಯ ರಚನೆ ಮತ್ತು ಸರ್ಕಾರ

## ಸ್ಥಳೀಯ ಸಭೆಯ ಸರ್ಕಾರದ ಬೆಳವಣಿಗೆ ಮತ್ತು ರಚನೆ

ಎಲ್ಲಾ ದೇಶವರನ್ನೂ ಶಿಷ್ಯರನ್ನಾಗಿ ಮಾಡಿರಿ ಎಂಬುದಾಗಿ ಯೇಸುವು ಮಾಹಾ ಆದೇಶಾಧಿಕಾರವನ್ನು ಬಿಡುಗಡೆಗೊಳಿಸಿದಾಗ, ಪವಿತ್ರಾತ್ಮನಿಂದ ದಿಕ್ಷಾಸ್ನಾನ ಹೊಂದಿ, ಆತನ ಸಾಕ್ಷಿಗಳಾಗಿರಲೂ ಬಲವು ಕೊಡಲ್ಪಡುವುದಕ್ಕಾಗಿ ಯೆರೂಸಲೇಮಿನಲ್ಲಿ ಕಾದುಕೊಂಡಿರಿ ಎಂಬುದಾಗಿ ಆತನ ಹಿಂಬಾಲಕರಿಗೆ ಆತನು ಉಪದೇಶಿಸಿದನು. ಪುನರುತ್ಥಾನ ಮತ್ತು ಸ್ವರ್ಗಾರೋಹಣೆಯ ನಡುವಿನ 40 ದಿನಗಳ ಕುರಿತು ಲೂಕನು ವ್ಯಾಖ್ಯಾನಿಸುತ್ತಾನೆ. ‘‘ಕರ್ತನಾದ ಯೇಸುವು ಕಾಣಿಸಿಕೊಂಡನು ಮತ್ತು ಆತನ ಹಿಂಬಾಲಕರಿಗೆ ಆತನು ಉಪದೇಶಿಸಿದನು ಮತ್ತು ಆತನ ಶಿಷ್ಯರಿಗೆ ‘‘ದೇವರ ರಾಜ್ಯದ ವಿಷಯವಾದ ಸಂಗತಿಗಳನ್ನು’’ ಹೇಳುತ್ತಾ ಇದ್ದನು (ಅಪೊಸ್ತಲರ ಕೃತ್ಯಗಳು 1:13) ಈ ವಿಷಯಗಳು ಏನಾಗಿದ್ದವೆಂಬುದಕ್ಕೆ ಪುರಾವೆಗಳಿಲ್ಲ ಮಹಾ ಆದೇಶಾಧಿಕಾರವನ್ನು ಯಾವ ರೀತಿ ಕೊಂಡೊಯ್ಯಬೇಕೆಂಬುದಕ್ಕೆ ಕಾರ್ಯತಂತ್ರದ ಸಮಯ ಅಥವಾ ಯೆರೂಸಲೇಮ ಯೂದಾಯ ಸಮಾರ್ಯ ಮತ್ತು ಅದಕ್ಕಿಂತ ಮುಂದಕ್ಕೆ ಸ್ಥಳೀಯ ಸಭೆಗಳನ್ನು ಸ್ಥಾಪಿಸಬೇಕೆಂಬುದರ ಕುರಿತು ಆತನು ಮಾತಾಡಲಿಲ್ಲ ಎಂಬುದು ಕಾಣಿಸಿಕೊಳ್ಳುತ್ತದೆ. ಆದಾಗ್ಯೂ ಯಾವುದೇ ಸೂಕ್ತ ಮಾರ್ಗದರ್ಶನಗಳಿಲ್ಲದೆ, ಸರ್ಕಾರ ಮತ್ತು ರಚನೆ ಹೇಗೆ ಇರಬೇಕು ಎಂಬುದು ಇಲ್ಲದೆ ತೋರಿಕೆಯಲ್ಲಿಯೇ ಯೆರೂಸಲೇಮಿನ ಸಭೆಯು ಜನ್ಮ ತಾಳಿತು. ಅಪೊಸ್ತಲರ ಕೃತ್ಯದಲ್ಲಿ ನಾವು ನೋಡುವಂತಹ ತೆರೆದುಕೊಳ್ಳುವ ವಿಷಯವೇನೇಂದರೆ ಸಮಯವು ಮುಂದುವರೆದಂತೆ ಸರ್ಕಾರ ಮತ್ತು ಸ್ಥಳೀಯ ಸಭೆಯ ರಚನೆಯು ವಿಕಸನಗೊಂಡಿತ್ತು ಮತ್ತು ಕೆಲವು ಸೂಕ್ತವಾಗಿ ಗುರುತಿಸುವ ಪಾತ್ರಗಳೊಂದಿಗೆ ಬೆಳವಣಿಗೆ ಹೊಂದಿತ್ತು. ಇದಕ್ಕೂ ಮಿಗಿಲಾಗಿ ಹೊಸ ಒಡಂಬಡಿಕೆಯು, ನಿರ್ದಿಷ್ಟ ಸರ್ಕಾರದ ರಚನೆ ಅಥವಾ ಕಡ್ಡಾಯ ಪಾತ್ರಗಳು, ಶೀರೋನಾಮಗಳು ಮತ್ತು ಸ್ಥಾನಗಳ ಕುರಿತು ಅಗತ್ಯವಾಗಿ ಸೂಚಿಸುವುದಿಲ್ಲ.

ಸ್ಥಳೀಯ ಸಭೆಯ ಕಾರ್ಯನಿರ್ವಹಣೆಯ ಬಗ್ಗೆ ಹೊಸ ಒಡಂಬಡಿಕೆ ಏನೇಳುತ್ತದೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದು ನಮ್ಮ ಅನುಮೋದನೆಯಾಗಿದೆ ಮತ್ತು

ದೇವರಿಂದ ಕೊಡಲ್ಪಟ್ಟ ಜ್ಞಾನದಿಂದ ಸರ್ಕಾರ ಮತ್ತು ಹೊಸ ಒಡಂಬಡಿಕೆಯು ವ್ಯಾಖ್ಯಾನದಿಂದ ಸರ್ಕಾರ ಮತ್ತು ಹೊಸ ಒಡಂಬಡಿಕೆಯು ವ್ಯಾಖ್ಯಾನಿಸುವಂತದ್ದನ್ನು ಉತ್ತಮವಾಗಿ ಜಾರಿಗೊಳಿಸುವ ರಚನೆಯನ್ನು ವ್ಯಾಖ್ಯಾನಿಸುತ್ತದೆ. ಪ್ರತಿಯೊಂದು ಸ್ಥಳೀಯ ಸಭೆಯು ಸಭಾಸರ್ಕಾರವನ್ನು ಜಾರಿಗೊಳಿಸಲು ಸ್ವತಂತ್ರತೆ ಮತ್ತು ಅದರ ಕಾರ್ಯವೈಖರಿಗೆ ಉತ್ತಮವಾಗಿ ಸರಿಹೊಂದುವ ಒಂದು ರೀತಿಯು ರಚನೆ ಹೊಂದಿರಬೇಕೆಂಬುದಾಗಿ ನಾನು ನಂಬುತ್ತೇನೆ. ಆ ಮೇಲೆ ಈ ಒಂದು ಪುಸ್ತಕದಲ್ಲಿ ನಾವು ಸರ್ಕಾರ ಮತ್ತು ರಚನೆಯನ್ನು ಜಾರಿಗೊಳಿಸಿದಂತಹ ಕೆಲವು ಮಾರ್ಗಗಳನ್ನು ಮತ್ತು ನಾವು ಕಲಿತ ಪಾಠಗಳನ್ನು ಹಂಚಿಕೊಳ್ಳುತ್ತೇವೆ. ಇದನ್ನು ನಾವು, ನಮ್ಮ ಕಲಿಕೆಗಾಗಿ ಮತ್ತು ಪೂರ್ಣವಾಗಿ ಯಾವುದಾದರೊಂದನ್ನು ಅನುಕರಿಸಬಾರದೆಂದು ಸರಳವಾಗಿ ರವಾನಿಸಲು ಇದನ್ನು ಹಂಚಿಕೊಳ್ಳುತ್ತಿದ್ದೇವೆ. ನಮ್ಮ ಆಧಾರವಾಗಿರುವ ಪ್ರಮೇಯವೇನೆಂದರೆ ಯಾವುದೇ ಸರ್ಕಾರ ಮತ್ತು ರಚನೆಯನ್ನು ಸ್ಥಳೀಯ ಸಭೆಗೆ ನಾವು ಉಪಯೋಗಿಸುವುದಾದರೆ ಇದು ಸ್ಥಳೀಯ ಸಭೆಗೆ ದೇವರ ನೀಲನಕ್ಷೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಬೇಕು.

## ಮೊದಲ ಸ್ಥಳೀಯ ಸಭೆ - ಯೆರೂಸಲೇಮಿನ ಸಭೆ

- ಯೆರೂಸಲೇಮಿನಲ್ಲಿ ಒಂದೇ ಸಭೆ ಮಾತ್ರ ಇತ್ತು ಮತ್ತು ಇದು ಸ್ಥಳೀಯ ಸಭೆಯಾಗಿತ್ತು. ಇದು ಸಹ ನಗರ ವ್ಯಾಪ್ತಿಯ ಸಭೆಯಾಗಿತ್ತು.
- ಪಂಚಾಶತ್ತಮ ದಿನದಲ್ಲಿ 120 ಜನರು, 12 ಅಪೊಸ್ತಲರನ್ನು ತಮ್ಮ ನಾಯಕರುಗಳೆಂದು ಗುರ್ತಿಸಿಕೊಂಡ ಜನರು ಇದ್ದರು. ಕ್ರಿ.ಶ. 30 ರಲ್ಲಿ ಪಂಚಾಶತ್ತಮವು ಜರುಗಿತು.
- ಪೇತ್ರನು ಆರಂಭಿಕ ನಾಯಕನಾಗಿ ಕಂಡುಬಂದನು ಅಥವಾ ಒಬ್ಬ ಮುಖ್ಯ ನಾಯಕನಾಗಿದ್ದನು ಪಂಚಾಶತ್ತಮ ದಿನದಲ್ಲಿ ಉದ್ಘಾಟನಾ ಸಂದೇಶವನ್ನು ಪ್ರಸಂಗಿಸಿದನು ಮತ್ತು ನಂತರದಲ್ಲಿ ನಗರದಲ್ಲಿ ಧಾರ್ಮಿಕ ನಾಯಕರುಗಳ ಗಮನವನ್ನು ಕೇಂದ್ರಿಕರಿಸಿದರು. ಪೇತ್ರನು ನಂತರ ಯೂದಾಯಕ್ಕೆ ಹೋಗುತ್ತಾನೆ. ಮತ್ತು ಯಾಕೋಬ ಯೆರೂಸಲೇಮು ಸಭೆಯು ನಾಯಕತ್ವವನ್ನು ವಹಿಸಿಕೊಳ್ಳುತ್ತಾನೆ.
- ನಂತರ ಸಮಯವು ಮುಂದುವರೆದಂತೆ ಅಪೊಸ್ತಲರ ಕೃತ್ಯಗಳು 15ರಲ್ಲಿ (ಕ್ರಿ.ಶ. 49) ಯೆರೂಸಲೇಮಿನ ಮೊದಲ ಮತೀಯ ಸಭೆಯಲ್ಲಿ ಯಾಕೋಬನು,

ಯೆರೂಸಲೇಮಿನ ಸಭೆಯ ಪ್ರಾಥಮಿಕ ನಾಯಕನಾಗಿ ಕೊನೆಯ ತೀರ್ಮಾನವನ್ನು ಬಿಡುಗಡೆಗೊಳಿಸುವುದನ್ನು ನಾವು ನೋಡುತ್ತೇವೆ.

- ಪೌಲನು ಯೆರೂಸಲೇಮಿಗೆ ಬಂದಾಗ ಯಾಕೋಬನನ್ನು ವೈಯಕ್ತಿಕವಾಗಿ ಭೇಟಿಯಾಗುತ್ತಾನೆ (ಅಪೊಸ್ತಲರ ಕೃತ್ಯಗಳು 21:8) ಮತ್ತು ಅವನ ಪತ್ರಿಕೆಗಳಲ್ಲಿ ಪ್ರಾಥಮಿಕ ನಾಯಕನಾಗಿ ಮೊದಲು ವಂದನೆಗಳನ್ನು ತಿಳಿಸುತ್ತಾನೆ. (ಗಲಾತ್ಯದವರಿಗೆ 2:9)

## ಸಭಾಸೇವಕರು (ಡಿಕನ್ಸ್) ಹೊರಹೊಮ್ಮುವಿಕೆ

ತರುವಾಯ ನಾಯಕತ್ವದಲ್ಲಿಂತಹ 12 ಅಪೊಸ್ತಲರು ಯೆರುಸಲೇಮಿನ ಸಭೆಯ ಪ್ರಾರಂಭದಲ್ಲಿ ನಾವು ಕಾಣುವ ಮೊದಲ ಪಾತ್ರವು ''ಸಭಾಧ್ಯಕ್ಷರನ್ನು'' ಹೊರ ಹೊಮ್ಮಿಸುವುದಾಗಿದೆ.

ಅಪೊಸ್ತಲರ ಕೃತ್ಯಗಳು 6:1-6

**ಆ ದಿವಸಗಳಲ್ಲಿ ಶಿಷ್ಯರು ಹೆಚ್ಚುತ್ತಾ ಬರಲಾಗಿ ಅವರೊಳಗೆ ಗ್ರೀಕ್ ಭಾಷೆಯವರು ಇಬ್ರಿಯ ಭಾಷೆಯವರ ಮೇಲೆ ದಿನದಿನದ ಉಪಚಾರದಲ್ಲಿ ನಮ್ಮ ವಿಧವೆಯರನ್ನು ಸರಿಯಾಗಿ ಪಾರಾಂಬರಿಸುವದಿಲ್ಲವೆಂದು ಗುಣಗುಟ್ಟಿದರು. ಆಗ ಹನ್ನೆರಡು ಮಂದಿ ಅಪೊಸ್ತಲರು ಶಿಷ್ಯ ಮಂಡಲಿಯನ್ನು ಕೂಡಿಸಿ ನಾವು ದೇವರ ವಾಕ್ಯೋಪದೇಶವನ್ನು ಬಿಟ್ಟು ಉಪಚಾರ ಮಾಡುತ್ತಿರುವದು ತಕ್ಕದ್ದಲ್ಲವಲ್ಲಾ ಆದದರಿಂದ ಸಹೋದರರೇ ಸಂಭಾವಿತರೂ ಪವಿತ್ರಾತ್ಮಭರಿತರೂ ಜ್ಞಾನಸಂಪನ್ನರೂ ಆಗಿರುವ ಏಳುಮಂದಿಯನ್ನು ನಿಮ್ಮೊಳಗಿಂದ ನೋಡಿ ಆರಿಸಿಕೊಳ್ಳಿರಿ ಅವರನ್ನು ಈ ಕೆಲಸದ ಮೇಲೆ ನೇಮಿಸುವೆವು ನಾವಾದರೋ ಪ್ರಾರ್ಥನೆಯನ್ನೂ ವಾಕ್ಯೋಪದೇಶವನ್ನು ಮಾಡುವುದರಲ್ಲಿ ನಿರತರಾಗಿರುವೆವು ಎಂದು ಹೇಳಿದರು. ಈ ಮಾತು ಸರ್ವಮಂಡಳಿಗೆ ಒಳ್ಳೆಯದೆಂದು ತೋಚಿತು ಅವರು ಪವಿತ್ರಾತ್ಮಭರಿತನೂ ನಂಬಿಕೆಯಿಂದ ತುಂಬಿದವನೂ ಆದ ಸ್ತೇಫನನನ್ನೂ ಫಿಲಿಪ್ಪ, ಪ್ರೊಖೋರ, ನಿಕನೋರ, ತಿಮೋನ, ಪರ್ಮೇನ ಯೆಹೂದ್ಯ ಮತಾವಲಂಬಿಯಾದ ಅಂತಿಯೋಕ್ಯದ ನಿಕೋಲಾಯ ಎಂಬುವರನ್ನೂ ಆರಿಸಿಕೊಂಡು ಅಪೊಸ್ತಲರ ಮುಂದೆ ನಿಲ್ಲಿಸಿದರು. ಅಪೊಸ್ತಲರು ಪ್ರಾರ್ಥನೆ ಮಾಡಿ ಅವರ ಮೇಲೆ ಕೈಗಳನ್ನಿಟ್ಟು ನೇಮಿಸಿದರು.**

ಪ್ರತಿದಿನ ಆಹಾರವನ್ನು ಹಂಚಲು ಸಹಾಯ ಮಾಡಲೂ 7 ಮಂದಿಯನ್ನು ಆರಿಸಿಕೊಳ್ಳಲಾಯಿತು. ಈ 7 ಮಂದಿಯು ಕೆಳಕಂಡ ಮಾನದಂಡಗಳನ್ನು ಸಂಧಿಸಿದ್ದರಿಂದ ಅವರು ಆರಿಸಲ್ಪಟ್ಟರು

- ಪ್ರಾಮಾಣಿಕ ವರದಿ
- ಪವಿತ್ರಾತ್ಮನ ಪೂರ್ಣತೆ

- ಸಂಪೂರ್ಣ ಜ್ಞಾನ
- ದಿನನಿತ್ಯದ ಆಹಾರ ಹಂಚಿಕೆಯಲ್ಲಿ ಜವಾಬ್ದಾರಿ ವಹಿಸಿಕೊಂಡಿದ್ದರು.

ಕ್ರಮವಾಗಿ ಏನಾದರೊಂದನ್ನು ಮಾಡಲೂ ಮತ್ತು ಪ್ರತಿದಿನ ಆಹಾರವನ್ನು ಹಂಚುವ ಪ್ರಾಪಂಚಿಕ ಕೆಲಸವನ್ನು ಮಾಡಲು ಇಂತಹ ಹೆಚ್ಚಾದ ಆತ್ಮಿಕ ಅವಶ್ಯಕತೆಗಳನ್ನು ನೋಡುವಂತದ್ದು ಖಂಡಿತವಾಗಿ ಆಸಕ್ತಿಕರವಾಗಿದೆ.

ಅಪೊಸ್ತಲರ ಕೃತ್ಯಗಳು 6 ರಲ್ಲಿ ಈ 7 ಮಂದಿಯು ''ಸಭಾಸೇವಕರು'' (ಡಿಕನ್ಸ್) ಎಂಬುದಾಗಿ ಕರೆಯಲ್ಪಟ್ಟಿರಲಿಲ್ಲ ಅವರು ನಿರ್ವಹಿಸಿದಂತಹ ಪಾತ್ರವು ಅಂತಿಮವಾಗಿ ''ಸಭಾಸೇವಕರು'' (ಡಿಕನ್ಸ್) ಎಂಬುದಾಗಿ ಕರೆಯಲ್ಪಡುವ ಸ್ಥಾನಕ್ಕೆ ತಂದಿತ್ತು. ಅವನ ಪತ್ರಿಕೆಗಳಲ್ಲಿ ವಿವಿಧ ಸಭೆಗಳಾದ: ರೋಮ್ (ಕ್ರಿ.ಶ. 60 ರಲ್ಲಿ ಬರೆದ) ಫಿಲಿಪ್ಪಿ (ಕ್ರಿ.ಶ. 64 ರಲ್ಲಿ ಬರೆದ) ಮತ್ತು ತಿಮೊಥೆಯನಿಗೆ (ಕ್ರಿ.ಶ 67 ರಲ್ಲಿ ಬರೆದ) ಪತ್ರಿಕೆಗಳಲ್ಲಿ ಅಪೊಸ್ತಲನಾದ ಪೌಲನು ಸ್ಥಳೀಯ ಸಭಾ ಸರ್ಕಾರದ ಮತ್ತು 1 ತಿಮೊಥೆಯನಿಗೆ 3ರಲ್ಲಿ ಸಭಾಧ್ಯಕ್ಷರಿಗೆ ಇರಬೇಕಾದ ಅವಶ್ಯಕತೆಗಳ ರೂಪರೇಖೆಗಳನ್ನು ಭಾಗವಾಗಿ ''ಸಭಾಸೇವಕರ'' ಪಾತ್ರಗಳಲ್ಲಿ ಗುರ್ತಿಸುವುದನ್ನು ನೋಡುತ್ತೇವೆ.

ಗ್ರೀಕ್ ನಲ್ಲಿ ಡಿಕನ್ ''ಡೈಕನೋಸ್'' ಸಹಾಯಕ, ಸೇವಕ ಪರಿಚಾರಕ ಬೇರೊಂದು ಆದೇಶಗಳನ್ನು ಹೊತ್ತುಕೊಳ್ಳುವವನು ಇವು ಪ್ರಾರ್ಥಮಿಕವಾಗಿ ನಾಯಕರುಗಳು ಸ್ಥಳೀಯ ಸಭೆಯ ಆಡಳಿತಾತ್ಮಕ ವಿಷಯಗಳಿಗೆ ಹಾಜಾರಾಗುವುದಾಗಿದೆ. ಅವರ ಪಾತ್ರಗಳು ಮುಖ್ಯವಾಗಿ 1 ಕೊರಿಂಥದವರಿಗೆ 12:28 ರಲ್ಲಿ ಕೊಟ್ಟಿರುವ ಪ್ರಕಾರ ಸಹಾಯ ಮತ್ತು ಆಡಳಿತಗಳು ಕಛೇರಿಯ ಪ್ರದೇಶಗಳನ್ನು ಒಳಗೊಂಡಿರುತ್ತದೆ.

ರೋಮಾಪುರದವರಿಗೆ 16:1,2

**ನಾನು ನಿಮ್ಮ ಬಳಿಗೆ ಕಳುಹಿಸುವ ನಮ್ಮ ಸಹೋದರಿಯಾದ ಫೊಯಿಬೆಯನ್ನು ಪ್ರೀತಿಯಿಂದ ಅಂಗೀಕರಿಸಿರಿ, ಆಕೆಯು ಕೆಂಕ್ರೆಯ ಪಟ್ಟಣದಲ್ಲಿರುವ ಸಭೆಯ ಸೇವಕಳಾಗಿದ್ದಾಳೆ ನೀವು ಆಕೆಯನ್ನು ಕರ್ತನ ಶಿಷ್ಯಳೆಂದು ದೇವಜನರಿಗೆ ತಕ್ಕ ಹಾಗೆ ಸೇರಿಸಿಕೊಂಡು ಸಹಾಯವು ಯಾವ ವಿಷಯದಲ್ಲಿ ಬೇಕಾಗಿದ್ದರೂ ಸಹಾಯವನ್ನು ಮಾಡಿರಿ ಆಕೆಯು ನನಗೂ ಅನೇಕರಿಗೂ ಸಹಾಯ ಮಾಡಿದವಳು.**

ಫೊಯಿಬೆಯು ಸೇವಕಿಯಾಗಿದ್ದಳು (ಗ್ರೀಕ್‌ನಲ್ಲಿ -''ಡೈಕನೋಸ್'') ಫೊಯಿಬೆಯು ಕೆಂಕ್ರೆಯ ಸ್ಥಳೀಯ ಸಭೆಯ ಸೇವಕಿಯಾಗಿದ್ದಳು (ಗ್ರೀಕ್‌ನಲ್ಲಿ -''ಡೈಕನೋಸ್'') ಸ್ತ್ರೀಯರು ಸಹ ಸಭಾಸೇವಕರಾಗಬಹುದು (ಡೀಕನ್ಸ್) ಆಕೆಯ ಸಭೆಯ ಕೆಲವು ಆಡಳಿತ

ವಿಷಯಗಳ ವ್ಯಾಪಾರದ) ಜವಾಬ್ದಾರಿ ಹೊತ್ತುಕೊಂಡಿದ್ದಳು ಮತ್ತು ಅದನ್ನು ಮಾಡುವುದರಿಂದ ಅನೇಕ ಜನರಿಗೆ ದೊಡ್ಡ ಸಹಾಯವಾಗಿತ್ತು (ಸಹಾಯಕ).

ಫಿಲಿಪ್ಪಿಯವರಿಗೆ 1:1

**ಕ್ರಿಸ್ತ ಯೇಸುವಿನ ದಾಸರಾದ ಪೌಲ ತಿಮೊಥೆಯರು ಫಿಲಿಪ್ಪಿಯಲ್ಲಿ ಕ್ರಿಸ್ತ ಯೇಸುವಿನ ಮೂಲಕ ದೇವಜನರಾಗಿರುವವರೆಲ್ಲರಿಗೂ ಅವರಲ್ಲಿರುವ ಸಭಾಧ್ಯಕ್ಷರಿಗೂ ಸಭಾಸೇವಕರಿಗೂ ಬರೆಯುವದೇನೆಂದರೆ**

ಪೌಲನು ಫಿಲಿಪ್ಪಿಯ ವಿಶ್ವಾಸಿಗಳಿಗೆ ಶುಭಾಷಯಗಳನ್ನು ಕೋರುತ್ತಾನೆ ಮತ್ತು ನಾಯಕತ್ವದಲ್ಲಿರುವವರು - ಬಿಷಪರು ಸಭಾಸೇವಕರಿಗೂ ಉದ್ದೇಶಿಸುತ್ತಾನೆ.

1 ತಿಮೊಥೆಯನಿಗೆ 3:8-13

**ಅದೇ ರೀತಿಯಾಗಿ ಸಭಾಸೇವಕರು ಗೌರವವುಳ್ಳವರಾಗಿರಬೇಕು ಅವರು ಎರಡು ಮಾತಿನವರೂ, ಮದ್ಯನಿರತರೂ ನೀಚಲಾಭವನ್ನು ಅಪೇಕ್ಷಿಸುವವರೂ ಆಗಿರದೆ ನಂಬಿದವರಿಗೆ ಪ್ರಕಟವಾಗಿರುವ ಸತ್ಯಾರ್ಥವನ್ನು ಶುದ್ಧ ಮನಸ್ಸಾಕ್ಷಿಯಿಂದ ಕೈಕೊಳ್ಳುವವರಾಗಿರಬೇಕು ಇದಲ್ಲದೆ ಅವರು ಮೊದಲು ಪರೀಕ್ಷಿಸಲ್ಪಡಬೇಕು ತರುವಾಯ ಅವರ ಮೇಲೆ ಯಾರೂ ತಪ್ಪು ಹೊರಿಸದಿದ್ದರೆ ಸಭಾಸೇವಕರ ಉದ್ಯೋಗವನ್ನು ನಡಿಸಲಿ ಹಾಗೆಯೇ ಸಭಾಸೇವಕಿಯರಾದ ಸ್ತ್ರೀಯರೂ ಗೌರವವುಳ್ಳವರಾಗಿರಬೇಕು ಚಾಡಿಹೇಳುವವರಾಗಿರದೆ ಮದ್ಯಾಸಕ್ತಿಯಿಲ್ಲದವರಾಗಿಯೂ ಎಲ್ಲಾ ವಿಷಯಗಳಲ್ಲಿ ನಂಬಿಗಸ್ತರಾಗಿಯೂ ಇರಬೇಕು ಸಭಾಸೇವಕರು ಎಲ್ಲಾ ವಿಷಯಗಳಲ್ಲಿ ನಂಬಿಗಸ್ತರಾಗಿಯೂ ಇರಬೇಕು ಸಭಾಸೇವಕರು ಏಕಪತ್ನಿಯುಳ್ಳವರೂ ತಮ್ಮ ಮಕ್ಕಳನ್ನೂ ಮನೆಯವರನ್ನೂ ಚೆನ್ನಾಗಿ ಆಳುವವರೂ ಆಗಿರಬೇಕು ಸಭಾಸೇವಕರಾಗಿ ಚೆನ್ನಾಗಿ ಕೆಲಸ ಮಾಡಿದವರು ತಮಗೆ ಒಳ್ಳೇ ಪದವಿಯನ್ನು ಕ್ರಿಸ್ತ ಯೇಸುವಿನಲ್ಲಿರುವ ನಂಬಿಕೆಯ ಸಂಬಂಧವಾಗಿ ಬಹು ಧೈರ್ಯವನ್ನೂ ಸಂಪಾದಿಸಿಕೊಳ್ಳುತ್ತಾರೆ.**

ಸಭಾಸೇವಕರು ದೈವಿಕ ಗುಣಮಟ್ಟದ ಸಹಾಯಕರಾಗಿದ್ದಾರೆ. ಅಸಮಾನ ರೂಪದಲ್ಲಿ ಸ್ಥಳೀಯ ಸಭೆಯ ನಾಯಕರುಗಳಾಗಿದ್ದಾರೆ.

## *ಸಭಾಸೇವಕರು ಆತ್ಮಿಕ ಸೇವೆಯಲ್ಲಿ ತೊಡಗಿಸಿಕೊಳ್ಳಬಹುದು*

ಕೆಲವು ಸಭಾಸೇವಕರು ಆತ್ಮಿಕ ಸೇವೆಯಲ್ಲೂ ಸಹ ತೊಡಗಿಸಿಕೊಂಡಿದ್ದಾರೆ ಸ್ತೇಫನನು ಸೂಚಕಕಾರ್ಯ ಮತ್ತು ಅದ್ಭುತ ಕಾರ್ಯಗಳನ್ನು ಮಾಡಿದನು (ಅಪೊಸ್ತಲರ ಕೃತ್ಯಗಳು 6:8) ಮತ್ತು ಫಿಲಿಪ್ಪನು ನಂತರ ಸಮಾರ್ಯದಲ್ಲಿ ಸಭೆಯನ್ನು ಸ್ಥಾಪಿಸಿದನು.

ಸಭಾಸೇವಕರು ಆಡಳಿತದ ಕೆಲಸ ಮತ್ತು ಆತ್ಮಿಕ ಸೇವೆ ಎರಡರಲ್ಲೂ ಸಹ ತೊಡಗಿಸಿಕೊಳ್ಳಬಹುದು ಸಭಾಸೇವಕರನ್ನು ಬರೀ ಆಡಳಿತ ಕೆಲಸ ಮತ್ತು ಸಹಾಯಕ್ಕಾಗಿ

ಮಾತ್ರ ನಿರ್ಬಂಧಿಸದಿರಿ ದೇವರು ಅವರಿಗೆ ಅಧಿಕಾರ ನೀಡುವಾಗ ಅವರು ಆತ್ಮಿಕ ಸೇವೆಯಲ್ಲಿ ತೊಡಗಿಸಿಕೊಳ್ಳಲು ನಾವು ಅವರಿಗೆ ಅನುಮತಿ ಕೊಡಬೇಕು.

## ಹೊಸ ಸಭೆಗಳು ಬೆಳೆದಿದೆ

ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ನಾವು ಪ್ರಗತಿ ನೋಡುವಾಗ ಯೆರೂಸಲೇಮಿನಲ್ಲಿ ಹೆಚ್ಚಾದ ಹಿಂಸೆಯನ್ನು ನೋಡುತ್ತೇವೆ ಇದು ವಿಶ್ವಾಸಿಗಳು ನಗರದಿಂದ ಹೊರಗಡೆ ಚದುರಲು ಕಾರಣವಾಯಿತು. ವಿವಿಧ ಸ್ಥಳಗಳಲ್ಲಿ ಹೊಸ ಸಭೆಗಳು ಇದರ ಪರಿಣಾಮವಾಗಿ ಎಬ್ಬಿಸಲ್ಪಟ್ಟವು.

ಅಪೊಸ್ತಲ ಕೃತ್ಯಗಳು 8 (ಕ್ರಿ.ಶ. 32) ಸಭಾಸೇವಕನಾದ ಫಿಲಿಪ್ಪನು, ಸೂಚಕ ಕಾರ್ಯ ಮತ್ತು ಮಹತ್ಕಾರ್ಯಗಳೊಡನೆ ಸುವಾರ್ತೆ ಸಾರಲು ದೇವರಿಂದ ಉಪಯೋಗಿಸಲ್ಪಟ್ಟನು ಮತ್ತು ಸಮಾರ್ಯದಲ್ಲಿ ಒಂದು ಸ್ಥಳೀಯ ಸಭೆಯನ್ನು ಸ್ಥಾಪಿಸಿದನು.

ಅಪೊಸ್ತಲರ ಕೃತ್ಯಗಳು 9:31,32 (ಕ್ರಿ.ಶ37-45) ಯೂದಾಯ, ಸಮಾರ್ಯ, ಗಲಿಲಾಯ, ಲುದ್ದ ಮುಂತಾದ ಪ್ರದೇಶಗಳಲ್ಲಿ ಸಭೆಗಳು ಎಬ್ಬಿಸಲ್ಪಟ್ಟವು.

ಅಪೊಸ್ತಲರ ಕೃತ್ಯಗಳು 11:19-27 (ಕ್ರಿ.ಶ. 45-ಅಂತಿಯೋಕ್ಯದಲ್ಲಿ ಸ್ಥಳೀಯ ಸಭೆಯು ಎಬ್ಬಿಸಲ್ಪಟ್ಟಿತು ಈ ಒಂದು ಹೆಸರಿನಲ್ಲಿ ಎರಡು ನಗರಗಳಿದವು ಏಷ್ಯಾ ಮೈನರ್ ನ ಪಿಸಿಧ್ಯ ಸೀಮೆಗೆ ಸೇರಿದ ಒಂದು ಇದೆ (ಅಪೊಸ್ತಲರ ಕೃತ್ಯಗಳು 13:14) ಇನ್ನೊಂದು ಒರೊಟಿಸ್ ನದಿಯ ಬಳಿಯಲ್ಲಿದೆ ಮತ್ತು ಸಿರಿಯಾದ ದೀರ್ಘಕಾಲದ ರಾಜಧಾನಿಯಾಗಿತ್ತು.

ಇಂತಹ ಎಲ್ಲಾ ಹೊಸ ಸಭೆಗಳು ಯೇಸುವಿನ ಕುರಿತು ಸಾರಲು ಹೊರಟ ಮತ್ತು ಆತನ ಹೆಸರಿನಲ್ಲಿ ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಮಾಡುವ ಮೂಲಕವಾಗಿ ಸಾಮಾನ್ಯ ವಿಶ್ವಾಸಿಗಳಿಂದ ಸ್ಥಾಪಿಸಲ್ಪಟ್ಟವು. ಇದು ಕೆಲವು ಪ್ರಮುಖ ಸಂಗತಿಗಳನ್ನು ತಿಳಿಸುತ್ತದೆ.

- ಅಪೊಸ್ತಲರು ಮಾತ್ರವಲ್ಲದೆ ವಿಶ್ವಾಸಿಗಳು, ಯೆರೂಸಲೇಮಿನ ಸಭೆಯಲ್ಲಿ ತರಬೇತಿ ಹೊಂದಿದ್ದರು ಮತ್ತು ಸುವಾರ್ತೆ ಸಾರುವುದನ್ನು ಅಭ್ಯಾಸಿದರು ಮತ್ತು ಸೂಚಕ ಕಾರ್ಯ ಮಹತ್ಕಾರ್ಯಗಳನ್ನು ಮಾಡಿದರು.

- ಅಪೊಸ್ತಲರು ಅಥವಾ ಪ್ರವಾದಿಗಳಿಲ್ಲದೆ ಸಭೆಗಳು ಸ್ಥಾಪಿಸಲ್ಪಡುತ್ತದೆ. ಒಂದು ಸ್ಥಳದಲ್ಲಿ ಸಭೆಯನ್ನು ಸ್ಥಾಪಿಸಲ್ಪಡುತ್ತವೆ. ಒಂದು ಸ್ಥಳದಲ್ಲಿ ಸ್ಥಳೀಯ ಸಭೆಯನ್ನು ಸ್ಥಾಪಿಸಲು ದೇವರು ಯಾರನ್ನಾದರೂ ಉಪಯೋಗಿಸಬಹುದು. ಪವಿತ್ರಾತ್ಮನ ಸಾಮಾನ್ಯ ಸಂತರನ್ನು ಮತ್ತು ಸಭಾಸೇವಕರನ್ನು ಸ್ಥಳೀಯ ಸಭೆಗಳನ್ನು ಸ್ಥಾಪಿಸಲು ಉಪಯೋಗಿಸುತ್ತಾನೆ. ಮತ್ತೊಂದು ಕಡೆಯಲ್ಲಿ ದೇವರು ಒಂದು ಅಥವಾ ಅಧಿಕವಾದ ಸಭೆಗಳನ್ನು ಸ್ಥಾಪಿಸಲು ಯಾರಾದರನ್ನು ಉಪಯೋಗಿಸಿದರೆ ಇದು ಆ ವ್ಯಕ್ತಿಯನ್ನು ಅಪೊಸ್ತಲನನ್ನಾಗಿ ಮಾಡುವುದಿಲ್ಲ.

## ಹಿರಿಯರ ಹೊರಹೊಮ್ಮುವಿಕೆ

### *ಯೆರೂಸಲೇಮಿನ ಹಿರಿಯರು*

ಅಪೊಸ್ತಲರ ಕೃತ್ಯಗಳು 11 ರಲ್ಲಿ (ಕ್ರಿ.ಶ. 46) ಯೆರೂಸಲೇಮಿನ ನಾಯಕರುಗಳು ‘‘ಹಿರಿಯರು’’ ಎಂಬುದಾಗಿ ಉಲ್ಲೇಖಿಸಲಾಗಿದೆ. ‘‘ಹಾಗೆಯೇ ಮಾಡಿ ಅದನ್ನು ಬಾರ್ನಬ ಸೌಲರ ಕೈಯಿಂದ ಸಭೆಯ ಹಿರಿಯರಿಗೆ ಕಳುಹಿಸಿದರು’’ (ಅಪೊಸ್ತಲರ ಕೃತ್ಯಗಳು 11:30) ‘‘ಹಿರಿಯರು’’ ಅಪೊಸ್ತಲರನ್ನು ಮಾತ್ರ ಒಳಗೊಂಡಿಲ್ಲ ಆದರೆ ಇತರ ಆತ್ಮಿಕ ನಾಯಕರುಗಳಾದ ಬಾರ್ನಬ, ಮತ್ತು ಅಗಬನೆಂಬ ಪ್ರವಾದಿಯನ್ನು ಸಹ ಒಳಗೊಂಡಿತ್ತು. (ಅಪೊಸ್ತಲರ ಕೃತ್ಯಗಳು 11:27,28) ಮತ್ತು ಈ ಒಂದು ಸಮಯದಲ್ಲಿ ಯೆರೂಸಲೇಮಿನಲ್ಲಿ ಇತರರು ಸಹ ಎಬ್ಬಿಸಲ್ಪಟ್ಟರು.

### *ಹೊಸ ಹಿರಿಯರನ್ನು ನೇಮಿಸುವುದು*

ಅವರ ಪ್ರಥಮ ಸುವಾರ್ತ ಪ್ರಾಯಾಣದಲ್ಲಿ (ಕ್ರಿ.ಶ. 47-48) ಪೌಲ ಮತ್ತು ಬಾರ್ನಬರು ವಿವಿಧ ಸ್ಥಳಗಳಲ್ಲಿನ ಹೊಸ ವಿಶ್ವಾಸಿಗಳ ಸಮುದಾಯಗಳಿಗೆ ಹಿಂತಿರುಗಿದರು ಮತ್ತು ಹಿರಿಯರನ್ನು ನೇಮಿಸಿದರು.

ಅಪೊಸ್ತಲರ ಕೃತ್ಯಗಳು 14:21-23

**ಆ ಊರಿನಲ್ಲಿ ಅವರು ಸುವಾರ್ತೆಯನ್ನು ಸಾರಿ ಅನೇಕರನ್ನು ಶಿಷ್ಯರಾಗಿ ಮಾಡಿದ ಮೇಲೆ ಹಿಂತಿರಿಗಿ ಲುಸ್ತ್ರಕ್ಕೂ ಇಕೋನ್ಯಕ್ಕೂ ಅಂತಿಯೋಕ್ಯಕ್ಕೂ ಒಂದು ಶಿಷ್ಯರ ಮನಸ್ಸುಗಳನ್ನು ದೃಢಪಡಿಸಿದರು. ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕೆಂಬದಾಗಿ ಎಚ್ಚರಿಕೆಯ ಮಾತನ್ನು ಹೇಳಿ ಕ್ರಿಸ್ತ ನಂಬಿಕೆಯಲ್ಲಿ ಸ್ಥಿರವಾಗಿರ್ರಿ ಎಂದು ಅವನನ್ನು ಧೈರ್ಯಗೊಳಿಸಿದರು. ಇದಲ್ಲದೆ ಪ್ರತಿಸಭೆಯಲ್ಲಿ ಸಭೆಯವರ ಸಮ್ಮತಿಯಿಂದ ಹಿರಿಯರನ್ನು ಗೊತ್ತು ಮಾಡಿ ನೇಮಿಸಿ ಉಪವಾಸವಿದ್ದು ಪ್ರಾರ್ಥನೆ ಮಾಡಿ ಅವರು ನಂಬಿದ್ದ ಕರ್ತನ ಕೈಗೆ ಅವರನ್ನು ಒಪ್ಪಿಸಿದರು.**

ಅಧಿಕೃತವಾಗಿ ನೇಮಿಸು (ಗ್ರೀಕ್ ನಲ್ಲಿ ಚೈರೊಟೊನಿಯೋ) ಕಛೇರಿಗೆ ಆಯ್ಕೆ ಮಾಡುವುದು ಎಂಬುದಾಗಿ ಅರ್ಥ ಅಥವಾ ವಿಸ್ತರಿಸುವ ಮೂಲಕ ಕೈ ಎತ್ತುವ ಮೂಲಕವಾಗಿ ಮತದಾನ ಮಾಡುವುದು. ಸಾಮಾನ್ಯವಾಗಿ ಈ ಪದದ ಅರ್ಥವು ''ಆರಿಸು, ನೇಮಿಸು ಅಥವಾ ಯಾವುದಾದರೂ ಕಛೇರಿಗೆ ಹೆಸರಿಸು'' ಇಲ್ಲಿ ಈ ಪದವು ಸಾಮಾನ್ಯವಾಗಿ ಚುನಾವಣೆ ಅಥವಾ ಹಿರಿಯರುಗಳ ನೇಮಕಾತಿ ಎಂಬುದಾಗಿ ಉಲ್ಲೇಖಿಸುತ್ತದೆ.

ಇಂತಹ ''ಹಿರಿಯರು'' ಸಮುದಾಯಗಳ ಮಧ್ಯದಲ್ಲಿ ಆರಿಸಲ್ಪಟ್ಟಿರುತ್ತಾರೆ. ಆ ಒಂದು ಹಂತದಲ್ಲಿ ಇಂತಹ ''ಹಿರಿಯರು'' ಸ್ವತಃ ಯೌವನಸ್ಥ ವಿಶ್ವಾಸಿಗಳೆಂಬುದು ಸ್ಪಷ್ಟವಾದುದಾಗಿದೆ ಆದರೆ ಬಹುಶಃ ವಯಸ್ಸಿನಲ್ಲಿ ಹಿರಿಯರಾದವರು ಮತ್ತು ಆತ್ಮಿಕ ಪ್ರೌಢತೆಯ ಸೂಚನೆಗಳನ್ನು ತೋರಿಸಿದವರು. ಇದು ''ನೇಮಿಸು'' ಎಂಬ ಪದದ ಬಳಕೆಯಿಂದ ಇದು ಸೂಚಿಸುತ್ತದೆ ಈ ಹಿರಿಯರು ಯಾರಿರಬಹುದು ಎಂಬುದಾಗಿ ಜನರ ಮಧ್ಯದಲ್ಲಿ ಸಾಮಾನ್ಯ ಒಪ್ಪಿಗೆಯಿತ್ತು. ಹಿರಿಯರನ್ನು ನೇಮಿಸುವಂತದ್ದು ಉಪವಾಸ ಮತ್ತು ಪ್ರಾರ್ಥನೆಯ ಮೂಲಕವಾಗಿತ್ತು ಮತ್ತು ಏಕೈಕವಾಗಿ ಆಡಳಿತದ ನೇಮಕದ ಬದಲಿಗೆ ಇದು ಆತ್ಮಿಕ ವ್ಯಾಯಾಮವಾಗಿತ್ತು.

ಹಿರಿಯರು (ಗ್ರೀಕನಲ್ಲಿ ''ಫ್ರೆಸ್‌ಬ್ಯೂಟಿರೋಸ್) ಗ್ರೀಕ್ ನ ಪದ ''ಪ್ರೆಸ್‌ಬೊಸ್'' ಎಂಬುದು ವಯಸ್ಸಾದವರು, ಹಿರಿಯರು, ಹಳೆಯ, ವಯಸ್ಸಿನಲ್ಲಿ ಹಿರಿಯವರು ಎಂಬ ಅರ್ಥ ಹೊಂದಿದೆ.

''ಹಿರಿಯರು'' ಎಂಬ ಪದವು ಗ್ರೀಕ್ ಪದವಾದ ''ಫ್ರೆಸ್‌ಬ್ಯೂಟಿರೋಸ್'' ಇಂದಿನ ಸಭೆಗಳಲ್ಲಿ ಉಪಯೋಗಿಸುವ ಪದವಾದ ''ಪ್ರೆಸ್‌ಬಿಟರ್'' ಎಂಬ ಪದವನ್ನು ನಾವು ಪಡೆಯುತ್ತೇವೆ. ಇದರ ಮೂಲ ಅರ್ಥದಲ್ಲಿ ಪ್ರೆಸ್‌ಬಿಟರ್ ಆತ್ಮಿಕ ನಾಯಕರನ್ನು ಉಲ್ಲೇಖಿಸುತ್ತದೆ ಮತ್ತು ಆತ್ಮಿಕ ನಾಯಕತ್ವದಲ್ಲಿರುವ ಯಾರಿಗಾದರೂ ಉಪಯೋಗಿಸಬಹುದಿತ್ತು.

## *ಅಪೊಸ್ತಲರು ಮತ್ತು ಹಿರಿಯರು - ಏಕನಾಯಕತ್ವದ ತಂಡ*

ಆ ಮೇಲೆ ಯೆರೂಸಲೇಮಿನ ಮೊದಲ ಮಂತ್ರಾಲೋಚನಾ ಸಭೆಯಲ್ಲಿ (ಕ್ರಿ.ಶ 49) ಮೋಶೆಯ ಧರ್ಮಶಾಸ್ತ್ರದ ಪ್ರಕಾರವಾಗಿ ಅನ್ಯರು ಸುನ್ನತಿ ಮಾಡಿಸಿಕೊಳ್ಳಬೇಕೆ ಎಂಬ

ತೊಂದರೆ ಉಂಟಾದಾಗ ಯೆರೂಸಲೇಮಿನಲ್ಲಿ ಅಪೊಸ್ತಲರು ಹಿರಿಯರ ಜೊತೆಗೂಡಿ ಉದ್ದೇಶಪೂರ್ವಕಗಾಗಿ ಸೇರಿದ್ದನ್ನು ನಾವು ನೋಡುತ್ತೇವೆ.

ಅಪೊಸ್ತಲರ ಕೃತ್ಯಗಳು 15:1,2,6,22

**ಬಳಿಕ ಕೆಲವರು ಯೂದಾಯದಿಂದ ಅಂತಿಯೋಕ್ಯಕ್ಕೆ ಬಂದು ನೀವು ಮೋಶೆಯ ಗ್ರಂಥದಲ್ಲಿ ಹೇಳಿರುವ ನೇಮದ ಪ್ರಕಾರ ಸುನ್ನತಿ ಮಾಡಿಸಿಕೊಳ್ಳದಿದ್ದರೆ ನಿಮಗೆ ರಕ್ಷಣೆಯಾಗಲಾರದು ಎಂಬುದಾಗಿ ಸಹೋದರರಿಗೆ ಉಪದೇಶ ಮಾಡುತ್ತಿದ್ದರು ಅವರಿಗೂ ಪೌಲ ಬಾರ್ನಬರಿಗೂ ಭೇದವೂ ಮಹಾ ವಿವಾದವೂ ಉಂಟಾದಾಗ ಇದರ ವಿಷಯವಾಗಿ ಸಹೋದರರು ಪೌಲ ಬಾರ್ನಬರನ್ನೂ ತಮ್ಮಲ್ಲಿ ಬೇರೆ ಕೆಲವರನ್ನೂ ಯೆರೂಸಲೇಮಿನಲ್ಲಿದ್ದ ಅಪೊಸ್ತಲರ ಮತ್ತು ಸಭೆಯ ಹಿರಿಯರ ಬಳಿಗೆ ಹೋಗಬೇಕೆಂದು ನೇಮಿಸಿದರು. ಅಪೊಸ್ತಲರೂ ಸಭೆಯ ಹಿರಿಯರೂ ಈ ವಿಷಯವನ್ನು ಕುರಿತು ಆಲೋಚಿಸುವುದಕ್ಕೆ ಕೂಡಿ ಬಂದಿರಲಾಗಿ ಬಹು ವಿವಾದವು ನಡೆದ ಮೇಲೆ. ಆಗ ಅಪೊಸ್ತಲರೂ ಸಭೆಯ ಹಿರಿಯರೂ ಸರ್ವಸಭೆಗೆ ಸಮ್ಮತಿಯಿಂದ ತಮ್ಮಲ್ಲಿ ಕೆಲವರನ್ನು ಆರಿಸಿಕೊಂಡ ಪೌಲ ಬಾರ್ನಬರ ಜೊತೆಯಲ್ಲಿ ಅಂತಿಯೋಕ್ಯಕ್ಕೆ ಕಳುಹಿಸುವದು ಯುಕ್ತವೆಂದು ತೀರ್ಮಾನಿಸಿದರು.**

ಯೆರೂಸಲೇಮಿನಲ್ಲಿ ಅನೇಕ ಅಧಿಕವಾದ ಆತ್ಮಿಕ ನಾಯಕರುಗಳು ಇದ್ದರು, ಮತ್ತು ಎಬ್ಬಿಸಲ್ಪಟ್ಟಿದ್ದರು ಮತ್ತು ಯೆರೂಸಲೇಮಿನಲ್ಲಿ ನಾಯಕರುಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎಂಬುದನ್ನು ಇದು ನಮಗೆ ಸೂಚಿಸುತ್ತದೆ. ಅಪೊಸ್ತಲರು ಮತ್ತು ಹಿರಿಯರು ಒಟ್ಟಾಗಿ ಇಂತಹ ಗಂಭೀರವಾದ ವಿಷಯಗಳ ಕುರಿತು ಚರ್ಚಿಸಲು ಸೇರಿಬಂದಿದ್ದರು, ಹೊಸ ನಾಯಕರು ಗುರ್ತಿಸಲ್ಪಟ್ಟಿದ್ದರು ಮತ್ತು ಅವರ ನಾಯಕತ್ವವನ್ನು ಗೌರವಿಸಲಾಗಿತ್ತು ಎಂಬುದನ್ನು ಇದು ಸೂಚಿಸುತ್ತದೆ. ಯೆರೂಸಲೇಮಿನ ಸಭೆಯು ಮತ್ತು ಹೊಸದಾಗಿ ಎಬ್ಬಿಸಲ್ಪಟ್ಟ ಸಭೆಗಳು ಅಪೊಸ್ತಲರ ಮತ್ತು ಹಿರಿಯರುಗಳು ನಾಯಕತ್ವವನ್ನು ಗುರುತಿಸಿದ್ದವು. (ಅಪೊಸ್ತಲರ ಕೃತ್ಯಗಳು 16:4)

## *ಎಫೆಸದಲ್ಲಿನ ಹಿರಿಯರು*

ಆಮೇಲೆ ಅಪೊಸ್ತಲರ ಕೃತ್ಯಗಳು 20 ರಲ್ಲಿ ಪೌಲನು ಯೆರೂಸಲೇಮಿಗೆ ಹೋಗುವ ಮಾರ್ಗದಲ್ಲಿ, ಮಿಲೇತದಲ್ಲಿ ಪೌಲನು ನಿಲ್ಲಿಸಿ, ಎಫೆಸದ ಹಿರಿಯರು ತನ್ನನ್ನು ಸಂಧಿಸಲು ಕರೆದನು ಪೌಲನು ತನ್ನ 2 ವರ್ಷದ ಎಫೆಸದ ಸೇವೆಯನ್ನು ನೆನೆಪಿಸಿಕೊಳ್ಳುತ್ತಾನೆ ಮತ್ತು ಈ ನಾಯಕರುಗಳಿಗೆ ಅಂತಿಮ ಮಾತುಗಳನ್ನು ಕೊಡುತ್ತಾನೆ.

ಅಪೊಸ್ತಲರ ಕೃತ್ಯಗಳು 20:17,28

**ಅವನು ಮಿಲೇತದಿಂದ ಎಫೆಸಕ್ಕೆ ಹೇಳಿ ಕಳುಹಿಸಿ ಅಲ್ಲಿಯ ಸಭೆಯ ಹಿರಿಯರನ್ನು ಕರಿಸಿದನು. ದೇವರು ಸ್ವರಕ್ತದಿಂದ ಸಂಪಾದಿಕೊಂಡ ಸಭೆಯನ್ನು ಪರಿಪಾಲಿಸುವದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ.**

''ಮೇಲ್ವಿಚಾರಕರು'' ಎಂಬ ಪದವು ''ಎಪಿಸ್ಕೋಪಸ್'' ಎಂಬ ಗ್ರೀಕ ಪದದಿಂದ ಬಂದಿದ್ದು ''ಬಿಷಪ್'' (ಸಭಾಧ್ಯಕ್ಷರೂ) ಎಂಬುದಾಗಿ ಬಾಷಾಂತರಿಸಲ್ಪಟ್ಟಿದ್ದಾಗಿದೆ. (1 ತಿಮೊಥೆಯನಿಗೆ 3:1,2 ತೀತನು 1:17 1 ಪೇತ್ರನು 2:25).

ಆದ್ದರಿಂದ ಹಿರಿಯರು ಅಥವಾ ಪ್ರೆಸ್ಬೈಟರ್ಗಳು ಸಹ ಮೇಲ್ವಿಚಾರಕರು ಅಥವಾ ಬಿಷಪ್ ಗಳೆಂಬುದಾಗಿ ಉಲ್ಲೇಖಿಸಲಾಗಿದೆ. ಅವರು ''ಆಹಾರ ಒದಗಿಸುವ''ವರಾಗಿದ್ದರು (ಗ್ರೀಕ್‌ನಲ್ಲಿ ''ಪೋಯಮ್ಯೆನೋ'') ಕುರುಬನಂತೆ ಕಾವಲುಕಾಯಿ ಎಂಬುದಾಗಿ ಅರ್ಥ, ಇದರಿಂದ ನಾವು ಸಭಾಪಾಲಕರು ಎಂಬ ಪದವನ್ನು ಪಡೆಯುತ್ತೇವೆ (ಎಫೆಸದವರಿಗೆ 4:11 ಗ್ರೀಕ್‌ನಲ್ಲಿ ''ಪೊಯಮೆನ್'').

ಹೊಸ ಒಡಂಬಡಿಕೆಯು, ಬಿಷಪ್, ಹಿರಿಯರು, ಪ್ರೆಸ್ಬೈಟರ್ ಮತ್ತು ಮೇಲ್ವಿಚಾರಕರು ಎಂಬುದನ್ನು ಅದಲುಬದಲಾಗಿ ಉಪಯೋಗಿಸುತ್ತದೆ. (ತೀತನಿಗೆ 1:5-9, 1 ತಿಮೊಥೆಯನಿಗೆ 3:1-7, 1 ಪೇತ್ರ 5:1-4) ಎಲ್ಲರೂ ಸಹ ಆತ್ಮಿಕವಾಗಿ ಪೋಷಿಸುವವರು ಅಥವಾ ದೇವರ ಜನರ ಸಭಾಪಾಲಕರು. ಹಿರಿಯುರು, ಅಪೊಸ್ತಲರೊಂದಿಗೆ ಬೋಧನೆಯಲ್ಲಿ ಮತ್ತು ಸ್ಥಳೀಯ ಸಭೆಯ ಆತ್ಮಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು.

ಐವಡಿ ಕಛೇರಿಯ ಜನರಲ್ಲಿ ಹಿರಿಯರನ್ನು ಸಹ ಉಲ್ಲೇಖಿಸಲಾಗಿದೆ (ಉದಾ: ಪ್ರವಾದಿ ಯೂದನೂ ಮತ್ತು ಸೀಲನು, ಅಪೊಸ್ತಲರ ಕೃತ್ಯಗಳು 15:27,32) ಆದರೆ ಐದುಪಾಲು ಸೇವಾ ಕಛೇರಿಯಲ್ಲಿ ಎಲ್ಲಾ ಹಿರಿಯರನಗನ್ನು ಪರಿಗಣಿಸಲಾಗುವುದಿಲ್ಲ.

ಹಿರಿಯವರ ಪಾತ್ರವು (ಪ್ರೆಸ್ಬೈಟ್‌ರ್, ಬಿಷಪ್, ಮೇಲ್ವಿಚಾರಕರು) ಮೂರು ಪ್ರಮುಖ ಸಂಗತಿಗಳನ್ನು ಮಾಡಬೇಕಾಗಿರುತ್ತದೆ.

- ಆತ್ಮಿಕ ಪ್ರೌಢತೆ - ಕ್ರಿಸ್ತೀಯ ಜೀವಿತದ ದೈವಿಕ ಮಾದರಿ ಇಡುವುದು

- ಆತ್ಮಿಕ ಸೇವೆ - ವಾಕ್ಯ ಮತ್ತು ದೈವಶಾಸ್ತ್ರದಲ್ಲಿ ದುಡಿಮೆ
- ಆತ್ಮಿಕ ಮೇಲ್ವಿಚಾರಣೆ - ಕುರಿಗಳನ್ನು ಸಂರಕ್ಷಿಸುವುದು.

## ಸ್ಥಳೀಯ ಸಭೆಯಲ್ಲಿ ಸೇವಾ ತಂಡಗಳ ಹೊರಹೊಮ್ಮುವಿಕೆ

ಯೆರೂಸಲೇಮಿನ ಸಭೆಯ 12 ಮಂದಿ ಅಪೊಸ್ತಲರ ನಾಯಕತ್ವದೊಂದಿಗೆ ಪ್ರಾರಂಭಗೊಂಡಾಗಲೂ ಸ್ವಲ್ಪ ಸಮಯದ ಬಳಿಕ ಅಪೊಸ್ತಲರು ಮತ್ತು ಹಿರಿಯರು ಇಬ್ಬರನ್ನು ಯೆರೂಸಲೇಮಿನ ಸಭೆಯ ನಾಯಕತ್ವದಲ್ಲಿ ನೋಡುತ್ತೇವೆ. ಅವರು ನಾಯಕತ್ವದ ತಂಡವಾಗಿ ಒಟ್ಟಾಗಿ ಜನರ ಸೇವೆ ಮಾಡಿದರು. ಅದೇ ರೀತಿಯಾಗಿ ಅಂತಿಯೋಕ್ಯದ ಸಭೆಯಲ್ಲಿ, ಬಾರ್ನಬನು ಮೊದಲು ನೇಮಕಗೊಂಡ ನಾಯಕನಾಗಿದ್ದನು ಮತ್ತು ಅವನು ಪೌಲನನ್ನು ತನ್ನೊಂದಿಗೆ ಸೇರಿಸಿಕೊಂಡನು (ಅಪೊಸ್ತಲರ ಕೃತ್ಯಗಳು 11:25,26) ಬಾರ್ನಬ ಮತ್ತು ಪೌಲನು ಹೊಸದಾಗಿ ಸ್ಥಾಪಿಸಲ್ಪಟ್ಟ ಸಭೆಯಲ್ಲಿ ದೇವರ ವಾಕ್ಯವನ್ನು ಕಲಿಸಿದರು. ಆಮೇಲೆ ಅಪೊಸ್ತಲರ ಕೃತ್ಯಗಳು 13:1 ರಲ್ಲಿ ಎರಡು ವರ್ಷಗಳಲ್ಲಿ ಸ್ಥಳೀಯ ಸಭೆಯಲ್ಲಿ ಈ ಒಂದು ಪ್ರವಾದಿಗಳು ಮತ್ತು ಬೊಧಕರುಗಳ (ಅಥವಾ ಪ್ರವಾದನಾ ಬೋಧಕರು) ತಂಡದ ಭಾಗವಾಗಿ ಇನ್ನೂ ಮೂರು ಜನರು ಸೇರಿಬರುವುದನ್ನು ನೋಡುತ್ತೇವೆ. ಅಂತಿಯೊಕ್ಯದ ಸಭೆಯಲ್ಲಿ ಐದು ಜನ ಹಿರಿಯರಿದ್ದರು: ಬಾರ್ನಬ, ಸಿಮೆಯೋನ, ಲೂಕ್ಯ, ಮೆನಹೇನ, ಸೌಲ. ಇದು ಒಂದು ಬಹು - ಸಂಸ್ಕೃತಿಯ ತಂಡವಾಗಿತ್ತು ಅಂತಿಯೋಕ್ಯ ಸ್ಥಳೀಯ ಸಭೆಯಲ್ಲಿ ಸೇವೆಸಲ್ಲಿಸುತ್ತಿದ್ದರು. ಬಾರ್ನಬನು ಮಾಜಿ-ಯಾಜಕತ್ವದ ಪಾದ್ರಿಯಾಗಿದ್ದನು. ಸೌಲನು ಯೆಹೂದ್ಯ ಪಂಥದಲ್ಲಿ ಅಧಿಕ ವಿದ್ಯಾಭ್ಯಾಸ ಹೊಂದಿದ್ದನು. ಮೆನಹೇನನು ಅರಸನಾದ ಹೆರೋದನ ಅಂಗಣದಿಂದ ಬೆಳೆದು ಬಂದವನು. ಲೂಕ್ಯನ ಉತ್ತರ ಲಿಬಿಯಾದ ಕುರೇನ್ಯದವನು.

## ಹಿರಿಯ ನಾಯಕರುಗಳು/ಸಭಾಪಾಲಕರ ಹೊರಹೊಮ್ಮುವಿಕೆ

ಹೊಸ ಒಡಂಬಡಿಕೆಯ ಸಭೆಯು ಬೆಳೆದಂತೆ ಹಿರಿಯ ನಾಯಕರು ಸಭಾಪಾಲಕರುಗಳು, ಸ್ಥಳೀಯ ಸಭೆಯ ಜವಬ್ದಾರರಾಗಿರುವ ಹಿರಿಯರಿಂದ ಹೊರಹೊಮ್ಮುತ್ತಿದ್ದನ್ನು ನಾವು ನೋಡುತ್ತೇವೆ.

ನಾವು ಮೊದಲೇ ನೋಡಿದಂತೆ ಅಪೊಸ್ತಲರ ಕೃತ್ಯಗಳು 11ರಲ್ಲಿ (ಕ್ರಿ.ಶ. 46) ಯೆರೂಸಲೇಮಿನ ಸಭೆಯು ಹಿರಿಯರು ಅಥವಾ ಆತ್ಮಿಕ ನಾಯಕರುಗಳ ತಂಡವನ್ನು,

ಹೊಂದಿತ್ತು. ಇದು ಅಪೊಸ್ತಲರು ಮತ್ತು ಇತರ ಆತ್ಮಿಕ ನಾಯಕರುಗಳನ್ನು ಒಳಗೊಂಡಿತ್ತು. ಅವರುಗಳ ಮಧ್ಯದಲ್ಲಿ ಅಪೊಸ್ತಲನಾದ ಯಾಕೋಬನು ಹಿರಿಯ ಅಥವಾ ಪ್ರಾಥಮಿಕ ನಾಯಕನಾಗಿ ಕಂಡು ಬರುವುದನ್ನು ನೋಡುತ್ತೇವೆ. ಅಪೊಸ್ತಲರಕೃತ್ಯಗಳು 15 ರಲ್ಲಿ ಯಾಕೋಬನನ್ನು ಯೆರೂಸಲೇಮಿನ ಸಭೆಯ ಪ್ರಾಥಮಿಕ ನಾಯಕನಾಗಿ ನೋಡುತ್ತೇವೆ ಮತ್ತು ಅವನು ಮೊದಲ ಯೆರೂಸಲೇಮಿನ ಮಂತ್ರಾಲೋಚನೆಯ ಸಭೆಯಲ್ಲಿ ಅಂತಿಮ ನಿರ್ಧಾರವನ್ನು ಮಾಡುವವನು ಅವನೇ ಆಗಿದ್ದನು ಎಂಬುದನ್ನು ನೋಡುತ್ತೇವೆ. ಅಪೊಸ್ತಲರ ಕೃತ್ಯಗಳು 15. ಪೌಲನು ಯೆರೂಸಲೇಮಿಗೆ ಬಂದಾಗ ಯಾಕೋಬನನ್ನು ಸಂಧಿಸುತ್ತಾನೆ (ಅಪೊಸ್ತಲರ ಕೃತ್ಯಗಳೂ 21:8) ಮತ್ತು ಅವನ ಪತ್ರಿಕೆಯಲ್ಲಿ ಪ್ರಾಥಮಿಕ ನಾಯಕನಾಗಿ ವಂದಿಸುತ್ತಾನೆ (ಗಲಾತ್ಯದವರಿಗೆ 2:9).

ತಿಮೊಥೆಯನು ಎಫೆಸ ಸ್ಥಳೀಯ ಸಭೆಯ ''ಸಭಾಪಾಲಕನಾಗಿ ನೇಮಿಸಲ್ಪಟ್ಟನು (1 ತಿಮೊಥೆಯನಿಗೆ 1:3) ತಿಮೊಥೆಯನು ಸಭಾಧ್ಯಕ್ಷರನ್ನು ಮತ್ತು ಸಭಾಸೇವಕರನ್ನು ನೇಮಿಸುತ್ತಿದ್ದನು (1 ತಿಮೊಥೆಯನಿಗೆ 3:1) ನಾಯಕರುಗಳ ಮೇಲೆ ತಿಮೊಥೆಯನಿಗೆ ನಾಯಕತ್ವವು ಕೊಡಲ್ಪಟ್ಟಿತ್ತು (1 ತಿಮೊಥೆಯನಿಗೆ 5:1, 17,19)

ಹೊಸ ಒಡಂಬಡಿಕೆಯ ಕೊನೆಯ ಪುಸ್ತಕವಾದ ಪ್ರಕಟನೆಯ ಪುಸ್ತಕವು ಕ್ರಿ.ಶ. 96 ರಲ್ಲಿ ಬರೆಯಲ್ಪಟ್ಟಿತ್ತು ಪ್ರಕಟನೆ ಅಧ್ಯಾಯ 2 ಮತ್ತು 3 ರಲ್ಲಿ ಪ್ರತಿ ಸ್ಥಳೀಯ ಸಭೆಗಳಿಗೆ ಯೇಸುವು ಸಂದೇಶಕನು ಅಥವಾ ತನ್ನ ದೇವದೂತನ ಮೂಲಕವಾಗಿ ಸಂದೇಶ ರವಾನಿಸುತ್ತಾನೆ. ಪ್ರತಿಯೊಂದು ಸ್ಥಳೀಯ ಸಭೆಯು ಪ್ರತಿಬಿಂಬಿಸಬೇಕಾದ ಒಂದು ವೈಯಕ್ತಿಕ ಜವಬ್ದಾರಿಯನ್ನು ಸೂಚಿಸುತ್ತದೆ.ಯೇಸುವಿನ ಬಲಗೈಯಲ್ಲಿ ಕಂಡವರು ಸ್ಥಳೀಯ ಸಭೆಯ ದೂತರುಗಳು (ಪ್ರಕಟನೆ 1:16,20)

ಪ್ರಕಟನೆ 2:1

**ಎಫೆಸದಲ್ಲಿರುವ ಸಭೆಯ ದೂತನಿಗೆ (ಗ್ರೀಕ್‌ನಲ್ಲಿ ಏಂಜೆಲೂಸ್ ಸಂದೇಶಗಾರ)**

ಗ್ರೀಕ್ ಪದ 'ಏಂಜ್‌ಲೋಸ್' ಎಂಬುದು 'ಸಂದೇಶಗಾರ' ಎಂಬ ಅರ್ಥ ಹೊಂದಿದೆ ಮತ್ತು ಇದು ದೇವದೂತನಿಗೆ ಅಥವಾ ಸಂದೇಶಗಾರನಾದ ಮನುಷ್ಯನಾದ ವ್ಯಕ್ತಿಗೆ ಉಪಯೋಗಿಸಬಹುದು ಕರ್ತನಾದ ಯೇಸುವು ದೇವದೂತ ಜೀವಿಗಳಿಗೆ, ಅನೇಕ ಕಾರಣಗಳಿಗಾಗಿ ತಿಳಿಯಪಡಿಸಲಿಲ್ಲವೆಂಬುದು ಸ್ಪಷ್ಟವಾಗಿದೆ. ಹೊಸ ಒಡಂಬಡಿಕೆಯಲ್ಲಿ ಎಲ್ಲಿಯೂ ಸಹ ದೇವದೂತನು ಸ್ಥಳೀಯ ಸಭೆ ಅಥವಾ ಸಭೆಗಳ ಮೇಲೆ ಉಸ್ತುವಾರಿ

ಹೊಂದಿರುವುದನ್ನು ನೋಡುವುದಿಲ್ಲ ನಿರ್ದಿಷ್ಟ ಉಪದೇಶಗಳು ಮತ್ತು ಎಚ್ಚರಿಕೆಗಳು ಪ್ರತಿಯೊಂದು ಸಭೆಗೆ ಕೊಡಲ್ಪಟ್ಟದ್ದು ಬರೀ ಮಾನವ ಜೀವಿಗೆ ಮಾತ್ರ ಅನ್ವಯಿಸುತ್ತದೆ. ದೇವದೂತ ಜೀವಿಗಳಿಗಲ್ಲ. ಆದ್ದರಿಂದ ಪ್ರತಿಯೊಂದು ಪ್ರದೇಶದ ಸ್ಥಳೀಯ ಸಭೆಯ ಪ್ರಾಥಮಿಕ ನಾಯಕ (ಹಿರಿಯ ನಾಯಕ)ನಿಗೆ ಕರ್ತನಾದ ಯೇಸುವು ತಿಳಿಸಲ್ಪಟ್ಟ ಸಂದೇಶವು ಪ್ರತಿಬಿಂಬಿಸಲ್ಪಟ್ಟಿದೆ ಎಂಬುದಾಗಿ ಹೇಳಬಹುದಾಗಿದೆ.

ಎಫೆಸದ ಸ್ಥಳೀಯ ಸಭೆಯು, ಆ ಒಂದು ಸ್ಥಳೀಯ ಸಭೆಯ ನಾಯಕತ್ವದ ಜವಾಬ್ದಾರಿಯನ್ನು ಹೊಂದಿದ್ದ ಹಿರಿಯ ನಾಯಕರು (ಪ್ರಕಟನೆ 2:1) ಮತ್ತು ಹಿರಿಯರನ್ನು (ಅಪೊಸ್ತಲರ ಕೃತ್ಯಗಳು 20:17) ಹೊಂದಿದ್ದರಿಂದ ಅಭಿವೃದ್ಧಿ ಹೊಂದಿತ್ತು.

ಸ್ಥಳೀಯ ಸಭೆಯ ಪ್ರಾಥಮಿಕ ಅಧಿಕಾರವು, ಸ್ಥಳೀಯ ಸಭೆಯನ್ನು ಮಾರ್ಗದರ್ಶಿಸುವ ಪೋಷಣೆ ಮಾಡುವ ಎರಡು ಜವಬ್ದಾರಿ ಹೊಂದಿರುವ ಹಿರಿಯ ನಾಯಕನದಾಗಿರುತ್ತದೆ. ಸ್ಥಳೀಯ ಸಭೆಯಲ್ಲಿ ಜರುಗುವ ಎಲ್ಲದರ ಮೇಲೆ ಕರ್ತನಾದ ಯೇಸುವು ಹಿರಿಯ ನಾಯಕನನ್ನು ಹಿಡಿದುಕೊಳ್ಳುತ್ತಾನೆ ಹಿರಿಯ ನಾಯಕನು ಸ್ವತಃ ಯಾವುದೇ ಐದುಪಾಲು ಸೇವೆಯಲ್ಲಿ ಕಾರ್ಯ ನಿರ್ವಹಿಸುತ್ತಾನೆ, ಅದು ಅಪೊಸ್ತಲನಾಗಿರಬಹುದು, ಸಭಾಪಾಲಕನಾಗಿರಬಹುದು, ಅಥವಾ ಕರ್ತನು ಅವನು/ಅವಳನ್ನು ಕರೆದಂತೆ ಎರಡರ ಸಂಯೋಜನೆ ಇರಬಹುದು. ಆದ್ದರಿಂದ ಹಿರಿಯ ನಾಯಕನು ಸಭಾಪಾಲಕ, ಹಿರಿಯಸಭಾಪಾಲಕ ಮತ್ತು ಇನ್ನೂ ಮುಂತಾದವುಗಳಿಂದ ಉಲ್ಲೇಖಿಸಬಹುದು.

ಸ್ಥಳೀಯ ಸಭೆಯಲ್ಲಿ ಹಿರಿಯನಾಯಕನ ನಾಯಕತ್ವದಲ್ಲಿ ಹಿರಿಯರು, ಸಭಾಸೇವಕ ಮತ್ತು ಐದು-ಪಾಲು ಸೇವೆಯು ಒಟ್ಟಾಗಿ ಅಸ್ತಿತ್ವದಲ್ಲಿರುತ್ತದೆ ಮತ್ತು ಒಟ್ಟಾಗಿ ಕಾರ್ಯ ನಿರ್ವಹಿಸುತ್ತದೆ.

## ಐದು-ಪಾಲು ಸೇವಕರು ಮತ್ತು ಸೇವಾ ತಂಡ

ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ನಾವು ನೋಡುವಂತಹ ಅತ್ಯುತ್ತಮ ವೈಶಿಷ್ಟ್ಯಗಳು ಸೇವಾ ತಂಡಗಳಾಗಿವೆ. ಅಪೊಸ್ತಲರು ಹಿರಿಯರು ಮತ್ತು ಐವಡಿ ಸೇವೆಯಲ್ಲಿದ್ದಂತಹವರು ಒಟ್ಟಾಗಿ ಸ್ಥಳೀಯ ಸಭೆಯನ್ನು ಬಲಪಡಿಸಲು, ಹೊಸ ಸಭೆಗಳನ್ನು ಸ್ಥಾಪಿಸುವ ಮತ್ತು ಪೋಷಿಸುವ ಮೂಲಕವಾಗಿ ದೇವರ ರಾಜ್ಯದ ಪ್ರಗತಿಗಾಗಿ ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು.

ಅಂತಿಯೋಕ್ಯದ ಸಭೆಯು ಒಂದು ಆಸಕ್ತಿಕರ ನಿದರ್ಶನದ ಅಧ್ಯಯನವಾಗಿದೆ ಮತ್ತು ಅಂತಿಯೋಕ್ಯ ಸಭೆಯಿಂದ ತೆಗೆಯಬಹುದಾದ ಕೆಲವು ಪ್ರಾಮುಖ್ಯ ಪಾಠಗಳು ಇಲ್ಲಿವೆ.

- ಸ್ಥಳೀಯ ಸಭೆಯು, ಸೇವೆಗಳು ಜನ್ಮತಾಳುವ, ತರಬೇತಿ ಹೊಂದುವ ಮತ್ತು ಬಿಡುಗಡೆಗೊಳ್ಳುವ ಸ್ಥಳವಾಗಿದೆ.
- ಎಲ್ಲಾ ಸೇವೆಗಳು, ಐವಡಿ (ಪೈವ್ ಫೋಲ್ಡ್) ಸೇವೆಗಳು ಮತ್ತು ಇತರರು ಸ್ಥಳೀಯ ಸಭೆಯಲ್ಲಿ ಆತ್ಮಿಕ ಸಂತೋಷದಾಯಕ ಮತ್ತು ಹೊಣೆಗಾರಿಕೆಗಾಗಿ ಬೇರೂರಿರಬೇಕು
- ಎಲ್ಲಾ ಸೇವಕರು, ಸಭಾಪಾಲಕರು, ಹಿರಿಯರು ಸಭಾಸೇವಕರು ಇತರ ಐವಡಿ ಸೇವಕರುಗಳು ಮತ್ತು ಇತರ ವಿಶ್ವಾಸಿಗಳು ಒಬ್ಬರಿಗೊಬ್ಬರು ಸ್ಪರ್ದಿಸದೆ, ಸ್ಥಳೀಯ ಅಂಗ ಸಮೃದ್ಧಗೊಳಿಸಲು, ಸಹಾಯ ಮಾಡಲು, ಪೂರಕವಾಗಿರಲು ಸ್ಥಳೀಯ ಸಭೆಯಲ್ಲಿ, ಒಟ್ಟಾಗಿ ಕಾರ್ಯನಿರ್ವಹಿಸಬೇಕು ಮತ್ತು ಜೊತೆಯಲ್ಲಿ ಅಸ್ತಿತ್ವದಲ್ಲಿರಬೇಕು.
- ದೇವರ ಕರೆ ಮತ್ತು ಸೇವೆಯಲ್ಲಿ, ಕೆಲವು ಜನರು ಪ್ರಪಂಚದ ಎಲ್ಲಾ ಕಡೆಗೆ ಹೋಗುವುದು ಅಗತ್ಯವಿರುತ್ತದೆ. ಅಥವಾ ದೊಡ್ಡದಾಗಿರುವ ಕ್ರಿಸ್ತನ ಅಂಗದಲ್ಲಿ ಇತರರು ತಮ್ಮ ಸ್ಥಳೀಯ ಸೇವಾ ಅಂಗದಲ್ಲಿ ಸೇವೆಸಲ್ಲಿಸಲು ಕರೆಯಲ್ಪಟ್ಟಿರಬಹುದು.

## ಸಭಾ ರಚನೆಯ ವಿವಿಧ ರೂಪಗಳು

### *ಗುಮಾಸ್ತರ ವ್ಯವಸ್ಥೆ*

- ಮುಖ್ಯವಾಗಿ ಸಾಂಪ್ರದಾಯಿಕ ಸಂಘ ಸಂಸ್ಥೆಗಳು ಉದಾಹರಣೆಗೆ ಆ್ಯಂಗ್ಲಿಕನ್, ಮೆಥೊಡಿಸ್ಟ್ ಬ್ಯಾಪ್ಟಿಸ್ಟ್ ಮುಂತಾದವುಗಳು
- ಗುಮಾಸ್ತ ಮತ್ತು ಶ್ರಿ ಸಾಮಾನ್ಯನ ನಡುವಿನ ವ್ಯತ್ಯಾಸ. ಹೆಚ್ಚಿನ ಕೆಲಸವು ಗುಮಾಸ್ತನಿಂದ ಜರುಗುತ್ತದೆ.
- ಸ್ಥಳೀಯ ಪ್ಯಾರಿಷ್ ಗುಮಾಸ್ತರು, ಕ್ರಮಾನುಗತವಾಗಿ ಅವರ ಮೇಲಿರುವವರ ನಿಯಂತ್ರಣದಲ್ಲಿರುತ್ತಾರೆ.
- ಸ್ಥಳೀಯ ಪ್ಯಾರಿಷ್ ಗುಮಾಸ್ತ ಪ್ಯಾರಿಷ್ ನಾದ್ಯಾಂತ ಚಲಿಸುತ್ತಿರುತ್ತಾನೆ.
- ಸಾಮಾನ್ಯವಾಗಿ ಮೂರು-ಕ್ರಮಗಳಿವೆ: ಬಿಷಪ್ಪರು, ಪಾದ್ರಿಗಳು ಸಭಾಸೇವಕರು

## ಹಿರಿಯರ ವ್ಯವಸ್ಥೆ

- ಹಿರಿಯರ ಗುಂಪಿನಿಂದ ನಡೆಸಲ್ಪಡುತ್ತಾರೆ
- ಒಳ್ಳೇಯ ಸ್ಥಳೀಯ ಸಭೆಯನ್ನು ಸ್ಥಾಪಿಸುವುದರಲ್ಲಿ ಸಮಂಜಸವಾದ ಯಶಸ್ಸು ತೋರಿಸಿದವರು
- ಸಹಕಾರಿ ನಾಯಕತ್ವ ಕೆಲವು ಸಂದರ್ಭಗಳಲ್ಲಿ ಒಂದೇ ದೃಷ್ಟಿಕೋನದಲ್ಲಿ ಹೊಂದಿಕೆಯಾಗುವುದರಲ್ಲಿ ಕಷ್ಟವಾಗಬಹುದು, ಪ್ರಗತಿಯು ನಿಷ್ಕ್ರಿಯವಾಗಬಹುದು ಅಥವಾ ಹತ್ತಿಕ್ಕಲೂಬಹುದು ಹಾಗಿದ್ದರೂ ಐಕ್ಯತೆ ಮತ್ತು ಒಮ್ಮತವಿರುವುದಾದರೆ ನಾಯಕತ್ವದ ಗುಂಪು ಬಹಳ ಬಲಯುತವಾಗಿರುತ್ತದೆ.

## ಸ್ವತಂತ್ರ ಸ್ಥಳೀಯ ಸಭೆಗಳು

- ವೈಯಕ್ತಿಕ ಸಭಾಪಾಲಕರುಗಳಿಂದ, ಸಭಾಪಾಲಕ ತಂಡದೊಡನೆ ನಡೆಸುವುದು
- ದರ್ಶನ, ಬೆಳವಣಿಗೆ ಮತ್ತು ಸೃಜನಶೀಲತೆಗೆ ಸಾಕಾಷ್ಟು ಜಾಗವಿರುತ್ತದೆ.
- ಆದಾಗ್ಯೂ ಹಾನಿಕರಕವಾಗಿರುವಂತಹ ಸರ್ವಾಧಿಕಾರಿ ನಾಯಕತ್ವ ನಿರಂಕುಶವಾದಿಯ ಅಪಾಯವಿರುತ್ತದೆ.
- ಕೆಲವು ಸಂದರ್ಭಗಳಲ್ಲಿ ಸರಿಯಾದ ಉತ್ತರಾಧಿಕಾರದಲ್ಲಿ ವಿಫಲತೆ ಇರುತ್ತದೆ, ಇದು ಅನೇಕ ವರ್ಷಗಳ ಕಠಿಣ ಕೆಲಸಗಳನ್ನು ನಾಶಮಾಡುತ್ತದೆ.

## ಸಭೆಗಳ ಜಾಲಗಳು (ನೆಟ್‌ವರ್ಕ್)

- ಅಸೆಂಬ್ಲಿಸ ಆಫ್ ಗಾಢ್ ವಿನೆಯಾರ್ಡ್, ನ್ಯೂ ಲೈಫ್ ಚರ್ಚಸ್ಸ್ ಇನ್ನೂ ಮುಂತಾದವು
- ಪ್ರತಿಯೊಂದು ಜಾಲಗಳು ಹೇಗೆ ಆಯೋಜಿಸಲ್ಪಟ್ಟಿವೆ ಎಂಬುದಕ್ಕೆ ವಿವಿಧ ರೀತಿಗಳಿವೆ ಒಟ್ಟಾರೆ ಉಪಯುಕ್ತ ಮಾದರಿಯಾಗಿದೆ
- ಕೆಲವು ಸಂದರ್ಭಗಳಲ್ಲಿ ಅತಿಯಾದ ಹತೋಟಿ, ನಿಂದನೆ ಮತ್ತು ಜಾಲಗಳೊಳಗಿನ ಸಭೆಗಳ ಮಧ್ಯದಲ್ಲಿ ಸ್ವರ್ಧೆಯ ಅಪಾಯಕಾರಿಯಾಗಿರುತ್ತದೆ.

## ಅಪೊಸ್ತಲರ ಜಾಲಗಳು (ನೆಟ್‌ವರ್ಕ್)

- ಅಪೊಸ್ತಲರಿಗೆ ಸಂಬಂಧಿಸಿದಂತೆ ಸಭೆಗಳ ಜಾಲಗಳು
- ಒಂದು ದರ್ಶನವನ್ನು ಅಪವರ್ತಿಸುವಂತಹ ಲಾಭವಿದೆ ಮತ್ತು ಭೌಗೋಳಿಕವಾಗಿ ಕೇಂದ್ರೀಕರಿಸುತ್ತದೆ.

- ಮಾನವ -ಕೇಂದ್ರಿತವಾಗಿರುವುದು ಅಪಾಯಕಾರಿ
- ಸರ್ವಾಧಿಕಾರತ್ವವು ಅಪಾಯಕಾರಿ
- ಕೆಲವು ಸಂದರ್ಭಗಳಲ್ಲಿ ಒಡಂಬಡಿಕೆಯ - ಸಂಬಂಧಗಳು (ಕ್ರಿಸ್ತನಲ್ಲಿ ಈಗಾಗಲೇ ನಾವು ಹೊಂದಿರುವುದನ್ನು ಹೊರತುಪಡಿಸಿ)
- ಸಾಂಸ್ಕೃತಿಕ ಪ್ರವೃತ್ತಿಗಳಿಗೆ ನಡೆಸುತ್ತದೆ.

### *ಗೃಹ ಸಭೆಗಳು*

- ದೊಡ್ಡ ಸಭೆಗಳೊಡನೆ ಅತೃಪ್ತಿ ಅಥವಾ ದೊಡ್ಡದಾದ ಸ್ಥಾಪನೆಯಲ್ಲಿ ಅಸಮರ್ಥತೆ
- ನಿಕಟವಾದ ಸಂಬಂದ, ಕಾಳಜಿ ಮತ್ತು ಪೋಷಣೆಯ ಲಾಭವಿದೆ.
- ಹೊಣೆಗಾರಿಕೆಯ ಕೊರತೆ ಮತ್ತು ದೊಡ್ಡ ಮೇಲ್ವಿಚಾರಣ ಜಾಲಗಳೊಂದಿಗೆ ಸಂಪರ್ಕಿಸದಿದ್ದಲ್ಲಿ ಬೆಂಬಲಿಸುವುದು ಆದಾಗ್ಯೂ ಅನೇಕ ಗೃಹ ಸಭೆಗಳನ್ನು ಮೇಲ್ವಿಚಾರಣೆ ಮಾಡಲೂ ಸಾಕಷ್ಟು ಪ್ರಯತ್ನದ ಅಗತ್ಯವಿದೆ.
- ಸೀಮಿತ ಸಂಪನ್ಮೂಲಗಳ ಕಾರಣದಿಂದ, ದೊಡ್ಡ ಸನ್ನಿವೇಶದಲ್ಲಿ ಮತ್ತು ಸಮಾಜವನ್ನು ದೊಡ್ಡರೀತಿಯಲ್ಲಿ ಪ್ರಭಾವಿಸಲು ಅಸಮರ್ಥತೆ.

### *ಕಿರು ಕೊಠಡಿ ಆಧಾರಿತ ಸಭೆಗಳು*

- ದೊಡ್ಡ ಸಮೂಹದ ಸಭಿಕರಾಗಿ ಬೆಳೆಯುವುದರಲ್ಲಿ ಸಫಲವಾಗಿದೆ ಮತ್ತು ಸಮುದಾಯದ ಬಲಿಷ್ಟ ಪ್ರಜ್ಞೆಯನ್ನು ಇನ್ನೂ ಪಾಲಿಸುತ್ತಿದೆ ಬಹುಶಃ ಇದು ಒಂದು ಉತ್ತಮ ರಚನೆಯಾಗಿದೆ.
- ಕೆಲಸದ ಸಂಸ್ಕೃತಿಗಳು ಅಥವಾ ಅಗತ್ಯವಿರುವ ಮನೋರೂಢಿಯಲ್ಲಿ ಕೆಲವು ಸನ್ನಿವೇಶಗಳಲ್ಲಿ ತೀವ್ರವಾದ ಬದಲಾವಣೆಯಿಂದಾಗಿ ಕಾರ್ಯಗತಗೊಳಿಸುವುದು ಕಷ್ಟಕರವಾಗಿದೆ.
- ವಿಭಜಿತ ಗುಂಪುಗಳ ರಚನೆಯ ಅಪಾಯ ಮತ್ತು ಮುಖ್ಯ ಸಭೆಯಿಂದ ದೂರವಾಗಿ ಬಿಡುವಂತದ್ದು, ಅನೇಕ ಸಭಾಪಾಲಕರು ಈ ಒಂದು ರಚನೆಯನ್ನು ಅಳವಡಿಸಿಕೊಳ್ಳದೇ ದೂರವಿರಲು ಕಾರಣವಾಗಿದೆ.

### *ದೊಡ್ಡ ಸಭೆಗಳು*

- ಯಶಸ್ವಿ ಸಭೆಗಳು ಬೇಗನೆ 2000 ಅಧಿಕವಾದಂತಹ ಸಭಿಕರೊಡನೆ ''ಮೆಗಾ

ಸಭೆಗಳಾಗಿ'' ವಿಕಸನಗೊಳ್ಳುತ್ತದೆ. (ಪಂಥೀಯ ಅಥವಾ ಸ್ವತಂತ್ರವಾಗಿರು ಸಭೆಗಳಿರಬಹುದು)

- ಮೆಗಾ ಸಭೆಗಳ ಸಾಮಾನ್ಯ ಅಂಶಗಳು: ಸಾಂಸ್ಥಿಕವಾಗಿ ಉತ್ತಮ ಮತ್ತು ಬಲಿಷ್ಟ ದಾರ್ಶನಿಕ ಸಂದೇಶಗಾರ/ಬೋಧಕರಿಂದ ನಡೆಸಲ್ಪಡುತ್ತಾರೆ. ಸಭಾಪಾಲಕ ಅಂಶಗಳು ವಿರಳವಾಗಿ ಅಭ್ಯಾಸಿಸಲ್ಪಡುತ್ತವೆ ಮತ್ತು ಹಿರಿಯ ನಾಗರೀಕರಿಗೆ ವಿರಳ ಪ್ರಾಮುಖ್ಯತೆ ಮತ್ತು ಆಗಾಗ್ಗೆ ತಂಡಕ್ಕೆ ನಿಯೋಜಿಸಲಾಗಿರುತ್ತದೆ.
- ಸಮುದಾಯ ಮತ್ತು ದೇಶವ್ಯಾಪ್ತಿಯ ಮೇಲೆ ದೊಡ್ಡ ಪರಿಣಾಮವನ್ನುಂಟು ಮಾಡುತ್ತದೆ. ಮಾಧ್ಯಮಗಳು ತೊಡಗಿಸಿಕೊಳ್ಳುತ್ತವೆ, ದೇಶದಾದ್ಯಂತ ಗಮನ ಸೆಳೆಯುತ್ತದೆ, ಗೃಹದ ಮತ್ತು ಪ್ರಪಂಚದ ಸೇವೆಗಳಲ್ಲಿ ಅಧಿಕವಾಗಿ ಮಾಡುವಂತದ್ದು ಇರುತ್ತದೆ.
- ಮೆಗಾಸಭೆಗಳು ತೀರಾ ಕೆಟ್ಟವು ಅಥವಾ ಅಪಾಯಕಾರಿಯಲ್ಲ ಅದೇ ಸಮಸ್ಯೆಗಳು ಚಿಕ್ಕ ಸಭಿಕರನ್ನು ಹೊಂದಿರುವ ಸಭೆಗಳಿಗೂ ಮತ್ತು ದೊಡ್ಡ ಸಭೆಗಳಿಗೂ ತೊಂದರೆಯನ್ನುಂಟು ಮಾಡುತ್ತವೆ.(ಉದಾಹರಣೆಗೆ ನಾಯಕನ ನೈತಿಕ ವೈಫಲ್ಯತೆ, ಹಣದ ದುರುಪಯೋಗ, ಮುಂತಾದವು).
- ಆದಾಗ್ಯೂ ಅವರ ಗೋಚರತೆಯ ಕಾರಣ, ದೊಡ್ಡ ಸಭೆಯಲ್ಲಿ ಯಾವುದೇ ತೊಂದರೆ /ವಿಫಲತೆಗಳು ಬೇಗನೆ ಮಾಧ್ಯಮಗಳ ಗಮನ ಹೊಂದುತ್ತವೆ ಮತ್ತು ಸಾರ್ವಜನಿಕ ಟೀಕೆಗಳಿಗೆ ಒಳಗಾಗುತ್ತವೆ. ಸಣ್ಣ ಸಭಿಕರುಗಳ ವಿಫಲತೆಯು ಸಾರ್ವಜನಿಕರಿಂದ ಗಮನಿಸಲ್ಪಡುವುದಿಲ್ಲ.

## *ಮಲ್ಟಿಸೈಟ್ ಸಭೆಗಳು*

- ನಗರದಲ್ಲಿ ಅನೇಕ ಸ್ಥಳಗಳಲ್ಲಿ ಸಭೆ ಹೊಂದಿರುವ
- ನಗರದಲ್ಲಿ ಅನೇಕ ಸ್ಥಳಗಳೊಡನೆ, ಕೆಲವು ನಗರಗಳಾದ್ಯಂತ ಇರುವ ಒಂದು ಸಭೆ
- ಅನೇಕ ಜನರಿಗೆ ಭೌಗೋಳಿಕ ಪ್ರವೇಶ ಒದಗಿಸುತ್ತವೆ.
- ಅನೇಕ ಜನರಿಗೆ ಸೇವೆ ಮಾಡಲು ಅವಕಾಶಗಳನ್ನು ಕಲ್ಪಿಸುತ್ತದೆ. ಮತ್ತು ಮಾದರಿಯಲ್ಲಿ ಉತ್ತಮವಾಗಿ ಸ್ಥಾಪಿಸಲ್ಪಟ್ಟ ಮೂಲಕ ಹೆಚ್ಚಿನ ನಿವೇಶನಗಳನ್ನು ಸ್ಥಾಪಿಸುವದರಿಂದ ಸುಲಭವಾಗಿ ಸಭಿಕರೆಲ್ಲರೂ ಸೇವೆಯಲ್ಲಿ ಭಾಗಿಗಳಾಗುವುದಕ್ಕೆ ಮಾರ್ಗ ಒದಗಿಸುತ್ತದೆ.

- ಹಂಚಿದ ಸಂಪನ್ಮೂಲಗಳು, ಹಂಚಿದ ಕಲಿಕೆಯ ಪ್ರಯೋಜನ ಒದಗಿಸುತ್ತದೆ.

ಪ್ರತಿಯೊಂದು ಮಾದರಿಯಲ್ಲೂ ಬಲ ಮತ್ತು ದುರ್ಬಲತೆ, ಒಳ್ಳೇದು ಮತು ಕೆಟ್ಟದ್ದು ಇರುತ್ತದೆ. ಪರಿಪೂರ್ಣವಾದ ರಚನೆಯಲ್ಲ. ನಾವು ಯಾವುದೇ ಬಗೆಯ ಸಭಾ ರಚನೆಯ ರೀತಿಗಳನ್ನು ಹೊಂದಿದ್ದರು/ಉಪಯೋಗಿಸಿದರು, ಸಾಮರ್ಥ್ಯಗಳನ್ನು ನಿಯಂತ್ರಿಸುವುದರ ಬಗ್ಗೆ ಜಾಗರೂಕರಾಗಿರಬೇಕು. ಅಲ್ಲದೆ ಸಂಭವನೀಯ ಅಪಾಯಗಳು ಮತ್ತು ಅವುಗಳ ವಿರುದ್ಧವಾಗಿ ನಮ್ಮನ್ನು ಸಂರಕ್ಷಿಸುವುದರ ಬಗ್ಗೆ ಬಹಳ ಜಾಗರೂಕರಾಗಿರಬೇಕು.

## ಸಭಾ ರಚನೆಯಲ್ಲಿ ಸುಧಾರಣೆ

### *ಹೊಸ ಬುದ್ದಲಿಗಳು ಬೇಕಾಗಿವೆ*

ಲೂಕ 5:37,38

**ಹಳೇ ಬುದ್ದಲಿಗಳಲ್ಲಿ ಹೊಸ ದ್ರಾಕ್ಷಾರಸವನ್ನು ಯಾರೂ ಹಾಕಿಡುವುದಿಲ್ಲ ಇಟ್ಟರೆ ಆ ಹೊಸ ದ್ರಾಕ್ಷಾರಸವು ಬುದ್ದಲಿಗಳನ್ನು ಒಡೆದು ತಾನೂ ಚೆಲ್ಲಿ ಹೋಗುವದಲ್ಲದೆ ಬುದ್ದಲಿಗಳೂ ಕೆಟ್ಟು ಹೋಗುವವು ಆದರೆ ಹೊಸ ದ್ರಾಕ್ಷಾರಸವನ್ನು ಹೊಸ ಬುದ್ದಲಿಗಳಲ್ಲಿ ಹಾಕಿಡತಕ್ಕದ್ದು.**

ಕರ್ತನಾದ ಯೇಸುವು ಸಾಮಾನ್ಯವಾಗಿ ಪ್ರಸ್ತುತಪಡಿಸಿದ್ದಾನೆ ಆದಾಗ್ಯೂ ಪ್ರಾಮುಖ್ಯವಾದ ಸತ್ಯವು ಇಲ್ಲಿದೆ 1400 ರಿಂದ ಕ್ರಿಸ್ತನ ಅಂಗವು 3 ಪ್ರಧಾನ ದೇವರ ಚಲನೆಯ ಪುನಃಸ್ಥಾಪನೆ ಹೊಂದಿದೆ.

- ಮಾರ್ಟಿನ ಲೂಥರ್‌ನಿಂದ ಪ್ರಾರಂಭಗೊಂಡ ಪುನಃ ಸ್ಥಾಪನೆ ದೈವಶಾಸ್ತ್ರ ಇದು ನಮ್ಮ ದೇವರ ಜ್ಞಾನವನ್ನು ಬದಲಿಸಿದೆ.
- 18ನೇ ಶತಮಾನದಲ್ಲಿ ಆತ್ಮಿಕತೆಯ ಪುನಃ ಸ್ಥಾಪನೆ ಪ್ರಾರಂಭಗೊಂಡಿತ್ತು ಇದು ನಮ್ಮ ದೇವರ ಅನುಭವವನ್ನು ಬದಲಾಯಿಸಿತು.
- ಪುನಃ ಸ್ಥಾಪನೆಯ ರಚನೆ. 30 ವರ್ಷಗಳಿಂದಲೂ ಇದು ಒಬ್ಬರಿಗೊಬ್ಬರು ಮತ್ತು ಪ್ರಪಂಚಕ್ಕೆ ಯಾವ ರೀತಿ ಸೇವೆ ಸಲ್ಲಿಸುತ್ತೇವೆ ಎಂಬುದನ್ನು ಬದಲಾಯಿಸಿದೆ.

ಕರ್ತನಾದ ಯೇಸುವು ತನ್ನ ಸಭೆಯನ್ನು ಕಟ್ಟುತ್ತಿರುವಾಗ ಮತ್ತು ಅದನ್ನು ಪ್ರೌಢತೆಯ ಸ್ಥಳಕ್ಕೆ ತರುತ್ತಾನೆ. ಆತನು ಮಾಡುತ್ತಿರುವುದರೊಂದಿಗೆ ಹಿಂಬಾಲಿಸಲು ರಚನೆ ಮತ್ತು ನಮ್ಮ ಸ್ಥಳೀಯ ಸಭೆಯ ಸರ್ಕಾರದೊಂದಿಗೆ ನಾವುಗಳು ಹೊಂದಿಕೊಳ್ಳಬೇಕು.

## ವಿಶ್ವಾಸಿಗಳನ್ನು (ಸಂತರನ್ನು) ಸಜ್ಜುಗೊಳಿಸುವುದು

ಎಲ್ಲಾ ವಿಶ್ವಾಸಿಗಳು ಸೇವಾ ಕಾರ್ಯಗಳನ್ನು ಮಾಡಬೇಕೆಂಬುದು ಕ್ರಿಸ್ತನ ಉದ್ದೇಶವಾಗಿದೆ (ಎಫೆಸದವರಿಗೆ 4:11,12) ಸಭಾ ಸರ್ಕಾರ ಮತ್ತು ರಚನೆಯ ಹಳೆಯ ಕ್ರಮದಲ್ಲಿ (ಬುದ್ದಲಿ) ಹೆಚ್ಚು ಇದು ಜರುಗಲು ಅವಕಾಶ ನೀಡುವುದಿಲ್ಲ.

ಸಭಾರಚನೆಯ ಪುನಃ ಸ್ಥಾಪನೆಯಲ್ಲಿ, ಸಭೆಯನ್ನು ಸ್ಥಾಪಿಸುವುದರಲ್ಲಿ ಹೊಸ ಮಾರ್ಗವನ್ನು ಪ್ರತಿಯೊಬ್ಬ ವಿಶ್ವಾಸಿಯು ಸೇವಾ ಕಾರ್ಯವನ್ನು ಮಾಡುವುದರಲ್ಲಿ ನಿರತರಾಗಿರುವ ಸ್ಥಳ ಮತ್ತು ದೇವರ ವಾಕ್ಯದಲ್ಲಿ ಕ್ರಿಸ್ತನು ನಮಗೆ ಕೊಡಲ್ಪಟ್ಟ ನೀಲನಕ್ಷೆಗನುಸಾರವಾಗಿ ಸಭೆಯ ಅಭಿವೃದ್ಧಿಯಾಗುತ್ತಿರುವುದಕ್ಕೆ ಸಾಕ್ಷಿಯಾಗಿ ನೋಡುತ್ತೇವೆ.

ನಮ್ಮ ಸ್ಥಳೀಯ ಸಭೆಗಳ ಬುದ್ದಲಿ (ಸರ್ಕಾರ ಮತ್ತು ರಚನೆ) ಬೆಳವಣಿಗೆಗೆ ಸಿದ್ಧವಾಗಿರಬೇಕು ಮತ್ತು ಆತನ ರಾಜ್ಯ ವಿಸ್ತಾರಕ್ಕಾಗಿ ಮತ್ತು ಅಧಿಕವಾಗಿ ದೇವರ ಆತ್ಮನ ಸುರಿಯುವಿಕೆಯನ್ನು ಪಡೆದುಕೊಳ್ಳಲೂ ವಿಸ್ತರಣೆ ಮಾಡಬೇಕು. ಇದರ ಅರ್ಥವೇನೆಂದರೆ  ಸ್ಥಳೀಯ ಸಭೆಯು ದೇವರೊಂದಿಗೆ ಪ್ರಯಾಣಿಸಬೇಕು, ವಿಭಿನ್ನ ಋತುಗಳಲ್ಲಿ ವಿಭಿನ್ನವಾಗಿ ದೇವರು ವ್ಯವಹರಿಸುವಾಗ ನಮ್ಮ ಬುದ್ದಲಿ (ಸರ್ಕಾರ ಮತ್ತು ರಚನೆ) ಇದನ್ನು ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ.

## ಪಂಥೀಯ, ಅಪಂಥೀಯ, ಸ್ವತಂತ್ರ, ಅಪೋಸ್ತಲಿಕ್

ಸ್ಥಳೀಯ ಸಭೆಗಳ ರಚನೆ/ಅಂಗಸಂಸ್ಥೆಗಳನ್ನುಲೆಕ್ಕಿಸದೆ ನಾವು ಗೌರವಿಸುವುದನ್ನು ಮತ್ತು ಪಂಗಡಗಳಾಂದ್ಯಂತ ಕಾರ್ಯ ಮಾಡುವುದನ್ನು ಕಲಿಯಬೇಕು.

ಅವರ ಸಂಘಸಂಸ್ಥೆ ಅಥವಾ ಇತರ ಸಭೆಯ ಅಂಗಸಂಸ್ಥೆಗಳ ನಿಮಿತ್ತ ಜನರನ್ನು ಕೀಳಾಗಿ ನೋಡಬಾರದು ಸತ್ಯವಾದ ಪ್ರಶ್ನೆಯು ''ಅವರು ದೇವರ ರಾಜ್ಯದ ಸತ್ಯವಾದ ಅಂಗವಾಗಿದ್ದಾರಾ ಅಥವಾ ಆತನೊಂದಿಗೆ ನಡೆಯುತ್ತಿದ್ದಾರಾ? ಎಂಬುದಾಗಿದೆ.

ನಾವು ಒಬ್ಬರಿಗೊಬ್ಬರು ಪ್ರೋತ್ಸಾಹಿಸಬೇಕು ಅಥವಾ ಸಂಘಸಂಸ್ಥೆಯು, ಸ್ಥಳೀಯ ಸಭೆಗಾಗಿರುವ ನೀಲನಕ್ಷೆಯನ್ನು ಮುಂದುವರಿಸುವುದಾಗಿದೆ.

# 4

# ಬೆಳವಣಿಗೆಯ ಹಂತ ಮತ್ತು ಅಭಿವೃದ್ಧಿ

ಮಾನವನು, ಎಳೆಮಗುವಿನಿಂದ ಅಂಬೆಗಾಲಿಡುವ, ಆಟವಾಡುವ ಮಗು, ಹದಿಹರೆಯದವರು, ಯುವಕನಾಗಿ, ವಯಸ್ಕನಾಗಿ ಮತ್ತು ಹಿರಿಯವನಾದ ವರ್ಷಗಳಿಗೆ ಬೆಳೆವಣಿಗೆ ಹೊಂದುವಂತೆ ಸ್ಥಳೀಯ ಸಭೆಗಳು ಸಹ ಬೆಳವಣಿಗೆ ಮತ್ತು ಅಭಿವೃದ್ಧಿಯ ಹಂತಗಳನ್ನು ಹಾದುಹೋಗಬೇಕು.

ಸ್ಥಳೀಯ  ಸಭೆಗಳಾದ ಯೆರೂಸೇಲೆಮನ ಸಭೆ ಮತ್ತು ಅಂತಿಯೋಕ್ಯ ಸಭೆಗಳು ಬೆಳವಣಿಗೆ ಹೊಂದುವಾಗ ಇರುವ ಕೆಲವು ಮೈಲಿಗಲ್ಲುಗಳನ್ನು ಗಮನಿಸಬಹುದಾಗಿದೆ. ಮತ್ತು ಸ್ಥಳೀಯ ಸಭೆಗಳ ಆರಂಭದ ಮತ್ತು ನಂತರದ ಬೆಳವಣಿಗೆಯ ಮಾದರಿಯನ್ನು ಸಾಮಾನ್ಯವಾಗಿ ಗುರ್ತಿಸುವುದರ ಕುರಿತು ಆಮೇಲೆ ಚರ್ಚಿಸಬಹುದಾಗಿದೆ.

## ನಿದರ್ಶನ ಅಧ್ಯಯನ : ಯೆರೂಸಲೇಮಿನ ಸಭೆ

- ಪಂಚಾಶತ್ತಮ ದಿನದಲ್ಲಿ ಜನಿಸಿತ್ತು
- ಪ್ರಬಲ ಮಾರ್ಗದಲ್ಲಿ ಪ್ರಾರಂಭಗೊಂಡಿತ್ತು, ಸೂಚಕ ಕಾರ್ಯ ಮತ್ತು ಅದ್ಭುತ ಕಾರ್ಯಗಳ ಮೂಲಕವಾಗಿ ಅತಿ ಬೇಗನೆ ಬೆಳೆಯಿತು.
- ಸಣ್ಣ ಗುಂಪುಗಳಾಗಿ ಮನೆಗಳಲ್ಲಿ ಸೇರಿ ಬರುತ್ತಿರುವಂತದ್ದು ಕೇಂದ್ರೀಕರಣ ಗೊಂಡಿತ್ತು ಮತ್ತು ದೇವಾಲಯದಲ್ಲಿ ಒಟ್ಟಾಗಿ ಸೇರಿಬಂದರು.
- ಸಭೆಯಲ್ಲಿ ಪ್ರತಿಯೊಂದು ಪ್ರಾರಂಭಿಕವಾಗಿ ಸ್ಥಳೀಯ ಸಭೆಯಲ್ಲಿ ಸಾವಿರಾರು ಮಂದಿ ಇದ್ದಾಗಲೂ ಸಹ ಅಪೊಸ್ತಲರಿಂದ ನಿರ್ವಹಿಸಲ್ಪಟ್ಟಿತ್ತು.
- ಆಹಾರ ಆಡಳಿತ ನಿರ್ವಹಣೆಗಾಗಿ ತದನಂತರ ಸಭಾಸೇವಕರುಗಳನ್ನು ನೇಮಿಸಲಾಯಿತು. ಇಂತಹ ಸಭಾಸೇವಕರು ಆತ್ಮನಲ್ಲಿ ಪ್ರಬಲವಾಗಿದ್ದರು ಮತ್ತು ಸೇವೆಯಲ್ಲಿ ಭಾಗಿಗಳಾಗಿದ್ದರು.
- ಹಿಂಸೆಯ ಕಾರಣದಿಂದಾಗಿ ಬಹುಸಂಖ್ಯೆಯು ಉಂಟಾಯಿತು.

- ಪ್ರಾರಂಭದಲ್ಲಿ ಅಪೊಸ್ತಲರು ಯೆರೂಸಲೇಮಿನಲ್ಲಿಯೇ ಉಳಿದುಕೊಂಡಿದ್ದರು ಆದಾಗ್ಯೂ ಇತರ ವಿಶ್ವಾಸಿಗಳು ಮತ್ತು ಸಭಾ ಸೇವಕರುಗಳು ಚದುರಿ ಹೋದರು.
- ಕೆಲವು ವಿಸ್ತರಣೆಗಳು ಪವಿತ್ರಾತ್ಮನಿಂದ ನೇರವಾಗಿ ಏರ್ಪಡಿಸಲ್ಪಟ್ಟಿತ್ತು.
- ಕೆಲವು ವರ್ಷಗಳ ನಂತರ, ಯೆರೂಸಲೇಮಿನ ಸಭೆಯು ನಾಯಕತ್ವದ ಭಾಗವಾಗಿದ್ದ ಹಿರಿಯರನ್ನು ಹೊಂದಿತ್ತು.
- ಇತರ ಸ್ಥಳಗಳಲ್ಲಿ ಸೇವೆಸಲ್ಲಿಸಲು ಯೆರೂಸಲೇಮಿನ ಸಭೆಯಿಂದ ಪ್ರವಾದನಾ ತಂಡವು ಕಳುಹಿಸಲ್ಪಟ್ಟಿತ್ತು.
- ಆರಂಭದಲ್ಲಿ ಶೀಘ್ರ ಬೆಳೆವಣಿಗೆಯಾದ ಚೆನ್ನಾಗಿ ನಿಭಾಯಿಸುವಂತೆ ತೋರಿತ್ತು. ಕ್ಷಿಪ್ರ ಬೆಳವಣಿಗೆಯಲ್ಲಿ ಅವಧಿಯಲ್ಲಿ ಚಿಕ್ಕ ಗುಂಪುಗಳ ಸಭೆಗಳು ಪರಿಣಾಮಕಾರಿಯಾಗಿ ಉಪಯೋಗಿಸಲ್ಪಟ್ಟವು.
- ಬಲಯುತ ತೋರ್ಪಡಿಸುವಿಕೆಗಳು ಮತ್ತು ವಿಶ್ವಾಸಿಗಳನ್ನು ಸ್ಥಾಪಿಸಲು ಬಲಿಷ್ಟ ಬೋಧನೆಗಳ ಒಳ್ಳೆಯ ಸಮತೋಲನ ನಿರ್ವಹಿಸುವುದು.
- ಸಮುದಾಯದ ಪ್ರಜ್ಞೆ ಮತ್ತು ವಸ್ತುಗಳ ಹಂಚಿಕೆಯ ಬಲಿಷ್ಟವಾದ ಸ್ಥಾಪನೆ.
- ಆಂತರಿಕ ಕಲಹಗಳನ್ನು ಉತ್ತಮವಾಗಿ ಬಗೆಹರಿಸಲಾಯಿತು.
- ಪ್ರಾಥಮಿಕ ಅಡಿಪಾಯವನ್ನು ಇರಿಸಿಕೊಳ್ಳಲು ಅಪೊಸ್ತಲರು ಯೆರೂಸಲೇಮಿನಲ್ಲಿ ಉಳಿದುಕೊಂಡಿದ್ದರು.
- ಅಪೊಸ್ತಲರು ಮತ್ತು ಹಿರಿಯರ ದೈವಶಾಸ್ತ್ರದ ಸಮಸ್ಯೆಗಳನ್ನು ಉತ್ತಮವಾಗಿ ಬಗೆಹರಿಸಿದರು.
- ಎರಡನೇ ಮತ್ತು ಮೂರನೇ ನಾಯಕತ್ವದ ಸಾಲುಗಳನ್ನು ಎಬ್ಬಿಸಲು ಸ್ವಲ್ಪ ತಡವಾದಂತೆ ಕಂಡು ಬಂದಿತ್ತು ಬಹುಶಃ ಪ್ರಮುಖ ನಾಯಕತ್ವದ (ಅಪೊಸ್ತಲರು) ಮೇಲೆ ದೃಷ್ಟಿಯನ್ನಿರಿಸಿದಂತಿತ್ತು.
- ಅಪೊಸ್ತಲರು ನೇರವಾಗಿ ಹೊಸ ಸಭೆಗಳೊಂದಿಗೆ ತೊಡಗಿಸಿಕೊಳ್ಳದಿರುವುದು ಕಂಡುಬಂದಿತ್ತು.

## ನಿದರ್ಶನ ಅಧ್ಯಯನ: ಅಂತಿಯೊಕ್ಯದ ಸಭೆ

- ಹಿಂಸೆಯ ನಿಮಿತ್ತ ಯೆರೂಸಲೇಮಿನಿಂದ ಚದುರಿಸಲ್ಪಟ್ಟ ವಿಶ್ವಾಸಿಗಳಿಂದ ಪ್ರಾರಂಭಿಸಲ್ಪಟ್ಟಿತ್ತು.

- ಅಪ್ರಾಕೃತ ತೋರ್ಪಡಿಸುವಿಕೆಗಳ ಮೂಲಕ ಸ್ಥಾಪಿಸಲ್ಪಟ್ಟಿತ್ತು.
- ಅವರನ್ನು ಬಲಪಡಿಸಲು ಯೆರೂಸಲೇಮಿನ ಸಭೆಯಿಂದ (ಬಾರ್ನಬ) ಎಂಬ ನಾಯಕನನ್ನು ಪಡೆದುಕೊಂಡಿತ್ತು ಬಾರ್ನಬನು ಅಂತಿಯೋಕ್ಯ ಸಭೆಯ ಪ್ರಥಮ ''ಸಭಾಪಾಲಕ''ನಾಗಿ ಕಂಡುಬಂದನು.
- ಅವರನ್ನು ಬಲಪಡಿಸಲು ಬಾರ್ನಬನಿಂದ ಕರೆತರಲ್ಪಟ್ಟ (ಪೌಲ) ಎಂಬ ಮತ್ತೊಬ್ಬ ನಾಯಕನನ್ನು ಸ್ವಾಗತಿಸಿದರು.
- ಹೊಸ ವಿಶ್ವಾಸಿಗಳು ಬೋಧನೆಗಳ ಮೂಲಕ ಶಿಷ್ಯತ್ವ ಹೊಂದಿದ್ದರು.
- ಕ್ರಿಸ್ತನೊಂದಿಗೆ ಗುರ್ತಿಲ್ಪಟ್ಟ ವಿಶ್ವಾಸಿಗಳು ಮೊದಲ ಬಾರಿಗೆ ಅಂತಿಯೋಕ್ಯದಲ್ಲಿ ಕ್ರೈಸ್ತರೆಂದು ಕರೆಯಲ್ಪಟ್ಟರು.
- ಪ್ರವಾದನೆ ಸೇವೆಯನ್ನು ಪಡೆಯಿತು (ಯೆರೂಸಲೇಮಿನಿಂದ ಅಗಬನೆಂಬುವನು) ಅವರು ಇತರ ಸೇವಕರುಗಳು ಸಹ ಬರಲು ಮತ್ತು ಸಭೆಯ ಜೀವಿತಕ್ಕೆ ಪಾಲುಕೊಡಲು ಅವಕಾಶ ನೀಡಿದರು.
- ಸಮಾಜ ಸೇವೆಯಲ್ಲಿ ತೊಡಗಿಕೊಂಡರು - ಯೆರೂಸಲೇಮಿನ ಸಭೆಗೆ ಪರಿಹಾರ ಕಳುಹಿಸಿದರು.
- ಅಧಿಕವಾಗಿ ನಾಯಕರುಗಳು ಹೊರಹೊಮ್ಮುವುದನ್ನು ಕಂಡರು ಮತ್ತು ಸೇವಾ ತಂಡಗಳು ಎರಡು ವರ್ಷದಲ್ಲಿ ಅಭಿವೃದ್ಧಿ ಹೊಂದಿತು.
- ನಾಯಕರುಗಳು ಒಬ್ಬರಿಗೊಬ್ಬರು ಅನ್ಯೋನ್ಯತೆಯಲ್ಲಿದ್ದರು ಮತ್ತು ಕರ್ತನಿಗೆ ಸೇವೆಸಲ್ಲಿಸುತ್ತಿದ್ದರು
- ಸೇವಾ ಕಾರ್ಯಚರಣೆಯಲ್ಲಿ ತೊಡಗಿಸಿಕೊಂಡಿತ್ತು ಸಭೆಗಳನ್ನು ಸ್ಥಾಪಿಸಲು ಅಪೋಸ್ತಲಿಕ್ ತಂಡಗಳನ್ನು ಪ್ರವರ್ತಕವಾಗಿರಲು ಕಳುಹಿಸಿತು. ಅವರ ಹಿರಿಯ ನಾಯಕರುಗಳು ಅಪೊಸ್ತಲ ಸೇವೆಗೆ ಬಿಡುಗಡೆಗೊಂಡರು.
- ಅಪೊಸ್ತಲ ಸೇವೆಯಾಗಿ ಕಂಡುಬಂದಿತು, ಅಪೊಸ್ತಲರು, ಪ್ರವಾದಿಗಳು ಮತ್ತು ಸುವಾರ್ತ ಪ್ರಚಾರಕ ತಂಡಗಳಿಗೆ ಅಡಿಪಾಯವಾಯಿತು. (ಅಪೊಸ್ತಲರ ಕೃತ್ಯಗಳು 15:36)
- ಎರಡು ಪ್ರಮುಖ ನಾಯಕರುಗಳಾದ ಪೌಲ ಮತ್ತು ಬಾರ್ನಬನ ನಡುವಿನ ಭಿನ್ನಾಭಿಪ್ರಾಯವು ಈ ನಾಯಕರುಗಳ ಜೊತೆಯಲ್ಲಿರುವುದನ್ನುಪ್ರತ್ಯೇಕಿಸಲು ಕಾರಣವಾಯಿತು. ಬಹುಶಃ ಅಂತಿಯೋಕ್ಯ ಸಭೆಯಿಂದ ತಮ್ಮನ್ನು ಸಹ ದೂರವಿರಿಸಿಕೊಂಡರು (ಅಪೊಸ್ತಲರ ಕೃತ್ಯಗಳು 15:35-41) ಪೌಲನು

ಬಹಳ ದಿನಗಳ ನಂತರ ಭೇಟಿಕೊಡುವವರೆಗೂ (ಅಪೊಸ್ತಲರ ಕೃತ್ಯಗಳು 18:22) ಯಾವುದೇ ಸಮಯದಲ್ಲಿ ಅಂತಿಯೋಕ್ಯಕ್ಕೆ ಹಿಂತಿರುಗಿದರು ಎಂಬುದನ್ನು ನಾವು ಕೇಳುವುದಿಲ್ಲ. ಸಭೆಯ ಬಗ್ಗೆ ಹೆಚ್ಚು ಉಲ್ಲೇಖಿಸಲಾಗಿಲ್ಲ.

## ಬೆಳವಣಿಗೆಯ ಹಂತಗಳು

ಸ್ಥಳೀಯ ಸಭೆಯು ಸ್ಥಗಿತಗೊಂಡಿರಬಾರದು, ಅಥವಾ ಬೇರೆ ಎಲ್ಲಾ ಬಗೆಯ ಕೆಟ್ಟ ವಿಷಯಗಳಿಗೆ ತಳಿ ನೆಲವಾಗಬಾರದು. ಹರಿಯದೇ ನಿಂತ ನೀರು, ರೋಗಗಳನ್ನು ಉತ್ಪತ್ತಿ ಮಾಡುವ ಸ್ಥಳಗಳಾಗಿರುವಂತೆ.

ಸ್ಥಳೀಯ ಸಭೆಯು ಸಾಮಾನ್ಯವಾಗಿ ಹಾದು ಹೋಗುವಂತಹ ಹಲವಾರು ಬೆಳವಣಿಗೆಯ ಹಂತಗಳಿವೆ, ಇದು ಒಂದು ಉನ್ನತವಾದ ಕ್ಷೇತ್ರಕ್ಕೆ ಪ್ರಗತಿಯಲ್ಲಿ ಮುಂದುವರೆಯುವಾಗ ಬೆಳವಣಿಗೆಗಳಿವೆ. ಈ ಒಂದು ಪುಸ್ತಕದಲ್ಲಿ ಡಾ।। ಜೊನಾತನ್ ಡೇವಿಡ್ ರವರ ಸಭಯು ಸಾಮಾನ್ಯವಾಗಿ ಪ್ರಗತಿಯ ಮೂಲಕವಾಗಿರುವ ಹಲವಾರು ಹಂತಗಳ ರೂಪು ರೇಖೆಯನ್ನು ರಾಷ್ಟ್ರಗಳ ಮೇಲೆ ಪರಿಣಾಮ ಬೀರುವ ಅಪೊಸ್ತಲಿಕ್ ಅಂಕಿ ಅಂಕಗಳನ್ನು ನೋಡುತ್ತೇವೆ, ನಾವು  ಇದರ ಪ್ರಮುಖ ಅಂಶಗಳನ್ನು ಅಳವಡಿಸಿಕೊಂಡಿದ್ದೇವೆ.

## ಪ್ರವರ್ತಕ ಹಂತ

- ಸಭೆಯನ್ನು ಸ್ಥಾಪಿಸುವ ತಂಡ ಮತ್ತು ಕರ್ತನು ನಾಯಕರುಗಳನ್ನು ಕಳುಹಿಸಿದಂತಹ ಪ್ರದೇಶದ ಬದ್ಧತೆಯನ್ನು ಸ್ಥಾಪಿಸಿದ್ದರು.
- ಪ್ರಾರ್ಥನೆ, ಮಧ್ಯಸ್ಥಿಕೆ, ಸಂಧಿಸುವುದು, ಸಂಧಿಸಲ್ಪಟ್ಟಂತಹ ಸಮುದಾಯಗಳಿಗೆ ಸಂಪರ್ಕ ಸೇತುವೆ ಕಟ್ಟುವುದರ ಮೂಲಕವಾಗಿ ತಳಪಾಯ ಹಾಕುವುದು.
- ಇದು ಅಸ್ತಿವಾರವನ್ನು ಹಾಕುವಂತಹ ಹಂತ. ನೀವು ಮೇಲೆ ಹೋಗುವ ಬದಲು, ಕೆಳಗೆ ಹೋಗುವುದಾಗಿದೆ ಆದರೆ ಬಲಿಷ್ಟ ಮತ್ತು ಆಳವಾದ ಅಸ್ತಿವಾರವು ಅದರ ಭವಿಷ್ಯತ್ತಿನ ಅಭಿವೃದ್ಧಿಗೆ ಅಗತ್ಯವಾಗಿದೆ. ವಿಶಿಷ್ಟವಾಗಿ ನೀವು ಅತಿ ಎತ್ತರವಾಗಿ ಕಟ್ಟುತ್ತಿದ್ದರೆ, ಅಸ್ತಿವಾರವನ್ನು ಹಾಕಲು ಅತೀ ಆಳವಾಗಿ ಅಗೆಯಬೇಕು

## ಆಡಳಿತಾತ್ಮಕ/ ಸಾಂಸ್ಥಿಕ/ ರಚನಾತ್ಮಕ ಹಂತ

- ಸಭಿಕರು ಬೆಳೆಯಲು ಪ್ರಾರಂಭಿಸಿದಾಗ, ಜನರಿಗೆ ಸೇವೆ ಮಾಡಲು ಕಾರ್ಯವಿಧಾನಗಳನ್ನು ಮತ್ತು ಉತ್ತಮವಾಗಿ ವ್ಯಾಖ್ಯಾನಿಸಲಾದ ವ್ಯವಸ್ಥೆಯನ್ನು ಸ್ಥಾಪಿಸುವುದು.

- ನಮ್ಮ ಮಧ್ಯದಲ್ಲಿ ಕರ್ತನು ಬಿಡುಗಡೆಗೊಳಿಸುವ ವಿವಿಧ ಸೇವೆಗಳಿಗಾಗಿ ಪಾತ್ರಗಳು ಮತ್ತು ಕಾರ್ಯಗಳನ್ನು ನಿಗದಿಮಾಡಿರಿ. ನಿಮ್ಮ ಸೇವಾತಂಡಕ್ಕಾಗಿ ದೈವಿಕ ಗುಣಮಟ್ಟ ಮತ್ತು ಮಾರ್ಗದರ್ಶನಗಳನ್ನು ಸ್ಥಾಪಿಸಿರಿ, ಆದ್ದರಿಂದ ಹೊಸದಾಗಿ ಬರುವ ಸದಸ್ಯರುಗಳು ಇಂತಹ ಮೌಲ್ಯಗಳನ್ನು ಎತ್ತಿಹಿಡಿಯುವರು
- ಸಂಖ್ಯೆಯಲ್ಲಿ ಹೆಚ್ಚಾದಾಗ ಮಾಡಬೇಕೆಂದಿರುವುಗಳನ್ನು ಈಗಲೇ ಮಾಡಿರಿ. 50 ಜನರ ಹಾಜರಾತಿ ಇರುವಲ್ಲಿ ಎಲ್ಲವನ್ನು ಕಾರ್ಯರೂಪಗೊಳಿಸಿರಿ 500 ಜನರು ಅಥವಾ 5000 ಜನರುಗಳಾದಾಗ ನೀವು ಅದನ್ನು ನಿರ್ವಹಿಸಬಹುದು.
- ಹೊಸ ಸೇವೆಗಳು ಒಂದು ಅಥವಾ ಎರಡು ಮಾರ್ಗಗಳಲ್ಲಿ ಆತ್ಮನಲ್ಲಿ ಜನಿಸಿರಬಹುದು: ಏನು ಮಾಡಾಬೇಕೆಂಬುದರ ಬಗ್ಗೆ ಕರ್ತನು ದರ್ಶನ ಕೊಡುತ್ತಾನೆ ಮತ್ತು ನೀವು ಆ ದರ್ಶನವನ್ನು ಘೋಷಿಸುವಂತೆ, ಜನರು ಅದರಲ್ಲಿ ಹೆಜ್ಜೆಯನ್ನಿಡುವಂತೆ ಮತ್ತುಅದನ್ನು ಕೊಂಡೊಯ್ಯುವಂತೆ ದೇವರ ಜನರನ್ನು ಪ್ರೇರಿಸುತ್ತಾನೆ. ಕರ್ತನು ಜನರನ್ನು ಎಬ್ಬಿಸುತ್ತಾನೆ ಅಥವಾ ನಿರ್ದಿಷ್ಟ ವರಗಳು ಮತ್ತು ಕರೆಗಳಿಂದ ಅವರನ್ನು ಕಳುಹಿಸುತ್ತಾನೆ. ಮತ್ತು ನೀವು ಇದನ್ನು ಗುರ್ತಿಸುತ್ತೀರಿ ಮತ್ತು ಅವರು ಕಾರ್ಯರೂಪುಗೊಳ್ಳಲು ಅವಕಾಶ ಕಲ್ಪಿಸಿರಿ ಮತ್ತು ಹೊಸ ಸೇವೆ ಅಥವಾ ಸೇವೆಗಳು ಜನ್ಮ ತಾಳುತ್ತವೆ.

## ಸಭಾಪಾಲಕ ತಂಡದ ಹಂತ / ಸೇವಾ ತಂಡ / ಹಿರಿಯ ಸಭಾಪಾಲಕರ ಹಂತ

- ಸೇವೆಯು ಅನೇಕ ಕ್ಷೇತ್ರಗಳಲ್ಲಿ ಕೊಂಡೊಯ್ಯಲು ನಾಯಕತ್ವದ ತಂಡವನ್ನುಸ್ಥಾಪಿಸಿರಿ.
- ಸ್ಥಾಪಕ ಸಭಾ ಪಾಲಕರು ಒಟ್ಟಾರೆ ದರ್ಶನವನ್ನು ಒದಗಿಸುವ ಮತ್ತು ಬೆಳವಣಿಗೆ ಮತ್ತು ವಿಸ್ತರಣೆಗೆ ಮಾರ್ಗದರ್ಶಿಸುವ ಹಿರಿಯ ಸಭಾಪಾಲಕ ಪಾತ್ರಕ್ಕೆ ಬರುತ್ತಾರೆ.
- ದೇವರು ಕೊಡಲ್ಪಟ್ಟ ದರ್ಶನಕ್ಕೆ ಬದ್ಧವಾಗಿರುವ ಮತ್ತು ಅರ್ಥ ಮಾಡಿಕೊಳ್ಳುವ ನಾಯಕರುಗಳನ್ನು ಅಭಿವೃದ್ದಿ ಪಡಿಸಲು ಅವಕಾಶಗಳನ್ನು ಮತ್ತು ಸ್ಥಳವಕಾಶ ನಿರಂತರವಾಗಿ ಸೃಷ್ಟಿಸಿರಿ. ಹೊಸ ನಾಯಕರುಗಳನ್ನು ಪೋಷಿಸುವುದರಲ್ಲಿ ಸಮಯ ಕಳೆಯಿರಿ.
- ಅಧಿಕವಾಗಿ ಭರವಸೆ ನೀವು ಕೊಟ್ಟರೆ, ನಿಮ್ಮ ನಾಯಕರುಗಳು ಅಧಿಕವಾಗಿ ನಂಬಿಗಸ್ತರಾಗಿರುತ್ತಾರೆ.

## ಸಜ್ಜುಗೊಳಿಸುವ ಹಂತ/ಕಟ್ಟುವ ಹಂತ / ತರಬೇತುದಾರ ಹಂತ

- ವಿಶ್ವಾಸಿಗಳನ್ನು ಸಜ್ಜುಗೊಳಿಸುವುದರ ಮೇಲೆ ದೃಷ್ಟಿಯಿಡಿರಿ ಆದ್ದರಿಂದ ಸಂಪೂರ್ಣ ಸಭೆಯ ಸೇವೆಯಲ್ಲಿ ಸಜ್ಜುಗೊಳ್ಳುತ್ತದೆ ಬರೀ ನಾಯಕರು ಮಾತ್ರವೇ ಸೇವೆ ಮಾಡುವುದಲ್ಲ ಆದರೆ ಎಲ್ಲರೂ ತೊಡಗಿಸಿಕೊಳ್ಳುವುದಾಗಿದೆ.
- ಅಪ್ರಾಕೃತ ಸೇವೆಯ ಮೇಲೆ ಒತ್ತು ನೀಡಿರಿ ಮತ್ತು ಎಲ್ಲರನ್ನು ಸೂಚಕಕಾರ್ಯಗಳು ಮತ್ತು ಮಹತ್ಕಾರ್ಯಗಳು ಮತ್ತು ಪ್ರವಾದಿಯ ಕ್ಷೇತ್ರಕ್ಕೆ ಚಲಿಸುವಂತೆ ಮಾಡಬೇಕು
- ಹಿರಿಯ ಸಭಾಪಾಲಕರು ಸಜ್ಜುಗೊಳಿಸುವುದರ ಮೇಲೆ ಮತ್ತು ಪಾಲುಕೊಡುವುದರ ಮೇಲೆ ದೃಷ್ಟಿಯಿಡಬೇಕು ಆದರೆ ಹೆಚ್ಚಿನ ಸಭಾಪಾಲಕ/ಕಾಳಜಿಯ ಸೇವ ಇತರ ಸಭಾಪಾಲಕ ತಂಡದಿಂದ ಒದಗಿಸಲ್ಪಡುತದೆ.
- ಸಭೆಯ ಸಮುದಾಯವನ್ನು ಭೇದಿಸಿಕೊಂಡು ಹೋಗಲು ಪ್ರಾರಂಭವಾಗುತ್ತದೆ. ಮತ್ತು ಸೇವೆಗಾಗಿ ದರ್ಶನವನ್ನು ಹಿಡಿದುಕೊಳ್ಳುತ್ತದೆ.
- ವಿಶ್ವಾಸಿಗಳು ಒಬ್ಬರಿಗೊಬ್ಬರು ಮತ್ತು ಲೋಕಕ್ಕೆಲ್ಲಾ ಸೇವೆಯನ್ನು ಮಾಡುತ್ತಾರೆ.

## ಅಪೊಸ್ತಲಿಕ್ ಕಾರ್ಯರೂಪದ ಹಂತ

- ಅಪೊಸ್ತಲತ್ವದ ಮನಸ್ಸು ಸ್ಥಾಪಿಸುವುದು ಆಂತರಿಕ ಕಾಳಜಿಗೆ ಬದಲು ಬಾಹ್ಯ-ಗಮನ ಇತರ ಎಲ್ಲಾ ಕಾರ್ಯರೂಪಗಳು ವಿಶ್ವಾಸಿಗಳನ್ನು ಸಜ್ಜುಗೊಳಿಸಲು ಸ್ಥಳದಲ್ಲಿವೆ.
- ಹಿರಿಯ ಸಭಾಪಾಲಕರು ಮತ್ತು ಇತರರು ಹೊರಗೆ ಹೋಗಲು ಸ್ವತಂತ್ರವಾಗಿರುತ್ತಾರೆ. ಮತ್ತು ದೇವರ ರಾಜ್ಯಕ್ಕಾಗಿ ಹೊಸ ಪ್ರದೇಶವನ್ನು ಸಂಪಾದಿಸಿಕೊಳ್ಳುತ್ತಾರೆ.
- ಸಭೆಯು ಸ್ವತಃ ತಾನೇ ತನ್ನ ಪ್ರದೇಶ ಮತ್ತು ಅದಕ್ಕೂ ಮೀರಿ ಸಕ್ರಿಯವಾಗಿ ಪುನರುತ್ಪಾದಿಸುತ್ತದೆ.
- ವಿಶ್ವಾಸಿಗಳು ಅಪೊಸ್ತಲತ್ವದ ಮನಸ್ಸು ಹೊಂದಿರುತ್ತಾರೆ ಮತ್ತು ತ್ಯಾಗ ಮಾಡಲು ಸಿದ್ಧರಾಗಿರುತ್ತಾರೆ. ಹೊಸ ಸ್ಥಳಗಳಿಗೆ ಹೋಗಬೇಕು ಮತ್ತು ಇತರ ಪ್ರದೇಶಗಳಲ್ಲೂ ದೇವರ ರಾಜ್ಯವನ್ನು ವಿಸ್ತರಿಸಬೇಕು.
- ಸ್ಥಳೀಯ ಸಭೆಯ ಆತ್ಮಿಕ ನರ್ಸರಿಯ ಬದಲಿಗೆ ಸೇವೆ-ಆಧಾರಿತ ಇರುವಂತದ್ದಾಗಿ ಕಂಡುಬರುತ್ತದೆ.

## ವಿವಿಧ ಹಂತಗಳ ಮೂಲಕವಾಗಿ ಸಭಿಕರನ್ನು ನಡೆಸಬೇಕು

ಸಭಾಪಾಲಕರುಗಳಾಗಿ, ನಮ್ಮ ಸಭಿಕರುಗಳನ್ನು (ಸ್ಥಳೀಯ ಸಭೆ) ವಿವಿಧ ಪರಿವರ್ತನೆಗಳ ಮೂಲಕ ಮಾರ್ಗದರ್ಶಿಸಲು ಅಭಿಷೇಕ ಕೃಪೆ ಮತ್ತು ಹೆಚ್ಚಿನ ಜ್ಞಾನದ ಅವಶ್ಯಕತೆ ಬೇಕಾಗಿದೆ. ಬದಲಾವಣೆಯು ಅಗತ್ಯವಾಗಿದೆ. ಆಗ ಮಾತ್ರ ಸಭೆಯ ಬೆಳೆಯುತ್ತದೆ ಮತ್ತು ಪ್ರಬುದ್ಧಗೊಳ್ಳುತ್ತದೆ ಸಭಾಪಾಲಕರು/ ಹಿರಿಯನಾಯಕರುಗಳಾದ ನಾವುಗಳು ಬದಲಾಗಬೇಕು ಮತ್ತು ಸಭಿಕರು ಸಹ ಬದಲಾಗಬೇಕು. ನಾಯಕರುಗಳಾಗಿ ಸಂಪೂರ್ಣವಾಗಿ ಸಭಾಪಾಲಕರ ಪರಿಪಾಲನೆಯಿಂದ ಅಪೊಸ್ತಲತ್ವದ ನಾಯಕತ್ವದ ಕಡೆಗೆ ಚಲಿಸಬೇಕು. ಸಂಪೂರ್ಣವಾಗಿ ಕಾಳಜಿ ಮತ್ತು ಪರಿಪಾಲನೆ ಹೊಂದಬೇಕೆಂಬುದಾಗಿ ಇರುವ ಜನರಾಗಿರುವ ಬದಲು ನಮ್ಮ ಸಭಿಕರೆಲ್ಲರೂ ದೇವರ ರಾಜ್ಯಕ್ಕಾಗಿ ಹೊಸ ಜಾಗಗಳನ್ನು ತೆಗೆದುಕೊಳ್ಳುವ ಮತ್ತು ಹೊರ ಹೋಗುವ ಪ್ರವರ್ತಕ ಆತ್ಮವನ್ನು ಮತ್ತು ಯುದ್ಧನಿರತರಾಗಿರುವಂತಹ ಅಪೊಸ್ತಲತ್ವದ ಜನರುಗಳಾಗಬೇಕು.

ಸಮುದಾಯದಲ್ಲಿ ಮತ್ತು ಅದಕ್ಕೂ ಮಿತಿಮೀರಿ, ಸ್ಥಳೀಯ ಸಭೆಯು ಉಪ್ಪು ಮತ್ತು ಬೆಳಕಾಗಿರುವುದು ಅಗತ್ಯಕರವಾಗಿದೆ.

ಈ ಒಂದು ಪ್ರಯಾಣವನ್ನು ನಾವು ಮಾಡುವಾಗ ಸಹಾಯಕರವಾದ ಕೆಲವು ತೋರಿಸುವಿಕೆಗಳು ಇಲ್ಲಿವೆ.

### *ನಿರಂತರವಾಗಿ ಜನರು ಮುಂದೆ ಚಲಿಸಲಿ*

ಜನರು ಹೋಗಬೇಕಾದ ಸ್ಥಳಕ್ಕೆ ತೋರಿಸಿರಿ. ನಾವು ಇರುವಂತಹದರಲ್ಲಿ ಆರಾಮದಾಯಕವಾಗಿರಬೇಕು ಮತ್ತು ಅಲ್ಲಿಯೇ ನೆಲೆಗೊಳ್ಳಲು ಇಷ್ಟಪಡುತ್ತೇವೆ, ಆದಾಗ್ಯೂ ಈ ಒಂದು ಕಾರ್ಯರೂಪವನ್ನು ಹೊಂದಬೇಕಾದರೆ ಇಲ್ಲಿ ಮತ್ತು ಈಗಿನವುಗಳು ಹೋಗಲಿ ಎಂಬುದಾಗಿ ಸಿದ್ಧರಿರಬೇಕು ಮತ್ತು ಮುಂದೇನು ಎಂಬುದರಲ್ಲಿ ಪ್ರಯಾಣಿಸಬೇಕು ನಾಯಕರುಗಳಾಗಿ, ಮೇಲೇರಲು ಹೊಸ ಹಂತಗಳಿವೆ ಮತ್ತು ಒತ್ತಿಕೊಂಡಿರಲೂ ನಮಗಾಗಿರುವ ಹೊಸ ಕ್ಷೇತ್ರಗಳಿವೆ ಎಂಬುದಾಗಿ ನಿರಂತರವಾಗಿ ಜನರಿಗೆ ನೆನಪಿಸುತ್ತಿರಬೇಕು.

### *ಎರಡು ಹಂತಗಳ ನಡುವೆ ಸೇತುವೆ*

ಜನರು ಎಲ್ಲಿರುವರೋ ಅಲ್ಲಿಯೇ ಸೇವೆ ಸಲ್ಲಿಸಬೇಕು ಮತ್ತು ಮುಂದಿನ ಹಂತಕ್ಕೆ ಅವರನ್ನು ಹಿಗ್ಗಿಸಬೇಕು. ಆತ್ಮಿಕವಾಗಿ ಜನರನ್ನು ಮುಂದಿನ ಹಂತಕ್ಕೆ ಎಳೆಯಲು

ನಾವುಗಳು ಉದ್ದೇಶಪೂರ್ವಕವಾಗಿರಬೇಕು. ಆದುದರಿಂದ ನಮ್ಮ ಬೋಧನೆಗಳು ಮತ್ತು ಸಂದೇಶಗಳು, ಅವರ ಆತ್ಮಿಕ ಸಾಮರ್ಥ್ಯವನ್ನು ಹಿಗ್ಗಿಸಬೇಕು ನಾವು ಮಗುವಿಗೆ ಹಾಲನ್ನೂ ಕೊಡುವ ಮೂಲಕ ಪ್ರಾರಂಭಿಸುತ್ತೇವೆ. ಆದರೆ ನಾವು ನಿಧಾನವಾಗಿ ಅರೆ-ಗಟ್ಟಿಯಾದ (ಹಿಸುಕಿದ) ಆಹಾರ ಆಮೇಲೆ ಗಟ್ಟಿಯಾದ ಆಹಾರ ಮುಂತಾದವುಗಳನ್ನು ಪರಿಚಯಿಸುತ್ತೇವೆ. ಅದೇ ರೀತಿಯಾಗಿ, ದೇವರ ಜನರನ್ನು ಸತ್ಯದಲ್ಲಿ ಆಳವಾದ ಹಂತಕ್ಕೆ ಆತ್ಮನಲ್ಲಿ ಎತ್ತರವಾದ ಕ್ಷೇತ್ರಕ್ಕೆ ಆರಾಧನೆಯಲ್ಲಿ ಎತ್ತರವಾದ ಕ್ಷೇತ್ರಕ್ಕೆ ಪ್ರಾರ್ಥನೆ ಮತ್ತು ಮಧ್ಯಸ್ಥಿಕೆ ಮತ್ತು ದೇವರ ರಾಜ್ಯದ ಪ್ರಗತಿಗಾಗಿ ಅಧಿಕವಾದ ಆಕ್ರಮಣಕ್ಕಾಗಿ ಚಳುವಳಿಯ ಹಂತಕ್ಕೆ ಕರೆದೊಯ್ಯುವುದು ಅವಶ್ಯವಾಗಿದೆ. ಮೊದಲ ಹೆಜ್ಜೆಯಿಂದ ಹತ್ತನೇ ಹೆಜ್ಜೆಗೆ ನಾವು ನೆಗೆಯಲು ಸಾಧ್ಯವಿಲ್ಲ ಆದ್ದರಿಂದ ನಾವು ನಿಧಾನವಾಗಿ ಏರುತ್ತೇವೆ. ಆದಾಗ್ಯೂ ಹಂತ ಹಂತವಾಗಿ ಸ್ಥಿರವಾಗಿ ಹೆಜ್ಜೆ ಹಾಕಿರಿ.

## ಪ್ರಮುಖ ಬದಲಾವಣೆ

ಪರಿವರ್ತನೆಗೆ ಇದು ಸಮಯ ಎಂಬುದಾಗಿ ನಾವು ತಿಳಿದಾಗ, ನಾಯಕರುಗಳಾಗಿ ನಾವುಗಳು ಸಭಿಕರುಗಳ ಪರಿವರ್ತನೆಗಾಗಿ ಸಹಾಯ ಮಾಡಲು ಹೆಜ್ಜೆಯನ್ನಿಡಬೇಕು. ಪರಿವರ್ತನೆಯ ಹಾದಿಯನ್ನು ನಾವು ದಾಟಿ ಹೋಗುವಾಗ ಹೆಚ್ಚಿನ ತಾಳ್ಮೆಯನ್ನು ನಾವು ಅಭ್ಯಸಿಸುವುದು ಅವಶ್ಯವಾಗಿದೆ.

ಸಭಿಕರಲ್ಲಿ, ವಿಭಿನ್ನ ಜನರೊಡನೆ ವಿಭಿನ್ನ ಪ್ರತಿಕ್ರಿಯೆಗಳನ್ನು ನಾವು ಎದುರಿಸಬಹುದು. ಕೆಲವೊಮ್ಮೆ ಜನರು ಬದಲಾವಣೆಯ ಅವಶ್ಯಕತೆ ಕಾಣುವುದಿಲ್ಲ ಕೆಲವೊಮ್ಮೆ ಜನರು ಬದಲಾವಣೆಗೆ ಸಿದ್ಧರಾಗಿರುವುದಿಲ್ಲ ದೇವರ ಜನರು ಯಾವ ಹಂತಕ್ಕೆ ಹೋಗಬೇಕು ಮತ್ತು ಆತನ ಜನರು ಏನಾಗಿ ಕಂಡು ಬರಬೇಕೆಂಬುದಾಗಿ ದೇವರು ಅಪೇಕ್ಷಿಸುತ್ತಾನೆ ಎಂಬುದನ್ನು ವಾಕ್ಯದಿಂದ ಜನರಿಗೆ ತಾಳ್ಮೆಯಿಂದ ತೋರಿಸಬೇಕು. ದೇವರ ಉದ್ದೇಶಗಳ ಕಡೆಗೆ ಚಲಿಸುತ್ತಿದ್ದೇವೆ ಎಂಬುದನ್ನು ನೋಡಲು ಜನರಿಗೆ ಸಹಾಯ ಮಾಡಿರಿ.

ಯಾವಾಗಲೂ ಅಪಾಯ ತೆಗೆದುಕೊಳ್ಳುವುದನ್ನು ಬದಲಾವಣೆಯು ಬಯಸುತ್ತದೆ. ಬದಲಾವಣೆಗಾಗಿ ಸಿದ್ದವಾಗಿರುವಂತೆ ಜನರಿಗೆ ಸಹಾಯ ಮಾಡಿರಿ.

## ***ಸರಿಯಾದ ಸಮಯದಲ್ಲಿ ಸರಿಯಾದ ಸ್ಥಳದಲ್ಲಿ ಸರಿಯಾದ ಜನರು***

ಕೆಲವೊಮ್ಮೆ ಬದಲಾವಣೆ ಜರುಗುವ ಕ್ರಮದಲ್ಲಿ ಕೆಲವು ಸೇವಾ ಕ್ಷೇತ್ರಗಳ ಮೇಲೆ ನಾಯಕತ್ವವನ್ನು ಬದಲಾಯಿಸುವ ಅವಶ್ಯಕತೆಯಿರುತ್ತದೆ ಬಹುಶಃ ಪ್ರಸಕ್ತ ನಾಯಕರು ಅವರ ಭಾವಣೆಗಳನ್ನು ತಲುಪಿದ್ದಾರೆ ಮತ್ತು ಸಾಧ್ಯವಿಲ್ಲದವರಾಗಿ ಅಥವಾ ಮುಂದಿನ ಹಂತಕ್ಕೆ ವಿಷಯಗಳು ಚಲಿಸುವಂತೆ ಮಾಡಲು ಇಷ್ಟವಿಲ್ಲದವರಾಗಿದ್ದಾರೆ. ನಾವು ಇದನ್ನು ಗುರ್ತಿಸಲು ಶಕ್ತರಾಗಿರಬೇಕು ಮತ್ತು ಅಧಿಕವಾದ ಕೃಪೆ, ಜ್ಞಾನದಿಂದ, ಹೊಸದಾದ ಹಂತಗಳಿಗೆ ವಿಷಯಗಳನ್ನು ಮೇಲೇರುವಂತೆ, ಮಾಡುವ ಸೇವಾಕ್ಷೇತ್ರದಲ್ಲಿ ಜವಾಬ್ದಾರಿಯುಳ್ಳ ಹೊಸ ನಾಯಕರುಗಳಿಗೆ ಅವಕಾಶ ಕಲ್ಪಿಸಿಕೊಡಬೇಕು.

## ***ಹೊಸ ಹಂತಗಳ ಸವಾಲುಗಳಿಗೆ ಅಳವಡಿಸಿಕೊಳ್ಳುವುದು.***

ನೀವು ಹೊಸ ಹಂತದ ಬೆಳವಣಿಗೆಗೆ ಬದಲಾವಣೆ ಹೊಂದಿದ ಪ್ರತಿ ಸಮಯದಲ್ಲೂ ಹೊಸ ಬಗೆಯ ಸವಾಲುಗಳಿರುತ್ತವೆ. ಸಿದ್ಧವಾಗಿರಿ. ನೀವು ನಾಯಕರಾಗಿ ನಿಮ್ಮನ್ನು ಸಿದ್ಧಪಡಿಸಿಕೊಳ್ಳುವಾಗ ನೀವು ಖಂಡಿತವಾಗಿ ಅಂತಹ ಸವಾಲುಗಳಿಗಾಗಿ ಏರಿಕೆಯಾಗಲು ಶಕ್ತರಾಗುತ್ತೀರಿ. ದೇವರ ಜ್ಞಾನ ತೆಗೆದುಕೊಳ್ಳಿರಿ ಬೇರೊಬ್ಬ ಪ್ರಬುದ್ಧ ಮತ್ತು ಅನುಭವವುಳ್ಳ ದೇವರ ಸೇವಕರ ಸಲಹೆಗಳನ್ನು ತೆಗೆದುಕೊಳ್ಳಿರಿ. ಉದಾಹರಣೆಗೆ ನಿಮ್ಮ ಸಭಿಕರು ಅಧಿಕವಾಗಿ ಪ್ರವಾದನೆಯಲ್ಲಿ ಕಂಡುಬರಲು ನೀವು ಅವರನ್ನು ಚಲಿಸುವಂತೆ ಮಾಡಿದರೆ ದೇವರಿಂದ ಕೇಳಲು ದೇವರು ಹೇಳುತ್ತಿರುವುದನ್ನು ಮಾಡಲು ಮಾತಾಡಲೂ, ಇಂತಹ ಸತ್ಯದೊಡನೆ ಯಾರು ಸ್ಪರ್ಶದಿಂದ ಹೋಗುವಂತಹ ಕೆಲವು ಜನರನ್ನು ನಾವು ಹೊಂದಿರಬೇಕು. ಅವರು ಪ್ರತಿಯೊಂದಕ್ಕೂ ''ದೇವರು ನನಗೆ ಹೇಳಿದ್ದಾನೆ'' ಎಂಬ ನುಡಿಗಟ್ಟನ್ನು ಉಪಯೋಗಿಸಬಹುದು, ದೇವರ ವಾಕ್ಯದಿಂದ ಬೋಧನೆಗಳನ್ನು ಮತ್ತು ದೈವಿಕ ಸಲಹೆಗಳನ್ನು ಕೇಳಲು ಇಷ್ಟವಿಲ್ಲದವರಾಗಿ ಕಂಡುಬರುತ್ತಾರೆ. ಜನರು ಪ್ರವಾದನೆಗಳನ್ನು ಪರೀಕ್ಷಿಸುವುದಿಲ್ಲ ಮತ್ತು ತೊಂದರೆಯಲ್ಲಿ ಕೊನೆಗೊಳ್ಳುತ್ತಾರೆ. ಆದ್ದರಿಂದ ಇಂತಹ ಪರಿವರ್ತನೆಯೊಡನೆ ಸವಾಲುಗಳಿರುತ್ತವೆ. ಆದಾಗ್ಯೂ ಇದು ನಮ್ಮನ್ನು ಪ್ರವಾದನಾಕ್ಷೇತ್ರಕ್ಕೆ ಒತ್ತಿಕೊಂಡಿರುವ, ದೇವರಿಂದ ನಿಖರವಾಗಿ ಕೇಳುವುದನ್ನು ಕಲಿಯುವ ಮತ್ತು ಆತ್ಮನು ಹೇಳುವುದರೊಡನೆ ಚಲಿಸುವುದರಿಂದ ನಮ್ಮನ್ನು ಇಟ್ಟುಕೊಳ್ಳುವುದಿಲ್ಲ.

ಒಟ್ಟಾರೆ, ಸ್ಥಳೀಯ ಸಭೆಯನ್ನು ವಿವಿಧ ಬೆಳವಣಿಗೆ ಮತ್ತು ಅಭಿವೃದ್ಧಿಯ ಹಂತಗಳ ಮೂಲಕವಾಗಿ ನಡೆಸುವುದು ಸವಾಲು ಹೊಂದಿರುವಂತದ್ದು ಆದರೆ ಬಹಳ ಪ್ರಚೋದಕವಾಗಿರುವಂತದ್ದು ನಾವು ಹಿಂತುರಿಗೆ ನೋಡುವಂತದ್ದು, ನಾವು ಎಲ್ಲಿದ್ದೆವೊ ದೇವರು ನಮ್ಮನ್ನು ಎಲ್ಲಿಗೆ ತಂದಿದ್ದಾನೆ ಎಂಬುದನ್ನು ನೋಡುವಾಗ ನಮ್ಮ ಹೃದಯವು ಹೆಚ್ಚ ಕೃತಜ್ಞತೆಯಿಂದ ಯಾವಾಗಲೂ ತುಂಬಿರುತ್ತದೆ ಮತ್ತು ಕರ್ತನ ಕಡೆಗೆ ವಿಸ್ಮಯವುಳ್ಳವರಾಗಿರುತ್ತದೆ ಮತ್ತು ಆಮೇಲೆ ಭವಿಷ್ಯವನ್ನು ಕಲ್ಪಿಸಿಕೊಳ್ಳಿರಿ ಮತ್ತು ಅದರಲ್ಲಿ ಒತ್ತಿಕೊಂಡಿರ್ರಿ, ಸ್ವತಃ ಇದು ಒಂದು ದೊಡ್ಡ ಸಾಹಸ ಆಗಿದೆ.

# 5

# ಪ್ರಬಲ ಸ್ಥಳೀಯ ಸಭೆಯನ್ನಾಗಿ ಮಾಡುವುದು ಯಾವುದು

ನಾವು ದೊಡ್ಡ ಸಭಿಕರನ್ನು ಹೊಂದಿದವರಾಗಿ ಕಂಡುಬರುವುದಕ್ಕೆ ದೃಷ್ಟಿಸುವ ಮೊದಲು ನಾವು ಪ್ರಬಲ ಸ್ಥಳೀಯ ಸಭೆಯಾಗಿರುವುದರ ಮೇಲೆ ಗಮನಹರಿಸಬೇಕು. ಸ್ಥಳೀಯ ಸಭೆಯ ಅಂಗಕ್ಕೆ ಬಲವನ್ನು ನಾವು ಕಟ್ಟಬೇಕು, ಪ್ರಬಲವಾದ ಸ್ಥಳೀಯ ಸಭೆಯು ಸ್ವಾಭಾವಿಕವಾಗಿ ಬೆಳೆಯುತ್ತದೆ. ಮತ್ತು ಅದರ ಸಮುದಾಯದ ಮತ್ತು ಪ್ರದೇಶದ ಮೀರಿ, ಅದರ ಮೇಲೆ ಪ್ರಭಾವ ಮತ್ತು ಪರಿಣಾಮವನ್ನು ಬೀರುತ್ತದೆ.

ಶಿಶುಗಳಂತೆ ಉಳಿದಿರುವ ದೊಡ್ಡ ಸಂಖ್ಯೆಯ ಜನರನ್ನು ನಾವು ಹೊಂದಿದ್ದರೆ, ಅವರ ಅಗತ್ಯತೆಗಳನ್ನು ಪೂರೈಸಲು ನಿರಂತರವಾಗಿ ನಮ್ಮ ಗಮನ ಹರಿಸುವಂತಹ ದೊಡ್ಡ ನರ್ಸರಿಯನ್ನು ನಾವು ಹೊಂದಿರುತ್ತೇವೆ. ಆದಾಗ್ಯೂ ಬಲಿಷ್ಟವಾದ ಸಭಿಕರನ್ನು ನಾವು ಹೊಂದಿದ್ದರೆ ಅವರು ಹೊರಗೆ ಹೋಗಲು ಶಕ್ತರಾಗಿರುತ್ತಾರೆ ಮತ್ತು ದೇವರ ರಾಜ್ಯಕ್ಕಾಗಿ ಅಧಿಕವಾದದ್ದನ್ನು ಮಾಡುತ್ತಾರೆ. ದೇವರ ರಾಜ್ಯವನ್ನು ವಿಸ್ತರಿಸುವ ಬಲಿಷ್ಟ ಸೈನ್ಯವಾಗಿ ನಾವು ಕಂಡುಬರುತ್ತೇವೆ

ಬಲಿಷ್ಟ ಸ್ಥಳೀಯ ಸಭೆಯ ಕೆಲವು ಪ್ರಾಮುಖ್ಯ ಗುಣಲಕ್ಷಣಗಳು ಇಲ್ಲಿವೆ

## ದೇವ-ದತ್ತ ದರ್ಶನದೊಡನೆ ಬಲವಾದ ನಾಯಕತ್ವವಿರುವ ಒಂದು ಸಭೆ

ಸ್ಥಳೀಯ ಸಭೆಯು ಏನಾಗಿ ಕಂಡುಬರಬೇಕೆಂಬುದಾಗಿ ಕರ್ತನು ಬಯಸುವ ಮತ್ತು ಕರ್ತನು ಸ್ಥಳೀಯ ಸಭೆಯಲ್ಲಿ ಮತ್ತು ಅದರ ಮೂಲಕವಾಗಿ ಏನನ್ನು ಮಾಡಬೇಕೆಂಬುದಾಗಿ ಬಯಸುತ್ತಾನೋ ಅದರ ದೈವ-ದತ್ತ ದರ್ಶನವನ್ನು ಹೊಂದಿರುವಂತದ್ದು ಪ್ರಾಮುಖ್ಯ.

ಈ ದರ್ಶನವಿಲ್ಲದೆ ನಾವುಗಳು ಅನುತ್ಪಾದಕ (ಜ್ಞಾನೋಕ್ತಿಗಳು 29:18) ವಲಯಗಳಲ್ಲಿ ನಾವು ಸುತ್ತುವರೆದು ಮುಂದುವರೆಯುತ್ತೇವೆ ಅಥವಾ ಎಲ್ಲಿಗೆ ಹೋಗಬೇಕೆಂದು ತಿಳಿಯದೆ ಗುರಿಯಿಲ್ಲದೆ ಅಲೆದಾಡಬಹುದು. ದರ್ಶನವು

ನಾಯಕನೊಂದಿಗೆ ಪ್ರಾರಂಭಗೊಳ್ಳುತ್ತದೆ. ನಾಯಕನಿಗೆ ನಿಖರವಾದ ದರ್ಶನ ಇಲ್ಲದಿದ್ದರೆ, ಇದು ಕುರುಡನು ಕುರುಡನನ್ನು ನಡೆಸಿದ್ದಂತೆ. ''ಕುರುಡನು ಕುರುಡನಿಗೆ ದಾರಿ ತೋರಿಸಿದರೆ ಅವರಿಬ್ಬರೂ ಕುಣಿಯಲ್ಲ ಬೀಳುವರು ಅಂದನು'' ಮತ್ತಾಯ15:14 ನಾಯಕರಾಗಿ, ನಾವು ಜನರಿಗೆ ದರ್ಶನವನ್ನು ನಿಖರವಾಗಿ ಸಂಪರ್ಕಿಸಬೇಕು ಆದ್ದರಿಂದ ನಮ್ಮೆಲ್ಲರನ್ನು ದೇವರು ಎಲ್ಲಿಗೆ ನಡೆಸುತ್ತಿದ್ದಾನೆಂಬುದು ಜನರಿಗೆ ಗೊತ್ತಾಗುತ್ತದೆ. ದರ್ಶನಕ್ಕೆ ನಾವೇ ಜೋಡಣೆಯಾಗಬೇಕು ಮತ್ತು ಅದರ ಕಡೆಗೆ ಕೆಲಸ ಪ್ರಾರಂಭಿಸಬೇಕು ಜನರು ದರ್ಶನವನ್ನು ಮರೆತು ಹೋಗುವುದರಿಂದ ನಾವು ಅದನ್ನು ಪುನರಾರ್ತಿಸುತ್ತಿರಬೇಕು.

ದೇವರಿಂದ ನಿಖರ ದರ್ಶನದ ಜೊತೆಗೆ ಧೈರ್ಯವುಳ್ಳ, ಪರಿಶ್ರಮವುಳ್ಳ ಮತ್ತು ಆ ದರ್ಶನವನ್ನು ನೆರವೇರಿಸಲು ಜನರನ್ನು ಶಿಸ್ತಿನಿಂದ ನಡೆಸುವ ಪ್ರಬಲವಾದ ನಾಯಕತ್ವವು ಅವಶ್ಯಕವಾಗಿದೆ. ನಾಯಕತ್ವವು ಪ್ರಮುಖವಾದದ್ದು ಕುರುಬನು ವಿಫಲನಾದರೆ ಕುರಿಗಳು ಚದುರಿಹೋಗುತ್ತವೆ (ಜೆಕರ್ಯ 13:7) ಉತ್ತಮ, ದೈವಿಕ ನಾಯಕನು ಜನರನ್ನು ತಮ್ಮ ಜೀವಿತಕ್ಕಿರುವ ದೇವರ ಉತ್ತಮವಾದವುಗಳ ಒಳಗೆ ತೆಗೆದುಕೊಂಡು ಹೋಗುತ್ತಾನೆ, ಒಬ್ಬ ತಪ್ಪಾದ ನಾಯಕನು ಜನರನ್ನು ವಿನಾಶಕ್ಕೆ ನಡೆಸುತ್ತಾನೆ. ''ಈ ಜನರನ್ನು ನಡಿಸುವವರು ದಾರಿ ತಪ್ಪಿಸುವವರಾಗಿದ್ದಾರಷ್ಟೆ ನಡಿಸಲ್ಪಟ್ಟವರೂ ನಾಶವಾಗುತ್ತಾರೆ'' (ಯೆಶಾಯ 9:16)

## ವಾಕ್ಯ ಮತ್ತು ಆತ್ಮದ ಮೇಲೆ ಒತ್ತುಕೊಟ್ಟು ಸಮತೋಲನದಲ್ಲಿರುವ ಒಂದು ಸಭೆ

ವಾಕ್ಯದಿಂದ ಮತ್ತು ಪವಿತ್ರಾತ್ಮನ ಕಾರ್ಯಗಳಿಂದ ನಾವು ಬಲಗೊಂಡಿದ್ದೇವೆ. ದೇವರ ವಾಕ್ಯವು ನಮ್ಮನ್ನು ಕಟ್ಟುತ್ತದೆ (ಅಪೊಸ್ತಲರ ಕೃತ್ಯಗಳು 20:32) ಅಂತರಾತ್ಮದಲ್ಲಿ ಆತನ ಆತ್ಮನಿಂದ ದೇವರು ನಮ್ಮನ್ನು ಬಲಪಡಿಸುತ್ತಾನೆ. (ಎಫೆಸದವರಿಗೆ 3:16) ನಾವು ಜನರನ್ನು ದೇವರ ವಾಕ್ಯದಲ್ಲಿ ಮತ್ತು ಪವಿತ್ರಾತ್ಮನೊಂದಿಗೆ ಅವರ ಸಂಬಂಧದಲ್ಲಿ ದೃಢವಾಗಿ ಪೋಷಿಸುವುದು ಅವಶ್ಯಕವಾಗಿದೆ.

ನಾವು ಇದನ್ನು ಮಾಡುವಾಗ, ಸ್ಥಳೀಯ ಸಭಿಕರನ್ನು ಬಲಗೊಳಿಸಲು ಇರುವಂತಹ ಐದು ದೃಷ್ಟಿಹರಿಸುವ ಕ್ಷೇತ್ರಗಳಿವೆ 1. ಸುವಾರ್ತೆಸೇವೆ 2. ಶಿಷ್ಯತ್ವ 3. ಪ್ರಾರ್ಥನೆ ಮತ್ತು ಆರಾಧನೆ 4. ಅನ್ಯೋನ್ಯತೆ ಮತ್ತು 5. ಸೇವೆಗಾಗಿ ಸಜ್ಜುಗೊಳಿಸುವುದು.

### *#1. ಸುವಾರ್ತಾ ಸೇವೆ*

ದೇವಜನರನ್ನು ಸುವಾರ್ತೆ ಸಾರಲೂ ನಾವು ಸಜ್ಜುಗೊಳಿಸುತ್ತೇವೆ ಮತ್ತು ಕರ್ತನಾದ ಯೇಸುವಿನಲ್ಲಿ ನಂಬಿಕೆಯಿಡಲು ಇತರರನ್ನು ಗೆಲ್ಲುತ್ತೇವೆ. ಸ್ಥಳೀಯ ಸಭೆಯು ರಕ್ಷಿಸಲ್ಪಡದಂತಹವರನ್ನು ಅನೇಕ ವಿವಿಧ ಮಾರ್ಗಗಳಲ್ಲಿ ನಿರಂತರವಾಗಿ ಸಂಧಿಸಬೇಕು.

### *#2. ಶಿಷ್ಯತ್ವ*

ಒಬ್ಬ ಶಿಷ್ಯನು ಕ್ರಿಸ್ತನಂತೆ ಗುಣ, ನಡವಳಿಕೆ ಮತ್ತು ಸೇವೆಯಂತೆ ಇರಲೂ ತರಬೇತಿ ಹೊಂದಿದವನಾಗಿದ್ದಾನೆ. ಆದ್ದರಿಂದ ಪ್ರತಿದಿನದ ಜೀವಿತದಲ್ಲಿ ದೇವರ ವಾಕ್ಯದಲ್ಲಿ ಯಾವ ರೀತಿ ಜೀವಿಸಬೇಕೆಂಬುದಾಗಿ ಜೀವಿತದ ಎಲ್ಲಾ ಕ್ಷೇತ್ರಗಳನ್ನು ನಂಬಿಕೆ ಮತ್ತು ನಡವಳಿಕೆಯನ್ನು ಪ್ರತಿಬಿಂಬಿಸಲು ನಾವು ಬೋಧಿಸುತ್ತೇವೆ.

### *#3. ಪ್ರಾರ್ಥನೆ ಮತ್ತು ಆರಾಧನೆ*

ಸಭಿಕರಾಗಿ ನಾವುಗಳು ನಿರಂತರವಾಗಿ ಪ್ರಾರ್ಥನೆ ಮತ್ತು ಆರಾಧನೆಯಲ್ಲಿ ಹೆಚ್ಚಳಗೊಳ್ಳಬೇಕು. ನಾವು ಒಟ್ಟಾಗಿ ಸೇರಿಬಂದಾಗ ಪ್ರಾರ್ಥನೆ ಮತ್ತು ಆತ್ಮಿಕ ಸೇವೆಗೆ ಪರಿಸರವನ್ನು ಸೃಷ್ಟಿಸುತ್ತದೆ ಆರಾಧಿಸುವ ಮತ್ತು ಪ್ರಾರ್ಥಿಸುತ್ತಿರುವ ಸಭಿಕರ ಮಧ್ಯದಲ್ಲಿ ದೇವರು ಮಾತಾಡುತ್ತಾನೆ. ಪ್ರಾರ್ಥನೆ ಮತ್ತು ಆರಾಧನೆಯ ಮೂಲಕವಾಗಿ ನಮ್ಮ ನಗರದ ಮೇಲಿರುವ ಆತ್ಮಿಕ ಪರಿಸರವನ್ನು ಬದಲಿಸಬಹುದು.

### *#4. ಅನ್ಯೋನ್ಯತೆ*

ಅನ್ಯೋನ್ಯತೆಯು, ದೇವರ ಮಗಳು ಮತ್ತು ಮಗನಾಗಿ ನಾವುಗಳು ಪ್ರತಿದಿನ ಸಂಬಂಧದಲ್ಲಿ ಜೀವಿಸುವುದಾಗಿದೆ. ನಾವು ಅದೇ ಕುಟುಂಬದ ಭಾಗಗಳಾಗಿದ್ದೇವೆ ಮತ್ತು ನಾವು ಇದನ್ನು ಒಬ್ಬರಿಗೊಬ್ಬರು ಕಾಳಜಿ ವಹಿಸುವುದರಿಂದ, ಬೆಂಬಲಿಸುವುದರಿಂದ ಸಹಾಯ ಮಾಡುವುದರಿಂದ ಮತ್ತು ಒಬ್ಬರಿಗೊಬ್ಬರು ಪೋಷಿಸುವುದರಿಂದ ನಾವು ಜೀವಿಸುತ್ತೇವೆ.

### *#5. ಸೇವೆಗಾಗಿ ಸಜ್ಜುಗೊಳ್ಳುವುದು*


ಪ್ರತಿ ಸದಸ್ಯರು ಸಂಪೂರ್ಣವಾಗಿ ಸಜ್ಜುಗೊಳ್ಳಬೇಕು, ಸಕ್ರಿಯಗೊಳ್ಳಬೇಕು ಮತ್ತು ಅವರ ಕರೆಯನ್ನು ನೆರವೇರಿಸಲು ಬಿಡುಗಡೆಗೊಳ್ಳಬೇಕು. ಪ್ರತಿಯೊಬ್ಬರು ಕ್ರಿಸ್ತನ ದೇಹದಲ್ಲಿ

ಕಾರ್ಯಮಾಡಲು ಮತ್ತು ಒಂದು ಸ್ಥಳವಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ವಿಶ್ವಾಸಿಗಳಿಗೆ ಸಹಾಯ ಮಾಡುವುದರಿಂದ ನಾವು ಪ್ರಾರಂಭಿಸಿದ್ದೇವೆ ಪ್ರತಿಯೊಬ್ಬ ವಿಶ್ವಾಸಿಯು ಸೇವಕರು. ಆಮೇಲೆ ತಮ್ಮ ವರಗಳು ಮತ್ತು ಕೃಪೆಯನ್ನು ಕಂಡುಹಿಡಿಯುವುದು ಹೇಗೆ ಎಂಬುದನ್ನು ನಾವು ತೋರಿಸಬೇಕು ಮತ್ತು ಸಭೆಯ ಒಳಗೆ ಮತ್ತು ಹೊರಗಡೆಯು ಸೇವೆ ಮಾಡಲೂ ಅವರಿಗೆ ಅವಕಾಶಗಳನ್ನು ಒದಗಿಸಬೇಕು.

ಪವಿತ್ರಾತ್ಮನ ಅಪ್ರಾಕೃತ ಕಾರ್ಯಗಳ ಮೂಲಕವಾಗಿ ವಿಶ್ವಾಸಿಗಳನ್ನು ನಾವು ಸಜ್ಜುಗೊಳಿಸಬೇಕು. ಸಮುದಾಯ ಮತ್ತು ಇತರ ಪ್ರದೇಶಗಳ ಮೇಲೆ ಪರಿಣಾಮ ಬೀರಲು ವಿಶ್ವಾಸಿಗಳನ್ನು ಪ್ರೋತ್ಸಾಹಿಸಬೇಕು ಇದನ್ನು ಮಾಡಲು ಅವರಿಗೆ ಅಧಿಕಾರ ಕೊಡಬೇಕು ಮತ್ತು ಬಿಡುಗಡೆಗೊಳಿಸಬೇಕು. ನಾವು ಸೇವಕರನ್ನು ಹೊರಗಿನ ಸೇವೆಗೆ ಕಳುಹಿಸಬೇಕು ಮತ್ತು ನಮ್ಮ ಮಧ್ಯದಲ್ಲಿ ದೇವರು ಮಾಡುತ್ತಿರುವವುಗಳನ್ನು ಪುನರುತ್ಪಾದಿಸಬೇಕು.

## ಪ್ರವಚನ ಪೀಠ ಸೇವೆಗೆ ಸಿದ್ಧಗೊಳ್ಳುವುದು

ಮೇಲಿನ 5 ಅಂಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಪ್ರವಚನ ಪೀಠದಿಂದ ಸೇವೆಯನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ನಾವು ಹೊಂದಿರುವ ಪ್ರತಿ ಅವಕಾಶದಲ್ಲಿ ಪ್ರವಚನ ಪೀಠದ ಹಿಂಭಾಗದಲ್ಲಿ ನಿಂತು ದೇವರ ವಾಕ್ಯದ ಸೇವೆ ಸಲ್ಲಿಸಬೇಕು ಮತ್ತು ಪವಿತ್ರಾತ್ಮನ ಕಾರ್ಯವು ನಿಖರವಾದ ಉದ್ದೇಶದಿಂದ ಮಾಡಬೇಕು. ಭಾನುವಾರದ ಅಥವಾ ವಾರದ ಆರಾಧನಾ ಸಮಯದ ಅವಧಿಯನ್ನು ಸುಮ್ಮನೆ ತುಂಬುವುದಲ್ಲ. ನಾವು ಸೇವೆ ಮಾಡುವ ಪ್ರತಿ ಸಮಯದಲ್ಲೂ ಈ ಐದು ಕ್ಷೇತ್ರಗಳ ಯಾವುದಾದರೊಂದರಲ್ಲಿ ಜನರನ್ನು ಪೋಷಿಸುತ್ತಿರುತ್ತೇವೆ.




ದೇವರ ವಾಕ್ಯವನ್ನು ಬೋಧಿಸುವುದು ಮತ್ತು ಪ್ರಸಂಗಿಸುವುದರಲ್ಲಿ ನಾನು ಮೂರು ಕ್ಷೇತ್ರಗಳಲ್ಲಿ ಸಮತೋಲನ ಮಾಡಲು ಇಷ್ಟಪಡುತ್ತೇನೆ.

- ಕ್ರಿಸ್ತೀಯ ಜೀವಿತ : ಕ್ರೈಸ ಜೀವಿತವನ್ನು ಜೀವಿಸುವುದು ಹೇಗೆ ಎಂಬುದನ್ನು ಜನರಿಗೆ ಬೋಧಿಸುವುದು.

  ಉದಾಹರಣೆಗೆ., ಪ್ರಾರ್ಥನೆಯ ಶಿಸ್ತನ್ನು ಅಭಿವೃದ್ಧಿಪಡಿಸುವುದು ದೇವರ ವಾಕ್ಯವನ್ನು ಓದುವುದು ನಂಬಿಕೆಯ ನಡಿಗೆ, ಅಧಿಕಾರ ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ ಮತ್ತು ಇದೇ ವಿಷಯಗಳು

- ಜೀವನದ ಕೌಶಲ್ಯತೆಗಳು: ಪ್ರತಿದಿನದ ಜೀವನದ ಪರಿಸ್ಥಿತಿಗಳಲ್ಲಿ ದೇವರ ವಾಕ್ಯದಲ್ಲಿ ಹೇಗೆ ಜೀವಿಸಬೇಕೆಂಬುದನ್ನು ಕಲಿಸುವುದು ಉದಾಹರಣೆಗೆ ಶಾಲೆ, ಕಾಲೇಜು, ತೀರ್ಮಾನಗಳನ್ನು ಮಾಡುವುದು ಮದುವೆ, ವೃತ್ತಿಜೀವನ, ಕುಟುಂಬ, ಹಣಕಾಸನ್ನು ನಿರ್ವಹಿಸುವುದು ಮತ್ತು ಅದೇ ರೀತಿಯ ವಿಷಯಾಂಶಗಳು.

- ಸೇವೆ: ಸೇವೆ ಮಾಡುವುದು ಹೇಗೆ ಎಂಬುದನ್ನು ಜನರಿಗೆ ಕಲಿಸುವುದು ಮತ್ತು ದೇವರ ಅಭಿಷೇಕದಿಂದ ಮತ್ತು ಆತ್ಮನ ವರಗಳಿಂದ ಇತರರಿಗೆ ಸೇವೆ ಸಲ್ಲಿಸುವುದು.

ನಾವು ಪ್ರಸಂಗಿಸುವುದರ ಮೇಲೆ ನಾನು ವೀಕ್ಷಣೆ ಇಡುತ್ತೇನೆ ಮತ್ತು ಈ ಮೂರು ಕ್ಷೇತ್ರಗಳಲ್ಲಿ ದೇವ ಜನರು ಪ್ರಗತಿ ಹೊಂದಲೂ ಸಾಕಾಗುವಷ್ಟು ಸಮಯ ಕೊಡುವುದನ್ನು ಪ್ರಸಂಗ ಪೀಠದಿಂದ ಬೋಧಿಸುವಾಗ ಖಚಿತಪಡಿಸಿಕೊಳ್ಳಬೇಕು.

ದೇವರು ಆರಂಭದಲ್ಲಿಯೇ ಅಂತ್ಯವನ್ನು ತಿಳಿಸಿದ್ದಾನೆ (ಯೆಶಾಯ 46:10) ಮತ್ತು ನಾನು ಬರೀ ಒಂದು ಸಂದೇಶ ಸ್ಫೂರ್ತಿಯನ್ನು ಹುಡುಕುವುದಲ್ಲ ಆದರೆ ಸಂಪೂರ್ಣ ವರ್ಷಕ್ಕೆ ಹುಡುಕಬೇಕು. ಒಂದು ವರ್ಷದ ಯೋಜನೆಯನ್ನು ನಾನು ಮಾಡುತ್ತೇನೆ. ಅಥವಾ ನಂತರದ ವರ್ಷಗಳಲ್ಲಿ ಯಾವ ಮಟ್ಟಕ್ಕೆ ಹೋಗುತ್ತದೆ ಮತ್ತು ಅಲ್ಲಿಗೆ ಜನರನ್ನು ತೆಗೆದುಕೊಳ್ಳಲು ಸಿದ್ಧವಾಗಿರುವುದನ್ನು ನಾನು ಯೋಜನೆ ಮಾಡುತ್ತೇನೆ.

ಒಂದು ವರ್ಷಕ್ಕಾಗಿ ಯಾವ ಯಾವ ವಿಷಯಾಂಶಗಳನ್ನು ಬೋಧಿಸಬೇಕು ಮತ್ತು ಪ್ರಸಂಗಿಸಬೇಕು ಎಂಬುದರ ಯೋಜನೆಯನ್ನು ಸಾಮಾನ್ಯವಾಗಿ ನಾನು ರಚಿಸುತ್ತೇನೆ ಮತ್ತು ಸ್ಥಳೀಯ ಸಭೆಯಾಗಿ ನಾವು ಯಾವ ಮಟ್ಟಕ್ಕೆ ಹೋಗಬೇಕೆಂಬುದಾಗಿ ದೇವರು ಅಪೇಕ್ಷಿಸುತ್ತಾನೋ ಅದೇ ಪ್ರಕಾರವಾಗಿ ಜನರನ್ನು ಕೊಂಡೊಯ್ಯಲೂ ಸಂದೇಶಗಳನ್ನು ಸಿದ್ಧಪಡಿಸಬೇಕು. ಬೆಂಗಳೂರಿನಲ್ಲಿ, ನಾವು ಒಂದೇ ಸಭೆಯಾಗಿದ್ದಾಗಲೂ ವಿವಿಧ ಸ್ಥಳಗಳಲ್ಲಿ ಅನೇಕ ಸಭಿಕರುಗಳು ಸಭೆಗಾಗಿ ಸೇರಿಬರುತ್ತಾರೆ. ನಮ್ಮ ನಗರದಲ್ಲಿ ಅನೇಕ ಸಭೆಗಳ ನಮ್ಮ ಸ್ಥಳಗಳಲ್ಲಿ ಸಂಘಟಿಸಲು ಅಗತ್ಯವಿದೆ ಮತ್ತು ವಿವಿಧ

ವಿಭಾಗಗಳಲ್ಲಿ ಹೊಂದಾಣಿಸಿಕೊಳ್ಳಬೇಕು (ಆರಾಧನೆ, ಆಡಿಯೋ/ವಿಡಿಯೋ, ಕಲೆ ಪ್ರದರ್ಶನ, ಮಾಧ್ಯಮ ಮತ್ತು ಮುಂತಾದವುಗಳು) ನಾವು ಸಾಮಾನ್ಯವಾಗಿ ಎರಡು ಅಥವಾ ಮೂರು ತಿಂಗಳುಗಳ ಮುಂಚಿತವಾಗಿ ಸಿದ್ಧಪಡಿಸಿರುತ್ತೇವೆ ಮತ್ತು ತಂಡವು ಮುಂಬರುವವುಗಳ ಬಗ್ಗೆ ತಿಳಿದಿರುತ್ತಾರೆ, ನಾವೆಲ್ಲರೂ ಅದರ ಕಡೆಗೆ ಸಿದ್ಧರಾಗಿರುತ್ತೇವೆ. ಪವಿತ್ರಾತ್ಮನ ನಡೆಸುವಿಕೆಗೆ ಸೂಕ್ಷ್ಮತೆಯಿಂದಿರುವುದರಿಂದ ಇವುಗಳನ್ನು ನಾವು ಮಾಡುತ್ತೇವೆ. ನಾವು ತೆರೆದವರಾಗಿರುತ್ತೇವೆ ಮತ್ತು ಕರ್ತನು ನಮ್ಮನ್ನು ನಡೆಸುತ್ತಿರುವ ಕಡೆಗಳಿಗೆ ಚಲಿಸಲು ಸ್ವತಂತ್ರರಾಗಿ ಮತ್ತು ಕರ್ತನು ತರಲು ಅಪೇಕ್ಷಿಸುವ ಅನಿರೀಕ್ಷಿತ ಬದಲಾವಣೆಗೆ ಫಲ ಕೊಡುವವರಾಗಿರುತ್ತೇವೆ.

## ಜನರು ಏಕ ಮನಸ್ಸು ಮತ್ತು ಏಕ ಹೃದಯವುಳ್ಳ ಒಂದು ಸಭೆ

1 ಕೊರಿಂಥದವರಿಗೆ 1:10

**ಸಹೋದರರೇ ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು ನಿಮ್ಮಲ್ಲಿ ಭೇದಗಳಿರಬಾರದು ನೀವು ಒಂದೇ ಮನಸ್ಸು ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ.**

ಲೂಕನು 3:25

**ಒಂದು ಮನೆಯಲ್ಲಿ ಬೇಧ ಹುಟ್ಟಿದರೆ ಆ ಮನೆಯ ನಿಲ್ಲಲಾರದು.**

ಯಾವುದೇ ಒಂದು ಸ್ಥಳೀಯ ಸಭೆಗೆ ಅತ್ಯಂತ ವಿನಾಶಕಾರಿಯಾಗಿ ಜರುಗುವ ವಿಷಯುಗಳೆಂದರೆ ವಿಭಾಗ ಮತ್ತು ಭಿನ್ನಭಿಪ್ರಾಯುಗಳು ಅಥವಾ ಐಕ್ಯತೆ ಇಲ್ಲದಿರುವುದಾಗಿದೆ. ಯಾವಾಗ ಸ್ಥಳೀಯ ಸಭೆಯು ಆಂತರಿಕವಾಗಿ ವಿಭಾಗವಾಗಲೂ ಯಾವುದೇ ರೀತಿಯು ಜಗಳಗಳು ಕಾರಣವಾದರೆ, ಇದು ದೇಹವನ್ನು ಬಲಹೀನಗೊಳಿಸುತ್ತದೆ. ಸಮಯದ ಮತ್ತು ಪರಿಶ್ರಮದ ಬಹಳಷ್ಟು ವ್ಯರ್ಥತೆಗೆ ಕಾರಣವಾಗುತ್ತದೆ.

ಅಪೊಸ್ತಲನಾದ ಪೌಲನು, ಕೊರಿಂಥದವರಿಗೆ ಬರೆದ ತನ್ನ ಪತ್ರಿಕೆಯಲ್ಲಿ ಪೌಲನು ಕೊರಿಂಥದ ವಿಶ್ವಾಸಿಗಳಿಗೆ ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು, ಒಂದೇ ಮನಸ್ಸೂ, ಪರಿಪೂರ್ಣ ಸಾಮರಸ್ಯದಿಂದ ಒಟ್ಟಾಗಿ ಹರಿಯಲು ಮತ್ತು ನಿಮ್ಮಲ್ಲಿ ಯಾವುದೇ ವಿಭಾಗಗಳಿಲ್ಲದಂತೆ ನೋಡಿಕೊಳ್ಳಬೇಕೆಂಬುದಾಗಿ ಬೇಡಿಕೊಳ್ಳುತ್ತೇನೆ. ಇದು ಸಾಧ್ಯ ಎಂಬುದಾಗಿ ನಾನು ನಂಬುತ್ತೇನೆ, ಇಲ್ಲದಿದ್ದರೆ ವಿಶ್ವಾಸಿಗಳಲ್ಲಿ ಪವಿತ್ರಾತ್ಮನು ಅಗತ್ಯವಿರುತ್ತಿರಲಿಲ್ಲ.

ಸಭಾಪಾಲಕರಾಗಿ ಮತ್ತು ನಾಯಕರುಗಳಾಗಿ ಜನರು ಒಂದೇ ಮನಸ್ಸು ಒಂದೇ ಹೃದಯವುಳ್ಳ ವರಾಗಿರಬೇಕೆಂಬುದಾಗಿ ಬೋಧಿಸಬೇಕು ಜನರು ದೇವರ ರಾಜ್ಯದ ಮನಸ್ಸುವುಳ್ಳವರರಾಗಿರುವಂತೆ ಬೋಧಿಸಬೇಕು ಮತ್ತು ಕರ್ತನ ಮಹಿಮೆಗಾಗಿ ಮತ್ತು ಪವಿತ್ರವಾದ ಜನರು ಕಾರ್ಯ ಮಾಡಲು ಜನರನ್ನು ಪ್ರೋತ್ಸಾಹಿಸಬೇಕು, ಒಟ್ಟಾಗಿ ಕೆಲಸ ಮಾಡಬೇಕು ಮತ್ತು ಪ್ರತಿಯೊಬ್ಬರ ಸಾಮರ್ಥ್ಯವನ್ನು ಒಗ್ಗೂಡಿಸಬೇಕು ನಾವು ತಂಡದ ಯಶಸ್ಸನ್ನು ಆಚರಿಸುತ್ತೇವೆ ಮತ್ತು ತಂಡದ ಕೆಲಸಕ್ಕೆ ಸಂಸ್ಕೃತಿಯನ್ನು ಸೃಷ್ಟಿಸಬೇಕು, ನಾವು ಯಾವುದೇ ಬಗೆಯ ಗುಂಪುಗಳೂ ಅಥವಾ ವಿಭಜನೆ ಗುಂಪುಗಳನ್ನು ರೂಪಿಸುವುದನ್ನು ಗ್ರಹಿಸಿದರೆ, ತಕ್ಷಣವಾಗಿ ಅದನ್ನು ಪ್ರತಿಬಿಂಬಿಸಬೇಕು ಮತ್ತು ಜನರು ಅಂತಹ ಪ್ರವೃತ್ತಿಯನ್ನು ತೊಡೆದು ಹಾಕುವಂತೆ ಮಾಡಬೇಕು.

ಸಭಾಪಾಲಕ/ನಾಯಕರ ಮೇಲೆ ಬಹಳಷ್ಟು ಅವಲಂಬಿಸಿರುತ್ತದೆ ಸಭಾಪಾಲಕ/ನಾಯಕನು ಸ್ವತಃ (ಅಥವಾ ಅವಳು) ಅಸುರಕ್ಷಿತ, ಜನರನ್ನು ಕೆಳಹಾಕಿದರೆ, ಸ್ವಭಾವದಲ್ಲಿ ''ವಿಭಜನೆ ಮತ್ತು ಆಡಳಿತ''ವಿಧಾನದಲ್ಲಿ ಕಾರ್ಯಮಾಡಿದರೆ, ಹಿಂದೆ ದೂರಿದರೆ, ನಿಯಂತ್ರಣ ಮಾಡಿದರೆ, ಜನರಿಗೆ ಸುಳ್ಳು ದೋಷಣೆ ನೀಡಿದರೆ, ಸ್ಥಳೀಯ ಸಭೆಯು ಕೆಟ್ಟ ಹೆಸರನ್ನು ತರುವಂಥದ್ದಾಗಿರುತ್ತದೆ. ಇಂತಹ ಒಂದು ರೀತಿಯ ಪ್ರಕರಣದಲ್ಲಿ, ನಾಯಕನ ಹೃದಯದಲ್ಲಿ ಬದಲಾವಣೆಯು ಜರುಗಬೇಕು ಅಥವಾ ಅಲ್ಲದೆ ಸ್ಥಳೀಯ ಸಭೆಯ  ವಿಭಜನೆ ಮತ್ತು ಕಲಹಗಳಿಗೆ ತಳಿ ನೆಲಗಳಾಗುತ್ತದೆ. ಆದ್ದಾಗ್ಯೂ ನಾಯಕರುಗಳಾಗಿ ನಾವು ಯಾರಾಗಿದ್ದೆವೆಂಬುದರಲ್ಲಿ ಸುರಕ್ಷಿತರಾಗಿದ್ದರೆ, ಶುದ್ಧ ಹೃದಯ ಹೊಂದಿದ್ದರೆ, ಪ್ರಾಮಾಣಿಕತೆಯಿಂದ ಕಾರ್ಯಮಾಡಿದರೆ, ಪಕ್ಷಪಾತವಿಲ್ಲದೆ ಮತ್ತು ಉತ್ತಮ ಆತ್ಮದಿಂದ ವಿಷಯಗಳನ್ನು ಮಾಡಿದರೆ, ಜನರು ಅದನ್ನು ಹಿಡಿಯುತ್ತಾರೆ ಮತ್ತು ಅದೇ ರೀತಿಯಲ್ಲಿ ಸಭಿಕರಲ್ಲಿ ಪುನರಾವರ್ತಿಸುತ್ತಾರೆ.

ದೈವ-ನೇಮಿತ ಕಾರ್ಯಕ್ಕೆ ಜನರನ್ನು ಸಜ್ಜುಗೊಳಿಸುವ ಮತ್ತು ಬಿಡುಗಡೆಗೊಳಿಸುವ ಒಂದು ಸಭೆ.

ಎಫೆಸದವರಿಗೆ 4:11,12

**ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು.**

ಐವಡಿ ಸೇವಾ ವರಗಳ ಪ್ರತಿಯೊಂದರ ಒಂದು ಉದ್ದೇಶವು ''ವಿಶ್ವಾಸಿಗಳನ್ನು ಸಜ್ಜುಗೊಳಿಸುವುದಾಗಿದೆ''ಆದ್ದರಿಂದ ವಿಶ್ವಾಸಿಗಳು ಸೇವೆಯ ಕಾರ್ಯಗಳನ್ನು ಮಾಡಬಹುದಾಗಿದೆ. ವಿಶ್ವಾಸಿಗಳು ಆತ್ಮಿಕವಾದ ಕೂಸುಗಳಂತೆ ಇರಬೇಕೆಂಬುದಾಗಿ ಅಪೇಕ್ಷಿಸುವುದಿಲ್ಲ.

ಈ ನಾಲ್ಕು ಹಂತಗಳ ರಸ್ತೆ ನಕ್ಷೆಯನ್ನು ಚಿತ್ರಿಸಲು ನಾನು ಇಷ್ಟ ಪಡುತ್ತೇನೆ ನನ್ನ ಗುರಿ ಏನೆಂದರೆ, ಜನರು ತಮ್ಮ ಪ್ರಗತಿಯನ್ನು ನಿರಂತರವಾಗಿ ಚಲಿಸುತ್ತಿರಬೇಕು ಜನರನ್ನು ಬೋಧನೆ ಮತ್ತು ಸಂದೇಶಗಳ ಮೂಲಕವಾಗಿ ಪೋಷಿಸಬೇಕು, ಅವಕಾಶಗಳನ್ನು ಕಲ್ಪಿಸಬೇಕು, ಜವಾಬ್ದಾರಿಗಳನ್ನು ಕೊಡಬೇಕು ಆದ್ದರಿಂದ ಅವರು ಸೇವೆ ಮಾಡಬಹುದು ಮತ್ತು ಅವರ ಕರೆಗೆ ಬೆಳೆಯ ಬಹುದಾಗಿದೆ.




ಕೆಲವರು ಸ್ಥಳೀಯ ಸಭೆಯೊಳಗೆ ಸೇವೆ ಮಾಡಬಹುದು, ಕೆಲವರು ಸ್ಥಳೀಯ ಸಭೆಯ ಹೊರಗೆ ಸೇವೆ ಮಾಡಬಹುದು ಮತ್ತು ಕೆಲವರು ಸ್ಥಳೀಯ ಸಭೆಯ ಒಳಗೆ ಮತ್ತು ಹೊರಗಡೆಯ ಸೇವೆ ಮಾಡಬಹುದು ಒಂದೊಂದೊ ರೀತಿಯಲ್ಲಿ ನಮ್ಮ ಗುರಿಯು ಕ್ರಮೇಣವಾಗಿ ಪ್ರತಿಯೊಬ್ಬರನ್ನು ದೇವರು ಯೋಜಿಸಿದ್ದವುಗಳನ್ನು ಕಂಡುಹಿಡಿಯುವಂತೆ ಮಾಡುವುದು ಮತ್ತು ಸೇವಕರುಗಳಾಗಿ ಆತನ ಕರೆಯನ್ನು ನೆರವೇರಿಸುವಂತೆ ಮಾಡುವುದಾಗಿದೆ. ನಾವು ಸತತವಾಗಿ ''ಪ್ರತಿಯೊಬ್ಬ ವಿಶ್ವಾಸಿಯು ಒಬ್ಬ ಸೇವಕ'' ಎಂಬುದಾಗಿ ಒತ್ತಿ ಹೇಳುತ್ತೇವೆ. ಪ್ರತಿಯೊಬ್ಬರೂ ಕರ್ತನ ಸೇವೆಯನ್ನು ಅವರು ಮಾಡಲೂ ಶಕ್ತರಾಗಿರುವಲ್ಲಿ ಸಂಸ್ಕೃತಿಯನ್ನು ಸೃಷ್ಟಿಸುತ್ತೇವೆ.

## ಇದು ಪ್ರಪಂಚಕ್ಕೆ ಅನ್ವಯಿಸಲ್ಪಟ್ಟ ಒಂದು ಸಭೆ

1 ಕೊರಿಂಥದವರಿಗೆ 9:19-23

**ನಾನು ಎಲ್ಲಾ ವಿಷಯದಲ್ಲಿ ಸ್ವತಂತ್ರನಾಗಿದ್ದರೂ ಹೆಚ್ಚು ಜನರನ್ನು ಸಂಪಾದಿಸಿಕೊಳ್ಳಬೇಕೆಂದು ನನ್ನನ್ನು ಎಲ್ಲರಿಗೂ ಅಧೀನ ಮಾಡಿದೆನು. ಯೆಹೂದ್ಯರನ್ನು ಸಂಪಾದಿಸಿಕೊಳ್ಳುವುದಕ್ಕೆ ಯೆಹೂದ್ಯರಿಗೆ ಯೆಹೂದ್ಯನಂತಾದೆನು. ನಾನು ನಿಯಮಗಳಿಗೆ ಅಧೀನನಲ್ಲದವನದರೂ ನಿಯಮಗಳಿಗೆ ಅಧೀನರಾದವರನ್ನು ಸಂಪಾದಿಸಿಕೊಳ್ಳುವುದಕ್ಕಾಗಿ ಅವರಿಗೆ ನಿಯಮಗಳಿಗೆ ಅಧೀನನಂತಾದೆನು. ನಾನು ದೇವರ ನೇಮವಿಲ್ಲದವನಲ್ಲ. ಕ್ರಿಸ್ತನ ನಿಯಮಕ್ಕೊಳಗಾದವನೇ ಆದರೂ ನಿಯಮವಿಲ್ಲದವರನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಅವರಿಗೆ ನಿಯಮವಿಲ್ಲದವನಂತಾದೆನು ಬಲವಿಲ್ಲದವರನ್ನು**

**ಸಂಪಾದಿಸುವದಕ್ಕೆ ಅವರಿಗೆ ಬಲವಿಲ್ಲದವನಾದೆನು ಯಾವ ವಿಧದಲ್ಲಿಯಾದರೂ ಕೆಲವರನ್ನು ರಕ್ಷಿಸಬೇಕೆಂದು ಯಾರಾರಿಗೆ ಎಂಥೆಂಥವನಾಗಬೇಕೋ ಅಂಥಂಥವನಾಗಿದ್ದೇನೆ. ನಾನು ಇತರರ ಸಂಗಡ ಸುವಾರ್ತೆಯ ಫಲದಲ್ಲಿ ಪಾಲುಗಾರನಾಗಬೇಕೆಂದು ಇದೆಲ್ಲವನ್ನು ಸುವಾರ್ತೆಗೋಸ್ಕರವೇ ಮಾಡುತ್ತೇನೆ.**

ದೇವರು ಜನರೊಟ್ಟಿಗೆ ಆತನು ಮಾತಾಡಬೇಕೆಂದಿರುವವರ ಜೊತೆಯಲ್ಲಿ ಅದೇ ಭಾಷೆಯಲ್ಲಿ ಮಾತಾಡುತ್ತಾನೆ. ಅಪೊಸ್ತಲನಾದ ಪೌಲನು, ಸೇವೆಯ ಬಗ್ಗೆ ಮೂಲಭೂತವಾಗಿ ಇದು ಹೇಳುತ್ತದೆ ಎಂಬುದನ್ನು ವಿವರಿಸುತ್ತಾ ಮೇಸೇಜ್ ಬೈಬಲ್ ಹೇಳುವುದು ನನಗೆ ಬಹಳ ಇಷ್ಟವಾಗಿದೆ ‘‘ನಾನು ಬೇಡಿಕೆಗಳಿಂದ ಸ್ವತಂತ್ರನಾಗಿದ್ದಾಗಲೂ ಮತ್ತು ಪ್ರತಿಯೊಬ್ಬರ ನಿರೀಕ್ಷೆಗಳಿಗೆ, ನಾನು ಸ್ವಯಂ ಪ್ರೇರಣೆಯಿಂದ ಸೇವಕನಾದೆನು ಮತ್ತು ವ್ಯಾಪಕ ಜನರನ್ನು ಸಂಧಿಸುವ ಕ್ರಮದಲ್ಲಿ ಧಾರ್ಮಿಕ ಧಾರ್ಮಿಕವಲ್ಲದ ಅತಿಸೂಕ್ಷ್ಮದ ನೈತಿಕವಾದಿ, ಸಡಿಲವಾಗಿ ಜೀವಿಸುವ ಅನೈತಿಕವಾದಿ, ಸೋಲಿಸಿದವನು, ಅವಮಾನಕರ - ಯಾರಾದರೂ ಆಗಲಿ ಅವರ ಜೀವನದ ಮಾದರಿಯನ್ನು ನಾನು ತೆಗೆದುಕೊಳ್ಳಲಿಲ್ಲ ನನ್ನ ವರ್ತನೆಯನ್ನು ಕ್ರಿಸ್ತನಲ್ಲಿರಿಸಿದ್ದೇನೆ ಆದರೆ ಅವರ ಪ್ರಪಂಚವನ್ನು ನಾನು ಪ್ರವೇಶಿಸಿದೆನು ಮತ್ತು ಅವರ ದೃಷ್ಟಿಕೋನದಲ್ಲಿ ವಿಷಯಗಳನ್ನು ಅನುಭವಿಸಲು ಪ್ರಯತ್ನಿಸಿದೆನು ದೇವರ ರಕ್ಷಿಸಲ್ಪಟ್ಟ ಜೀವಿತಗಳಿಗೆ ನಡೆಸಲು ನನ್ನ ಪ್ರಯತ್ನಗಳಲ್ಲಿ ನಾನು ಸಾಮಾನ್ಯ ರೀತಿಯ ಸೇವಕನಾಗಿದ್ದೇನೆ (ವಚನ 19-22) ಇನ್ನೊಂದು ಪದಗಳಲ್ಲಿ ಪೌಲನು ಸಂಧಿಸಲು ಪ್ರಯತ್ನಿಸಿದ ಜನರು ಸುವಾರ್ತೆಯನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಅದನ್ನು ಅವನಲ್ಲಿ ನೋಡಬೇಕೆಂಬುದಾಗಿ ತಿಳಿಯುವ ರೀತಿಯಲ್ಲಿ ಸಂಪರ್ಕಿಸಲು ಪ್ರಯತ್ನಿಸಿದನು.

ನಮ್ಮ ಸುತ್ತಲಿನ ಪ್ರಪಂಚವು ಬದಲಾಗುತ್ತದೆ ನಾವು ಸುವಾರ್ತಾ ಸಂದೇಶವನ್ನು ಬದಲಾಯಿಸುವುದಿಲ್ಲ. ಜನರಿಗೆ ನಾವು ಸುವಾರ್ತೆಯನ್ನು ಯಾವ ರೀತಿ ಸಂಪರ್ಕಿಸುತ್ತೇವೋ ಎಂಬುದನ್ನು ಅಳವಡಿಸಿಕೊಳ್ಳಬೇಕು ಆದ್ದರಿಂದ ನಮ್ಮ ಪ್ರಪಂಚದ ಜನರು ಅರ್ಥಮಾಡಿಕೊಳ್ಳಬಹುದು ಮತ್ತು ಸಂದೇಶವನ್ನು ಪಡೆಯಬಹುದು ಸ್ಥಳೀಯ ಸಭೆಯು ತಾನು ಇರುವಂತಹ ಸಮುದಾಯದಲ್ಲಿ ಸಂಬಂಧಿತವಾಗಿರಬೇಕು ದೇವರ ವಾಕ್ಯದಿಂದ ಜನರು ಎದುರಿಸುತ್ತಿರುವಂತಹ ನಿಜ-ಜೀವನದ ಪರಿಸ್ಥಿತಿಗಳು ಮತ್ತು ಸವಾಲುಗಳನ್ನು ಪ್ರತಿಬಿಂಬಿಸಬೇಕು ಜನರ ಜೀವಿತಗಳಲ್ಲಿ ವಾಕ್ಯವನ್ನು ಮತ್ತು ಅವರ ಪ್ರಪಂಚದಲ್ಲಿ ದೇವರ ವಿಷಯಗಳನ್ನು ಯಾವ ರೀತಿ ಅಳವಡಿಸಿಕೊಳ್ಳಬೇಕೆಂಬುದಾಗಿ ತಿಳಿಯಲು ಜನರಿಗೆ ಸಹಾಯ ಮಾಡಬೇಕು.

ನಾವು ಸಂಬಂಧಿತರಾಗಿರದಿದ್ದರೆ ಜನರು ಸಂಪರ್ಕಿಸಿದ್ದನ್ನು ಅರ್ಥಮಾಡಿಕೊಳ್ಳುವುದಿಲ್ಲ ನಾವುಗಳು ದೇವರ ವಾಕ್ಯದ ನಿತ್ಯತ್ವದ ಸತ್ಯವನ್ನು ಪ್ರಸಂಗಿಸುತ್ತಿದ್ದೇವೆ. ಆದರೆ ಇದು ಜನರ ಭಾಷೆಯಲ್ಲಿ ಇಲ್ಲದಿದ್ದರೆ, ಅವರಿಗೆ ಕೊಡಲ್ಪಟ್ಟದ್ದನ್ನು ಅರ್ಥ ಮಾಡಿಕೊಳ್ಳುವುದಿಲ್ಲ.

ಸಂಬಂಧಿತವಾಗಿರುವುದೆಂಬುದು, ನಾವು ಬದಲಾಯಿಸುತ್ತಿರುತ್ತೇವೆ ಮತ್ತು ಪ್ರಸಕ್ತ ಸಮಯದಲ್ಲಿ ಯಾವ ರೀತಿ ಸಂಪರ್ಕಿಸುತ್ತೇವೆ. ಎಂಬ ಅರ್ಥವನ್ನು ಸಹ ಹೊಂದಿದೆ. ಸಂದೇಶವು ಬದಲಾಗುವುದಿಲ್ಲ ಆದರೆ ನಾವು ಸಂಪರ್ಕಿಸುವುದು. ಸಂಪರ್ಕಿಸಲು ಉಪಯೋಗಿಸುವ ವಿಧಾನಗಳು, ನಾವು ಜೀವಿಸುತ್ತಿರುವಂತಹ ಸಮಯದಲ್ಲಿ ಬದಲಾಗುತ್ತಿರುತ್ತವೆ.

## ನಾಯಕರುಗಳನ್ನು ಎಬ್ಬಿಸುತ್ತಿರುವಂತಹ ಒಂದು ಸಭೆ

ಗಲಾತ್ಯದವರಿಗೆ 2:9

**ಸಭಾಸ್ತಂಭಗಳೆಂದು ಹೆಸರುಗೊಂಡಿರುವ ಯಾಕೋಬ ಕೇಫ ಯೋಹಾನರು ಕಂಡು ದೇವರು ನನಗೆ ದಯಪಾಲಿಸಿರುವ ವರವನ್ನು ತಿಳಿಕೊಂಡು ಐಕ್ಯವನ್ನು ತೋರಿಸುವದಕ್ಕಾಗಿ ನನಗೂ ಬಾರ್ನಬನಿಗೂ ಬಲಗೈ ಕೊಟ್ಟು - ನೀವು ಅನ್ಯಜನರ ಬಳಿಗೆ ಹೋಗಿರಿ, ನಾವು ಸುನ್ನತಿಯವರ ಬಳಿಗೆ ಹೋಗುತ್ತೇವೆ ಅಂದರು.**

ನಾಯಕರುಗಳು ದೇವರ ಮನೆಯಲ್ಲಿ ಸ್ತಂಭಗಳಾಗಿದ್ದಾರೆ ದೊಡ್ಡ ಮನೆ ಅಥವಾ ಕಟ್ಟಡಕ್ಕೆ ಅನೇಕ ಸ್ತಂಭಗಳ ಅವಶ್ಯಕವಿರುತ್ತದೆ ಇದರ ಅರ್ಥವೇನೆಂದರೆ, ಒಂದು ಬಲಿಷ್ಟ ಸ್ಥಳೀಯ ಸಭೆಯನ್ನು ಕಟ್ಟಲೂ ಅನೇಕ ನಾಯಕರುಗಳ ಅಗತ್ಯವಿದೆ.

ಉತ್ತಮ ನಾಯಕರನ್ನು ಎಬ್ಬಿಸುವುದು ಸಮಯ ತೆಗೆದುಕೊಳ್ಳುತ್ತದೆ. ಹಿರಿಯ ನಾಯಕರು ಮತ್ತು ಹಿರಿಯ ಸಭಾಪಾಲಕರುಗಳಾದ ನಾವು ನಮ್ಮ ಸುತ್ತಲಿನ ನಾಯಕರುಗಳನ್ನು ಪೋಷಿಸಲೂ ಹೃದಯ ಹೊಂದಿರುವುದು ಅವಶ್ಯಕವಾಗಿದೆ. ನಾವು ಅಸುರಕ್ಷಿತವಾಗಿರಬಾರದು ಇತರರು ಎಬ್ಬಿಸಲ್ಪಡಲು ಅವಕಾಶವನ್ನು ಮತ್ತು ಜಾಗವನ್ನು ನಾವು ಒದಗಿಸುವುದು ಅವಶ್ಯಕವಾಗಿದೆ. ನಮ್ಮ ಕೆಲವು ಜವಬ್ದಾರಿಗಳು ಮತ್ತು ಕೆಲಸದ ಕ್ಷೇತ್ರಗಳು ಹೋದರೆ ಹೋಗಲಿ ಎಂಬ ಚಿತ್ತವುಳ್ಳವರಾಗಿರಬೇಕು ಆದ್ದರಿಂದ ಇತರರು ಅವುಗಳನ್ನು ತೆಗೆದುಕೊಳ್ಳಲು ಅವಕಾಶವನ್ನು ಹೊಂದುತ್ತಾರೆ. ನಾಯಕರುಗಳ ಮೇಲೆ ನಿಗಾ ಇಡಬೇಕು ಅವರ ತಪ್ಪುಗಳಲ್ಲಿ ತಾಳ್ಮೆಯಿಂದಿರಬೇಕು. ಪ್ರೀತಿಯಿಂದ ತಿದ್ದಿರಿ

ಅವರ ಬೆಳವಣಿಗೆಯಲ್ಲಿ ಅವರನ್ನು ಹುರಿದುಂಬಿಸಿರಿ. ನಾಯಕರುಗಳನ್ನು ಎಬ್ಬಿಸುವ ಪ್ರಕ್ರಿಯೆಯಲ್ಲಿ ನೋವು ಮತ್ತು ಮನೋವ್ಯಥೆ ಇರುತ್ತದೆ. ಎಲ್ಲಾ ವ್ಯಕ್ತಿಗಳು ಅವರು ಮಾಡಬೇಕಾದಂತೆ ಹೊರಗಡೆ ಹೋಗುವುದಿಲ್ಲ ಆದರೆ ಎಲ್ಲಾ ಪ್ರಯತ್ನವು ಮೌಲ್ಯವುಳ್ಳದ್ದು. ಸ್ಥಳೀಯ ಸಭೆಯು ಅಧಿಕವಾಗಿ ನಾಯಕರುಗಳನ್ನು ಹೊಂದಿದ್ದರೆ ಅದು ಬಲವಾಗಿರುತ್ತದೆ. ಸ್ಥಳೀಯ ಸಭೆಯು ಅಧಿಕವಾಗಿ ನಾಯಕರನ್ನು ಹೊಂದಿದ್ದರೆ ದೇಹವಾಗಿ ಅಧಿಕವಾದ್ದದ್ದನ್ನು ಮಾಡಲೂ ಶಕ್ತವಾಗುತ್ತದೆ.

## ನಿರಂತರತೆಯನ್ನು ಸ್ಥಾಪಿಸಲು ಶಕ್ತವಾದ ಒಂದು ಸಭೆ

2 ತಿಮೊಥೆಯನಿಗೆ 2:1,2

**ನನ್ನ ಮಗನೇ ನೀನು ಕ್ರಿಸ್ತ ಯೇಸುವಿನಲ್ಲಿರುವ ಕೃಪೆಯಿಂದ ಬಲಹೊಂದಿದವನಾಗು ನೀನು ನನ್ನಿಂದ ಅನೇಕ ಸಾಕ್ಷಿಗಳ ಮುಂದೆ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸಶಕ್ತರಾದ ನಂಬಿಗಸ್ತ ಮನುಷ್ಯರಿಗೆ ಒಪ್ಪಿಸಿಕೊಡು.**

ಹಿರಿಯ ನಾಯಕರುಗಳು / ಹಿರಿಯ ಸಭಾಪಾಲಕರುಗಳಾಗಿ, ನಾವು ಶಾಶ್ವತವಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ನಾವು ಚಲಿಸುವ ಸಮಯವು ಬರುತ್ತದೆ. ಹೊಸ ಸೇವಾ ಕ್ಷೇತ್ರಕ್ಕೆ ಕರ್ತನು ಮಹಿಮೆಗೆ ಕರೆಯಬಹುದು. ನಮ್ಮ ನಿರ್ಗಮನದ ಬಗ್ಗೆ ಚಿಂತಿಸಲು ಪ್ರಾರಂಭಿಸಿರಿ ಮತ್ತು ಯೋಜನೆಯನ್ನು ಮಾಡಿರಿ. ನಾವು ನಿರಂತರವಾಗಿ ನಮ್ಮ ಮುಂದೆ ಬರುವವರನ್ನು ಒಂದು ಎರಡು ಅಥವಾ ಮೂರು ತಲೆಮಾರಿನವರಗೆ (ದಶಮಾನಗಳ) ಎಬ್ಬಿಸಬೇಕು ಉದಾಹರಣೆಗೆ, ಪ್ರಸಕ್ತದಲ್ಲಿರುವ ಹಿರಿಯ ನಾಯಕನು 40ನೇ ವರ್ಷದಲ್ಲಿದ್ದರೆ (40 ವರ್ಷದವನಾಗಿದ್ದರೆ) ಅವನಿಗಿಂತ ವಯಸ್ಸಾದವರು ಅಥವಾ ಅವನ ಗೆಳೆಯರುಗಳ ಜೊತೆಗೆ ಅವನು 30ನೇ, 20ನೇ ಹದಿಹರೆಯದಲ್ಲಿರುವವರನ್ನು ಪೋಷಿಸಬೇಕು ಖಂಡಿತವಾಗಿ ನಾವು ಜನರ ಜೀವಿತಗಳು ಮತ್ತು ಅವರ ಭವಿಷ್ಯವನ್ನು ಹತೋಟಿಯಲ್ಲಿಟ್ಟುಕೊಳ್ಳುವುದಿಲ್ಲ ಆದಾಗ್ಯೂ ಕಿರಿಯ ನಾಯಕರುಗಳನ್ನು ನಿರಂತರವಾಗಿ ಪೋಷಿಸುವುದನ್ನು ಯಾವಾಗಲೂ ನಮ್ಮ ಭಾಗವಾಗಿ ಮಾಡುವುದನ್ನು ಖಚಿತಪಡಿಸಿಕೊಳ್ಳುತ್ತೇವೆ. ನಾವು ಮುಂದೆ ಹೋಗಬೇಕಾದ ಸಮಯವು ಬರುವಾಗ ದೇವರು ಅವರಲ್ಲಿ ಯಾರನ್ನಾದರೂ ನಮ್ಮ ಸ್ಥಾನ ತೆಗೆದುಕೊಳ್ಳಲು ಆರಿಸಿಕೊಳ್ಳಬಹುದು. ಆದರ್ಶವಾಗಿ, ನಮಗಿಂತ 20 ರಿಂದ 25 ವರ್ಷ ಕಿರಿಯವರೊಟ್ಟಿಗೆ ಕೆಲಸಮಾಡಬೇಕು ಮತ್ತು ಮುಂದಿನ ತಲೆಮಾರಿನವರಿಗೆ ದಂಡವನ್ನು ಕೊಂಡೊಯ್ಯುವ ಅದೇ ವಯಸ್ಸಿನ ಗುಂಪಿನವರಾದವರನ್ನು ಪೋಷಣೆ ಮಾಡಲೂ ಪ್ರಾರಂಭಿಸಬೇಕು.

ನ್ಯಾಯಸ್ಥಾಪಕರು 2:7-11
**ಯೆಹೋಶುವನ ದಿನಗಳಲ್ಲಿಯೂ ಅವನ ಕಾಲದಿಂದ ಇನ್ನೂ ಜೀವಿಸುತ್ತಾ ಯೆಹೋವನು ಇಸ್ರಾಯೇಲ್ಯರಿಗೋಸ್ಕರ ನಡಿಸಿದ ಮಹತ್ಕಾರ್ಯಗಳಿಗೆ ಸಾಕ್ಷಿಗಳಾಗಿದ್ದ ಹಿರಿಯರ ದಿನಗಳಲ್ಲಿಯೂ ಇಸ್ರಾಯೇಲ್ಯರು ಯೆಹೋವನನ್ನು ಸೇವಿಸುತ್ತಿದ್ದರು. ಯೆಹೋವನ ಸೇವಕನಾದ ನೂನನ ಮಗ ಯೆಹೋಶುವನು ನೂರಹತ್ತು ವರುಷದವನಾಗಿ ಮರಣ ಹೊಂದಿದನು. ಅವನನ್ನು ಅವನ ಸ್ವಾಸ್ತ್ಯಭೂಮಿಯಾದ ತಿಮ್ನತ್ ಹೆರೆಸ್ ಎಂಬಲ್ಲಿ ಸಮಾಧಿಮಾಡಿದರು ಅದು ಎಫ್ರಾಯಾಮ್ ಪರ್ವತ ಪ್ರದೇಶದಲ್ಲಿರುವ ಗಾಷ್ ಬೆಟ್ಟದ ಉತ್ತರದಿಕ್ಕಿನಲ್ಲಿರುತ್ತದೆ ಅವನ ಕಾಲದವರೆಲ್ಲರೂ ಪಿತೃಗಳ ಬಳಿಗೆ ಸೇರಿದ ಮೇಲೆ ಯೆಹೋವನನ್ನೂ ಆತನು ಇಸ್ರಾಯೇಲ್ಯರಿಗೋಸ್ಕರ ಮಾಡಿದ ಮಹತ್ಕಾರ್ಯಗಳನ್ನು ಅರಿಯದಿದ್ದ ಬೇರೊಂದು ಸಂತಾನವು ಹುಟ್ಟಿತು. ಈ ಇಸ್ರಾಯೇಲ್ಯರು ಬಾಳನ ಪ್ರತಿಮೆಗಳನ್ನು ಪೂಜಿಸಿ ಯೆಹೋವನ ದೃಷ್ಟಿಗಲ್ಲಿ ದ್ರೋಹಿಗಳಾದರು.**

ನಾವು ಇಲ್ಲಿರುವಂತದ್ದು ಸಾಧ್ಯವಾದಷ್ಟು ನಮ್ಮ ನಂತರದ ತಲೆಮಾರಿನವರ ಮೇಲೆ ಪರಿಣಾಮ ಬೀರುವುದು ಪ್ರಾಮುಖ್ಯವಾಗಿದೆ. ಆದ್ದರಿಂದ ನಾವು ಹೋದ ನಂತರ ಕರ್ತನ ಕಾರ್ಯವು ಬಹಳ ಸಮಯ ಮುಂದುವರೆಯುತ್ತದೆ. ಇಲ್ಲದಿದ್ದರೆ ಇತಿಹಾಸದಲ್ಲಿ ಕರ್ತನು ಮಾಡಿದ್ದರ ಮತ್ತು ಪ್ರಾಚೀನ ದಿನಗಳ ಬಗ್ಗೆ ತಿಳುವಳಿಕೆ ಇಲ್ಲದ ಸಂತತಿಯು ಏಳಬಹುದು ಆದ್ದರಿಂದ ಯುವ ನಾಯಕರುಗಳನ್ನು ಪೋಷಿಸುವ ಸಂಸ್ಕೃತಿಯನ್ನು ನಾವು ಸೃಷ್ಟಿಸುತ್ತೇವೆ. ಆದುದರಿಂದ ಪ್ರತಿಯೊಬ್ಬರು ಇದನ್ನು ಮಾಡಬೇಕೆಂಬುದಾಗಿ ಅರ್ಥ ಮಾಡಿಕೊಳ್ಳುತ್ತಾರೆ ಮತ್ತು ಕಾರ್ಯರೂಪಕ್ಕೆ ಬರುತ್ತದೆ ಸಫಲವಾಗುತ್ತಿರುವ ಪೀಳಿಗೆಗಳನ್ನು ಆಶೀರ್ವದಿಸಲು ಸ್ವಾಸ್ತ್ಯವನ್ನು ನಾವು ಬಿಡಬೇಕು ಮುಖ್ಯ ಬೋಧನೆಗಳು, ಕೇಂದ್ರೀಯ ಸತ್ಯಗಳು ಕರೆಯನ್ನು ಅರ್ಥಮಾಡಿಕೊಳ್ಳುವುದು ಮತ್ತು ಸ್ಥಳೀಯ ಸಭೆಯ ನಿಲುವಂಗಿಗಳನ್ನು ಹಿಂದೆ ಬಿಡಬೇಕಾಗಿರುವುದು ಅಗತ್ಯವಾಗಿದೆ ಆದ್ದರಿಂದ ನಮ್ಮ ಪೀಳಿಗೆಯು ಇವುಗಳನ್ನು ಸುಲಭವಾಗಿ ಗ್ರಹಿಸಬಹುದು ಮತ್ತು ಇವುಗಳಿಗೆ ಜೋಡಣೆಯಾಗಿರಬಹುದು. ಇದನ್ನು ಮಾಡಲು ಇರುವ ಸುಲಭ ಮಾರ್ಗವು ನಿಮ್ಮ ಸಂದೇಶ ಮತ್ತು ಬೋಧನೆಯನ್ನು ದಾಖಲಿಸಿರಿ ಮತ್ತು ಎಲ್ಲರಿಗೂ ದೊರಕುವಂತೆ ಮಾಡಿರಿ ಇನ್ನೊಂದು ಮಾರ್ಗವು ಇವುಗಳನ್ನು ಮುದ್ರಿಸಿರಿ ಆದ್ದರಿಂದ ನಮ್ಮ ನಂತರ ಬರುವಂತಹವರು ಓದಬಹುದು ಮತ್ತು ಕರ್ತನು ನಮ್ಮಲ್ಲಿ ಪ್ರೇರಿಸಿದಂತಹವುಗಳನ್ನು ಕಲಿಯಬಹುದಾಗಿದೆ.

ಅನೇಕ ಸಭಾಪಾಲಕರು ಸೇವಾ ಕಾರ್ಯಗಳನ್ನು ಅವರ ಮಕ್ಕಳು ನೋಡಿಕೊಳ್ಳುವುದಕ್ಕೆ ಒಲವು ತೋರಿಸುವುದನ್ನು ನಾನು ಅರಿತುಕೊಂಡಿದ್ದೇನೆ. ಅವರು ಯಥಾರ್ಥವಾಗಿ ಕರೆಯಲ್ಪಟ್ಟಿದ್ದರೆ, ಅಭಿಷೇಕಿಸಲ್ಪಟ್ಟಿದ್ದರೆ ಮತ್ತು ದೇವರಿಂದ ವರಗಳು

ಮುಂತಾದವುಗಳನ್ನು ಹೊಂದಿದ್ದರೆ ಅದು ಉತ್ತಮವಾಗಿದೆ. ಆದಾಗ್ಯೂ ಬೇರೆ ಯಾವುದೋ ವಿಷಯಕ್ಕಾಗಿ ಉದಾಹರಣೆಗೆ ವ್ಯಾಪಾರ ಅಥವಾ ಇತರ ಬೇರೆ ವೃತ್ತಿಗೆ ದೇವರು ಕರೆದಿದ್ದರೆ ಅಭಿಷೇಕಿಸಿದ್ದರೆ ಮತ್ತು ಅವರಿಗೆ ವರಗಳನ್ನು ಕೊಟ್ಟಿದ್ದರೆ ನಮ್ಮ ಕುಟುಂಬದ ವಿಷಯಗಳಲ್ಲಿ ಅವರನ್ನು ಇಡಲು ನಾವು ಅಪೇಕ್ಷಿಸುವುದರಿಂದಾಗಿ ಸೇವೆಯನ್ನು ಮುಂದುವರೆಸಲು ಅವರನ್ನು ಬಲವಂತಪಡಿಸಿದರೆ ಅದು ಬಹು ತಪ್ಪಾಗಿರುವುದಾಗಿರುತ್ತದೆ.

# 6

# ಸಭೆ ಬೆಳವಣಿಗೆಯ ತತ್ವಗಳು

ನಾವೆಲ್ಲರೂ ಫಲಕೊಡಬೇಕೆಂಬುದಾಗಿ ದೇವರು ಅಪೇಕ್ಷಿಸುತ್ತಾನೆ. ನಾವು ಫಲಕೊಡುವಾಗ ತಂದೆಗೆ ಮಹಿಮೆ ಉಂಟಾಗುತ್ತವೆ. (ಯೋಹಾನ 15:8) ಸ್ಥಳೀಯ ಸಭೆಯು ಫಲಭರಿತವಾಗಿರಲು ಇರುವ ಒಂದು ಅಂಶವು ನಿರಂತರವಾಗಿ ಜನರನ್ನು ಕರ್ತನಿಗಾಗಿ ಗೆಲ್ಲಬೇಕು ಮತ್ತು ಸಂಖ್ಯೆಯಲ್ಲಿ ಬೆಳವಣಿಗೆ ಹೊಂದಬೇಕು ಅನೇಕ ನಗರಗಳು ಮತ್ತು ಪಟ್ಟಣಗಳಲ್ಲಿ ನಮ್ಮಲ್ಲಿ ಮತ್ತು ನಮ್ಮ ಸುತ್ತಲೂ ಲಕ್ಷಾಂತರ ಜನರಿದ್ದಾರೆ ಯೇಸುಕ್ರಿಸ್ತನ ಸುವಾರ್ತೆಯನ್ನು ನಮಗೋಸ್ಕರ ಮಾತ್ರ ಇಟ್ಟುಕೊಳ್ಳುವುದು ನ್ಯಾಯವಲ್ಲದ್ದಾಗಿದೆ ಆದ್ದರಿಂದ ನಾವು ಸಣ್ಣ ಮತ್ತು ಸ್ನೇಹಶೀಲ ಸಭೆಯಾಗಿ ಉಳಿದುಕೊಳ್ಳುತ್ತೇವೆ. ನಾವು ಜನರಿಗೆ ಸುವಾರ್ತೆ ಸಾರದಿದ್ದರೆ ಹೊಸಜನರುಗಳನ್ನು ದೇವರ ರಾಜ್ಯಕ್ಕೆ ಕರೆತರದಿದ್ದರೆ ಮತ್ತು ಅವರನ್ನು ಸ್ಥಳೀಯ ಸಭೆಯ ಸಭಿಕರೊಂದಿಗೆ ಸಮೀಕರಿಸದಿದ್ದರೆ ಆತನು ನಮಗಾಗಿ ಕೊಟ್ಟ ಅದೇಶಾಧಿಕಾರ ಮತ್ತು ಆತನು ಪಾವತಿಸಿದ ಬೆಲೆಗೆ ನಾವು ಅನ್ಯಾಯ ಮಾಡುವವರಾಗುತ್ತೇವೆ.

ಸಭೆಯ ಬೆಳವಣಿಗೆಯು ಆತ್ಮಿಕ ಮತ್ತು ಸ್ವಾಭಾವಿಕ ಪ್ರಯತ್ನದ ಆರೋಗ್ಯಕರ ಸಂಯೋಜನೆಗಳ ಫಲಿತಾಂಶವಾಗಿರುತ್ತದೆ. ನಾವು ಆತ್ಮಿಕ ಕ್ಷೇತ್ರದಲ್ಲಿ ಮಾಡಬೇಕಾದ ಕಾರ್ಯಗಳಿರುತ್ತವೆ ಮತ್ತು ಸ್ವಾಭಾವಿಕದಲ್ಲಿ ನಮ್ಮನ್ನು ಸಂಘಟಿಸಿಕೊಂಡು ಕಾರ್ಯಗಳನ್ನು ಮಾಡಬೇಕು. ದೇವರು ವೈವಿಧ್ಯಮಯ ಮತ್ತು ಕಾರ್ಯ ಮಾಡುವಾಗ ಸ್ಥಳೀಯ ಸಭೆಯು ಬೆಳೆಯುವುದನ್ನು ನೋಡಲು ಮತ್ತು ಆತ್ಮಗಳನ್ನು ಗೆಲ್ಲುವ ಕಡೆಗೆ ಕಾರ್ಯ ಮಾಡುವಾಗ ಅನ್ವಯಿಸಿಕೊಳ್ಳಬೇಕಾದ ಕೆಲವು ಸಾಮಾನ್ಯ ತತ್ವಗಳಿವೆ.

ಡೆವಿಡ್ ಪಾಲ್ ಯೊಂಗಿಚೋ, ದಕ್ಷಿಣ ಕೊರಿಯಾದಲ್ಲಿ ಯುಯೋಡೋ ಫುಲ್ ಗಾಸ್ಪೆಲ್ ಚರ್ಚ್ (YFGC) ಹಿರಿಯ ಸಭಾಪಾಲಕರು ಮತ್ತು ಸಹ ಸಂಸ್ಥಾಪಕರಾಗಿದ್ದಾರೆ. 1958ರಲ್ಲಿ ಐದು ಜನರೊಂದಿಗೆ ತಿರಸ್ಕರಿಸಿದ ಸೇನಾ ಗುಡಿಸಲುಗಳನ್ನು ಉಪಯೋಗಿಸಿಕೊಂಡು ಆರಂಭಿಸಿದರು. ಮೂವತ್ತು ವರ್ಷಗಳೊಳಗೆ ಸದಸ್ಯರ ಸಂಖ್ಯೆಯು 8 ಲಕ್ಷದಷ್ಟು (800000) ಹೆಚ್ಚಿತ್ತು.

YFGCಯು ಪ್ರಪಂಚದಲ್ಲಿ ಮತ್ತು ಕ್ರೈಸ್ತ ಇತಿಹಾಸದಲ್ಲಿ ಒಂದು ದೊಡ್ಡ ಸಭೆಯಾಗಿದೆ. ಅವರು ಬರೆದ ಪುಸ್ತಕಗಳ ಮೂಲಕವಾಗಿ ಮತ್ತು ಸಭಾ ಬೆಳವಣಿಗೆಯ ಸಮಾವೇಶಗಳ ಮೂಲಕವಾಗಿ, ಯಾಂಗಿಚೋರವರು ಸಭಾ ಬೆಳವಣಿಗೆಯಲ್ಲಿ ಉಪಯೋಗಿಸಿದ ಅನುಭವಗಳು ಮತ್ತು ಕರ್ತನು ಕಲಿಸಿದವುಗಳ ಮುಖ್ಯ ತತ್ವಗಳನ್ನು ಹಂಚಿಕೊಳ್ಳುತ್ತಾರೆ ನಾವು ಪ್ರಮುಖ ತತ್ವಗಳ ರೂಪರೇಖೆಯನ್ನು ಇಲ್ಲಿ ರೂಪಿಸುತ್ತೇವೆ.

## ದೊಡ್ಡದಾಗಿ ಬೆಳೆಯುತ್ತಿರುವ ಸಭೆಯ ದರ್ಶನ ಹೊಂದಿರಿ

ಸಭೆಯ ಬೆಳವಣಿಗೆಯು ನಿಮ್ಮ ಹೃದಯದಲ್ಲಿ ಪ್ರಾರಂಭಗೊಳ್ಳುತ್ತದೆ ನಿಮ್ಮ ಸ್ವಂತ ಹೃದಯದ ದರ್ಶನದಿಂದ ಪ್ರಾರಂಭಗೊಳ್ಳುತ್ತದೆ. ಕನಸ್ಸುಗಳು ಮತ್ತು ದರ್ಶನವು ಸಭೆಯ ಬೆಳವಣಿಗೆಗೆ ಅಸ್ತಿವಾರಗಳಾಗಿವೆ. ಸಭೆಯು ನಿಮ್ಮ ಹೃದಯದಲ್ಲಿ ಕಟ್ಟಲ್ಪಟ್ಟಿದೆ. ನಿಮ್ಮ ಸಭೆಗಿರುವ ದರ್ಶನವನ್ನು ನನಗೆ ತೋರಿಸಿರಿ, ನಾವು ನಿಮ್ಮ ಭವಿಷ್ಯತ್ತಿನ ಸಭೆಯನ್ನು ತೋರಿಸುತ್ತೇನೆ. ನಿಮ್ಮ ದರ್ಶನ ಮತ್ತು ಕನಸ್ಸುಗಳ ಮೂಲಕವಾಗಿ ಸಭೆಯು ಬೆಳೆಯುತ್ತದೆ.

ದರ್ಶನವು ಬಲವುಳ್ಳದ್ದು ಯಾಕೆಂದರೆ ಇದು ಪವಿತ್ರಾತ್ಮನ ಭಾಷೆಯಾಗಿದೆ. ನಿಮ್ಮ ಸಭೆಯನ್ನು ನಿಖರವಾಗಿ ನಿಮ್ಮ ಆತ್ಮನಲ್ಲಿ ನೋಡಬೇಕು ಮತ್ತು ಪವಿತ್ರಾತ್ಮನು ಅದನ್ನು ವಾಸ್ತವದಲ್ಲಿ ಅರಿವಾಗುವಂತೆ ಮಾಡುತ್ತಾನೆ. ದರ್ಶನಗಳು ಮತ್ತು ಕನಸ್ಸುಗಳು ಆತ್ಮನೊಂದಿಗೆ ಸಂಪರ್ಕಿಸಲು ಇರುವ ಪವಿತ್ರಾತ್ಮನ ಭಾಷೆಯಾಗಿದೆ.

ನೀವು ಯಾವಾಗ ದರ್ಶನವನ್ನು ಅಪ್ಪಿಕೊಳ್ಳುತ್ತಿರೊ ಆಗ ದರ್ಶನವು ನಿಮ್ಮನ್ನು ಅಪ್ಪಿಕೊಳ್ಳುತ್ತದೆ ನೀವು ದರ್ಶನವನ್ನು ತಯಾರಿಸುವುದಲ್ಲ ಆದರೆ ದರ್ಶನವು ನಿಮ್ಮನ್ನು ತಯಾರಿಸುತ್ತದೆ ಯಾವಾಗ ನೀವು ಪವಿತ್ರಾತ್ಮನಿಂದ ಪ್ರೇರಿತವಾದ ದರ್ಶನವನ್ನು ನಿಮ್ಮ ಹೃದಯದಲ್ಲಿ ಹೊಂದಿರುತ್ತಿರೊ ಆಮೇಲೆ ದರ್ಶನವು ನಿಮ್ಮನ್ನು ತಯಾರು ಮಾಡುತ್ತದೆ. ದರ್ಶನವು ನಿಮ್ಮನ್ನು ಬದಲಾಯಿಸುತ್ತದೆ. ದರ್ಶನವು ನಿಮಗೆ ಸಹಾಯ ಮಾಡುತ್ತದೆ.

ನೀವು ನಿಭಾಯಿಸಬಲ್ಲರೆಂಬುದನ್ನು ನೀವು ನೋಡಬೇಕಾಗುತ್ತದೆ. ದೇವರು ಇಲ್ಲದ್ದನ್ನು ಇರುವದಾಗಿ ಕರೆಯುವವನಾಗಿದ್ದಾನೆ. (ರೋಮಾಪುರದವರಿಗೆ 4:17)

ನೀವು ನೋಡುವಂತದ್ದನ್ನು ನೀವು ಹೊಂದಬಹುದು. ದೇವರು ಅಬ್ರಹಾಮನಿಗೆ ನೀನು ನೋಡುವಂತಹ ಸ್ಥಳವನ್ನು ನಾನು ನಿನಗೆ ಕೊಡುತ್ತೇನೆ ಎಂಬುದಾಗಿ ಹೇಳಿದನು (ಆದಿಕಾಂಡ 13:14-18)

ದೇವರು ಒಂದು ಅಪಾರವಾದ ಜಲಾಶಯದಂತಿದ್ದಾನೆ. ನೀವು ಬರೀ ಸ್ವಲ್ಪ ಹನಿ ಮಾತ್ರ ಹೊಂದುತ್ತೀರಿ. ದೊಡ್ಡದಾದ ಕೊಳವೆಯಿಂದ ಜಲಾಶಯದೊಂದಿಗೆ ಸಂಪರ್ಕ ಹೊಂದಿದ್ದರೆ ನುಗ್ಗುತ್ತಿರುವ ನೀರಿನ ನದಿಗಳನ್ನು ಹೊಂದುತ್ತೀರಿ.ಕೊಳವೆಯು ನೀವು ದೇವರೊಂದಿಗೆ ಸಂಪರ್ಕ ಹೊಂದುವ ನಿಮ್ಮ ದರ್ಶನಗಳು ಮತ್ತು ಕನಸ್ಸುಗಳಾಗಿವೆ.

ನಾಲ್ಕನೆಯ ಆಯಾಮವು ತ್ರೈಯೇಕ ದೇವರು ವಾಸಿಸುವ ಆತ್ಮಿಕ ಕ್ಷೇತ್ರವಾಗಿದೆ. ಆದ್ದರಿಂದ ಪವಿತ್ರಾತ್ಮನು ದರ್ಶನಗಳು ಮತ್ತು ಕನಸ್ಸುಗಳ ಭಾಷೆಯನ್ನು ಮತ್ತು ಪವಿತ್ರಾತ್ಮನ ಭಾಷೆಯನ್ನು ಕಲಿಸಲಿ ನಂತರ ಅಂತಹ ದರ್ಶನಗಳನ್ನು ಇಟ್ಟುಕೊಳ್ಳಿರಿ ಅಂತಹ ಕನಸ್ಸುಗಳನ್ನು ಇಟ್ಟುಕೊಳ್ಳಿರಿ ದೇವರ ದರ್ಶನಗಳು ಮತ್ತು ಕನಸ್ಸುಗಳಲ್ಲಿ ಜೀವಿಸಿರಿ. ಅದ್ಭುತಗಳ ಪದದಲ್ಲಿ ಆಲೋಚಿಸಿರಿ ಆ್ಯಂಡ್ರೀವ್ ಶಾಲೆಯು ದೇವರ ದರ್ಶನವನ್ನು ಕೇಳಲೂ ಸಾಧ್ಯತೆಯ ನಿಯಮಗಳನ್ನು ಆಲೋಚಿಸಲು, ನಾವು ನಮಗಿರುವಂತಹದ್ದನ್ನು ಕೊಡಲು ಆಹ್ವಾನಿಸುತ್ತದೆ ಮತ್ತು ಉಳಿದ ಎಲ್ಲವನ್ನು ಕರ್ತನು ಮಾಡುವನು.

## ದೊಡ್ಡದಾಗಿ ಬೆಳೆಯುವ ಸಭೆಗಾಗಿ ಪ್ರಬಲ ದಹಿಸುವ ಬಯಕೆ ಹೊಂದಿರಿ

ನೀವು ಸುಡುವ ಬಯಕೆ ಹೊಂದಿರಬೇಕು ಮತ್ತುನಿಮ್ಮ ಸಭೆಯು ಬೆಳೆಯುವುದನ್ನು ನೋಡಲು ಉತ್ಸಾಹ ಹೊಂದಿರಬೇಕು.

ನಿಮ್ಮ ಬಯಕೆಯು ದರ್ಶನಕ್ಕೆ ಬಲಕೊಡುತ್ತದೆ ಮತ್ತು ನಿಮ್ಮ ದರ್ಶನವು ನಿಮ್ಮ ಬಯಕೆಯನ್ನು ಹೆಚ್ಚಿಸುತ್ತದೆ.

ನೀವು ಬಯಕೆ ಹೊಂದಿರುವಾಗ, ದಿನನಿತ್ಯ ದಿನೇ ದಿನೇ ನೀವು ಪ್ರಾರ್ಥಿಸುತ್ತೀರಿ ಮತ್ತು ದಣಿವರಿಯಿಲ್ಲದೆ ನೀವು ಕೆಲಸ ಮಾಡುತ್ತೀರಿ.

## ನಿರಂತರ ಪ್ರಾರ್ಥನೆ ಮತ್ತು ಆತ್ಮಿಕ ಯುದ್ಧದಲ್ಲಿ ತೊಡಗಿಸಿಕೊಳ್ಳಿ

ಉಜ್ಜೀವನವನ್ನು ಹೊಂದಲು ಪ್ರಾರ್ಥಿಸಿರಿ.

ಪ್ರಾರ್ಥನೆಯು ಸೈತಾನನ ಬಲವನ್ನು ಮುರಿದು ಹಾಕುತ್ತದೆ ಮತ್ತು ಪವಿತ್ರಾತ್ಮನ ಪ್ರಸನ್ನತೆಯನ್ನು ತರುತ್ತದೆ. ನೀವು ಬಲಿಷ್ಟವಾದ ಮನುಷ್ಯನನ್ನು ಬಂಧಿಸಬೇಕು ಆದ್ದರಿಂದ ಅವನ ಹಿಡಿತದಲ್ಲಿರುವ ಜನರನ್ನು ಹೊರಗೆ ತರಬಹುದು. ಪ್ರಾರ್ಥನೆಯ

ಮೂಲಕವಾಗಿ ಸೈತಾನನ್ನು ಬಂಧಿಸುತ್ತೇವೆ ಮತ್ತು ಪವಿತ್ರಾತ್ಮನ ಬಲದಿಂದ ಅವನ ದುಷ್ಟ ಪಡೆಗಳನ್ನು ಬಂಧಿಸುತ್ತೇವೆ.

ನಾವುಗಳು ಪ್ರಾರ್ಥಿಸುವ ಸಭೆಯಾಗಿರಬೇಕು. ನೀವು ಪ್ರಾರ್ಥನೆಯಲ್ಲಿ ಆನಂದಿಸಬೇಕು, ನಾವು ಇದನ್ನು ಪ್ರಾರ್ಥಿಸಲು ಹೊರೆ ಎಂಬುದಾಗಿ ಪರಿಗಣಿಸಬಾರದು.

ನಾವು ದೀರ್ಘವಾಗಿ ಪ್ರಾರ್ಥಿಸುವುದು, ಪವಿತ್ರಾತ್ಮನೊಂದಿಗೆ ಆತ್ಮಿಕ ಐಕ್ಯತೆಯನ್ನು ನಾವು ಆಳವಾಗಿ ಅನುಭವಿಸಬಹುದಾಗಿದೆ.

ಪ್ರಾರ್ಥನೆಯ ಬಲವು ಸುವಾರ್ತೆ ಸಾರಲು ಮತ್ತು ಸುವಾರ್ತೆಗೊಳಿಸಲು ಸುಲಭ ಮಾಡಿಕೊಡುತ್ತದೆ.

## ದೇವರಲ್ಲಿ ಬಲವಾದ ನಂಬಿಕೆಯನ್ನು ಪಾಲಿಸಿರಿ

ದರ್ಶನವು ನೆರವೇರುವುದನ್ನು ನೋಡಲು ನಾವು ನಂಬಿಕೆಯಲ್ಲಿ ದೃಢವಾಗಿ ನಿಲ್ಲಬೇಕು. ನಂಬಿಕೆಯು ನಾವು ನಿರೀಕ್ಷಿಸುವ ಸಂಗತಿಗಳಿಗೆ ವಸ್ತುರೂಪವಾಗಿದೆ ಮತ್ತು ನಾವು ನೋಡದಿರುವ ಸಂಗತಿಗಳಿಗೆ ಪುರಾವೆಯಾಗಿದೆ.(ಇಬ್ರಿಯರಿಗೆ 11:1)

ನಂಬಿಕೆಯನ್ನು ನೀವು ಅನುಭವ ಪಡೆಯಲು ಸಾಧ್ಯವಿಲ್ಲ ನಂಬಿಕೆಯು ಭಾವನೆಯಲ್ಲ. ನಂಬಿಕೆಯು ಆಯ್ಕೆಯಾಗಿದೆ. ನೀವು ನಂಬಲು ಆಯ್ಕೆ ಮಾಡಿಕೊಳ್ಳುವುದು ಆಗಲೇ ನಂಬಿಕೆಯ ಅಳತೆಯನ್ನು ನೀವು ಹೊಂದಿದ್ದೀರಿ (ರೋಮಾಪುರದವರಿಗೆ 12:3) ನಿಮ್ಮ ನಂಬಿಕೆಯ ಗಾತ್ರದ ಬಗ್ಗೆ ಚಿಂತಿಸಬೇಡಿರಿ (ಮತ್ತಾಯ 17:20।)

ನಂಬಿಕೆಯನ್ನು ನೀವು ಮಾತಾಡಬೇಕು. ಅಸ್ತಿತ್ವದಲ್ಲಿರದ ಸಂಗತಿಗಳಿಗೆ ಕರೆ ನೀಡಬೇಕು (ರೋಮಾಪುರದವರಿಗೆ 4:17)

ಸಭೆ ಬೆಳವಣಿಗೆಯ ಅವಧಿಯಲ್ಲಿ ಅನೇಕ ತೊಂದರೆಗಳನ್ನು ನಾವು ಎದುರಿಸುತ್ತೇವೆ. ನಾವು ದೇವರ ವಾಕ್ಯದ ಮೇಲೆ ನಿಂತುಕೊಳ್ಳಬೇಕು ಮತ್ತು ದೇವರಲ್ಲಿ ಭರವಸೆಯಿಡಬೇಕು.

## ಪವಿತ್ರಾತ್ಮನೊಂದಿಗೆ ನಿಕಟವಾದ ಅನ್ಯೋನ್ಯತೆ ಹೊಂದಿರಿ

ಪವಿತ್ರಾತ್ಮನು ಸಭೆಯಲ್ಲಿ ವಾಸಿಸುತ್ತಾನೆ. ಪವಿತ್ರಾತ್ಮನು ಸಭೆಯನ್ನು ಕಟ್ಟುತ್ತಾನೆ.

ನಾವು ಪವಿತ್ರಾತ್ಮನೊಂದಿಗೆ ಆಳವಾದ ಅನ್ಯೋನ್ಯತೆ ಹೊಂದಿರಬೇಕು (2 ಕೊರಿಂಥದವರಿಗೆ 13:14) ಆತನು ನಮ್ಮ ಹಿರಿಯ ಸಹಾಯಕನಾಗಿದ್ದಾನೆ. ನಾವು ಆತನ ಮೇಲೆ ಆತುಕೊಳ್ಳಬೇಕು ಆತನೊಂದಿಗೆ ವೈಯಕ್ತಿಕ ಸಂಬಂಧ ಮತ್ತು ನಿಕಟತೆಯನ್ನು ಬೆಳೆಸಿಕೊಳ್ಳಬೇಕು. ನಾವು ಪವಿತ್ರಾತ್ಮನ ಪ್ರಸನ್ನತೆಯನ್ನು ಹೊಂದಿದ್ದರೆ, ನಾವು ಯೇಸುವಿನ ಅದ್ಭುತಗಳನ್ನು ನೋಡುತ್ತೇವೆ. ಸಭೆಯಲ್ಲಿ ಪವಿತ್ರಾತ್ಮನ ವರಗಳ ತೋರ್ಪಡಿಸುವಿಕೆಗೆ ಅವಕಾಶ ನೀಡಬೇಕು, ಗುರ್ತಿಸಬೇಕು ಮತ್ತು ಕೃಷಿ ಮಾಡಬೇಕು.

ಮೊದಲನೆಯದಾಗಿ ಪವಿತ್ರಾತ್ಮನೊಂದಿಗೆ ಸಮಯ ಕಳೆಯುವುದರಿಂದ, ಆತನಲ್ಲಿ ಕೇಳುವುದರಿಂದ, ನಮ್ಮ ಅನುಭವಗಳು ಮತ್ತು ಆಲೋಚನೆಗಳನ್ನು ಹಂಚಿಕೊಳ್ಳುವುದರಿಂದ ಪವಿತ್ರಾತ್ಮನೊಂದಿಗೆ ನಮ್ಮ ಅನ್ಯೋನ್ಯತೆಯನ್ನು ಬೆಳೆಸಿಕೊಳ್ಳಬೇಕು.

ಎರಡನೆಯದಾಗಿ, ನಮ್ಮ ಎಲ್ಲಾ ಚಟುವಟಿಕೆಗಳಲ್ಲಿ ಪವಿತ್ರಾತ್ಮನೊಂದಿಗೆ ಪಾಲುಗಾರಿಕೆ ಬೆಳೆಸಿಕೊಳ್ಳಬೇಕು. ಪವಿತ್ರಾತ್ಮನು ನಮ್ಮ ಹಿರಿಯ ಸಹಾಯಕನಾಗಿದ್ದಾನೆ. ನಾವುಗಳು ಬರೀ ಆತನ ಕಿರಿಯ ಜೊತೆಗಾರರಾಗಿದ್ದೇವೆ. ನಮ್ಮ ಹಿರಿಯ ಜೊತೆಗಾರನಿಂದ ಕೇಳುವುದು ನಮ್ಮ ಜವಾಬ್ದಾರಿಯಾಗಿದೆ. ದರ್ಶನವು ಆತನಿಂದಲೇ ಬರಬೇಕು. ನಾವು ಬರೀ ಆತನ ಯೋಜನೆಗಳನ್ನು ಕಾರ್ಯಗತಗೊಳಿಸುತ್ತೇವೆ.

ಮೂರನೆಯದಾಗಿ ಪವಿತ್ರಾತ್ಮನು ನಮಗೆ ದೇವರ ಕೃಪೆ ಮತ್ತು ಪ್ರೀತಿಯನ್ನು ತರಲು ಮತ್ತು ನಮ್ಮ ಪ್ರಾರ್ಥನೆ ಮತ್ತು ವಿಜ್ಞಾಪನೆಯನ್ನು ದೇವರಿಗೆ ರವಾನಿಸುವ ಅನುಕೂಲತೆ ಮಾಡಿಕೊಡಬೇಕು

ಕೊನೆಯದಾಗಿ, ನಾವು ಪವಿತ್ರಾತ್ಮನೊಂದಿಗೆ ಐಕ್ಯಗೊಂಡಿದ್ದೇವೆ ಎಂಬುದನ್ನು ಯಾವಾಗಲೂ ಜ್ಞಾಪಿಸಿಕೊಳ್ಳಬೇಕು. ನಾವು ಪವಿತ್ರಾತ್ಮದಿಂದ ಹೊರತುಪಡಿಸಿದ ವೈಯಕ್ತಿಕ ವ್ಯಕ್ತಿಗಳಲ್ಲ.

ಪವಿತ್ರಾತ್ಮನಿಂದ ಕೊಡಲ್ಪಟ್ಟ ದರ್ಶನವನ್ನು ಕಾವು ಕೂರಲು (ಅಥವಾ ಜನನ) ಪ್ರಕ್ರಿಯೆಯ ನಾಲ್ಕು-ಹಂತಗಳನ್ನು ನೋಡುತ್ತೇವೆ:

- ಮೊದಲನೆಯುದಾಗಿ, ಕಾವುಕೂರುವುದು ನಂಬಿಕೆಯಿಂದ ಮತ್ತು ಪವಿತ್ರಾತ್ಮನೊಂದಿಗೆ ನಿಕಟವಾದ ಸಂಬಂಧದ ಸನ್ನಿವೇಶದಿಂದ ಮಾಡಲಾಗುತ್ತದೆ. ಕಾವು ಕೂರುವುದು ನಂಬಿಕೆಯಿಂದ ಮಾಡಲ್ಪಡಬೇಕು.
- ಎರಡನೆಯದಾಗಿ, ನಾವು ಸ್ಪಷ್ಟ ಕಡಿತದ ಉದ್ದೇಶಗಳನ್ನು ಕೇಳಬೇಕು. ನಾವು ನಿರ್ದಿಷ್ಟವಾಗಿ ಮತ್ತು ಖಂಡಿತವಾಗಿ ಕೇಳಬೇಕು.
- ಮೂರನೆಯದಾಗಿ, ಭರವಸೆಗಾಗಿ ಪ್ರಾರ್ಥಿಸಿರಿ.
- ನಾಲ್ಕನೆಯದಾಗಿ, ನಾವು ಭರವಸೆ ಹೊಂದಿದಾಗ, ನಾವು ದೇವರಿಗೆ ಕೃತಜ್ಞತೆ ಸಲ್ಲಿಸಬೇಕು ಮತ್ತು ನಮ್ಮ ಬಾಯಿಯ ಮೂಲಕವಾಗಿ ಎಲ್ಲವನ್ನು ಸಾರಬೇಕು.

ಸಭೆಯ ಬೆಳವಣಿಗೆಯು ನಮ್ಮ ಮಾನವನ ಸಾಮರ್ಥ್ಯಗಳು ಮತ್ತು ಕಾರ್ಯತಂತ್ರದ ಮೇಲೆ ಅವಲಂಬಿಸಿರುವುದಿಲ್ಲ. ಸಭೆಯ ಬೆಳವಣಿಗೆಯು, ವಿಚಾರಗಳ ಸರಣಿ, ತತ್ವಗಳು ಮತ್ತು ತಂತ್ರಗಳಿಗಿಂತ ಮಿಗಿಲಾದುದಾಗಿದೆ.

## ದೇವರ ಬಲವನ್ನು ತೋರ್ಪಡಿಸಲು ಸಂದೇಶ ನೀಡುವುದು, ಅಗತ್ಯತೆಗಳನ್ನು ಪೂರೈಸುವುದು ಮತ್ತು ಆಶೀರ್ವಾದಗಳನ್ನು ಬಿಡುಗಡೆ ಮಾಡುವುದು.

ನಿಮ್ಮ ಪ್ರಸಂಗವು ಪರಲೋಕವನ್ನು ಭೂಮಿಯ ಮೇಲೆ ತರಬೇಕು. ನಿಮ್ಮ ಪ್ರಸಂಗವು ಜನರುಗಳ ಅಗತ್ಯತೆಗಳನ್ನು ಯೇಸುಕ್ರಿಸ್ತನ ಮೂಲಕವಾಗಿ ಪೂರೈಸಬೇಕು. ನಾವು ಪ್ರಸಂಗಿಸಬೇಕು ಮತ್ತು ಕ್ಷಮಾಪಣೆ, ಸ್ವಸ್ಥತೆ, ದೆವ್ವಗಳನ್ನು ಬಿಡಿಸುವುದು, ಹಸಿದವರಿಗೆ ಉಣಬಡಿಸುವುದು - ದೇವರ ರಾಜ್ಯವನ್ನು ಪ್ರತಿನಿಧಿಸುವಂತಹ ಎಲ್ಲವೂಗಳ ಸೇವೆ ಸಲ್ಲಿಸಬೇಕು.

ನಾವು ಯಶಸ್ವಿಯಾಗಿರಬೇಕು ಮತ್ತು ಆತ್ಮನಲ್ಲಿ ದೇಹದಲ್ಲಿ ಮತ್ತು ಪ್ರಾಣದಲ್ಲಿ ಸಮೃದ್ಧಿಯಾಗಿರಬೇಕೆಂಬುದಾಗಿ ದೇವರು ಬಯಸುತ್ತಾನೆ. ಯಶಸ್ವಿ ಜೀವಿತ ಅಥವಾ ಸಮೃದ್ಧಿಯು ಅರ್ಥವು ಮೂರು-ಪಟ್ಟು ಆಶೀರ್ವಾದಗಳಾಗಿದೆ ಆತ್ಮಿಕ ಆಶೀರ್ವಾದಗಳು, ಮತ್ತು ಆರೋಗ್ಯದಲ್ಲಿ ಆಶೀರ್ವಾದಗಳು.

ಸಮೃದ್ಧಿ ಮತ್ತು ದುರಾಶೆಯ ನಡುವಿನ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಬೇಕು. ಸಮೃದ್ಧಿಯು, ನಮ್ಮ ಅಗತ್ಯತೆಗಳನ್ನು ಪೂರೈಸುವ, ದೇವರಿಗೆ ಮಹಿಮೆ ಸಲ್ಲಿಸುವ, ಇತರರನ್ನು ಆಶೀರ್ವದಿಸಲು ಆತನ ಮಕ್ಕಳುಗಳಿಗಾಗಿರುವ ದೇವರ ಆಶೀರ್ವಾದವಾಗಿದೆ. ದುರಾಶೆಯು ದುರಾತ್ಮನ ಗುಣಲಕ್ಷಣವಾಗಿದೆ.

## ಸೇವೆಯಲ್ಲಿ ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು ಮತ್ತು ತೊಡಗಿಸುವುದು

ಮೀನುಗಾರಿಕೆಯ ಕೋಲನ್ನು ಉಪಯೋಗಿಸುವುದರಿಂದ ಜನರನ್ನು ರಕ್ಷಿಸಲು ಸಾಧ್ಯವಿಲ್ಲ, ನಾವು ಬಲೆಯನ್ನು ಉಪಯೋಗಿಸಬೇಕು. ಹೀಗೆ ನಮ್ಮ ಸಭಿಕರಲ್ಲಿ ಎಲ್ಲಾ ವಿಶ್ವಾಸಿಗಳಾದ ಜನಸಾಮಾನ್ಯನಾಗಿರುವವರನ್ನು ನಾವು ಉಪಯೋಗಿಸಬೇಕು.

1964ರಲ್ಲಿ ಯುಯೋಡೋ ಫುಲ್ ಗಾಸ್ಪಲ್ ಚರ್ಚ್ YFGC ಯಲ್ಲಿ ಕಿರುಕೊಠಡಿ (ಸೆಲ್)ವ್ಯವಸ್ಥೆಯನ್ನು ಪ್ರಾರಂಭಿಸಿದರು ಮತ್ತು ಎಲ್ಲಾ ವಿಶ್ವಾಸಿಗಳು ತೊಡಗಿಸಿಕೊಳ್ಳಲು. ಅವಕಾಶಗಳನ್ನು ಒದಗಿಸಿತು. ಜನಸಾಮಾನ್ಯರನ್ನು (ವಿಶ್ವಾಸಿಗಳನ್ನು) ಆತ್ಮಗಳನ್ನು ಗೆಲ್ಲಲು ತರಬೇತಿಗೊಳಿಸಬೇಕು. ಕಿರುಕೊಠಡಿ ವ್ಯವಸ್ಥೆಯು ಪ್ರೀತಿಯ ಜೇಡನಬಲೆಯಾಗಿದೆ.

ಹಿರಿಯ ಸಭಾಪಾಲಕನಾಗಿ, ಯಾಂಗಿಚೋರವರ ಮುಖ್ಯವಾದ ದೃಷ್ಟಿಯು ಪ್ರಾರ್ಥನೆ ಮತ್ತು ದೇವರ ವಾಕ್ಯದ ಸೇವೆಯಾಗಿತ್ತು. ಅವರ ಎಲ್ಲಾ ಸಹಾಯಕ ಸಭಾಪಾಲಕರು ಅವರ ಪ್ರದೇಶದ ಕಿರುಕೊಠಡಿಯ ನಾಯಕರುಗಳನ್ನು ವೀಕ್ಷಣೆ ಮಾಡುತ್ತಿದ್ದರು. ಕಿರುಕೊಠಡಿ (ಸೆಲ್) ನಾಯಕರು ಮನೆಗಳನ್ನು ಸಂಧಿಸುತ್ತಿದ್ದರು ಮತ್ತು ಜನರನ್ನು ಆರೈಕೆ ಮಾಡುತ್ತಿದ್ದರು. ಜನರು ಒಬ್ಬರಿಗೊಬ್ಬರು ಪ್ರೀತಿಸುತ್ತಿದ್ದರು, ಆತ್ಮಗಳನ್ನು ಗೆಲ್ಲುತ್ತಿದ್ದರು ಮತ್ತು ಒಬ್ಬರಿಗೊಬ್ಬರು ಆರೈಕೆ ಮಾಡುತ್ತಿದ್ದರು.

ಸುಟ್ರಿಸ್ನಾ ವಿಡಜ್ಜಜ, ಪೂರ್ವ ಏಷ್ಯಾನ್ನರ ಸಭಾಪಾಲಕ ಸಂಸ್ಥೆಯಿಂದ, ತನ್ನ ಪ್ರಬಂಧದಲ್ಲಿ ಈ ಕೆಳಗಿನಂತೆ ಸಂಕ್ಷಿಪ್ತಗೊಳಿಸುತ್ತಾರೆ ''ಡೆವಿಡ್ ಯಾಂಗಿ ಚೋ ಪ್ರಕಾರವಾಗಿರುವ ಸಭೆಯ ಪರಿಕಲ್ಪನೆ''.

ಯುಯೋಡೋ ಫುಲ್ ಗಾಸ್ಪೆಲ್ ಸಭೆಯು (YFGC) ಭಾನುವಾರದ ಆರಾಧನೆಯ ಏಳು ಆರಾಧನೆ ಕೂಟಗಳಲ್ಲಿ 75,000 ಜನರು ಕುಳಿತುಕೊಳ್ಳುವ ವಸತಿ ಹೊಂದಿದೆ. ಅವರ ಆರಾಧನೆಯ ಕೂಟಗಳು ಪ್ರಾರ್ಥನಾ ಪೂರ್ವಕವಾಗಿ, ಆನಂದಕರವಾಗಿ,

ಉತ್ತಮವಾಗಿ - ಸಿದ್ಧಗೊಂಡಿರುವ ಅನ್ವಯುವುಳ್ಳ ಮತ್ತು ಜೀವಿತ ರೂಪಾಂತರಿಸುವಂತದ್ದು ಆಗಿತ್ತು. ವೈ ಎಫ್ ಜಿ ಸಿ (YFGC ) ಪೂರ್ಣ ಸಭೆಯು ಕೊಠಡಿ ವ್ಯವಸ್ಥೆಯಿಂದ (ಸೆಲ್) ಸುತ್ತಲೂ ಆಯೋಜಿಸಲಾಗಿದೆ ಕೊಠಡಿ ವ್ಯವಸ್ಥೆಯು (ಸೆಲ್) ಅಸ್ತಿವಾರವಾಗಿದೆ ಮತ್ತು ಸಭೆಯ ಮುಖ್ಯ ಕಾರ್ಯಕ್ರಮವಾಗಿದೆ. ಕೊಠಡಿ ವ್ಯವಸ್ಥೆಯು (ಸೆಲ್) ಉತ್ತಮವಾಗಿ ಕಾರ್ಯ ಮಾಡಲೂ ಎಲ್ಲಾ ವಿಭಾಗಗಳು ಮತ್ತು ಚಟುವಟಿಕೆಗಳು ಸಹಾಯ ಮಾಡುತ್ತದೆ. ಭೌತಿಕ ಸಭೆಯ ಕಟ್ಟಡವು ಒಂದು ಬಗೆಯ ತರಬೇತಿ ಕೇಂದ್ರವಾಗಿದೆ. ಆದರೆ ಸಭೆಯ ಸೇವೆಯು ಸಭೆಯ ಕಟ್ಟಡದ ಹೊರಗೆ ಮುಖ್ಯವಾಗಿ ಜರುಗುವಂತದ್ದಾಗಿರುತ್ತದೆ. ಸಭೆಯು ಮನೆಗಳಲ್ಲಿ, ಬಹುಮಹಡಿಕಟ್ಟಡಗಳಲ್ಲಿ, ಕಛೇರಿಗಳಲ್ಲಿ ಮತ್ತು ಕಾರ್ಖಾನೆಗಳಲ್ಲಿ ಹೊರಗೆ ಇದೆ. ಆರಾಧನೆಯ ಸೇವೆಯು ಒಟ್ಟಾಗಿ ಆಚರಣೆ ಮಾಡುವ ಸಮಯವಾಗಿದೆ ಆದರೆ ಅತ್ಯಂತ ವಾಸ್ತವ ಸೇವೆಗಳು ಕೊಠಡಿ ಗುಂಪುಗಳಲ್ಲಿ ಜರುಗುವಂತದ್ದಾಗಿದೆ. ಸಭೆಯ ಕಟ್ಟಡವು ನಾಶವಾಗಬಹುದು ಸಭಾಪಾಲಕರು ಬದಲಾಗಬಹುದು ಆದರೆ ಕೊಠಡಿ ಗುಂಪುಗಳು ಸಭೆಯ ಶಕ್ತಿಯಾಗಿ ಉಳಿದುಕೊಳ್ಳುತ್ತವೆ.

ವೈ ಎಫ್ ಜಿ ಸಿ (YFGC)ಗಾಗಿ, ಯೇಸುಕ್ರಿಸ್ತನಿಂದ ಇರುವ ರಕ್ಷಣೆಯ ಸಂದೇಶವು ಕೊಠಡಿ ಗುಂಪುಗಳಲ್ಲಿ ವಾಸ್ತವವಸ್ತುವಾಗಿ ಅನುಭವಿಸಿದೆ. ಕೊಠಡಿ ಗುಂಪುಗಳು ಹೊಸ ಒಡಂಬಡಿಕೆ ಆತ್ಮನಲ್ಲಿ ಸಭೆಗಳಾಗಿದೆ. (ಅಪೊಸ್ತಲರ ಕೃತ್ಯಗಳು 2:42-47 4:32-35) ಮನೆಯಿಂದ ಮನೆಗೆ ಪ್ರತಿವಾರ ಐದರಿಂದ ಹತ್ತು ಕುಟುಂಬಗಳು ಸೇರಿಬರುವ ಸಭೆಯು ಇದಾಗಿದೆ. ವಾಸ್ತವಿಕವಾದ ಕ್ರೈಸ್ತ ಸಂಸ್ಕೃತಿಯನ್ನು ಅನುಭವಿಸುವಂತಹ ಕ್ರೈಸ್ತ ಸಮುದಾಯುವನ್ನು ಇದು ಒದಗಿಸುತ್ತದೆ. ಅವರು ಒಬ್ಬರಿಗೊಬ್ಬರು ತಿಳಿದವರಾಗಿರುತ್ತಾರೆ ಮತ್ತು ಭಾವನೆಗಳ ಮತ್ತು ಆತ್ಮಿಕ ಬಂಧನವನ್ನು ಸಹ ಒದಗಿಸುತ್ತದೆ ಅವರ ಕೊಠಡಿ (ಸೆಲ್)ನಲ್ಲಿ ಒಬ್ಬರಿಗೊಬ್ಬರು ಪೋಷಿಸುತ್ತಾರೆ ಮತ್ತು ಕಾಳಜಿ ವಹಿಸುತ್ತಾರೆ, ಸಹಾಯ ಮಾಡುತ್ತಾರೆ, ಪ್ರೀತಿಸುವುದನ್ನು ಕಲಿಯುತ್ತಾರೆ. ಯಾರಿಗಾದರೂ ಅವಶ್ಯಕತೆ ಇದ್ದರೆ ತಕ್ಷಣವಾಗಿ ಅನೇಕರು ಸಹಾಯ ಮಾಡುತ್ತಾರೆ. ಮತ್ತೊಬ್ಬರು ಅನಾರೋಗ್ಯದಲ್ಲಿದ್ದರೆ, ಆಸಕ್ತಿಯಿಂದ ಅವರು ಪ್ರಾರ್ಥಿಸುತ್ತಾರೆ. ಅನೇಕ ಸ್ವಸ್ಥತೆಗಳು ಸಂಭವಿಸುತ್ತವೆ. ಕೊಠಡಿ (ಸೆಲ್) ವ್ಯವಸ್ಥೆಯು ಪ್ರತಿದಿನದಲ್ಲಿ ಆಶೀರ್ವಾದಗಳು ಮತ್ತು ರಕ್ಷಣೆಯ ವಾಸ್ತವಿಕವಾದ ಅನುಭವವನ್ನು ಒದಗಿಸುತ್ತದೆ. ಕ್ರೈಸ್ತರು ಒಬ್ಬರಿಗೊಬ್ಬರು ಸಹಾಯ ಮಾಡುವುದರಲ್ಲಿ ಅಧಿಕವಾಗಿ ಪ್ರಬುದ್ಧ ಕ್ರೈಸ್ತರುಗಳಾಗಿ ಕಂಡುಬರುವುದನ್ನು ಕೊಠಡಿ(ಸೆಲ್) ವ್ಯವಸ್ಥೆಯು ಒದಗಿಸುತ್ತದೆ

ಅನೇಕ ಜನರು ಮೊದಲ ಬಾರಿಗೆ ಯೇಸುಕ್ರಿಸ್ತನನ್ನು ವೈಯಕ್ತಿಕವಾಗಿ ಅವರ ಕೊಠಡಿ (ಸೆಲ್)ನಲ್ಲಿ ಪಡೆ ಅಂಗೀಕರಿಸಿಕೊಳ್ಳುತ್ತಾರೆ.

ಕಿರುಕೊಠಡಿ (ಸೆಲ್)ಯು ಅದರ ಸದಸ್ಯರುಗಳು ಯೇಸುಕ್ರಿಸ್ತನನ್ನು ಆಳವಾಗಿ ತಿಳಿದುಕೊಳ್ಳಲು ಪವಿತ್ರಾತ್ಮನೊಡನೆ ವೈಯಕ್ತಿಕವಾಗಿ ಅಧಿಕವಾಗಿ ಸಂಬಂಧವನ್ನು ಹೊಂದಿಕೊಳ್ಳಲೂ ಮತ್ತು ಸಭೆಯಾಗಿ ಜೀವಿಸುವುದಕ್ಕೆ ಸಹಾಯ ಮಾಡುತ್ತದೆ. ಕಿರುಕೊಠಡಿ(ಸೆಲ್) ವ್ಯವಸ್ಥೆಯು ಸುವಾರ್ತಾ ಸೇವೆಗೆ ಅರ್ಥವಾಗಿದೆ. ಸದಸ್ಯರುಗಳು ಅವರ ನಂಬಿಕೆಯನ್ನು ಹಂಚಿಕೊಳ್ಳಲೂ ಉತ್ಸಾಹಿಗಳಾಗಿರುತ್ತಾರೆ ಮತ್ತು ಇತರರು ಯೇಸುಕ್ರಿಸ್ತನನ್ನು ಅಂಗೀಕರಿಸಲು ಆಹ್ವಾನಿಸುತ್ತಾರೆ. ಕಿರುಕೊಠಡಿ (ಸೆಲ್) ಸದಸ್ಯರುಗಳ ಸಾಕ್ಷಿಯ ಮೂಲಕವಾಗಿ ಅನೇಕ ಹೊಸ ವಿಶ್ವಾಸಿಗಳು ಯೇಸು ಕ್ರಿಸ್ತನನ್ನು ತಿಳಿಯುತ್ತಾರೆ. ಕಿರುಕೊಠಡಿ (ಸೆಲ್) ಹೊಸ ವಿಶ್ವಾಸಿಗಳನ್ನು ಹಿಡಿಯಲು ಒಂದು ರೀತಿಯ ಒಂದು ದೊಡ್ಡ ಮೀನು ಹಿಡಿಯುವ ಬಲೆಯಾಗಿದೆ ಒಬ್ಬರಿಗೊಬ್ಬರು ತಿಳಿದವರಾದ ಜನರಿಗೆ ಸುವಾರ್ತೆ ಸಾರುವುದು ಸುಲಭವಾಗಿರುತ್ತದೆ ನಂತರ ಹೊಸ ವಿಶ್ವಾಸಿಗಳನ್ನು ಪೋಷಿಸುವುದು ಸುಲಭವಾಗುತ್ತದೆ. ಕೆಲವೊಮ್ಮೆ ವೈ ಎಫ್ ಜಿ ಸಿ (YFGC) ಯು ಸುವಾರ್ತೆಯ ದೊಡ್ಡ ಪ್ರಚಾರ ಸಮಾವೇಶ (ಕ್ರುಸೇಡ್) ಹೊಂದಿರುತ್ತದೆ. ಆದರೆ ಚೋ ರವರು ''ನಮ್ಮ ಸಭೆ ಹೇಗಾದರೂ, ಮನೆಯ ಕಿರುಕೊಠಡಿ ಗುಂಪು ವ್ಯವಸ್ಥೆಯ ಮೂಲಕವಾಗಿ ಪ್ರಾರ್ಥಮಿಕ ಸುವಾರ್ತೆಸೇವೆಯನ್ನು ಒಯ್ಯುತ್ತದೆ'' ಎಂಬುದಾಗಿ ಇನ್ನೂ ಮನವರಿಕೆ ಮಾಡಿಕೊಂಡಿದ್ದಾರೆ. ಪ್ರತಿಯೊಂದು ಕಿರುಕೊಠಡಿ ಗುಂಪು (ಸೆಲ್ ಗ್ರೂಪ್) ಅದರ ನೆರೆಹೊರೆಯಲ್ಲಿ ಪರಮಾಣುವಾಗಿ ಕಂಡುಬರುತ್ತದೆ. ಯಾಕೆಂದರೆ ಕಿರುಕೊಠಡಿಯು (ಸೆಲ್ ಗ್ರೂಪ್) ನೆರೆಹೊರೆಯವರ ಸಂಗಡ ಇರಬೇಕಾದಂತಹ ನಿಜ ಜೀವಿತವಾಗಿದೆ ಮನೆ ಕಿರುಕೊಠಡಿ ಸಭೆಯು ಪೂರ್ಣ ಜೀವಿತದಲ್ಲಿರುವ ಮತ್ತು ಅವರ ನಂಬಿಕೆಯನ್ನು ಹಂಚುವ ಮತ್ತು ಅವರ ಜೀವಿತಗಳಲ್ಲಿ ಕರ್ತನು ಮಾಡಿದಂತವುಗಳ ಸಾಕ್ಷಿ ಕೊಡುವಾಗ ಇತರ ಜನರುಗಳ ಅವರ ಬಳಿಗೆ ಸೆಳೆಯುತ್ತಾರೆ ಅವಿಶ್ವಾಸಿಗಳು ಕೂತೂಹಲಕಾರಿಗಳಾಗುತ್ತಾರೆ. ಇಂತಹ ಸಣ್ಣ ಕ್ರೈಸ್ತ ಗುಂಪುಗಳು, ಅನೇಕ ತೊಂದರೆಗಳ ಮಧ್ಯದಲ್ಲಿ ಅತಿಯಾಗಿ ಸಂತೋಷವಾಗಿರುವುದಕ್ಕೆ ಕಾರಣವೇನೆಂಬುದನ್ನು ತಿಳಿಯಲು ಅಪೇಕ್ಷಿಸುತ್ತಾರೆ. ಇಂತಹ ಗುಂಪುಗಳು ಅವರ ನೆರೆಹೊರೆಗಳಲ್ಲಿ ಅಯಸ್ಕಾಂತಗಳಾಗಿ ಕಂಡುಬರುತ್ತವೆ.

ಕೊನೆಯಲ್ಲಿ ಸಭೆಯ ಬೆಳವಣಿಗೆಯು ಬರಿ ಒಂದು ಉಪ ಉತ್ಪನ್ನ ಎಂಬುದಾಗಿ ನಾವು ಹೇಳಬಹುದು ಸಭೆಯು ಯಾವಾಗ ಪವಿತ್ರಾತ್ಮನೊಂದಿಗೆ ನಿಕಟವಾದ

ಸಹಭೋಗವನ್ನು ಅಭಿವೃದ್ಧಿಪಡಿಸುವಂತಹ ಪವಿತ್ರಾತ್ಮನ ನಿಜವಾದ ಸಭೆಯಾಗಿ ಕಂಡುಬರುವಾಗ, ಸಭೆಯು ಪ್ರಾರ್ಥಿಸುವ ಸಭೆಯಾಗುವಾಗ ಮತ್ತು ಒಂದು ನಾಲ್ಕನೇ ಆಯಾಮದ ಸಭೆಯಾಗುವಾಗ ಜನರ ಅಗತ್ಯತೆಗಳ ಬಗ್ಗೆ ಕಾಳಜಿ ತೆಗೆದುಕೊಳ್ಳುವ ಸಭೆಯಾಗುವಾಗ, ಸಭಯ ಆತ್ಮಿಕ ಆಶೀರ್ವಾದಗಳು ಸಭೆಯಾಗಿ ಕಂಡುಬರುವಾಗ ಮತ್ತು ಆರೋಗ್ಯದಲ್ಲಿ ಆಶೀರ್ವಾದ ಮತ್ತು ಸಭೆಯು ಯಾವಾಗ ಜನರನ್ನು ಇರಿಸುವ ಮತ್ತು ಕಿರುಕೊಠಡಿ ವ್ಯವಸ್ಥೆಯ ಕೇಂದ್ರಿತವಾಗಿರುವ ಸಭೆಯಾಗುವಾಗ ಸಭೆಯು ನಿಸ್ಸಂಶಯವಾಗಿ ಬೆಳೆಯುತ್ತದೆ.

## ಡೇವಿಡ್ ಯಾಂಗಿ ಚೋರವರ ಪುಸ್ತಕಗಳ ಸಣ್ಣಪಟ್ಟಿ:

ನಾಲ್ಕನೇ ಆಯಾಮ (ಸಂಪುಟ 1): ಯಶಸ್ವಿ ಜೀವಿತಕ್ಕಾಗಿ ನಿಮ್ಮ ನಂಬಿಕೆಯು ಕಾರ್ಯಮಾಡಲೂ ಹಾಕುವ  ಪ್ರಾಮುಖ ಕೀಲಿಕೈಗಳು

ನಾಲ್ಕನೇ ಆಯಾಮ (ಸಂಪುಟ 2): ಯಶಸ್ವಿ ನಂಬಿಕೆಯ ಜೀವಿತಕ್ಕೆ ಅಧಿಕವಾದ ರಹಸ್ಯಗಳು.

ಪವಿತ್ರಾತ್ಮನು, ನನ್ನ ಹಿರಿಯ ಜೊತೆಗಾರನು: ಪವಿತ್ರಾತ್ಮನು ಮತ್ತು ಆತನ ವರಗಳನ್ನು ಅರ್ಥಮಾಡಿಕೊಳ್ಳುವುದು.

ಸಂಖ್ಯೆಗಳಿಗಿಂತ ಅಧಿಕವಾದುದು: ಸಭೆಯ ಬೆಳವಣಿಗೆಯ ತತ್ವಗಳು

ಪ್ರಾರ್ಥನೆ ಉಜ್ಜೀವನದ ಕೀಲಿಕೈ

ಪ್ರಾರ್ಥನೆಯು ಉಜ್ಜೀವನವನ್ನು ತರುವುದಾಗಿದೆ.

# ಭಾಗ 2

# ದೇವರ ನೀಲನಕ್ಷೆ



# 7

# ಸ್ಥಳೀಯ ಸಭೆಗಾಗಿರುವ ದೇವರ ನೀಲನಕ್ಷೆ

## ಒಂದು ನೀಲನಕ್ಷೆಗಾಗಿ ಹತ್ತು ದೃಷ್ಟಿಕೋನಗಳು

ಸ್ಥಳೀಯ ಸಭೆಯು ಹೇಗಿರಬೇಕೆಂಬುದಾಗಿ ದೇವರ ಗ್ರಹಿಸುವಂತಹವುಗಳಾದ ''ಚಿತ್ರಗಳು'' ಅಥವಾ ಸಾರೂಪ್ಯಗಳನ್ನು ಹೊಸ ಒಡಂಬಡಿಕೆಯು ಒಳಗೊಂಡಿದೆ. ಹೊಸ ಒಡಂಬಡಿಕೆಯಲ್ಲಿ ಸ್ಥಳೀಯ ಸಭೆಯು ಒಳಗೊಂಡಿರುವ ಹತ್ತು ಚಿತ್ರಗಳನ್ನು ನಾವು ಗುರ್ತಿಸುತ್ತೇವೆ. ಈ ಭಾಗದಲ್ಲಿ ಅವುಗಳ ಕುರಿತು ಚರ್ಚಿಸುತ್ತೇವೆ. ಇವುಗಳಲ್ಲಿ ಹಲವು ಹಳೇ ಒಡಂಬಡಿಕೆಯಲ್ಲಿ ತಮ್ಮ ಮೂಲವನ್ನು ಹೊಂದಿವೆ. ಒಟ್ಟಾಗಿ ಇವುಗಳನ್ನು ನಾವು ಸ್ಥಳೀಯ ಸಭೆಗಾಗಿರುವ ದೇವರ ನೀಲನಕ್ಷೆ ಎಂಬುದಾಗಿ ಉಲ್ಲೇಖಿಸುತ್ತೇವೆ.

ಒಂದು ನೀಲನಕ್ಷೆಯು ಏನಾದರೂ ಮಾಡುವುದಕ್ಕಾಗಿ ಇರುವ ಮಾರ್ಗದರ್ಶಿಯಾಗಿದೆ. ಇದು ಒಂದು ಅನುಸರಿಸಬೇಕಾದ ಮಾದರಿ ಅಥವಾ ವಿನ್ಯಾಸವಾಗಿದೆ. ಏನಾದರೊಂದನ್ನು ಕಟ್ಟಲು ನಾವು ಪ್ರಾರಂಭಿಸಿದಾಗ ಸಾಮಾನ್ಯವಾಗಿ ನೀಲನಕ್ಷೆಯೊಂದಿಗೆ ಪ್ರಾರಂಭಿಸುತ್ತೇವೆ. ನೀಲನಕ್ಷೆಯು ನೀವು ಮಾಡುವುದನ್ನು ನಿಶ್ಚಯಿಸಲು ಸಹಾಯ ಮಾಡುತ್ತದೆ.

ನೀಲನಕ್ಷೆಯನ್ನು, ನಾವು ಗುರ್ತಿಸೋಣ, ಸ್ಥಳೀಯ ಸಭೆಗಾಗಿರುವ ದೇವರ ವಿನ್ಯಾಸವನ್ನು ಗುರ್ತಿಸೋಣ. ಇದು ದೇವರ ಮೂಲ ಉದ್ದೇಶವಾಗಿದೆ. ಇದು ಪ್ರಮುಖ ಗುಣಲಕ್ಷಣಗಳ ಮುಖ್ಯಾಂಶವನ್ನು ತಿಳಿಸುತ್ತದೆ. ಇದು ಪ್ರಮುಖ ವೈಶಿಷ್ಟ್ಯಗಳನ್ನು ವಿವರಿಸುತ್ತದೆ. ಇದು ಪ್ರಮುಖ ಪ್ರದೇಶಗಳನ್ನು ತೋರಿಸುತ್ತದೆ. ನಾವು ಆತನ ನೀಲನಕ್ಷೆಯನ್ನು ಹಿಂಬಾಲಿಸುವಾಗ ನಾವು ಸರಿಯಾದ ದಿಕ್ಕಿನಲ್ಲಿ ಚಲಿಸುತ್ತಿದ್ದೇವೆ ಎಂಬುದು ನಮಗೆ ಗೊತ್ತು ಮತ್ತು ಅಂತಿಮವಾಗಿ ನಮ್ಮ ಸ್ಥಳೀಯ ಸಭೆಗಳಿಗಾಗಿರುವ ಸರಿಯಾದ ಸ್ಥಳಕ್ಕೆ ತಲುಪುತ್ತೇವೆ.

ಈ ಹತ್ತು ಕ್ಷೇತ್ರಗಳಲ್ಲಿ ನಮ್ಮ ಸ್ಥಳೀಯ ಸಭೆಯ ಸಭಿಕರನ್ನು ಅಭಿವೃದ್ಧಿ ಪಡಿಸುವುದು ನಮ್ಮ ಗುರಿಯಾಗಿದೆ. ನಮ್ಮ ಸ್ಥಳೀಯ ಸಮುದಾಯಗಳಲ್ಲಿ ಇಂತಹ ನೀಲನಕ್ಷೆಯ ನಮ್ಮ ಸ್ವಂತ ಅಭಿವ್ಯಕ್ತತೆಯನ್ನು ನಾವು ಗುರ್ತಿಸಬೇಕು. ನಮ್ಮ ದೇವರು ಸೃಷ್ಟಿಶೀಲ ದೇವರಾಗಿರುವುದರಿಂದ ಆತನ ನೀಲನಕ್ಷೆಯ ಅನೇಕ ಮಾರ್ಗಗಳು ಮತ್ತು ಅನೇಕ ಅಭಿವ್ಯಕ್ತತೆಗಳಿವೆ. ಆದ್ದರಿಂದ ಇದು ಒಂದು ವಿಧಾನಗಳ ಜೋಡಣೆ ಅಥವಾ ತಂತ್ರಗಳ ಒಂದು ಜೋಡಣೆಯನ್ನು ಅನುಸರಿಸುವಂತಹದ್ದರ ಬಗ್ಗೆ ಅಲ್ಲ. ಬದಲಿಗೆ ಇಂತಹ ಹತ್ತು ರೂಪಗಳು ನಮ್ಮ ಸ್ಥಳೀಯ ಸಭೆಯ ಸಭಿಕರುಗಳಲ್ಲಿ ವೃದ್ಧಿಯಾಗುವುದನ್ನು ಆತನು ಅಪೇಕ್ಷಿಸುವ ರೀತಿಯಲ್ಲಿ ದೇವರೊಂದಿಗೆ ಕೆಲಸ ಮಾಡುವುದಾಗಿದೆ.

## ನಿಮ್ಮ ಸೇವೆ ಮತ್ತು ದೇವರ ನೀಲನಕ್ಷೆ

ನಿಮ್ಮ ಸೇವೆಯು ಒಳಗಡೆ ಏನಾಗಿದೆ ಎಂಬುದನ್ನು ಪರಿಗಣಿಸದೆ ಅಥವಾ ಸ್ಥಳೀಯ ಸಭೆಯ ಸಂಬಂಧದಲ್ಲಿ ನೀವು ಮಾಡುತ್ತಿರುವಂತದ್ದು ಆತನ ಜನರಿಗಾಗಿರುವ ದೇವರ ನೀಲನಕ್ಷೆಗೆ ಸಮಾನಾಂತರವಾಗಿರುವುದು ಪ್ರಾಮುಖ್ಯವಾಗಿದೆ. ಸಭಾಪಾಲಕರು ಮತ್ತು ಹಿರಿಯ ಸಭಾಪಾಲಕರುಗಳಾಗಿ ಸ್ಥಳೀಯ ಸಭೆಯು ಬೆಳೆಯುತ್ತಿದೆಯೊ ಮತ್ತು ದೇವರ ನೀಲನಕ್ಷೆಗನುಸಾರವಾಗಿ ಎಲ್ಲಾ ಆಳತೆಯಲ್ಲೂ ಬೆಳೆಯುತ್ತಿದೆಯೊ ಎಂಬುದನ್ನು ಖಚಿತಪಡಿಸಿಕೊಳ್ಳುವಂತದ್ದು ನಿಮ್ಮ ಜವಬ್ದಾರಿಯಾಗಿದೆ. ಸಂಚಾರಿ ಸುವಾರ್ತಿಕ, ಬೋಧಕ, ಪ್ರವಾದಿ ಅಥವಾ ಅಪೊಸ್ತಲರಾಗಿ ನೀವು ಸಭಿಕರಿಗೆ ಸೇವೆ ಸಲ್ಲಿಸುವಾಗ ಸ್ಥಳೀಯ ಸಭೆಗಾಗಿರುವ ದೇವರ ವಿನ್ಯಾಸಕ್ಕನುಗುಣವಾಗಿ ಕೆಲವು ರೀತಿಯಲ್ಲಿ ಸಭಿಕರನ್ನು ಹೆಚ್ಚಿಸಬೇಕು ಮತ್ತು ಪಾಲು ಕೊಡುವ ಸಹಾಯ ಮಾಡುವುದು ನಿಮ್ಮ ಗುರಿಯಾಗಿರಬೇಕು. ನೀವು ಒಬ್ಬ ಯೌವನಸ್ಥ ಸಭಾಪಾಲಕನಾಗಿ, ಆರಾಧನೆ ನಾಯಕನಾಗಿ, ಮಕ್ಕಳ ಸಭೆಯಲ್ಲಿ, ಸ್ತ್ರೀಯರ ಸೇವೆಯಲ್ಲಿ, ಪುರುಷರ ಸೇವೆಯಲ್ಲಿ, ಸಣ್ಣ ಗುಂಪುಗಳಲ್ಲಿ ಅಥವಾ ಬೇರೆ ಯಾವುದೇ ರೀತಿಯಲ್ಲಿ ಸೇವೆ ಸಲ್ಲಿಸುತ್ತಿರಬಹುದು, ನೀವು ನಿಮ್ಮ ಸ್ಥಳೀಯ ಸಭೆಯಲ್ಲಿನ ಆತನ ಜನರುಗಳ ಜೀವಿತಗಳಲ್ಲಿ ದೇವರ ನೀಲನಕ್ಷೆಯನ್ನು ಸ್ಥಾಪಿಸುವ ಕಡೆಗೆ ನೀವು ಕೆಲಸಮಾಡುತ್ತಿರುವಿರಿ.

## ನೀವು ಹೇಗೆ ಕಟ್ಟುತ್ತೀರ ಮತ್ತು ಏನನ್ನು ಕಟ್ಟುತ್ತೀರಿ ಜಾಗರೂಕರಾಗಿರಿ

1 ಕೊರಿಂಥದವರಿಗೆ 3:10-15

**ದೇವರು ನನಗೆ ಕೃಪೆಯಿಂದ ಒಪ್ಪಿಸಿದ ಕೆಲಸವನ್ನು ನಡಿಸಿ ನಾನು ಪ್ರವೀಣ ಶಿಲ್ಪಿಯಂತೆ ಅಸ್ತಿವಾರ ಹಾಕಿದೆನು ಮತ್ತೊಬ್ಬನು ಅದರ ಮೇಲೆ ಕಟ್ಟುತ್ತಾನೆ ಪ್ರತಿಯೊಬ್ಬನು ತಾನು ಅದರ ಮೇಲೆ ಎಂಥದನ್ನು ಕಟ್ಟುತ್ತಾನೋ**

**ಎಚ್ಚರಿಕೆಯಾಗಿರಬೇಕು ಹಾಕಿರುವ ಅಸ್ತಿವಾರವು ಯೇಸು ಕ್ರಿಸ್ತನೇ; ಆ ಅಸ್ತಿವಾರವನ್ನಲ್ಲದೆ ಮತ್ತೊಂದು ಅಸ್ತಿವಾರವನ್ನು ಯಾರೂ ಹಾಕಲಾರರಷ್ಟೆ ಆ ಅಸ್ತಿವಾರದ ಮೇಲೆ ಚಿನ್ನ ಬೆಳ್ಳಿ ರತ್ನ ಕಟ್ಟಿಗೆ ಹುಲ್ಲು ಆಪು ಮುಂತಾದವುಗಳಲ್ಲಿ ಯಾವದರಿಂದ ಕಟ್ಟಿದರೂ ಅವನವನ ಕೆಲಸವು ವ್ಯಕ್ತವಾಗುವದು. ಕ್ರಿಸ್ತನು ಬರುವ ದಿನವು ಬೆಂಕಿಯೊಡನೆ ಉದಯವಾಗಿ ಆ ಕೆಲಸವನ್ನು ಸ್ಪಷ್ಟವಾಗಿ ತೋರಿಸುವದು; ಅವನವನ ಕೆಲಸವೆಂಥದೋ ಆ ಬೆಂಕಿ ಶೋಧಿಸುವದು. ಒಬ್ಬನು ಆ ಅಸ್ತಿವಾರದ ಮೇಲೆ ಕಟ್ಟಿದ್ದು ಉಳಿದರೆ ಅವನಿಗೆ ಸಂಬಳ ಬರುವದು ಒಬ್ಬನು ಕಟ್ಟಿದ್ದು ಸುಟ್ಟುಹೋದರೆ ಅವನಿಗೆ ಸಂಬಳವು ನಷ್ಟವಾಗುವದು; ತಾನಾದರೋ ರಕ್ಷಣೆ ಹೊಂದುವನು ಆದರೆ ಬೆಂಕಿಯೊಳಗಿಂದ ತಪ್ಪಿಸಿಕೊಂಡವನ ಹಾಗಿರುವನು.**

1 ಕೊರಿಂಥದವರಿಗೆ 3:10-15 (ಮೆಸೇಜ್ ಬೈಬಲ್)
**ಉತ್ತಮ ವಾಸ್ತುಶಿಲ್ಪಿಯಾಗಿರುವಂತೆ ದೇವರು ಕೊಟ್ಟ ವರವನ್ನು ಉಪಯೋಗಿಸಿ ನಾನು ನೀಲನಕ್ಷೆಯನ್ನು ರಚಿಸಿದೆನು ಅಪೊಲ್ಲೊಸನು ಗೋಡೆ ಹಾಕುತ್ತಿದ್ದಾನೆ. ಕೆಲಸಕ್ಕೆ ಬರುವಂತಹ ಪ್ರತಿಯೊಬ್ಬ ಬಡಗಿಯು ಅಸ್ತಿವಾರದ ಮೇಲೆ ಕಟ್ಟುವುದರಲ್ಲಿ ಕಾಳಜಿ ವಹಿಸಲಿ, ನೆನಪಿಡಿ ಒಂದೇ ಅಸ್ತಿವಾರ ಮಾತ್ರ ಇದೆ, ಒಬ್ಬರು ಈಗಾಗಲೇ ಹಾಕಿದ್ದಾರೆ ಅದು ಯೇಸುಕ್ರಿಸ್ತನೇ. ನಿಮ್ಮ ಕಟ್ಟಡದ ಸಾಮಗ್ರಿಗಳನ್ನು ತೆಗೆದುಕೊಳ್ಳುವುದರಲ್ಲಿ ಕಾಳಜಿ ವಹಿಸಿರಿ. ಅಂತಿಮವಾಗಿ ಒಂದು ತಪಾಸಣೆ ನಡೆಯಲಿದೆ. ನೀವು ಅಗ್ಗದ ಅಥವಾ ಕೆಳಮಟ್ಟದ ಸಾಮಗ್ರಿಗಳನ್ನು ಬಳಸಿದರೆ ನಿಮ್ಮನ್ನು ಕಂಡುಹಿಡಿಯಲಾಗುತ್ತದೆ. ತಪಾಸಣೆಯು ಸಂಪೂರ್ಣ ಮತ್ತು ಕಠಿಣವಾಗಿರುತ್ತದೆ. ನೀವು ಒಂದು ವಿಷಯದ ಮೂಲಕ ಪಡೆಯುವುದಿಲ್ಲ ನಿಮ್ಮ ಕೆಲಸದ ತಪಾಸಣೆಗೆ ಒಳಪಟ್ಟರೆ ಉತ್ತಮವಾದದ್ದು ಇಲ್ಲದಿದ್ದರೆ ಕಟ್ಟಡದ ನಿಮ್ಮ ಭಾಗವು ಹರಿದು ಹೋಗುತ್ತದೆ ಮತ್ತು ಪ್ರಾರಂಭವಾಗುತ್ತದೆ. ಆದರೆ ನೀವು ಹರಿದು ಹೋಗುವುದಿಲ್ಲ. ನೀವೆಲ್ಲರೂ ಬದುಕುಳಿಯುತ್ತೀರಿ ಆದರೆ ಕೇವಲ ಕೇವಲ**

ಸರಳ ಪದಗಳಲ್ಲಿ ಅಪೊಸ್ತಲನಾದ ಪೌಲನು ನಮ್ಮೆಲ್ಲರಿಗೂ ಸಾಮಾನ್ಯ ಒಂದು ಅಸ್ತಿವಾರ ಅಥವಾ ನೀಲನಕ್ಷೆ ಕೊಡಲ್ಪಟ್ಟಿದೆ ಎಂಬುದಾಗಿ ವ್ಯಾಖ್ಯಾನಿಸುತ್ತಾನೆ. ಆದರೆ ನಾವು ಏನನ್ನು ಕಟ್ಟುತ್ತೇವೆ ಮತ್ತು ಹೇಗೆ ಕಟ್ಟುತ್ತೇವೆ ಎಂಬುದರಲ್ಲಿ ನಾವುಗಳು ಬಹಳ ಜಾಗರೂಕರಾಗಿರಬೇಕು. ನಾವು ಹೇಗೆ ಕಟ್ಟುತ್ತೇವೆ ಎಂಬುದು ಪ್ರಾಮುಖ್ಯವಾದದ್ದು. ದೇವರ ಮನೆಯನ್ನು ವಾಕ್ಯ ಮತ್ತು ಆತ್ಮವಾದವುಗಳೊಡನೆ ಕಟ್ಟಿದರೆ ಆಮೇಲೆ ಪರಲೋಕದಿಂದ ಅಂಗೀಕೃತವಾದ ಕೆಲಸಗಳನ್ನು ನಾವು ಹೊಂದಿರುತ್ತೇವೆ. ದೇವರ ಮನೆಯನ್ನು ಭೂಲೋಕದ ವಿಷಯಗಳಾದ, ಶಾರೀರಿಕ ಜ್ಞಾನ ಬುದ್ಧಿವಂತಿಕೆಯ ಮಾರುಕಟ್ಟೆ ಮತ್ತು ಹೋಲಿಕೆಯುಳ್ಳ ವಿಷಯಗಳಿಂದ ನಾವು ಕಟ್ಟಿದರೆ ಇವುಗಳು ಪರಲೋಕದ ಪರೀಕ್ಷೆಯನ್ನು ತಡೆದುಕೊಳ್ಳುವುದಿಲ್ಲ.

ಆದುದರಿಂದ ಈ ಒಂದು ಭಾಗದಲ್ಲಿ ನಮ್ಮ ಮಹತ್ವವು ದೇವರ ನೀಲನಕ್ಷೆಗನುಸಾರವಾಗಿ ಮತ್ತು ದೇವರ ವಾಕ್ಯ ಮತ್ತು ಆತ್ಮದಿಂದ ನಾವು ಕಟ್ಟಬೇಕು.

# 8

# ಸ್ಥಳೀಯ ಸಭೆ-ಕ್ರಿಸ್ತನ ದೇಹವಾಗಿದೆ

ಕೊಲೊಸ್ಸೆಯವರಿಗೆ 1:18
**ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು ಆತನು ಆದಿ ಸಂಭೂತನು ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ.**

ಸಭೆಯು ಆತನ ದೇಹ - ಕ್ರಿಸ್ತನ ದೇಹವಾಗಿದೆ.

## ಆತನ ದೇಹವಾಗಿ, ನಮ್ಮ ಜೀವಿತ ಮತ್ತು ಗುರುತು ಆತನೊಂದಿಗೆ ಹರಿಯುತ್ತದೆ.

ಸಭೆಯು ನಾವು ಆತನೊಂದಿಗಿನ ಸಂಬಂಧದಲ್ಲಿ ಏನಾಗಿದ್ದೇವೆಂಬುದು ಪ್ರಾರ್ಥಮಿಕವಾದುದಾಗಿದೆ. ಆತನೊಂದಿಗೆ ನಮ್ಮ ಸಂಬಂಧವಿಲ್ಲದೆ. ಸಭೆ ಎಂಬುದು ಇಲ್ಲ. ದೇಹ ತಲೆಯಿಲ್ಲದ ಒಂದು ದೇಹವು ಬದುಕುವುದಿಲ್ಲ ಮತ್ತು ಕಾರ್ಯ ಮಾಡುವುದಿಲ್ಲ. ಆತನೊಂದಿಗಿನ ನಮ್ಮ ಸಂಬಂಧದಿಂದ ನಾವು ಒಬ್ಬರಿಗೊಬ್ಬರು ಮತ್ತು ಪ್ರಪಂಚಕ್ಕೆ ಸಂಬಂಧಿಸುವರಾಗಿರುತ್ತೇವೆ.

ಅಪೊಸ್ತಲರ ಕೃತ್ಯಗಳು 17:28
**ಆತನಲ್ಲಿಯೇ ನಾವು ಜೀವಿಸುತ್ತೇವೆ, ಚಲಿಸುತ್ತೇವೆ ಇರುತ್ತೇವೆ**

ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಆತನೊಂದಿಗೆ ಅನ್ಯೋನ್ಯತೆಯನ್ನು ಮುಂದುವರಿಸಬೇಕು.

ನಮ್ಮ ಗುರುತು ಆತ್ಮನಿಂದ  ಹರಿಯುತ್ತದೆ ನಾವು ಕ್ರಿಸ್ತನಲ್ಲಿ ಏನಾಗಿದ್ದೇವೊ ನಾವು ನಿಜವಾಗಿ ಯಾರು ಎಂಬುದಾಗಿದೆ. ನಮ್ಮ ಗುರುತು, ನಮ್ಮ ಸಂಘ ಸಂಸ್ಥೆಗಳು, ಕೆಲವು ಸಿದ್ಧಾಂತಗಳು ಕೆಲವು ವಿಚಿತ್ರವಾದ ರೀತಿಯಲ್ಲಿ ವಿಷಯಗಳನ್ನು ಮಾಡುವುದು ಅಥವಾ ಕೆಲವು ಇತರ ಲೌಕಿಕ ವಿಷಯಗಳು ಇಂತಹವುಗಳ ಮೇಲೆ ಇಲ್ಲ. ನಾವು ಆತನ ದೇಹವಾಗಿದ್ದೇವೆ ಮತ್ತು ಆದ್ದರಿಂದ ಆತನ ಹೆಸರು ಮಾತ್ರ ಕೊಂಡೊಯ್ಯುವವರಾಗಿದ್ದೇವೆ.

## ಆತನ ದೇಹವಾಗಿ, ನಾವು ಯೇಸುವನ್ನು ಪ್ರತಿನಿಧಿಸುತ್ತೇವೆ ನಾವು ಯೇಸುವನ್ನು ಪ್ರಕಟಿಸುತ್ತೇವೆ

ಎಫೆಸದರಿಗೆ 1:22,23

**ಆತನು ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ.**

ಸಭೆಯು ಕ್ರಿಸ್ತನ ಸಂಪೂರ್ಣತೆಯಾಗಿದೆ. (ಪೂರ್ಣತೆಯಾಗಿದೆ) ಸಭೆಯು ಕ್ರಿಸ್ತನ ಸಂಪೂರ್ಣ ಪ್ರಾತಿನಿಧ್ಯವಾಗಿದೆ ವೈಯಕ್ತಿಕ ಮತ್ತು ಒಟ್ಟಾಗಿ, ಕ್ರಿಸ್ತನು ತೋರಿಸಲ್ಪಡಬೇಕು ಮತ್ತು ನಿಖರವಾದ ವಿಶ್ವದ ಸಭೆಗೆ ಚಿತ್ರಿಸಲಾಗಿದೆ. ನಾವು ಪ್ರಪಂಚಕ್ಕೆ ಆತನನ್ನು ''ಪ್ರತಿನಿಧಿಸುತ್ತೇವೆ''

ಅಪೊಸ್ತಲನಾದ ಪೌಲನು ''ಆತನ ಹಾಗೆ'' ಎಂಬುದನ್ನು ತನ್ನ ಪತ್ರಿಕೆಯಾದ 1 ಯೋಹಾನದಲ್ಲಿ ಏಳು ಬಾರಿ ಉಪಯೋಗಿಸಿದ್ದಾನೆ.

- ಆತನು ಬೆಳಕಿನಲ್ಲಿರುವಂತೆಯೇ, ನಾವು ಬೆಳಕಿನಲ್ಲಿ ನಡೆಯಬೇಕು (1:7)
- ಆತನು ನಡೆದಂತೆಯೇ ನಡೆಯಬೇಕು (2:7)
- ಆತನಿರುವಂತೆಯೇ ನೋಡುತ್ತೇವೆ (3:1)
- ಆತನು ಶುದ್ಧನಾಗಿರುವಂತೆಯೇ ನಮ್ಮನ್ನು ಶುದ್ಧೀಕರಿಸಿಕೊಳ್ಳಬೇಕು (3:3)
- ಆತನು ನೀತಿವಂತನಾಗಿರುವಂತೆ, ನೀತಿವಂತಿಕೆಯನ್ನು ಅಭ್ಯಾಸಿಸಬೇಕು (3:7)
- ಆತನು ಪ್ರೀತಿಸಿದಂತೆಯೇ ಮತ್ತು ನಮ್ಮನ್ನು ಪ್ರೀತಿಸುವಂತೆ ಆಜ್ಞಾಪಿಸಿದಂತೆಯೇ ಪ್ರೀತಿಸಬೇಕು (3:23)
- ಆತನು ಪ್ರಪಂಚದಲ್ಲಿರುವಂತೆಯೇ, ನಾವು ಈ ಲೋಕದಲ್ಲಿದ್ದೇವೆ (4:17)

ಕ್ರಿಸ್ತನು ನಮ್ಮ ಗುಣಮಟ್ಟ, ನಮ್ಮ ಮಾದರಿ, ನಮ್ಮ ಆದರ್ಶ ಆತನನ್ನು ನಿಖರವಾಗಿ ಪ್ರತಿನಿಧಿಸಬೇಕಾದರೆ ಆತನನ್ನು ನಾವು ನಿಕಟವಾಗಿ ಹಿಂಬಾಲಿಸಬೇಕು.

ಆತನನ್ನು ಪ್ರತಿನಿಧಿಸುವಂತಹ ಸಾಮರ್ಥ್ಯವು, ಆತನು ಪ್ರತಿಯೊಬ್ಬರನ್ನು ಸ್ವತಃ ತನ್ನಿಂದ ತುಂಬಿಸುವಂತಹ ಸಂಗತಿಯಿಂದ ಬರುವಂತದ್ದಾಗಿದೆ. ಕ್ರಿಸ್ತನು ಪ್ರತಿ ಸದಸ್ಯನನ್ನು ಸ್ವತಃ ತಾನೇ ತುಂಬಿಸುತ್ತಾನೆ.

ಕೊಲೊಸ್ಸೆಯವರಿಗೆ 2:9,10

**ಕ್ರಿಸ್ತನಲ್ಲಿಯೇ ದೇವರ ಸರ್ವ ಸಂಪೂರ್ಣತೆಯು ಅವತರಿಸಿ ವಾಸ ಮಾಡುತ್ತದೆ ಮತ್ತು ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ.**

ನಾವು ಆತನಲ್ಲಿ ಪೂರ್ಣಗೊಂಡಿದ್ದೇವೆ. ಇದು ಸ್ಥಾನಿಕ ಸತ್ಯವಾಗಿದೆ ಸ್ಥಾನಿಕ ಸತ್ಯ ಎಂಬುದರ ಅರ್ಥವು ಆತ್ಮಿಕ ಕ್ಷೇತ್ರದಲ್ಲಿ ಇದು ಒಂದು ನಿಜ ಸ್ಥಿತಿಯಾಗಿದೆ. ಆದರೆ ಇದು ನಮ್ಮ ದಿನನಿತ್ಯದ ಜೀವಿತದ ದೇವರೊಂದಿಗಿನ ನಮ್ಮ ನಡೆಯ ಮೂಲಕವಾಗಿ ಅದು ನಿಜಸ್ಥಿತಿಗೆ ಬರುವುದಕ್ಕಾಗಿ ನಾವು ಅನುಮತಿಸಬೇಕಾಗಿದೆ. ಅದಕ್ಕೆ ಪೌಲನು ಗಲಾತ್ಯದವರಿಗಾಗಿ ''ಕ್ರಿಸ್ತನ ಸಾರೂಪ್ಯವು'' ಅವರಲ್ಲಿ ಉಂಟಾಗಬೇಕೆಂಬುದಾಗಿ ಬಯಸಿದ್ದಾನೆ (ಗಲಾತ್ಯದವರಿಗೆ 4:19).

ಕ್ರಿಸ್ತನು ಸ್ವತಃ ನನ್ನನ್ನು ತುಂಬುತ್ತಾನೆ. ಆದ್ದಾಗೂ ದಿನನಿತ್ಯದ ಜೀವಿತದಲ್ಲಿ ಪ್ರತಿಯೊಂದು ಜೀವಿತದ ಕ್ಷೇತ್ರದ ಪ್ರತಿ ಕ್ಷಣದಿಂದ ಕ್ಷಣ ನನ್ನಲ್ಲಿ ಆಳ್ವಿಕೆ ಮಾಡಬೇಕು ಆತನು ನನ್ನನ್ನು ''ತುಂಬಿಸಬೇಕು'' ಎಂಬುದಾಗಿ ನಾನು ಆಶಿಸಬೇಕು.

ತಂದೆಯು ಕ್ರಿಸ್ತನನ್ನು ಸಭೆಯ ಎಲ್ಲಾ ವಿಷಯಗಳ ಮೇಲೆ ತಲೆಯನ್ನಾಗಿ ಇಟ್ಟಿದ್ದಾನೆ. ತಲೆಯಾಗಿ ಹೊಂದಿರುವ ಅದೇ ಅಧಿಕಾರವನ್ನು ದೇಹವು ಒಯ್ಯುತ್ತದೆ (ಮತ್ತಾಯ 28:18) ಭೂಮಿಯ ಮೇಲೆ ನಾವುಗಳು ಆತನ ದೇಹವನ್ನು ಪ್ರತಿನಿಧಿಸಲು ನಮ್ಮಲ್ಲಿ ಅಧಿಕಾರವು ನಿಯೋಜಿಸಲಾಗಿದೆ

## ಆತನ ದೇಹವಾಗಿ ನಾವು ಆತನ ಕಾಲು ಮತ್ತು ಕೈಗಳು ಆಗಿದ್ದೇವೆ ನಾವು ಆತನ ಚಿತ್ತವನ್ನು ಮಾಡುತ್ತೇವೆ.

ಸಭೆಯು ಕ್ರಿಸ್ತನ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವ ಸಾಧನವಾಗಿದೆ. ತಲೆಯು ಆಜ್ಞಾಪಿಸುವುದನ್ನು ದೇಹವು ಕಾರ್ಯಗತಗೊಳಿಸುತ್ತದೆ. ನಾವು ಸಹ ಆತನಿಂದ ಕೇಳಬೇಕು, ಮತ್ತು ಆಮೇಲೆ ಚಲಿಸಬೇಕು. ಆತನು ಮಾತಾನಾಡುವುದನ್ನು ಕಾರ್ಯಗತಗೊಳಿಸಬೇಕು ಆತನು ಮಾರ್ಗದರ್ಶಿಸುವ ಕಡೆಗೆ ನಾವು ಹೋಗಬೇಕು. ಆತನು ಮಾರ್ಗದರ್ಶಿಸುವುದನ್ನು ನಾವು ಮಾಡಬೇಕು.

ಮತ್ತಾಯ 10.40

**ನಿಮ್ಮನ್ನು ಸೇರಿಸಿಕೊಳ್ಳುವವನು ನನ್ನನ್ನು ಸೇರಿಸಿಕೊಳ್ಳುವವನಾಗಿದ್ದಾನೆ.**

ಯೇಸುವು ನಮ್ಮ ಮೂಲಕವಾಗಿ ಸ್ವತಃ ವಿಸ್ತರಿಸಿಕೊಳ್ಳುವುದನ್ನು ನೋಡುತ್ತಾನೆ.

ಯೋಹಾನ 20:21

**ಯೇಸು ಅವರಿಗೆ ನಿಮಗೆ ಸಮಾಧಾನವಾಗಲಿ ಎಂದು ತಿರಿಗಿ ಹೇಳಿ ತಂದೆ ನನ್ನನ್ನು ಕಳುಹಿಸಿಕೊಟ್ಟ ಹಾಗೆಯೇ ನಾನೂ ನಿಮ್ಮನ್ನು ಕಳುಹಿಸಿಕೊಟ್ಟ ಹಾಗೆಯೇ ನಾನೂ ನಿಮ್ಮನ್ನು ಕಳುಹಿಸಿಕೊಟ್ಟ ಹಾಗೆಯೇ ನಾನೂ ನಿಮ್ಮನ್ನು ಕಳುಹಿಸಿಕೊಡುತ್ತೇನೆ ಅಂದನು.**

ಯೇಸುವು ತನ್ನ ಸೇವೆಯನ್ನು ನಮಗೆ ಕೊಟ್ಟಿದ್ದಾನೆ ಮತ್ತು ಲೋಕಕ್ಕೆಲ್ಲಾ ನಮ್ಮನ್ನು ಕಳುಹಿಸಿದ್ದಾನೆ. ನಾವುಗಳು ಸಮಾಜದ ಎಲ್ಲಾ ಗೋಳಗಳನ್ನು ವ್ಯಾಪಿಸಬೇಕು ಮತ್ತು ಅಲ್ಲಿ ಯಾವ ಕಾರ್ಯಗಳು ಜರುಗಬೇಕೆಂಬುದಾಗಿ ಯೇಸು ಅಪೇಕ್ಷಿಸುವ ಕಡೆ ನಾವುಗಳು ಕಾರ್ಯ ಮಾಡಲೂ  ನಮ್ಮ ಸ್ಥಳವನ್ನು ಎಲ್ಲೆಡೆ ತೆಗೆದುಕೊಳ್ಳಬೇಕು. ಇದರ ಭಾಗ-ಕೊಡುವ ಉತ್ತಮ ಭಾಗವು ಇದನ್ನು ಮಾದರಿ ಮಾಡುವುದಾಗಿದೆ. ವಿಶ್ವಾಸಿಗಳು ಯಾವಾಗ ಇತರ ವಿಶ್ವಾಸಿಗಳು ಪ್ರಪಂಚದಲ್ಲಿ ಕ್ರಿಸ್ತನ ಕೈಗಳು ಮತ್ತು ಕಾಲುಗಳಾಗಿರುವುದನ್ನು ನೋಡುತ್ತಾರೋ ಅವರು ಸಹ ಅದೇ ರೀತಿಯಲ್ಲಿ ಮಾಡುವವರಾಗಿರುತ್ತಾರೆ.

## ಆತನ ದೇಹವಾಗಿ ನಾವು ಪರಸ್ಪರ ಸಂಬಂಧದಲ್ಲಿದ್ದೇವೆ.

ನಾವುಗಳು, ಒಬ್ಬರಿಗೊಬ್ಬರ ಸಂಪರ್ಕ ಹೊಂದಿದ್ದೇವೆ. ನಾವು ಪರಸ್ಪರ ಒದಗಿಸುವವರು (ಸೇವೆ ಮಾಡುವವರು) ಆಗಿದ್ದೇವೆ ಮತ್ತು ನಮಗೆ ಪರಸ್ಪರ ಅಗತ್ಯವಿದೆ.

1 ಕೊರಿಂಥದವರಿಗೆ 12 ರಲ್ಲಿ ಅಪೊಸ್ತಲನಾದ ಪೌಲನು ಕ್ರಿಸ್ತನ ದೇಹವಾಗಿರುವುದರಲ್ಲಿರುವ ಪ್ರಾಮುಖ್ಯ ಸತ್ಯಗಳನ್ನು ವಿವರಿಸುತ್ತಾನೆ.

1 ಕೊರಿಂಥದವರಿಗೆ 12:12-27

**ಹೇಗೆ ದೇಹವು ಒಂದಾಗಿದ್ದರೂ ಅದಕ್ಕಿರುವ ಅಂಗಗಳು ಅನೇಕವಾಗಿವೆಯೋ ಹೇಗೆ ದೇಹದ ಅಂಗಗಳೆಲ್ಲವು ಅನೇಕವಾಗಿದ್ದು ಒಂದೇ ದೇಹವಾಗಿರುವದೋ ಹಾಗೆಯೇ ಕ್ರಿಸ್ತನು ಯೆಹೂದ್ಯರಾಗಲಿ ಗ್ರೀಕರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರು ಒಂದೇ ದೇಹವಾಗುವುದಕ್ಕಾಗಿ ಒಂದೇ ಆತ್ಮನಲ್ಲಿ ದಿಕ್ಷಾಸ್ನಾನ ಮಾಡಿಕೊಂಡೆವು ಒಂದೇ ಆತ್ಮ ನಮ್ಮೆಲ್ಲರಿಗೂ ಪಾನವಾಗಿ ಕೊಡಲ್ಪಟ್ಟಿತು. ದೇಹವು ಒಂದೇ ಅಂಗವಲ್ಲ, ಅನೇಕ ಅಂಗಗಳುಳ್ಳದ್ದಾಗಿದೆ ಕಾಲು ನಾನು ಕೈಯಲ್ಲದ ಕಾರಣ ದೇಹಕ್ಕೆ ಸೇರಿದ್ದಲ್ಲವೆಂದು ಹೇಳಿದರೂ ಅದು ದೇಹಕ್ಕೆ ಸೇರದೆ ಇರುವದೋ? ಕಿವಿ- ನಾನು ಕಣ್ಣಲ್ಲದ ಕಾರಣ ನಾನು ದೇಹಕ್ಕೆ ಸೇರಿದ್ದಲ್ಲವೆಂದು ಹೇಳಿದರೂ ಅದು ದೇಹಕ್ಕೆ ಸೇರದೆ ಇರುವದೋ? ದೇಹವೆಲ್ಲಾ ಕಣ್ಣಾದರೆ ಕಿವಿಯೆಲ್ಲಿ?**

**ಅದೆಲ್ಲಾ ಕಿವಿಯಾದರೆ ಮೂಗೆಲ್ಲಿ? ಆದರೆ ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನು ತನಗೆ ಸರಿಯಾಗಿ ತೋಚಿದ ಪ್ರಕಾರ ದೇಹದೊಳಗೆ ಇಟ್ಟಿದ್ದಾನೆ. ಅವೆಲ್ಲವು ಒಂದೇ ಅಂಗವಾಗಿದ್ದರೆ ದೇಹವೆಲ್ಲಿರುವದು? ಆದರೆ ಅಂಗಗಳೇನೋ ಅನೇಕ, ದೇಹವು ಒಂದೇ ಕಣ್ಣು ಕೈಗೆ ನೀನು ನನಗೆ ಅವಶ್ಯವಿಲ್ಲವೆಂದೂ ತಲೆಯು ಕಾಲುಗಳಿಗೆ ನೀವು ನನಗೆ ಅವಶ್ಯವಿಲ್ಲವೆಂದೂ ಹೇಳುವುದಕ್ಕಾಗುವದಿಲ್ಲ ದೇಹದಲ್ಲಿ ಅಲ್ಪ ಬಲವುಳ್ಳವುಗಳಾಗಿ ಕಾಣುವ ಅಂಗಗಳನ್ನು ಅತ್ಯವಶ್ಯವೆಂದು ತಿಳಿಯಬೇಕಲ್ಲವೋ? ಮತ್ತು ನಾವು ದೇಹದಲ್ಲಿ ಅಲ್ಪಮಾನವುಳ್ಳವುಗಳೆಂದೆಣಿಸುವ ಭಾಗಗಳಿಗೆ ಉಡಿಗೆಯಿಂದ ಹೆಚ್ಚಾದ ಮಾನವನ್ನು ಕೊಡುವುದುಂಟಲ್ಲಾ ಹೀಗೆ ಅಂದವಿಲ್ಲದ ಅಂಗಗಳಿಗೆ ಹೆಚ್ಚಾದ ಅಂದವುಂಟಾಗುತ್ತದೆ. ಅಂದವುಳ್ಳ ಅಂಗಗಳಿಗೆ ಏನೂ ಅವಶ್ಯವಿಲ್ಲ. ದೇಹದಲ್ಲಿ ಭೇದವೇನೂ ಇರದೆ ಅಂಗಗಳು ಒಂದಕ್ಕೊಂದರ ಹಿತವನ್ನು ಚಿಂತಿಸುವ ಹಾಗೆ ದೇವರು ಕೊರತೆಯುಳ್ಳದ್ದಕ್ಕೆ ಹೆಚ್ಚಾದ ಮಾನವನ್ನು ಕೊಟ್ಟು ದೇಹವನ್ನು ಹದವಾಗಿ ಕೂಡಿಸಿದ್ದಾನೆ. ಒಂದು ಅಂಗಕ್ಕೆ ಮರ್ಯಾದೆ ಬಂದರೆ ಎಲ್ಲಾ ಅಂಗಗಳಿಗೂ ಸಂತೋಷವಾಗುತ್ತದೆ. ನೀವು ಕ್ರಿಸ್ತನ ದೇಹವು ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ.**

ಅ) ದೇಹವು ಅನೇಕ ಸದಸ್ಯರನ್ನು ಹೊಂದಿದೆ (12:12,14)
ನಾವುಗಳು ದೇಹದಲ್ಲಿ ಕಾರ್ಯಮಾಡುವುದು ಮತ್ತು ಪಾತ್ರದ ನಿಯಮಗಳಲ್ಲಿ ನಾವು ವಿಭಿನ್ನವಾಗಿದ್ದೇವೆ. ನಾವೆಲ್ಲರೂ ಒಂದೇ ಅಲ್ಲ.

ಆ) ನಮ್ಮಲ್ಲಿ ಪ್ರತಿಯೊಬ್ಬರೂ ದೇಹದ ಸದಸ್ಯರುಗಳಾಗಿದ್ದಾರೆ (12:17) ನಮಗೆ ಯಾರೂ ಅಗತ್ಯವಿಲ್ಲ.

ಇ) ನಾವು ಸ್ವತಂತ್ರರಲ್ಲ, ನಮಗೆ ಒಬ್ಬರಿಗೊಬ್ಬರ ಅಗತ್ಯವಿದೆ (12:15,16)

ಈ) ದೇಹದಲ್ಲಿ ಹೋಲಿಕೆ ಯಿಲ್ಲದ ಕಾರ್ಯಗಳಿವೆ. (12:17)
ನಾವೆಲ್ಲರೂ ಒಂದೇ ರೀತಿಯ ಕಾರ್ಯಗಳನ್ನು ಹೊಂದಿಲ್ಲ. ನಾವು ಒಬ್ಬರಿಗೊಬ್ಬರು ಪ್ರಶಂಸಿಸುವುದನ್ನು ಕಲಿಯೋಣ, ಮತ್ತು ಪ್ರತಿಯೊಬ್ಬರ ವರಗಳು ಮತ್ತು ಕ್ರಿಯೆಗಳನ್ನು ಕೊಂಡಾಡೋಣ.

ಉ) ನಮಗೆ ಉತ್ತಮವಾಗಿದೆ ಎಂಬುದಾಗಿ ಆತನು ಕಂಡತಹದ್ದರಲ್ಲಿ ಮತ್ತು ಆತನು ಸಂತೋಷಪಟ್ಟಂತೆ ಪ್ರತಿಯೊಬ್ಬರನ್ನು ದೇವರು ಇರಿಸಿದ್ದಾನೆ (12:18)
ನಾವೆಲ್ಲರು ನಮ್ಮ ಸ್ಥಳವನ್ನು ಗುರ್ತಿಸೋಣ ಮತ್ತು ಕ್ರಿಸ್ತನ ನಮಗೆ ಕೊಟ್ಟಂತಹ ಪಾತ್ರಗಳು ಮತ್ತು ಕ್ರಿಯೆಗಳಲ್ಲಿ ಆನಂದಿಸೋಣ ಬೇರೊಬ್ಬರ ವರ ಪಾತ್ರ ಮತ್ತು ಕ್ರಿಯೆಯಲ್ಲಿ ಅಸೂಯೆ ಪಡೆದಿರೋಣ

ಊ) ಇದು ನಮ್ಮಲ್ಲಿ ಅನೇಕರನ್ನು - ನಮ್ಮೆಲ್ಲರನ್ನು ಪೂರ್ತಿಗೊಳಿಸಲು ತೆಗೆದುಕೊಳ್ಳುತ್ತದೆ (12:19,20)

ನಾವೆಲ್ಲರು ಇಲ್ಲದೇ ದೇಹವು ಪರಿಪೂರ್ಣವಾಗಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಿರಿ ಸ್ಥಳೀಯ ಸಭೆಯ ದೇಹದ ಪ್ರಾಮುಖ್ಯವಾದ ಭಾಗವು ನಾವಾಗಿದ್ದೇವೆ. ಆದ್ದರಿಂದ ನಾವುಗಳು ಸಂಪರ್ಕದಲ್ಲಿರಬೇಕು ಮತ್ತು ದೇಹಕ್ಕೆ ನಾವು ಕೊಡುಗೆ ಸಲ್ಲಿಸಬೇಕು.

ಎ) ನಾವು ಎಂದಿಗೂ ಸ್ವಾತಂತ್ರ್ಯ ಪಡೆಯುವುದಿಲ್ಲ(12:21)

ನಿಮ್ಮ ಜೀವಿತಗಳಿಗೆ ಕೊಡಲು ಇತರರನ್ನು ನಿಮ್ಮ ಸುತ್ತಲು ಇರಿಸಿರುವುದನ್ನು ಮತ್ತು ಅವರ ಜೀವಿತಗಳಿಗೆ ಕೊಡಲು ನೀವು ಸಹ ಅವರ ಸುತ್ತಲೂ ಇದ್ದೀರಿ ಎಂಬುದನ್ನು ಗುರ್ತಿಸಿರಿ. ನನಗೆ ಇತರರು ಅಗತ್ಯವಿದೆ.

ಏ) ಕಡಿಮೆ ಗೌರವ ಹೊಂದಿರುವವುಗಳಾಗಿ ಕಂಡುಬರುವಂತಹವುಗಳಿಗೆ ದೇವರು ಹೆಚ್ಚಿನ ಗೌರವ ಕೊಡುತ್ತಾನೆ (12:22-24)

ದುರ್ಬಲವಾಗಿ ಕಾಣುವಂತದ್ದು ವಾಸ್ತವವಾಗಿ ಅಗತ್ಯವಾಗಿದೆ ಮತ್ತು ಇದು ಬಹಳ ಪ್ರಾಮುಖ್ಯವಾಗಿದೆ. ವಾಸ್ತವವಾಗಿ ಗುಪ್ತವಾಗಿರುವಂತೆ ಕಾಣುವಂತದ್ದು ಹೆಚ್ಚಿನ ಗೌರವವನ್ನು ಪಡೆದುಕೊಳ್ಳುತ್ತದೆ ಮತ್ತು ಆದ್ದರಿಂದ ಲಘುವಾಗಿ ಪರಿಗಣಿಸಬಾರದು.

ಐ) ಆತನ ದೇಹದಲ್ಲಿ ಯಾವುದೇ ವಿಭಾಗ/ಜಗಳಗಳನ್ನು ದೇವರು ಅಪೇಕ್ಷಿಸುವುದಿಲ್ಲ ಆದರೆ ಒಬ್ಬರಿಗೊಬ್ಬರು ಪರಸ್ಪರ ಪ್ರೀತಿ ಮತ್ತು ಕಾಳಜಿಯನ್ನು ತೋರ್ಪಡಿಸುತ್ತೇವೆ (12:25,26)

## ಒಂದು ಸ್ಥಳೀಯ ಸಭೆಯು ಇದನ್ನು ಕಾರ್ಯಗತಗೊಳಿಸಲು ಪ್ರಾಯೋಗಿಕ ವಿಧಾನಗಳು

### *1) ಆತನ ದೇಹವಾಗಿ, ನಮ್ಮ ಜೀವಿತ ಮತ್ತು ಗುರುತು ಆತನಿಂದ ಹರಿಯುತ್ತದೆ.*

- ವಿಶ್ವಾಸಿಗಳು ಯಾವಾಗಲೂ ಕ್ರಿಸ್ತನಲ್ಲಿ ಅವರ ಗುರುತನ್ನು ನೋಡಬೇಕು ಎಂಬುದಾಗಿ ಬೋಧಿಸಬೇಕು.
- ಸ್ಥಳೀಯ ಸಭೆಯಾಗಿ ನಾವು ಮಾಡುವಂತಹ ಎಲ್ಲವೂ ಆತನೊಂದಿಗಿನ ನಮ್ಮ ಸಂಬಂಧ ಮತ್ತು ನಿಕಟತೆಯಿಂದ ಹರಿಯುವಂತದ್ದಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ತಲೆಯಿಲ್ಲದೆ ದೇಹವು ಜೀವವಿಲ್ಲದ್ದಾಗಿದೆ.

ಎಲ್ಲದರಲ್ಲಿಯೂ ಯೇಸುವಿನೊಂದಿಗಿನ ನಿಕಟತೆಯನ್ನು ಅಗತ್ಯ ಮತ್ತು ಅಡಿಪಾಯವಾಗಿ ಹಾಕಿರಿ.

### *2) ಆತನ ದೇಹವಾಗಿ, ನಾವು ಯೇಸುವನ್ನು ಪ್ರತಿನಿಧಿಸುತ್ತೇವೆ ನಾವು ಯೇಸುವನ್ನು ಪ್ರಕಟಿಸುತ್ತೇವೆ.*

- ವಿಶ್ವಾಸಿಗಳು ಆತನ ಪ್ರೀತಿ, ಕರುಣೆ, ಕ್ಷಮಾಪಣೆ, ಬಲ ಮತ್ತು ಅಧಿಕಾರವನ್ನು ಅವರು ಹೋಗುವ ಕಡೆಯಲ್ಲೆಲ್ಲಾ ತೋರ್ಪಡಿಸುವದರಿಂದ ಯೇಸುವನ್ನು ಪ್ರಕಟಿಸುವುದರ ಮೇಲೆ ಗಮನ ಹರಿಸಬೇಕು.

### *3) ಆತನ ದೇಹವಾಗಿ, ನಾವು ಆತನ ಕೈಗಳು ಮತ್ತು ಕಾಲುಗಳಾಗಿದ್ದೇವೆ. ನಾವು ಆತನ ಚಿತ್ತವನ್ನು ಮಾಡುತ್ತೇವೆ.*

- ತಲೆಯು ಆದೇಶಿಸುವುದನ್ನು ದೇಹವು ಕಾರ್ಯಗತಗೊಳಿಸುತ್ತದೆ. ವಿಶ್ವಾಸಿಗಳು ಆತನ ನಿರ್ದೇಶನವನ್ನು ಕೇಳುವಂತೆ ಬೋಧಿಸಿರಿ ಮತ್ತು ಆಮೇಲೆ ನಿಜವಾಗಿ ಪ್ರಾಯೋಗಿಕ ಮಾರ್ಗಗಳಲ್ಲಿ ಹೊರಗೆ ಹೋಗಿರಿ ಮತ್ತು ಪ್ರಪಂಚದಲ್ಲಿ ಆತನು ಅಪೇಕ್ಷಿಸುವುದನ್ನು ಮಾಡಿರಿ.
- ವಾಕ್ಯಗಳಲ್ಲಿ ಈಗಾಗಲೇ ಆತನು ಆದೇಶಿಸಿರುವಂತಹವುಗಳನ್ನು ಮಾಡುವುದರ ಮೂಲಕ ನಾವು ಪ್ರಾರಂಭಿಸುತ್ತೇವೆ. ಜೊತೆಗೆ ಸ್ಥಳೀಯ ಸಭೆಯಾಗಿ ನಮಗೆ ಆತನು ಮಾತನಾಡುವಂತಹ ನಿರ್ದಿಷ್ಟ ವಿಷಯಗಳನ್ನು ನಾವು ಮಾಡುತ್ತೇವೆ.

### *4) ಆತನ ದೇಹವಾಗಿ, ನಾವು ಪರಸ್ಪರ ಸಂಬಂಧದಲ್ಲಿದ್ದೇವೆ*

- ಎಲ್ಲಾ ವಿಶ್ವಾಸಿಗಳು ಅವರ ಪಾತ್ರವನ್ನು ಗುರ್ತಿಸುವಂತೆ ಮತ್ತು ಸ್ಥಳೀಯ ಸಭೆಯ ಅಂಗದಲ್ಲಿ ಕಾರ್ಯಮಾಡುವಂತೆ ಪ್ರೋತ್ಸಾಹಿಸಬೇಕು.
- ''ತಂಡದ - ಕೆಲಸದ'' ಬಲವಾದ ಪ್ರಜ್ಞೆಯನ್ನು ಬೆಳೆಸಿಕೊಳ್ಳಿರಿ ತಂಡದಲ್ಲಿ ನಾವೆಲ್ಲರು ಪ್ರಾಮುಖ್ಯವಾದವರಾಗಿದ್ದೇವೆ. ತಂಡವು (ಸ್ಥಳೀಯ ಸಭೆಯ ಅಂಗ) ಕಾರ್ಯಮಾಡಲೂ ನಮಗೆ ಒಬ್ಬರಿಗೊಬ್ಬರ ಅಗತ್ಯವಿದೆ.

## ಸಿದ್ಧವಾಗಿರಲೂ ಬೇಕಾದ ಸವಾಲುಗಳು

### *ಸಂಸ್ಕೃತಿ ಮತ್ತು ಸಾಮಾಜಿಕ ಹಿನ್ನಲೆಗಳ ಸವಾಲು*

ಕೆಲವು ಸ್ಥಳೀಯ ಸಭೆಗಳು ವೈವಿದ್ಯಮಯ ಸಾಂಸ್ಕೃತಿಕ ಮತ್ತು ಸಾಮಾಜಿಕ ಹಿನ್ನಲೆಗಳಿಂದ ಬಂದಂತಹ ಜನರುಗಳನ್ನು ಹೊಂದಿವೆ. ಕೆಲವು ಬಾರಿ ಜನರು ಈ ವ್ಯತ್ಯಾಸಗಳನ್ನು

ಅಡ್ಡಲಾಗಿ ಕತ್ತರಿಸಲು ಮತ್ತು ಒಂದೇ ದೇಹವಾಗಿ ಒಂದೇ ಮನಸ್ಸು ಮತ್ತು ಹೃದಯ ಹೊಂದಿದವರಾಗಿ ಕಂಡುಬರಲೂ ಕಷ್ಟಕರ ಎಂಬುದಾಗಿ ಜನರು ಗುರ್ತಿಸುತಾರೆ. ಇದು ಜರುಗಲು ಸಮಯ ತೆಗೆದುಕೊಳ್ಳುತ್ತದೆ. ಹಿರಿಯ ಸಭಾಪಾಲಕರು ಮತ್ತು ನಾಯಕರುಗಳಾಗಿ ವಿಷಯುಗಳು ಎಲ್ಲಿವೆ ಎಂಬುದರ ಬಗ್ಗೆ ಸೂಕ್ಷ್ಮ ಪರಿಜ್ಞಾನವುಳ್ಳವರಾಗಿರಿ. ಜನರು ಅವರಿಗೆ ಹಿತಕರವಾಗಿರಲೂ ಬಯಸುವಂತಹ ಗುಂಪುಗಳೊಡನೆ ಉಳಿಯಲು ಒಲವು ತೋರಿಸುತ್ತಾರೆ. ಆದ್ದರಿಂದ ನಿರಂತರವಾಗಿ ಜನರಿಗೆ ಅವರ ಸ್ವಂತ ಗುಂಪಿನಲ್ಲಿ ಹೊರನೆಡೆಯುವಂತೆ ಮತ್ತು ಇತರರೊಂದಿಗೆ ಸಂಭಾಷಿಸುವಂತೆ ಪ್ರೋತ್ಸಾಹಿಸಬೇಕು ದೇವರ ರಾಜ್ಯದ ಸಂಸ್ಕೃತಿಯನ್ನು ಪ್ರೋತ್ಸಾಹಿಸಿರಿ. ಯಾವುದೇ ಒಂದು ಸಂಸ್ಕೃತಿ ಸಾಮಾಜಿಕ ಅಥವಾ ಇನ್ನೊಂದು ಭಾಷೆಯ ಗುಂಪಿನ ಮೇಲೆ ಪ್ರಚಾರ ಮಾಡಬಾರದು. ಎಲ್ಲರನ್ನು ಸಮಾನಾಂತರ ಸಮಾನ ಅವಕಾಶಗಳನ್ನು ಕೂಡುವುದನ್ನು ಖಚಿತಪಡಿಸಿಕೊಳ್ಳಬೇಕು.

## *ಒಂದೇ ದೇಹವಾಗಿರುವುದೆಂಬುದರ ತಪ್ಪುಗ್ರಹಿಕೆ*

ಕೆಲವೊಮ್ಮೆ ಜನರು ಒಂದೇ ದೇಹವಾಗಿರುವಂತಹ ಸತ್ಯವನ್ನು ತಪ್ಪಾಗಿ ಅನ್ವಯಿಸುತ್ತಾರೆ. ಅವರು ಒಂದೇ ಸ್ಥಳೀಯ ಸಭೆಗೆ ಬದ್ದತೆಯಿಂದಿರುವುದಿಲ್ಲ ಆದರೆ ಅವರ ಸ್ವಂತ ಭ್ರಾಂತಿಯಿಂದ ನಗರದಲ್ಲಿನ ಅನೇಕ ಸ್ಥಳೀಯ ಸಭೆಗಳನ್ನು ಸುತ್ತಿ ತೇಲಾಡುತ್ತಿರುತ್ತಾರೆ. ಇನ್ನು ಕೆಲವರು ಇತರ ಕಾರಣವಾದಂತಹ ಜಾಲ ಮಾಹಿತಿ ಮತ್ತು ಸಂಪರ್ಕಗಳನ್ನು ಪಡೆದುಕೊಳ್ಳಲು ಅವರ ಸ್ವಂತ ಸೇವೆಯನ್ನು ಪ್ರಚಾರ ಮಾಡಲೂ ಮುಂತಾದವುಗಳ ಕಾರಣಕ್ಕಾಗಿ ಪ್ರಚಾರ ಮಾಡಲೂ ಮುಂತಾದವುಗಳ ಕಾರಣಕ್ಕಾಗಿ ಅನೇಕ ಸ್ಥಳೀಯ ಸಭೆಗಳ ಸುತ್ತಲು ತೇಲುತ್ತಾರೆ ನಿಮಗೆ ಅಂತಹ ಜನರು ಕಂಡುಬಂದರೆ ಅಂತಹವರೊಂದಿಗೆ ಒಂದೇ ಸ್ಥಳೀಯ ಸಭೆಯ ದೇಹವಾಗಿರಲು ಬದ್ಧತೆಯಿಂದಿರುವುದರ ಪ್ರಾಮುಖ್ಯತೆಯನ್ನು ಹಂಚಿರಿ. ಸುತ್ತಲೂ ಸುತ್ತಿ ತೇಲಾಡದೆ ದೇಹದ ಅಂಗಗಳ ಚಿತ್ರಗಳನ್ನು ಪಡೆಯಲು ಸಹಾಯ ಮಾಡಿರಿ ಆದರೆ ಒಂದೇ ಒಂದು ದೇಹಕ್ಕೆ ಕೂಡಿದವರಾಗಿ ಉಳಿಯಿರಿ.

## ಪರಿಗಣಿಸಲು ಪ್ರಶ್ನೆಗಳು

ನಾವು ಒಂದೇ ಸ್ಥಳೀಯ ಸಭೆಗೆ ಸೇರಿದವರೆಂಬ ಸಂಗತಿಯನ್ನು ಸಮತೋಲನ ಮಾಡುವುದು ಹೇಗೆ ಮತ್ತು ಇನ್ನೂ ಒಟ್ಟಾಗಿ ಒಂದೇ ಕ್ರಿಸ್ತನ ದೇಹಕ್ಕೆ ಸೇರಿರುವುದೇಗೆ?

ನಾಯಕರುಗಳಾಗಿ, ನಾವು ನಡೆಸುತ್ತಿರುವಂತಹ ನಮ್ಮ ಸ್ವಂತ ಸ್ಥಳೀಯ ಸಭೆಯ ದೇಹವಾಗಿ ಹಾಗೆಯೇ ನಗರ ವ್ಯಾಪ್ತಿ ಸಭೆಯ ದೊಡ್ಡ ದರ್ಶನದ ಕಾರ್ಯ ಮಾಡುವ ಅಂಗವಾಗಿ ಮತ್ತು ನಗರವನ್ನು ಸಂಧಿಸುವ ಕಡೆಗೆ ಕಾರ್ಯ ಮಾಡುವಂತಹ ದರ್ಶನವನ್ನು ನಾವು ಹೇಗೆ ಕೈಗೊಳ್ಳಬಹುದು?

# 9

# ಸ್ಥಳೀಯ ಸಭೆ-ದೇವರ ಕುಟುಂಬವಾಗಿದೆ

## ದೇವರ ಮನೆ - ಒಂದು ಆತ್ಮಿಕ ಮನೆ

ದೇವರ ವಾಕ್ಯದಲ್ಲಿ ಅನೇಕ ಸ್ಥಳಗಳಲ್ಲಿ ''ದೇವರ ಮನೆ ಅಥವಾ ''ಮನೆಮಂದಿ'' ಎಂಬ ಪದವು ಸ್ಥಳೀಯ ಸಭೆಯನ್ನು ಮತ್ತು ಸಾಂಸ್ಥಿಕ ಕ್ರಿಸ್ತ ದೇಹವನ್ನು ಸೂಚಿಸುತ್ತದೆ.

ಗಲಾತ್ಯದವರಿಗೆ 6:10
**ಆದದರಿಂದ ಸಮಯುವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತ ನಂಬಿಕೆಯುಳ್ಳವರಿಗೆ ಮಾಡೋಣ.**

ಎಫೆಸದವರಿಗೆ 2:19
**ಹೀಗಿರಲಾಗಿ ನೀವು ಇನ್ನು ಮೇಲೆ ಪರದೇಶದವರೂ ಅನ್ಯರೂ ಆಗಿರದೆ ದೇವಜನರೊಂದಿಗೆ ಒಂದೇ ಸಂಸ್ಥಾನದವರೂ ದೇವರ ಮನೆಯವರೂ ಆಗಿದ್ದೀರಿ.**

1 ತಿಮೊಥೆಯನಿಗೆ 3:15
**ಆದರೆ ಒಂದು ವೇಳೆ ನಾನು ತಡಮಾಡಿದರೂ ದೇವರ ಮನೆಯಲ್ಲಿ ಅಂದರೆ ಜೀವಸ್ವರೂಪನಾದ ದೇವರ ಸಭೆಯಲಿ ನಡೆದುಕೊಳ್ಳಬೇಕಾದ ರೀತಿಯು ನಿನಗೆ ಗೊತ್ತಾಗಬೇಕೆಂದು ಈ ಸಂಗತಿಗಳನ್ನು ಬರೆದಿದ್ದೇನೆ. ಆ ಸಭೆಯು ಸತ್ಯಕ್ಕೆ ಸ್ತಂಭವೂ ಆಧಾರವೂ ಆಗಿದೆ.**

1 ಪೇತ್ರನು 2:5
**ನೀವು ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ ಮತ್ತು ಯೇಸು ಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸುವುದಕ್ಕೆ ಪವಿತ್ರ ಯಾಜಕವರ್ಗದವರಾಗಿದ್ದೀರಿ.**

ಗ್ರೀಕ್ ಭಾಷೆಯಲ್ಲಿ ''ಮನೆ'' ಎಂಬ ಪದಕ್ಕೆ ''ಓಯ್‌ಕೋಸ್'' ಎಂಬುದಾಗಿದೆ ಮತ್ತು ಒಂದು ಕುಟುಂಬದ ಸೂಚನೆಯಿಂದ ಸರಳವಾಗಿ ವಾಸಿಸುವಿಕೆಯನ್ನು ಸೂಚಿಸುತ್ತದೆ. ನಾವು ಒಂದು ಕುಟುಂಬವಾಗಿದ್ದೇವೆ, ದೇವರ ಕುಟುಂಬವಾಗಿದ್ದೇವೆ. ನಾವೆಲ್ಲರೂ ದೇವರಿಂದ ಜನಿಸಿದ ವಿಶ್ವಾಸಿಗಳಾಗಿರುವುದರಿಂದ ಆತ್ಮಿಕವಾಗಿ ಮಗನು

ಮತ್ತು ದೇವರ ಮಗಳಾಗಿ ಜನಿಸಿದ್ದೇವೆ. (ಯೋಹಾನ 1:12, 1 ಯೋಹಾನ 5:1) ಆತ್ಮಿಕವಾಗಿ, ನಾವು ಕುಟುಂಬವಾಗಿದ್ದೇವೆ.

ಕರ್ತನಾದ ಯೇಸುವು ಕುಟುಂಬದ ತಲೆಯು ಅಥವಾ ಮನೆಯ ಯಜಮಾನನು ಆಗಿದ್ದಾನೆ.

ಮತ್ತಾಯ 10:25

**ಗುರುವಿನಂತೆ ಆಗುವದು ಶಿಷ್ಯನಿಗೆ ಸಾಕು. ಧಣಿಯಂತೆ ಆಗುವುದು ಆಳಿಗೆ ಸಾಕು ಅವರು ಮನೆಯ ಯಜಮಾನನಿಗೆ ಬೆಲ್ಜೆ ಬೂಲನೆಂದು ಹೆಸರಿಟ್ಟ ಮೇಲೆ ಆತನ ಮನೆಯವರನ್ನು ಏನೆಂದಾರು?**

''ಮನೆಯ ಯಜಮಾನನಿಗೆ'' ಗ್ರೀಕ್‌ನಲ್ಲಿ ''ಓಯಿಕೊಡೆಸಪೋಟ್ಸ್'' (Oikodespotes)= ಕುಟುಂಬದ ಮುಖ್ಯಸ್ಥರು, ಮನೆ ಮಾಲೀಕ.

ಇಬ್ರಿಯರಿಗೆ 3:5, 6

**ಮೋಶೆಯು ಸೇವಕನಾಗಿ ದೇವರ ಮನೆಯಲ್ಲೆಲ್ಲಾ ನಂಬಿಗಸ್ತನಾಗಿದ್ದನು ಅವನು ಮುಂದೆ ಪ್ರಕಟವಾಗಬೇಕಾಗಿದ್ದ ಸಂಗತಿಗಳಿಗೆ ಸಾಕ್ಷಿಯಾಗಿದ್ದನು. ಕ್ರಿಸ್ತನಾದರೋ ಮಗನಾಗಿ ದೇವರ ಮನೆಯ ಮೇಲೆ ಅಧಿಕಾರಿಯಾಗಿದ್ದಾನೆ ನಾವು ನಮ್ಮ ಧೈರ್ಯವನ್ನು ನಮ್ಮ ನಿರೀಕ್ಷೆಯಿಂದುಂಟಾಗುವ ಉತ್ಸಾಹವನ್ನು ಕಡೇ ತನಕ ದೃಢವಾಗಿ ಹಿಡಿದುಕೊಂಡವರಾದರೆ ನಾವೇ ದೇವರ ಮನೆಯವರು.**

ಮೋಶೆಯು ಒಬ್ಬ ಸೇವಕನಾಗಿದ್ದಕ್ಕೆ ವ್ಯತಿರಿಕ್ತವಾಗಿ ಕರ್ತನಾದ ಯೇಸುವು ಆತನ ಸ್ವಂತ ಮನೆಯ ಮೇಲೆ ಮಗನಾಗಿದ್ದಾನೆ. ಆದ್ದರಿಂದ ಮನೆಗಿಂತ ಮನೆಕಟ್ಟಿದವನಿಗೆ ಹೆಚ್ಚಾದ ಮಹಿಮೆ ಇರುವಂತೆ ಆತನ ಮನೆಯಲ್ಲಿ ಮಹಿಮೆಯನ್ನು ಹೊಂದುತ್ತಾನೆ (ಇಬ್ರಿಯರಿಗೆ 3:3) ಮತ್ತು ನಾವು ಆತನ ಮನೆಯಾಗಿದ್ದೇವೆ. ನಾವು ಆತನ ಕುಟುಂಬವಾಗಿದ್ದೆವೆ.

## ಸ್ಥಳೀಯ ಸಭೆಯು ಒಂದು ಕುಟುಂಬವಾಗಿರುವುದರ ಮೂರು ಪ್ರಮುಖ ಪರಿಣಾಮಗಳು

### *ಅ) ಕುಂಟುಂಬದಲ್ಲಿ ನಿಮ್ಮ ನಡವಳಿಕೆಯ ಒಂದು ಸರಿಯಾದ ಕ್ರಮ*

1 ತಿಮೊಥೆಯನಿಗೆ 3:15 ರಲ್ಲಿ ಪೌಲನು ವಾಖ್ಯಾನಿಸುರುವಂತೆ, ದೇವರ ಕುಟುಂಬದ ಭಾಗವಾಗಿ ದೇವರ ಕುಟುಂಬದ ಭಾಗವಾಗಿ ದೇವರ ಮನೆಯಲ್ಲಿ ನಮ್ಮ ನಡವಳಿಕೆ ಹೇಗಿರಬೇಕೆಂಬುದನ್ನು ನಾವು ಕಲಿಯಬೇಕು. ದೇವಜನರುಗಳಿಗೆ ಕಲಿಸಬೇಕಾದ

ಅಗತ್ಯವಿದೆ ಮತ್ತು ದೇವರ ಕುಟುಂಬದ ಭಾಗವಾಗಿ ಹೇಗೆ ವರ್ತಿಸಬೇಕೆಂಬುದರ ಬಗ್ಗೆ ತರಬೇತಿ ಗೊಳಿಸಬೇಕು ನಾವು ಮಾಡಬೇಕಾದಂತಹ ಕೆಲವು ವಿಷಯಗಳಿವೆ ಮತ್ತು ನಾವು ಮಾಡಬಾರದಂತಹ ವಿಷಯಗಳಿವೆ. ಪ್ರತಿಯೊಬ್ಬರೂ ಶಿಸ್ತುಗಳನ್ನು ನಿಗ್ರಹಿಸಿದರೆ, ದೇವರ ನೇಮಿತ ಗಡಿಗಳನ್ನು ತಿರಸ್ಕರಿಸಿದರೆ, ಮತ್ತು ಅವರಿಗೆ ಮೆಚ್ಚಿಕೆಯಾದದ್ದನ್ನು ಮಾಡಿದರೆ, ದೇವರ ಮನೆಯು ಅಸ್ತವ್ಯಸ್ಥತೆಯ ಬಂಡಾಯದ ಮತ್ತು ಗೊಂದಲದ ಸ್ಥಳವಾಗುತ್ತದೆ.

## *ಆ) ಆತ್ಮಿಕ ಮತ್ತು ನೈಸರ್ಗಿಕ ನಡುವಿನ ಗಡಿಗಳು*

2 ಥೆಸಲೊನಿಕದವರಿಗೆ 3:6-16

**ಸಹೋದರರೇ, ನಿಮ್ಮಿಂದ ಹೊಂದಿದ ಬೋಧನೆಯನ್ನು ಅನುಸರಿಸದೆ ಅಕ್ರಮವಾಗಿ ನಡೆಯುವ ಪ್ರತಿ ಸಹೋದರನಿಗೆ ನೀವು ದೂರವಾಗಿರಬೇಕೆಂದು ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮಗೆ ಆಜ್ಞಾಪಿಸುತ್ತೇವೆ. ನೀವು ನಮ್ಮನ್ನು ಅನುಸರಿಸಿ ಹೇಗೆ ನಡೆಯಬೇಕೆಂದು ನೀವೇ ಬಲ್ಲಿರಿ. ನಾವು ನಿಮ್ಮಲ್ಲಿ ಅಕ್ರಮವಾಗಿ ನಡೆಯಲಿಲ್ಲ; ನಾವು ಹಣಕೊಡದೆ ಯಾರಬಳಿಯಲ್ಲಿಯೂ ಊಟ ಮಾಡಲಿಲ್ಲ; ನಿಮ್ಮಲ್ಲಿ ಒಬ್ಬರಿಗೂ ಭಾರವಾಗಬಾರದೆಂದು ಹಗಲಿರುಳು ಕಷ್ಟದಿಂದಲೂ ಪ್ರಯಾಸದಿಂದಲೂ ಜೀವನ ಮಾಡಿಕೊಂಡೆವು ನಿಮ್ಮಿಂದ ಪೋಷಣೆ ಹೊಂದುವದಕ್ಕೆ ನಮಗೆ ಹಕ್ಕಿಲ್ಲವೆಂದು ಹಾಗೆ ಮಾಡಲಿಲ್ಲ. ನೀವು ನಮ್ಮನ್ನು ಅನುಸರಿಸುವುದಕ್ಕಾಗಿ ನಿಮಗೆ ಮಾದರಿಯಾಗಿರೋಣವೆಂದೇ ಮಾಡಿದೆವು. ಇದಲ್ಲದೆ ನಾವು ನಿಮ್ಮ ಸಂಗಡ ಇದ್ದಾಗ ಕೆಲಸ ಮಾಡಲೊಲ್ಲದವನು ಊಟ ಮಾಡಬಾರದೆಂದು ನಿಮಗೆ ಆಜ್ಞಾಪಿಸಿದೆವಷ್ಟೆ ಆದರೆ ನಿಮ್ಮಲ್ಲಿ ಕೆಲವರು ಯಾವ ಕೆಲಸವನ್ನೂ ಮಾಡದೆ ಇತರರ ಕೆಲಸದಲ್ಲಿ ಮಾತ್ರ ತಲೆಹಾಕಿ ಅಕ್ರಮವಾಗಿ ನಡೆಯುತ್ತಾರೆಂದು ವರ್ತಮಾನ ಕೇಳಿದ್ದೇವೆ ಇಂಥವರು ತಮ್ಮ ಕೆಲಸವನ್ನು ನೋಡುತ್ತಾ ತಾವೇ ಸಂಪಾದಿಸಿದ್ದನ್ನು ಊಟ ಮಾಡಬೇಕೆಂದು ಕರ್ತನಾದ ಯೇಸು ಕ್ರಿಸ್ತನಲ್ಲಿ ನಾವು ಆಜ್ಞಾಪಿಸಿ ಪ್ರಬೋಧಿಸುತ್ತೇವೆ ಸಹೋದರರೇ ನೀವಾದರೋ ಒಳ್ಳೇದನ್ನು ಮಡುವದರಲ್ಲಿ ಬೇಸರಗೊಳ್ಳಬೇಡಿರಿ ಈ ಪತ್ರಿಕೆಯ ಮೂಲಕವಾಗಿ ಹೇಳಿರುವ ನಮ್ಮ ಮಾತಿಗೆ ಯಾವನಾದರೂ ಒಳಗಾಗದಿದ್ದರೆ ಅವನನ್ನು ಗುರುತು ಇಟ್ಟುಕೊಂಡು ಅವನಿಗೆ ನಾಚಿಕೆಯಾಗುವಂತೆ ಅವನ ಸಹವಾಸದಲ್ಲಿ ಸೇರಬೇಡಿರಿ ಆದರೂ ಅವನನ್ನು ವೈರಿಯೆಂದು ಎಣಿಸದೆ ಸಹೋದರನೆಂದು ಎಣಿಸಿಕೊಂಡು ಬುದ್ಧಿ ಹೇಳಿರಿ ಶಾಂತಿದಾಯಕನಾದ ಕರ್ತನು ತಾನೇ ಸದಾಕಾಲದಲ್ಲಿಯೂ ಸಕಲ ವಿಧದಲ್ಲಿಯೂ ನಿಮಗೆ ಶಾಂತಿಯನ್ನು ದಯಪಾಲಿಸಲಿ ಕರ್ತನು ನಿಮ್ಮೆಲ್ಲರೊಂದಿಗೆ ಇರಲಿ.**

ಥೆಸಲೋನಿಕ ಸಭೆಯ ವಿಶ್ವಾಸಿಗಳಿಗೆ, ಅವರು ಯಾವ ರೀತಿ ವರ್ತಿಸಬೇಕು ಮತ್ತು ಯಾವುದು ಅಕ್ರಮವಾದ ನಡವಳಿಕೆ ಎಂಬುದಾಗಿ ಪರಿಗಣಿಸಲ್ಪಡುತ್ತದೆ ಎಂಬುದರ ಕುರಿತು ಆ ಅಪೊಸ್ತಲನಾದ ಪೌಲನು ತುಂಬಾ ಸ್ಪಷ್ಟವಾಗಿ ತನ್ನ ಉಪದೇಶಗಳಲ್ಲಿ ಹೇಳಿದ್ದಾನೆ.

ನಾವು ಸಮತೋಲನಗೊಳಿಸಿದಂತೆ ಬುದ್ಧಿವಂತಿಕೆಯಿಂದ ನಾವುಗಳು ನಡೆಯಬೇಕು ಮತ್ತು ಆತ್ಮಿಕ ಕುಟುಂಬವಾಗಿರುವುದರ ಮತ್ತು ಆತ್ಮಿಕ ಕುಟುಂಬವಾಗಿರುವುದರ ಮತ್ತು ನಮ್ಮ ನೈಸರ್ಗಿಕ ಇಹಲೋಕದ ಕುಟುಂಬಗಳ ನಡುವೆ ಸ್ಪಷ್ಟವಾದ ಗಡಿರೇಖೆಯನ್ನು ಬರೆಯಿರಿ ಉದಾಹರಣೆಗೆ, ಯಾರೋ ಒಬ್ಬರು ''ನಾನು ಕರ್ತನಲ್ಲಿ ನಿಮ್ಮ ಸಹೋದರಿ ಆದ್ದರಿಂದ ನಿಮ್ಮ ನೈಸರ್ಗಿಕ ಎಲ್ಲಾ ಪಿತ್ರಾರ್ಜಿತವಾದುದನ್ನು ಆತ್ಮಿಕವಾಗಿ ಹಕ್ಕು ಕೇಳಿಕೆ'' ಎಂಬುದಾಗಿ ಹೇಳಲೂ ಸಾಧ್ಯವಿಲ್ಲ ಯಾರೋ ನಿಮ್ಮ ಆತ್ಮಿಕ ತಂದೆ ಅಥವಾ ತಾಯಿ ಎಂಬುದಾಗಿ ಹೇಳಲು ಸಾಧ್ಯವಿಲ್ಲ ಮತ್ತು ಆದ್ದರಿಂದ ನಿಮ್ಮ ಜೀವಿತವನ್ನು ಹೇಗೆ ಜೀವಿಸಬೇಕು, ಯಾರನ್ನು ಮದುವೆಯಾಗಬೇಕು, ಯಾವ ಕೆಲಸ ಮಾಡಬೇಕು, ನೀವು ಏನನ್ನು ತಿನ್ನಬೇಕು, ಯಾವ ಬಗೆಯ ಬಟ್ಟೆಗಳನ್ನು ಹಾಕಬೇಕು ಮುಂತಾದವುಗಳನ್ನು ಆದೇಶ ಕೊಡಲೂ ಸಾಧ್ಯವಿಲ್ಲ. ಅವರು ನಿಮಗೆ ಸಲಹೆಗಳನ್ನು ಕೊಡಬಹುದು ಮತ್ತು ಸಮಾಲೋಚನೆ ಮಾಡಬಹುದು ಆದರೆ ನಿಮ್ಮ ಜೀವಿತಕ್ಕಾಗಿ ಅವರು ಜೀವಿಸಬಾರದು ನಿಮ್ಮ ನೈಸರ್ಗಿಕ ಇಹಲೋಕದ ಜೀವಿತಕ್ಕೆ ನೀವೇ ಇನ್ನೂ ಜವಬ್ದಾರಿವುಳ್ಳವರಾಗಿದ್ದೀರಿ. ದೇವರ ಆತ್ಮಿಕ ಕುಟುಂಬದ ಭಾಗವಾಗಿ ನೈಸರ್ಗಿಕ ಕುಟುಂಬದ ಗಡಿಗಳನ್ನು ದಾಟಲು ಅನುಮತಿ ಕೊಡಬೇಡಿರಿ.

### *ಇ) ಒಂದು ಕುಟುಂಬವು ಸಂಸ್ಕೃತಿ, ಮೌಲ್ಯಗಳು ಉದ್ದೇಶಗಳು ಮತ್ತು ದರ್ಶನಗಳನ್ನು ಹೊಂದಿದೆ.*

ಪ್ರತಿಯೊಂದು ಮನೆಮಂದಿ ಅಥವಾ ಕುಟುಂಬವು ಇದರ ಮೌಲ್ಯಗಳು, ಉದ್ದೇಶಗಳು ಮತ್ತು ದರ್ಶನಗಳಿಂದ ವ್ಯಾಖ್ಯಾನಿಸಿದಂತೆ ನಿರ್ದಿಷ್ಟವಾದ ಸಂಸ್ಕೃತಿಯನ್ನು ಹೊಂದಿದೆ. ಮನೆಮಂದಿಯ ಮುಖ್ಯಸ್ಥನು ಮನೆಯೊಳಗೆ ಹೋಗುವಂತಹ ಮುಖ್ಯವಾದ ಮಾತುಗಳನ್ನು ಹೇಳುತ್ತಾರೆ ಮತ್ತು ಆದ್ದರಿಂದ ಸಂಸ್ಕೃತಿಯನ್ನು ವ್ಯಾಖ್ಯಾನಿಸಬಹುದು.

ಅದೇ ರೀತಿಯಲ್ಲಿ, ಒಂದು ಸ್ಥಳೀಯ ಸಭೆಯು ಅದರ ಮೌಲ್ಯಗಳು, ಉದ್ದೇಶಗಳು ಮತ್ತು ದರ್ಶನಗಳಿಂದ ವ್ಯಾಖ್ಯಾನಿಸಲ್ಪಟ್ಟ ತನ್ನದೆ ಆದಂತಹ ಸ್ವಂತ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿದೆ ಎರಡು ಸ್ಥಳೀಯ ಸಭೆಗಳ ನಡುವಿನ ಸಂಸ್ಕೃತಿಯು ತುಂಬಾ ವಿಭಿನ್ನವಾಗಿರುತ್ತದೆ (ಅಥವಾ ತುಂಬಾ ಹೋಲಿಕೆಯಾಗಿರಬಹುದು) ವಿಶಿಷ್ಟವಾಗಿ ಹಿರಿಯ ಸಭಾಪಾಲಕರು ಮತ್ತು ನಾಯಕತ್ವದ ತಂಡವು ಸ್ಥಳೀಯಸಭೆಯ ಸಂಸ್ಕೃತಿಯನ್ನು ಸೃಷ್ಟಿಸುವಂತದ್ದಾಗಿದೆ. ಅವರು ಸ್ಥಳೀಯ ಸಭಾ ಸಮುದಾಯದ ದರ್ಶನಗಳು ಮತ್ತು ಉದ್ದೇಶಗಳು ಮೌಲ್ಯಗಳನ್ನು ವ್ಯಾಖ್ಯಾನಿಸುವವರಾಗಿದ್ದಾರೆ.

ಸಂಸ್ಕೃತಿಯು ಪ್ರಾಮುಖ್ಯವಾದುದು ಯಾಕೆಂದರೆ ಜನರು ಒಬ್ಬರಿಗೊಬ್ಬರು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ ಮತ್ತು ಒಂದು ನಿರ್ದಿಷ್ಟವಾದ ಪರಿಸರದಲ್ಲಿ ಮಾಡುವಂತಹ ಕಾರ್ಯಗಳು ಅಂಗೀಕರಿಸಲ್ಪಡುವಂತಹ ಮಾರ್ಗಗಳನ್ನು ನಮಗೆ ತೋರಿಸುತ್ತದೆ.

## ಎ.ಪಿ.ಸಿ (APC) ದರ್ಶನಗಳು, ನಮ್ಮ ಸಂಸ್ಕೃತಿ ಮೌಲ್ಯಗಳು, ಉದ್ದೇಶಗಳು

ಬೆಂಗಳೂರಿನಲ್ಲಿರುವ ಆಲ್ ಪೀಪಲ್ಸ್ ಸಭೆಯಲ್ಲಿ (APC) ಉತ್ತಮವಾಗಿ ವ್ಯಾಖ್ಯಾನಿಸಲ್ಪಟ್ಟ ಕುಟುಂಬ ಸಂಸ್ಕೃತಿಯನ್ನು ಹೊಂದಿದ್ದೇವೆ. ನಮ್ಮ ಮೌಲ್ಯಗಳು, ಉದ್ದೇಶಗಳು ಮತ್ತು ದರ್ಶನಗಳು ಸ್ಪಷ್ಟವಾಗಿವೆ.

ನಮ್ಮ ಸಂಸ್ಕೃತಿ :

- ಸಾಂದರ್ಭಿಕ, ಸಮಕಾಲೀನ, ಸೃಜನಾತ್ಮಕ
- ಪ್ರತಿಯೊಬ್ಬರು ಸೇವಕರು
- ವಾಕ್ಯದ ಆಧಾರಿತ, ಆತ್ಮನ - ನಡೆಸುವಿಕೆ
- ಆತ್ಮಿಕ ಆದ್ದಾಗ್ಯೂ ಪ್ರಾಯೋಗಿಕ
- ಕ್ರಿಯಾಶೀಲ, ಶಕ್ತಿಯುತ ಕ್ರಿಯಾತ್ಮಕ

ನಮ್ಮ ಮೌಲ್ಯಗಳು

- ಪ್ರಾಮಾಣಿಕತೆ
- ಶ್ರೇಷ್ಟತೆ
- ದೇವರು ಮಾಡುತ್ತಿರುವಂತಹವುಗಳ ಮುಂಬದಿಯಲ್ಲಿ ಇರುವುದು
- ಎಲ್ಲರಿಗೂ ಅವಕಾಶಗಳು
- ಐಕ್ಯತೆ ಮತ್ತು ಸಹಕಾರ
- ಸಂಬಂಧಗಳು

ನಮ್ಮ ಉದ್ದೇಶಗಳು:

- ಯೇಸುವಿನ ಹೆಸರಿಗೆ ಮಹಿಮೆ ಸಲ್ಲಿಸುವುದು ಮತ್ತು ಮೇಲಕ್ಕೇರಿಸುವುದು - ಎ.ಪಿ.ಸಿ.ಯು (APC) ಒಬ್ಬ ಮನುಷ್ಯನ, ಒಂದು ಸಂಘ ಸಂಸ್ಥೆಯ, ಅಥವಾ

ಒಂದು ಸಂಘ ಸಂಸ್ಥೆಯಲ್ಲ. ಆದರೆ ಆತನ ಆತ್ಮನಿಂದ ಆತನ ಜನರ ಮೂಲಕವಾದ ಕರ್ತನ ಕೆಲಸವು ಇದಾಗಿದೆ.

- ಪರಿಣಾಮ ಬೀರಲೂ - ಬೆಂಗಳೂರು ನಗರಕ್ಕೆ ಬೆಳಕು ಮತ್ತು ಉಪ್ಪಾಗಿರುವುದು ಭಾರತದೇಶದ ಮತ್ತು ಇತರ ದೇಶಗಳಿಗೆ ಸ್ವರವಾಗಿರುವುದು. ಆತ್ಮಗಳನ್ನು ಗೆಲ್ಲುವುದು ಮತ್ತು ಎಲ್ಲೆಡೆ ಯಾವುದೇ ಸಮಯದಲ್ಲಿ ಶಿಷ್ಯರನ್ನು ಮಾಡುವುದು.
- ಪ್ರತಿಯೊಬ್ಬ ವಿಶ್ವಾಸಿಯನ್ನು ಸಜ್ಜುಗೊಳಿಸುವುದು-ಪ್ರತಿಯೊಬ್ಬ ವಿಶ್ವಾಸಿಯನ್ನು ಪ್ರೌಢತೆಗೆ ತರುವುದು, ಸಜ್ಜುಗೊಳಿಸುವುದು, ಮತ್ತು ಸೇವೆಗಾಗಿ ಅವರನ್ನು ಬಿಡುಗಡೆಗೊಳಿಸುವುದು. ಏ.ಪಿ.ಸಿ (APC) ಯಲ್ಲಿ ಎಲ್ಲಾ ವಿಶ್ವಾಸಿಗಳು ಸೇವಕರೇ.

ನಮ್ಮ ಕನಸುಗಳು

- ಐದು ಬಲವಾದ ಸಭೆಗಳನ್ನು ಎಬ್ಬಿಸುವುದು. ಪ್ರತಿಯೊಂದು ಸಭೆಯಲ್ಲೂ 50 ಸಾವಿರ ಜನರಿಗಿಂತಲೂ ಹೆಚ್ಚಾಗಿರಬೇಕು. ಪ್ರತಿಸಭೆಯು ಎಲ್ಲಾ ಸಮಾಜದ ಮೇಲೆ ಬಲವಾದ ಪರಿಣಾಮವನ್ನುಂಟು ಮಾಡುವ ಶ್ರೇಣಿಗಳನ್ನು ಹೊಂದಿರುವಂತದ್ದು ಆಗಿದೆ.
- ದೇಶದಾದ್ಯಂತ ನಗರಗಳಲ್ಲಿ, ಹಳ್ಳಿಗಳಲ್ಲಿ ಪಟ್ಟಣಗಳಲ್ಲಿ ಅನೇಕ ಸಭೆಗಳನ್ನು ಎಬ್ಬಿಸುವುದು, ಸಾವಿರಾರು ಜನರನ್ನು ದೇವರ ರಾಜ್ಯಕ್ಕೆ ಸೇರಿಸುವುದು ಅವರಿಗೆ ಶಿಷ್ಯತ್ವ ನೀಡುವುದು.
- ಇತರ ದೇಶಗಳಿಗೂ ಹೋಗುವುದು - ಸಭೆಗಳನ್ನು ಎಬ್ಬಿಸುವುದರ ಮೂಲಕವಾಗಿ ಮತ್ತು ಸತ್ಯವಾದ ಶಾಲೆಗಳು ಮತ್ತು ದೇವರ ರಾಜ್ಯಕ್ಕಾಗಿ ಜನರ ಜೀವಿತಗಳಲ್ಲಿ ವ್ಯಾತ್ಯಾಸಗಳನ್ನುಂಟು ಮಾಡುವುದರ ಮೂಲಕವಾಗಿ ಪ್ರಪಂಚದ ವಿವಿಧ ಪ್ರದೇಶಗಳ ಮೇಲೆ ಸುವಾರ್ತೆಯೊಡನೆ ಪ್ರಭಾವ ಬೀರುವುದು.

## ಸ್ಥಳೀಯ ಸಭೆಯಲ್ಲಿ ಕುಟುಂಬದ ಪ್ರಮುಖ ಮೂರು ಅಭ್ಯಾಸಗಳು

ಕುಟುಂಬದಲ್ಲಿ ಆಗಾಗ್ಗೆ ಕೆಲವು ವಿಷಯಗಳು ಅಭ್ಯಾಸಿಸಲ್ಪಡುತ್ತವೆ ಮತ್ತು ಪ್ರಾಮುಖ್ಯವಾಗಿವೆ. ಉದಾಹರಣೆಗೆ, ಒಂದು ಕುಟುಂಬ ಯಾವಾಗಲೂ ಅವರ ಊಟವನ್ನು (ಬೆಳಗ್ಗಿನ ಉಪಹಾರ, ರಾತ್ರಿಯ ಭೋಜನ) ಒಟ್ಟಾಗಿ ಮಾಡಬಹುದು. ಒಂದು ಕುಟುಂಬ ಒಟ್ಟಾಗಿ ಪ್ರತಿ ಭಾನುವಾರ ಸಭೆಗೆ ಹೋಗುವುದನ್ನು ಅಭ್ಯಾಸಿಸುತ್ತಿರಬಹುದು. ಒಂದು ಕುಟುಂಬ ಭಾನುವಾರದ ಮಧ್ಯಾಹ್ನದ ಊಟವನ್ನು

ಎಲ್ಲರಿಗಾಗಿ ಒಂದು ವಿಶೇಷ ಕಾರ್ಯಕ್ರಮವಾಗಿ ಮಾಡಬಹುದು ಬಹುಶಃ ಹೊರಗೆ ಹೋಗಿ ಉತ್ತಮ ರೆಸ್ಟೋರೆಂಟ್‌ಗಳಲ್ಲಿ ಊಟ ಮಾಡಬಹುದು ಇಂತಹ ವಿಷಯಗಳನ್ನು ಕುಟುಂಬವು ನಿಯಮಿತವಾಗಿ ಮಾಡುತ್ತಿರುತ್ತಾರೆ ಮತ್ತು ಇದು ಮಾಡಬೇಕಾಗಿದೆ ಎಂಬುದಾಗಿ ಹೇಳದೆ ಹೋಗಬಹುದು. ಇದು ಪೂರ್ವನಿಯೋಜಿತವಾಗಿ ನಡೆಯುತ್ತದೆ. ಅದೇ ರೀತಿಯಾಗಿ ಸ್ಥಳೀಯ ಸಭೆಯು ಕುಟುಂಬವಾಗಿರುವುದರಿಂದ ಕೆಲವು ಸತತವಾಗಿ ಹಿಂಬಾಲಿಸಬೇಕಾದ ಕೆಲವು ಅಭ್ಯಾಸಗಳಿವೆ ಮತ್ತು ನಮ್ಮ ಕುಟುಂಬ ಜೀವಿತವನ್ನು ಜೀವಿಸುವುದರ ರೀತಿಯಲ್ಲಿ ಮಾಡಲು ತಪ್ಪದಿರುವುದು ಎಂಬುದಾಗಿ ಅವುಗಳನ್ನು ಮಾಡಬೇಕು ಇಲ್ಲಿ ಕೆಲವುಗಳಿವೆ:

## *ಅ) ಸಹೋದರರ ಪ್ರೀತಿಯಲ್ಲಿ ನಡೆಯಿರಿ*

1 ಥೆಸಲೋನಿಕದವರಿಗೆ 4:9,10

**ಸಹೋದರ ಸ್ನೇಹ ವಿಷಯದಲ್ಲಿ ನಿಮಗೆ ಬರೆಯುವುದು ಅವಶ್ಯವಿಲ್ಲ ಒಬ್ಬರನೊಬ್ಬರು ಪ್ರೀತಿಸಬೇಕೆಂಬ ಉಪದೇಶವನ್ನು ನೀವೇ ದೇವರಿಂದ ಹೊಂದಿದವರಾಗಿದ್ದು ಸಮಸ್ತ ಮೆಕೆದೋನ್ಯದಲ್ಲಿರುವ ಸಹೋದರರನ್ನೆಲ್ಲಾ ಪ್ರೀತಿಸುವವರಾಗಿಯೇ ಇದ್ದೀರಿ ಆದರೂ ಸಹೋದರರೇ ನೀವು ಪ್ರೀತಿಯಲ್ಲಿ ಇನ್ನೂ ಹೆಚ್ಚುತ್ತಾ ಬರಬೇಕೆಂದು ನಿಮ್ಮನ್ನು ಪ್ರಬೋಧಿಸುತ್ತೇವೆ.**

ಅಪೊಸ್ತಲನಾದ ಪೌಲನು ಥೆಸಲೋನಿಕ ಸಭೆಯ ವಿಶ್ವಾಸಿಗಳು ಸಹೋದರ ಪ್ರೀತಿಯಲ್ಲಿ ನಡೆಸುವುದನ್ನು ಗುರ್ತಿಸುತ್ತಾನೆ ಮತ್ತು ಅವರು ಅದರಲ್ಲಿ ಅಧಿಕವಾಗಿ ಮತ್ತು ಇನ್ನು ಅಧಿಕವಾಗಿ ಹೆಚ್ಚಳ ಹೊಂದಬೇಕೆಂಬುದಾಗಿ ಪ್ರೋತ್ಸಾಹಿಸುತ್ತಾನೆ ನಾವು ದೇವರ ಕುಟುಂಬಕ್ಕೆ ಸಂಬಂಧಿಸುವವರಾಗಿರುವುದರಿಂದ ನಾವು ನಡೆಯುತ್ತಿರುವಂತಹ ಸಹೋದರ ಪ್ರೀತಿಯಲ್ಲಿ ವಾಸ್ತವವಾಗಿ ಬೆಳೆಯುತ್ತಿರಬೇಕು

ನಾವು ಒಬ್ಬರಿಗೊಬ್ಬರು ಆದ್ಯತೆ ಕೊಡುವುದರಲ್ಲಿ ಮತ್ತು ಒಬ್ಬರಿಗೊಬ್ಬರು ದಯೆಯಿಂದಿರುವ ಸಹೋದರ ಪ್ರೀತಿಯಲ್ಲಿ ನಡೆಯುತ್ತೇವೆ. (ರೋಮಾಪುರದವರಿಗೆ 12:9,10) ನಂಬಿಕೆಯಲ್ಲಿ ಮನೆಯಂತಿರುವವರಿಗೆ ಒಳ್ಳೇದನ್ನು ಮಾಡುತ್ತಾ ಸಹೋದರ ಪ್ರೀತಿಯಲ್ಲಿ ನಾವು ನಡೆಯುತ್ತೇವೆ (ಗಲಾತ್ಯದವರಿಗೆ 6:10) ದುರ್ಬಲರಾದವರಿಗೆ ಸಹಾಯ ಮಾಡುವುದರಿಂದ ಮತ್ತು ಬಿದ್ದು ಹೋದವರನ್ನು ಪುನಃ ಸ್ಥಾಪಿಸುವುದರಿಂದ ಸಹೋದರ ಪ್ರೀತಿಯಲ್ಲಿ ನಾವು ನಡೆಯುತ್ತೇವೆ. (ರೋಮಾಪುರದವರಿಗೆ 15:1,2; ಗಲಾತ್ಯದವರಿಗೆ 6:1,2).

## ಆ) ಆತ್ಮನ ಐಕ್ಯತೆ ಮತ್ತು ಅನ್ಯೋನ್ಯತೆಯನ್ನು ಇಟ್ಟುಕೊಳ್ಳಿರಿ

ಎಫೆಸದವರಿಗೆ 4:3

**ಪ್ರೀತಿಯಿಂದ ಒಬ್ಬರನ್ನೊಬ್ಬರು ಸಹಿಸಿಕೊಳ್ಳಿರಿ ಸಮಾಧಾನವೆಂಬ ಬಂಧನದಿಂದ ಕಟ್ಟಲ್ಪಟ್ಟವರಾಗಿದ್ದು ಪವಿತ್ರಾತ್ಮನಿಂದುಂಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವದಕ್ಕೆ ಆಸಕ್ತರಾಗಿರಿ.**

''ಪ್ರಯತ್ನಿಸುತ್ತಿದೆ'' ಸಹಿಸಿಕೊಳ್ಳಿರಿ ಗ್ರೀಕನಲ್ಲಿ ''ಸ್ಪೌಡಜೋ'' (*spoudazo*) = ವೇಗವನ್ನು ಬಳಸುವುದು, ಅದು ಪ್ರಯತ್ನ ಮಾಡುವುದು, ತಡವಿಲ್ಲದೆ ಮಾಡುವವರಾಗಿರುವ, ಅಥವಾ ಶ್ರದ್ಧೆಯಿಂದ : - (ಶ್ರದ್ಧೆಯಿಂದ ಮಾಡು (ಕೊಡು), ಶ್ರದ್ಧೆಯಿಂದಿರು (ಮುಂದಿರುವ), ಪ್ರಯತ್ನಿಸು ದುಡಿಮೆ, ಅಧ್ಯಯನ.

ಪವಿತ್ರಾತ್ಮನು ನಮ್ಮ ಸಂಬಂಧಗಳನ್ನು ಬಲಗೊಳಿಸುವದರಿಂದ, (ನಮ್ಮ ಮಧ್ಯದಲ್ಲಿ ಶಾಂತಿಯನ್ನು (ಸಾಮರಸ್ಯ, ಶಾಂತತೆ, ವಿಶ್ರಾಂತಿ) ಉತ್ತೇಜಿಸುವ ಕಾರ್ಯಗಳನ್ನು ಮಾಡುವುದರಿಂದ ನಮ್ಮ ಒಟ್ಟಾಗಿ ಸೇರಿಸಿದ (ಬಂಧ) ಕಾರ್ಯಗಳನ್ನು ತರುವುದರಿಂದ ಐಕ್ಯತೆಯನ್ನು ಕಾಯ್ದುಕೊಳ್ಳಲೂ (ಐಕ್ಯತೆ ಒಟ್ಟಿಗೆ ಇರುವುದು) ಎಲ್ಲಾ ಪ್ರಯತ್ನಗಳನ್ನು ಮಾಡಬೇಕು.

ಶಾಂತಿಯ ಬಂಧದಲ್ಲಿ ಆತ್ಮನ ಐಕ್ಯತೆಯನ್ನು ಇಟ್ಟುಕೊಳ್ಳುವುದನ್ನು ನಾವು ಅಭ್ಯಸಿಸುತ್ತೇವೆ.

ವಿಭಾಗಗಳು ಮತ್ತು ಜಗಳಗಳನ್ನು ತರುವಂತಹ ವಿಷಯಗಳನ್ನು ನಾವು ಕಡಿತಗೊಳಿಸಿದ್ದೇವೆ ಯಾಕೆಂದರೆ ವಿಭಾಗಗಳು ನಮ್ಮನ್ನು ದುರ್ಬಲಗೊಳಿಸುತ್ತದೆ. ''ಒಂದು ಮನೆಯಲ್ಲಿ ಭೇದ ಹುಟ್ಟಿದರೆ ಆ ಮನೆಯು ನಿಲ್ಲಲಾರದು'' (ಮಾರ್ಕ 3:25)

ದೂರುವ, ಹರಟೆ ಮಾತಾಡುವ, ಒಬ್ಬರಿಗೊಬ್ಬರ ಮೇಲೆ ಗೊಣಗುವ ಇವುಗಳನ್ನು ಕತ್ತರಿಸಬೇಕು. ''ಸಹೋದರರೇ ನೀವು ಒಬ್ಬರಮೇಲೊಬ್ಬರು ಗುಣುಗುಟ್ಟಬೇಡಿರಿ ನ್ಯಾಯ ವಿಚಾರಣೆಗೆ ಗುರಿಯಾದೀರಿ ಅಗೋ ನ್ಯಾಯಾದಿಪತಿಯು ಬಾಗಲಿನ ಹತ್ತಿರದಲ್ಲೇ ನಿಂತಿದ್ದಾನೆ'' (ಯಾಕೋಬನು 5:9)

ನಾವು ಸ್ವಾರ್ಥದ ಹೆಬ್ಬಯಕೆ ಮತ್ತು ಸ್ವ-ಪ್ರಚಾರಕ್ಕಾಗಿ ಯಾವುದನ್ನು ಮಾಡುವುದಿಲ್ಲ ''ಪಕ್ಷಪಾತದಿಂದಾಗಲಿ ಒಣಹೆಮ್ಮೆಯಿಂದಾಗಲಿ ಯಾವದನ್ನೂ ಮಾಡದೆ

ಪ್ರತಿಯೊಬ್ಬನು ದೀನಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಟರೆಂದು ಎಣಿಸಲಿ'' (ಫಿಲಿಪ್ಪಿಯವರಿಗೆ 2:3)

ಒಬ್ಬ ವ್ಯಕ್ತಿಯು ತನ್ನ ವೈಯಕ್ತಿಕವಾದ ಮತ್ತು ಖಾಸಗಿ ಮಾಹಿತಿಗಳನ್ನು ಹಂಚಿಕೊಳ್ಳುವಾಗ, ಇತರರ ಜೊತೆಯಲ್ಲಿ ಅದರ ಕುರಿತು ನಾವು ಮಾತನಾಡುವುದಿಲ್ಲ '' ದೋಷವನ್ನು ಮುಚ್ಚಿಡುವವನು ಪ್ರೇಮವನ್ನು ಸೆಳೆಯುವನು ಎತ್ತಿ ಆಡುತ್ತಿರುವವನು ಸ್ನೇಹವನ್ನು ಕಳೆದುಕೊಳ್ಳುವನು'' (ಜ್ಞಾನೋಕ್ತಿಗಳು 17:9).

ಪ್ರತಿಯೊಬ್ಬರು ತಮ್ಮದೆ ಆದಂತಹ ಸ್ವಂತ ಅಭಿಪ್ರಾಯಗಳನ್ನು ಹೊಂದಿರಬಹುದು ಆದರೆ ತೀರ್ಮಾನಗಳು ಮಾಡಲ್ಪಟ್ಟಾಗ ನಾವೆಲ್ಲರೂ ಒಟ್ಟಾಗಿ ''ಐಕ್ಯಮತ್ಯವುಳ್ಳವರಾಗಿದ್ದು, ನಿಮ್ಮೆಲ್ಲರಲ್ಲಿ ಒಂದೇ ಪ್ರೀತಿಯಿರಲಿ, ಅನ್ಯೋನ್ಯಭಾವವುಳ್ಳವರೂ ಒಂದೇ ಗುರಿಯಿಟ್ಟುಕೊಂಡವರೂ ಆಗಿರ್ರಿ'' (ಫಿಲಿಪ್ಪಿಯವರಿಗೆ 2:2) ನಾವೆಲ್ಲರೂ ಒಟ್ಟಾಗಿ ಈ ರೀತಿಯಾಗಿ ಕಂಡು ಬರುವುದನ್ನು ಕಲಿಯಬೇಕು.

## ಇ) ಪ್ರತಿಯೊಬ್ಬರು ಕೆಲಸ ಮಾಡುತ್ತಾರೆ

ವಿಶಿಷ್ಟವಾಗಿ ಒಂದು ಕುಟುಂಬದಲ್ಲಿ, ಚಿಕ್ಕ ಮಕ್ಕಳನ್ನು ಹೊರತುಪಡಿಸಿ ಮನೆಯನ್ನು ನಡೆಸಲು ಪ್ರತಿಯೊಬ್ಬರು ಕೆಲವು ಜವಬ್ದಾರಿಗಳನ್ನು ಹೊಂದಿದ್ದೇವೆ. ಅದೇ ರೀತಿಯಾಗಿ ದೇವರ ಮನೆಯಲ್ಲಿ, ನಾವೆಲ್ಲರೂ, ಸ್ಥಳೀಯ ಸಭೆಯ ಕುಟುಂಬದ ಭಾಗವಾಗಿ, ನಾವು ಮಾಡಬೇಕಾದವುಗಳಿವೆ. ದೇವರ ಮನೆಯ ಕಾರ್ಯ ನಿರ್ವಹಣೆಯಲ್ಲಿ ನಮ್ಮ ಭಾಗದವುಗಳನ್ನು ಮಾಡಬೆಕು, ಮತ್ತು ನಾವು ಎದ್ದೇಳಬೇಕು.

ದೇವರ ಮನೆಯಲ್ಲಿ ಮಾಡಬೇಕಾದ ಕೆಲಸಗಳಿರುತ್ತವೆ ಪ್ರತಿಯೊಬ್ಬರು ಕೆಲವು ಕೆಲಸಗಳನ್ನು ಮಾಡಲು ನಿಯೋಜಿಸಲಾಗಿದೆ. (ಮಾರ್ಕ 13:34).

ನಾವೆಲ್ಲರೂ ಸೇವೆ ಮಾಡಿಸಿಕೊಳ್ಳುವುದನ್ನು ನೋಡುತ್ತಿರುವುದಿಲ್ಲ ಆದರೆ ಸೇವೆ ಮಾಡುತ್ತೇವೆ. ''ಹಾಗೆಯೇ ಮನುಷ್ಯಕುಮಾರನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ, ಸೇವೆ ಮಾಡುವದಕ್ಕೂ'' (ಮತ್ತಾಯ 20:28).

ಗಲಾತ್ಯದವರಿಗೆ 6:2-5

**ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಲಿ ಹೀಗೆ ಕ್ರಿಸ್ತನ ನಿಯಮವನ್ನು ನೆರವೇರಿಸಿರಿ. ಯಾವನಾದರೂ ಅಲ್ಪನಾಗಿದ್ದು ತಾನು ದೊಡ್ಡವನೆಂದು ಭಾವಿಸಿಕೊಂಡರೆ ತನ್ನನ್ನು ತಾನೇ ಮೋಸ ಗೊಳಿಸಿದವನಾಗಿದ್ದಾನೆ. ಪ್ರತಿಯೊಬ್ಬನು ತಾನು ಮಾಡಿದ ಕೆಲಸವನ್ನು ಪರಿಶೋಧಿಸಲಿ. ಆಗ ಅವನು ತನ್ನ ನಿಮಿತ್ತದಿಂದಾಗುವುದಿಲ್ಲ ಯಾಕೆಂದರೆ ಪ್ರತಿಯೊಬ್ಬನು ಸ್ವಂತ ಹೊರೆಯನ್ನು ಹೊತ್ತುಕೊಳ್ಳಬೇಕು.**

ಒಬ್ಬರಿಗೊಬ್ಬರು ಸಹಾಯ ಮಾಡುವಂತಹ ಕೆಲವು ಕ್ಷೇತ್ರಗಳಿವೆ ಮತ್ತು ವೈಯಕ್ತಿಕವಾಗಿ ನಾವು ಜವಾಬ್ದಾರರಾಗಿರುವಂತಹ ಕೆಲವು ಕ್ಷೇತ್ರಗಳಿವೆ. ನಾವು ಒಬ್ಬರಿಗೊಬ್ಬರು ನಮ್ಮನ್ನು ಕೆಳಗೆ ತೂಗುವಂತೆ ಮಾಡುವ ವಿಷಯಗಳನ್ನು ಹೊತ್ತುಕೊಳ್ಳಬೇಕು ಇದು ಜೀವಿತದಲ್ಲಿ ಸವಾಲು, ಹೋರಾಟಗಳು, ಕಷ್ಟದ ಪರಿಸ್ಥಿತಿಗಳಾಗಿರಬಹುದು ಮತ್ತು ಇಂತಹ ಸಂಗತಿಗಳನ್ನು ಯಾರಾದರು ಸಮಯದಿಂದ ಸಮಯಕ್ಕೆ ಎದುರಿಸಬಹುದು. ಇಂತಹ ಸಂಗತಿಗಳಲ್ಲಿ ನಾವು ಒಬ್ಬರಿಗೊಬ್ಬರು ಸಹಾಯ ಮಾಡಬೇಕು.

ಆದಾಗ್ಯೂ ಮತ್ತೊಂದೆಡೆ ನಾವು ಮಾಡಬೇಕಾದ್ದಂತಹ ಕೆಲಸ, ಕಾರ್ಯಗಳು, ಉದ್ಯೋಗಕ್ಕೆ ಬರುವಾಗ ನಮ್ಮಲ್ಲಿ ಪ್ರತಿಯೊಬ್ಬರು ತಮ್ಮ ಸ್ವಂತ ಕಾರ್ಯ ಮಾಡಬೇಕು ಮತ್ತು ಸ್ವಂತ ಜವಾಬ್ದಾರಿಗಳನ್ನು ವಿಸರ್ಜಿಸಬೇಕೆಂಬುದಾಗಿ ನಾವು ಅರ್ಥಮಾಡಿಕೊಳ್ಳುತ್ತೇವೆ. ನಮ್ಮ ಸ್ವಂತ ಕರ್ತವ್ಯಗಳನ್ನು ನೆರವೇರಿಸುವಂತಹ, ನಮ್ಮ ಸ್ವಂತ ''ಹೊರೆ'' ತಾಳಿಕೊಳ್ಳಬೇಕು.

## ಸ್ಥಳೀಯ ಸಭೆಯ ಕುಟುಂಬದಲ್ಲಿ, ತಂದೆಯರು, ತಾಯಂದಿರು, ಮಗನು ಮತ್ತು ಮಗಳು

ಕುಟುಂಬದಲ್ಲಿ ಸಾಮಾನ್ಯವಾಗಿ, ಜನರುಗಳು ವಿಭಿನ್ನವಾದ ಬೆಳವಣಿಗೆ ಮತ್ತು ಪ್ರೌಢತೆಯ ಹಂತಗಳಿರುತ್ತವೆ. - ತಂದೆಯರು/ತಾಯಂದಿರು, ಯುವಕರು/ ಯುವತಿಯರು ಮತ್ತು ಚಿಕ್ಕ ಮಕ್ಕಳು.

ಅಪೊಸ್ತಲನಾದ ಯೋಹಾನನು, ತನ್ನ ಪ್ರಥಮ ಪತ್ರಿಕೆಯಲ್ಲಿ ಸಭೆಗಳ ಗುಂಪು ಅಥವಾ ಸಭೆ, ಜನರ ಗುಂಪಿನ ಬಗ್ಗೆ ಉದ್ದೇಶಿಸಿದ್ದರ ಬಗ್ಗೆ ಏನು ತಿಳಿದಿಲ್ಲದಿದ್ದಾಗ್ಯೂ ಮೂರು ರೀತಿಯ ಜನರನ್ನು ಉದ್ದೇಶಿಸಿದ್ದನ್ನು ನಾವು ನೋಡುತ್ತೇವೆ ಅವನು ''ಚಿಕ್ಕ ಮಕ್ಕಳು'' ''ಯೌವ್ವನಸ್ಥರು'' ಮತ್ತು ''ತಂದೆಯರು'' ಎಂಬುದಾಗಿ ವ್ಯಾಖ್ಯಾನಿಸಿದ್ದಾನೆ.

ಚಿಕ್ಕ ಮಕ್ಕಳು (1 ಯೋಹಾನನು 2:1,12,13,18,28; 3:7,18; 4:4; 5:21)

ಯೌವ್ವನಸ್ಥರು (1 ಯೋಹಾನನು 2:13,14)

ತಂದೆಯರು (1 ಯೋಹಾನನು 2:13,14)

ಒಂದು ಸ್ಥಳೀಯ ಸಭೆಯಲ್ಲಿ, ಆತ್ಮಿಕ ಬೆಳವಣಿಗೆ ಮತ್ತು ಪರಿಪಕ್ವತೆಯ ವಿಭಿನ್ನ ಹಂತಗಳಲ್ಲಿ ಜನರು ಇರುವುದನ್ನು ನಾವು ಹೊಂದಿದ್ದೇವೆ. ನಾವು ಹೇಗೆ ಸಂಬಂಧಿಸುತೇವೆ, ಏನನ್ನು ಎದುರುನೋಡುತ್ತೇವೆ, ಮತ್ತು ಜನರಿಗೆ ನಾವು ಏನನ್ನು ನಿಯೋಜಿಸುತ್ತೇವೆ. ಎಂಬುದು ಅವರ ಆತ್ಮಿಕ ಪ್ರೌಢತೆಯ ಮಟ್ಟದ ಆಧಾರದ ಮೇಲೆ ಭಿನ್ನವಾಗಿರುತ್ತದೆ. ಉದಾಹರಣೆಗೆ, ನೈಸರ್ಗಿಕವಾಗಿ ಚಿಕ್ಕ ಮಕ್ಕಳಿಗೆ ನಾವುಗಳು ಹೆಚ್ಚು ಸಹಿಷ್ಣುರಾಗಿದ್ದೇವೆ, ನಾವು ಅವರ ತಪ್ಪುಗಳನ್ನು ಕಡೆಗಣಿಸುತ್ತೇವೆ. ಅವರ ಅಗತ್ಯಗಳ ಬಗ್ಗೆ ಕಾಳಜಿ ತೆಗೆದುಕೊಳ್ಳಲೂ ಹೆಚ್ಚು ಗಮನ ಕೊಡುತ್ತೇವೆ. ಜನರು ಬೆಳೆಯುವಾಗ, ಅವರು ಸ್ವಂತವಾಗಿ ಹೆಚ್ಚಾಗಿ ಕಾರ್ಯಗಳನ್ನು ಮಾಡಬೇಕೆಂಬುದಾಗಿ ನಾವು ಅಪೇಕ್ಷಿಸುತ್ತೇವೆ, ಅಧಿಕವಾದ ಕಾಳಜಿಯ ಅಗತ್ಯವಿಲ್ಲ ಮತ್ತು ಕೆಲವು ಜವಬ್ದಾರಿಗಳನ್ನು ಹೊತ್ತುಕೊಳ್ಳಲು ಸಹಾಯ ಮಾಡುತ್ತೇವೆ.

ಗಲಾತ್ಯದವರಿಗೆ 4:1,2
**ಆದರೆ ನಾನು ಹೇಳುವುದೇನೆಂದರೆ ಬಾಧ್ಯನು ತಾನು ಆಸ್ತಿಗೆಲ್ಲಾ ಧನಿಯಾಗಿದ್ದರೂ ಬಾಲಕನಾಗಿರುವ ತನಕ ದಾಸನಂತೆ ಇರುವನೇ ಹೊರತು ಬೇರೆಯಿಲ್ಲ ತಂದೆಯು ನೇಮಿಸಿದ ದಿನದವರೆಗೂ ಪಾಲಕರ ಮತ್ತು ಮನೆವಾರ್ತೆಯವರ ಕೈಕೆಳಗಿರುವನು.**

ಒಬ್ಬರು ಬಾಲಕನಾಗಿರುವವರೆಗೂ, ಒಬ್ಬನ ಸವಲತ್ತುಗಳು ಮತ್ತು ಜವಾಬ್ದಾರಿಗಳು, ಪ್ರಬುದ್ಧವಾದ ಮಗ/ಮಗಳಿಂದ ವ್ಯತ್ಯಾಸಕರವಾಗಿರುತ್ತದೆ. ಮಕ್ಕಳುಗಳು, ಆತ್ಮಿಕ ನಾಯಕರುಗಳ ನಾಯಕತ್ವ ಮತ್ತು ಬೋಧಕರ ಕೆಳಗೆ ಅವರುಗಳು ಪ್ರಬುದ್ಧ ಮಗ ಮತ್ತು ಮಗಳುಗಳಾಗಿ ಬೆಳೆಯುವವರೆಗೂ ಇರುತ್ತಾರೆ.

ನಾವು ಪ್ರತಿಯೊಬ್ಬರನ್ನು ಪೋಷಿಸಬೇಕು, ಆದ್ದರಿಂದ ದೇವರ ಮನೆಯಲ್ಲಿ ತಂದೆಯರು ಮತ್ತು ತಾಯಂದಿರುಗಳಾಗಿ ಕಂಡುಬರಲು ಬೆಳೆಯುತ್ತಾರೆ

## ಒಬ್ಬ ಮಗನ ಮನಸ್ಥಿತಿ ಎದುರಾಗಿ ಆಳಿನ ಮನಸ್ಥಿತಿ

ಜನರುಗಳು ತಮ್ಮನ್ನು ಹೇಗೆ ಗ್ರಹಿಸುತ್ತಾರೆ ಎಂಬುದನ್ನು ಅವಲಂಬಿಸಿ, ದೇವರ ಮನೆ, ಸ್ಥಳೀಯ ಸಭೆಯೊಂದಿಗೆ ಜನರು ಹೇಗೆ ಸಂಬಂಧಿಸುತ್ತಾರೆ ಎಂಬುದರಲ್ಲಿ ದೊಡ್ಡ ವ್ಯತ್ಯಾಸವಿದೆ. ತಾವುಗಳು ದೇವರ ಮನೆಗೆ ಸಂಬಂಧಿಸಿದವರು, ಒಂದು ಸ್ಥಳೀಯ ಸಭೆಯ ಭಾಗವಾಗಿದ್ದೇವೆ. ಎಂಬುದಾಗಿ ತಮ್ಮನ್ನು ನೋಡಿಕೊಳ್ಳುವಂತಹವರನ್ನು ನಾವು ಒಬ್ಬ ಮಗನ ಮನಸ್ಥಿತಿ ಹೊಂದಿದವರೆಂಬುದಾಗಿ ಕರೆಯಬಹುದು. ಸ್ಥಳೀಯ ಸಭೆಯೊಂದಿಗೆ ಅಂತಹ ಸಂಬಂಧ ಹೊಂದಿಲ್ಲದವರನ್ನು ಒಬ್ಬ ಆಳಿನ ಮನಸ್ಥಿತಿ ಹೊಂದಿರುವವರೆಂದು ಸಾಮಾನ್ಯವಾಗಿ ಕರೆಯಬಹುದು.

ಯೋಹಾನ 8:35

**ದಾಸನು ಮನೆಯಲ್ಲಿ ಶಾಶ್ವತವಾಗಿ ಇರುವುದಿಲ್ಲ ಮಗನು ಶಾಶ್ವತವಾಗಿ ಇರುವನು.**

ಒಬ್ಬ ದಾಸನು ಕೂಲಿಗಾಗಿ ಮನೆಯಲ್ಲಿ ಕೆಲಸ ಮಾಡುತ್ತಾನೆ ಹಾಗೆಯೇ, ಒಬ್ಬ ಮನಗು, ಮನೆಗೆ ಸೇರಿದವನೆಂದು ಕೆಲಸ ಮಾಡುತ್ತಾನೆ ಒಬ್ಬ ದಾಸನ ಬದ್ಧತೆಯು ಬದಲಾಗುತ್ತದೆ ಮತ್ತು ಒಂದು ಮನೆಯನ್ನು ಬಿಟ್ಟು ಇನ್ನೊಂದು ಮನೆಯ ಕೆಲಸ ಮಾಡುತ್ತಾನೆ. ಮಗನು, ಅವನ ಬದ್ಧತೆಯಲ್ಲಿ ಸ್ಥಿರವಾಗಿರುತ್ತಾನೆ ಅವನು ಎಲ್ಲಿಗೆ ಸಂಬಂಧಪಟ್ಟವನೆಂಬುದನ್ನು ತಿಳಿದಿರುತ್ತಾನೆ.

ಒಬ್ಬ ದಾಸನು ಅವರ ಕೆಲಸಕ್ಕೆ ಕೂಲಿಯನ್ನು ಪಡೆಯುತ್ತಾರೆ ಆದರೆ ಒಬ್ಬ ಮಗನು ಬಾಧ್ಯತೆಯನ್ನು ಹೊಂದುತ್ತಾನೆ. ಯಾಕೆಂದರೆ ಅವನು ಅದಕ್ಕೆ ಸಂಬಂಧಪಟ್ಟವನಾಗಿರುತ್ತಾನೆ.

ಒಬ್ಬ ಮಗನ ಮನಸ್ಥಿತಿ ಹೊಂದುವಂತೆ ಜನರುಗಳಿಗೆ ನಾವು ಸಹಾಯ ಮಾಡಬೇಕು, ಅವರು ಸ್ಥಳೀಯ ಸಭೆಯ ಕುಟುಂಬಕ್ಕೆ ಸೇರಿದವರೆಂಬ ಪ್ರಜ್ಞೆಯನ್ನು ಹೊಂದಿರುವುದು ಅವಶ್ಯಕ, ದೇವರ ಮನೆಯ ಅವಿಭಾಜ್ಯ ಅಂಗವಾಗಿರುವುದನ್ನು ಅವರು ಅರ್ಥ ಮಾಡಿಕೊಂಡಿರುವುದರ ನಿಮಿತ್ತದಿಂದ ದೇವರು ಮಾಡುತ್ತಿರುವವುಗಳ ಒಂದು ಭಾಗವಾಗಿ ಕಂಡುಬರುವುದು ಅವಶ್ಯಕವಾಗಿದೆ.

ಸಭಾಪಾಲಕರು/ನಾಯಕರುಗಳು ಜನರನ್ನು ಮಗನು ಮತ್ತು ಮಗಳು ಎಂಬುದಾಗಿ ಸತ್ಕರಿಸಿದರೆ, ಅವರು ಅದರೊಳಗೆ ಬೆಳೆಯುತ್ತಾರೆ. ಅವರು ಒಬ್ಬ ಮಗನ ಮನೋಭಾವ

ಹೊಂದಿರುತ್ತಾರೆ. ಒಂದು ವೇಳೆ ಅವರನ್ನು ದಾಸರುಗಳಂತೆ ಸತ್ಕರಿಸಿದರೆ ಅವರು ಒಬ್ಬ ದಾಸನ ಮನೋಭಾವದೊಡನೆ ಬೆಳೆಯುತ್ತಾರೆ ಸಭಾಪಾಲಕರು/ನಾಯಕರುಗಳಾಗಿ, ದೇವಜನರುಗಳ ಮೇಲೆ ಪ್ರಭುಗಳು/ಮೇಲಾಧಿಕಾರಿಗಳಾಗಿರುವುದರ ಬದಲಾಗಿ ದೇವರ ಮನೆಯಲ್ಲಿ ನಿಜವಾದ ತಂದೆಯರು/ತಾಯಂದಿರುಗಳಾಗಿರುವುದನ್ನು ಸ್ವತಃ ನಾವುಗಳು ಕಲಿಯುವಂತದ್ದು ಬಹಳ ಪ್ರಾಮುಖ್ಯವಾಗಿದೆ. ತಂದೆಯರು ಮತ್ತು ತಾಯಂದಿರು, ಮಗನು ಮತ್ತು ಮಗಳುಗಳನ್ನು ಹೊಂದಿದ್ದಾರೆ, ನಾವು ಏನಾಗಿದ್ದೇವೆ ಎಂಬುದು ದೇವರ ಮನೆಯಲ್ಲಿ ಯಾವರೀತಿಯ ಜನರನ್ನು ಪೋಷಿಸುತ್ತೇವೆ ಎಂಬುದನ್ನು ನಿಶ್ಚಯಿಸುತ್ತದೆ.

## ಮನೆಯ ಮಗನು ಮತ್ತು ಮಗಳ ಗುಣಲಕ್ಷಣಗಳು

ಮನೆಯ ಮಗನ ಮತ್ತು ಮಗಳ ಕೆಲವು ಗುಣಲಕ್ಷಣಗಳಿವೆ.

### *1. ನಂಬಿಗಸ್ತಿಕೆಯನ್ನು ತೋರಿಸುತ್ತಾರೆ.*

ಅವರು ಕುಟುಂಬಕ್ಕೆ ನಂಬಿಗಸ್ತರಾಗಿರುತ್ತಾರೆ. ಅವರಿಗೆ ಕೊಡಲ್ಪಟ್ಟ ಮಾರ್ಗದರ್ಶನ ಮತ್ತು ದರ್ಶನಕ್ಕೆ ಜೋಡಿಸಿಕೊಂಡಂತೆ ಇರುತ್ತಾರೆ.

### *2. ಮಗನು ಮತ್ತು ಮಗಳಂತೆ ಸೇವೆ ಮಾಡುತ್ತಾರೆ.*

ಮನೆಯ ನಾಯಕತ್ವದ ಮಾರ್ಗದರ್ಶನ ಮತ್ತು ದರ್ಶನಕ್ಕೆ ಅವರು ಸಮಾನ ಮನೋಭಾವ ಹೊಂದಿರುತ್ತಾರೆ.

ಅವರು ಪ್ರೀತಿಯಿಂದ ಸೇವೆ ಮಾಡುತ್ತಾರೆ ಮತ್ತು ನಿರ್ಬಂಧದಿಂದ ಮಾಡುವುದಿಲ್ಲ.

ಅವರು, ಸ್ವಂತ ವಿಚಾರಗಳು ಮತ್ತು ಆಸಕ್ತಿಗಳ ಬಗ್ಗೆ ಮಾತಾಡುವುದರ ಬದಲಾಗಿ ನಾಯಕರುಗಳ ಹೃದಯವನ್ನು ಪ್ರತಿಬಿಂಬಿಸುತ್ತಾರೆ ಮತ್ತು ಅರ್ಥ ಮಾಡಿಕೊಳ್ಳುತ್ತಾರೆ.

ಜನರು ಅವರನ್ನು ಅನುಸರಿಸುವಂತೆ ಸೆಳೆಯುವುದರ ಬದಲಾಗಿ ದೇವರ ಮನೆ, ಕುಟುಂಬಕ್ಕೆ ಜನರನ್ನು ಸೆಳೆಯುತ್ತಾರೆ ಮತ್ತು ಆಹ್ವಾನಿಸುತ್ತಾರೆ.

ಫಿಲಿಪ್ಪಿಯವರಿಗೆ 2:19-22

**ಆದರೆ ಕರ್ತನಾದ ಯೇಸುವಿನ ಚಿತ್ತವಾದರೆ ನಾವು ತಿಮೊಥೆಯನನ್ನು ಬೇಗನೆ ನಿಮ್ಮ ಬಳಿಗೆ ಕಳುಹಿಸಬೇಕೆಂದು ನಿರೀಕ್ಷಿಸುತ್ತೇನೆ ಅವನ ಮುಖಾಂತರ ನಿಮ್ಮ ಸಂಗತಿಗಳನ್ನು ತಿಳಿದು ನಾನೂ**

**ಧೈರ್ಯತಂದುಕೊಂಡೇನು ಅವನ ಹಾಗೆ ನಿಮ್ಮ ಕಾರ್ಯಗಳನ್ನು ಕುರಿತು ಯಥಾರ್ಥವಾಗಿ ಚಿಂತಿಸುವವರು ನನ್ನ ಬಳಿಯಲ್ಲಿ ಬೇರೆ ಯಾರೂ ಇಲ್ಲ ಎಲ್ಲರೂ ಸ್ವಕಾರ್ಯಗಳ ಮೇಲೆ ಮನಸ್ಸಿಡುತ್ತಾರೆಯೇ ಹೊರತು ಯೇಸು ಕ್ರಿಸ್ತನ ಕಾರ್ಯಗಳ ಮೇಲೆ ಮನಸ್ಸಿಡುವದಿಲ್ಲ. ತಿಮೊಥೆಯನ ಗುಣವನ್ನು ನೀವು ನೋಡಿ ತಿಳಿದುಕೊಂಡಿದ್ದೀರಿ; ಮಗನು ತಂದೆಗೆ ಹೇಗೋ ಹಾಗೆಯೇ ಅವನು ಜೊತೆಯಲ್ಲಿ ಸುವಾರ್ತಾ ಪ್ರಚಾರಕ್ಕಾಗಿ ಕಷ್ಟಪಟ್ಟು ಕೆಲಸನಡಿಸಿದನೆಂಬದು ನಿಮಗೆ ಗೊತ್ತುಂಟು.**

''ಸಮಾನ ಮನಸ್ಸಿನ'' ''ಸಮಾನ ರೂಪದ ಆತ್ಮ'' (ಸ್ಟ್ರಾಂಗ್ ಡಿಕ್ಸನರಿ)

ತಿಮೊಥೆಯನು ಫಿಲಿಪ್ಪಿಯಲ್ಲಿ ಸಭೆಯನ್ನು ಎಬ್ಬಿಸಲು ಪೌಲನೊಟ್ಟಿಗೆ ಕೆಲಸ ಮಾಡಿದನು. ಅವನು ಪೌಲನೊಡನೆ ಅಧಿಕವಾದ ನಂಬಿಗಸ್ತಿಕೆಯಲ್ಲಿ ಕೆಲಸ ಮಾಡಿದನು ಆದ್ದರಿಂದ ಪೌಲನು ''ಸಮಾನ ಮನಸ್ಸಿನ'' ಮತ್ತು ''ತಂದೆಯೊಂದಿಗಿನ ಮಗನ ಹಾಗೆಯೇ''ತಿಮೊಥೆಯನು, ಆಮೇಲೆ ಅವನ ಸ್ವಂತ ಸೇವೆಯನ್ನು ಪ್ರಾರಂಭಿಸಿದನು, ಎಫೆಸ ಸಭೆಯಲ್ಲಿ ಸಭಾಪಾಲಕನಾಗಿ ನೇಮಕಗೊಂಡನು.

## *3. ಒಂದು ಉತ್ತಮ ಆತ್ಮದೊಡನೆ ತಿದ್ದುಪಡಿ ಸ್ವೀಕರಿಸುತ್ತಾರೆ*

ಪ್ರತಿಯೊಬ್ಬ ಒಳ್ಳೆಯ ತಂದೆ ಪ್ರೀತಿಯಿಂದ ತನ್ನ ಮಕ್ಕಳನ್ನು ತಿದ್ದುಪಡಿಸುತ್ತಾರೆ (ಇಬ್ರಿಯರಿಗೆ 12:7-13). ಮಗನು ಮತ್ತು ಮಗಳು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಪೋಷಣೆಯ ಪ್ರಕ್ರಿಯೆಯ ಭಾಗವಾಗಿ ತಿದ್ದುಪಡಿಯನ್ನು ಪಡೆದುಕೊಳ್ಳುತ್ತಾರೆ. ಮನೆಯ ಒಬ್ಬ ಮಗ ಅಥವಾ ಮಗಳು, ಮನೆಯಿಂದ ಯಾವುದೇ ತಪ್ಪೆಸೆಗದೆ ತಿದ್ದುಪಡಿಯನ್ನು ಪಡೆದುಕೊಳ್ಳುತ್ತಾರೆ.

## *4. ಮನೆಯ ತಂದೆಯರು ಮತ್ತು ತಾಯಂದಿರನ್ನು ಗೌರವಿಸಬೇಕು*

ದೇವರ ಮನೆಯಲ್ಲಿ ನಾಯಕತ್ವದಲ್ಲಿರುವಂತಹ ತಂದೆಯರು ಮತ್ತು ತಾಯಂದಿರನ್ನು ಮಗನು ಮತ್ತು ಮಗಳು ಗೌರವಿಸಬೇಕು.

ಆದಿಕಾಂಡ 9:18-27 ರಲ್ಲಿ ನೋಹನು ಮತ್ತು ಅವನ ಮಕ್ಕಳುಗಳ ಜೀವಿತದಲ್ಲಿ ಆಸಕ್ತಿಕರ ಘಟನೆಯನ್ನು ನಾವು ನೋಡುತ್ತೇವೆ. ಮೊದಲು ಮದ್ಯವನ್ನು ಕಂಡುಹಿಡಿದ ವ್ಯಕ್ತಿಯು ನೋಹನು ಎಂಬುದಾಗಿ ನಾವು ಹೇಳಬಹುದು. ಅತಿಯಾದ ಮದ್ಯವನ್ನು ಕುಡಿಯುವುದರಿಂದ ನೋಹನು ನಿಜವಾದ ತಪ್ಪು ಮಾಡಿದನು ಅವನು ಮದ್ಯವನ್ನು ಕುಡಿದನು ಅಥವಾ ಈ ಘಟನೆಯ ನಂತರ ತಿರುಗಿ ಕುಡಿದವನೆಂಬುದಕ್ಕೆ ಸೂಚನೆಯಿಲ್ಲ.

ಹಾಮನು ತಂದೆಯು ಬೆತ್ತಲೆಯಾಗಿರುವುದನ್ನು ಕಂಡು ಅವನು ಮಾಡಿದ್ದೇನೆಂದರೆ ಹೋಗಿ ಅಣ್ಣತಮ್ಮಂದಿರಿಗೆ ತಿಳಿಸಿದನು. ಅವನು ಇದನ್ನು ಹಾಸ್ಯಾಸ್ಪದ ಅರ್ಥದಲ್ಲಿ ಮಾಡಿದ್ದು ಸಾಕಷ್ಟು ಸಾಧ್ಯವಿದೆ. ಆದಾಗ್ಯೂ ಶೇಮ್ ಮತ್ತು ಯೆಫೆತರು ಬಟ್ಟೆಯನ್ನು ತೆಗೆದುಕೊಂಡು ಹಿಂಧಿಂದಕ್ಕೆ ನಡೆದು ಅವರ ತಂದೆಯ ಬೆತ್ತಲೆಯಾಗಿದ್ದನ್ನು ಮುಚ್ಚಿದರು. ನೋಹನು ಎದ್ದ ನಂತರ, ಏನು ಜರುಗಿತೆಂಬುದನ್ನು ಅರಿತುಕೊಂಡನು, ತಂದೆಯ ಆಶೀರ್ವಾದವನ್ನು ಶೇಮ್ ಮತ್ತು ಯೆಫೆತರ ಮೇಲೆ ಬಿಡುಗಡೆ ಮಾಡಿದನು.

ಯಥಾರ್ಥವಾದ ಮಗನು ಮತ್ತು ಮಗಳು ಮನೆಯ ಒಳಗಡೆ ಆದಂತಹ ಯಥಾರ್ಥ ತಪ್ಪುಗಳನ್ನು ಪ್ರಚಾರ ಮಾಡುವುದಿಲ್ಲ ಬಹಿರಂಗ ಪಡಿಸುವುದಿಲ್ಲ ಮತ್ತು ಅಹಿತಕರವಾಗಿ ಹರಟೆ ಹೊಡೆಯುವುದಿಲ್ಲ. ಪ್ರಾಮಾಣಿಕವಾದ ತಪ್ಪುಗಳು ಕ್ಷಮಿಸಲ್ಪಡಬೇಕು, ಮರೆತುಬಿಡಬೇಕು ಮತ್ತು ಮುಚ್ಚಲ್ಪಡಬೇಕು. ನಿರಂತರವಾದ ಪಾಪವು ಬಹಿರಂಗಗೊಳ್ಳಬೇಕು ಮತ್ತು ನ್ಯಾಯತೀರ್ಪು ಹೊಂದಬೇಕು.

## ದೇವರ ಮನೆಯಲ್ಲಿ ತಂದೆಯರು ಮತ್ತು ತಾಯಂದಿರು

ನಾವು ತಂದೆಯಾಗಿರುವುದು ಎಂಬ ಪದವನ್ನು ಲಿಂಗ-ಸ್ವತಂತ್ರ ಮಾರ್ಗದಲ್ಲಿ ಉಪಯೋಗಿಸುತ್ತಿದ್ದೇವೆ. ಅಂದರೆ ಇದು ''ತಾಯಿಯಾಗಿರುವುದು'' ಎಂಬುದನ್ನು ಸಹ ಒಳಗೊಂಡಿದೆ ದೇವರು ಅಂತಿಮ ತಂದೆಯಾಗಿದ್ದಾನೆ ಎಲ್ಲಾ ತಂದೆತನವು ಆತನಿಂದ ಹರಿಯುವಂತದ್ದಾಗಿದೆ (ಎಫೆಸದವರಿಗೆ 3:14,15). ಆತನ ಮಕ್ಕಳುಗಳಾಗಿ ನಾವು, ಇತರರಿಗೆ ತಂದೆ/ತಾಯಿ ಗಳಾಗಿರುವಂತಹ ಅದೇ ರೀತಿಯ ಗುಣಕ್ಕೆ ನಾವು ಚಲಿಸುತ್ತೇವೆ. ಆತ್ಮಿಕ ತಂದೆಯತನ ದೇವರ ತಂದೆತನದ ವಿಸ್ತರಣೆಯಾಗಿದೆ.

ಪೌಲನು ಆತ್ಮಿಕ ಮಗನು/ಮಗಳುಗಳನ್ನು ಹೊಂದಿದ್ದನು. ಅವನು ತಿಮೊಥೆಯನು, ತೀತನು, ಕೊರಿಂಥ, ಗಲಾತ್ಯ ಥೆಸಲೋನಿಕ ಸಭೆಯ ವಿಶ್ವಾಸಿಗಳನ್ನು ಅವನ ಆತ್ಮಿಕ ಮಗನು/ಮಕ್ಕಳು ಎಂಬುದಾಗಿ ಉಲ್ಲೇಖಿಸಿದ್ದಾನೆ. (2 ತಿಮೊಥೆಯನಿಗೆ 1:2: ತೀತನು 1:4 1 ಕೊರಿಂಥದವರಿಗೆ 4:14-17 ಗಲಾತ್ಯದವರಿಗೆ 4:19, 1 ಥೆಸಲೋನಿಕದವರಿಗೆ 2:10-12)

ಯಾವಾಗ ತಂದೆಯರ ಹೃದಯಗಳು ಅವರ ಮಕ್ಕಳ ಕಡೆಗೆ ಇರದಿದ್ದರೆ ಮತ್ತು ಯಾವಾಗ ಮಕ್ಕಳ ಹೃದಯಗಳು ಅವರ ತಂದೆಯರ ಕಡೆಗೆ ಇರದಿದ್ದರೆ, ಇದು ಶಾಪಕ್ಕೆ ಬಾಗಿಲು ತೆರೆಯುತ್ತದೆ ಎಂಬುದನ್ನು ನೋಡುವುದು ಆಸಕ್ತಿಕರವಾಗಿದೆ. (ಮಲಾಕಿಯ 4:5,6).

ಬಹುಶಃ ತಂದೆಯರು ಮತ್ತು ತಾಯಂದಿರು ಮತ್ತು ಮಗನು ಮತ್ತು ಮಗಳುಗಳ ನಡುವೆ ಜಗಳಗಳು ಇರುವಾಗ ಅನೇಕ ಸ್ಥಳೀಯ ಸಭೆಗಳು ಇದನ್ನು ಅನುಭವಿಸಿವೆ.

ಒಬ್ಬ ಸತ್ಯವಾದ ಆತ್ಮಿಕ ತಂದೆ/ತಾಯಿಯು, ಒಬ್ಬ ವ್ಯಕ್ತಿಯನ್ನು ಆತ್ಮಿಕ ಬಾಲ್ಯತನದಿಂದ ಪ್ರಬುದ್ಧತೆ ಕಡೆಗೆ ತೆಗೆದುಕೊಂಡು ಹೋಗುವವರಾಗಿದ್ದಾರೆ. ಆತ್ಮಿಕ ತಂದೆಯರು ಮತ್ತು ತಾಯಂದಿರು ಇತರರು ತಮ್ಮ ಮಕ್ಕಳಿಗಾಗಿ ಆತ್ಮಿಕ ಪರಂಪರೆ ಬಿಡುತ್ತಾರೆ. (2 ಕೊರಿಂಥದವರಿಗೆ 12:14). ಅವರು ಆತ್ಮಿಕ ಬಾಧ್ಯತೆಯನ್ನು ರವಾನಿಸುತ್ತಾರೆ (2 ತಿಮೊಥೆಯನಿಗೆ 1:3-5) ಸಾರಭೂತವಾಗಿ ಆತ್ಮಿಕ ತಂದೆ/ತಾಯಿಯಾಗಿರುವುದೆಂಬುದುದರ ಅರ್ಥವು, ದೇವರು ನಮಗೆ ಕೊಟ್ಟಂತವುಗಳೆಲ್ಲವನ್ನು ಅವರು ಸಹ ಹೊಂದಿಕೊಳ್ಳುವಂತಹ ಸ್ಥಳಕ್ಕೆ ಜನರನ್ನು ತರಲು ನಾವು ಪೋಷಿಸುವುದಾಗಿದೆ. ಖಂಡಿತವಾಗಿ, ಪರಿಪೂರ್ಣವಾದ ತಂದೆಗಳು/ತಾಯಂದಿರು ಇಲ್ಲ. ಆತ್ಮಿಕ ತಂದೆಗಳು/ತಾಯಂದಿರು ಸಹ ತಪ್ಪುಗಳನ್ನುಮಾಡುತ್ತಾರೆ ಆದರೆ ಯಥಾರ್ಥ ತಂದೇ ತಾಯಿಯು ತಪ್ಪು ಮಾಡಿದ್ದೇವೆಂಬುದನ್ನು ಅಂಗೀಕರಿಸಿಕೊಳ್ಳುತ್ತಾರೆ ಮತ್ತು ಅವರ ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತಾರೆ.

ಜನರನ್ನು ಪೋಷಿಸುವ ಮತ್ತು ಅವರನ್ನು ಆತ್ಮಿಕ ಪ್ರೌಢತೆಗೆ ತೆಗೆದುಕೊಂಡು ಹೋಗುವುದಕ್ಕೆ ನಾವುಗಳು ಹೇಗೆ ತಂದೆಯರು ಮತ್ತು ತಾಯಂದಿರು ಆಗಿರಬಹುದೆಂಬುದಕ್ಕೆ ಕೆಲವು ಮಾರ್ಗಗಳು ಇಲ್ಲಿವೆ.

- ಒಂದು ವೈಯಕ್ತಿಕವಾದ ಸಂಬಂಧವನ್ನು ಸ್ಥಾಪಿಸಬೇಕು ಆ ಒಂದು ಸಂಬಂಧದ ಆಧಾರದ ಮೇಲೆ ಜನರ ಜೀವಿತಗಳಿಗೆ ಆ ಮೇಲೆ ನಾವು ಮಾತಾಡಬಹುದು.
- ಪ್ರೀತಿಯಿಂದ ತಿದ್ದುವ, ಗದರಿಸುವ, ಶಿಸ್ತುಪಡಿಸುವ ಮತ್ತು ಜನರನ್ನು ಮಾರ್ಗದರ್ಶಿಸುವ, ಆದ್ದರಿಂದ ಆಂತರ್ಯ ಮನುಷ್ಯನಿಗೆ ಬೋಧಿಸುವ, ದೇವರ ವಾಕ್ಯಕ್ಕೆ ಹೊಂದಾಣಿಕೆ ಮತ್ತು ಜೋಡಣೆಯನ್ನು ತರುವಂತಹ ಬಾಹ್ಯಮೇಲ್ಮೈ ಮಟ್ಟದ ಸಂಬಂಧದ ಸ್ಥಳಕ್ಕೆ ಬೇಗನೆ ಹೋಗಬೇಕು.
- ಒಂದು ನಕಾರಾತ್ಮಕ ಪ್ರಭಾವವನ್ನು ಅಭ್ಯಾಸಿಸಬೇಕು ಮತ್ತು ಜನರುಗಳ ಆತ್ಮಿಕ ಬೆಳವಣಿಗೆ, ನಡವಳಿಕೆ ದಿನನಿತ್ಯದ ಜೀವನ ಶೈಲಿ ಮತ್ತು ಸೇವೆಗೆ ಜನರ ಜವಬ್ದಾರಿಯನ್ನು ಹೊತ್ತುಕೊಳ್ಳಬೇಕು.
- ವ್ಯಕ್ತಿಯ ವರಗಳಿಗಿಂತ ಹೆಚ್ಚು ಗುಣನಡತೆಯೊಡನೆ ವ್ಯವಹರಿಸಿರಿ ವ್ಯಕ್ತಿಯ ವರಗಳನ್ನು ಉಪಯೋಗಿಸದೇ, ವ್ಯಕ್ತಿಯನ್ನು ಕಟ್ಟುವಂತಹ ಸತ್ಯವಾದ ಮತ್ತು ಪ್ರಾಮಾಣಿಕವಾದ ಹೃದಯವನ್ನು ಹೊಂದಿರಿ.

- ತಮ್ಮನ್ನು ತಾವು ಒತ್ತಿಕೊಂಡಿರುವಂತೆ ಜನರನ್ನು ಪ್ರೋತ್ಸಾಹಿಸುವುದು ಮತ್ತು ನಾವು ಇರುವುದಕ್ಕಿಂತ ಮುಂದಕ್ಕೆ ಮತ್ತು ಅವರು ಮೀರಿದರೆ ನಾವುಗಳು ಅಸುರಕ್ಷತೆಯನ್ನು ಹೊಂದುವುದಿಲ್ಲ. ಒಬ್ಬ ಸತ್ಯ ಆತ್ಮಿಕ ತಂದೆ/ತಾಯಿಯು, ದಾವೀದನ ಸಾಧನೆಗಳನ್ನು ನೋಡಿ ಹೊಟ್ಟೇ ಕಿಚ್ಚುಪಟ್ಟವನಾಗಿ ಕಂಡು ಬಂದತಹ ಸೌಲನಂತೆ ನಾವುಗಳು ಇಲ್ಲ.
- ಜನರನ್ನು ದೇವ-ನೇಮಿತ ನಿರ್ದಿಷ್ಟ ಸ್ಥಾನಕ್ಕೆ ತರಬೇತಿಗೊಳಿಸು ಮತ್ತು ಯಾವುದೇ ಕಟ್ಟುಪಟ್ಟಿ ಸೇರಿಸುವಿಕೆ ಇಲ್ಲದೆ ಸರಿಯಾದ ಸಮಯದಲ್ಲಿ ಅವರನ್ನು ಬಿಡುಗಡೆಗೊಳಿಸಬೇಕು.

## ಕುಟುಂಬವಾಗಿ ಕಂಡುಬರುವುದು – ಅಭಿವೃದ್ಧಿಶೀಲ ಸಮುದಾಯ

ದೇವರ ಮನೆಯಾಗಿರುವುದು ಎಂಬುದನ್ನು ಜೀವಿಸಲು ಕುಟುಂಬದ ಸಂಬಂಧದಲ್ಲಿ ಸತ್ಯವಾಗಿ ಮತ್ತು ಪ್ರಯೋಗಿಕ ವಿಧಾನಗಳಲ್ಲಿ ಜೀವಿಸುವಂತಹ ವಿಶ್ವಾಸಿಗಳ ಸಮುದಾಯವನ್ನು ಸೃಷ್ಟಿಸುವಂತದ್ದು ಒಂದು ಪ್ರಾಮುಖ್ಯ ವಿಧಾನವಾಗಿದೆ. ಭಾನುವಾರಗಳು ಅಥವಾ ಇತರ ಆರಾಧನೆಯ ಅವಧಿಯಲ್ಲಿ ಒಟ್ಟಾಗಿ ಸೇರುವಾಗ ಮಾತ್ರರವಲ್ಲದೇ ನಾವು ದೇವರ ಕುಟುಂಬವಾಗಿದ್ದೇವೆ. ವಾರದ ಪ್ರತಿದಿನದಲ್ಲೂ ನಾವು ದೇವರ ಕುಟುಂಬವಾಗಿದ್ದೇವೆ. ಮತ್ತು ನಿಜದಲ್ಲಿ ಮತ್ತು ಪ್ರಾಯೋಗಿಕ ಮಾರ್ಗಗಳಲ್ಲಿ ವಾರದ ಪ್ರತಿದಿನದ ಜೀವಿತವನ್ನು ನಾವು ಇದರಲ್ಲಿ ಜೀವಿಸಬೇಕು.

ಆದಾಗ್ಯೂ, ಕ್ರೈಸ್ತ ಸಮುದಾಯದ ನಿಜವಾದ ಸ್ವಭಾವವನ್ನು ಅರ್ಥಮಾಡಿಕೊಳ್ಳಬೇಕು ಇಲ್ಲದಿದ್ದರೆ ಇನ್ನೊಂದು ಸಾಮಾಜಿಕ ಸಂಘ ಅಥವಾ ಸಾಮಾಜಿಕ ಗುಂಪು ಕಟ್ಟುವುದರಲ್ಲಿ ಕೊನೆಗೊಳ್ಳುತ್ತದೆ ಮತ್ತು ಲೋಕವು ಮಾಡುವಂತಹವುಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲದಂತಾಗುತ್ತದೆ. ಆಮೇಲೆ ಆತನ ಕುಟುಂಬವಾಗಿರಲು ಆತನು ಕರೆದಂತಹ ನಿಜವಾದ ಉದ್ದೇಶಗಳನ್ನು ನಾವು ತಪ್ಪಿಸಿಕೊಳ್ಳುತ್ತೇವೆ

## ಕ್ರೈಸ್ತ ಸಮುದಾಯವು ಯಾವುದು

ಇದು ಒಂದು ವಿಶ್ವಾಸಿಗಳ ಸಮುದಾಯವಾಗಿದ್ದು ಆತನಿಗಾಗಿ ಮತ್ತು ಆತನ ಮೂಲಕವಾಗಿ ಒಟ್ಟಾಗಿ ಕಾರ್ಯಮಾಡುವ, ಆತನ ನಿಮಿತ್ತವಾಗಿ ಒಬ್ಬರಿಗೊಬ್ಬರು ಕರ್ತನಾದ ಯೇಸುವಿನ ಕೇಂದ್ರದಲ್ಲಿ ಒಬ್ಬರಿಗೊಬ್ಬರು ಒಳ್ಳೆಯ ರೀತಿಯಲ್ಲಿ ಸಂಬಂಧಿಸುವುದಾಗಿದೆ.

ಇದು ಒಂದು ರೀತಿಯಲ್ಲಿ ಪರಸ್ಪರ ಸಂಬಂಧಿಸಿರುವ ವಿಶ್ವಾಸಿಗಳ ಸಮುದಾಯವಾಗಿದ್ದು, ಆತ್ಮಿಕ ಪೋಷಣೆ ಮತ್ತು ಆತ್ಮಿಕ ವಿಷಯಗಳಲ್ಲಿ ಬೆಳವಣಿಗೆಯು ಒತ್ತು ನೀಡುವ ಸ್ಥಳವಾಗಿದೆ. ಪ್ರಾರ್ಥನೆ, ಆರಾಧನೆ, ದೇವರ ವಾಕ್ಯದ ಹಂಚುವಿಕೆಯು ಜನರುಗಳ ಮಧ್ಯದಲ್ಲಿ ಜರುಗುವುದು ಒಟ್ಟಾಗಿ ಪ್ರಾಮುಖ್ಯವಾಗಿದೆ.

ಇದು ಒಂದು ರೀತಿಯಲ್ಲಿ ಪರಸ್ಪರ ಸಂಬಂಧಿಸಿರುವ ವಿಶ್ವಾಸಿಗಳ ಒಂದು ಸಮುದಾಯವಾಗಿದ್ದು, ಜೀವನಕ್ಕೆ ಜೀವನದ ಪೋಷಣೆಯು ಜರುಗುತ್ತದೆ ಆದ್ದರಿಂದ ಜನರ ಜೀವಿತಗಳಲ್ಲಿ ಕ್ರಿಸ್ತನ - ಸಾರೂಪ್ಯದ ಗುಣನಡತೆಯು ರೂಪುಗೊಳ್ಳುತ್ತದೆ ದೈವಿಕತೆಯಲ್ಲಿ ಜನರು ಒಟ್ಟಾಗಿ ಬೆಳೆಯುತ್ತಾರೆ.ಇದು ಒಂದು ರೀತಿಯಲ್ಲಿ ಪರಸ್ಪರ ಸಂಬಂಧಿಸಿರುವ ವಿಶ್ವಾಸಿಗಳ ಸಮುದಾಯವಾಗಿದ್ದು, ಒಬ್ಬರಿಗೊಬ್ಬರು ಪ್ರೀತಿ ಮತ್ತು ಅನುಕಂಪದಲ್ಲಿ ಸೇವೆ ಸಲ್ಲಿಸುತ್ತಾರೆ. ಒಬ್ಬರಿಗೊಬ್ಬರ ಅಗತ್ಯತೆ ಸಂಧಿಸಲು ಸಹಾಯ ಮಾಡುತ್ತಾರೆ, ಮತ್ತು ಸಂಕಟ ಸಮಯದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡುತ್ತಾರೆ.

ಇದು ಒಂದು ರೀತಿಯಲ್ಲಿ ಪರಸ್ಪರ ಸಂಬಂಧಿಸಿರುವ ವಿಶ್ವಾಸಿಗಳ ಸಮುದಾಯವಾಗಿದ್ದು, ಪ್ರಪಂಚದಲ್ಲಿ ಒಬ್ಬರಿಗೊಬ್ಬರ ಸಜ್ಜುಗೊಳಿಸುತ್ತೇವೆ. ಮತ್ತು ಅಧಿಕಾರ ಪಡೆಯುತ್ತೇವೆ. ಪ್ರಪಂಚದಲ್ಲಿ ಮತ್ತು ಸಮುದಾಯದಲ್ಲಿ ನಂಬಿಕೆಯಲ್ಲಿ ಜೀವಿಸುವುದರ ಪ್ರಾಯೋಗಿಕ ಮಾರ್ಗಗಳನ್ನು ಹಂಚುತ್ತೇವೆ.

ಇದು ಒಂದು ರೀತಿಯಲ್ಲಿ ಪರಸ್ಪರ ಸಂಬಂಧಿಸಿರುವ ವಿಶ್ವಾಸಿಗಳ ಸಮುದಾಯವಾಗಿದ್ದು, ಪ್ರೀತಿಯಲ್ಲಿ ಮತ್ತು ಒಳ್ಳೆಯ ಕೆಲಸಗಳಲ್ಲಿ ಒಬ್ಬರಿಗೊಬ್ಬರು ಪ್ರೋತ್ಸಾಹಿಸಿಕೊಳ್ಳುತ್ತಾರೆ ಆದ್ದರಿಂದ ನಮ್ಮ ದೇಶ, ನಮ್ಮ ನಗರ ಮತ್ತು ನಮ್ಮ ನೆರೆಹೊರೆಯವರನ್ನು ಒಟ್ಟಾಗಿ ಸಂಧಿಸಬಹುದಾಗಿದೆ.

ಇದು ಒಂದು ರೀತಿಯಲ್ಲಿ ಪರಸ್ಪರ ಸಂಬಂಧಿಸಿರುವ ವಿಶ್ವಾಸಿಗಳ ಸಮುದಾಯವಾಗಿದ್ದು, ಮಹಾ ಆದೇಶಾಧಿಕಾರವನ್ನು ಒಟ್ಟಾಗಿ ನೆರವೇರಿಸಲೂ ಕೆಲಸ ಮಾಡುವ ಸ್ಥಳವಾಗಿದೆ, ನಾವು ಲೋಕಕ್ಕೆ ಆತ್ಮಗಳನ್ನು ಗೆಲ್ಲಲು ಹೋಗುತ್ತೇವೆ ಮತ್ತು ಶಿಷ್ಯರುಗಳನ್ನು ಮಾಡುತ್ತೇವೆ.

ಇದು ಒಂದು ವಿಶ್ವಾಸಿಗಳ ಸಮುದಾಯವಾಗಿದ್ದು, ಇವರ ಮಧ್ಯದಲ್ಲಿ ಮತ್ತು ಇವರ ಮೂಲಕವಾಗಿ ದೇವರ ರಾಜ್ಯವು ತೋರ್ಪಡಿಸುವುದನ್ನು ನಾವು ನೋಡುತ್ತೇವೆ. ದೇವರ ರಾಜ್ಯವು ನಮ್ಮ ಮಧ್ಯದಲ್ಲಿದೆ.

ಯೆರೂಸಲೇಮಿನಲ್ಲಿ ಸಭೆಯು ಜನಿಸಿದ ಪ್ರಾಚೀನ ದಿನಗಳ ಮಿನುಗು ನೋಟವನ್ನು ನಾವು ಇದರಿಂದ ಪಡೆಯುತ್ತೇವೆ ಪರಿಸ್ಥಿತಿಗಳು ವ್ಯತ್ಯಾಸಕರವಾಗಿದೆ ಎಂಬುದು ಸಹ ಸತ್ಯಕರವಾಗಿದೆ, ಪಂಚಾಶತ್ತಮ ಹಬ್ಬವನ್ನು ಆಚರಿಸಲು ಯೆರೂಸಲೇಮಿಗೆ ಅವರ ನಿವಾಸ ಸ್ಥಳಗಳಿಂದ ದೂರವಾಗಿ ಬಂದಿದ್ದಂತಹ ಅನೇಕ ಜನರು, ರಕ್ಷಣೆ ಹೊಂದಿದರು ಮತ್ತು ಉಳಿದುಕೊಳ್ಳಲೂ ತೀರ್ಮಾನಿಸಿದರು. ದೇವರ ಕುಟುಂಬವಾಗಿ ಅವರು ಜೀವಿಸಿದ ರೀತಿಯು ಇಲ್ಲಿದೆ:

ಅಪೊಸ್ತಲರ ಕೃತ್ಯಗಳು 2:44-47
**ನಂಬಿದವರೆಲ್ಲರು ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸುತ್ತಾ ತಮ್ಮ ತಮ್ಮ ಚರಸ್ಥಿರ ಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ್ದ ಹಾಗೆ ಹಂಚಿಕೊಡುತ್ತಾ ಇದ್ದರು. ಅವರು ದಿನಾಲು ಏಕಮನಸ್ಸಿನಿಂದ ದೇವಾಲಯದಲ್ಲಿ ಕೂಡುತ್ತಾ ಮನೆಮನೆಗಳಲ್ಲಿ ರೊಟ್ಟಿ ಮುರಿದು ಉಲ್ಲಾಸದಿಂದಲೂ ಸಕಲ ಹೃದಯದಿಂದಲೂ ಊಟ ಮಾಡುತ್ತಾ ಇದ್ದರು; ದೇವರನ್ನು ಕೊಂಡಾಡುವವರಾಗಿಯೂ ಜನರೆಲ್ಲರ ದಯವನ್ನು ಹೊಂದುವವರಾಗಿಯೂ ಇದ್ದರು. ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು.**

- ಅವರ ಚರಸ್ಥಿರ ಸೊತ್ತುಗಳನ್ನು ಅವರು ಹಂಚಿಕೊಂಡರು
- ಆರಾಧನೆ, ಪ್ರಾರ್ಥನೆ ಮತ್ತು ಬೋಧನೆಗಳಿಗೆ ಒಟ್ಟಾಗಿ ಸೇರುತ್ತಿದ್ದರು.
- ಅವರು ಮನೆಮನೆಗಳಲ್ಲಿ ಊಟ ಮಾಡುತಿದ್ದರು
- ಅವರ ಮನೆಮನೆಗಳಲ್ಲಿ ಅವರು ದೇವರನ್ನು ಆರಾಧಿಸಿದರು
- ಅವರು ಜನರ ದಯೆಯನ್ನು ಹೊಂದಿದ್ದರು - ಅವಿಶ್ವಾಸಿಗಳ ಜೊತೆಯಲ್ಲಿ ಅವರು ಉತ್ತಮ ಸಂಬಂಧ ಹೊಂದಿದ್ದರು.
- ದಿನಾಲು ಜನರು ಅವರ ಮಂಡಲಿಗೆ ಸೇರುತ್ತಿದ್ದದ್ದನ್ನು ಅವರು ನೋಡಿದರು.

ಸತ್ಯವಾದ ಕ್ರೈಸ್ತ ಸಮುದಾಯ ಒಂದು ದೊಡ್ಡ ಉದಾಹರಣೆ ಇದಾಗಿದೆ.

## ಕ್ರೈಸ್ತ ಸಮುದಾಯವು ಯಾವುದು ಆಗಿಲ್ಲ

ನಿಜವಾದ ಕ್ರೈಸ್ತ ಸಮುದಾಯವಲ್ಲದ ಸಮುದಾಯವನ್ನು ಕಟ್ಟುವಂತಹ ಒಂದು ಬಲೆಯೊಳಗೆ ನಾವು ಬೀಳದಿರುವಂತಹದ್ದು ಪ್ರಾಮುಖ್ಯವಾಗಿದೆ. ಇದನ್ನು ಮಾಡುವುದನ್ನು ತಪ್ಪಿದರೆ ಲೋಕದ ರೀತಿಯಂತೆ ಯಾವುದಾದರೊಂದರಲ್ಲಿ ಕೊನೆಗೊಳ್ಳುತ್ತೇವೆ ಅಥವಾ ಬಹುಶಃ ಲೋಕದಕ್ಕಿಂತಲೂ ಕೆಟ್ಟದಾಗಿರಬಹುದು ಯಾಕೆಂದರೆ ನಾವು ಏನಾಗಿಲ್ಲವೋ ಅಂತಹದ್ದರಲ್ಲಿ, ನೀವು ನಟಿಸುತ್ತೇವೆ.

## ಒಬ್ಬ ಕ್ರೈಸ್ತನು ಪ್ರಾಪಂಚಿಕತೆಯನ್ನು ಹಿಡಿದುಕೊಳ್ಳುವುದಿಲ್ಲ

ಕ್ರೈಸ್ತ ಅನ್ಯೋನ್ಯತೆಯ ಹೆಸರಿನಲ್ಲಿ ಸೇರುವುದು ಮತ್ತು ವಿಶ್ವಾಸಿಗಳಿಗೆ ಸೂಕ್ತವಲ್ಲದ ಕಾರ್ಯಗಳನ್ನು ಮಾಡಲೂ ಸೇರಿ ಬರಬಾರದು ಉದಾಹರಣೆಗೆ ವಿಶ್ವಾಸಿಗಳು ಒಟ್ಟಾಗಿ ಸೇರಿದರೆ ಮತ್ತು ಅಸಭ್ಯವಾದ ಚಲನಚಿತ್ರವನ್ನು ನೋಡಿದರೆ ಇದು ಸತ್ಯವಾದ ಕ್ರೈಸ್ತ ಅನ್ಯೋನ್ಯತೆ ಅನ್ನಿಸಿಕೊಳ್ಳುವುದಿಲ್ಲ ಸುತ್ತಲೂ ಕುಳಿತು ಮತ್ತು ಸ್ವಲ್ಪ ಪ್ರಶ್ನಾರ್ಹವಾದವುಗಳನ್ನು ಹಂಚುವುದು ಅಥವಾ ಕಟುವಾದ ಅಸಭ್ಯ ಹಾಸ್ಯದ ಹಾಸ್ಯಗಳು, ಒಂದು ಸತ್ಯ ಕ್ರೈಸ್ತ ಅನ್ಯೋನ್ಯತೆ ಆಗಿರುವುದಿಲ್ಲ ''ಜಾರತ್ವ ಯಾವ ವಿಧವಾದ ಬಂಡುತನ ದ್ರವ್ಯಾಶೆ ಇವುಗಳ ದೂರವಾಗಿರುವದೇ ದೇವಜನರಿಗೆ ಯೋಗ್ಯವಾದದ್ದು ಹೊಲಸು ಮಾತು ಹುಚ್ಚು ಮಾತು, ಕುಚೋದ್ಯ ಮಾತು ಇವು ಬೇಡ ಅಯುಕ್ತವಾಗಿವೆ ಇವುಗಳನ್ನು ಬಿಟ್ಟು ದೇವರಿಗೆ ಉಪಕಾರಸ್ತುತಿ ಮಾಡುವದು ಉತ್ತಮ'' (ಎಫೆಸದವರಿಗೆ 5:3,4).

## *ಪ್ರಪಂಚಕ್ಕೆಲ್ಲಾ ಹೋಗಿ ಶಿಷ್ಯರನ್ನಾಗಿ ಮಾಡುವುದರಿಂದ ತಪ್ಪಿಸಿಕೊಳ್ಳಬಾರದು*

ಕ್ರೈಸ್ತ ಸಮುದಾಯವು, ಲೋಕಕ್ಕೆಲ್ಲಾ ಹೊರಟು ಹೋಗಿ ಸುವಾರ್ತೆಯನ್ನು ಸಾರುವುದರಿಂದ ತಪ್ಪಿಸಿಕೊಳ್ಳಬಾರದು ಮತ್ತು ಅವಿತುಕೊಳ್ಳುವ ಸಮುದಾಯವಾಗಿ ಕಂಡುಬರಬಾರದು. ನಾವು ಯಾವಾಗಲೂ ಒಟ್ಟಾಗಿ ಸೇರಿಬರುವುದರಲ್ಲಿ ಹಿತಕರವಾಗಿರುತ್ತಾರೆ. ಆದರೆ ಇದನ್ನು ನಾವು ಎಲ್ಲಾ ಸಮಯದಲ್ಲೂ ಮಾಡುತ್ತಿದ್ದರೆ, ಲೋಕದ ಮೇಲೆ ನಾವು ಪರಿಣಾಮವನ್ನುಂಟುಮಾಡುವುದರಲ್ಲಿ, ವಿಫಲತೆಗೊಳ್ಳುತ್ತೇವೆ. ನಾವುಗಳು ಯೇಸುಕ್ರಿಸ್ತನಿಗಾಗಿ ಉದ್ದೇಶಪೂರ್ವಕವಾಗಿ ಹೊರಗೆ ಹೋಗಿ ಜನರನ್ನು ಸಂಧಿಸುವಂತದ್ದು ಅಗತ್ಯವಾಗಿದೆ.

## ನಿಜವಾದ ಆತ್ಮಿಕ ಅನ್ಯೋನ್ಯತೆಗಾಗಿ ಬದಲಿಯಾಗಿಲ್ಲ

ಒಟ್ಟಾಗಿ ಸಮಯ ಕಳೆಯುವುದು, ಜೀವಿತವನ್ನು ಒಟ್ಟಾಗಿ ಮಾಡುವುದು, ಒಬ್ಬರಿಂದೊಬ್ಬರು ಕಲಿಯುವುದು, ಆಹಾರ ಹಂಚಿಕೊಳ್ಳುವುದು, ಶುದ್ಧವಾದ ಹಾಸ್ಯಗಳು ಒಳ್ಳೆಯದು ಮತ್ತು ಇತರ ಅನೇಕ ಉತ್ತಮ ವಿಷಯಗಳನ್ನು ನಾವು ಒಟ್ಟಾಗಿ ಮಾಡಬಹುದು. ಆದಾಗ್ಯೂ ಇವೆಲ್ಲವನ್ನು ಮಾಡಿ, ನಾವುಗಳು ನಂಬಿಕೆ, ಪ್ರಾರ್ಥನೆ, ಆರಾಧನೆಯನ್ನು ಹಂಚಿಕೊಳ್ಳದಿದ್ದರೆ ಮತ್ತು ಇತರ ವಿಷಯಗಳು ನಾವು ಹಿಂದೆಯೇ ವಿವರಿಸಿದಂತೆ ಒಟ್ಟಾಗಿ ಇರುವುದರ ಅವಿಭಾಜ್ಯ ಅಂಗಗಳಾಗಿದ್ದರೆ, ಆಮೇಲೆ ಇತರ ಸಾಮಾಜಿಕ ಗುಂಪುಗಳಿಗಿಂತ ಯಾವುದೇ ರೀತಿಯಲ್ಲಿ ವಿಭಿನ್ನವಾಗಿ ನಾವು ಕಂಡುಬರುವುದಿಲ್ಲ.

## ದೇವರು ಮನೆಯನ್ನು ಸ್ವಚ್ಛಗೊಳಿಸುತ್ತಾನೆ

1 ಪೇತ್ರನು 4:17

**ನ್ಯಾಯ ವಿಚಾರಣೆಯ ಸಮಯ ಬಂದದೆ ಆ ವಿಚಾರಣೆಯು ದೇವರ ಮನೆಯಲ್ಲಿಯೇ ಪ್ರಾರಂಭವಾಯಿತಲ್ಲಾ ಅದು ನಮ್ಮಲ್ಲಿ ಪ್ರಾರಂಭವಾಗಲು ದೇವರ ಸುವಾರ್ತೆಯನ್ನು ನಂಬಲೋಲ್ಲದವರ ಗತಿ ಏನಾಗಬಹುದು?**

ಆತನ ಮನೆಯಲ್ಲಿ, ಸ್ಥಳೀಯ ಸಭೆಯ ಕುಟುಂಬದಲ್ಲಿ ಕ್ರಮಬದ್ಧತೆ ಇರಬೇಕೆಂಬುದಾಗಿ ದೇವರು ಅಪೇಕ್ಷಿಸುತ್ತಾನೆ ಎಂಬುದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ವಿಷಯಗಳನ್ನು ಕ್ರಮವಿಲ್ಲದ ಸಮಯಗಳು ಉಂಟು ಮತ್ತು ದೇವರು ಮನೆಯನ್ನು ಸ್ವಚ್ಛಗೊಳಿಸುವುದು ಅವಶ್ಯಕವಾಗಿರುತ್ತದೆ. ದೇವರ ಮನೆಯಲ್ಲಿ ನ್ಯಾಯತೀರ್ಪು ಪ್ರಾರಂಭಗೊಳ್ಳುತ್ತದೆ. ದೇವರ ಮನೆಯನ್ನು ಕ್ರಮದಲ್ಲಿ ಇರಿಸುವುದು ಬಹಳ ಉತ್ತಮವಾದದ್ದು ಆದ್ದರಿಂದ ದೇವರ ನ್ಯಾಯತೀರ್ಪಿನ ಒಳಗೆ ಬರುವಂತದ್ದು ಯಾವುದು ಇರುವುದಿಲ್ಲ.

### ಸ್ಥಳೀಯ ಸಭೆಯು ಇದನ್ನು ಕಾರ್ಯಗತಗೊಳಿಸಲು ಪ್ರಾಯೋಗಿಕ ಮಾರ್ಗಗಳು

- ದೇವರ ಮನೆ, ದೇವರ ಕುಟುಂಬಕ್ಕೆ ಸಂಬಂಧಿಸಿದವರೆಂಬ ಪ್ರಜ್ಞೆಯನ್ನು ಸೃಷ್ಟಿಸಬೇಕು ಸ್ಥಳೀಯ ಸಭೆಯು ಆರಾಧನೆಗೆ ಜನರು ಹಾಜರಾಗುವ ಒಂದು ಸ್ಥಳಕ್ಕಿಂತಲೂ ಅಧಿಕವಾಗಿರಬೇಕು. ನಾವುಗಳು ಸಂಬಂಧಪಟ್ಟಂತಹ ಒಂದು ಸ್ಥಳ, ಕುಟುಂಬವಾಗಿ ಇದು ಕಂಡುಬರಬೇಕು.
- ಜನರು ದಾಸನ ಮನಸ್ಥಿತಿಯಿಂದ ಕೆಲಸ ಮಾಡದೆ ಒಬ್ಬ ಮಗನ ಮನಸ್ಥಿತಿಯಿಂದ ಕೆಲಸ ಮಾಡುವಂತೆ ಪ್ರೋತ್ಸಾಹಿಸಬೇಕು.
- ಕರ್ತನ ಮನೆಯಲ್ಲಿ ಜನರು ತಂದೆಯರು ಮತ್ತು ತಾಯಂದಿರುಗಳಾಗಿ ಕಂಡುಬರಲು ಪ್ರೋತ್ಸಾಹಿಸಬೇಕು.
- ತಂದೆಯರು ಮತ್ತು ತಾಯಂದಿರು ಕಿರಿಯವರನ್ನು ಪೋಷಿಸಲು ಪ್ರೋತ್ಸಾಹಿಸಬೇಕು.
- ಸತ್ಯವಾದ ಕ್ರೈಸ್ತ ಸಮುದಾಯವನ್ನು ಬೆಳೆಸಬೇಕು. ಇದು ಬಹಳ ಸಮಯ ತೆಗೆದುಕೊಳ್ಳುತ್ತದೆ ಆದರೆ ಇದು ಅವಶ್ಯಕವಾಗಿದೆ ಸಮುದಾಯವನ್ನು ಉತ್ತೇಜಿಸುವಂತಹ ಒಂದು ಉತ್ತಮ ಮಾರ್ಗವು ಅವರು ಸಣ್ಣ ಗುಂಪುಗಳಲ್ಲಿ ನಿರಂತರವಾಗಿ ಸಂಧಿಸಲು ಜನರನ್ನು ಪ್ರೋತ್ಸಾಹಿಸುವಂತದ್ದು ಮತ್ತು ಸಭೆಯ ಭಂಗಿಯಿಂದ ಹೊರಗಡೆ ಅನೌಪಚಾರಿಕವಾಗಿ ಸಂಧಿಸುವುದು ಆಗಿದೆ.

- ಸೇವಾ - ನಿರ್ದಿಷ್ಟ ತಂಡಗಳ ಮಧ್ಯದಲ್ಲಿ (ಉದಾ: ಆರಾಧನಾ ತಂಡ, ದ್ವಾರಾಧಿಕಾರಿ ತಂಡ, ಮಾಧ್ಯಮ ತಂಡ ಮತ್ತು ಇತರೆ) ಸತ್ಯವಾದ ಕ್ರೈಸ್ತ ಸಮುದಾಯವನ್ನು ಬೆಳೆಸುವುದು ಸಮುದಾಯವನ್ನು ಆದರಿಸುವ ಮತ್ತೊಂದು ಮಾರ್ಗವಾಗಿದೆ.

## ಸಿದ್ಧವಾಗಿರಬೇಕಾಗಿರಲು ಸವಾಲುಗಳು

- ಸ್ಥಳೀಯ ಸಭೆಯ ಭಾಗಗಳಾದ ಪ್ರತಿಯೊಂದು ಸಹ ಆತ್ಮಿಕ ಕುಟುಂಬದ ಭಾಗವಾಗಿರುವುದು ಅಥವಾ ಸಮುದಾಯ ಬೆಳೆಸುವುದನ್ನು ನೋಡಲು ಸಾಧ್ಯವಿಲ್ಲ. ಭಾನುವಾರದ ಆರಾಧನೆಯಲ್ಲಿ ಒಳ್ಳೆಯ ಆತ್ಮಿಕ ಅನುಭವದ ಎರಡು ಗಂಟೆಗಳಲ್ಲಿ ಮಾತ್ರ ಅನೇಕರು ತೃಪ್ತಿಯಾಗಿರಲು ನೋಡಿಕೊಳ್ಳುತ್ತಾರೆ. ಬೋಧಿಸಲು ಮತ್ತು ದೇವರ ಮನೆಯಾಗಿರುವುದರ ಅರ್ಥ ಮತ್ತು ದೇವರ ಕುಟುಂಬವಾಗಿರಲು ಸಮ್ಮತಿಸುವುದನ್ನು ನೋಡಲು ಅಧಿಕವಾದ ತಾಳ್ಮೆಯು ಅವಶ್ಯಕವಾಗಿದೆ.
- ನೂರಾರು ಬಹಶಃ ಸಾವಿರಾರು ಜನರನ್ನು ಹೊಂದಿರುವಂತಹ ದೊಡ್ಡ ಸಭೆಯಲ್ಲಿ ಜನರು ಸಂಪರ್ಕ ಕಳೆದುಕೊಳ್ಳುವುದು, ಕಳೆದುಹೋಗುವುದು ಮತ್ತು ಏಕಾಂಗಿಯಾಗಿರುವುದು ಬಹಳ ಸುಲಭವಾಗಿದೆ. ಸಣ್ಣ ಗುಂಪುಗಳು ಲಭ್ಯವಿದ್ದರು ಸಹ ಜನರು ಸಣ್ಣ ಗುಂಪುಗಳಲ್ಲಿ ಸಂಪರ್ಕ ಹೊಂದಿಕೊಳ್ಳುವುದನ್ನು ನೋಡುವುದು ಸವಾಲು ಆಗಿದೆ.
- ಜನರು ವಿಭಕ್ತ ಕೂಟ ಅಥವಾ ಗಣ್ಯ ಗುಂಪುಗಳನ್ನು ರೂಪಿಸುವ ಅಪಾಯವಿದೆ. ಇಂತಹ ಗುಂಪುಗಳು ತಮ್ಮೊಳಗೆ ''ಸಮುದಾಯವನ್ನು'' ಆನಂದಿಸುತ್ತಾರೆ ಆದರೆ ತಮ್ಮನ್ನು ದೊಡ್ಡ ಕುಟುಂಬದಿಂದ ಪ್ರತ್ಯೇಕಿಸಿಕೊಳ್ಳುತ್ತಾರೆ, ಒಳ್ಳೆಯದಕ್ಕಿಂತ ಹಾನಿಯನ್ನು ಅಧಿಕವಾಗಿ ಮಾಡುತ್ತಾರೆ.

## ಪರಿಗಣಿಸಲು ಪ್ರಶ್ನೆಗಳು

ಒಂದು ಸ್ಥಳೀಯ ಸಭೆಯ ಸಭಿಕರು ಸತ್ಯವಾಗಿ ದೇವರ ಮನೆಯಾಗಿ ಕಂಡುಬರುವುದು ಮತ್ತು ಒಂದು ಕುಟುಂಬವಾಗಿರುವುದನ್ನು ಅನುಭವಿಸಲು ನಾವು ಪರೀಕ್ಷಿಸುವ ಮತ್ತು ಮೌಲ್ಯಮಾಪನ ಮಾಡುವ ಕೆಲವು ಮಾರ್ಗಗಳು ಯಾವುವು?

ತಂದೆಯರು ಮತ್ತು ತಾಯಂದಿರು ಚಿಕ್ಕಮಕ್ಕಳನ್ನು ಸಹಜವಾಗಿ ಕಾಳಜಿ ವಹಿಸುವ ಮತ್ತು ಪೋಷಿಸುವ ಸ್ಥಳಕ್ಕೆ ಬರುವಂತಹ ಪೋಷಿಸುವ ಸಂಸ್ಕೃತಿಯನ್ನು ನಾವುಗಳು ಹೇಗೆ ಸೃಷ್ಟಿಸಬಹುದು?

# 10

# ಸ್ಥಳೀಯ ಸಭೆ–ಸತ್ಯದ ಸ್ಥಂಭವಾಗಿದೆ

1 ತಿಮೊಥೆಯನಿಗೆ 3:15

**ಆದರೆ ಒಂದು ವೇಳೆ ನಾನು ತಡಮಾಡಿದರೂ ದೇವರ ಮನೆಯಲ್ಲಿ ಅಂದರೆ ಜೀವ ಸ್ವರೂಪನಾದ ದೇವರ ಸಭೆಯಲ್ಲಿ ನಡೆದುಕೊಳ್ಳಬೇಕಾದ ರೀತಿಯ ನಿನಗೆ ಗೊತ್ತಗಬೇಕೆಂದು ಈ ಸಂಗತಿಗಳನ್ನು ಬರೆದಿದ್ದೇನೆ, ಆ ಸಭೆಯು ಸತ್ಯಕ್ಕೆ ಸ್ತಂಭವೂ ಅಧಾರವೂ ಆಗಿದೆ.**

ಸ್ಥಳೀಯ ಸಭೆಯು ಸತ್ಯದ ಸ್ತಂಭವೂ, ನೆಲವೂ ಆಗಿದೆ, ಎತ್ತಿಹಿಡಿಯುವ, ಪ್ರಾಮಾಣಿತ ಧಾರಕ, ಪಾಪಗ್ರಸ್ಥರಿಗೆ ಭ್ರಷ್ಟರಿಗೆ, ಕತ್ತಲೆ ಮತ್ತು ನಿರಾಕರಿಸಲಾದ ಪ್ರಪಂಚಕ್ಕೆ ಸತ್ಯದ ಅಸ್ತಿವಾರವಾಗಿದೆ.

ಜನರು ಒಳ್ಳೆಯದು ಮತ್ತು ಕೆಟ್ಟದ್ದು ಯಾವುದು ಎಂಬುದನ್ನು ತಿಳಿಯಬೇಕಾದರೆ, ಉಲ್ಲೇಖ ಕೇಂದ್ರವಾಗಿ ಅವರ ಸಮುದಾಯದಲ್ಲಿನ ಸ್ಥಳೀಯ ಸಭೆಯನ್ನು ಅವರು ನೋಡಬೇಕು.

## ಜೋಡಿಸಿದ ಮತ್ತು ಸತ್ಯಕ್ಕೆ ಬದ್ಧವಾಗಿದೆ

ಯೋಹಾನ 17:17

**ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು. ನಿನ್ನ ವಾಕ್ಯವೇ ಸತ್ಯವು.**

ಸ್ಥಳೀಯ ಸಭೆಯು ಅದು ಇರುವಂತಹ ಸಮುದಾಯದಲ್ಲಿ ಸತ್ಯವನ್ನು ಎತ್ತಿಹಿಡಿಯುವ ಮತ್ತು ಸತ್ಯದ ಅಸ್ತಿವಾರವಾಗಿದೆ. ದೇವರ ವಾಕ್ಯವು ಸತ್ಯವಾಗಿದೆ. ಸ್ಥಳೀಯ ಸಭೆಯು, ಸತ್ಯಕ್ಕೆ, ದೇವರ ವಾಕ್ಯಕ್ಕೆ ಬದ್ಧವಾಗಿರಬೇಕು ಮತ್ತು ಜೋಡಣೆ ಹೊಂದಿರಬೇಕು. ಖಂಡಿತವಾಗಿ ಇದು ದೇವರ ಪವಿತ್ರ ವಾಕ್ಯಕ್ಕೆ ಬದ್ಧತೆಯಿಂದಿರುವ ಸ್ಥಳೀಯ ಸಭೆಯ ನಾಯಕರುಗಳಿಂದ ಪ್ರಾರಂಭವಾಗುತ್ತದೆ. ನಾಯಕರುಗಳು ರಾಜಿ ಮಾಡಿಕೊಂಡರೆ ಆಮೇಲೆ ಉಳಿದ ಸ್ಥಳೀಯ ಸಭೆಯ ಅಂಗವು ಸತ್ಯವನ್ನು ಎತ್ತಿ ಹಿಡಿಯಲು ಕಷ್ಟಕರವಾಗುತ್ತದೆ.

ನಮ್ಮ ಸ್ಥಳೀಯ ಸಭೆಗಳ ಸಭಾಪಾಲಕರು ಮತ್ತು ನಾಯಕರುಗಳಾಗಿ, ರಾಜಿ ಮಾಡಿಕೊಳ್ಳದೆ ದೇವರ ವಾಕ್ಯಕ್ಕೆ ಬದ್ಧತೆಯಿಂದಿರಬೇಕು ಮತ್ತು ಆತನ ವಾಕ್ಯವನ್ನು ನಾಚಿಕೆಯಿಲ್ಲದೆ ಎತ್ತಿಹಿಡಿಯಬೇಕು. ಪ್ರಸಕ್ತ ಸಮಸ್ಯೆಗಳ ಕುರಿತ ಮಾತನಾಡಲೂ ಕೇಳಿಕೊಂಡಾಗ ಅಂತಹ ವಿಷಯಗಳ ಕುರಿತು ದೇವರ ವಾಕ್ಯವು ಹೇಳುವುದನ್ನು ಧೈರ್ಯದಿಂದ ಮತ್ತು ನಾಚಿಕೆಯಿಲ್ಲದೆ ಘೋಷಿಸಬೇಕು.

## ಸತ್ಯವನ್ನು ಎತ್ತಿಹಿಡಿಯುವಂತಹ ಜನರನ್ನು ಎಬ್ಬಿಸಬೇಕು

ಯೋಹಾನ 17:15-19

**ಇವರನ್ನು ಲೋಕದೊಳಗಿಂದ ತೆಗೆದುಕೊಂಡು ಹೋಗಬೇಕೆಂದು ನಾನು ಕೇಳಿಕೊಳ್ಳುವುದಿಲ್ಲ, ಕೆಡುಕನಿಂದ ತಪ್ಪಿಸಿ ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರು ಲೋಕದವರಲ್ಲ ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು ನಿನ್ನ ವಾಕ್ಯವೇ ಸತ್ಯವು ನೀನು ನನ್ನನ್ನು ಲೋಕಕ್ಕೆ ಕಳುಹಿಸಿಕೊಟ್ಟಂತೆ ನಾನೂ ಇವರನ್ನು ಲೋಕಕ್ಕೆ ಕಳುಹಿಸಿಕೊಟ್ಟೆನು ಇವರು ನಿಜವಾಗಿ ಪ್ರತಿಷ್ಠಿತರಾಗಬೇಕೆಂದು ಇವರಿಗೋಸ್ಕರ ನಾನು ನನ್ನನ್ನು ಪ್ರತಿಷ್ಠೆಪಡಿಸಿಕೊಳ್ಳುತ್ತೇನೆ**

ಕರ್ತನಾದ ಯೇಸುವು, ಆತನ ಶಿಷ್ಯರುಗಳಿಗಾಗಿ ಮತ್ತು ಆತನ ಮೇಲೆ ನಂಬಿಕೆಯಿಟ್ಟಂತಹ ನಮಗೂ ಆತನು ಪ್ರಾರ್ಥಿಸುವಾಗ, ನಾವು ಈ ಲೋಕದವರಲ್ಲ ಎಂಬುದನ್ನು ಅಂಗೀಕರಿಸುವಾಗ ಹೇಳುತ್ತಾನೆ ಮತ್ತು ಆದ್ದಾಗ್ಯೂ ನಾವು ಲೋಕಕ್ಕೆ ಕಳುಹಿಸಲ್ಪಟ್ಟಿದ್ದೇವೆ. ''ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆಪಡಿಸು ನಿನ್ನ ವಾಕ್ಯವೇ ಸತ್ಯವು'' ಎಂಬುದಾಗಿ ಕರ್ತನಾದ ಯೇಸುವು ಹೀಗೆ ಪ್ರಾರ್ಥಿಸಿದನು.

ಲೋಕಕ್ಕೆ ಕಳುಹಿಸಲ್ಪಡುವಂತಹ ದೇವ ಜನರುಗಳನ್ನು ನಾವು ಎಬ್ಬಿಸುತ್ತಿದ್ದರೆ ಮತ್ತು ಆದ್ದಾಗ್ಯೂ ಲೋಕದವಲ್ಲದ್ದಾದರೆ, ದೇವರ ವಾಕ್ಯದ ಸತ್ಯದಲ್ಲಿ ಮೊದಲು ಅವರು ಪ್ರತಿಷ್ಠೆಗೊಳ್ಳಬೇಕು. ಸಭಾಪಾಲಕರುಗಳಾಗಿ ನಾವು ಪ್ರಸಂಗ ಮಾಡಬೇಕು, ಬೋಧಿಸಬೇಕು, ಮತ್ತು ಸಾರ ಗುಂದದಿರುವುದನ್ನು ಸಾರಬೇಕು, ರಾಜಿಯಾಗದ, ಸ್ಪಷ್ಟ ಮತ್ತು ಸಂಪೂರ್ಣ ದೇವರ ವಾಕ್ಯವನ್ನು ನಿರಂತರವಾಗಿ ವಾರದ ನಂತರ ವಾರ ಸಾರುತ್ತಿರಬೇಕು. ದೇವರ ವಾಕ್ಯವು ಜನರನ್ನು ಪವಿತ್ರೀಕರಿಸುತ್ತದೆ ಮತ್ತು ಪ್ರಪಂಚದ ಭಾಗಗಳಾಗಿಲ್ಲದಿದ್ದಾಗ್ಯೂ ಲೋಕಕ್ಕೆಲ್ಲಾ ಹೋಗಲು ಅವರಿಗೆ ಅಧಿಕಾರ ಕೊಡುತ್ತದೆ ಅವರುಗಳು ಸತ್ಯವನ್ನು, ಅದು ನಿಜಕ್ಕೂ ಮುಖ್ಯವಾಗಿರುವಂತಹ ಸಮಾಜ/ ಪ್ರಪಂಚದಲ್ಲಿ ಎತ್ತಿಹಿಡಿಯುತ್ತಾರೆ.

ಸಭಾಪಾಲಕರುಗಳಾಗಿ ನಮ್ಮ ಪ್ರಸಂಗ ಮತ್ತು ಬೋಧನೆಯು, ದೇವ ಜನರು ಲೋಕದಲ್ಲಿ ಸತ್ಯವನ್ನು ಎತ್ತಿ ಹಿಡಿಯಲು ಅಧಿಕಾರಕೊಡುತ್ತದೆಯಾ, ತರಬೇತಿಗೊಳಿಸುತ್ತದೆಯಾ ಸ್ಪೂರ್ತಿಗೊಳಿಸುತ್ತಿದೆಯಾ ಎಂಬುದನ್ನು ನಾವು ಖಚಿತಪಡಿಸಿಕೊಳ್ಳಬೇಕು.

## ರಾಜಿಮಾಡಿಕೊಳ್ಳುವ ಬಗ್ಗೆ ಜಾಗರೂಕರಾಗಿರಿ

ಯೋಹಾನ 17:16

**ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರು ಲೋಕದವರಲ್ಲ.**

ಮತ್ತಾಯ 5:13

**ನೀವು ಭೂಮಿಗೆ ಉಪ್ಪಾಗಿದ್ದಿರಿ ಉಪ್ಪು ಸಪ್ಪಗಾದರೆ ಅದಕ್ಕೆ ಇನ್ನಾತರಿಂದ ಉಪ್ಪಿನ ರುಚಿ ಬಂದೀತು? ಜನರು ಅದನ್ನು ಹೊರಗೆ ಹಾಕಿ ತುಳಿಯುವದಕ್ಕೆ ಅದು ಯೋಗ್ಯವೇ ಹೊರತು ಮತ್ತಾವ ಕೆಲಸಕ್ಕೂ ಬಾರದು.**

ಸಭಾಪಾಲಕರು ಮತ್ತು ನಾಯಕರುಗಳಾಗಿ, ನಾವು ಮೃದುವಾಗಿರಲು ಸೊಗಸಾಗಿರಲು ಒತ್ತಡಗಳನ್ನು ಎದುರಿಸುತ್ತಾರೆ ಮತ್ತು ನಾವು ''ಬಂಡೆ ಮತ್ತು ದೋಣಿ''ಯಾಗಿರುವುದನ್ನು ವಿಶೇಷವಾಗಿ ಜನರು ಇಷ್ಟಪಡದೇ ಇರುವ ಕ್ಷೇತ್ರಗಳಿಗೆ ಬರುವಾಗ ದೇವರ ವಾಕ್ಯದ ಸತ್ಯವನ್ನು ಹೇಳುವಲ್ಲಿ ತುಂಬಾ ಬಲಯುತವಾಗಿರಬಾರದು. ನಾವು ರಾಜಿ ಮಾಡಿಕೊಳ್ಳುವುದರ ಬಗ್ಗೆ ಬಹಳ ಜಾಗರೂಕರಾಗಿರಬೇಕು. ನಾವು ಈ ಲೋಕದವರಲ್ಲ ಮತ್ತು ಸತ್ಯವನ್ನು ಬಿಟ್ಟುಕೊಟ್ಟು ಈ ಲೋಕದೊಡನೆ ಸರಿಹೊಂದಿಸಿಕೊಳ್ಳಲೂ ಸಾಧ್ಯವಿಲ್ಲ ನಾವು ಸತ್ಯದ ಮೇಲೆ ರಾಜಿಮಾಡಿಕೊಂಡರೆ ರುಚಿಯನ್ನು ಕಳೆದುಕೊಂಡಂತಹ ಉಪ್ಪಾಗಿ ನಾವು ಕಂಡುಬರುತ್ತೇವೆ. ನಾವು ವ್ಯತ್ಯಾಸವನ್ನುಂಟುಮಾಡುವುದನ್ನು ನಿಲ್ಲಿಸುತ್ತೇವೆ ಸಭಾಪಾಲಕರುಗಳಾಗಿ ನಾವು ಬೋಧಿಸುವ ಮತ್ತು ಪ್ರಸಂಗಿಸುವುದರಲ್ಲಿ ರಾಜಿ ಮಾಡಿಕೊಂಡರೆ, ಆಮೇಲೆ ನಾವುಗಳು ಎಲ್ಲಾ ಸಂಭವನೀಯತೆಗಳಲ್ಲಿ, ನಮ್ಮ ಸಭಿಕರಲ್ಲಿನ ಜನರು ಅದೇ ರೀತಿಯಾಗಿ ಮಾಡುತ್ತಾರೆ.

## ಪ್ರಸ್ತುತ ಸಮಸ್ಯೆಗಳಿಗೆ ಸತ್ಯವೇದದ ಪ್ರತಿಕ್ರಿಯೆ ಒದಗಿಸಬೇಕು

1 ಕೊರಿಂಥದವರಿಗೆ 14:8

**ತುತ್ತೂರಿಯು ಗೊತ್ತಿಲ್ಲದ ಶಬ್ದವನ್ನು ಕೊಟ್ಟರೆ ಯಾರು ಯುದ್ದಕ್ಕೆ ಸಿದ್ಧ ಮಾಡಿಕೊಳ್ಳುವರು?**

ಜನರು ಇಂದಿನ ದಿನಗಳಲ್ಲಿ ಅವರು ಎದುರಿಸುತ್ತಿರುವ ನಿರ್ಣಾಯಕ ಸಮಸ್ಯೆಗಳ ಬಗ್ಗೆ ದೇವರ ವಾಕ್ಯ ಏನು ಹೇಳುತ್ತದೆ ಎಂಬುದನ್ನು ತಿಳಿಯಲು ಅಪೇಕ್ಷಿಸುತ್ತಾರೆ ಇಂದಿನ ಸಮಸ್ಯೆಗಳಿಗೆ ದೇವರ ಸತ್ಯವನ್ನು ನಾವು ಅನ್ವಯಿಸಬೇಕು. ಇಂದಿನ ಸವಾಲುಗಳಿಗೆ ದೇವರ ವಾಕ್ಯದಿಂದ ಉತ್ತರಗಳನ್ನು ಒದಗಿಸಬೇಕು. ಇಂದಿನ ದಿನ ಮತ್ತು ಯುಗಕ್ಕೆ ದೇವರ ನಿತ್ಯತ್ವದ ಸತ್ಯವನ್ನು ಅವಶ್ಯಕವಾಗಿ ಮಾಡಬೇಕು. ನಮ್ಮ ಉತ್ತರವು ಸೂಕ್ತವಾಗಿರಬೇಕು. ನಿಖರವಾಗಿರಬೇಕು ಮತ್ತು ಒಂದು ''ಅನಿಶ್ಚಿತ ಶಬ್ದ'' ಆಗಿರಬಾರದು ಇಲ್ಲದಿದ್ದರೆ ನಾವು ಸತ್ಯವನ್ನು ಹೊಂದಿರುತ್ತೇವೆ, ಪ್ರಪಂಚದ ಮೇಲೆ ಪ್ರಭಾವ ಬೀರಲು ಆಗುವುದಿಲ್ಲ.

## ಸ್ಥಳೀಯ ಸಭೆಯು ಇದನ್ನು ಕಾರ್ಯರೂಪಕ್ಕೆ ತರಲು ಇರುವ ಪ್ರಯೋಗಿಕ ಮಾರ್ಗಗಳು

- ಪ್ರವಚನ ಪೀಠದಿಂದ ಮಾಡುವ ಪ್ರಸಂಗಗಳು ಮತ್ತು ಬೋಧನೆಗಳು ಸದ್ವುಳ್ಳವು, ಬಲವಾದ ಮತ್ತು ರಾಜಿ ಮಾಡಿಕೊಳ್ಳದವುಗಳಾಗಿರಬೇಕೆಂಬುದನ್ನು ಖಚಿತಪಡಿಸಿಕೊಳ್ಳಬೇಕು.
- ನಿಜ ಜೀವನದ ಸಮಸ್ಯೆಗಳು, ತೊಂದರೆಗಳು ಮತ್ತು ಸವಾಲುಗಳನ್ನು ದೇವರ ವಾಕ್ಯದೊಡನೆ ಪ್ರತಿಬಿಂಬಿಸಬೇಕು. ಸತ್ಯವನ್ನು ಪ್ರೀತಿಯಿಂದ ಹೇಳಿರಿ.
- ಸತ್ಯವು ಅದು ನಿಜಕ್ಕೂ ಮುಖ್ಯವಾಗಿರುವಂತಹ ಪ್ರಪಂಚದಲ್ಲಿ ವಿಶ್ವಾಸಿಗಳು ಸತ್ಯದಲ್ಲಿ ಜೀವಿಸಲು ಪ್ರೋತ್ಸಾಹಿಸಬೇಕು ಮತ್ತು ಅಧಿಕಾರ ಕೊಡಬೇಕು.
- ಲೋಕಕ್ಕೆ ದೇವರ ಸತ್ಯವನ್ನು ಪ್ರಸ್ತುತ ಪಡುಸುವದಕ್ಕಾಗಿ ಅರ್ಥಗರ್ಭಿತವಾದ ಮಾರ್ಗಗಳಲ್ಲಿ ವಿಶ್ವಾಸಿಗಳು ಸಮಾಜದಲ್ಲಿ ತೊಡಗಿಕೊಳ್ಳಲು ಪ್ರೋತ್ಸಾಹಿಸಬೇಕು.
- ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ವೇದಿಕೆಗಳಲ್ಲಿ ದೇವರ ರಾಜ್ಯದ - ಮೌಲ್ಯಗಳು ಮತ್ತು ದೇವರ ರಾಜ್ಯದ ದೃಷ್ಟಿಕೋನಗಳನ್ನು ತರುವುದಕ್ಕಾಗಿ ವಿಶ್ವಾಸಿಗಳು ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವುದಕ್ಕಾಗಿ ಪ್ರೋತ್ಸಾಹಿಸಬೇಕು.

## ಸಿದ್ಧವಾಗಿರಲು ಸವಾಲುಗಳು

- ಸಂಕೀರ್ಣವಾದ ಸಮಸ್ಯೆಗಳು ಉಂಟಾಗಬಹುದು ಅದು ಬಹಳ ಗಂಭೀರವಾದ ದೇವರ ವಾಕ್ಯದ ಅಧ್ಯಯನವನ್ನು ಪಡೆಯುತ್ತದೆ ಮತ್ತು ಪರಲೋಕದಿಂದ ಕೇಳುವುದು ನಿಖರವಾಗಿ ದೇವರ ವಾಕ್ಯದ ಸಂಪರ್ಕವಾಗಿರುತ್ತದೆ. (ಉದಾಹರಣೆಗೆ

ಭ್ರಷ್ಟಾಚಾರ, ಸಲಿಂಗಕಾಮ ವಿವಾಹ ವಿಚ್ಛೇದನದ ವಿವಿಧ ಸನ್ನಿವೇಶಗಳು, ದಯಾಮರಣ, ಗರ್ಭಪಾತ, ಸಾರ್ವತ್ರಿಕ ರಕ್ಷಣೆ ಮುಂತಾದವುಗಳು).

- ಜನಪ್ರಿಯ ಅಭಿಪ್ರಾಯಗಳು ಜನರ ಮನಸ್ಸುಗಳನ್ನು ಹಿಡಿಯಬಹುದು ಮತ್ತು ಆದ್ದರಿಂದ ವಿಶ್ವಾಸಿಗಳು ಕೆಲವು ನಿರ್ದಿಷ್ಟ ಸಮಸ್ಯೆಗಳಿಗೆ ದೇವರ ವಾಕ್ಯವು ಏನನ್ನು ಹೇಳುತ್ತದೆ ಎಂಬುದನ್ನು ಅನ್ವಯಿಸಲು ಮತ್ತು ಅಂಗೀಕರಿಸಲು ಕಷ್ಟಕರವಾಗಬಹುದು.
- ರಾಜಿಮಾಡಿಕೊಳ್ಳುವಂತಹ ಕ್ರೈಸ್ತ ನಾಯಕರುಗಳ ಧ್ವನಿಯು ಇತರರಿಗಿಂತ ಜೋರಾಗಿರುತ್ತದೆ ಮತ್ತು ಅವರ ರಾಜಿ ಮಾಡಿಕೊಂಡತಹ ಸಂದೇಶವು ಉತ್ತಮವಾಗಿ ಅಂಗೀಕರಿಸಲ್ಪಡುತ್ತದೆ. ಅನೇಕ ವಿಶ್ವಾಸಿಗಳನ್ನು ದಾರಿತಪ್ಪಿಸುತ್ತದೆ. ಸಭಾಪಾಲಕರುಗಳಾಗಿ ನಾವು ದೇವರ ವಾಕ್ಯದ ಸತ್ಯದೊಡನೆ ಸ್ಥಿರವಾಗಿ ನಿಂತುಕೊಳ್ಳಬೇಕು. (ಉದಾಹರಣೆಗೆ: ದೇವರ ಸೇವಕರುಗಳಾಗಿ. ಕ್ರೈಸ್ತ ಕೆಲವು ವಿಭಾಗಗಳಲ್ಲಿ ಸಲಿಂಗಕಾಮವನ್ನು ಅಧಿಕೃತವಾಗಿ ನೇಮಿಸುವುದು ಇದನ್ನು ಒಪ್ಪಿಕೊಳ್ಳಲಾಗುವುದಿಲ್ಲ).

## ಪರಿಗಣಿಸಲು ಪ್ರಶ್ನೆಗಳು

ನಿಮ್ಮ ಸಭೆಯ ವಿಶ್ವಾಸಿಗಳು ಪ್ರಸಕ್ತವಾಗಿ ಪ್ರಯಾಸ ಪಡುತ್ತಿರುವಂತಹ ಒಂದು ಅಥವಾ ಎರಡು ಗಂಭೀರವಾದ ಸಮಸ್ಯೆಗಳು ಯಾವುವು?

ನಿಮ್ಮ ಸಭೆಯ ಸಭಿಕರ ಒಂದು ಭಾಗವು (ಉದಾಹರಣೆಗೆ ಯೌವ್ವನಸ್ಥರು) ಕೆಲವು ನಿರ್ದಿಷ್ಟ ಸಮಸ್ಯೆಗಳ ಪ್ರಶ್ನೆಯಲ್ಲಿ ಹೋರಾಡುತ್ತಿದ್ದರೆ ಆ ಒಂದು ಗುಂಪನ್ನು ಪ್ರತ್ಯೇಕವಾಗಿ ಕರೆದು ಪ್ರತಿಬಿಂಬಿಸುವುದು ಒಳ್ಳೇಯದು ಅಥವಾ ಸಂಪೂರ್ಣ ಸಭಿಕರೊಂದಿಗೆ ಸೇರಿಕೊಂಡು ನೀವು ಅದನ್ನು ಮಾಡಬೇಕಾ?

## 11

# ಸ್ಥಳೀಯ ಸಭೆ-ಒಂದು ಸೈನ್ಯವಾಗಿದೆ

### ಸಭೆಯು ಸೈನ್ಯವಾಗಿದೆ

ಹೊಸ ಒಡಂಬಡಿಕೆಯಲ್ಲಿ, ಸಭೆಯು ಮತ್ತು ವೈಯಕ್ತಿಕ ವಿಶ್ವಾಸಿ ಇಬ್ಬರು ಸೈನ್ಯದ ಪದಗಳಿಂದ ಪ್ರತಿಬಿಂಬಿಸಲಾಗಿದೆ. ಇದು ನಮಗೆ ಆತ್ಮಿಕ ಪ್ರಜ್ಞೆಯಲ್ಲಿ, ಸಭೆಯು ಸೈನ್ಯವಾಗಿದೆ. ಆತ್ಮಿಕ ಹೋರಾಟದಲ್ಲಿ ತೊಡಗಿಸಿಕೊಂಡಿರುವ ಒಂದು ಯುದ್ಧನಿರತ ಪಡೆಯಾಗಿದೆ ಎಂಬುದನ್ನು ತಿಳಿಸುತ್ತದೆ. ಪರಲೋಕದಿಂದ ಕಟ್ಟಲು ಮತ್ತು ಬಿಚ್ಚಲು ಅಧಿಕಾರವು ಕೊಡಲ್ಪಟ್ಟಿದೆ ಮತ್ತು ಕತ್ತಲೆಯ ಶಕ್ತಿಗಳ ವಿರುದ್ಧವಾಗಿ ಹೋರಾಡುವುದನ್ನು ಮತ್ತಾಯ 16:15-19ರಲ್ಲಿ ಕರ್ತನಾದ ಯೇಸುವು ವಿವರಿಸಿದ್ದಾನೆ ಎಂಬುದನ್ನು ನಾವು ಅಧ್ಯಾಯ 1 ರಲ್ಲಿ ವಿವರಿಸಿದ್ದೇವೆ.

ಅಪೊಸ್ತಲನಾದ ಪೌಲನು ತನ್ನ ಪತ್ರಿಕೆಗಳಲ್ಲಿ ವಿಶ್ವಾಸಿಗಳು ಆತ್ಮಿಕ ಹೋರಾಟದಲ್ಲಿ ಭಾಗಿಯಾಗಿದ್ದಾರೆ ಎಂಬುದನ್ನು ಚಿತ್ರಿಸುವ ಬಹಳಷ್ಟು ಸೈನ್ಯದ ಚಿತ್ರಗಳನ್ನು ಉಪಯೋಗಿಸಿದ್ದಾನೆ ಎಫೆಸದವರಿಗೆ 6 ರಲ್ಲಿ ದುಷ್ಟನ ಆಧ್ಯಾತ್ಮಿಕ ಪಡೆಗಳನ್ನು ಎದುರಿಸಲು ಆತ್ಮಿಕ ರಕ್ಷಾಕವಚವನ್ನು ನಾವು ಧರಿಸಿಕೊಂಡಿರಬೇಕೆಂಬುದರ ಬಗ್ಗೆ ಪೂರ್ಣ ವಿವರಣೆಯನ್ನು ಪೌಲನು ನೀಡುತ್ತಾನೆ ವಿಶ್ವಾಸಿಗಳ ಜೀವಿತವು ಸೈನ್ಯದ ಪದಗಳಲ್ಲಿ ವಿವರಿಸಿದ್ದಂತಹ ಕೆಲವು ಇತರ ಉಲ್ಲೇಖಗಳು ಇಲ್ಲಿವೆ

ಫಿಲಿಪ್ಪಿಯವರಿಗೆ 2:25

**ನನ್ನ ಕೊರತೆಯನ್ನು ನೀಗುವುದಕ್ಕೆ ನೀವು ಕಳುಹಿಸಿದಂಥ, ನನ್ನ ಸಹೋದರನೂ ಜೊತೆ ಕೆಲಸದವನೂ ಸಹಭಟನೂ ಆಗಿರುವಂಥ ಎಪಫ್ರೊದೀತನನ್ನು ನಿಮ್ಮ ಬಳಿಗೆ ಕಳುಹಿಸುವದು ಅವಶ್ಯವೆಂದು ನೆನಸಿದ್ದೇನೆ.**

1 ತಿಮೊಥೆಯನಿಗೆ 1:18

**ಮಗನಾದ ತಿಮೊಥೆಯನೇ ನಿನ್ನ ವಿಷಯದಲ್ಲಿ ಮುಂಚೆ ಉಂಟಾದ ಪ್ರವಾದನೆಗಳನ್ನು ನಾನು ನೆನಸಿ ನೀವು ಅವುಗಳಿಂದ ಧೈರ್ಯಗೊಂಡು ಕ್ರೈಸ್ತರ ದಿವ್ಯಯುದ್ಧವನ್ನು ನಡಿಸಬೇಕೆಂದು ನಿನಗೆ ಆಜ್ಞಾಪನೆ ಮಾಡುತ್ತೇನೆ.**

1 ತಿಮೊಥೆಯನಿಗೆ 6:12

**ಕ್ರಿಸ್ತನಂಬಿಕೆಯುಳ್ಳವರು ಮಾಡತಕ್ಕ ಶ್ರೇಷ್ಟ ಹೋರಾಟವನ್ನು ಮಾಡು ನಿತ್ಯಜೀವವನ್ನು ಹಿಡಿದುಕೋ ಅದಕ್ಕಾಗಿ ದೇವರು ನಿನ್ನನ್ನು ಕರೆದನು ಮತ್ತು ನೀನು ಅನೇಕ ಸಾಕ್ಷಿಗಳ ಮುಂದೆ ಒಳ್ಳೇ ಪ್ರತಿಜ್ಞೆಯನ್ನು ಮಾಡಿದಿಯಲ್ಲಾ.**

2 ತಿಮೊಥೆಯನಿಗೆ 2:3,4

**ಕ್ರಿಸ್ತ ಯೇಸುವಿನ ಒಳ್ಳೇ ಸೈನಿಕನಂತೆ ನನ್ನೊಂದಿಗೆ ಶ್ರಮೆಯನ್ನನ್ನುಭವಿಸು ಯುದ್ಧಕ್ಕೆ ಹೋಗುವ ಸೈನಿಕನು ಲೋಕ ವ್ಯವಹಾರದಲ್ಲಿ ಸಿಕ್ಕಿಕೊಳ್ಳದೆ ತನ್ನನ್ನು ಸೈನ್ಯದಲ್ಲಿ ಸೇರಿಸಿಕೊಂಡವನನ್ನು ಮೆಚ್ಚಿಸುವುದಕ್ಕೆ ಪ್ರಯಾಸಪಡುತ್ತಿರುವನಲ್ಲವೇ.**

2 ತಿಮೊಥೆಯನಿಗೆ 4:7

**ಶ್ರೇಷ್ಠ ಹೋರಾಟವನ್ನು ಮಾಡಿದ್ದೇನೆ ನನ್ನ ಓಟವನ್ನು ಕಡೆಗಾಣಿಸಿದ್ದೇನೆ. ಕ್ರಿಸ್ತ ನಂಬಿಕೆಯನ್ನು ಕಾಪಾಡಿಕೊಂಡಿದ್ದೇನೆ.**

## ಆತ್ಮೀಕ ಯುದ್ಧನಿರತೆಯ ಒಂದು ಪ್ರಜ್ಞೆ

ವೈಯಕ್ತಿಕ ವಿಶ್ವಾಸಿಗಳು ಮತ್ತು ಸ್ಥಳೀಯ ಸಭೆಯ ದೇಹವಾಗಿ ಆತ್ಮೀಕ ಯುದ್ಧ ನಿರತತೆಯ ಪ್ರಜ್ಞೆಯೊಡನೆ ಜೀವಿಸಬೇಕು ನಾವುಗಳು ಆತ್ಮೀಕ ಹೋರಾಟದ ಮಧ್ಯದಲ್ಲಿ ಇದ್ದೇವೆ ಆತ್ಮೀಕ ಹೋರಾಟದಲ್ಲಿ ನಾವುಗಳು ಯಾವ ರೀತಿ ತೊಡಗಿಸಿಕೊಳ್ಳಬೇಕು ಮತ್ತು ಕಲಿಸಲ್ಪಡಬೇಕು.

ವೈಯಕ್ತಿಕವಾದ ಹಂತದಲ್ಲಿ, ವಿಶ್ವಾಸಿಗಳು ದುರಾತ್ಮನನ್ನು ಯಾವ ರೀತಿ ಎದುರಿಸಬೇಕು ಎಂಬುದನ್ನು ತಿಳಿಯುವುದು ಅಗತ್ಯವಾಗಿದೆ. ಮತ್ತು ಶೋಧನೆಗಳಿಂದ ಹೊರಬರಬೇಕು ಮತ್ತು ಅವರ ಜೀವಿತಗಳಲ್ಲಿ ದುರಾತ್ಮನಿಗೆ ಯಾವುದೇ ರೀತಿಯಲ್ಲಿ ಪ್ರವೇಶ ನೀಡಬಾರದು. ದುರಾತ್ಮನು ನಮ್ಮ ಮೇಲೆ ಎಸೆಯುವಂತಹ ಉರಿಯುತ್ತಿರುವ ಭರ್ಜಿಯನ್ನು ಆರಿಸಲು ನಂಬಿಕೆಯ ಗುರಾಣಿಯನ್ನು ಉಪಯೋಗಿಸಬೇಕು.

1 ಪೇತ್ರನು 5:8,9

**ಸ್ವಸ್ಥ ಚಿತ್ತರಾಗಿರಿ, ಎಚ್ಚರವಾಗಿರಿ, ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ. ನೀವು ನಂಬಿಕೆಯಲ್ಲಿ ದೃಢವಾಗಿದ್ದು ಅವನನ್ನು ಎದುರಿಸಿರಿ ಲೋಕದಲ್ಲಿರುವ ನಿಮ್ಮ ಸಹೋದರರೂ ಅಂಥ ಬಾಧೆಗಳನ್ನೇ ಅನುಭವಿಸುತ್ತಿದ್ದಾರೆಂದು ನಿಮಗೆ ತಿಳಿದದೆಯಲ್ಲಾ.**

ಎಫೆಸದವರಿಗೆ 4:27

**ಸೈತಾನನಿಗೆ ಅವಕಾಶಕೊಡಬೇಡಿರಿ**

ಸ್ಥಳೀಯ ಸಭೆಯ ದೇಹವಾಗಿ ನಮ್ಮಲ್ಲಿ ದುರಾತ್ಮನು ವಿಭಾಗಗಳು ಮತ್ತು ಜಗಳಗಳನ್ನು ಉಂಟುಮಾಡುವ ಮೂಲಕವಾಗಿ ಒಳನುಸುಳಲೂ ಪ್ರಯತ್ನಿಸುತ್ತಾನೆ ಮತ್ತು ಇತರ ತೊಂದರೆಗಳ ಪರಿಸ್ಥಿತಿಗಳ ಪ್ರಯೋಜನ ಪಡೆದುಕೊಳ್ಳುತ್ತಾನೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು ನಾವು ಒಬ್ಬರಿಗೊಬ್ಬರು ಜಗಳವಾಡುವುದನ್ನು ನಿಲ್ಲಿಸಬೇಕು ಮತ್ತು ನಿಜವಾದ ವೈರಿಯ ಮೇಲೆ ದೃಷ್ಟಿಯಿಡಬೇಕು ''ನಾವು ಹೋರಾಡುವದು ಮನುಷ್ಯ ಮಾತ್ರದವರ ಸಂಗಡವಲ್ಲ ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶ ಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ'' (ಎಫೆಸದವರಿಗೆ 6:12) ದುರಾತ್ಮನ ಯೋಜನೆಗಳ ಬಗ್ಗೆ ನಾವುಗಳು ಅರಿಯದವರಲ್ಲವಲ್ಲಾ ''ಸೈತಾನನು ನಮ್ಮನ್ನು ವಂಚಿಸಿ ನಷ್ಟ ಪಡಿಸಬಾರದು ಅವನ ಯೋಚನೆಗಳನ್ನು ನಾವು ಅರಿಯದವರಲ್ಲವಲ್ಲಾ'' (2 ಕೊರಿಂಥದವರಿಗೆ 2:11) ಸೈತಾನನು ನಾಯಕತ್ವದಲ್ಲಿ ಇರುವಂತಹ ಜನರನ್ನು ಸಹ ಕೆಳಗೆ ಬೀಳಿಸಲೂ ಪ್ರಯತ್ನಿಸಬಹುದು. ಕುರುಬನನ್ನು ಹೊಡೆದರೆ, ಕುರಿಗಳು ಚದುರಿ ಹೊಗುತ್ತವೆ ಎಂಬುದು ದುರಾತ್ಮನಿಗೆ ಗೊತ್ತುಂಟು (ಜೆಕರ್ಯ 13:7).

ಸ್ಥಳೀಯ ಒಂದು ಸಭೆಯಾಗಿ, ಆತ್ಮಗಳನ್ನು ಗೆಲ್ಲುವಂತಹ ನಮ್ಮ ಸೇವೆಯು ಮತ್ತು ಶಿಷ್ಯರನ್ನಾಗಿ ಮಾಡುವಂತಹ ಕಾರ್ಯವು ಆತ್ಮಿಕ ಯುದ್ಧವನ್ನು ಒಳಗೊಂಡಿರುತ್ತದೆ. ಆತ್ಮಗಳಿಗಾಗಿರುವ ಕದನವು ಒಂದು ಆತ್ಮಿಕ ಕದನವಾಗಿದೆ ನಾವು ಯಾವ ರೀತಿ ತೊಡಗಿಸಿಕೊಳ್ಳಬೇಕೆಂಬುದನ್ನು ನಾವು ಕಲಿಯಬೇಕು ಮತ್ತು ದೇವರು ನಮಗೆ ಕೊಟ್ಟಂತಹ ಆಯುಧಗಳನ್ನು ಉಪಯೋಗಿಸುವುದರಿಂದ ಕತ್ತಲೆಯ ಕಾರ್ಯಗಳನ್ನು ಉರುಳಿಸಬಹುದು ಆದ್ದರಿಂದ ಜನರು ದೇವರ ಅದ್ಭುತ ಬೆಳಕಿನ ಕಡೆಗೆ ಬರುವುದನ್ನು ನಾವು ನೋಡಬಹುದು.

2 ಕೊರಿಂಥದವರಿಗೆ 4:3,4

**ನಾವು ಸಾರುವ ಸುವಾರ್ತೆಯು ಕೆಲವರಿಗೆ ಮರೆಯಾಗಿರುವದಾದರೆ ನಾಶನ ಮಾರ್ಗದಲ್ಲಿರುವವರಿಗೆ ಮರೆಯಾಗಿರುವುದು ಇವರಲ್ಲಿ ದೇವರ ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕು ಮಾಡಿದನು.**

ಅಪೊಸ್ತಲರ ಕೃತ್ಯಗಳು 26:17,18

**ನಾನು ನಿನ್ನನ್ನು ಇಸ್ರಾಯೇಲ್ ಜನರ ಕೈಯೊಳಗಿಂದಲೂ ಅನ್ಯಜನರ ಕೈಯೊಳಗಿಂದಲೂ ಬಿಡಿಸುವೆನು ಅವರು ಕತ್ತಲೆಯಿಂದ ಬೆಳಕಿಗೂ ಸೈತಾನನ ಅಧಿಕಾರದಿಂದ ದೇವರ ಕಡೆಗೂ ತಿರುಗಿಕೊಂಡು ನನ್ನಲ್ಲಿ ನಂಬಿಕೆಯಿಡುವದರಿಂದ ಪಾಪಪರಿಹಾರವನ್ನೂ ಪವಿತ್ರರಾದವರಲ್ಲಿ ಹಕ್ಕನ್ನೂ ಹೊಂದುವಂತೆ ಅವರ ಕಣ್ಣುಗಳನ್ನು ತೆರೆಯಬೇಕೆಂದು ಅವರ ಬಳಿಗೆ ನಾನು ನಿನ್ನನ್ನು ಕಳುಹಿಸುತ್ತೇನೆ ಅಂದನು.**

## ವಿಶ್ವಾಸಿಗಳು ಆತ್ಮಿಕ ಯುದ್ಧದಲ್ಲಿ ತರಬೇತಿಯನ್ನು ಪಡೆದಿದ್ದಾರೆ

ಸ್ಥಳೀಯ ಸಭೆಯ ಆತ್ಮಿಕ ಹೋರಾಟದಲ್ಲಿ ತೊಡಗಿಸಿಕೊಂಡಿರುವ ಸೈನಿಕರುಗಳ ಒಂದು ಸೈನ್ಯವಾಗಿದೆ. ಆದುದರಿಂದ ಸ್ಥಳೀಯ ಸಭೆಯು ಸ್ವಯಂ ಸಿದ್ಧತಾ ಶಿಬಿರ ಎಂಬುದಾಗಿ ಅರ್ಥಮಾಡಿಕೊಳ್ಳಬೇಕು, ತರಬೇತಿಗೊಳಿಸುವ ಮತ್ತು ಆತ್ಮಿಕ ತರಬೇತಿ ಕೇಂದ್ರವಾಗಿದೆ. ಪೌಲನು ತನ್ನ ಎಫೆಸದವರಿಗೆ ಪತ್ರಿಕೆಯಲ್ಲಿ ವಿಶ್ವಾಸಿಗಳು ವೈರಿಗೆ ವಿರುದ್ಧವಾಗಿ ಬಲವಾಗಿ ನಿಲ್ಲಬೇಕೆಂಬುದಾಗಿ ಪ್ರೋತ್ಸಾಹಿಸಲು ಬರೆಯುತ್ತಾನೆ ಮತ್ತು ಅವರು ಉಪಯೋಗಿಸಬೇಕಾದ ಆತ್ಮಿಕ ಆಯುಧಗಳ ಬಗ್ಗೆ ಅವರಿಗೆ ಬೋಧಿಸುತ್ತಾನೆ ''ಕಡೇ ಮಾತೇನೆಂದರೆ, ನೀವು ಎದುರಿಸಿ ನಿಲ್ಲುವದಕ್ಕೆ ಶಕ್ತರಾಗುವಂತೆ ದೇವರು ದಯಪಾಲಿಸುವ ಸರ್ವಾಯುಧಗಳನ್ನು ಧರಿಸಿಕೊಳ್ಳಿರಿ (ಎಫೆಸದವರಿಗೆ 6:10,11).

## ಸಶಸ್ತ್ರ ಮತ್ತು ಅಪಾಯಕಾರಿ

ದೇವರು ಪ್ರಬಲವಾದ ಆತ್ಮಿಕ ಸರ್ವಾಯುಧಗಳನುಸಿ ನಮಗೆ ಕೊಟ್ಟಿದ್ದಾನೆ ವಿಶ್ವಾಸಿಗಳಾಗಿ ನಾವುಗಳು ಸಶಸ್ತ್ರ ಮತ್ತು ವೈರಿಗೆ ಅಪಾಯಕಾರಿಗಳಾಗಿದ್ದೇವೆ ದೇವರು ನಮಗೆ ಕೊಟ್ಟಂತಹ ಆಯುಧಗಳನ್ನು ಉಪಯೋಗಿಸುವುದು ಹೇಗೆ ಎಂಬುದನ್ನು ಒದಗಿಸಲಾಗಿದೆ.

2 ಕೊರಿಂಥದವರಿಗೆ 10:3-5

**ನಾವು ಲೋಕದಲ್ಲಿದ್ದರೂ ಲೋಕಾನುಸಾರವಾಗಿ ಯುದ್ಧ ಮಾಡುವವರಲ್ಲ ನಾವು ಉಪಯೋಗಿಸುವ ಆಯುಧಗಳು ಲೋಕಸಂಬಂಧವಾದ ಆಯುಧಗಳಲ್ಲ. ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿಹಾಕುವಂಥವುಗಳಾಗಿವೆ. ನಾವು ವಿತರ್ಕಗಳನ್ನೂ ದೇವಜ್ಞಾನವನ್ನು ವಿರೋಧಿಸುವದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನೂ ಕೆಡವಿಹಾಕಿ ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ.**

ವಿಶ್ವಾಸಿಗಳಾಗಿ ನಾವು ಕೆಲವು ಆತ್ಮಿಕ ಆಯುಧಗಳನ್ನು ಅವುಗಳನ್ನು ಉಪಯೋಗಿಸಲು ತರಬೇತಿ ಹೊಂದಿರಲೇಬೇಕು:

- ಯೇಸುವಿನ ಹೆಸರು
- ದೇವರ ವಾಕ್ಯ
- ಯೇಸುವಿನ ರಕ್ತ ಮತ್ತು ಶಿಲುಬೆಯ ಮೇಲೆ ಮಾಡಿ ಮುಗಿಸಿದ ಕಾರ್ಯ
- ಕ್ರಿಸ್ತನಲ್ಲಿ ನಮ್ಮ ಸ್ಥಾನ
- ದೇವರ ಸಂಪೂರ್ಣ ರಕ್ಷಾಕವಚ
- ಪ್ರಾರ್ಥನೆ ಮತ್ತು ಮದ್ಯಸ್ಥಿಕೆ
- ಸ್ತೋತ್ರ ಮತ್ತು ಆರಾಧನೆ
- ಪಶ್ಚಾತ್ತಾಪ ಮತ್ತು ನೀತಿವಂತಿಕೆ

ಇದನ್ನು ಪ್ರಾರಂಬಿಸುವುದರೊಡನೆ ನಾವುಗಳು ಇಂತಹ ಆತ್ಮಿಕ ಸರ್ವಾಯುಧಗಳನ್ನು ಉಪಯೋಗಿಸುವುದರಿಂದ ವೈಯಕ್ತಿಕವಾಗಿ ವಿಶ್ವಾಸಿಗಳು ಜೀವಿಸಬಹುದು ಆಮೇಲೆ ನಾವುಗಳು ಜನರಿಗೆ ಸೇವೆ ಸಲ್ಲಿಸಬಹುದು ಕತ್ತಲೆಯ ಕಾರ್ಯಗಳನ್ನು ನಾಶಪಡಿಸುವುದರಿಂದ, ಅವರ ಜೀವಿತಗಳಲ್ಲಿ ವೈರಿಯ ಹಿಡಿತದಿಂದ ಅವರನ್ನು ಸ್ವತಂತ್ರಗೊಳಿಸಬಹುದು ಮತ್ತು ಮತ್ತು ಕತ್ತಲೆಯಿಂದ ಆತ್ಮಗಳನ್ನು ಹೊರತರಬಹುದು.

## ಯುದ್ಧಕ್ಕಾಗಿ ಅಭಿಷೇಕಿಸಲ್ಪಟ್ಟಿದ್ದೇವೆ

ನಾವು ಪವಿತ್ರಾತ್ಮನ ಬಲದಿಂದ ಅಭಿಷೇಕಿಸಲ್ಪಟ್ಟಿದ್ದೇವೆ. ಇದು ನೊಗವನ್ನು ನಾಶಪಡಿಸುವ ಮತ್ತು ಹೊರೆಗಳನ್ನು ತೆಗೆದುಹಾಕುವ ಅಭಿಷೇಕವಾಗಿದೆ (ಯೆಶಾಯ 10:27). ಪವಿತ್ರಾತ್ಮನ ಬಲದಿಂದ ದುರಾತ್ಮಗಳನ್ನು ಹೊರಹಾಕುತ್ತೇವೆ ಮತ್ತು ದೇವರ ರಾಜ್ಯದಲ್ಲಿ ದ್ವಾರಾಧಿಕಾರಿಗಳಾಗಿದ್ದೇವೆ (ಮತ್ತಾಯ 12:28) ನಾವು ಬಲಿಷ್ಟ ಮನುಷ್ಯನನ್ನು ಬಂಧಿಸುತ್ತೇವೆ ಆದ್ದರಿಂದ ಅವನ ಸರಕುಗಳನ್ನು ನಾವು ಲೂಟಿ ಮಾಡುತ್ತೇವೆ (ಮತ್ತಾಯ 12:29).

## ಸ್ಥಳೀಯ ಸಭೆಯ ಉದ್ದೇಶಪೂರ್ವಕವಾಗಿ ನರಕದ ಬಾಗಿಲುಗಳ ವಿರುದ್ಧವಾಗಿ ಮುನ್ನಡೆಯಬೇಕು

ಅವರ ಸಮುದಾಯಗಳಲ್ಲಿ ನಗರ ಮತ್ತು ಪ್ರಾಂತಗಳಲ್ಲಿ ಸ್ಥಳೀಯ ಸಭೆಯು, ದುರಾತ್ಮನ ಪ್ರಾಬಲ್ಯವಿರುವ ಬಲ ಕೇಂದ್ರಗಳ ವಿರುದ್ಧವಾಗಿ ಉಲ್ಲಂಘನೆ ಮಾಡುವುದಾಗಿರಬೇಕು. ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ವಿಶ್ವಾಸಿಗಳು ದೇವರ ಆತ್ಮದ ಬಲದ

ಮೂಲಕವಾಗಿ ದುರಾತ್ಮನ ಕಾರ್ಯಗಳನ್ನು ನಾಶಪಡಿಸುವುದರಲ್ಲಿ ತೊಡಗಿಸಿಕೊಳ್ಳಬೇಕು ಕರ್ತನಾದ ಯೇಸುವು ದುರಾತ್ಮನ ಕಾರ್ಯಗಳನ್ನು ನಾಶಪಡಿಸುವುದಕ್ಕಾಗಿ ಬಂದನು. (1 ಯೋಹಾನ 3:8) ಮತ್ತು ಅದೇ ರೀತಿಯು ಸೇವೆಗಾಗಿ ನಾವುಗಳು ಕಳುಹಿಸಲ್ಪಟ್ಟಿದ್ದೇವೆ (ಯೋಹಾನ 20:21) ಪ್ರತಿಯೊಬ್ಬ ವಿಶ್ವಾಸಿಯು ಸೋಲಿಸಬಹುದಾದ ಕತ್ತಲೆಯ ಕಾರ್ಯಗಳಿವೆ - ಅಸ್ವಸ್ಥರನ್ನು ಸ್ವಸ್ಥಪಡಿಸುವುದು, ದೆವ್ವಗಳನ್ನು ಬಿಡಿಸುವುದು, ಬಂಧನದಲ್ಲಿರುವವರನ್ನು ಬಿಡಿಸುವುದು, ಕತ್ತಲೆಯೊಳಗಿಂದ ದೇವರ ಬೆಳಕಿನೆಡೆಗೆ ಆತ್ಮಗಳನ್ನು ತರುವುದು ಮುಂತಾದವು ಅದೇರೀತಿಯಾಗಿ ಸ್ಥಳೀಯ ಸಭೆ ದೇಹವು ಸಾಮೂಹಿಕವಾಗಿ ಆತ್ಮಿಕ ಹೋರಾಟದ ಮೂಲಕವಾಗಿ ಕತ್ತಲೆಯ ಬಲದಿಂದ ಸಾಮೂಹಿಕವಾಗಿ ಆತ್ಮಗಳನ್ನು ಬಿಡಿಸುವುದನ್ನು ನೋಡಬೇಕು ನಾವೆಲ್ಲರೂ ಒಟ್ಟಾಗಿ ಸಾಮಾಜಿಕ ದುಷ್ಟತನದಲ್ಲಿ ಕಾಣುವಂತಹ ದುರಾತ್ಮನ ಬಲಕೇಂದ್ರಗಳ ವಿರುದ್ಧವಾಗಿ ಹೋಗಬೇಕು (ಉದಾಹರಣೆಗೆ ಮಾದಕ ಸೇವನೆ ಮತ್ತು ಮದ್ಯಸೇವನೆ ವ್ಯಸನ, ಆತ್ಮಹತ್ಯೆ ವೇಶ್ಯಾವಾಟಿಕೆ, ಅಪರಾಧ, ಭ್ರಷ್ಟಾಚಾರ ಮತ್ತು ಇತರ ದುರಾತ್ಮನ ಕಾರ್ಯಗಳು) ಇವು ಸಮುದಾಯ ಮತ್ತು ಪ್ರಾಂತದಲ್ಲಿ ಚಾಲ್ತಿಯಲ್ಲಿರುವ ಅಪರಾಧಗಳಾಗಿವೆ. ಅಂತಿಮವಾಗಿ, ಜನರನ್ನು ಸೈತಾನನ ಬಲದಿಂದ ಹೊರತರುವಂತದ್ದು ಮತ್ತು ಕರ್ತನಾದ ಯೇಸುಕ್ರಿಸ್ತನ ರಾಜ್ಯಕ್ಕೆ ಅವರನ್ನು ತರುವಂತದ್ದು ನಮ್ಮ ಗುರಿಯಾಗಿರಬೇಕು.

## ಸ್ಥಳೀಯ ಸಭೆಯ ಸೈನ್ಯದಲ್ಲಿ ಶಿಸ್ತು ಕ್ರಮ, ಶ್ರೇಯಾಂಕ

ಸೈನ್ಯವು ಹೇಗೆ ಕಾರ್ಯ ಮಾಡುತ್ತದೆಂಬುದರಿಂದ ಕೆಲವು ಕಾರ್ಯತಂತ್ರದ ಒಳನೋಟಗಳನ್ನು ನಾವು ಸಂಪಾದಿಸಬಹುದಾಗಿದೆ ಮತ್ತು ಅದನ್ನು ಆತ್ಮಿಕ ಹೋರಾಟದಲ್ಲಿ ನಾವುಗಳು ಸೈನ್ಯವಾಗಿ ತೊಡಗಿಸಿಕೊಡಿದ್ದೇವೆ ಎಂಬ ಸಂಗತಿಯ ದೃಷ್ಟಿಯಲ್ಲಿ ಸ್ಥಳೀಯ ಸಭೆಯ ದೇಹವು ಯಾವ ರೀತಿ ಅದನ್ನು ಮತ್ತೆ ಸಂಬಂದಿಸಬಹುದಾಗಿದೆ.

### *ಶ್ರೇಣಿ ಮತ್ತು ಆದೇಶ ಇರಿಸಿಕೊಳ್ಳಿ*

ಯೋವೇಲ 2:7,8

**ಅವು ಶೂರರಂತೆ ಓಡಾಡುತ್ತವೆ ಯೋಧರ ಹಾಗೆ ಗೋಡೆಯೇರುತ್ತವೆ ತಮ್ಮ ತಮ್ಮ ಸಾಲುಗಳಲ್ಲಿಯೇ ನಡೆಯುತ್ತವೆ, ಆ ಸಾಲುಗಳನ್ನು ಕಲಸುವುದಿಲ್ಲ, ಒಂದಕ್ಕೊಂದು ನೂಕಾಡುವುದಿಲ್ಲ ತಮ್ಮ ತಮ್ಮ ಸಾಲುಗಳಲ್ಲಿಯೇ ನಡೆಯುತ್ತವೆ. ಆಯುಧಗಳ ನಡುವೆ ನುಗ್ಗುತ್ತವೆ, ಸಾಲುಗಳು ಒಡೆದುಹೋಗುವದಿಲ್ಲ.**

ಸೈನ್ಯದಲ್ಲಿ, ಸಿಪಾಯಿಗಳ ದರ್ಜೆ, ಕ್ರಮ ಮತ್ತು ಶಿಸ್ತು ಇದೆ. ಸ್ಥಳೀಯ ಸಭೆಯ ದೇಹದ ಮಧ್ಯದಲ್ಲಿ ಅವರನ್ನು ಮುಂದೆ ನಡೆಸಲು ದೇವರು ನಾಯಕರುಗಳನ್ನು ಇರಿಸಿದ್ದಾನೆ. ನಾಯಕರುಗಳನ್ನು ಎಲ್ಲಾ ಹಂತಗಳಲ್ಲಿ ಗೌರವಿಸಬೇಕು ಮತ್ತು ಗುರ್ತಿಸಬೇಕು ಆದಾಗ್ಯೂ ಹೊಸ ಒಡಂಬಡಿಕೆಯಲ್ಲಿ ವಿಧೇಯತೆಯು ''ಕರ್ತನಲ್ಲಿ'' ಎಂಬುದಾಗಿ ನಾವು ಅರ್ಥಮಾಡಿಕೊಳ್ಳುತ್ತೇವೆ. ಇದರ ಅರ್ಥವು ಸಂಪೂರ್ಣ ವಿಧೇಯತೆಯು ಕರ್ತನಿಗಾಗಿ ಮೀಸಲಿಟ್ಟದ್ದಾಗಿದೆ. ಮಾನವ ನಾಯಕರುಗಳು ತಪ್ಪುಗಳನ್ನು ಮಾಡುವಂತದ್ದು ಸಾಧ್ಯಕರವಾಗಿದೆ. ನಾವು ಭೂಮಿಯ ಮೇಲೆ ಅನುಭವಾತ್ಮಕದಲ್ಲಿ ನಡೆಯುವ ಅಧಿಕಾರವು ಅರಸನಿಗೆ ನಮ್ಮ ಸಮರ್ಪಣೆಯ ಪ್ರಮಾಣವಾಗಿದೆ. ಆತನು ನೇಮಿಸಿದಂತಹ ನಾಯಕತ್ವಕ್ಕೆ ಸಮರ್ಪಣೆಯು ಮೂಲಭೂತವಾಗಿ ಆತನಿಗೆ ನಮ್ಮ ಸಮರ್ಪಣೆಯಾಗಿದೆ.

ಯಾಕೋಬನು 4:7

**ಹೀಗಿರಲಾಗಿ ದೇವರಿಗೆ ಒಳಗಾಗಿರಿ ಸೈತಾನನ್ನು ಎದುರಿಸಿರಿ ಅವನು ನಿಮ್ಮನ್ನು ಬಿಟ್ಟು ಹೋಗುವನು.**

## ಸೈನಿಕ ಮನಸ್ಸು

ನಾವುಗಳು ಯುದ್ಧದಲ್ಲಿರುವುದರಿಂದ ''ಹೆಚ್ಚಿನ ಎಚ್ಚರಿಕೆ'' ಹೊಂದಿರುವುದು ಅವಶ್ಯಕ. ವೈರಿಗೆ ಯಾವುದೇ ದಾರಿ ಕೊಡುವುದನ್ನು ನಾವು ನಿರಾಕರಿಸುತ್ತೇವೆ. ವೈರಿಯು ನೆಲೆಯ ಲಾಭ ಹೊಂದುವುದನ್ನು ನಿರಾಕರಿಸುತ್ತೇವೆ. (1 ಪೇತ್ರ 5:8,9; ಎಫೆಸದವರಿಗೆ 4:27).

## ಸೈನಿಕ ಜೀವನ ಶೈಲಿ

ನಾವುಗಳು ಸೈನಿಕರಂತೆ ಜೀವಿಸುತ್ತೇವೆ. ನಮ್ಮ ಭೂಲೋಕದ ಕರ್ತವ್ಯಗಳನ್ನು ವಿಸರ್ಜಿಸುತ್ತೇವೆ, ಇಂತಹ ಜೀವಿತದ ವ್ಯವಹಾರಗಳಲ್ಲಿ ನಾವುಗಳು ಸಿಕ್ಕಿಹಾಕಿಕೊಳ್ಳುವುದರಿಂದ ದೂರವಿರಬೇಕು.

2 ತಿಮೊಥೆಯನಿಗೆ 2:3,4

**ಕ್ರಿಸ್ತ ಯೇಸುವಿನ ಒಳ್ಳೇ ಸೈನಿಕನಂತೆ ನನ್ನೊಂದಿಗೆ ಶ್ರಮೆಯನ್ನನುಭವಿಸು ಯುದ್ಧಕ್ಕೆ ಹೋಗುವ ಸೈನಿಕನು ಲೋಕ ವ್ಯವಹಾರದಲ್ಲಿ ಸಿಕ್ಕಿಕೊಳ್ಳದೆ ತನ್ನನ್ನು ಸೈನ್ಯದಲ್ಲಿ ಸೇರಿಸಿಕೊಂಡವನನ್ನು ಮೆಚ್ಚಿಸುವದಕ್ಕೆ ಪ್ರಯಾಸಪಡುತ್ತಿರುವನಲ್ಲವೇ.**

## ಸೈನಿಕ ಶಿಸ್ತು

ನಮ್ಮ ಸಂಪೂರ್ಣ ಆತ್ಮ, ಪ್ರಾಣ ಮತ್ತು ಶರೀರವನ್ನು ಶಿಸ್ತಿನಲ್ಲಿಡುತ್ತೇವೆ.

## ಸೈನ್ಯವು ಕಾರ್ಯತಂತ್ರ ಹೊಂದಿದೆ

ವೈಯಕ್ತಿಕ ಹಂತದಲ್ಲಿ ಮತ್ತು ಸಂಸ್ಥೆಯ ಹಂತ ಎರಡರಲ್ಲೂ ಸಹ ನಾವುಗಳು ಯುದ್ಧ ಮಾಡಲೂ ಹೋಗುವಾಗ ನಾವುಗಳು ಕಾರ್ಯತಂತ್ರಗಳನ್ನು ಮಾಡಿಕೊಂಡಿರಬೇಕು. ಒಬ್ಬನು ಗಾಳಿಯನ್ನು ಹೊಡೆಯುವವರಂತೆ ನಾವು ಇರಲೂ ಸಾಧ್ಯವಿಲ್ಲ, ನಮ್ಮ ಗುರಿಯನ್ನು ಗುರ್ತಿಸುತ್ತೇವೆ ಎಂಬ ಭರವಸೆಯಿಂದ ''ಗೊತ್ತುಗುರಿಯಿಲ್ಲದ ಬಂದೂಕಿನಿಂದ ಹೊಡೆಯುವುದಲ್ಲ'' ಆದ್ದರಿಂದ ಸ್ಥಳೀಯ ಸಭೆಯು ತೊಡಗಿಸಿಕೊಳ್ಳುವ ಪ್ರತಿಯೊಂದು ಸೇವೆಯು ಉದ್ದೇಶ ಪೂರ್ವಕವಾಗಿರಬೇಕು ಮತ್ತು ಕಾರ್ಯತಂತ್ರದಿಂದ ಕೂಡಿರಬೇಕು.

## ಒಂದು ಸೈನ್ಯವು ಅದರ ಗಾಯಗೊಂಡವರ ಬಗ್ಗೆ ಕಾಳಜಿ ವಹಿಸುತ್ತದೆ

ಸ್ಥಳೀಯ ಸಭೆಯು ದೇಹದಲ್ಲ, ಸವಾಲುಗಳನ್ನು, ಹೋರಾಟಗಳನ್ನು ಮತ್ತು ಹಿನ್ನಡೆಗಳನ್ನು ಎದುರಿಸುತ್ತಿರುವಂತಹ ಜನರುಗಳು ಇರುವಂತಹದ್ದು ಸಾಧ್ಯಕರವಾಗಿದೆ. ಕೆಲವರು ತೀವ್ರವಾದ ವೈಯಕ್ತಿಕ ಘರ್ಷಣೆಗಳ ಮಧ್ಯದಲ್ಲಿದ್ದಾರೆ. ಕೆಲವರು ತಪ್ಪುಗಳನ್ನು ಮಾಡಿ ಬಿದ್ದು ಹೋಗಬಹುದು ಘರ್ಷಣೆಗಳಲ್ಲಿ ಗಾಯಗೊಂಡವರಿಗೆ ನಾವು ಸಹಾಯ ಮಾಡುತ್ತೇವೆ. ಅವರ ಸೋಲಿನ ನಿಮಿತ್ತವಾಗಿ ನಮ್ಮ ಸ್ವಂತವಾದದ್ದನ್ನು ನಾವು ಕೊಲ್ಲುವುದಿಲ್ಲ ಜನರು ಪುನಃ ಬಲವನ್ನು ಸಂಪಾದಿಸಲು ಮತ್ತು ಗುಣಮುಖರಾಗಲು ಸಹಾಯವನ್ನು ನಾವು ಮಾಡುತ್ತೇವೆ. ಪ್ರತಿಯೊಬ್ಬರ ವಿಜಯವನ್ನು ಹಂಚುತ್ತೇವೆ ಮತ್ತು ಆಚರಿಸುತ್ತೇವೆ!

## ಸ್ಥಳೀಯ ಸಭೆಯು ಇದನ್ನು ಕಾರ್ಯಗತಗೊಳಿಸಲು ಪ್ರಾಯೋಗಿಕ ಮಾರ್ಗಗಳು

- ನಮ್ಮ ಆತ್ಮಿಕ ಅಧಿಕಾರ ನಮ್ಮ ಆತ್ಮಿಕ ಗುರುತು, ಶಿಲುಬೆ, ರಕ್ತ, ನಮ್ಮ ಯುದ್ಧದ ಸರ್ವಾಯುಧಗಳು, ಪ್ರಾರ್ಥನೆ ಮತ್ತು ಮಧ್ಯಸ್ಥಿಕೆ, ಸ್ತೋತ್ರ ಮತ್ತು ಆರಾಧನೆ ಇತರ ಕ್ಷೇತ್ರಗಳ ಬಗ್ಗೆ ಜನರಿಗೆ ಕಲಿಸಬೇಕು.
- ಆತ್ಮಿಕ ಅಧಿಕಾರವನ್ನು ಸರಿಯಾಗಿ ಹೇಗೆ ಮಾಡಬೇಕು ಮತ್ತು ಪ್ರಾರ್ಥನೆ ಮತ್ತು ಮಧ್ಯಸ್ಥಿಕೆಯಲ್ಲಿ ಹೇಗೆ ಸರಿಯಾಗಿ ತೊಡಗಿಸಿಕೊಳ್ಳಬೇಕೆಂಬುದನ್ನು ಜನರಿಗೆ ಕಲಿಸಬೇಕು.

- ಜನರುಗಳು ಪ್ರಾರ್ಥನೆ ಮತ್ತು ಮಧ್ಯಸ್ಥಿಕೆಯಲ್ಲಿ ಸಮುದಾಯ, ನಗರ ಅಥವಾ ಪ್ರಾಂತದಲ್ಲಿ ಆತ್ಮಗಳ ರಕ್ಷಣೆಗಾಗಿ ತೊಡಗಿಸಿಕೊಂಡಿರಲು, ಇದನ್ನು ಕಾರ್ಯತಂತ್ರದಿಂದ ಕೊಂಡೊಯ್ಯಲು ಪ್ರೋತ್ಸಾಹಿಸಬೇಕು.
- ಪ್ರಾಂತ್ಯದ ಆತ್ಮಿಕ ಪರಿಸರದ ಮೇಲೆ ಪರಿಣಾಮವನ್ನುಂಟುಮಾಡುವ ಆರಾಧನೆ ಮತ್ತು ಮಧ್ಯಸ್ಥಿಕೆಯ ಸಮಯವನ್ನು ವಿಸ್ತರಿಸಲು ಕರೆಯಿರಿ.
- ನಿರ್ದಿಷ್ಟ ಗುರಿಗಳನ್ನು ಗೊತ್ತುಪಡಿಸಿರಿ ಮತ್ತು ಸ್ಥಳೀಯ ಸಭೆಯ ದೇಹವಾಗಿ ಒಟ್ಟು ಅವುಗಳ ಹಿಂದೆ ಹೋಗಬೇಕು ಇಂತಹ ಗುರಿಗಳು, ಇಷ್ಟು ಸಂಖ್ಯೆಯಲ್ಲಿ ಆತ್ಮಗಳು ಸಂಧಿಸಲ್ಪಡಬೇಕು, ನಿರ್ದಿಷ್ಟ ಸಾಮಾಜಿಕ ತೊಂದರೆಗಳಲ್ಲಿ ಬದಲಾವಣೆ ಬರುವುದು, ಮತ್ತು ಸಮಾನ ರೂಪದ ದೇವರ- ನಿರ್ದೇಶಿತ ಗುರಿಗಳು ಆಗಿರಬೇಕು.

## ಸಿದ್ಧಗೊಂಡಿರಲು ಇರುವ ಸವಾಲುಗಳು

- ಯಾವಾಗಲೂ ಕರ್ತನಾದ ಯೇಸುವಿನ ಮೇಲೆ ದೃಷ್ಟಿಯನ್ನು ಪಾಲಿಸಬೇಕು ಮತ್ತು ದುರಾತ್ಮನು ಮಾಡುತ್ತಿರುವಂತಹವುಗಳ ಮೇಲಲ್ಲ. ಕೆಲವು ಬಾರಿ ಜನರು ಅತಿರೇಕಕ್ಕೆ ಹೋಗುತ್ತಾರೆ ಮತ್ತು ಕರ್ತನ ಮೇಲೆ ದೃಷ್ಟಿಯಿಡುವುದರಲ್ಲಿ ಇರುವುದರ ಬದಲು ಅಧಿಕವಾಗಿ ''ದುರಾತ್ಮನ ಪ್ರಜ್ಞೆ'' ವುಳ್ಳವರಾಗಿ ಕಂಡುಬರುತ್ತಾರೆ ಮತ್ತು ಕ್ರಿಸ್ತನಲ್ಲಿ ನಾವು ಯಾರಾಗಿದ್ದೇವೆ ಎಂಬುದನ್ನು ಸರಳವಾಗಿ ಕಾರ್ಯನಿರ್ವಹಿಸುತ್ತಾರೆ. ಕೆಲವು ಜನರು ''ಪುಕ್ಕಲಿನ ಆತ್ಮಿಕರಾಗಿರುತ್ತಾರೆ'' ಮತ್ತು ಸಂಬಂಧಿಸಲು ಬಹಳ ಕಷ್ಟಕರವಾಗುತ್ತದೆ.
- ಆತ್ಮಿಕ ಯುದ್ಧದಲ್ಲಿ ತಪ್ಪಾಗಿ ತೊಡಗಿಸಿಕೊಳ್ಳುವುದು ನಮಗೆ ಅಧಿಕಾರ ಕೊಡಲ್ಪಟ್ಟವುಗಳ ವಿಷಯಗಳ ಮೇಲೆ ವ್ಯವಹರಿಸುತ್ತಾ ಇರಬೇಕು.

## ಪರಿಗಣಿಸಲು ಪ್ರಶ್ನೆಗಳು

ಪ್ರಾಯೋಗಿಕ ಮಾರ್ಗದಲ್ಲಿ, ಸ್ಥಳೀಯ ಸಭೆಯಲ್ಲಿ ಕುಟುಂಬದ ಮನಸ್ಸು ಮತ್ತು ಸೈನ್ಯದ ಮನಸ್ಸನ್ನು ಹೇಗೆ ಸಮತೋಲನ ಮಾಡಬಹುದು

ಸ್ಥಳೀಯ ಸಭೆಯಲ್ಲಿ ಸೈನಿಕನ ಮನಸ್ಥಿತಿ ಮತ್ತು ಕುಟುಂಬದ ಮನಸ್ಥಿತಿ ಇವನ್ನು ಸರಿಯಾಗಿ ಸಮತೋಲನ ಮಾಡದಿದ್ದರೆ ಇರುವಂತಹ ಕೆಲವು ಅಪಾಯಗಳು ಯಾವುವು?

# 12

# ಸ್ಥಳೀಯ ಸಭೆ-ಮದಲಗಿತ್ತಿಯಾಗಿದೆ

ಪ್ರಾಯಶಃ ಸಭೆಯು ಒಂದು ಅತ್ಯದ್ಭುತಕರ ಚಿತ್ರವು ಆತನ ಮದಲಗಿತ್ತಿಯಾಗಿರುವುದಾಗಿದೆ.

ಕರ್ತನು ಹಳೇ ಒಡಂಬಡಿಕೆಯ ಕೆಳಗೆ ಆತನ ಜನರಾದ ಇಸ್ರಾಯೇಲರೊಂದಿಗೆ ವ್ಯವಹರಿಸುವಂತದ್ದು ಅನೇಕ ರೀತಿಯಲ್ಲಿ ಹೊಸ ಒಡಂಬಡಿಕೆಯಲ್ಲಿ ಸಭೆಯೊಡನೆ ಆತನು ವ್ಯವಹರಿಸುವಂತದ್ದು ಸಮಾನಾಂತರವಾಗಿದೆ (ಅಥವಾ ಒಂದು ಉದಾಹರಣೆ ಅಥವಾ ದೃಷ್ಟಾಂತ) ಕೆಲವು ವಿಭಿನ್ನತೆಗಳಿವೆ ಆದರೆ ಅನೇಕ ಸಮಾನರೂಪತೆ ಇದೆ.

ವ್ಯತ್ಯಾಸಗಳಿಗೆ ಉದಾಹರಣೆಗಳು:

- ಹಳೆ ಒಡಂಡಿಕೆಯ ಕೆಳಗೆ ಆತನು ಕಾನೂನಿನ ಆಧಾರದಲ್ಲಿ ಅವರೊಂದಿಗೆ ವ್ಯವಹರಿಸಿದನು ಅದಾಗ್ಯೂ ಹೊಸ ಒಡಂಬಡಿಕೆ ಅಡಿಯಲ್ಲಿ ಕೃಪೆಯ ಆಧಾರದ ಮೇಲೆ ಆತನು ವ್ಯವಹರಿಸುತ್ತಾನೆ.
- ಹಳೇ ಒಡಂಬಡಿಕೆಯ ಅಡಿಯಲ್ಲಿ ವೈಯಕ್ತಿಕವಾಗಿ ಅವರ ಜೀವಿತಗಳಲ್ಲಿ ಪತಿತ್ರಾತ್ಮನ ಕಾರ್ಯದ ಅನುಭವವನ್ನು ಎಲ್ಲರೂ ಪಡೆಯುವುದಿಲ್ಲ ಆದಾಗ್ಯೂ ಹೊಸ ಒಡಂಬಡಿಕೆಯ ಅಡಿಯಲ್ಲಿ ಪ್ರತಿಯೊಬ್ಬ ವಿಶ್ವಾಸಿಯು ವೈಯಕ್ತಿಕವಾಗಿ ಆತ್ಮನ ಪ್ರಸನ್ನತೆ ಮತ್ತು ಕಾರ್ಯವನ್ನು ಸಂತೋಷಿಸಬಹುದು.

ಅನೇಕ ಸಾಮ್ಯತೆಗಳು ಇವೆ:

- ಎರಡೂ ಒಡಂಬಡಿಕೆಯಲ್ಲಿ ದೇವರು ಈ ಪ್ರಪಂಚದ ರಾಷ್ಟ್ರಗಳನ್ನು ಆಶೀರ್ವದಿಸಬಲ್ಲ ಜನರನ್ನು ಆರಿಸಿಕೊಂಡಿದ್ದಾನೆ.
- ಎರಡೂ ಒಡಂಬಡಿಕೆಯಲ್ಲಿ, ದೇವಜನರು, ಒಂದು ರಾಜ ಯಾಜಕ ವರ್ಗದವರಾಗಿ ದೇವರಿಗೆ ಸೇವೆಸಲ್ಲಿಸಲು ಕರೆಯಲ್ಪಟ್ಟಿದ್ದಾರೆ.

ಈ ಎರಡೂ ಒಡಂಬಡಿಕೆಗಳಲ್ಲಿ ಇರುವಂತಹ ಆಸಕ್ತಿಕರ ಸಮಾನಾಂತರತೆ ಅಂದರೆ, ಆತನ ಜನರೊಡನೆ ಆತನ ಸಂಬಂಧವನ್ನು ಆತನ ಮದಲಗಿತ್ತಿಗೆ, ಮದಲಿಂಗನಂತೆ ಎಂಬುದಾಗಿ ದೇವರು ಚಿತ್ರಿಸುತ್ತಾನೆ.

ಆತನು ದೇವರ ಮದಲಿಂಗನು ಮತ್ತು ಆತನ ಜನರಾದ ನಾವು ಆತನ ಮದಲಗಿತ್ತಿಯರು.

ಆದ್ದರಿಂದ ನಾವು ಹಳೇ ಒಡಂಬಡಿಕೆಯೊಂದಿಗೆ ನಾವು ಪ್ರಾರಂಭಗೊಂಡು, ಹೊಸ ಒಡಂಬಡಿಕೆಗೆ ಹೋಗುತ್ತೇವೆ ಮತ್ತು ಸಭೆಯ ಪಾತ್ರದಿಂದ (ನಾವು-ದೇವರ ಜನರು) ಆತನ ಮದಲಗಿತ್ತಿಯರಾಗಿ ಅದರಿಂದ ಒಳನೋಟಗಳನ್ನು ಸೆಳೆಯುತ್ತೇವೆ.

ಮೂರು ಹಳೇ ಒಡಂಬಡಿಕೆಯ ಪ್ರವಾದಿಗಳು, ವರನು ಆತನ ವಧುವಿಗೆ ಮದುವೆಯಾಗಿದ್ದಾನೆ ಎಂಬ ಪದದಿಂದ ಆತನ ಜನರೊಂದಿಗಿನ ದೇವರ ಸಂಬಂಧದ ಕುರಿತು ಮಾತಾನಾಡಿದ್ದಾರೆ: ಯೆರೆಮೀಯ, ಹೋಶೇಯ, ಯೆಶಾಯ.

## ನಿಮ್ಮ ನಿಶ್ಚಿತಾರ್ಥದ ಪ್ರೀತಿ

ಯೆರೆಮೀಯನು 2:2,3

**ನೀನು ಹೋಗಿ ಯೆರೂಸಲೇಮಿನ ಕಿವಿಗೆ ಮುಟ್ಟುವಂತೆ ಈ ಮಾತುಗಳನ್ನುಸಾರು ಯೆಹೋವನು ಹೀಗನ್ನುತ್ತಾನೆ, ನೀನು ಯೌವನದಲ್ಲಿ ನನ್ನ ಮೇಲೆ ಇಟ್ಟದ ಪ್ರೀತಿಯನ್ನೂ ವಿವಾಹ ಕಾಲದ ನಿನ್ನ ಪ್ರೇಮವನ್ನೂ ಬೀಜ ಬಿತ್ತಿಯೇ ಇಲ್ಲದ ಅರಣ್ಯದಲ್ಲಿ ನೀನು ನನ್ನನ್ನು ಹಿಂಬಾಲಿಸಿದ ನಿನ್ನ ಪಾತಿವ್ರತ್ಯವನ್ನೂ ನಿನ್ನ ಹಿತಕ್ಕಾಗಿ ಜ್ಞಾಪಕದಲ್ಲಿಟ್ಟಿದ್ದೇನೆ. ಇಸ್ರಾಯೇಲು ಯೆಹೋವನ ಬೆಳೆಯ ಪ್ರಥಮ ಫಲವಾಗಿ ಆತನಿಗೆ ಮೀಸಲಾಗಿತ್ತು. ಅದನ್ನು ತಿಂದು ಬಿಟ್ಟವರೆಲ್ಲರೂ ದೋಷಿಗಳಾಗಿ ಕೇಡಿಗೆ ಗುರಿಯಾದರು ಎಂದು ಯೆಹೋವನು ಅನ್ನುತ್ತಾನೆ.**

ಇಸ್ರಾಯೇಲರು ಆತನಿಗೆ ''ನಿಶ್ಚಿತಾರ್ಥ'' (ವಿವಾಹ ನಿಶ್ಚಯದ) ದಿನದ - ಕರುಣೆ, ಪ್ರೀತಿ, ಅವರು ತೋರ್ಪಡಿಸಿದ ಅನ್ವೇಷಣೆಯ ಬಗ್ಗೆ ದೇವರು ಮಾತಾಡುತಾನೆ ಆತನಿಗಾಗಿ ಪವಿತ್ರವಾಗಿರುವ ಒಂದು ದೇಶ ಆತನ ಪ್ರಥಮ  ಫಲಗಳು. ದೇವರು ಇಸ್ರಾಯೇಲರನ್ನು ಐಗುಪ್ತ್ಯದಿಂದ ಹೊರತಂದು ಅವರಿಗೆ ವಾಗ್ದಾನ ಮಾಡಿದ ದೇಶಕ್ಕೆ ಪ್ರಯಾಣಿಸುವಾಗ ಮರುಭೂಮಿಯಲ್ಲಿನ ಶಿನಾಯ ಬೆಟ್ಟದಲ್ಲಿ ಆತನೊಂದಿಗೆ ನಿಶ್ಚಿತಾರ್ಥ ಮಾಡಿಕೊಳ್ಳಲ್ಪಟ್ಟರು.

ಯೆರೆಮೀಯನ 3:14

**ಇದೇ ಯೆಹೋವನ ನುಡಿ ಭ್ರಷ್ಟರಾದ ಮಕ್ಕಳೇ ತಿರುಗಿಕೊಳ್ಳಿರಿ ನಾನು ನಿಮಗೆ ಪತಿ ಒಂದು ಪಟ್ಟಣಕ್ಕೆ ಒಬ್ಬ ನಂತೆಯೂ ಗೋತ್ರಕ್ಕೆ ಇಬ್ಬರಂತೆಯೂ ಆರಿಸಿ ಚೀಯೋನಿಗೆ ಕರತರುವೆನು.**

ದೇವರು ಮೊಂಡುತನದ ಜನರನ್ನು ತನ್ನ ಕಡೆಗೆ ಅವರನ್ನು ಆತನು ''ಮದುವೆಯಾಗಿದ್ದೇನೆ'' ಎಂಬುದಾಗಿ ಘೋಷಿಸಿ ಕರೆಯುತ್ತಾನೆ.

ಯೆರೆಮೀಯ 31:3,4

**ನಾನು ನಿನ್ನನ್ನು ಪ್ರೀತಿಸಿರುವುದು ಶಾಶ್ವತ ಪ್ರೇಮದಿಂದಲೇ ಆದಕಾರಣ ನಿನ್ನನ್ನು ಮಮತೆಯಿಂದ ಸೆಳೆದುಕೊಂಡಿದ್ದೇನೆ ಇಸ್ರಾಯೇಲೆಂಬ ಯುವತಿಯೇ ನಾನು ನಿನ್ನ ಹಾಳು ಪ್ರದೇಶಗಳನ್ನು ಪುನಃ ಕಟ್ಟುವೆನು ಅವು ಕಟ್ಟಡಗಳಾಗುವವು ನೀನು ಮತ್ತೆ ದಮ್ಮಡಿಗಳಿಂದ ವೈಭವಗೊಂಡು ವಿನೋದ ಪಡುವವರ ನಾಟ್ಯಗಳಲ್ಲಿ ಸೇರಿಕೊಳ್ಳುವಿ.**

ಯೆರೆಮೀಯ 31:32

**ಈ ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು ಈ ಒಡಂಬಡಿಕೆಯು ನಾನು ಇವರ ಪಿತೃಗಳ ಕೈಹಿಡಿದು ಐಗುಪ್ತದೇಶದೊಳಗಿಂದ ಕರತಂದಾಗ ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯಂಥದಲ್ಲ ನಾನು ಅವರಿಗೆ ಪತಿಯಾಗಿದ್ದರೂ ಆ ನನ್ನ ಒಡಂಬಡಿಕೆಯನ್ನು ಅವರು ಮೀರಿದರಷ್ಟೆ.**

ಮೊಂಡುತನದ ಜನರಿಗೆ ಆತನ ಶಾಶ್ವತವಾದ ಪ್ರೀತಿಯನ್ನು ದೇವರು ಕೊಡುತ್ತಾನೆ. ಆತನ ಪ್ರೀತಿ ಕರುಣೆಗಳೊಡನೆ ಅವರನ್ನು ಮತ್ತೆ ತಿರುಗಿಸುತ್ತಾನೆ ಅವರು ಪುನಃ ಸ್ಥಾಪಿಸಲ್ಪಡುತ್ತಾರೆ. ಮತ್ತು ತಿರುಗಿ ಕಟ್ಟಲ್ಪಡುತ್ತಾರೆ. ಎಂಬ ಭರವಸೆಯನ್ನು ಆತನು ಕೊಡುತ್ತಾನೆ.

ಆತನು ''ಪತಿಯಾಗಿರುವುದರ'' - ಅತನು ಮುರಿದು ಹಾಕದಿರುವ ಒಂದು ಒಡಂಬಡಿಕೆ ಎಂಬ ಪದವು ಆತನ ಜನರೊಡನೆ ಆತನ ಒಡಂಬಡಿಕೆಯನ್ನು ಸ್ಥಾಪಿಸುವದಕ್ಕಾಗಿ ಆತನು ಮಾತಾಡುತ್ತಾನೆ.

## ನೀನು ನನ್ನ ಪತಿ ಎಂದು ನನ್ನನ್ನು ಕರೆಯುವಿ

ಹೋಶೇಯನ ಸಂಪೂರ್ಣ ಪುಸ್ತಕವು, ಪತಿಯು ಆತನ ಹಟಮಾರಿಯಾದ ಹೆಂಡತಿಯನ್ನು ಹಿಂತಿರುಗಲು ಪ್ರೇರಿಸುವುದರ ದೇವರ ವಿಷಯದ ಸುತ್ತಲೂ ಇರುವುದಾಗಿದೆ.

ನಾವು ಕೆಲವು ವಚನಗಳನ್ನು ನೋಡೋಣ:

ಹೋಶೇಯ 2:16,17

**ಯೆಹೊವನು ಇಂತೆನ್ನುತ್ತಾನೆ ಆ ಕಾಲದಲ್ಲಿ ನೀನು ನನ್ನನ್ನು ಇನ್ನು ಬಾಳೀ ಅನ್ನದೆ ಈಶೀ ಅನ್ನುವಿ ನಾನು ಬಾಳ ದೇವತೆಗಳ ಹೆಸರುಗಳನ್ನು ನಿನ್ನ ಬಾಯೊಳಗಿಂದ ತೊಲಗಿಸುವೆನು. ಅವುಗಳನ್ನು ಇನ್ನು ಎತ್ತದಿರುವಿ.**

''ಒಬ್ಬ ಪೂಜ್ಯವಿರುವ ಹೆಂಡತಿಯಾಗಿ'' ದೇವರು ನಂಬಿಗಸ್ತಿಕೆಯನ್ನು ಬಯಸುತ್ತಾನೆ - ಇತರ ದೇವತೆಗಳ ಹಿಂದೇ ಹೋಗುವದನ್ನಲ್ಲ.

ಹೋಶೇಯ 2:19,20

**ನಾನು ನಿನ್ನನ್ನು ಶಾಶ್ವತವಾಗಿ ವರಿಸುವೆನು ನಾನು ನಿನ್ನನ್ನು ನಂಬಿಕೆಯಿಂದ ವರಿಸಲು ನೀನು ಯೆಹೋವನಾದ ನನ್ನನ್ನು ತಿಳಿದುಕೊಳ್ಳುವಿ.**

ಈ ವಚನಗಳು ಆತನು ಮದುವೆಯಾದವರ ಜೊತೆ ದೇವರು ಹೇಗೆ ಸಂಬಂಧ ಹೊಂದಿರುತ್ತಾನೆ ಎಂಬುದರ ಅದ್ಭುತ ಒಳನೋಟಗಳನ್ನು ಒದಗಿಸುತ್ತದೆ.

- ಶಾಶ್ವತವಾಗಿ ನನ್ನದು - ನಾವು ಶಾಶ್ವತವಾಗಿ ಆತನವರು
- ನೀತಿವಂತಿಕೆ - ಆತನು ನಮ್ಮನ್ನು ತನ್ನ ಬಳಿಗೆ ಪವಿತ್ರವಾದ, ನಿರ್ಮಲವಾದ ರೀತಿಯಲ್ಲಿ ಸೆಳೆಯುತ್ತಾನೆ.
- ನ್ಯಾಯ - ದೇವರು ಎಲ್ಲಾ ರೀತಿಯ ದಬ್ಬಾಳಿಕೆ ಮತ್ತು ಅನ್ಯಾಯಗಳಿಂದ ಬಿಡಿಸುತ್ತಾನೆ.
- ಪ್ರೀತಿಯ ಕರುಣೆ - ದೇವರು ಆತನ ಪ್ರೀತಿ ಮತ್ತು ಕರುಣೆ ವಿಸ್ತರಿಸುತ್ತಾನೆ
- ಕರುಣೆ-ನಮ್ಮ ಸೋಲುಗಳ ಮಧ್ಯದಲ್ಲಿ ನಾವಿರುವ ರೀತಿಯಲ್ಲಿಯೇ ದೇವರು ನಮ್ಮನ್ನು ಅಂಗೀಕರಿಸುತ್ತಾನೆ.
- ನಂಬಿಗಸ್ತಿಕೆ - ಆತನು ನಂಬಿಗಸ್ತ ಪ್ರೀತಿಯಾಗಿದ್ದಾನೆ.
- ನಿಕಟತೆ (ನೀವು ಕರ್ತನನ್ನು ತಿಳಿದವರಾಗಿರಬೇಕು) - ಆತನೊಂದಿಗೆ ಸ್ವಂತ ನಿಕಟತೆಯ ಸ್ಥಳಕ್ಕೆ ನಮ್ಮನ್ನು ಆತನು ತರುತ್ತಾನೆ.

## ನಿಮ್ಮ ಸೃಷ್ಟಿಕರ್ತನು ನಿಮ್ಮ ಪತಿ

ಯೆಶಾಯ 54:4-8

**ಹೆದರಬೇಡ, ನಿನಗೆ ಅವಮಾನವಾಗುವುದಿಲ್ಲ, ನಾಚಿಕೆ ಪಡದಿರು ನಿನಗೆ ಆಶಾಭಂಗವಾಗದು ಯೌವನದಲ್ಲಿ ನಿನಗಾದ ಆವಮಾನವನ್ನು ಮರೆತು ಬಿಡುವಿ, ವೈಧವ್ಯದಲ್ಲಿ ನಿನಗೆ ಸಂಭವಿಸಿದ ನಿಂದೆಯು ಇನ್ನು ನಿನ್ನ ನೆನಪಿಗೆ ಬಾರದು ನಿನ್ನ ಸೃಷ್ಟಿಕರ್ತನೇ ನಿನ್ನ ಪತಿ ಆತನ ಹೆಸರು ಸೇನಾಧಿಶ್ವರನಾದ ಯೆಹೋವ**

**ಇಸ್ರಾಯೇಲಿನ ಸದಮಲ ಸ್ವಾಮಿಯು ನಿನ್ನ ನ್ಯಾಯಸ್ಥಾಪಕನಾಗಿದ್ದಾನೆ ಸರ್ವಲೋಕದ ದೇವರೆಂಬ ನಾಮಧೇಯುವನ್ನು ಹೊಂದಿರುವನು. ನೀನು ಬಿಡಲ್ಪಟ್ಟು ಮನನೊಂದ ಹೆಂಡತಿ ಹೌದು ತ್ಯಜಿಸಲ್ಪಟ್ಟವಳಾದ ನನ್ನ ಯೌವನದ ಕಾಲದ ಪತ್ನಿ ಎಂದು ಯೆಹೋವನು ನಿನ್ನನ್ನು ಕನಿಕರಿಸಿ ಕರೆದಿದ್ದಾನೆ ಎಂಬದು ನಿನ್ನ ದೇವರ ನುಡಿ. ಕ್ಷಣ ಮಾತ್ರ ನಿನ್ನನ್ನು ಬಿಟ್ಟಿದ್ದೇನೆ ಮಹಾಕೃಪೆಯಿಂದ ಸೇರಿಸಿಕೊಳ್ಳುವೆನು ತಟ್ಟನೆ ಉಬ್ಬಿ ಹರಿಯುವ ಕೋಪದಿಂದ ಒಂದು ಕ್ಷಣ ಮಾತ್ರ ನನ್ನ ಮುಖವನ್ನು ನಿನಗೆ ಮರೆ ಮಾಡಿಕೊಂಡಿದ್ದೆನು, ಶಾಶ್ವತ ಕೃಪೆಯಿಂದ ನಿನ್ನನ್ನು ಕರುಣಿಸುವೆನು ಎಂದು ನಿನ್ನ ವಿಮೋಚಕನಾದ ಯೆಹೋವನು ಅನ್ನುತ್ತಾನೆ.**

ಯೆಶಾಯನು ಇಸ್ರಾಯೇಲ್ಯರಿಗೆ - ದೇವರ ಕೊನೆಗೊಳ್ಳದ ಪ್ರೀತಿಯು ''ಪತಿಯ'' ಪ್ರೀತಿಯಾಗಿದೆ ಎಂಬ ಭರವಸೆಯನ್ನು ಇಸ್ರಾಯೇಲ್ಯರಿಗೆ ನಿರೀಕ್ಷೆಯ ಪ್ರವಾದನೆ ನೀಡಿದ್ದಾನೆ.

ಯೆಶಾಯ 62:4-7

**ನೀನು ಇನ್ನು ಮೇಲೆ ಗಂಡಬಿಟ್ಟವಳು ಎನಿಸಿಕೊಳ್ಳೆ, ನಿನ್ನ ಸೀಮೆಗೆ ಬಂಜೆ ಎಂಬ ಹೆಸರು ಇನ್ನಿರದು ನೀನು ಎನ್ನುಲ್ಲಾಸಿನಿ ಎನಿಸಿಕೊಳ್ಳುವಿ ನಿನ್ನ ಸೀಮೆಗೆ ವಿವಾಹಿತೆ ಎಂಬ ಹೆಸರಾಗುವದು ಏಕೆಂದರೆ ಯೆಹೋವನು ನಿನ್ನಲ್ಲಿ ಉಲ್ಲಾಸಿತಗೊಳ್ಳುತ್ತಾನೆ ನಿನ್ನ ಸೀಮೆಗೆ ವಿವಾಹವಾಗುವದು ಯುವಕನು ಯುವತಿಯನ್ನು ವರಿಸುವಂತೆ ನಿನ್ನ ಮಕ್ಕಳು ನಿನ್ನನ್ನು ವರಿಸುವರು ವರನು ವಧುವಿನಲ್ಲಿ ಆನಂದಿಸುವ ಹಾಗೆ ನಿನ್ನ ದೇವರು ನಿನ್ನಲ್ಲಿ ಆನಂದಿಸುವನು ಯೆರೂಸಲೇಮೇ, ನಾನು ನಿನ್ನ ಪೌಳಿಗೋಡೆಗಳಲ್ಲಿ ಕಾವಲುಗಾರರನ್ನು ನೇಮಿಸಿದ್ದೇನೆ. ಅವರು ಹಗಲೂ ಇರುಳೂ ಮೌನವಾಗಿರರು ಯೆಹೋವನಿಗೆ ಜ್ಞಾಪಿಸುವವರೇ ಆತನು ಯೆರೂಸಲೇಮನ್ನು ಭದ್ರಪಡಿಸಿ ಲೋಕಪ್ರಸಿದ್ಧಿಗೆ ತರುವ ತನಕ ನಿಮಗೆ ವಿರಾಮವಿಲ್ಲದಿರಲಿ, ಆತನಿಗೂ ವಿರಾಮಕೊಡದಿರಿ.**

ಹೆಫ್ಜಿಭಾ (ಎನ್ನುಲ್ಲಾಸಿನಿ) ಅಂದರೆ ''ನನ್ನ ಆನಂದ'' ಎಂದರ್ಥ

ಬ್ಯೂಯುಲ್ಲಾ ಅಂದರೆ ''ಮದುವೆಯಾದವಳು''

ವರನು ವಧುವಿನ ಮೇಲೆ ಸಂತೋಷಿಸುವಂತೆ, ದೇವರು ನಿಮ್ಮ ಮೇಲೆ ಆನಂದಿಸುತ್ತಾನೆ.

ದೇವಜನರು ಆತನ ಆನಂದ, ಆತನ ವಧು ಮತ್ತು ಆತನ ಜನರ ಮೇಲೆ ದೇವರು ಆನಂದಿಸುತ್ತಾನೆ ಎಂಬುದನ್ನು ತಿಳಿದವರಾದ ದೇವ ಜನರು ಮಧ್ಯಸ್ಥಿಕೆಯ ಸೇವೆಯಲ್ಲಿ ಹೇಗೆ ಹರಿಯುತ್ತಾರೆ ಎಂಬುದನ್ನು ಗಮನಿಸಿರಿ.

## ಹತ್ತು ಮಂದಿ ಕನ್ನಿಕೆಯರ ಸಾಮ್ಯ

ಹತ್ತು ಮಂದಿ ಕನ್ನಿಕೆಯರ ಸಾಮ್ಯದಲ್ಲಿ (ಮತ್ತಾಯ 25:1-13) ಕರ್ತನಾದ ಯೇಸುವು ಯೆಹೂದ್ಯದ ಮದುವೆಯ ದೃಷ್ಟಾಂತವನ್ನು ಆತನ ಬರುವಿಕೆಗಾಗಿ ಕಾದಿರುವುವರು, ಎದುರುನೋಡುತ್ತಿರುವುದು, ಸಿದ್ಧವಾಗಿರುವುದು ಮತ್ತು ತಯಾರಾಗಿರುವುದರ ಪ್ರಾಮುಖ್ಯತೆಯ ಬಗ್ಗೆ ನಮಗೆ ತಿಳಿಸುತ್ತಾನೆ.

ಆ ದಿನಗಳಲ್ಲಿ, ಒಂದು ವಿಶಿಷ್ಟವಾದ ಯೆಹೂದ್ಯ ಮದುವೆಯು ಅನೇಕ ರಾತ್ರಿಗಳು ಜರುಗುತಿದ್ದವು, ವಿಶಿಷ್ಟವಾಗಿ ಏಳು ರಾತ್ರಿಗಳು ಮೊದಲ ರಾತ್ರಿಯಲ್ಲಿ ದಂಪತಿಗಳಿಗೆ ಅತೀ ಹತ್ತಿರವಾದವರನ್ನು ಕರೆಯುತ್ತಿದ್ದರು ಮತ್ತು ನಂತರದ ರಾತ್ರಿಗಳಿಗೆ ಆಚರಣೆಯು ನಡೆಯುತ್ತಿತ್ತು.

ಸಭೆಯು ಆತನ ಬರುವಿಕೆಗಾಗಿ, ಸನ್ನದ್ಧತೆಯ ಸ್ಥಿತಿ, ಸಿದ್ಧತೆ, ಎದುರುನೋಡುವಿಕೆ ಮತ್ತು ಸಹನೆಯಿಂದ ಕಾಯುತ್ತಿರಬೇಕು.

## ಒಂದು ಪರಿಶುದ್ಧ ಕನ್ಯೆ

2 ಕೊರಿಂಥದವರಿಗೆ 11:2
**ಯಾಕೆಂದರೆ ದೇವರಲ್ಲಿರುವಂಥ ಚಿಂತೆಯಿಂದಲೇ ನಾನು ನಿಮ್ಮ ವಿಷಯದಲ್ಲಿ ಚಿಂತಿಸುತ್ತೇನೆ. ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧ ಕನ್ಯೆಯಂತೆ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯ ಮಾಡಿದೆನಲ್ಲ.**

ಸಭೆಯು ಕ್ರಿಸ್ತನಿಗೆ ಶುದ್ಧ ಕನ್ಯೆ, ದೇವರ ಮದಲಗಿತ್ತಿ ಎಂಬುದನ್ನು ಪ್ರಸ್ತುತ ಪಡಿಸುವ ಆತ್ಮನಿಂದ ಅಪೊಸ್ತಲನಾದ ಪೌಲನು ಅವನ ಸೇವೆಯನ್ನು ಚಿತ್ರಿಸುತ್ತಾನೆ.

ನಾವು ಮಾಡುವಂತಹ ಎಲ್ಲಾ ಬಗೆಯ ಸೇವೆಯು ಕರ್ತನಾದ ಯೇಸುವಿಗಾಗಿ ವಧುವನ್ನು ದೇವರ ಮದಲಗಿತ್ತಿಯನ್ನು ಸಿದ್ಧ ಮಾಡುತ್ತಿದ್ದೇವೆ ಎಂಬುದನ್ನು ತಿಳುವಳಿಕೆಯೊಂದಿಗೆ ನಾವು ಸಂಯೋಜಿಸಬೇಕು. ಆತನು ನವಿರಾದ ಪ್ರೀತಿ ಅನುರಾಗದೊಂದಿಗೆ ಆತನಿಗಾಗಿ ಆತನ ಮದಲಗಿತ್ತಿಯನ್ನು ನಿಕಟತೆಯ ಸ್ಥಳಕ್ಕೆ ಆಕೆಯನ್ನು ಸೆಳೆಯುವುದಕ್ಕಾಗಿ ಆತನು ಪಡೆಯಲು ಪ್ರಯತ್ನಿಸುತ್ತಿದ್ದಾನೆ.

## ಒಂದು ಮಹಿಮೆಯುಳ್ಳ ಸಭೆ

ಎಫೆಸದವರಿಗೆ 5:22-32

**ಸ್ತ್ರೀಯರೇ, ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮ ನಿಮ್ಮ ಗಂಡಂದಿರಿಗೆ ಅಧೀನರಾಗಿರ್ರಿ. ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ. ಕ್ರಿಸ್ತನೋ ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ. ಅದಿರಲಿ ಸಭೆಯು ಕ್ರಿಸ್ತನಿಗೆ ಹೇಗೆ ಅಧೀನವಾಗಿದೆಯೋ ಹಾಗೆಯೇ ಸ್ತ್ರೀಯರು ತಮ್ಮ ತಮ್ಮ ಗಂಡಂದಿರಿಗೆ ಎಲ್ಲಾ ವಿಷಯಗಳಲ್ಲಿ ಅಧೀನರಾಗಿರಬೇಕು ಪುರುಷರೇ, ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ. ಆತನು ಅದನ್ನು ಪ್ರತಿಷ್ಠೆ ಪಡುಸುವದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಅದನ್ನು ಕಳಂಕ ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧ ಮಾಡಿದನು. ಹಾಗೆಯೇ ಪುರುಷರು ಸಹ ಸ್ವಂತ ಶರೀರವನ್ನು ಪ್ರೀತಿಸಿಕೊಳ್ಳುವ ಪ್ರಕಾರವೇ ತಮ್ಮ ಹೆಂಡತಿಯರನ್ನು ಪ್ರೀತಿಸುವ ಹಂಗಿನವರಾಗಿದ್ದಾರೆ. ತನ್ನ ಹೆಂಡತಿಯನ್ನು ಪ್ರೀತಿಸುವವನು ತನ್ನನ್ನೇ ಪ್ರೀತಿಸಿಕೊಳ್ಳುವವನಾಗಿದ್ದಾನೆ ಯಾರೂ ಎಂದೂ ಸ್ವ ಶರೀರವನ್ನು ಹಗೆ ಮಾಡಿದ್ದಿಲ್ಲ ಎಲ್ಲರೂ ತಮ್ಮ ಶರೀರಗಳನ್ನು ಪೋಷಿಸಿ ಸಂರಕ್ಷಿಸುತ್ತಾರೆ. ಯಾವ ದೇಹಕ್ಕೆ ನಾವು ಅಂಗಗಳಾಗಿದ್ದೇವೋ ಸಭೆಯೆಂಬ ಆ ದೇಹವನ್ನು ಕ್ರಿಸ್ತನು ಹಾಗೆಯೇ ಪೋಷಿಸಿ ಸಂರಕ್ಷಿಸುತ್ತಾನಲ್ಲಾ ಇದರ ನಿಮಿತ್ತದಿಂದ ಪುರುಷನ ತಂದೆ-ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು ಅವರಿಬ್ಬರೂ ಒಂದೇ ಶರೀರವಾಗಿರುವರು ಎಂದು ಬರೆದದೆ ನಾನು ಕ್ರಿಸ್ತನಿಗೂ ಸಭೆಗೂ ಇರುವ ಸಂಬಂಧವನ್ನು ಕುರಿತು ಮಾತಾಡುತ್ತಾ ಇದ್ದೇನೆ.**

ಸಭೆಯ ಜೊತೆಗಿನ ಕ್ರಿಸ್ತನ ಸಂಬಂಧವು, ಪತಿಯು ಅವನ ಪತ್ನಿಯೊಂದಿಗೆ ಹೊಂದಿರುವ ಸಂಬಂಧಕ್ಕೆ ಹೋಲಿಕೆಯಾಗಿದೆ. ಯೇಸುವು ಆತನ ವಧುವನ್ನು ಸ್ವಾಧೀನಪಡಿಸಿಕೊಳ್ಳಲೂ ದೊಡ್ಡ ಮೊತ್ತವನ್ನು ಪಾವತಿಸಿದ್ದಾನೆ.

ಯೇಸುವು ಸಭೆಗಾಗಿ ಏನನ್ನು ಮಾಡುತ್ತಾನೆ:

- ಆತನ ವಾಕ್ಯದಿಂದ ಸಭೆಯನ್ನು ಆತನು ಶುದ್ಧೀಕರಿಸುತ್ತಾನೆ ಮತ್ತು ಪವಿತ್ರಗೊಳಿಸುತ್ತಾನೆ.
- ಆಕೆಯನ್ನು ಒಂದು ಮಹಿಮೆಯುಳ್ಳ ಸಭೆಯಾಗಿ ಯಾವುದೇ ಕಳಂಕವಿಲ್ಲದೆ, ಪವಿತ್ರತೆಯಲ್ಲಿ ಪರಿಪೂರ್ಣಗೊಳಿಸಲು ಆತನು ಕಾರ್ಯ ಮಾಡುತ್ತಿದ್ದಾನೆ.
- ಆತನು ಸಭೆಯನ್ನು ಪೋಷಿಸುತ್ತಾನೆ ಮತ್ತು ಪಾಲಿಸುತ್ತಾನೆ.

## ವಧುವು ತನ್ನನ್ನು ಸಿದ್ಧಪಡಿಸಿಕೊಂಡಿದ್ದಾಳೆ

ಪ್ರಕಟನೆ 19:6-9

**ತರುವಾಯ ಜನರ ದೊಡ್ಡ ಗುಂಪಿನ ಶಬ್ದದಂತೆಯೂ ಜಲಪ್ರವಾಹ ಘೋಷದಂತೆಯೂ ಗಟ್ಟಿಯಾದ ಗುಡುಗಿನ ಶಬ್ದದಂತೆಯೂ ಇದ್ದ ಒಂದು ಶಬ್ದವನ್ನು ಕೇಳಿದೆನು. ಅದು ಹಲ್ಲೆಲೂಯಾ; ಸರ್ವಶಕ್ತನಾಗಿರುವ ನಮ್ಮ ದೇವರಾದ ಕರ್ತನು ಆಳುತ್ತಾನೆ ಯಜ್ಞದ ಕುರಿಯಾದಾತನ ವಿವಾಹ ಕಾಲವು ಬಂತು ಆತನಿಗೆ ವಿವಾಹವಾಗುವ ಕನ್ಯೆ ತನ್ನನ್ನು ಸಿದ್ಧ ಮಾಡಿಕೊಂಡಿದ್ದಾಳೆ; ಸಂತೋಷ ಪಡೋಣ, ಹರ್ಷಗೊಳ್ಳೋಣ ಆತನನ್ನು ಘನಪಡಿಸೋಣ ಎಂದು ಹೇಳಿತು ಪ್ರಕಾಶಮಾನವೂ ನಿರ್ಮಲವೂ ಆದ ನಯವಾದ ನಾರು ಮಡಿಯನ್ನು ಧರಿಸಿಕೊಳ್ಳುವದಕ್ಕೆ ಆಕೆಗೆ ಅನುಗ್ರಹಿಸೋಣವಾಗಿತ್ತು. ಆ ನಾರು ಮಡಿ ಅಂದರೆ ದೇವಜನರ ಸತ್ಕಾರ್ಯಗಳೇ ಇದಲ್ಲದೆ ಅವನು ನನ್ನ ಸಂಗಡ ಮಾತಾಡುತ್ತಾ ಯಜ್ಞದ ಕುರಿಯಾದಾತನ ವಿವಾಹದ ಔತಣಕ್ಕೆ ಕರೆಸಿಕೊಂಡವರು ಧನ್ಯರು ಎಂಬುದಾಗಿ ಬರೆ ಎಂದು ನನಗೆ ಹೇಳಿ ಈ ಮಾತುಗಳು ದೇವರ ಸತ್ಯ ವಚನಗಳಾಗಿವೆ ಅಂದನು.**

ಇನ್ನೂ ಬರಬೇಕಾಗಿರುವುದನ್ನು ಮುಂದೆ ನೋಡುತ್ತಿರುವಾಗ, ಅಪೊಸ್ತಲನಾದ ಯೋಹಾನನು ಯಜ್ಞದ ಕುರಿಯಾದಾತನ ವಿವಾಹ ದೊಡ್ಡ ವಿವಾಹದ ಔತಣವನ್ನು ನೋಡುತ್ತಾನೆ ಆತನಿಗಾಗಿ ಸಿದ್ಧಗೊಂಡಿರುವ ಬಿಡುಗಡೆ ಹೊಂದಿರುವ ಆತನ ವಿಶ್ವಾಸಿಗಳೊಡನೆ ವರನಾದ ದೇವರು ''ವಿವಾಹ ಮಾಡಿಕೊಂಡಿದ್ದಿರುವಾಗ''. ಇಂತಹ ಜನರು ಯಜ್ಞದ ಕುರಿಯಾದಾತನ ರಕ್ತದಿಂದ ತೊಳೆಯಲ್ಪಟ್ಟವರು, ಆತನ ನೀತಿಯೆಂಬ ವಸ್ತ್ರದಿಂದ ಹೊದಿಸಲ್ಪಟ್ಟವರು (ಆತನ ನೀತಿವಂತಿಕೆ ಕಾರ್ಯದಲ್ಲಿ ನಡೆಯುತ್ತಿರುವವರು (ಆತನ ನೀತಿವಂತಿಕೆಯನ್ನು ವ್ಯಕ್ತಪಡಿಸುವುದು).

## ಆತ್ಮನು ಮತ್ತು ವಧುವು

ಪ್ರಕಟನೆ 22:17

**ಆತ್ಮನೂ ಮದಲಗಿತ್ತಿಯೂ ಬಾ ಅನ್ನುತ್ತಾರೆ**

ಪವಿತ್ರಾತ್ಮನಿಗೆ ಮದಲಗಿತ್ತಿಯನ್ನು ಮಂದಲಿಂಗನಿಗಾಗಿ (ಯೇಸು) ಸಿದ್ಧಗೊಳಿಸುವ ಕೆಲಸವನ್ನು ಒಪ್ಪಿಸಿಕೊಡಲಾಗಿದೆ.

ಮದಲಗಿತ್ತಿಯಾಗಿ ನಾವು ಜೋಡಣೆಯಾಗಿರಬೇಕು ಮತ್ತು ದೇವರ ಮದಲಿಂಗನಾದ ಯೇಸುಕ್ರಿಸ್ತನಿಗಾಗಿ ನಮ್ಮನ್ನು ಸಿದ್ಧಗೊಳಿಸುವ, ನಮ್ಮ ಮೂಲಕವಾಗಿ, ನಮ್ಮ ಮಧ್ಯದಲ್ಲಿ ಆತನು ಕಾರ್ಯಮಾಡಲು ಆತನ ಅಪೇಕ್ಷಿಸುವ, ಕೇಳುವ, ಹೇಳುವ, ಮಾಡುವ ಆತ್ಮನೊಡನೆ ಐಕ್ಯತೆಯಿಂದಿರಬೇಕು.

## ವಧುವು ಮತ್ತು ವರನು

ನಮ್ಮ ಕರ್ತನೊಂದಿಗಿನ ಸಂಬಂಧವು ವಧು ಮತ್ತು ವರನೊಂದಿಗಿನ ಸಂಬಂಧದಿಂದ ಅನೇಕ ರೀತಿಗಳಲ್ಲಿ ವ್ಯಾಖ್ಯಾನಿಸಲಾಗಿದೆ. ಹೊಸ ಮತ್ತು ಹಳೇ ಒಡಂಬಡಿಕೆಗಳೆರಡರಲ್ಲೂ ನಾವು ಗಮನಿಸುವುದನ್ನು ಸಂಕ್ಷಿಪ್ತ ರೂಪದಲ್ಲಿ ನೋಡೋಣ:

### *1) ಮದಲಗಿತ್ತಿಯೂ, ಆಕೆಯ ಪ್ರೀತಿ, ಮೆಚ್ಚುಗೆಯಲ್ಲಿ ಕಳೆದುಹೋಗಿದ್ದಾಳೆ, ಆಕೆಯ ಮದಲಿಂಗನಿಗೆ ಬದ್ಧತೆಯಾಗಿದ್ದಾಳೆ*

ಆಕೆಯ ಸಂಪೂರ್ಣ ಪ್ರೀತಿ - ಅತಿ ಆಳವಾದ ಹತಾಶೆಯ ಪ್ರೀತಿಯಲ್ಲಿದ್ದಾಳೆ. ಆಕೆಯು ವರನಿಗಾಗಿ ಕಾಯುವಾಗ ಆಕೆಯ ಪ್ರೀತಿಯ ಹಾಡುಗಳನ್ನು ಹಾಡುತ್ತಾಳೆ. ಇದು ಆರಾಧನೆ. ವಧು ಮತ್ತು ವರನ ಪ್ರೀತಿಯ ಹಾಡು ನಾವು ದೇವರ ಹೃದಯದ ಹಿಂತಿರುಗಿಸಿದ ಪ್ರೀತಿಯ ಹಾಡುಗಳನ್ನು ಹಾಡುತ್ತೇವೆ. ಪ್ರೀತಿಯ ಹಾಡುಗಳು ಆತ್ಮನಿಂದ ಪ್ರೇರಿತಗೊಂಡಿವೆ.

ಯೆರೆಮೀಯ 2:2,3 ರಲ್ಲಿ ನಾವು ನೋಡಿದರ ದೇವರ ಮದಲಿಂಗನು ಇದನ್ನು ಅಪೇಕ್ಷಿಸುತ್ತಾನೆ.

ಪಕ್ಕದ ಟಿಪ್ಪಣಿ

ನಾವು ಪ್ರತಿಬಿಂಬಿಸಬೇಕಾದ ಎರಡು ವಿಷಯಗಳು ಇಲ್ಲಿವೆ:

ಅ) ಸ್ತ್ರೀಯರು ಆತನು ಅವರ ಸ್ವಾಭಾವಿಕ ಪ್ರಿಯತಮ, ಪತಿ ಅಥವಾ ಗೆಳೆಯ ಎಂಬುದಾಗಿ ಶಾರೀರಿಕ ರೀತಿಯಲ್ಲಿ ಯೇಸುವಿನೊಂದಿಗೆ ಪ್ರಣಯಿಸುವುದೆಂಬುದಾಗಿ ವಾಖ್ಯಾನಿಸಿ ಇದನ್ನು ಅರ್ಥ ಮಾಡಿಕೊಳ್ಳಬಾರದು.

ಆ) ಪುರುಷರಿಗೆ, ನಾವು ಈ ಸತ್ಯವನ್ನು ಅಳವಡಿಸಿಕೊಳ್ಳುವಾಗ ನಮ್ಮ ಸ್ವಾಭಾವಿಕ ಪುರುಷತ್ವವನ್ನು ನಾವು ಕಳೆದುಕೊಳ್ಳುತ್ತೇವೆ ಎಂಬುದಾಗಿಯಲ್ಲ, ಬದಲಿಗೆ ಯೇಸುವಿನೊಡನೆ ನಮ್ಮ ಆತ್ಮಿಕ ಸಂಬಂಧದಲ್ಲಿ ಅದರ ಅರ್ಥವನ್ನು ಮತ್ತು ಅನ್ವಯವನ್ನು ನಾವು ಅರ್ಥಮಾಡಿಕೊಳ್ಳುತ್ತೇವೆ.

***2) ವಧುವು, ಆಕೆಯ ವರನನ್ನು ಮೆಚ್ಚಿಸುವಂತದ್ದರಲ್ಲಿ ಆಕೆಯನ್ನು ಅಲಂಕರಿಸಿಕೊಳ್ಳುತ್ತಾನೆ ಆದ್ದರಿಂದ ಆಕೆಯು ತನ್ನ ವರನಿಗಾಗಿ ಅತ್ಯುತ್ತಮವಾಗಿ ತನ್ನನ್ನು ಪ್ರಸ್ತುತಪಡಿಸುತ್ತಾಳೆ.***

ಆದ್ದರಿಂದ ಸಭೆಯು ನಮ್ಮ ಕುರಿತು ಮತ್ತು ನಮಗೆ ಏನು ಸಂತೋಷ ನೀಡುತ್ತದೆ ಅನ್ನುವಂತದ್ದಲ್ಲ. ಸಭೆಯು ಆತನನ್ನು ಸಂತೋಷ ಪಡಿಸುವಂತದ್ದಾಗಿದೆ.

ನಾನು ಏನನ್ನು ಇಷ್ಟಪಡುತ್ತೇನೆ ಅನ್ನುವಂತದ್ದು ಸಭೆಯಲ್ಲ ಆದರೆ ನಮ್ಮಲ್ಲಿ ಮತ್ತು ನಮ್ಮ ಮಧ್ಯದಲ್ಲಿ ಆತನು ನೋಡಲು ಇಷ್ಟ ಪಡುವಂತದ್ದಾಗಿದೆ.

ಸಭೆಯು ಒಬ್ಬರಿಗೊಬ್ಬರು ಪ್ರಭಾವಶಾಲಿಗಳು ಅಥವಾ ಒಬ್ಬರಿಗೊಬ್ಬರ ಮುಂದೆ ಉತ್ತಮವಾಗಿ ಕಾಣುವುದಲ್ಲ ಸಭೆಯು ಆತನ ದೃಷ್ಟಿಯಲ್ಲಿ ಮೆಚ್ಚುಗೆಯಿಂದಿರುವುದಾಗಿದೆ.

***3) ವಧುವು, ವರನ ಷರತ್ತುಬದ್ಧವಲ್ಲದ ಪ್ರೀತಿಯನ್ನು ಸ್ವೀಕರಿಸುವಳಾಗಿದ್ದಾಳೆ.***

ನಾವು ಪದೇ ಪದೇ ದೇವರ ವರನು ಆತನ ವಧುವಿಗೆ ಹತೋಟಿಯಿಲ್ಲದ ಪ್ರೀತಿಯ ಭರವಸೆ ಕೊಡುವುದನ್ನು ನೋಡುತ್ತೇವೆ. ಯೇಸು ದೇವರ ಮದಲಿಂಗನು, ಸಭೆಯೆಂಬ ಆತನ ಮದಲಗಿತ್ತಿಗಾಗಿ ನವಿರಾದ ಪ್ರೀತಿ, ಪ್ರಣಯ, ಸೌಮ್ಯತೆ ಕರುಣೆ, ನಂಬಿಗಸ್ತಿಕೆ, ನ್ಯಾಯ ಶಾಶ್ವತವಾದ ಪ್ರೀತಿಯಿಂದ ತುಂಬಿದ್ದಾನೆ.

ಇಂತಹ ಸತ್ಯಕ್ಕೆ ನಮ್ಮನ್ನು ಕೊಡಬೇಕು ಮತ್ತು ಆತನ ಭಾವನೆಗಳು, ನಮಗಾಗಿರುವ ಆತನ ಅಪಾರವಾದ ಹತೋಟಿಯಿಲ್ಲದ ಹೃದಯ ಪ್ರೀತಿಯನ್ನು ಅನುಭವಿಸಬೇಕು.

***4) ವಧುವು, ವರನ ಹೃದಯ - ಒಂದು ನಿಕಟತೆಯ ಸ್ಥಳದ ಪ್ರವೇಶ ಹೊಂದಿದ್ದಾಳೆ.***

ಮದಲಿಂಗನಾದ ದೇವರು ಇದನ್ನು ಹಾತೊರೆಯುತ್ತಾನೆ ಆತನನ್ನು ತಿಳಿದುಕೊಳ್ಳುವಂತಹ ಸ್ಥಳಕ್ಕೆ ಆತನು ನಮ್ಮನ್ನು ಕರೆಯುತ್ತಾನೆ (ಹೋಶೇಯ 2:20).

***5) ವಧುವು, ವರನಿಗಾಗಿ ತನ್ನನ್ನು ಇಟ್ಟುಕೊಂಡಿರುತ್ತಾಳೆ ಆಕೆಯು ಬೇರೆ ಯಾವುದೇ ಮಾನವನಲ್ಲಿ ನೆಲೆಗೊಳ್ಳುವುದಿಲ್ಲ.***

ಕ್ರಿಸ್ತನು, ಸುಕ್ಕು ಅಥವಾ ಚುಕ್ಕೆ ಇಲ್ಲದಂತಹ ಮದಲಗಿತ್ತಿಗಾಗಿ ತಿರುಗಿ ಬರುತ್ತಾನೆ - ಆಕೆಯನ್ನು ವಾಕ್ಯದಿಂದ ತೊಳೆದಿದ್ದಾನೆ, ಪವಿತ್ರವಾಗಿ ಆಕೆಯನ್ನು ಇಟ್ಟಿದ್ದಾನೆ ಮತ್ತು ಆಕೆಯನ್ನು ಸಿದ್ಧಗೊಳಿಸಿದ್ದಾನೆ.

ಆತನ ಸಲಹುವ ವಧುವಿಗಾಗಿ ಇರುವ ಆತನ ಪ್ರೀತಿಯನ್ನು ನಾವು ನೋಡುವಾಗ, ನಾವು ಸಂಪೂರ್ಣವಾಗಿ ಮತ್ತು ಪರಿಪೂರ್ಣವಾಗಿ ಆತನಿಗೆ ನಮ್ಮನ್ನು ಕೊಡುತ್ತೇವೆ.

ಆತನ ಪ್ರೀತಿಯ ಕಾರಣದಿಂದ ನಾವು ತೊಳೆಯಲ್ಪಟ್ಟಿದ್ದೇವೆ (ಶುದ್ಧೀಕರಿಸಲ್ಪಟ್ಟಿದ್ದೇವೆ)

ಮದಲಿಂಗನಾದ ದೇವರ ಹೃದಯದ ಒಂದು ಸರಿಯಾದ ಪ್ರಜ್ಞೆಯು ನಮ್ಮನ್ನು ಪವಿತ್ರತೆಯ ಸ್ಥಳಕ್ಕೆ ಮತ್ತು ಪವಿತ್ರವಾದ ಪ್ರೀತಿಯಿಂದ ಜನಿಸಿದ ದೈವಭಕ್ತಿಗೆ ನಡೆಸುತ್ತದೆ.

**6) ಮದಲಿಂಗನಿಗೆ ಮದುವೆಯಾಗಲು ಸಿದ್ಧಗೊಂಡಿರುವ ಮದಲಗಿತ್ತಿಯಂತಿರಲು ನಾವು ಕರೆಯಲ್ಪಟ್ಟಿದ್ದೇವೆ ಆಕೆಯು ನಿರೀಕ್ಷಣೆಯಿಂದ ಕಾಯುತ್ತಿರುತ್ತಾಳೆ.**

ತಾಳ್ಮೆಯಿಂದ ನಿರೀಕ್ಷಿಸಿಕೊಂಡಿರುವ ಒಂದು ಪ್ರಜ್ಞೆ ಸನ್ನದ್ಧತೆಯೊಂದಿಗೆ ಸಿದ್ಧತೆಯಿಂದಿರುವುದು ನಮ್ಮ ಹೃದಯಗಳನ್ನು ಹಿಡಿದುಕೊಂಡಿರಬೇಕು.

***7) ನಾವು ಕ್ರಿಸ್ತನ ದೇಹದಲ್ಲಿ ಸೇವೆ ಮಾಡುವಾಗ, ನಾವು ಕ್ರಿಸ್ತನ ಮದಲಗಿತ್ತಿಗೆ ಸೇವೆ ಮಾಡುತ್ತಿರುತ್ತೇವೆ - ದೇವರು ಷರತ್ತಿಲ್ಲದೆ ಪ್ರೀತಿಸುವ ಜನರು, ಆತನ ಮದಲಗಿತ್ತಿಯಾಗಿ ಆತನು ಸಂತೋಷಿಸುವ ಜನರು, ಆತನು ವಿವಾಹವಾಗಿರುವಂತಹ ಜನರು ಎಲ್ಲಾ ಸೇವೆಯು ಮಧ್ಯಸ್ಥಿಕೆ ಒಳಗೊಂಡಿದೆ, ಈ ಪ್ರಜ್ಞೆಯೊಂದಿಗೆ ಹರಿದುಹೋಗಬೇಕು.***

ಸೇವೆ ಮತ್ತು ಮಧ್ಯಸ್ಥಿಕೆಯು, ಮದಲಿಂಗನಾದ ದೇವರು ಮತ್ತು ಆತನ ಮದಲಗಿತ್ತಿಗಾಗಿ ಇರುವ ಆತನ ಪ್ರೀತಿ ಎಂಬುದರ ಅರ್ಥದಿಂದ ಜನಿಸಿರುವಂತದ್ದಾಗಿದೆ. ನಾವು ಯಾವಾಗ ಮದಲಿಂಗನಾದ ದೇವರು, ಯೇಸುವನ್ನು ಎದುರುಗೊಳ್ಳುತ್ತೇವೋ ಮತ್ತು ಆತನ ಮದಲಗಿತ್ತಿಗಾಗಿ ಇರುವ ಆತನ ಭಾವೋದ್ರಿಕ್ತವನ್ನು ಅರ್ಥಮಾಡಿಕೊಳ್ಳುವಾಗ ನಮ್ಮ ಸೇವೆ ಮತ್ತು ಮಧ್ಯಸ್ಥಿಕೆಯು ಹೊಸ ಅರ್ಥವನ್ನು ತೆಗೆದುಕೊಳ್ಳುತ್ತದೆ. ನಾವು ವಧುವನ್ನು

ಸಿದ್ಧಪಡಿಸುವ ಮಾರ್ಗವಾಗಿ ನೋಡುತ್ತೇವೆ. ಮತ್ತು ಆಕೆಯನ್ನು ಮದಲಿಂಗನಾದ ದೇವರಿಗೆ ನಿಷ್ಕಳಂಕವಾಗಿ ಪ್ರಸ್ತುತ ಪಡಿಸಬೇಕು. ನಾವು ದೇವ ಜನರನ್ನು ಕೋಪ, ಟೀಕೆ ಮುಂತಾದವುಗೊಳಡನೆ ಸಮೀಪಿಸುವುದಿಲ್ಲ. ಆತನ ಮದಲಗಿತ್ತಿಗಾಗಿ ಇರುವ ಆತನ ಪ್ರೀತಿಯ ಮೇಲೆ ಅದನ್ನು ನಾವು ಆಧರಿಸುತ್ತೇವೆ.

## ಇದನ್ನು ಸ್ಥಳೀಯ ಸಭೆಯು ಕಾರ್ಯಗತಗೊಳಿಸಲು ಪ್ರಾಯೋಗಿಕ ವಿಧಾನಗಳು

- ಜನರು ಭಾವೋದ್ರಿಕ್ತ ಪ್ರೇಮಿಗಳು ಮತ್ತು ಕರ್ತನ ಆರಾಧನಾಗಾರರಾಗಿ ಕಂಡುಬರಲೂ ಪ್ರೋತ್ಸಾಹಿಸಬೇಕು.
- ನಾವು ಕರ್ತನಿಗಾಗಿ ಮಾಡುವಂತಹವುದೆಲ್ಲವೂ ಆತನಿಗಾಗಿರುವ ಪವಿತ್ರವಾದ ಪ್ರೀತಿಯಿಂದ ಜನ್ಮ ತಾಳಿದೆ ಮತ್ತು ನಿರ್ಬಂಧದಿಂದಲ್ಲ ನಾವು ಜನ್ಮ ತಾಳಿದ ಮತ್ತು ನಿರ್ಬಂಧದಿಂದಲ್ಲ. ನಾವು ಆತನ ಮದಲಗಿತ್ತಿಯಾಗಿದ್ದೇವೆ.
- ಮದಲಿಂಗನಾದ ದೇವರಿಗೆ ಒಬ್ಬ ಮದಲಗಿತ್ತಿಯನ್ನು ಸಿದ್ಧಗೊಳಿಸುತ್ತಿದ್ದೇವೆ ಎಂಬ ಅರ್ಥದಿಂದ ಎಲ್ಲಾ ಸೇವೆಯು ಹರಿದು ಹೋಗಬೇಕೆಂಬುದಾಗಿ ಸೇವಕರುಗಳಿಗೆ ಬೋಧಿಸಬೇಕು ಮದಲಿಂಗನು ಆತನ ಮದಲಗಿತ್ತಿಗಾಗಿ ಹೊಂದಿರುವ ಅದೇ ಪ್ರೀತಿಯಲ್ಲಿ ನಾವು ಮಾಡುವವರಾಗಿದ್ದೇವೆ.
- ಆತ್ಮನ ಚಲಿಸುವಿಕೆಗಾಗಿ ಸೂಕ್ಷ್ಮತೆಯಿಂದಿರಬೇಕು ಆತನು ನಮ್ಮನ್ನು ಸೆಳೆಯುತ್ತಾನೆ ಆದರೆ ಆತನು ನಮ್ಮನ್ನು ಹೊರಗೆ ಕಳುಹಿಸುತ್ತಾನೆ ಸ್ಥಳೀಯ ಸಭೆಯ ಸಭಿಕರನ್ನು ನಡೆಸುತ್ತಿರುವ ಆತ್ಮನ ಋತುಗಳಲ್ಲಿ ನಾವು ಪ್ರವಹಿಸಬೇಕು. ಆತನ ಪ್ರಸನ್ನತೆಗಾಗಿ ಮತ್ತು ಆತನ ಮೇಲೆ ಸುರಿಸುವಿಕೆಗಾಗಿ ಸುಮ್ಮನೆ, ಕಾಯ್ದುಕೊಂಡಿರಲು ಕರ್ತನು ಕರೆದ ಸಮಯಗಳು ಉಂಟು. ಸೇವಾ ಕ್ಷೇತ್ರಗಳಿಗೆ ತೀವ್ರತೆಯಿಂದ ಶ್ರಮದ ದುಡಿಮೆ ಮಾಡಲು ಆತನು ನಮ್ಮನ್ನು ಕಳುಹಿಸಿದ ಸಮಯಗಳುಂಟು.

## ಸಿದ್ಧವಾಗಿರಲು ಸವಾಲುಗಳು

- ''ಬರುವುದು'' ಮತ್ತು ''ಹೋಗುವುದು'' ಎರಡನ್ನು ಸಮತೋಲನ ಮಾಡಬೇಕು. ಮದಲಿಂಗನಾದ ದೇವರು ಸ್ವತಃ ಆಳವಾಗಿರಲು ನಮ್ಮನ್ನು ಕರೆಯುತ್ತಾನೆ. ಆದಾಗ್ಯೂ ಸುಗ್ಗಿಯ ಕರ್ತನು ಹೊರಗೆ ಹೋಗಲು ಆತನು ನಮಗೆ ಆದೇಶಾಧಿಕಾರ ಕೊಟ್ಟಿದ್ದಾನೆ. ಸ್ಥಳೀಯ ಸಭೆಯ ಅಂಗವು ''ಬಾ''

ಎನ್ನುವುದರಲ್ಲಿ ಸಂತೋಷ ಪಟ್ಟರೆ ಮತ್ತು ''ಹೋಗು'' ಎನ್ನುವುದನ್ನು ನಿರ್ಲಕ್ಷಿಸಿದರೆ ನಾವು ಆತನಿಗೆ ಪರಿಪೂರ್ಣವಾಗಿ ವಿಧೇಯರಾಗುತ್ತಿಲ್ಲ.

- ಕೆಲವು ಜನರು ಅಧಿಕವಾಗಿ ಕರ್ತನ ಮೇಲೆ ಕಾದುಕೊಂಡಿರುವುದರಲ್ಲಿ ಒಲವಿಟ್ಟು ಸಂತೋಷಪಡುವವರು ಇರಬಹುದು, ಹಾಗೆಯೇ ಇತರರು ಹೊರಗೆ ಹೋಗಿ ಸುಗ್ಗಿಯನ್ನು ಕೂಡಿಸುವುದರಲ್ಲಿ ಒಲವು ಹೊಂದಿರಬಹುದು ಸಭಾಪಾಲಕರು/ನಾಯಕರುಗಳಾಗಿ ನಿಮಗೆ ಮಾತಾಡುತ್ತಿರುವವರ ಮೇಲೆ ಅವಲಂಬಿಸಿ ಒಂದು ಅಥವಾ ಇತರರ ಕಡೆಗೆ ತಳ್ಳುವುದು ಅಥವಾ ಎಳಯುವುದು ಇರಬಹುದು. ಜನರುಗಳ ಆದ್ಯತೆಗಳಿಂದ ಪ್ರಭಾವಿತಗೊಳ್ಳದ್ದಂತೆ ನೀವು ಬಲವಾಗಿರಲೂ ಶಕ್ತರಾಗಿರಬೇಕು ಆದರೆ ಯಾವುದೇ ಸಮಯದಲ್ಲಿ ಕರ್ತನು ಹೇಳುವಂತದ್ದರಲ್ಲಿರಬೇಕು. ಜನರನ್ನು ಆಲಿಸಬೇಕು ಮತ್ತು ಆಮೇಲೆ ಕರ್ತನಿಗೂ ಕೇಳಬೇಕು ಮತ್ತು ಕರ್ತನು ಹೇಳುವುದನ್ನು ಮಾಡಬೇಕು.
- ಸ್ತ್ರೀಯರ ಮಧ್ಯದಲ್ಲಿ ಕರ್ತನಿಗೆ ವಿವಾಹವಾಗಿದ್ದೇವೆ ಎಂಬುದಾಗಿ ಅವರು ಊಹಿಸಿ ಇಂತಹ ಆತ್ಮಿಕ ಸತ್ಯದೊಡನೆ ಭಾವನಾತ್ಮಕವಾಗಿ ಸಾಗಿಸಲ್ಪಟ್ಟ ಪ್ರವೃತ್ತಿ ಅವರ ಮಧ್ಯದಲ್ಲಿರಬಹುದು. ಅವರು ಆಮೇಲೆ ಕೆಲವು ಬಾರಿ ನಾಯಕತ್ವದಲ್ಲಿರುವಂತಹ ಪುರುಷರು ಮತ್ತು ಅವರ ಗಂಡಂದಿರನ್ನು ಕೆಲವು ಬಾರಿ ಅಸಡ್ಡೆ ಮಾಡಬಹುದು ಮತ್ತು ಅಗೌರವ ತೋರಿಸಬಹುದು ಆದ್ದರಿಂದ ಇಂತಹ ಸತ್ಯವನ್ನು ಪ್ರಸ್ತುತ ಪಡಿಸುವುದರಲ್ಲಿ ಆತನ ಮದಲಗಿತ್ತಿಯಾಗಿರುವುದರಲ್ಲಿನ ಒಳ್ಳೆಯ ಮತ್ತು ತಪ್ಪಾದ ಅನ್ವಯಗಳನ್ನು ನಿಖರವಾಗಿ ವಿವರಿಸಬೇಕು.

## ಪರಿಗಣಿಸಲು ಪ್ರಶ್ನೆಗಳು

ವಿಶ್ವಾಸಿಗಳು ಕರ್ತನಿಗಾಗಿರುವ ಭಾವೋದ್ರಿಕ್ತ ತೈಲದ ಪ್ರೀತಿಯನ್ನು ಪಾಲಿಸಲು ನಾವು ಹೇಗೆ ಸಹಾಯ ಮಾಡಬಹುದು ಆದ್ದರಿಂದ ಮದಲಿಂಗನಾದ ದೇವರಿಗೆ ಯಾವಾಗಲೂ ಆರಾಧನೆ ಮತ್ತು ಅತಿ ರಂಜಿತ ದೀಪದ ಅವರ ಭಕ್ತಿಯು ಅರ್ಪಿಸಲ್ಪಡಬೇಕು?

# 13

# ಸ್ಥಳೀಯ ಸಭೆ-ಪ್ರಾರ್ಥನೆ ಮತ್ತು ಆರಾಧನೆಯ ಒಂದು ಮನೆ

## ಒಂದು ರಾಜಮನೆತನದ ಯಾಜಕವರ್ಗ

ಎರಡೂ ಒಡಂಬಡಿಕೆಗಳಲ್ಲಿ, ಜನರು ಆತನ ''ರಾಜತ್ವದ ಯಾಜಕವರ್ಗದವರಾಗಿರಬೇಕೆಂದು'' ದೇವರು ಅಪೇಕ್ಷಿಸುವುದನ್ನು ನಾವು ನೋಡುತ್ತೇವೆ.

ವಿಮೋಚನಾ ಕಾಂಡ 19:3-6

**ಮೋಶೆ ಬೆಟ್ಟವನ್ನೇರಿ ದೇವರ ಸನ್ನಿದಿಗೆ ಹೋದಾಗ ಯೆಹೋವನು ಅವನಿಗೆ ಬೆಟ್ಟದ ಮೇಲಿಂದ ಕೂಗಿ - ನೀನು ಯಾಕೋಬನ ಮನೆತನದವರಾದ ಇಸ್ರಾಯೇಲ್ಯರಿಗೆ ಈ ಮಾತುಗಳನ್ನು ಹೇಳಬೇಕು ಏನೆಂದರೆ - ನಾನು ಐಗುಪ್ತ್ಯರಿಗೆ ಏನು ಮಾಡಿದೆನೋ ಹದ್ದು ತನ್ನ ಮರಿಗಳನ್ನು ರೆಕ್ಕೆಗಳ ಮೇಲೆ ಹೊತ್ತುಕೊಳ್ಳುವಂತೆ ನಾನು ನಿಮ್ಮನ್ನು ಹೊತ್ತುಕೊಂಡು ನನ್ನ ಸ್ಥಳಕ್ಕೆ ಹೇಗೆ ಸೇರಿಸಿದೆನೋ ಇದನ್ನೆಲ್ಲಾ ನೀವು ನೋಡಿದ್ದೀರಷ್ಟೆ ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯ ಜನರಾಗುವಿರಿ ಸಮಸ್ತ ಭೂಮಿಯೂ ನನ್ನದಷ್ಟೆ ನೀವು ನನಗೆ ಯಾಜಕ ರಾಜ್ಯವು ಪರಿಶುದ್ಧ ಜನವೂ ಆಗಿರುವಿರಿ ಇವೇ ನೀನು ಇಸ್ರಾಯೇಲ್ಯರಿಗೆ ಹೇಳಬೇಕಾದ ಮಾತುಗಳು ಅಂದನು.**

1 ಪೇತ್ರನು 2:5

**ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ ಸಮರ್ಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸುವದಕ್ಕೆ ಪವಿತ್ರ ಯಾಜಕ ವರ್ಗದವರಾಗಿದ್ದೀರಿ.**

ನಾವುಗಳು ಆತ್ಮೀಕವಾದ ಯಜ್ಞಗಳನ್ನು ಸಮರ್ಪಿಸಲು ಕರೆಯಲ್ಪಟ್ಟಂತಹ ಪವಿತ್ರ ಯಾಜಕವರ್ಗದವರಾಗಿದ್ದೇವೆ.

ನಮ್ಮ ಆರಾಧನೆ ಮತ್ತು ನಮ್ಮ ಪ್ರಾರ್ಥನೆಯು ದೇವರಿಗೆ ನಾವು ಸಮರ್ಪಿಸುವ ಪ್ರಾಮುಖ್ಯವಾದ ಆತ್ಮೀಕ ಯಜ್ಞಗಳಾಗಿವೆ.

## ಒಂದು ಸರ್ವಕಾಲಿಕ ಬೆಂಕಿ

**ಯಾಜಕ ಕಾಂಡ 6:12,13**

**ಯಜ್ಞ ವೇದಿಯ ಮೇಲಣ ಬೆಂಕಿ ಸರ್ವಾಂಗ ಹೋಮದ್ರವ್ಯದಿಂದ ಉರಿಯುತ್ತಲೇ ಇರಬೇಕು ಅದು ಆರಿ ಹೋಗಬಾರದು ಪ್ರತಿದಿನವೂ ಹೊತ್ತಾರೆಯಲ್ಲಿ ಯಾಜಕನು ಕಟ್ಟಿಗೆಯನ್ನು ತಂದುಹಾಕಿ ಬೆಂಕಿ ಉರಿಸಿ ಅದರ ಮೇಲೆ ಹೋಮ ದ್ರವ್ಯವನ್ನು ಕ್ರಮಪಡಿಸಿ ಸಮಾಧಾನಯಜ್ಞ ಪಶುಗಳ ಕೊಬ್ಬನ್ನು ಅದರ ಮೇಲೆ ಹೋಮ ಮಾಡಬೇಕು ಬೆಂಕಿಯು ಯಾವಾಗಲೂ ಉರಿಯುತ್ತಿರಬೇಕು ಆರಿಹೋಗಬಾರದು.**

ಮೋಶೆಯು ದೇವದರ್ಶನದ ಗುಡಾರವನ್ನು ಕಟ್ಟಿದಾಗ, ದೇವದರ್ಶನ ಗುಡಾರದ ಉದ್ಘಾಟನೆಯಲ್ಲಿ, ಕಂಚಿನ ಬಲಿಪೀಠದ ಮೇಲೆ ಪರಲೋಕದಿಂದ ಮೊದಲ ಬೆಂಕಿಯು ಬಂದಿತ್ತು (ಯಾಜಕಕಾಂಡ 9:24) ಆದ್ದರಿಂದ ಅದನ್ನು ನಿರಂತರವಾಗಿ ಇಂಧನವನ್ನು ಪೂರೈಸುವುದರೊಡನೆ ನಿರಂತರವಾಗಿ ಅದನ್ನು ಉಳಿಸಿಕೊಳ್ಳುವುದಾಗಿತ್ತು ಅವರ ಯಜ್ಞಗಳೆಲ್ಲವೂ ಅವರ ತಲೆಮಾರಿನವರೆಗೂ, ಆ ಪರಲೋಕದ ಬೆಂಕಿಯಿಂದ ಉರಿಯುತ್ತಿರುವಂತೆ ಎಂದು ಹೇಳಲಾಗಿದೆ

ಯಜ್ಞದ ಮೇಲೆ ಬೆಂಕಿಯು ಬೀಳುತ್ತದೆ, ನಾವು ಯಜ್ಞವನ್ನು ಒದಗಿಸುತ್ತೇವೆ. ದೇವರು ಆತನ ಬೆಂಕಿಯನ್ನು ಒದಗಿಸುತ್ತಾನೆ. ನಮ್ಮ ನಿರಂತರ ಆರಾಧನೆ ಮತ್ತು ಪ್ರಾರ್ಥನೆಯ ಯಜ್ಞಗಳು ದೇವರ ಬೆಂಕಿಯಿಂದ ಉರಿಯುತ್ತಿರುತ್ತವೆ. ಇದು ನಿಲ್ಲಬಾರದು ಯಾವಾಗಲೂ ಮುಂದುವರಿಯುತ್ತಿಬೇಕೆಂಬುದಾಗಿ ದೇವರು ಬಯಸುತ್ತಾನೆ.

## ಪವಿತ್ರ ಧೂಪದ್ರವ್ಯ

ವಿಮೋಚನಾ ಕಾಂಡ 30:34-38

**ಅದಲ್ಲದೆ ಯೆಹೋವನು ಮೋಶೆಗೆ ಆಜ್ಞಾಪಿಸಿದ್ದೇನೆಂದರೆ ನೀನು ಹಾಲು ಮಡ್ಡಿ, ಗುಗ್ಗಲ, ಗಂಧದ ಚಕ್ಕೆ, ಎಂಬ ಪರಿಮಳ ದ್ರವ್ಯಗಳನ್ನು ಸ್ವಚ್ಛವಾದ ಧೂಪವನ್ನೂ ಸಮಭಾಗವಾಗಿ ತೆಗೆದುಕೊಂಡು ಸುವಾಸನೆಯುಳ್ಳ ಬುಕ್ಕಿಟ್ಟಾಗಿರುವಂತೆ ಸುಗಂಧದ್ರವ್ಯಕಾರರ ವಿದ್ಯೆಯ ಮೇರೆಗೆ ಕಲಿಸಿ ಉಪ್ಪು ಹಾಕಿ ದೇವರ ಸೇವೆಗೆ ಸ್ವಚ್ಛವಾದ ಧೂಪದ್ರವ್ಯವನ್ನು ಮಾಡಿಸಬೇಕು ಅದರಲ್ಲಿ ಸ್ವಲ್ಪವನ್ನು ಪುಡಿ ಮಾಡಿಸಿ ದೇವದರ್ಶನದ ಗುಡಾರದೊಳಗೆ ಆಜ್ಞಾಶಾಸನಗಳ ಮಂಜೂಷದ ಎದುರಾಗಿ ನಾನು ನಿನಗೆ ದರ್ಶನ ಕೊಡುವ ಸ್ಥಳದಲ್ಲಿ ಇರಿಸಬೇಕು ಅದು ಅತಿಪರಿಶುದ್ಧವಾದದ್ದೆಂದು ನೀವು ತಿಳಿದುಕೊಳ್ಳಬೇಕು ನೀವು ಆ ಧೂಪದ್ರವ್ಯದ ಜೀನಸುಗಳ ಮೇರೆಗೆ ನಿಮ್ಮ ಸ್ವಂತಕ್ಕೋಸ್ಕರ ಧೂಪದ್ರವ್ಯವನ್ನು ಮಾಡಿಸಲೇಬಾರದು ಅದು ಯೆಹೋವನ ಸೇವೆಗೆ ಮಾತ್ರ ಉಪಯೋಗಿಸಬೇಕಾದ ಮೀಸಲಾದ ಪದಾರ್ಥವೆಂದು ಭಾವಿಸಬೇಕು ಸುವಾಸನೆಗೋಸ್ಕರ ಅಂಥವನ್ನು ಮಾಡಿಕೊಳ್ಳುವವನು ತನ್ನ ಕುಲದಿಂದ ತೆಗೆದುಹಾಕಲ್ಪಡಬೇಕು.**

ದೇವರಿಗೆ ಅರ್ಪಿತವಾಗುವ ಯಾವ ವಸ್ತುವಾದರೂ ಪರಿಶುದ್ಧ ಮತ್ತು ಶುಚಿಯಾಗಿರಬೇಕು (ವಚನ 35,36).

ನಾವು ದೇವರಿಗೆ ಅರ್ಪಿಸುವಂತದ್ದನ್ನು, ನಾವು ಬೇರೆಯವರಿಗೆ ಅಥವಾ ಬೇರೆ ಯಾವುದಕ್ಕೂ ಸಮರ್ಪಿಸಬಾರದು (ವಚನ 37).

ಪವಿತ್ರತೆಯ ಮಧ್ಯದಲ್ಲಿ ದೇವರನ್ನು ನಾವು ಸಂದರ್ಶಿಸುವವ ಕಾರ್ಯ ಜರುಗುತ್ತದೆ (ವಚನ 36).

## ದಾವೀದನ ದೇವದರ್ಶನ ಗುಡಾರ

ಕ್ರಿ.ಪೂ. 1000 ರಲ್ಲಿ, ದಾವೀದನ ಹೃದಯದ ಹೊರಹರಿವು ಉಂಟಾದಾಗ ಅವನು ಒಡಂಬಡಿಕೆಯ ಮಂಜೂಷವನ್ನು ಯಾಜಕರುಗಳ ಭುಜದ ಮೇಲೆ ಹಾಡುಗಳ ಶಬ್ಧ ಮತ್ತು ಸಂಗೀತವಾದ್ಯಗಳೊಂದಿ ಅವನ ಹೊಸ ರಾಜಧಾನಿಯಾದ ಯೆರೂಸಲೇಮಿಗೆ ತರಬೇಕೆಂಬುದಾಗಿ ಆಜ್ಞಾಪಿಸಿದನು ಅದನ್ನು ಇಡುವುದಕೊಸ್ಕರ ಗುಡಾರವನ್ನು ಹಾಕಿಸಿದನು ಅದು ದಾವೀದನ ದೇವದರ್ಶನದ ಗುಡಾರ ಎಂಬುದಾಗಿ ಉಲ್ಲೇಖಿಸಲಾಗಿದೆ (1 ಪೂರ್ವಕಾಲವೃತ್ತಾಂತ 15:1) ಈ ಗುಡಾರದೊಳಗೆ ಹೊಸ ಆರಾಧನೆಯ ಕ್ರಮವನ್ನು ಸ್ಥಾಪಿಸಲಾಯಿತು ಇದು ಇಸ್ರಾಯೇಲ್ಯರಲ್ಲಿ ಎಂದು ಹಿಂದೆಯು ಜರುಗದಿರುವುದಕ್ಕಿಂತ ವಿಭಿನ್ನವಾಗಿತ್ತು. ಲೇವಿ ಕುಲದಿಂದ ಮತ್ತು ಯಾಜಕರಿಂದ ದಾವೀದನು 4000 ಸಂಗೀತಗಾರರನ್ನು ನೇಮಿಸಿದನು 4000 ಬಾಗಿಲುಕಾವಲುಗಾರರು (1 ಪೂರ್ವಕಾಲವೃತ್ತಾಂತ 23:5) ಮತ್ತು 288 ಪ್ರವಾದನಾ ಹಾಡುಗಾರರು (1 ಪೂರ್ವಕಾಲ ವೃತ್ತಾಂತ 25:7) ಹಗಲು ರಾತ್ರಿ ಸೇವೆ ಸಲ್ಲಿಸುತ್ತಿದ್ದರು ‘‘ಬಿನ್ನಹ ಸಲ್ಲಿಸಲು, ಸ್ತೋತ್ರ ಸಲ್ಲಿಸಲು ಮತ್ತು ದೇವರಿಗೆ ವಂದನೆ ಸಲ್ಲಿಸುತ್ತಿದ್ದರು (1 ಪೂರ್ವಕಾಲ ವೃತ್ತಾಂತ 16:4) ಒಂದು ದಿನದ 24 ಗಂಟೆಗಳು ವಾರದ 7 ದಿನಗಳು, ಒಂದು ವರ್ಷದ 365 ದಿವಸಗಳು ಅವರು ಸೇವೆ ಸಲ್ಲಿಸುತ್ತಿದ್ದರು, ಮತ್ತು ಇದು 33 ವರ್ಷಗಳವರೆಗೂ ಮುಂದುವರೆಯಿತು (1 ಪೂರ್ವಕಾಲವೃತ್ತಾಂತ 16:37, 2 ಸಮುವೇಲನು 5:5). ಅನೇಕ ಕೀರ್ತನೆಗಳು ಮೂಲತಃ ಇಲ್ಲಿ ಬರೆಯಲ್ಪಟ್ಟವು ಮತ್ತು ದಾವೀದ ಗುಡಾರದಲ್ಲಿ ಪ್ರವಾದನಾ ಹಾಡುಗಳು ಆರಾಧನೆಯಲ್ಲಿ ಹಾಡಲ್ಪಟ್ಟವು

## ದಾವೀದನ ಗುಡಾರದಲ್ಲಿ ಆರಾಧನೆಯ ಮುಖ್ಯ ಲಕ್ಷಣಗಳು

### *ಅಳತೆ ಮೀರಿದ ಆರಾಧನೆ ಮತ್ತು ಪ್ರಬಲ ಮಧ್ಯಸ್ಥಿಕೆ*

ಎಲ್ಲವೂ ಅತಿಯಾಗಿತ್ತು, ದೇವರಿಗೆ ಅತ್ಯುತ್ತಮವಾದದ್ದನ್ನು ಅರ್ಪಿಸಿದರು. 4000 ಸಂಗೀತಗಾರರು, 288 ಹಾಡುಗಾರರು ಸೇವೆ ಸಲ್ಲಿಸಲು ಸಮರ್ಪಿಸಿಕೊಂಡಿದ್ದರು. ಆದ್ದರಿಂದ ನಿರಂತರವಾಗಿ 24/7 ಆರಾಧನೆ ಮತು ಮಧ್ಯಸ್ಥಿಕೆಯು ದೇವರಿಗೆ ಸಮರ್ಪಿಸಲ್ಪಡುತ್ತಿತ್ತು. ಇದು ಜರುಗುವಂತೆ ಮಾಡುವಲ್ಲಿ ಯಾವುದೇ ಪ್ರಯತ್ನವನ್ನು ಪಟ್ಟಿಲ್ಲ.

### *ಪ್ರವಾದನಾ ಆರಾಧನೆ*

1 ಪೂರ್ವಕಾಲ ವೃತ್ತಾಂತ 25:1-8

**ಆಮೇಲೆ ದಾವೀದನೂ ಆರಾಧಕ ಮಂಡಲಿಯವರ ಪ್ರಧಾನರೂ ಕಿನ್ನರಿ ಸ್ವರಮಂಡಲ ತಾಳ ಇವುಗಳನ್ನು ಬಾರಿಸುತ್ತಾ ಪರವಶರಾಗಿ ಗಾಯನ ಸೇವೆ ಮಾಡುವದಕ್ಕೋಸ್ಕರ ಆಸಾಫ್ಯರನ್ನೂ ಹೇಮಾನ್ಯರನ್ನೂ ಯೆದುತೂನ್ಯರನ್ನೂ ಆರಿಸಿದರು. ಈ ಸೇವೆಯನ್ನು ಮಾಡತಕ್ಕ ಪುರುಷರ ಪಟ್ಟಿ - ಆಸಾಫ್ಯರಲ್ಲಿ ಜಕ್ಕೂರ್ ಯೋಸೇಫ್, ನೇತನ್ಯ, ಅಶರೇಲ ಎಂಬುವರು. ಇವರು ಅರಮನೆಯ ಗಾಯಕನಾದ ಆಸಾಫನ ಸಹಾಯಕರು ಯೆದೂತೂನ್ಯರಲ್ಲಿ ಗೆದಲ್ಯ ಚೆರೀ ಯೆಶಾಯ ಶಿಮ್ಮೀ ಹಷಬ್ಯ ಮತ್ತಿತ್ಯ ಇವರೇ ಕಿನ್ನರಿಯನ್ನು ಬಾರಿಸುತ್ತಾ ಪರವಶರಾಗಿ ಯೆಹೋವ ಕೀರ್ತನೆ ಮಾಡುವ ತಮ್ಮ ತಂದೆಯಾದ ಯೆದುತೂನನಿಗೆ ಈ ಆರು ಮಂದಿಯೂ ಸಹಾಯಕರು. ಹೇಮಾನ್ಯರಲ್ಲಿ ಬುಕ್ಕೀಯ, ಮತ್ತನ್ಯ, ಉಜ್ಜೀಯೇಲ್, ಶೆಬೂವೇಲ್, ಯೆಲೀಮೋತ್ ಹನನ್ಯ ಹಾನಾನೀ ಎಲೀಯಾತ ಗಿದ್ದಲ್ತಿ ರೋಮಬ - ಮ್ತಿಯೆಜೆರ್ ಯೊಷ್ಬೆಕಾಷ, ಮಲ್ಲೋತೀ, ಹೋತೀರ್, ಮಹಜೀಯೋತ್ ಇವರೆಲ್ಲರೂ ಅರಸರ ದರ್ಶಿಯಾದ ಹೇಮಾನನ ಮಕ್ಕಳು ದೇವರು ಅವನಿಗೆ ವಾಗ್ದಾನ ಮಾಡಿದ್ದನು ಅದರಂತೆಯೇ ಆತನು ಅವನಿಗೆ ಹದಿನಾಲ್ಕು ಮಂದಿ ಗಂಡುಮಕ್ಕಳನ್ನು ಮೂರು ಹೆಣ್ಣು ಮಕ್ಕಳನ್ನೂ ದಯಪಾಲಿಸಿದನು. ದೇವರಾದ ಯೆಹೋವನ ಆಲಯದಲ್ಲಿ ಆರಾಧನೆ ನಡೆಯುತ್ತಿರುವಾಗ ಇವರೆಲ್ಲರೂ ತಮ್ಮ ತಂದೆಯ ಕೈಕೆಳಗಿದ್ದುಕೊಂಡು ತಾಳ, ಸ್ವರಮಂಡಲ, ಕಿನ್ನರಿ ಇವುಗಳಿಂದ ಗಾಯನ ಮಾಡುತ್ತಿದ್ದರು. ಆಸಾಫ್ ಯೆದುತೂನ್ ಹೇಮಾನರು ಅರಸನ ಸೇವೆಯಲ್ಲಿದ್ದರು. ಇವರೂ ಯೆಹೋವ ಕೀರ್ತನೆಗಳನ್ನು ಕಲಿತ ಇವರ ಸಹೋದರರೂ ಒಟ್ಟು ಇನ್ನೂರ ಎಂಭತ್ತೆಂಟು ಮಂದಿ, ಇವರೆಲ್ಲರೂ ಗಾಯನ ಪ್ರವೀಣರು. ಇವರಲ್ಲಿ ಹಿರಿಕಿರಿಯರೂ ಗುರುಶಿಷ್ಯರೂ ಕೂಡಿಕೊಂಡು ಚೀಟಿನಿಂದ ತಮ್ಮ ಸೇವಾಕ್ರಮವನ್ನು ಗೊತ್ತು ಮಾಡಿಕೊಂಡರು.**

ದೇವದರ್ಶನ ಗುಡಾರದ ಆರಾಧನೆಯು ದಿನನಿತ್ಯ ಬರೀ ಹಾಡುಗಳನ್ನು ಶ್ಲೋಕಗಳನ್ನು ಹಾಡುವಂತದ್ದು ಆಗಿರಲಿಲ್ಲ ಇವುಗಳು ನೈಸರ್ಗಿಕವಾಗಿ ಪ್ರವಾದನೆಗಳಾಗಿದ್ದವು, ಆತ್ಮನಿಂದ ಪ್ರೇರಿತಗೊಂಡಿದ್ದವು, ಆಗಾಗ್ಗೆ ಸಹಜವಾಗಿದ್ದವು ಅಥವಾ ಆತ್ಮನಿಂದ

ಪ್ರೇರಿತವಾದವುಗಳು ಬರೆಯಲ್ಪಟ್ಟವು ಮತ್ತು ಕರ್ತನಿಗಾಗಿ ಹಾಡಲ್ಪಟ್ಟವು. ಕೀರ್ತನೆಗಳ ಬಹುತೇಕ ಭಾಗಗಳು. ದಾವೀದನ ದೇವದರ್ಶನ ಗುಡಾರದಲ್ಲಿ ಜನ್ಮತಾಳಿದವು

## *ಶ್ರೇಷ್ಟತೆಯೊಂದಿಗೆ ಕ್ರಮಬದ್ಧ ಆರಾಧನೆ*

24 ಗುಂಪುಗಳು ಅಥವಾ ತಂಡಗಳ ಸಂಗೀತಗಾರರು ಮತ್ತು ಸಂಗೀತವಾದ್ಯಗಾರರು ದೈನಂದಿನ ವೇಳಾಪಟ್ಟಿಯನ್ನು ಅನುಸರಿಸುವವರು ಇದ್ದರು (1 ಪೂರ್ವಕಾಲ ವೃತ್ತಾಂತ 24:18,19).

ಶ್ರೇಣಿ (ನಾಯಕತ್ವ) ಇತ್ತು ಮತ್ತು ವ್ಯವಸ್ಥಿಸಲ್ಪಟ್ಟ ಎಲ್ಲದರಲ್ಲಿಯೂ ಕ್ರಮಬದ್ಧತೆಯಿತ್ತು. ಅವರ ನಾಯಕರುಗಳ ಕೆಳಗೆ ನಡೆಯುತ್ತಿದ್ದರು (1 ಪೂರ್ವಕಾಲ ವೃತ್ತಾಂತ 25:6,8).

ಅಲ್ಲಿ ಹೆಚ್ಚು ಪರಿಣತ ಸಂಗೀತಗಾರರಿದ್ದರು. ಜರುಗತ್ತಿರುವಂತಹವುಗಳಲ್ಲಿ ಶ್ರೇಷ್ಟತೆ ಇತ್ತು (1 ಪೂರ್ವಕಾಲ ವೃತ್ತಾಂತ 25:7).

## ಉಜ್ಜೀವನ ಮತ್ತು ದಾವೀದತನದ ಆರಾಧನಾ ಕ್ರಮ

ದೇವದರ್ಶನದ ಗುಡಾರವು ಒಂದು ದೇವಾಲಯದ ಬದಲಿಗೆ ಮಾಡಲ್ಪಟ್ಟಾಗ ದಾವೀದತನದ ಆರಾಧನೆಯು ಸ್ವೀಕರಿಸಲ್ಪಟ್ಟಿತು ಮತ್ತು ಇಸ್ರಾಯೇಲ್ ಮತ್ತು ಯೆಹೂದದ ಇತಿಹಾಸದಲ್ಲಿ ಏಳು ಮುಂದಿನ ನಾಯಕರುಗಳಿಂದ ಪುನಃ ಸ್ಥಾಪಿಸಲ್ಪಟ್ಟಿತ್ತು. ಪ್ರತಿ ಸಮಯದಲ್ಲೂ ಇಂತಹ ಆರಾಧನೆಯ ಕ್ರಮವೂ ಪುನಃ ಪರಿಚಯಿಸಲಾಯಿತು, ಆತ್ಮಿಕ ಮಹತ್ವದ ತಿರುವು ಪಡೆಯಿತು, ಬಿಡುಗಡೆ ಮತ್ತು ಸೈನಿಕ ವಿಜಯ ಅನುಸರಿಸಲ್ಪಟ್ಟಿತ್ತು.

**ಸೊಲೊಮೋನನು** ದೇವಾಲಯದ ಆರಾಧನೆಯಲ್ಲಿ ದಾವೀದತನದ ಕ್ರಮದೊಡನೆ ಅನುಗುಣವಾಗಿರಬೇಕೆಂದು ಸೂಚಿಸಿದ್ದನು (2 ಪೂರ್ವಕಾಲ ವೃತ್ತಾಂತ 8:14,15).

**ಯೆಹೋಷಾಫಾಟನು** ದಾವೀದನ ವಿಧಿಗನುಸಾರವಾದ ಕ್ರಮಕ್ಕನುಗುಣವಾಗಿ ಹಾಡುಗಾರರನ್ನು ಸ್ಥಾಪಿಸುವ ಮೂಲಕವಾಗಿ ಮೋವಾಬ್ಯರು ಮತ್ತು ಅಮ್ಮೋನಿಯರನ್ನು ಸೋಲಿಸಿದನು ಸೈನ್ಯದ ಮುಂಭಾಗದಲ್ಲಿ ಗಾಯನ ಮಾಡುವವರು ಮಹತ್ವದ ಗಾಯನ ಮಾಡಿದರು. ಯೆಹೋಷಾಫಾಟನು ದೇವಾಲಯದಲ್ಲಿ ದಾವೀದನ ವಿಧಿಗನುಸಾರವಾದ ಆರಾಧನೆಯನ್ನು ಪುನಃ ಸ್ಥಾಪಿಸಿದನು. (2 ಪೂರ್ವಕಾಲ ವೃತ್ತಾಂತ 20:20-22,28)

**ಯೆಹೋವಾಷನು** (2 ಪೂರ್ವಕಾಲ ವೃತ್ತಾಂತ 23:1-21; 24;1-27).

**ಹಿಜ್ಕೀಯನು** ದೇವಾಲಯವನ್ನು ಶುದ್ಧೀಕರಿಸಿದನು ಮತ್ತು ಪುನಃ ಪ್ರತಿಷ್ಟಿಸಿದನು, ಮತ್ತು ದಾವೀದನ ವಿಧಿಗನುಸಾರವಾದ ಆರಾಧನೆ ಕ್ರಮವನ್ನು ಪುನಃ ಸ್ಥಾಪಿಸಿದನು (2 ಪೂರ್ವಕಾಲ ವೃತ್ತಾಂತ 29:1-36, 30:21).

**ಯೋಷೀಯನು** ದಾವೀದನ ವಿಧಿಗನುಸಾರವಾದ ಆರಾಧನೆಯನ್ನು ಪುನಃ ಸ್ಥಾಪಿಸಿದನು (2 ಪೂರ್ವಕಾಲದ ವೃತ್ತಾಂತ 35:1-27).

**ಎಜ್ರ ಮತ್ತು ನೆಹೆಮಿಯ**-ಬ್ಯಾಬಿಲೋನಿಯಾದಿಂದ ಹಿಂತುರಿಗಿದಾಗ, ದಾವೀದನ ವಿಧಿಗನುಸಾರವಾದ ಆರಾಧನೆಯನ್ನು ಪುನಃ ಸ್ಥಾಪಿಸಿದರು (ಎಜ್ರನು 3:10; ನೆಹೆಮಿಯ 12:28-47).

ದೇವರ ಪ್ರಸನ್ನತೆಗಾಗಿ ವಾಸಸ್ಥಾನವನ್ನು ಸ್ಥಾಪಿಸುವುದರೊಡನೆ ರೂಪಾಂತರವು ಬರುತ್ತದೆ.

## ಆಮೋಸನ ಪ್ರವಾದನೆ

ದಾವೀದನ 250 ವರ್ಷಗಳ ನಂತರ ಪ್ರವಾದಿಯಾದ ಆಮೋಸನು ಪ್ರವಾದಿಸಿದನು:

ಆಮೋಸ 9:11-13

**ಆ ದಿನದಲ್ಲಿ ನಾನು ದಾವೀದನ ಬಿದ್ದು ಹೋಗಿರುವ ಗುಡಿಸಲನ್ನು ಎತ್ತಿ ಅದರ ಕಂಡಿಗಳನ್ನು ಮುಚ್ಚುವೆನು; ನನ್ನ ಜನರು ಎದೋಮಿನ ಮಿಕ್ಕ ಭಾಗವನ್ನು ಯೆಹೋವನ ಪ್ರಜೆ ಎನಿಸಿಕೊಂಡಿದ್ದ ಸಕಲ ಜನಾಂಗಗಳನ್ನೂ ಸ್ವಾಧೀನ ಮಾಡಿಕೊಳ್ಳುವ ಹಾಗೆ ಹಾಳಾದದ್ದನ್ನು ನಾನು ನಿಲ್ಲಿಸಿ ಪೂರ್ವಕಾಲದಲ್ಲಿದ್ದಂತೆ ಅದನ್ನು ತಿರಿಗಿ ಕಟ್ಟಿಸುವೆನು ಎಂಬದಾಗಿ ಈ ಕಾರ್ಯಗಳನ್ನು ನೆರವೇರಿಸುವ ಯೆಹೋವನು ನುಡಿದಿದ್ದಾನೆ ಯೆಹೋವನು ಇಂತೆನ್ನುತ್ತಾನೆ - ಆಹಾ ಮುಂದಿನ ಕಾಲದಲ್ಲಿ ಉಳುವವನು ಕೊಯ್ಯುವವನ ಹಿಂದೆ; ದ್ರಾಕ್ಷಿತುಳಿಯುವವನು ಬಿತ್ತುವವನ ಹಿಂದೆ ಒತ್ತಿಕೊಂಡು ಹೋಗುವರ; ಬೆಟ್ಟಗಳು ದ್ರಾಕ್ಷಾರಸವನ್ನು ಸುರಿಸುವವು, ಎಲ್ಲಾ ಗುಡ್ಡಗಳು ಕರಗುತ್ತವೋ ಎಂಬಂತಿರುವವು.**

ದೇವರು ಪ್ರವಾದಿಯಾದ ಆಮೋಸನ ಮೂಲಕವಾಗಿ ದಾವೀದನ ದೇವದರ್ಶನದ ಗುಡಾರವನ್ನು ತಿರುಗಿ ಕಟ್ಟುತ್ತೇನೆ ಎಂಬುದಾಗಿ ದೇವರು ಪ್ರವಾದಿಯಾದ ಆಮೋಸನ ಮೂಲಕ ಮಾತಾಡಿದನು ಮತ್ತು ದಾವೀದನ ದೇವದರ್ಶನದ ಗುಡಾರವನ್ನು ತಿರುಗಿ ಕಟ್ಟುತ್ತೇನೆ ಎಂಬುದಾಗಿ ಘೋಷಿಸಿದನು ಮತ್ತು ಅದು ಹಿಂದೆ ಇದ್ದ ರೀತಿಯಲ್ಲಿ

ಪುನಃ ಸ್ಥಾಪಿಸುತ್ತೇನೆ ಎಂಬುದಾಗಿ ಹೇಳಿದನು ಅನ್ಯಜನರನ್ನು ಸ್ವಾಧೀನಮಾಡಿಕೊಳ್ಳುವುದಕ್ಕಾಗಿ ಆತನು ಪ್ರಪಂಚ, ರಕ್ಷಿಸಲ್ಪಡದಿರುವವರನ್ನು ಸೂಚಿಸುವಂತದ್ದಾಗಿದೆ ಈ ಸಮಯದಲ್ಲಿ ಬೆಳೆಯು ಬಹಳವಾಗಿರುವುದರಿಂದ ಬಿತ್ತುವವನು, ಕೊಯ್ಯುವವನನ್ನು ಹಿಂದಿಕ್ಕುತ್ತಾನೆ ಸುಗ್ಗಿಯು ಬಹಳ ಸಮೃದ್ಧಿಯಾಗಿರುವುದರಿಂದ ಕೊಯ್ಯುವವನು ಹಿಂದಿನ ಋತುವಿನ ಬೆಳೆಯನ್ನು ಸೇರಿಸುವುದಲ್ಲಿ ನಿರತನಾಗಿರುತ್ತಾನೆ. ಬಿತ್ತುವವನು ಮುಂದಿನ ಋತುವಿನ ಕಾರ್ಯಗಳನ್ನು ಪ್ರಾರಂಭಿಸಲು ಬರುವವನಾಗಿರುತ್ತಾನೆ.

ಇಸ್ರಾಯೇಲ್ಯರಲ್ಲಿ ಅಕ್ಷರಶಃ ನೆರವೇರುವುದನ್ನು ಆತ್ಮಿಕವಾಗಿ ಸಭೆಯಲ್ಲಿ ದೇವರು ನೆರವೇರಿಸುವುದನ್ನು ದೇವರ ವಾಕ್ಯದಲ್ಲಿ ನಾವು ನೋಡುತ್ತೇವೆ. ಉದಾಹರಣೆಗಾಗಿ ಯೋವೇಲನ ಆತ್ಮನ ಸುರಿಸುವಿಕೆಯ ಕುರಿತ ಪ್ರವಾದನೆ (ಯೋವೇಲ 2:28,29) ಸಭೆಯಿಂದ ಮೊದಲು ಅನುಭವಿಸಿದೆ (ಅಪೊಸ್ತಲರ ಕೃತ್ಯಗಳು 2:16-18) ಮತ್ತು ಅಕ್ಷರಶಃ ಇಸ್ರಾಯೇಲರಲ್ಲಿ ಭವಿಷ್ಯದ ಸಮಯದಲ್ಲಿ ನೆರವೇರುವುದಾಗಿದೆ.

ಆಧಿ ಸಭೆಯಲ್ಲಿ ಅನ್ಯಜನರುಗಳ ಮಧ್ಯದಲ್ಲಿ ಸುವಾರ್ತೆಯು ಹರಡಿದಾಗ, ಯೇಸುವನ್ನು ಹಿಂಬಾಲಿಸುವಂತಹ ಅನ್ಯಜನರು ಯೆಹೂದಿಯ ಸಂಪ್ರದಾಯಗಳನ್ನು ಸಹ ಅನುಸರಿಸಬಹುದೊ ಎಂಬುದರ ಬಗ್ಗೆ ಅಪೊಸ್ತಲರ ಮಧ್ಯದಲ್ಲಿ ಚರ್ಚೆಯಿತ್ತು. ಯೆರೂಸಲೇಮಿನ ಸಭೆಯ ನಾಯಕನಾದ ಯಾಕೋಬನು, ಅಮೋಸನ ಪ್ರವಾದನೆಯನ್ನು (ಆಮೋಸ 9:11,12) ಉಲ್ಲೇಖಿಸುತ್ತಾನೆ ಮತ್ತು ಅವನ ತೀರ್ಮಾನವನ್ನು ತಿಳಿಸುತ್ತಾನೆ.

ಅಪೊಸ್ತಲರ ಕೃತ್ಯಗಳು 15:16,17

**ಇದಾದ ಮೇಲೆ ನಾನು ಹಿಂತಿರುಗಿ ಬಂದು ದಾವೀದನ ಬಿದ್ದು ಹೋಗಿರುವ ಗುಡಾರವನ್ನು ಎತ್ತುವೆನು. ಅದರಲ್ಲಿ ಹಾಳಾದದ್ದನ್ನು ನಾನು ಸರಿಮಾಡಿಸಿ ಅದನ್ನು ನೆಟ್ಟಗೆ ನಿಲ್ಲಿಸುವೆನು ಮನುಷ್ಯಜಾತಿಯ ಉಳಿದ ಜನಗಳೂ ಅಂದರೆ ದೇವಜನರೆನಿಸಿಕೊಳ್ಳುವ ಸಕಲ ಜನಾಂಗಗಳೂ ಕರ್ತನನ್ನು ಹುಡುಕುವವರಾಗಿರಬೇಕೆಂದು.**

ಆ ಸಮಯದಲ್ಲಿ ದಾವೀದನ ಭೌತಿಕ ಗುಡಾರವು ಅಸ್ತಿತ್ವದಲ್ಲಿರಲಿಲ್ಲ ಆದಾಗ್ಯೂ ಪ್ರವಾದಿಯಾದ ಅಮೋಸನಿಂದ ಉಲ್ಲೇಖಿಸುವಂತದ್ದು. (ಆಮೋಸ 9:11,12) ಮತ್ತು ಪವಿತ್ರಾತ್ಮನಿಂದ ಪ್ರೇರಿತಗೊಂಡು ದಾವೀದನ ಗುಡಾರದ ಪುನಃ ಕಟ್ಟುವಿಕೆಯ ಆತ್ಮಿಕ ನೆರವೇರಿಕೆಯು ಸಭೆಯಾಗಿದೆ ಎಂಬುದಾಗಿ ಯಾಕೋಬನು ಸೂಚಿಸುತ್ತಾನೆ.

ದಾವೀದನ ಗುಡಾರದಲ್ಲಿ 24/7 ಸ್ತೋತ್ರ ಮತ್ತು ದೇವರ ಆರಾಧನೆಯಿತ್ತು. ಆದಿ ಸಭೆಯು ಆರಾಧನೆ ಮತ್ತು ಮಧ್ಯಸ್ಥಿಕೆಯನ್ನು ಅರ್ಪಿಸುವ ಮೂಲಕವಾಗಿ ಆತ್ಮಿಕ ಪ್ರಜ್ಞೆಯಲ್ಲಿ ದಾವೀದನ ಗುಡಾರವಾಗಿತ್ತು ಆದ್ದರಿಂದ ಕರ್ತನಿಗಾಗಿ ಅನ್ಯಜನರುಗಳ ಸಂಗ್ರಹವಿತ್ತು ನಿರಂತರವಾದ ಆರಾಧನೆಯನ್ನು ಅರ್ಪಿಸುವುದರ ಮತ್ತು ಕರ್ತನಿಗಾಗಿ ಆತ್ಮಗಳನ್ನು ಗೆಲ್ಲುವುದರ ನಡುವೆ ನೇರವಾದ ಸಂಬಂಧವಿತ್ತು.

ಸ್ಥಳೀಯ ಸಭೆಗಳು ನಿರಂತರ ಆರಾಧನೆ ಮತ್ತು ಮಧ್ಯಸ್ಥಿಕೆಗೆ ತಮ್ಮನ್ನು ಕೊಟ್ಟರೆ ಅವರ ಪ್ರದೇಶದಲ್ಲಿ ದೇವರ ರಾಜ್ಯಕ್ಕಾಗಿ ಆತ್ಮಗಳ ಅತ್ಯಧಿಕವಾದ ಸಂಗ್ರಹವನ್ನು ಅವರು ನೋಡುತ್ತಾರೆ. ಸುಗ್ಗಿಯು ಸಮೃದ್ಧಿಯಾಗಿರುತ್ತದೆ ಬಿತ್ತುವವನು ಕೊಯ್ಯುವವನನ್ನು ಹಿಂದಿಕ್ಕುತ್ತಾನೆ.

## ಪ್ರಾರ್ಥನೆ ಮತ್ತು ಆರಾಧನೆಯ ಒಂದು ಮನೆ

ಯೆಶಾಯ 56:6,7

**ಯೆಹೋವನು ಸಿಕ್ಕುವ ಕಾಲದಲ್ಲಿ ಆತನನ್ನು ಆಶ್ರಯಿಸಿರಿ. ಅತನು ಸಮೀಪದಲ್ಲಿರುವಾಗ ಆತನಿಗೆ ಬಿನ್ನಹ ಮಾಡಿರಿ ದುಷ್ಟನು ತನ್ನ ದುರ್ಮಾರ್ಗವನ್ನು ಬಿಡಲಿ ಕೆಡುಕನು ತನ್ನ ದುರಾಲೋಚನೆಗಳನ್ನು ತ್ಯಜಿಸಲಿ ಯೆಹೋವನ ಕಡೆಗೆ ತಿರುಗಿಕೊಂಡು ಬರಲಿ ಆತನು ಅವನನ್ನು ಕರುಣಿಸುವನು; ನಮ್ಮ ದೇವರನ್ನು ಆಶ್ರಯಿಸಲಿ ಆತನು ಮಹಾಕೃಪೆಯಿಂದ ಕ್ಷಮಿಸುವನು**

ಮತ್ತಾಯ 21:12-14

**ಬಳಿಕ ಯೇಸು ದೇವಾಲಯಕ್ಕೆ ಹೋಗಿ ಅದರಲ್ಲಿ ಮಾರುವ ಕೊಳ್ಳುವ ಎಲ್ಲರನ್ನೂ ಹೊರಡಿಸಿಬಿಟ್ಟು ಚಿನಿವಾರರ ಮೇಜುಗಳನ್ನೂ ಪಾರಿವಾಳ ಮಾರುವವರ ಕಾಲ್ಮಣೆಗಳನ್ನೂ ಕೆಡವಿ ಅವರಿಗೆ – ನನ್ನ ಆಲಯವು ಪ್ರಾರ್ಥನಾಲಯವೆನಿಸಿಕೊಳ್ಳುವದು ಎಂದು ಬರೆದದೆ ಆದರೆ ನೀವು ಅದನ್ನು ಕಳ್ಳರ ಗವಿ ಮಾಡುತ್ತೀರಿ ಎಂದು ಹೇಳಿದನು ಆಗ ಕುರುಡರೂ ಕುಂಟರೂ ದೇವಾಲಯದಲ್ಲಿ ಆತನ ಬಳಿಗೆ ಬರಲು ಅವರನ್ನು ಸ್ವಸ್ಥ ಮಾಡಿದನು.**

ಎಲ್ಲಾ ದೇಶಗಳಿಗಾಗಿ ಆತನ ಜನರು ಪ್ರಾರ್ಥನೆಯ ಮನೆಯಾಗಿರಬೇಕೆಂಬುದಾಗಿ ದೇವರು ಸಂಕಲ್ಪಿಸುತ್ತಾನೆ ದೇಶಗಳಿಗಾಗಿ ನಾವುಗಳು ಪ್ರಾರ್ಥನೆಯಲ್ಲಿ ನಿರತರಾಗಿರಬೇಕು.

ಯೆಶಾಯ 56ರಲ್ಲಿನ ಸನ್ನಿವೇಶವನ್ನು ಗಮನಿಸುವುದಾದರೆ ಪ್ರಾರ್ಥನೆಯ ಮನೆಗೆ ಅನ್ಯಜನರನ್ನು ತರುವಂತಹದರ ಕುರಿತು ಮಾಡಬೇಕಾಗಿರುವುದಾಗಿದೆ. ದೇವಜನರು ಎಲ್ಲಾ ದೇಶಗಳಿಗಾಗಿ ಒಂದು ಪ್ರಾರ್ಥನೆಯ ಮನೆಯಾಗಿ ತಮ್ಮನ್ನು

ಸ್ಥಾಪಿಸಿಕೊಳ್ಳುವಂತದ್ದನ್ನು ಇದು ಪ್ರಕಟಿಸುತ್ತದೆ. ಜನರು ಕರ್ತನನ್ನು ಪ್ರೀತಿಸುವ ಮತ್ತು ಆತನ ಸೇವಕರುಗಳಾಗಿ ಕಂಡುಬರುವಂತಹ ಪರಿಣಾಮಕಾರಿ ಫಲಿತಾಂಶವಿರುತ್ತದೆ.

ಕರ್ತನಾದ ಯೇಸುವು ಯೆಶಾಯ ಗ್ರಂಥದಿಂದ ವ್ಯಾಖ್ಯಾನಿಸಿದ್ದಾನೆ ಆತನು ಹಣ ಬದಲಾಯಿಸುವವರನ್ನು ದೇವಾಲಯದಿಂದ ಓಡಿಸಿದನು. ನಂತರ ಕುಂಟರೂ ಮತ್ತು ಕುರಡರಿಗೆ ಸ್ವಸ್ಥತೆ ಮಾಡುವ ಸೇವೆ ಮಾಡಿದನು. ಎಲ್ಲಾ ದೇಶಗಳಿಗಾಗಿನ ಪ್ರಾರ್ಥನೆಯ ಮನೆಯು ದೇಶಗಳಿಗಾಗಿ ಬುಗ್ಗೆಯಾಗಿ ಕಂಡುಬರಲು ಕರ್ತನು ಸಂಕಲ್ಪಿಸಿದ್ದಾನೆ ಸ್ವಸ್ಥತೆಯನ್ನು ಪಡೆದುಕೊಳ್ಳಲು ಜನರು ಪ್ರಾರ್ಥನೆಯ ಮನೆಗೆ ಬರುತ್ತಾರೆ.

## ಸಿಂಹಾಸನದ ಕೊಠಡಿಗೆ ಒಂದು ಭೇಟಿ

ಕೀರ್ತನೆಗಳು 141:2

**ನನ್ನ ಪ್ರಾರ್ಥನೆಯು ಧೂಪದಂತೆ ನಾನು ಕೈಯೆತ್ತುವದು ಸಂಧ್ಯಾನೈವೇದ್ಯದಂತೆಯೂ ನಿನಗೆ ಸಮರ್ಪಕವಾಗಲಿ.**

ಪ್ರಕಟನೆಯ ಪುಸ್ತಕವು ನಮ್ಮನ್ನು ದೇವರ ಸಿಂಹಾಸನದ ಕೊಠಡಿಗೆ ಕೊಂಡೊಯ್ಯುತ್ತದೆ ಮತ್ತು ದೇವರ ಸಿಂಹಾಸನ ಕೊಠಡಿಯ ಸುತ್ತಲೂ ಹೋಗುವಂತಹ ಒಂದು ಬಗೆಯ ಆರಾಧನೆಯ ಮಿನುಗು ನೋಟವನ್ನು ಕೊಡುತ್ತದೆ.

ಪರಲೋಕದಲ್ಲಿ ಆರಾಧನೆಯು ನಿರಂತರವಾಗಿರುತ್ತದೆ. ''ಆ ನಾಲ್ಕು ಜೀವಿಗಳೊಳಗೆ ಒಂದೊಂದಕ್ಕೆ ಆರಾರು ರೆಕ್ಕೆಗಳಿದ್ದವು ಆ ಜೀವಿಗಳಿಗೆ ಸುತ್ತಲೂ ಒಳಗೂ ತುಂಬಾ ಕಣ್ಣುಗಳಿದ್ದವು ಆ ಜೀವಿಗಳು ಹಗಲಿರುಳು ವಿಶ್ರಮಿಸಿಕೊಳ್ಳದೆ - ದೇವರಾದ ಕರ್ತನು ಪರಿಶುದ್ಧನು ಪರಿಶುದ್ಧನು; ಆತನು ಸರ್ವಶಕ್ತನೂ, ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿರುವಂಥವನು ಎಂದು ಹೇಳುತ್ತವೆ (ಪ್ರಕಟಣೆ 4:8)

ಆರಾಧನೆ ಮತ್ತು ಮಧ್ಯಸ್ಥಿಕೆಯ ಪ್ರಾರ್ಥನೆಗಳು ನಿರಂತರವಾಗಿ ಕರ್ತನಿಗೆ ಸಮರ್ಪಿಸಲ್ಪಡುತ್ತವೆ ''ಸುರುಳಿಯನ್ನು ತೆಗೆದುಕೊಂಡಾಗ ಆ ನಾಲ್ಕು ಜೀವಿಗಳೂ ಇಪ್ಪತ್ತುನಾಲ್ಕು ಮಂದಿ ಹಿರಿಯರು ಯಜ್ಞದ ಕುರಿಯಾದಾತನ ಪಾದಕ್ಕೆ ಬಿದ್ದರು ಹಿರಿಯರ ಕೈಗಳಲ್ಲಿ ವೀಣೆಗಳೂ, ದೇವ ಜನರ ಪ್ರಾರ್ಥನೆಗಳೆಂಬ ಧೂಪದಿಂದ ತುಂಬಿದ್ದ ಚಿನ್ನದ ಧೂಪಾರತಿಗಳೂ ಇದ್ದವು ಅವರು ಹೊಸ ಹಾಡನ್ನು ಹಾಡುತ್ತಾ - ನೀನು ಸುರುಳಿಯನ್ನು ತೆಗೆದುಕೊಂಡು ಅದರ ಮುದ್ರೆಗಳನ್ನು ಒಡೆಯುವದಕ್ಕೆ

ಯೋಗ್ಯನೇ ನೀನು ಯಜ್ಞಾರ್ಪಿತನಾಗಿ ನಿನ್ನ ರಕ್ತದಿಂದ ಸಕಲ ಕುಲ ಭಾಷೆ ಪ್ರಜೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ ಅವರನ್ನು ನಮ್ಮ ದೇವರಿಗೋಸ್ಕರ ರಾಜ್ಯವನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದಿ ಅವರು ಭೂಮಿಯ ಮೇಲೆ ಆಳುವರು (ಪ್ರಕಟನೆ 5:8-10) ವೀಣೆಗಳೂ ಆರಾಧನೆಯನ್ನು ಪ್ರತಿನಿಧಿಸುತ್ತದೆ ಪಾತ್ರೆಯು ಪ್ರಾರ್ಥನೆಯನ್ನು ಪ್ರತಿನಿಧಿಸುತ್ತದೆ. ಸಿಂಹಾಸನದ ಕೊಠಡಿಯಲ್ಲಿ ನಿರಂತರವಾಗಿ ಪ್ರಾರ್ಥನೆ ಮತ್ತು ಆರಾಧನೆಯು ಏರುತ್ತಿರುತ್ತದೆ. ''ಆಮೇಲೆ ಮತ್ತೊಬ್ಬ ದೇವದೂತನು ಒಂದು ಯಜ್ಞವೇದಿಯ ಬಳಿಯಲ್ಲಿ ನಿಂತನು ಅವನ ಕೈಯಲ್ಲಿ ಚಿನ್ನದ ಧೂಪಾರತಿ ಇತ್ತು. ಸಿಂಹಾಸನದ ಮುಂದಣ ಚಿನ್ನದ ಧೂಪವೇದಿಯ ಮೇಲೆ ದೇವಜನರೆಲ್ಲರ ಪ್ರಾರ್ಥನೆಗಳ ಜೊತೆಯಲ್ಲಿ ಸಮರ್ಪಿಸುವದಕ್ಕಾಗಿ ಅವನಿಗೆ ಬಹಳ ಧೂಪಕೊಡಲ್ಪಟ್ಟಿತು. ಆಗ ಧೂಪದ ಹೊಗೆಯು ಹೊರಟು ದೇವಜನರ ಪ್ರಾರ್ಥನೆಗಳೊಂದಿಗೆ ಕೂಡಿ ದೇವರ ಸನ್ನಿಧಿಗೆ ಏರಿಹೋಯಿತು (ಪ್ರಕಟನೆ 8:3,4)

ಪ್ರತಿಯೊಂದು ಜೀವಿಯು ಕರ್ತನನ್ನು ಆರಾಧಿಸುತ್ತದೆ. ಯಾವ ಜೀವಿಯು ಪ್ರೇಕ್ಷಕನಂತೆ ನಿಂತುಕೊಳ್ಳುವುದಿಲ್ಲ. ''ಇದಲ್ಲದೆ ಸಿಂಹಾಸನವು ಜೀವಿಗಳು ಹಿರಿಯರು ಇವರ ಸುತ್ತಲು ಬಹು ಮಂದಿ ದೇವದೂತರನ್ನು ಕಂಡೆನು. ಅವರ ಸಂಖ್ಯೆಯು ಕೋಟ್ಯಾನುಕೋಟಿಯಾಗಿಯೂ ಲಕ್ಷೋಪಲಕ್ಷವಾಗಿಯೂ ಇತ್ತು. ಅವರ ಸ್ವರವು ನನಗೆ ಕೇಳಿಸಿತು ಅವರು ಮಹಾ ಶಬ್ಧದಿಂದ ವಧಿತನಾದ ಕುರಿಯಾದಾತನು ಬಲ, ಐಶ್ವರ್ಯ, ಜ್ಞಾನ, ಸಾಮರ್ಥ್ಯ, ಮಾನ, ಪ್ರಭಾವ ಸ್ತೋತ್ರಗಳನ್ನು ಹೊಂದುವದಕ್ಕೆ ಯೋಗ್ಯನು ಎಂದು ಹೇಳಿದರು'' (ಪ್ರಕಟನೆ 5:11,12)

ರಾಜನ ನಿಮಿತ್ತದಿಂದ ಏಳು-ಪಟ್ಟು ಸಾಮ್ರಾಜ್ಯದ ಗೌರವವನ್ನು ಆರಾಧನೆಯು ಹೊದಿಸುತ್ತದೆ ''ವಧಿತನಾದ ಕುರಿಯಾದಾತನು ಬಲ ಐಶ್ವರ್ಯ ಜ್ಞಾನ ಸಾಮರ್ಥ್ಯ ಮಾನ ಪ್ರಭಾವ ಸ್ತೋತ್ರಗಳನ್ನು ಹೊಂದುವದಕ್ಕೆ ಯೋಗ್ಯನು!'' (ಪ್ರಕಟನೆ 5:12) ಏಳು ಅನ್ನುವುದು ಪೂರ್ಣವಾದ ಅಥವಾ ಪರಿಪೂರ್ಣತೆಯನ್ನು ಪ್ರತಿನಿಧಿಸುತ್ತದೆ. ಆತನು ಏಳು ಸಾಮ್ರಾಜ್ಯಗಳಲ್ಲಿ ಗೌರವಿಸಲ್ಪಡುವಾಗ ಅರಸನಿಗೆ ಪರಿಪೂರ್ಣವಾದ ಗೌರವವಿದೆ; ಬಲ, ಐಶ್ವರ್ಯ, ಜ್ಞಾನ, ಸಾಮರ್ಥ್ಯ, ಮಾನ, ಪ್ರಭಾವ, ಸ್ತೋತ್ರ!

- ಬಲವು ಪ್ರಭಾವ ಬೀರುತ್ತದೆ, ಅಧಿಕಾರ, ದೊರೆತನ ಮತ್ತು ಸಾರ್ವಭೌಮತ್ವ.

- ಐಶ್ವರ್ಯವು ಎಲ್ಲಾ ಆಸ್ತಿ ಮತ್ತು ಸ್ವಾಧೀನ.
- ಜ್ಞಾನವು ಎಲ್ಲಾ ಗ್ರಹಿಕೆ, ಕೌಶಲ್ಯತೆ ಅರಿವು.
- ಸಾಮರ್ಥ್ಯವು ಎಲ್ಲಾ ಬಲ ಮತ್ತು ಯೋಗ್ಯತೆ.
- ಮಾನವು ಎಲ್ಲಾ ಗೌರವ, ಪೂಜ್ಯತೆ ಮತ್ತು ಅರಸನಿಗೆ ಕೊಡಲ್ಪಟ್ಟ ಸಲ್ಲಿಕೆ.
- ಮಹಿಮೆಯು ಎಲ್ಲಾ ವೈಭವ, ಘನತೆ, ಶ್ರೇಷ್ಟತೆ ಮತ್ತು ಆತನು ಯಾರಾಗಿದ್ದಾನೆ ಮತ್ತು ಏನನ್ನು ಮಾಡುತ್ತಾನೆ ಎಂಬುದರ ಬಗ್ಗೆ ವಿಸ್ಮಯತೆ
- ಆಶೀರ್ವಾದವು ಎಲ್ಲಾ ಸ್ತೋತ್ರ, ಆರಾಧನೆ ಮೆಚ್ಚುಗೆ ಸ್ತುತಿ, ಅರಸನಿಗೆ ಸಮರ್ಪಿಸಲ್ಪಡುವ ಪ್ರೀತಿ ಮತ್ತು ಭಕ್ತಿ.

ದೊಡ್ಡ ಭಕ್ತರ ಗುಂಪು ಸಿಂಹಾಸನದ ಮುಂದೆ ಆರಾಧನೆಗೆ ಸೇರಿಬಂದಿದ್ದಾರೆ. *''ಇವುಗಳಾದ ಮೇಲೆ ಇಗೋ ಯಾರಿಂದಲೂ ಎಣಿಸಲಾಗದಂಥ ಮಹಾ ಸಮೂಹವು ಸಿಂಹಾಸನದ ಮುಂದೆಯೂ ಯಜ್ಞದ ಕುರಿಯಾದಾತನ ಮುಂದೆಯೂ ನಿಂತಿರುವುದನ್ನು ಕಂಡೆನು. ಅವರು ಸಕಲ ಜನಾಂಗ ಕುಲ ಪ್ರಜೆಗಳವರೂ ಸಕಲ ಭಾಷೆಗಳನ್ನಾಡುವವರೂ ಆಗಿದ್ದರು ಅವರು ಬಿಳಿ ನಿಲುವಂಗಿಗಳನ್ನು ತೊಟ್ಟುಕೊಂಡು ತಮ್ಮ ಕೈಗಳಲ್ಲಿ ಖರ್ಜೂರದ ಗರಿಗಳನ್ನು ಹಿಡಿದುಕೊಂಡಿದ್ದರು. ಅವರು ಸಿಂಹಾಸನಾಸೀನನಾಗಿರುವ ನಮ್ಮ ದೇವರಿಗೂ ಯಜ್ಞದ ಕುರಿಯಾದಾತನಿಗೂ ನಮಗೆ ರಕ್ಷಣೆಯುಂಟಾದದ್ದಕ್ಕಾಗಿ ಸ್ತೋತ್ರ ಎಂದು ಮಹಾ ಶಬ್ದದಿಂದ ಕೂಗಿದರು ಅಷ್ಟರಲ್ಲಿ ದೇವದೂತರೆಲ್ಲರೂ, ಹಿರಿಯರು, ನಾಲ್ಕು ಜೀವಿಗಳು ಸಿಂಹಾಸನದ ಸುತ್ತಲು ನಿಂತುಕೊಂಡಿದ್ದರು. ಅವರು ಸಿಂಹಾಸನದ ಮುಂದೆ ಅಡ್ಡ ಬಿದ್ದು ಆಮೆನ್ ಸ್ತೋತ್ರವೂ ಪ್ರಭಾವವೂ ಜ್ಞಾನವೂ ಕೃತಜ್ಞತಾಸ್ತುತಿಯೂ ಮಾನವೂ ಬಲವೂ ಶಕ್ತಿಯೂ ನಮ್ಮ ದೇವರಿಗೆ ಯುಗಯುಗಾಂತರಗಳಲ್ಲಿಯೂ ಇರಲಿ ಆಮೇನ್''* (ಪ್ರಕಟನೆ 7:9-12).

ಆರಾಧನೆ ಮತ್ತು ಮಧ್ಯಸ್ಥಿಕೆಯ ಪ್ರಾರ್ಥನೆಯು ಪರಲೋಕದಲ್ಲಿರುವ ಪ್ರಕಾರ ಭೂಲೋಕದಲ್ಲಿಯು ಇರಲಿ.

## ಪ್ರಾರ್ಥನೆ ಮತ್ತು ಆರಾಧನೆಯ ಚಳುವಳಿ

ವಿಶ್ವಾಸಿಗಳ ಸಮುದಾಯಗಳಿಂದ ಪ್ರಾರ್ಥನೆ ಮತ್ತು ಆರಾಧನೆಯು 24/7 ಸಮಯದಲ್ಲೂ ಶತಮಾನಗಳ ಉದ್ದಕ್ಕೂ ನಡೆಯುತ್ತಿದ್ದದ್ದನ್ನು ಇತಿಹಾಸ ತೋರಿಸುತ್ತದೆ.

## *ಕ್ರಿ.ಶ. 400 ಅಲೆಕ್ಸಾಂಡರ್ ಅಕಿಮೆಟ್ಸ್ ಮತ್ತು ನಿದ್ದೆಯಿಲ್ಲದ ಒಬ್ಬನು*

ಕ್ರಿ.ಶ. 400 ರ ಸಮಯದಲ್ಲಿ ಸನ್ಯಾಸಿಯಾದ ಅಲೆಕ್ಸಾಂಡರ ಅಕಿಮೆಟ್ಸ್ ಕಾನ್‌ಸ್ಟ್ಯಾಂಟಿನೋಪಲ್ ನಲ್ಲಿ 300 ರಿಂದ 400 ಜನ ಸನ್ಯಾಸಿಗಳನ್ನು ಸೇರಿಸಿದನು, ಲಾಸ್ ಪೆರಿನಿಸ್‌ನ್ನು ಪೌಲನ ಎಡೆಬಿಡದೆ ಪ್ರಾರ್ಥನೆ ಮಾಡಿರಿ ಎಂಬ ಉತ್ತೇಜಿಸುವಿಕೆಯು ನೆರವೇರುವುದನ್ನು ಸ್ಥಾಪಿಸಿದನು (1 ಥೆಸಲೋನಿಕದವರಿಗೆ 5:17). ಕಾನ್‌ಸ್ಟ್ಯಾಂಟಿನೋಪಲ್‌ನಿಂದ ಚಾಲಿತ ಸನ್ಯಾಸಿಗಳು ಗೋರ್ಮನ್ನಲ್ಲಿ ಕಪ್ಪು ಸಮುದ್ರದ ಬದಿಗೆ ಮಠವನ್ನು ಸ್ಥಾಪಿಸಿದರು. ಇದು ಒಂದು ಅಕೋಮೆಟಾ (ಅಕ್ಷರಶ: ನಿದ್ದೆಯಿಲ್ಲದ ಒಬ್ಬನು) ಮತ್ತು ನಿದ್ದೆಯಿಲ್ಲದಿರುವವನು.

## *1727 ಮಾರ್ವಿನ್ನರ ನೂರು ವರ್ಷಗಳ ಪ್ರಾರ್ಥನೆ ಕೂಟ ಮತ್ತು ತರುವಾಯದ ಸೇವೆಗಳು*

1727ರಲ್ಲಿ ಹೆರ್ನ್ಹಟ್ ನಲ್ಲಿ ಚಿಕ್ಕಮೊರವಿಯಾನ ಸಮುದಾಯ ಕೌಂಟ್ ಜಿನ್ಜೆನ್ಡಾರ್ಫ್ ನಿಂದ ನೆಡೆಸಲ್ಪಟ್ಟು ಮೊರವಿಯಾನ ಪಂಚಾಶತ್ತಮ ಎಂಬುದಾಗಿ ಕಂಡಂತದ್ದನ್ನು ಅನುಭವಿಸಿತು. ಜಿನ್ಜೆನ್ಡಾರ್ಫ್‌ರವರು ಆಗಸ್ಟ್ 13 ''ಸಭಿಕರುಗಳ ಮೇಲೆ ಪವಿತ್ರಾತ್ಮನು ಸುರಿಸುವಿಕೆಯ ಎರಡು ವಾರಗಳೊಳಗೆ 24 ಪುರುಷರು ಮತ್ತು 24 ಸ್ತ್ರೀಯರು ''ಗಂಟೆಗೊಮ್ಮೆ ಮಧ್ಯಸ್ಥಿಕೆಯ ಪ್ರಾರ್ಥನೆ'' ಹೀಗೆ ಗಡಿಯಾರದ ಸುತ್ತ ಪ್ರತಿ ಗಂಟೆಗೆ ಪ್ರಾರ್ಥನೆ ಮಾಡಲೂ ಒಡಂಬಡಿಕೆ ಮಾಡಿಕೊಂಡಿದ್ದರು.

''ಬೆಂಕಿಯು ಬಲಿಪೀಠದ ಮೇಲೆ ನಿರಂತರವಾಗಿ ಉರಿಯುತ್ತಿರಬೇಕು; ಅದು ಹೊರಬರಬಾರದು'' ಎಂಬುದನ್ನು ನೋಡಲು ಅವರು ಬದ್ಧವಾಗಿದ್ದರು. (ಯಾಜಕಕಾಂಡ 6:13) ಈ ಪ್ರಯತ್ನಕ್ಕೆ ಬದ್ಧರಾಗಿರುವ ಸಂಖ್ಯೆ ಶೀಘ್ರದಲ್ಲೇ ಹೆಚ್ಚಾಗಿ ಸಮುದಾಯದಿಂದ ಸುಮಾರು ಎಪ್ಪತ್ತು ಆಯಿತು. ಈ ಪ್ರಾರ್ಥನಾ ಕೂಟದಲ್ಲಿ ಮುಂದಿನ ನೂರು ವರ್ಷಗಳವರೆಗೂ ನಿಲುಗಡೆಯಿಲ್ಲದೆ ಮುಂದುವರೆಯಿತು ಮತ್ತು ಮೋರ್ವಿಯನ್ನರು ವಿಶ್ವದ ಮೇಲೆ ಪ್ರಭಾವ ಬೀರಿದ ಪರಿಣಾಮ ಹಿಂದಿನ ಆತ್ಮಿಕ ಬಲವಾಗಿ ಅನೇಕರು ಕಾಣುತ್ತಾರೆ. ಹೆರ್ನ್ಹಟ್ ನ ಪ್ರಾರ್ಥನಾ ಕೊಠಡಿಯಿಂದ, ಸಭಾ ಇತಿಹಾಸದಲ್ಲಿ ಅಷ್ಟೇನೂ ಮೀರಿದ ಒಂದು ಸುವಾರ್ತಿಕ ಉತ್ಸಾಹ ಬಂದಿತ್ತು ಅನೇಕ ಸಮುದಾಯಗಳು ಪ್ರಪಂಚಕ್ಕೆಲ್ಲಾ ಹೋಗಿ ಸುವಾರ್ತೆ ಸಾರಿದರು ಮತ್ತು ಇನ್ನೂ ಕೆಲವರು ಮಹಾ ಆದೇಶಾಧಿಕಾರವನ್ನು ನೆರವೇರಿಸಲು ತಮ್ಮನ್ನು ಗುಲಾಮಗಿರಿಗೆ

ಒಪ್ಪಿಸಿಕೊಟ್ಟರು. ಇಂತಹ ಬದ್ಧತೆಯು ಒಂದು ಸಾಮಾನ್ಯ ಅಂಕಿ-ಅಂಶದಿಂದ ತೋರಿಸಲ್ಪಟ್ಟಿತ್ತು. ವಿಶಿಷ್ಟವಾಗಿ ಇದು ಪ್ರಪಂಚದ ಸೇವೆಗಳ ಮಿಷನರಿ ಪ್ರತಿಭಟನಾಕಾರರ ಅನುಪಾತಕ್ಕೆ ಬರುವಾಗ ಇದು 5000:1, ಮೊರ್ವನ್ನರು 60:1 ಅನುಪಾತದ ಅಧಿಕವಾದ ಹೆಚ್ಚಳ ಕಂಡರು. 1776 ರಷ್ಟರಲ್ಲಿ ಸುಮಾರು 226 ಮಿಷನರಿಗಳು ಹರ್ನ್ಹಟ್ ಸಮುದಾಯದಿಂದ ಹೊರಗೆ ಕಳುಹಿಸಲ್ಪಟ್ಟರು ಆಧುನಿಕ ಸೇವೆಯ ತಂದೆ ಎಂಬುದಾಗಿ ಕರೆಯಲ್ಪಡುವವರ ಬೋಧನೆಯ ಮೂಲಕ ಇದು ಸ್ಪಷ್ಟವಾಗಿದೆ. ವಿಲಿಯಂ ಕೇರಿಯವರ ಮೇಲೆ ಮೋರ್ವಿಯನ್ನರ ಮಿಷನರಿ ಚಟುವಟಿಕೆ ಉತ್ಸಾಹಕ್ಕೆ ಸಂಬಂಧಿಸಿದಂತೆ ಅವರ ಮೇಲೆ ಗಾಢ ಪರಿಣಾಮವನ್ನು ಬೀರಿದ್ದಾರೆ. ಇದು ಸೇವಾ ಮನಸ್ಸುಳ್ಳಂತಹ ಮೋರ್ವಿಯನ್ನರ ಮೂಲಕ ಜಾನ್ ವೆಸ್ಲಿ ನಂಬಿಕೆಗೆ ಬಂದರು. ಈ ಒಂದು ಸ್ಯಾಕ್ಸೋನಾ ಸಮುದಾಯದಲ್ಲಿನ ಪರಿಣಾಮವು, ಹಗಲು ಮತ್ತು ರಾತ್ರಿ ಕರ್ತನ ಮುಖವನ್ನು ಹುಡುಕಲು ಬದ್ಧತೆಯುಳ್ಳದ್ದು ನಿಜವಾಗಿಯೂ ಅಳೆಯಲಾಗದ್ದಾಗಿತ್ತು.

## *ಕೋರಿಯಾದ, ಸಿಯೊಲ್‌ನ ಪ್ರಾರ್ಥನಾ ಪರ್ವತ*

1973ರಲ್ಲಿ ಡೆವಿಡ್ ಯಾಂಗಿ ಚೋ ಯುಯೋಡೋ ಫುಲ್‌ಗಾಸ್ಪಲ್ ಚರ್ಚ್, ಸಿಯೊಲ್ ದಕ್ಷಿಣ ಕೊರಿಯಾದ ಸಭಾಪಾಲಕರು, ಹಗಲು ಮತ್ತು ರಾತ್ರಿ ಪ್ರಾರ್ಥನಾ ಪರ್ವತವನ್ನು ಸ್ಥಾಪಿಸಿದರು. ಪ್ರಾರ್ಥನಾ ಪರ್ವತವು ಶೀಘ್ರದಲ್ಲಿ ಹತ್ತು ಮಿಲಿಯನ್‌ಗಿಂತಲೂ ಹೆಚ್ಚು ಪ್ರತಿ ವರ್ಷಕ್ಕೆ ಭೇಟಿ ನೀಡುವವವರನ್ನು ಆಕರ್ಷಿಸಿತು. ಪರ್ವತದ ಮೇಲೆ ಒದಗಿಸಲಾಗಿದ್ದು ಪ್ರಾರ್ಥನಾ ಸಣ್ಣ ಕೋಣೆಗಳಲ್ಲಿ (ಸೆಲ್) ಜನರು ಕೂಟಗಳಲ್ಲಿ ಸಮಯ ಕಳೆಯುತ್ತಿದ್ದರು. ಚೋರವರು ನಿರಂತರ ಪ್ರಾರ್ಥನೆ, ನಂಬಿಕೆ ಮತ್ತು ಅವರ ಸಭೆಯಲ್ಲಿ ಚಿಕ್ಕ ಶಿಷ್ಯತ್ವದ ಕೋಣೆಗಳನ್ನು (ಸೆಲ್) ಸ್ಥಾಪಿಸಲು ಬದ್ಧತೆ ಹೊಂದಿದ್ದರು. ಬಹುಶಃ ಇದರ ಫಲಿತಾಂಶವಾಗಿ ಚೋರವರ ಸಭೆಯು ಪ್ರಪಂಚದಲ್ಲೇ 7,80,000 ಕ್ಕಿಂತಲೂ ಅಧಿಕವಾದ ಸಭಿಕರುಗಳನ್ನು ಹೊಂದಿರುವ ಒಂದು ದೊಡ್ಡ ಸಭೆಯಾಗಿ ಕಂಡುಬಂದು ವೇಗವಾಗಿ ವಿಸ್ತರಿಸಿದೆ.

## *ಅಂತರಾಷ್ಟ್ರೀಯ ಪ್ರಾರ್ಥನೆ ಮನೆ, ಕನ್ಸಾಸ ನಗರ*

ಸೆಪ್ಟೆಂಬರ 19, 1999 ರಲ್ಲಿ ಮಿಸ್ಸೂರಿಯ ಕನ್ಸಾಸ ನಗರದ ಅಂತರಾಷ್ಟ್ರೀಯ ಪ್ರಾರ್ಥನೆ ಮನೆಯಲ್ಲಿ ಪ್ರಾರಂಭಗೊಂಡ ಒಂದು ಪ್ರಾರ್ಥನೆ ಮತ್ತು ಆರಾಧನೆಯ

ಕೂಟವು ದಿನದ 24 ಗಂಟೆಗಳು ಮುಂದುವರೆಯಿತು ವಾರದ ಏಳು ದಿನಗಳಲ್ಲಿಯೂ ಸಹ ಜೆನ್ಜೆನ್ಡಾಫ್ ರ ದರ್ಶನ ರೀತಿಯಲ್ಲಿಯೆ ಬಲಿಪೀಠದ ಮೇಲಿನ ಬೆಂಕಿ ಹೊರಹೋಗಬಾರದು, ಆ ದಿನದಿಂದಲೂ ಪ್ರಾರ್ಥನೆ ಮತ್ತು ಆರಾಧನೆಯು ಪರಲೋಕಕ್ಕೆ ಏರಿಹೋಗಲು ಯಾವ ಸಮಯವೂ ಅಲ್ಲಿ ಇರಲಿಲ್ಲ ವಿಶ್ವಾಸಿಗಳು.

ಸ್ಥಳೀಯ ಸಮುದಾಯಗಳಲ್ಲಿ 24/7 ಆರಾಧನೆ ಮತ್ತು ಪ್ರಾರ್ಥನೆಯನ್ನು ಸ್ಥಾಪಿಸಲು ಹುಡುಕಿದರೆ ಪ್ರಪಂಚದ ಎಲ್ಲಾ ಕಡೆ ಅಧಿಕವಾಗಿರುವಂತದ್ದು ಜರುಗುತ್ತದೆ.

## ಹಗಲು ಮತ್ತು ರಾತ್ರಿ

ಯೆಶಾಯ 62:6,7

**ಯೆರೂಸಲೇಮೇ ನಾನು ನಿನ್ನ ಪೌಳಿಗೋಡೆಗಳಲ್ಲಿ ಕಾವಲುಗಾರರನ್ನು ನೇಮಿಸಿದ್ದೇನೆ; ಅವರು ಹಗಲೂ ಇರುಳೂ ಮೌನವಾಗಿರರು ಯೆಹೋವನಿಗೆ ಜ್ಞಾಪಿಸುವವರೇ, ಆತನು ಯೆರೂಸಲೇಮನ್ನು ಭದ್ರಪಡಿಸಿ ಲೋಕ ಪ್ರಸಿದ್ಧಿಗೆ ತರುವ ತನಕ ನಿಮಗೆ ವಿರಾಮವಿಲ್ಲದಿರಲಿ, ಆತನಿಗೂ ವಿರಾಮ ಕೊಡದಿರಿ.**

ಲೂಕ 18:1,7

**ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥನೆ ಮಾಡುತ್ತಿರಬೇಕೆಂಬದಕ್ಕೆ ಆತನು ಅವರಿಗೆ ಒಂದು ಸಾಮ್ಯವನ್ನು ಹೇಳಿದನು ದೇವರಾದುಕೊಂಡವರು ಆತನಿಗೆ ಹಗಲು ರಾತ್ರಿ ಮೊರೆಯಿಡುವಲ್ಲಿ ಆತನು ಅವರ ವಿಷಯದಲ್ಲಿ ತಡಮಾಡಿದರೂ ಅವರ ನ್ಯಾಯವನ್ನು ತೀರಿಸದೆ ಇರುವನೇ? ಅವರಿಗೆ ಬೇಗ ನ್ಯಾಯವನ್ನು ತೀರಿಸುವನೆಂದು ನಿಮಗೆ ಹೇಳುತ್ತೇನೆ.**

ಕೀರ್ತನೆಗಳು 134

**ಎಲೈ ರಾತ್ರಿಯಲ್ಲಿ ಯೆಹೋವನ ಮಂದಿರದಲ್ಲಿರುವ ಆತನ ಸರ್ವಸೇವಕರೇ ಯೆಹೋವನನ್ನು ಕೊಂಡಾಡಿರಿ ಮಹಾಪರಿಶುದ್ಧಸ್ಥಳದ ಕಡೆಗೆ ಕೈಯೆತ್ತಿ ಯೆಹೋವನನ್ನು ಕೊಂಡಾಡಿರಿ ಭೂಮ್ಯಾಕಾಶಗಳನ್ನು ಉಂಟು ಮಾಡಿದ ಯೆಹೋವನು ಚೀಯೋನಿನೊಳಗಿಂದ ನಿನ್ನನ್ನು ಆಶೀರ್ವದಿಸಲಿ.**

ದೇವರಿಗಾಗಿ ಪ್ರತಿ ಹಗಲು ಮತ್ತು ರಾತ್ರಿ ಅಳುವ ಜನರುಗಳಾಗಿ ನಾವುಗಳು ಕಂಡು ಬರೋಣ.

## ಪ್ರಾರ್ಥನೆ ಮತು ಆರಾಧನೆಯ ಒಂದು ಮನೆ ಸ್ಥಾಪಿಸುವುದು

ಸ್ಥಳೀಯ ಸಭೆಗಳಾಗಿ, ನಾವುಗಳು ಇಂತಹವುಗಳಿಗೆ ಚಲಿಸಬೇಕು ದಾವೀದನ ಗುಡಾರವನ್ನು ಸ್ಥಾಪಿಸುವುದರಿಂದ, ನಿರಂತರವಾದ ಪ್ರಾರ್ಥನೆ ಮತ್ತು ಆರಾಧನೆಯೊಡನೆ ಆದ್ದರಿಂದ ಆತನ ರಾಜ್ಯವು ನಮ್ಮ ಸಮುದಾಯಗಳಲ್ಲಿ ನಗರಗಳಲ್ಲಿ ಮತ್ತು

ಪ್ರಾಂತ್ಯಗಳಲ್ಲಿ ಬರುವುದಕ್ಕಾಗಿ ನಾವುಗಳು ಪ್ರೋತ್ಸಾಹಿಸಬೇಕು. ಪ್ರಾರ್ಥನೆ ಮತ್ತು ಆರಾಧನೆಯ ಮೂಲಕವಾಗಿ ದೇವರೊಂದಿಗೆ ನಿಕಟತೆಗೆ ಬರುವಂತಹ ಜೀವನ ಶೈಲಿಯಲ್ಲಿ ಎಲ್ಲಾ ಸೇವೆಯು ಹರಿಯುತ್ತಿದ್ದರೆ ಅದು ಬಲಯುತವಾಗಿರುತ್ತದೆ.

## ಸ್ಥಳೀಯ ಸಭೆಯು ಇದನ್ನು ಕಾರ್ಯಗತಗೊಳಿಸಲು ಪ್ರಾಯೋಗಿಕ ಮಾರ್ಗಗಳು

- ಪ್ರಾರ್ಥನೆ ಮತ್ತು ಆರಾಧನೆಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳುವುದನ್ನು ಜನರಿಗೆ ಕಲಿಸಬೇಕು.
- ಬಲಯುತವಾಗಿ ಮತ್ತು ಪ್ರವಾದನಾ ಆರಾಧನೆಯಲ್ಲಿ ಕಾರ್ಯತಂತ್ರದ ಪ್ರಾರ್ಥನೆ ಮತ್ತು ಮಧ್ಯಸ್ಥಿಕೆಯಲ್ಲಿ ಸಭೆಯನ್ನು ಬೆಳೆಸಬೇಕು. ವಿಷಯಗಳ ಕಾರ್ಯತಂತ್ರದ (ಉದಾಹರಣೆಗೆ: ಸಾಮಾಜಿಕ ತೊಂದರೆಗಳು, ದುರಾತ್ಮನ ಹಿಡಿತಗಳು) ನಗರದಲ್ಲಿ/ ಸಮುದಾಯಗಳಲ್ಲಿ ಮಾಹಿತಿಗಳನ್ನು ಸಂಗ್ರಹಿಸಬೇಕು ಮತ್ತು ಇಂತಹವುಗಳನ್ನು ನಮ್ಮ ಪ್ರಾರ್ಥನಾ ಗುರಿಗಳಾಗಿ ಮಾಡಿಕೊಳ್ಳಬೇಕು.
- ಸಾಮೂಹಿಕ ಆರಾಧನೆ ಮತ್ತು ಪ್ರಾರ್ಥನೆಗೆ ನಿಯಮಿತ ವೇಳಾಪಟ್ಟಿಯನ್ನು ನಿಗದಿಪಡಿಸಬೇಕು. ಉದಾಹರಣೆಗೆ ದಿನನಿತ್ಯದ ಅಥವಾ ವಾರದ ಕೂಟಗಳು, ಪೂರ್ಣ ರಾತ್ರಿ ಆರಾಧನೆ ಮತ್ತು ಪ್ರಾರ್ಥನೆಯ ನಿಯಮಿತ ಸಮಯಗಳು ವಿಸ್ತಾರಗೊಂಡ ಅವಧಿಗಳು (ದಿನಗಳ) ಆರಾಧನೆ ಮತ್ತು ಪ್ರಾರ್ಥನೆ.
- ಸಣ್ಣಗುಂಪುಗಳಲ್ಲಿ ಆರಾಧನೆ, ಪ್ರಾರ್ಥನೆ ಮತ್ತು ಮಧ್ಯಸ್ಥಿಕೆಯೊಡನೆ ಒಂದು ಗಮನವಾಗಿ ಜನರು ಸಂಧಿಸಲು ಪ್ರೋತ್ಸಾಹಿಸಬೇಕು.
- ನಿಮ್ಮ ಸ್ಥಳೀಯ ಸಭೆಯಲ್ಲಿ 24/7 ಪ್ರಾರ್ಥನೆ ಮತ್ತು ಆರಾಧನೆಯ ಮನೆಯನ್ನು ಜನರ ಗುಂಪುಗಳು 2 ಗಂಟೆಗಳ ಸಮಯದ ಭಾಗ ತೆಗೆದುಕೊಂಡು ಆರಾಧನೆ ಮತ್ತು ಪ್ರಾರ್ಥನೆಯಲ್ಲಿ ಸಮಯ ಕಳೆಯಲು ಸ್ಥಾಪಿಸುವುದರ ಕಡೆಗೆ ಕಾರ್ಯ ಮಾಡಬೇಕು.

## ಸಿದ್ಧಗೊಂಡಿರುವ ಸವಾಲುಗಳು

- ಹಂತ ಹಂತವಾಗಿ ಬೆಳೆಯಿರಿ. ಜನರು ಇರುವ ಕಡೆ ಪ್ರಾರಂಭಿಸಿರಿ. ಸಭೆಯಲ್ಲಿರುವಂತಹ ಜನರು ಮಾಡಲು ಸಾಧ್ಯವಾಗದಂತಹ ಯಾವುದಕ್ಕಾದರೂ ತಕ್ಷಣವಾಗಿ ಜಿಗಿಯಲು ಪ್ರಯತ್ನಿಸಬೇಡಿರಿ (ಉದಾ: 24X7 ಪ್ರಾರ್ಥನೆ ಮನೆ)
- ದೈಹಿಕವಾಗಿಯೂ ಸಹ ಜನರಿಗೆ ವಿಶ್ರಾಂತಿಯನ್ನು ಕೊಡಿರಿ ಆರಾಧನೆ ಮತ್ತು ಮಧ್ಯಸ್ಥಿಕೆಯ ಪ್ರಾರ್ಥನೆ ನಡೆಸಲು ತಮ್ಮನ್ನು ತೊಡಗಿಸಿಕೊಂಡವರು,

ವಿಸ್ತರಿಸಲಾದ ಆರಾಧನೆ ಮತ್ತು ಮಧ್ಯಸ್ಥಿಕೆಯ ಪ್ರಾರ್ಥನೆಗೆ ತೊಡಗಿಸಿಕೊಂಡಿದ್ದರಿಂದ ದೈಹಿಕವಾಗಿ ದಣಿಯುತ್ತಾರೆ. ಆದುದರಿಂದ ನಾಯಕರುಗಳು ವಿಶ್ರಾಂತಿ ಪಡೆಯಲು ಸಾಕಾಗುವಷ್ಟು ಸಮಯವನ್ನು ಕೊಡಬೇಕು.

## ಪರಿಗಣಿಸಲು ಪ್ರಶ್ನೆಗಳು

ಸ್ಥಳೀಯ ಸಭೆಯ ದೇಹವಾಗಿ ಜನರು ನೇರವಾಗಿ ಆತ್ಮಗಳ ರಕ್ಷಣೆಯಲ್ಲಿ ಫಲಿತಾಂಶ ನೀಡುವ ಪ್ರಾರ್ಥನೆ ಮತ್ತು ಆರಾಧನೆ ತಮ್ಮನ್ನು ಹೇಗೆ ಸ್ಥಾಪಿಸಿಕೊಳ್ಳಬಹುದು?

ಆರಾಧನೆ ತಂಡಗಳು, ಮಧ್ಯಸ್ಥಿಕೆ ಪ್ರಾರ್ಥಿಸುವವರು ಮತ್ತು ಸ್ಥಳೀಯ ಸಭೆಯ ದೇಹವು ಪವಿತ್ರಾತ್ಮನಿಗೆ ಆರಾಧನೆ ಮತ್ತು ಮಧ್ಯಸ್ಥಿಕೆ ಪ್ರಾರ್ಥನೆಯಲ್ಲಿ ಸೂಕ್ಷ್ಮ ಪರಿಜ್ಞಾನ ಉಳ್ಳವರಾಗಿಲೂ ನೀವು ಹೇಗೆ ತರಬೇತಿ ನೀಡಬಹುದು ಆದ್ದರಿಂದ ಆರಾಧನೆ ಮತ್ತು ಮಧ್ಯಸ್ಥಿಕೆಯ ಪ್ರಾರ್ಥನೆ ಪ್ರವಾದನಾತ್ಮಕವಾಗಿರುತ್ತದೆ (ಆತನಿಂದ ಪ್ರೇರಿತಗೊಂಡಿರುತ್ತದೆ)?

# 14

# ಸ್ಥಳೀಯ ಸಭೆ-ದೇವರ ಆಲಯವಾಗಿದೆ

## ದೇವಾಲಯ, ದೇವರು ವಾಸಿಸುವ ಒಂದು ಪವಿತ್ರ ಸ್ಥಳ

1 ಕೊರಿಂಥದವರಿಗೆ 3:16,17

**ನೀವು ದೇವರ ಆಲಯವಾಗಿದ್ದೀರೆಂದು ದೇವರ ಆತ್ಮನು ನಿಮ್ಮಲ್ಲಿ ವಾಸಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ? ಯಾವನಾದರೂ ದೇವರ ಆಲಯವನ್ನು ಕೆಡಿಸಿದರೆ ದೇವರು ಅವನನ್ನು ಕೆಡಿಸುವನು ಯಾಕೆಂದರೆ ದೇವರ ಆಲಯವು ಪವಿತ್ರವಾದದ್ದು ಆ ಆಲಯವು ನೀವೇ.**

ನಾವು ಆಗಾಗ್ಗೆ ಈ ವಚನಗಳನ್ನು ವೈಯಕ್ತಿಕ ಪ್ರಜ್ಞೆಯಲ್ಲಿ ವಿವರಿಸುತ್ತೇವೆ ಮತ್ತು ಉಲ್ಲೇಖಿಸುತ್ತೇವೆ. ಹಾಗೆಯೇ ವೈಯಕ್ತಿಕ ಅನ್ವಯಿಸುವಿಕೆಗೆ ಇದು ಸತ್ಯಕರವಾಗಿದೆ ಪೌಲನು ಸ್ಥಳೀಯ ವಿಶ್ವಾಸಿಗಳ ಸಮುದಾಯಕ್ಕೆ ಪೌಲನು ಬರೆಯುತ್ತಿದ್ದಾನೆ ಮತ್ತು ಆದ್ದರಿಂದ ಸನ್ನಿವೇಶವು ಒಂದು ಸಾಮೂಹಿಕ ವಿಶ್ವಾಸಿಗಳ ದೇಹಕ್ಕೆ ಪ್ರತಿನಿಧಿಸುವಂತಹದ್ದಾಗಿದೆ ದೇವರು ವಾಸಿಸುವಂತಹ ಸ್ಥಳವಾದ ದೇವರ ಆಲಯ ನಾವಾಗಿದ್ದೇವೆ ನಾವು ದೇವರ ವಾಸಸ್ಥಾನಗಳಾಗಿದ್ದೇವೆ. ನಾವು ಆತನ ಪ್ರಸನ್ನತೆಯಿಂದ ತುಂಬಿರಬೇಕು.

ದೇವರ ಆಲಯವು ಪವಿತ್ರವಾದದ್ದು ಇದು ಪವಿತ್ರವಾಗಿ ಇರಿಸಲ್ಪಟ್ಟಿರಬೇಕು. ಒಟ್ಟಾಗಿ ದೇವಾಲಯವನ್ನು ಪವಿತ್ರವಾಗಿ ಇಡುವಂತಹದ್ದು ನಮ್ಮ ಜವಾಬ್ದಾರಿಯಾಗಿದೆ ಮತ್ತು ಮಲಿನತೆಯಿಂದ ಸ್ವತಂತ್ರವಾಗಿರಿಸಬೇಕು. ನಾಯಕರುಗಳು ಮತ್ತು ವಿಶ್ವಾಸಿಗಳು ಸ್ಥಳೀಯ ಸಭೆಯ ದೇಹದ ಕಡೆಗೆ ಆಳವಾದ ಪೂಜ್ಯತೆಯನ್ನು ಹೊಂದಿರುವಂತದ್ದು ಅಗತ್ಯವಾಗಿದೆ. ಸ್ಥಳೀಯ ಸಭೆಯ ದೇಹದ ಪವಿತ್ರವಾದುದು ಎಂಬುದು ಸತ್ಯಕರವಾಗಿದೆ ಮತ್ತು ನಾವು ಇದರ ಭಾಗಗಳಾಗಿದ್ದೇವೆ. ಇತರರು ಪಾಪಮಾಡಲೂ ನಾವು ಕಾರಣವಾಗದಂತೆ ಅಥವಾ ನಮ್ಮನ್ನು ಪಾಪದಿಂದ ದೂರವಿಡಬೇಕು ದೇವರ ಆಲಯವನ್ನು ಮಲಿನತೆ ಮಾಡುವುದರಲ್ಲಿ ನಾವು ಜವಾಬ್ದಾರರಾಗಿರಲು ಬಯಸುವುದಿಲ್ಲ.

## ಮೋಶೆಯ ದೇವದರ್ಶನ ಗುಡಾರ

ದೇವದರ್ಶನ ಗುಡಾರವನ್ನು ಕಟ್ಟಲು ದೇವರ ಮೋಶೆಗೆ ಆದೇಶಿಸಿದ್ದನು. ಪರಲೋಕದಲ್ಲಿರುವ ನಿಜವಾದ ದೇವದರ್ಶನ ಗುಡಾರದ ಛಾಯೆ ಮತ್ತು ತದ್ರೂಪದಂತೆ

ದೇವದರ್ಶನ ಗುಡಾರವನ್ನು ಕಟ್ಟಬೇಕೆಂಬುದಾಗಿ ದೇವರ ಮೋಶೆಗೆ ಆದೇಶಿಸಿದ್ದನು ಎಂಬುದನ್ನು ನಮಗೆ ಇಬ್ರಿಯ ಪುಸ್ತಕವು ಉಪದೇಶಿಸುತ್ತದೆ. ಮೋಶೆಯ ದೇವದರ್ಶನ ಗುಡಾರವು ಪರಲೋಕದಲ್ಲಿನ ದೇವದರ್ಶನ ಗುಡಾರದ ಮಾದರಿಯ ಪ್ರಕಾರವಾಗಿತ್ತು (ಇಬ್ರಿಯರಿಗೆ 8:1-5).

ಮೋಶೆಯ ದೇವದರ್ಶನ ಗುಡಾರವು ಒಡಂಬಡಿಕೆ ಮಂಜೂಷವನ್ನು ಒಳಗೊಂಡಿತ್ತು ಮತ್ತು ದೇವರು ಮಹಾಯಾಜಕನನ್ನು ಸಂಧಿಸುವ ಸ್ಥಳವು ಇದಾಗಿತ್ತು.

ವಿಮೋಚನ ಕಾಂಡ 25:8
**ನಾನು ಅವರ ಮಧ್ಯದಲ್ಲಿ ವಾಸಿಸುವದಕ್ಕೆ ನನಗೆ ಒಂದು ದೇವಸ್ಥಾನವನ್ನು ಕಟ್ಟಿಸಬೇಕು.**

ವಿಮೋಚನ ಕಾಂಡ 25:21,22
**ಆ ಕೃಪಾಸನವನ್ನು ಮಂಜೂಷದ ಮೇಲಿಡಬೇಕು ನಾನು ನಿನಗೆ ಕೊಡುವ ಆಜ್ಞಾಶಾಸನಗಳನ್ನು ಆ ಮಂಜೂಷದೊಳಗೆ ಇಡಬೇಕು ಅಲ್ಲಿಯೇ ನಾನು ನಿನಗೆ ದರ್ಶನವನ್ನು ಕೊಡುವೆನು ಕೃಪಾಸನದ ಮೇಲೆ ಆಜ್ಞಾಶಾಸನಗಳನ್ನು ಇಟ್ಟಿರುವ ಮಂಜೂಷದ ಮೇಲಣ ಎರಡು ಕೆರೂಬಿಗಳ ನಡುವೆಯೇ ನಾನು ಇದ್ದು ನಿನ್ನ ಸಂಗಡ ಮಾತಾಡಿ ನೀನು ಇಸ್ರಾಯೇಲ್ಯರಿಗೆ ಆಜ್ಞಾಪಿಸಬೇಕಾಗಿರುವ ಎಲ್ಲಾ ಸಂಗತಿಗಳನ್ನು ತಿಳಿಸುವೆನು.**

ವಿಮೋಚನ ಕಾಂಡ 30:6
**ಆಜ್ಞಾ ಶಾಸನಗಳ ಮಂಜೂಷದ ಮುಂದಣ ತೆರೆಗೆ ಎದುರಾಗಿ, ಅಂದರೆ ಆಜ್ಞಾಶಾಸನಗಳ ಮೇಲಿರುವಂಥ ಮತ್ತು ನಾನು ನಿನಗೆ ದರ್ಶನ ಕೊಡುವಂಥ ಕೃಪಾಸನದ ಮುಂದೆ ಅದನ್ನು ಇರಿಸಬೇಕು.**

ಸಮಯದಿಂದ ಸಮಯಕ್ಕೆ ದೇವರ ಮಹಿಮೆಯು ಕಾಣುವ ಸ್ಥಳವು ದೇವದರ್ಶನ ಗುಡಾರವಾಗಿದೆ. ದೇವದರ್ಶನ ಗುಡಾರವನ್ನು ದೇವರ ಮಹಿಮೆಯು ಶುದ್ಧೀಕರಿಸುತ್ತಿತ್ತು.

ವಿಮೋಚನ ಕಾಂಡ 29:43
**ಅಲ್ಲಿಯೇ ನಾನು ಇಸ್ರಾಯೇಲ್ಯರಿಗೆ ದರ್ಶನವನ್ನು ಕೊಡುವೆನು ಅಲ್ಲಿ ಕಾಣಿಸುವ ನನ್ನ ಪ್ರಭಾವದಿಂದ ಆ ಸ್ಥಳವು ಪರಿಶುದ್ಧವಾಗಿರುವುದು.**

ವಿಮೋಚನ ಕಾಂಡ 40:34,35
**ಆಗ ಮೇಘವು ದೇವದರ್ಶನದ ಗುಡಾರವನ್ನು ಮುಚ್ಚಿತು ಯೆಹೋವನ ತೇಜಸ್ಸು ಗುಡಾರವನ್ನು ತುಂಬಿತು. ಮೇಘವು ದೇವದರ್ಶನದ ಗುಡಾರದ ಮೇಲೆ ನೆಲೆಯಾಗಿರುವದರಿಂದಲೂ ಯೆಹೋವನ ತೇಜಸ್ಸು ಗುಡಾರದೊಳಗೆ ತುಂಬಿರುವದರಿಂದಲೂ ಮೋಶೆ ಗುಡಾರದಲ್ಲಿ ಹೋಗಲಾರದೆ ಇದ್ದನು.**

ಇಸ್ರಾಯೇಲ್ಯರ ಪ್ರಯಾಣದಲ್ಲಿ ಅನೇಕ ಸಮಯಗಳಲ್ಲಿ ನಾವು ಉದಾಹರಣೆಯಾಗಿ ''ಯೆಹೋವನ ತೇಜಸ್ಸು ಗುಡಾರದೊಳಗೆ ತುಂಬಿರುವುದನ್ನು'' (ಯಾಜಕಕಾಂಡ 9:23 ಅರಣ್ಯಕಾಂಡ 14:10, ಅರಣ್ಯಕಾಂಡ 16:19,42 ಅರಣ್ಯಕಾಂಡ 20:6) ನಾವು ಓದುತ್ತೇವೆ. ಹಳೇ ಒಡಂಬಡಿಕೆಯ ಮೋಶೆಯ ದೇವದರ್ಶನ ಗುಡಾರವು ಆತನ ಜನರುಗಳೊಡನೆ ದೇವರು ಸಂಧಿಸಿದ ಸ್ಥಳ ಮತ್ತು ಆತನ ಮಹಿಮೆಯು ಪ್ರಕಟಗೊಂಡಂತಹ ಸ್ಥಳವಾಗಿದೆ.

## ಸೋಲೊಮೋನನ ದೇವಾಲಯ

ಸೋಲೊಮೋನನ ದೇವಾಲಯ ಪ್ರತಿಷ್ಠೆಯ ಸಮಯದಲ್ಲಿ ಇದೇ ರೀತಿಯಲ್ಲಿ ಗೋಚರವಾದಂತಹದ ತೋರ್ಪಡಿಸುವಿಕೆಯನ್ನು ನಾವು ನೋಡುತ್ತೇವೆ. ಇದು ಅಕ್ಷರಶಃ ದೇವಾಲಯವನ್ನು ದೇವರ ಮಹಿಮೆಯು ಆಕ್ರಮಿಸುವಂತಹ ಅದ್ಭುತ ಚಿತ್ರಣವಾಗಿದೆ.

2 ಪೂರ್ವಕಾಲದ ವೃತ್ತಾಂತ 5:13,14

**ಮಂಜೂಷವನ್ನು ಒಳಗಿಟ್ಟ ಯಾಜಕರು ದೇವಾಲಯದಿಂದ ಹೊರಗೆ ಬಂದ ಕೂಡಲೆ ಒಬ್ಬನೋ ಎಂಬಂತೆ ಸ್ವರವೆತ್ತಿ ಯೆಹೋವನನ್ನು ಕೀರ್ತಿಸುವದಕ್ಕಾಗಿ ತುತ್ತೂರಿ ಊದುವವರೂ ಗಾಯನ ಮಾಡುವವರೂ ಅಲ್ಲಿ ನಿಂತಿದ್ದರು. ತುತೂರಿ ತಾಳ ಮೊದಲಾದ ವಾದ್ಯಗಳ ಧ್ವನಿಯೂ ಯೆಹೋವನು ಒಳ್ಳೆಯವನು ಆತನ ಕೃಪೆಯು ಶಾಶ್ವತವಾಗಿರುವದು ಎಂದು ಕೃತಜ್ಞತಾಸ್ತುತಿ ಮಾಡುವವರ ಆಲಯದಲ್ಲಿ ತುಂಬಿಕೊಂಡಿತು. ಯೆಹೋವನ ತೇಜಸ್ಸಿನಿಂದ ವ್ಯಾಪ್ತವಾಗಿದ್ದ ಮೇಘವು ದೇವಾಲಯದಲ್ಲಿ ತುಂಬಿಕೊಂಡದ್ದರಿಂದ ಯಾಜಕರು ಅಲ್ಲಿ ನಿಂತು ಸೇವೆ ಮಾಡಲಾರದೆ ಹೋದರು.**

ಕರ್ತನ ಮಹಿಮೆಯು ದೇವರ ಮನೆಯನ್ನು ತುಂಬಿಕೊಂಡಿತು! ದೇವರು ಅಪೇಕ್ಷಿಸುವಂತದ್ದು ಇದೇ ಆಗಿದೆ. ಹೊಸ ಒಡಂಬಡಿಕೆಯ ಛಾಯೆ ಮತ್ತು ವಿಧದ ವಾಸ್ತಾವಿಕತೆಯಾಗಿರುವಂತಹ ಹಳೇ ಒಡಂಬಂಡಿಕೆಯು, ಆತನ ಜನರ ಮೂಲಕವಾಗಿ ಆತನ ಮಹಿಮೆಯನ್ನು ತೋರ್ಪಡಿಸುವಂತಹ ದೇವರ ಹೃದಯವನ್ನು ಪ್ರಕಟಿಸುತ್ತದೆ.

## ಆತನ ಮಹಿಮೆಯಿಂದ ತುಂಬಿದ ಒಂದು ಮನೆ

ಬ್ಯಾಬಿಲೋನಿಯಾರಿಂದ ಸೊಲೋಮೋನನ ದೇವಾಲಯವು ನಾಶಗೊಂಡಿತು. 70 ವರ್ಷದ ಸೆರೆಯ ಕೊನೆಯಲ್ಲಿ ಯೆಹೂದಿ ಜನರು ತಮ್ಮ ಸ್ವಂತ ಸ್ಥಳಕ್ಕೆ ಹೋಗಿ ಯೆರೂಸಲೇಮನ್ನು ಪುನಃ ಕಟ್ಟಲು ಸೆರೆಯಿಂದ ಬಿಡುಗಡೆಗೊಂಡರು. ಕಿ.ಪೂ. 536ರಲ್ಲಿ ಯೆರೂಸಲೇಮಿನ ದೇವಾಲಯವನ್ನು ಪುನಃ ಕಟ್ಟಲು ಅಸ್ತಿವಾರವನ್ನು ಹಾಕುವ

ಕೆಲಸವನ್ನು ಪ್ರಾರಂಭಿಸಿದರು ಕೆಲಸವು 16 ವರ್ಷಗಳವರೆಗೂ ನಡೆಯಿತು, ಅದು ಅಡಚಣೆಯಾದಾಗ, ಪ್ರವಾದಿಯಾದ ಹಗ್ಗಾಯನು ಈ ಒಂದು ಸಮಯದಲ್ಲಿ ಆಲಯವನ್ನು ಪುನಃ ಕಟ್ಟುವ ಕಾರ್ಯವನ್ನು ಪೂರ್ಣಗೊಳಿಸಬೇಕೆಂದು ಜನರನ್ನು ಇಂತಹ ವಚನಗಳಿಂದ ಪ್ರೋತ್ಸಾಹಿಸಿದನು:

ಹಗ್ಗಾಯ 2:7-9

**ಸಕಲ ಜನಾಂಗಗಳನ್ನು ನಡುಗಿಸುವೆನು; ಆಗ ಸಮಸ್ತ ಜನಾಂಗಗಳ ಇಷ್ಟ ವಸ್ತುಗಳು ಬಂದು ಒದಗಲು ಆ ಆಲಯವನ್ನು ವೈಭವದಿಂದ ತುಂಬಿಸುವೆನು; ಇದು ಸೇನಾಧಿಶ್ವರ ಯೆಹೋವನ ನುಡಿ. ಈ ಆಲಯದ ಮುಂದಿನ ವೈಭವವು ಹಿಂದಿನ ವೈಭವಕ್ಕಿಂತ ವಿಶೇಷವಾಗಿರುವದು ಇದು ಸೇನಾಧೀಶ್ವರ ಯೆಹೋವನ ನುಡಿ ಈ ಸ್ಥಳದಲ್ಲಿ ಸಮಾಧಾನವನ್ನು ಅನುಗ್ರಹಿಸುವೆನು ಇದು ಸೇನಾಧೀಶ್ವರ ಯೆಹೋವನ ನುಡಿ.**

ಆತನ ಜನರು ಆಲಯವನ್ನು ಕಟ್ಟಿದರೆ, ಆತನ ಮಹಿಮೆಯಿಂದ ಅದನ್ನು ಆತನು ತುಂಬಿಸುತ್ತೇನೆ ಎಂಬುದಾಗಿ ದೇವರು ವಾಗ್ದಾನ ಮಾಡಿದನು. ಈ ಆಲಯದ ಮುಂದಿನ ವೈಭವವು ಹಿಂದಿನ ವೈಭವಕ್ಕಿಂತ ವಿಶೇಷವಾಗಿರುವುದೆಂದು ಆತನು ವಾಗ್ದಾನ ಮಾಡಿದನು.

## ದೇವರ ಮಹಿಮೆಯು ಆತನು ಯಾರಾಗಿದ್ದಾನೆ ಮತ್ತು ಆತನು ಏನು ಮಾಡುತ್ತಾನೆ ಎಂಬುದರ ಅಭಿವ್ಯಕ್ತತೆಯಾಗಿದೆ

ದೇವರ ಯಾರಾಗಿದ್ದಾನೆ ಮತ್ತು ಆತನು ಏನನ್ನು ಮಾಡುತ್ತಾನೆ ಎಂಬುದನ್ನು ದೇವರ ಮಹಿಮೆಯು ತೋರ್ಪಡಿಸುವಂತದ್ದಾಗಿದೆ ಆದ್ದರಿಂದ ಆತನ ಅದೃಶ್ಯ ಗುಣ ಸ್ವರೂಪ ಲಕ್ಷಣಗಳ ಅಭಿವ್ಯಕ್ತತೆಯನ್ನು ಜನರು ನೋಡುತಾರೆ. ಆದ್ದರಿಂದ ದೇವರ ಮಹಿಮೆಯು ಅಸಂಖ್ಯಾತ ಮಾರ್ಗಗಳಲ್ಲಿ ತೋರ್ಪಡಿಸಲ್ಪಡುತ್ತದೆ. ಮೋಶೆಯ ದೇವದರ್ಶನದ ಗುಡಾರದಲ್ಲಿ ಮತ್ತು ಸೊಲೋಮೋನ ದೇವಾಲಯದ ಪ್ರತಿಷ್ಟೆಯ ಸಮಯದಲ್ಲಿ ಉದಾಹರಣೆಗೆ ಮೋಡದೋಪಾದಿಯಲ್ಲಿ ದೇವರ ಮಹಿಮೆಯು ತೋರ್ಪಡಿಸಲ್ಪಟ್ಟಿತ್ತು. ಗೋಚರವಾದ ಮೋಡವು ದೇವರ ಮಹಿಮೆಯು ಅಭಿವ್ಯಕ್ತತೆಯಾಗಿದೆ ಎಂಬುದರ ಲಾಭವೇನು ಎಂಬುದಾಗಿ ನಮ್ಮಲ್ಲಿ ಅನೇಕರು ಪ್ರಶ್ನೆ ಮಾಡಬಹುದು ನೈಸರ್ಗಿಕ ಮನಸ್ಸಿಗೆ ಒಂದು ಮೋಡವು ಯಾವುದೇ ಮೌಲ್ಯವಿಲ್ಲದಿರುವುದಾಗಿ ಕಾಣಬಹುದು. ಆದಾಗ್ಯೂ ಮೋಡದಂತೆ ತೋರಿಸಲ್ಪಟ್ಟ ದೇವರ ಮಹಿಮೆಯನ್ನು ನೋಡಿದಂತಹ ಜನರುಗಳ ಮೇಲೆ ಇದು ಬಲಯುತವಾದ ಪರಿಣಾಮವನ್ನು ಹೊಂದಿತ್ತು. ಅವರ ಮಧ್ಯದಲ್ಲಿನ ದೇವರ ಪ್ರಸನ್ನತೆಯ ವಿಸ್ಮಯದಲ್ಲಿ ಜನರು ಎದ್ದುನಿಂತಿದ್ದರು ದೇವರ

ಮಹಿಮೆಯು ನಾವು ನೋಡುವಂತದ್ದರ ಮೂಲಕವಾಗಿ ಮಾತ್ರ ಸ್ಪಷ್ಟವಾಗಿ ಕಂಡುಬರುವುದು ಮಾತ್ರವಲ್ಲದೆ ನಾವು ಅನುಭವ ಪಡೆಯುವ ಅಥವಾ ಗ್ರಹಿಸುವ ಮೂಲಕವಾಗಿ ಆತನ ಮಹಿಮೆಯು ಕೆಲವು ಬಾರಿ ಪ್ರಕಟಗೊಳ್ಳುತ್ತದೆ. ಕೆಲವು ಬಾರಿ ನಾವು ಕೇಳುವಂತದ್ದು ನುಡಿಯಲ್ಪಟ್ಟ ಒಂದು ಪದ, ಹಾಡಲ್ಪಟ್ಟಂತಹ ಒಂದು ಹಾಡು ಮತ್ತು ಇನ್ನಿತರವಾದವುಗಳ ಮೂಲಕವಾಗಿ ಆತನ ಮಹಿಮೆಯು ಪ್ರಕಟಗೊಳ್ಳುತ್ತದೆ.

ದೇವರ ಮಹಿಮೆಯು ತೋರ್ಪಡಿಸಲ್ಪಟ್ಟಂತಹ ಇತರೆ ಕೆಲವು ಮಾರ್ಗಗಳನ್ನು ನಾವು ನೋಡೋಣ. ನಮಗೆ ಬಹುಶಃ ಅರಿವಿಲ್ಲದ್ದಂತಹ ಅನೇಕ ಮಾರ್ಗಗಳಲ್ಲಿ ಆತನ ಮಹಿಮೆಯನ್ನು ದೇವರ ತೋರ್ಪಡಿಸುತ್ತಾನೆ ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಅಂತಿಮವಾಗಿ ದೇವರ ಮಹಿಮೆಯ ತೋರ್ಪಡಿಸುವಿಕೆಯು ಆತನ ಯಾರು ಮತ್ತು ಆತನು ಏನು ಮಾಡುತ್ತಾನೆ ಎಂಬುದರ ಕಡೆಗೆ ಜನರನನ್ನು ತೋರಿಸುತ್ತದೆ.

## *ದೇವರ ಮಹಿಮೆಯ ವಿವಿಧ ಮಟ್ಟಗಳು*

ಆಲಯದ ವೈಭವವು ಹಿಂದಿನ ವೈಭವಕ್ಕಿಂತ ಮುಂದಿನ ವೈಭವವು ವಿಶೇಷವಾಗಿರುವುದೆಂದು ದೇವರು ವಾಗ್ದಾನ ಮಾಡಿದ್ದಾನೆ. ಇದು ಆತನ ಜನರ ಮಧ್ಯದಲ್ಲಿ ದೇವರ ಮಹಿಮೆಯ ವಿವಿಧ ಮಟ್ಟಗಳನ್ನು ಸೂಚಿಸುತ್ತದೆ. ದೇವರ ಮನೆಯು ಮಹಿಮೆ ಹೊಂದಿಲ್ಲದಿರಬಹುದು ಸ್ವಲ್ಪ ಮಹಿಮೆ ಅಥವಾ ಹೆಚ್ಚಾದ ಮಹಿಮೆ ಹೊಂದಿರಬಹುದು ನಾವು ಅನುಭವ ಪಡೆಯುವುದರಲ್ಲಿ ಯಾವುದೇ ಮಿತಿ ಇಲ್ಲ. ನಮ್ಮ ಮೂಲಕವಾಗಿ ಆತನ ಮಹಿಮೆ ಅಧಿಕವಾಗಿ ತೋರ್ಪಡಿಸಲ್ಪಡಬೇಕು ಆದ್ದರಿಂದ ಆತನು ಇನ್ನೂ ಅಧಿಕವಾಗಿ ಮಹಿಮೆಗೊಳ್ಳಬೇಕು ಎಂಬುದನ್ನು ನಾವು ಅಪೇಕ್ಷಿಸಬೇಕು ಎಂಬುದನ್ನು ನಾವು ಹೇಳಬಹುದಾಗಿದೆ.

## **ಆತನ ಮಹಿಮೆಯನ್ನು ತೋರ್ಪಡಿಸುವಂತಹ ಜನರನ್ನು ದೇವರು ಬಯಸುತ್ತಾನೆ.**

ಏದೇನ್ ತೋಟದಿಂದಲೂ ಸಹ ಆತನ ಮಹಿಮೆಯು ಮಾನವ ಜನಾಂಗದ ಮೂಲಕವಾಗಿ ಬಿಡುಗಡೆಗೊಳ್ಳಬೇಕು ಮತ್ತು ಭೂಮಿಯನ್ನೆಲ್ಲ ಆವರಿಸಿಬೇಕೆಂಬುದಾಗಿ ದೇವರು ಅಪೇಕ್ಷಿಸುತ್ತಾನೆ. ಆದಾಮ ಮತ್ತು ಹವ್ವಳು ಏದೇನ ತೋಟದಲ್ಲಿ ಆನಂದಿಸುತ್ತಿದ್ದುದ್ದು, ದೇವರು ಭೂಮಿಯ ಮೇಲೆ ತುಂಬಿಸಲು ಅಪೇಕ್ಷಿಸಿದ್ದಂತಹ ಒಂದು ಮಾದರಿ ಅಥವಾ ಮೊದಲ ಮಾದರಿಯಾಗಿದೆ. ಪತನದ ನಂತರ, ಇದನ್ನು

ಸಾಧಿಸಬಹುದಾದಂತಹವವರಾದ ಜನರನ್ನು ಹೊಂದಲೂ ದೇವರು ಬಯಸುತ್ತಾನೆ. ಇಂತಹ ಯೋಜನೆಯ ಭಾಗವಾಗಿ ದೇವರು ಇಸ್ರಾಯೇಲ್ ಜನರನ್ನು ಆರಿಸಿಕೊಳ್ಳುತ್ತಾನೆ. ಅವರ ವಾಗ್ದಾನದ ಸ್ಥಳವನ್ನು ಹೊಂದಿಕೊಳ್ಳುವುದಕ್ಕಾಗಿ ಐಗುಪ್ತದಿಂದ ಅವರನ್ನು ಹೊರಗೆ ತರುತ್ತಾನೆ ಮಾರ್ಗ ಮಧ್ಯದಲ್ಲಿ ಅನೇಕ ಸಮಯಗಳಲ್ಲಿ ಇಸ್ರಾಯೇಲ್ಯರು ದೇವರಿಗೆ ವಿರುದ್ಧವಾಗಿ ಬಂಡಾಯವೆದ್ದರು. ಇಸ್ರಾಯೇಲ್ಯರು ಬಂಡಾಯವೆದ್ದಂತಹ ನಿರ್ದಿಷ್ಟ ಹಂತಗಳಲ್ಲಿ ದೇವರು ಮೋಶೆಗೆ ಸಂಪೂರ್ಣ ದೇಶವನ್ನು ಅಳಿಸಿಹಾಕುತ್ತೇನೆ ಮತ್ತು ಮೋಶೆಯೊಂದಿಗೆ ಎಲ್ಲವನ್ನು ಪ್ರಾರಂಭಿಸುತ್ತೇನೆ ಎಂಬುದಾಗಿ ಹೇಳಿದನು. ಈ ಸಮಯದಲ್ಲಿ ಮೋಶೆಯು ಜನರಿಗಾಗಿ ಮಧ್ಯಸ್ಥಿಕೆಯ ಬಿನ್ನಹಿಸಿದನು ಅವರ ಬಂಡಾಯವನ್ನು ಕ್ಷಮಿಸಲು ದೇವರು ಒಪ್ಪಿದನು ಆತನು ಮೋಶೆಗೆ ಹೀಗೆ ಹೇಳಿದನು:

ಅರಣ್ಯಕಾಂಡ 14:20,21

**ಅದಕ್ಕೆ ಯೆಹೋವನು ನಿನ್ನ ಪ್ರಾರ್ಥನೆಯ ಮೇರೆಗೆ ನಾನು ಕ್ಷಮಿಸಿದ್ದೇನೆ ಆದಾಗ್ಯೂ ನನ್ನ ಜೀವದಾಣೆ, ಮತ್ತು ಯೆಹೋವನ ಮಹಿಮೆಯು ಭೂಲೋಕದಲ್ಲೆಲ್ಲಾ ತುಂಬಿರಬೇಕೆಂಬುವ ನಿಶ್ಚಯ ವಾಕ್ಯದ ಆಣೆ.**

ಈ ಸಮಯದಲ್ಲಿ ಆತನ ಹೃದಯದ ಆಶಯವನ್ನು ದೇವರು ಪುನರುಚ್ಛರಿಸಿದನು. ಭೂಲೋಕವನ್ನೆಲ್ಲಾ ಆತನ ಮಹಿಮೆಯೊಡನ ತುಂಬಿಸುವಂತಹ ಜನರನ್ನು ಹೊಂದುವಂತಹ ಆತನ ಮೂಲ ಯೋಜನೆಯನ್ನು ದೇವರು ನೆರವೇರಿಸುತ್ತಾನೆ. ಸಭೆ ಮತ್ತು ಇಂದಿನ ಎಲ್ಲಾ ಸ್ಥಳೀಯ ಸಭೆಯ ದೇಹವು ಭೂಲೋಕವೆಲ್ಲಾ ದೇವರ ಮಹಿಮೆಯಿಂದ ತುಂಬಿರುವಂತದ್ದನ್ನು ನೋಡುವ ದೇವರ ಉನ್ನತವಾದ ಉದ್ದೇಶದ ಭಾಗವಾಗಿದೆ.

## ದೇವರು-ಇವರ ಮಧ್ಯದಲ್ಲಿ ವಾಸಮಾಡುವಂತಹ ಜನರು

ದೇವರ ಆಲಯವು ದೇವರ ವಾಸಿಸುವಂತಹ ನಿಜವಾದ ಸ್ಥಳವಾಗಿದೆ. ಇದು ಆತನ ಪ್ರಸನ್ನತೆಯ ಒಂದು ಸ್ಥಳವಾಗಿದೆ ಇದು ಆತನ ಮಹಿಮೆಯು ಪ್ರಕಟಗೊಳ್ಳುವಂತಹ ಒಂದು ಸ್ಥಳವಾಗಿದೆ. ಕೀರ್ತನೆಗಳು 132:13-18 ದೇವರು ಆತನ ಜನರುಗಳ ಮಧ್ಯದಲ್ಲಿ ವಾಸಿಸಲು ಅಪೇಕ್ಷಿಸುತ್ತಾನೆ ಮತ್ತು ಆತನು ಅವರ ಮಧ್ಯದಲ್ಲಿ ವಾಸಿಸುವಾಗ ಆತನು ಮಾಡುವುದೇನು ಎಂಬುದನ್ನು ಚಿತ್ರಿಸುವ ಅದ್ಭುತವಾದ ವಚನಭಾಗವಾಗಿದೆ.

ಕೀರ್ತನೆಗಳು 132:13-18

**ನಿಶ್ಚಯವಾಗಿ ಯೆಹೋವನು ಚೀಯೋನನ್ನು ಅಪೇಕ್ಷಿಸಿ ತನ್ನ ನಿವಾಸಕ್ಕಾಗಿ ಆರಿಸಿಕೊಂಡಿದ್ದಾನೆ ಆತನು ಇದು ನನ್ನ ಶಾಶ್ವತ ವಾಸಸ್ಥಾನ ಇಲ್ಲೇ ಇರುವೆನು ಇದು ನನಗೆ ಇಷ್ಟವು ಇದರ ಆದಾಯವನ್ನು ಆಶೀರ್ವದಿಸುವೆನು ಇಲ್ಲಿಯ ಬಡವರನ್ನು ಆಹಾರದಿಂದ ತೃಪ್ತಿಗೊಳಿಸುವೆನು ಯಾಜಕರಿಗೆ ರಕ್ಷಣೆಯೆಂಬ ವಸ್ತ್ರವನ್ನು ಹೊದಿಸುವೆನು ಭಕ್ತರು ಉತ್ಸಾಹಧ್ವನಿ ಮಾಡುವರು ಇಲ್ಲಿಯೇ ದಾವೀದನ ಕೊಂಬು ಚಿಗುರುವಂತೆ ಮಾಡುವೆನು. ನನ್ನ ಅಭಿಷಿಕ್ತನ ದೀಪವು ಉರಿಯುತ್ತಲೇ ಇರಬೇಕೆಂದು ನೇಮಿಸಿದ್ದೇನೆ ಅವನ ವೈರಿಗಳನ್ನು ನಾಚಿಕೆಯೆಂಬ ವಸ್ತ್ರದಿಂದ ಹೊದಿಸುವೆನು ಆದರೆ ಅವನ ಮೇಲೆ ಕಿರೀಟವು ಶೋಭಿಸುತ್ತಿರುವದು.**

ಆತನ ಜನರ ಮಧ್ಯದಲ್ಲಿ ಆತನು ವಾಸಿಸಲೂ ಬಯಸುವುದನ್ನು ದೇವರ ಹೇಗೆ ವ್ಯಕ್ತಪಡಿಸುತ್ತಾನೆ ಎಂಬುದನ್ನು ಗಮನಿಸಿರಿ. ''ಅಪೇಕ್ಷಿಸಿ ತನ್ನ ನಿವಾಸಕ್ಕಾಗಿ ಆರಿಸಿಕೊಂಡಿದ್ದಾನೆ ಆತನು ಇದು ನನ್ನ ಶಾಶ್ವತ ವಾಸಸ್ಥಾನ ಇಲ್ಲೇ ಇರುವೆನು ಇದು ನನಗೆ ಇಷ್ಟವು''ಆತನು ವಾಸಿಸಲು ಅಪೇಕ್ಷಿಸುವುದನ್ನು ದೇವರು ಆರಿಸಿಕೊಳ್ಳುತ್ತಾನೆ ಮತ್ತು ಆತನ ಪ್ರಸನ್ನತೆಯು ಅಲ್ಲಿ ನೆಲೆಗೊಳ್ಳಲು ಕಾರಣೆಸುತ್ತಾನೆ. ಉಜ್ಜೀವನವು ನಿಜವಾಗಿ ದೇವರ ಜನರು ದೇವರ ಕಡೆಗೆ ತಿರುಗಿಕೊಳ್ಳುವುದಾಗಿದೆ ಆದ್ದರಿಂದ ಆತನು ಪ್ರತಿಕ್ರಿಯಿಸುತ್ತಾನೆ ಮತ್ತು ಅವರ ಮಧ್ಯದಲ್ಲಿ ಆತನ ವಾಸಸ್ಥಾನವಾಗಿ ಮಾಡಿಕೊಳ್ಳುತ್ತಾನೆ. ಸಭೆಯು ದೇವರು ಅವರ ಮಧ್ಯದಲ್ಲಿ ವಾಸಿಸುವಂತಹ ಜನರಾದ ಆತ್ಮಿಕ ಚಿಯೋನ್ ಆಗಿರಲು ರಚಿಸಲ್ಪಟ್ಟಿದೆ.

ನಮ್ಮ ಮಧ್ಯದಲ್ಲಿ ದೇವರು ವಾಸಿಸುವಂತಹ ಜನರು ನಾವಾಗಿ ಕಂಡುಬಂದಾಗ ಏನು ಜರುಗುತ್ತದೆ:

*ವಚನ 15: ಇದರ ಆದಾಯವನ್ನು ಆಶೀರ್ವದಿಸುವೆನು: ಇಲ್ಲಿಯ ಬಡವರನ್ನು ಆಹಾರದಿಂದ ತೃಪ್ತಿಗೊಳಿಸುವೆನು. ಅಲ್ಲಿ ಅಸ್ವಾಭಾವಿಕವಾದ ಹಂಚಿಕೆಯಿರುತ್ತದೆ, ಸಮೃದ್ಧಿ ಮತ್ತು ಆಶೀರ್ವಾದವಿರುತ್ತದೆ.*

*ವಚನ 16: ಯಾಜಕರಿಗೆ ರಕ್ಷಣೆಯೆಂಬ ವಸ್ತ್ರವನ್ನು ಹೊದಿಸುವೆನು: ಭಕ್ತರು ಉತ್ಸಾಹಧ್ವನಿ ಮಾಡುವರು ಕ್ಷಮಾಪಣೆ, ಸ್ವಸ್ಥತೆ, ಬಿಡುಗಡೆ, ವಿಜಯ ಇನ್ನೂ ಅಧಿಕವಾದವುಗಳು ಹೊಂದಿರುವ ರಕ್ಷಣೆ ಇದೆ. ರಕ್ಷಣೆಯ ಉತ್ಸಾಹ ಧ್ವನಿಯು ನಿರಂತರವಾಗಿ ನಮ್ಮ ಮಧ್ಯದಲ್ಲಿ ಪ್ರತಿಧ್ವನಿಸುತ್ತಿರುತ್ತದೆ.*

*ವಚನ 17: ಇಲ್ಲಿಯೇ ದಾವೀದನ ಕೊಂಬು ಚಿಗುರುವಂತೆ ಮಾಡುವೆನು ನನ್ನ ಅಭಿಷಿಕ್ತನ ದೀಪವು ಉರಿಯುತ್ತಲೇ ಇರಬೇಕೆಂದು ನೇಮಿಸಿದ್ದೇನೆ.*

*ನಿರಂತರವಾಗಿ ಬಲ ಮತ್ತು ದೊರೆತನದ (''ಕೊಂಬು'') ಹೆಚ್ಚಳತೆ ಇರುತ್ತದೆ.*

*ನಿರಂತರವಾದ ಪ್ರಕಟನೆ ಅಲ್ಲಿರುತ್ತದೆ (''ದೀಪ'').*

*ಆತನ ಅಭಿಷೇಕದ ಜನರು ನಿರಂತರವಾದ ಬಲ ದೊರೆತನ ಮತ್ತು ಪ್ರಕಟನೆಯ ಹೆಚ್ಚಳತೆಯನ್ನು ನೋಡುತ್ತಾರೆ .*

*ವಚನ 18: ಆತನ ವೈರಿಗಳನ್ನು ನಾಚಿಕೆಯೆಂಬ ವಸ್ತ್ರದಿಂದ ಹೊದಿಸುವೆನು ಆದರೆ ಅವನ ಮೇಲೆ ಕಿರೀಟವು ಶೋಭಿಸುತ್ತಿರುವದು.*

ನಮ್ಮ ಶತ್ರುಗಳ ಮೇಲೆ ನಾವು ಗೆಲುವು ಸಾಧಿಸುತ್ತೇವೆ ಮತ್ತು ನಿರಂತರವಾದ ಹೆಚ್ಚಳತೆ,ಆತನ ಜನರಾಗಿ ಏಳಿಗೆ ಮತ್ತು ಅರಳುವಿಕೆಯಿರುತ್ತದೆ.

''ನಾನು'' ಎಂಬುದು ಏಳುಸಾರಿ ವಾಗ್ದಾನಿಸಿದೆ

''ನಾನು'' ಎಂಬುದನ್ನು ಏಳುಸಾರಿ ದೇವರು ವ್ಯಾಖ್ಯಾನಿಸಿದ್ದನ್ನು ಗಮನಿಸಿರಿ ಇದು ಎಂತಹ ಅದ್ಭುತಕರವಾದ ಸಂಗತಿಯಾಗಿದೆ. ದೇವರು ನಮ್ಮನ್ನು ಆತನ ವಾಸಸ್ಥಾನವಾಗಿ ಮಾಡಿಕೊಳ್ಳುವಾಗ ಇಂತಹ ಎಲ್ಲಾ ವಿಷಯಗಳನ್ನು ಆತನು ಮಾಡುತ್ತಾನೆ ಎಂಬುದಾಗಿ ಆತನು ಘೋಷಿಸುತ್ತಾನೆ ಕರ್ತನು ಇವೆಲ್ಲವನ್ನು ಸ್ವತಃಹ ಮಾಡುತ್ತಾನೆ ದೇವರು ಅವರ ಮಧ್ಯದಲ್ಲಿ ವಾಸಿಸುವಂತಹ ಸಮುದಾಯವಾಗಿ ಸ್ಥಳೀಯ ಸಭೆಯ ಅಂಗವು ಕಂಡುಬರುವಾಗ, ರಕ್ಷಿಸಲ್ಪಡದಿರುವವರು, ದೈವನಿಷ್ಟೆಯಿಲ್ಲದವರು ಬಂದು ದೇವರು ನಮ್ಮ ಮಧ್ಯದಲ್ಲಿ ಮಾಡುತ್ತಿರುವವುಗಳನ್ನು ಅನುಭವಿಸುತ್ತಾರೆ.

## ನಮ್ಮ ಮೇಲೆ ದೇವರ ಮಹಿಮೆಯು ತೋರಿಸಲ್ಪಡುವಾಗ

ಯೆಶಾಯ 60ನೇ ಅಧ್ಯಾಯವು ಆತನ ಜನರ ಮೂಲಕವಾಗಿ ಆತನು ಮಹಿಮೆಯನ್ನು ತೋರಿಸಲು ದೇವರು ಅಪೇಕ್ಷಿಸುತ್ತಾನೆ ಎಂಬುದನ್ನು ಮತ್ತೊಮ್ಮೆ ಪ್ರಕಟಿಸುವುದರೊಂದಿಗೆ ಪ್ರಾರಂಭಗೊಳ್ಳುತ್ತದೆ- ''ಏಳು ಪ್ರಕಾಶಿಸು, ನಿನಗೆ ಬೆಳಕು ಬಂತು ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ ಇಗೋ ಕತ್ತಲು

ಭೂಮಿಯನ್ನು ಆವರಿಸಿದೆ ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ ನಿನ್ನ ಮೇಲಾದರೋ ಯೆಹೋವನು ಉದಯಿಸುವನು ಆತನ ತೇಜಸ್ಸು ನಿನ್ನಲ್ಲಿ ಕಾಣಿಸುವದು'' (ಯೆಶಾಯ 60:1,2)) ಆತನ ಜನರ ಮೂಲಕವಾಗಿ ಆತನ ಮಹಿಮೆಯು ಬಿಡುಗಡೆಗೊಳ್ಳುವುದನ್ನು ಅನೇಕ ಬಾರಿ ಈ ಅಧ್ಯಾಯದುದ್ದಕ್ಕೂ ದೇವರು ಪುನರಾವರ್ತಿಸುವುದನ್ನು ನಾವು ನೋಡುತ್ತೇವೆ:

> ನಿನ್ನ ಸುಂದರಾಲಯವನ್ನು ಚಂದಗೊಳಿಸುವೆನು (ವಚನ 7)
> ಯೆಹೋವನು ನಿನ್ನನ್ನು ವೈಭವಪಡಿಸಿರುವುದನ್ನು (ವಚನ 9)
> ನನ್ನ ಪಾದ ಸನ್ನಿಧಿಯ ಮಂದಿರವನ್ನು ವೈಭವಪಡಿಸುವೆನು (ವಚನ 13)
> ಯೆಹೋವನೇ ನಿನಗೆ ನಿತ್ಯ ಪ್ರಕಾಶವು ನಿನ್ನ ದೇವರೇ ನಿನಗೆ ತೇಜಸ್ಸು. (ವಚನ 19).

ದೇವರ ಮಹಿಮೆಯು ಆತನ ಜನರ ಮಧ್ಯದಲ್ಲಿ ತೋರಿಸಲ್ಪಡುವಾಗ ಏನು ಜರುಗುತ್ತದೆ ಎಂಬುದನ್ನು ಅಧ್ಯಾಯದ ಉಳಿದ ಭಾಗವು ವ್ಯಾಖ್ಯಾನಿಸುತ್ತದೆ.

## ಸೂಚಕ ಕಾರ್ಯ, ಅದ್ಭುತಗಳು ಮತ್ತು ಮಹತ್ಕಾರ್ಯಗಳು ದೇವರ ಮಹಿಮೆಯನ್ನು ಪ್ರಕಟಿಸುತ್ತವೆ.

ಮನುಷ್ಯರ ಮಧ್ಯದಲ್ಲಿ ದೇವರ ಮಹಿಮೆಯು ಯೇಸುವಿನ ಜೀವಿತದಲ್ಲಿ ಅನೇಕ ವಿಧಗಳಲ್ಲಿ ಪ್ರಕಟಗೊಂಡಿದ್ದನ್ನು ಮೂರ್ತಿವೆತ್ತಂತೆ ಕಾಣುತ್ತೇವೆ.

ಕರ್ತನಾದ ಯೇಸುವು ಕೃಪೆ ಮತ್ತು ಸತ್ಯದಲ್ಲಿ ನಡೆದನು ಮತ್ತು ಇದು ದೇವರ ಮಹಿಮೆಯನ್ನು ಪ್ರಕಟಪಡಿಸಿತು. ನಾವು ಇದನ್ನು ಮಗನ ಮಹಿಮೆ ಎಂಬುದಾಗಿ ಕರೆಯುತ್ತೇವೆ. ತಂದೆಯ ಒಬ್ಬನೇ ಮಗನ ಮಹಿಮೆ *''ಆ ವಾಕ್ಯವೆಂಬುವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸ ಮಾಡಿದನು ನಾವು ಆತನ ಮಹಿಮೆಯನ್ನು ನೋಡಿದೆವು ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು'' (ಯೋಹಾನ 1:14)*

ಆತನು ಮಾಡಿದ ಸೂಚಕ ಕಾರ್ಯಗಳು, ಮಹತ್ಕಾರ್ಯಗಳು, ಸ್ವಸ್ಥತೆಗಳು ಮತ್ತು ಅದ್ಭುತಗಳು ದೇವರ ಮಹಿಮೆಯನ್ನು ಪ್ರಕಟಪಡಿಸಿದವು *''ಯೇಸು ಈ ಮೊದಲನೆಯ ಸೂಚಕಕಾರ್ಯವನ್ನು ಗಲಿಲಾಯದ ಕಾನಾ ಊರಿನಲ್ಲಿ ಮಾಡಿ ತನ್ನ ಮಹಿಮೆಯನ್ನು ತೋರ್ಪಡಿಸಿದನು'' (ಯೋಹಾನ 2:11)*''ಮೂಕರಾಗಿದ್ದವರು ಮಾತಾಡಿದ್ದನ್ನೂ

*ಕೈಕಾಲಿಲ್ಲದವರು ಸ್ವಸ್ಥವಾದದ್ದನ್ನೂ ಕುಂಟರಿಗೆ ಕಾಲು ಬಂದಿದ್ದನ್ನೂ ಕುರುಡರಿಗೆ ಕಣ್ಣು ಬಂದದ್ದನ್ನೂ ಜನರು ಕಂಡು ಆಶ್ಚರ್ಯಪಟ್ಟು ಇಸ್ರಾಯೇಲ್ ಜನರ ದೇವರನ್ನು ಕೊಂಡಾಡಿದರು'' (ಮತ್ತಾಯ 15:31)*

ಯೇಸುಕ್ರಿಸ್ತನ ನಡೆದಂತಹ ಮಗನ ಮಹಿಮೆಯು ಕ್ರಿಸ್ತನ ಅಂಗಗಳಿಗೆ ಪ್ರಕಟಗೊಂಡಿದೆ ಎಲ್ಲಾ ವಿಶ್ವಾಸಿಗಳು ಆದ್ದರಿಂದ ಅದರಲ್ಲಿ ನಡೆಯಬೇಕು ಮತ್ತು ಅದೇ ರೀತಿಯ ಮಗನ ಮಹಿಮೆಯನ್ನು ತೋರ್ಪಡಿಸಬೇಕು ''*ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ''* (ಯೋಹಾನ 17:22) ಸ್ಥಳೀಯ ಅಂಗವು ಆತನ ಮಹಿಮೆಯಿಂದ ತುಂಬಿರುವ ಒಂದು ಮನೆಯಾಗಿರಬೇಕು! ನಮ್ಮಲ್ಲಿರುವಂತಹ ಆತನ ಮಹಿಮೆಯು ನಮ್ಮನ್ನು ಐಕ್ಯಗೊಳಿಸುತ್ತದೆ. ''*ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು''* ಆತ್ಮನ ಐಕ್ಯತೆಯ ಹಂತದಲ್ಲಿ ನಾವು ನಡೆದರೆ, ಅಷ್ಟು ಹಂತದಲ್ಲಿ ನಾವು ಆತನ ಐಕ್ಯತೆಯಲ್ಲಿ ನಡೆಯುವುದರ ಜೊತೆಗೆ, ಆತನ ಮಹಿಮೆಯು ಪ್ರಕಟಗೊಳ್ಳುವುದಕ್ಕಾಗಿ ನಂಬಿಕೆಯಲ್ಲಿ ನಾವು ಆತನ ಮಹಿಮೆಯು ನಮ್ಮನ್ನು ಐಕ್ಯಗೊಳಿಸುತ್ತದೆ ''*ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು''.* ಆತ್ಮನ ಐಕ್ಯತೆಯ ಹಂತದಲ್ಲಿ ನಾವು ನಡೆದರೆ, ಅಷ್ಟು ಹಂತದಲ್ಲಿ ನಾವು ಆತನ ಮಹಿಮೆಯನ್ನು ನಮ್ಮ ಮಧ್ಯದಲ್ಲಿ ತೋರ್ಪಡಿಸುತ್ತೇವೆ ಐಕ್ಯತೆಯಲ್ಲಿ ನಡೆಯುವುದರ ಜೊತೆಗೆ, ಆತನ ಮಹಿಮೆಯು ಪ್ರಕಟಗೊಳ್ಳುವುದಕ್ಕಾಗಿ ನಂಬಿಕೆಯಲ್ಲಿ ನಾವು ನಡೆಯಬೇಕು ''*...ನೀನು ನಂಬಿದರೆ ದೇವರ ಮಹಿಮೆಯನ್ನು ಕಾಣುವಿ..''* (ಯೋಹಾನ 11:40).

ಪ್ರತಿ ಸಮಯದಲ್ಲೂ ನಾವು ಪವಿತ್ರಾತ್ಮನಿಂದ ಕೇಳುತ್ತೇನೆ ಮತ್ತು ಆಮೇಲೆ ಆತನು ನಮ್ಮೊಂದಿಗೆ ಮಾತಾಡಿದ್ದನ್ನು ಅನುಸರಿಸುತ್ತೇವೆ ನಾವು ಆತನ ಮಹಿಮೆಯನ್ನು ಪ್ರಕಟಿಸುತ್ತೇವೆ ''*ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆಪಡಿಸುವನು''* (ಯೋಹಾನ 16:40). ಆತ್ಮನು ನಮಗೆ ಘೋಷಿಸುವುದನ್ನು ನಾವು ಕೇಳುವಾಗ ಆಮೇಲೆ ಅದನ್ನು ನಾವು ಘೋಷಿಸುತ್ತೇವೆ, ಇದು ಪ್ರವಾದನೆಯಾಗಿದೆ. ಪ್ರವಾದನೆಯು ಆತನ ಮಹಿಮೆಯನ್ನು ಪ್ರಕಟಿಸುತ್ತದೆ. ನಾವು ಆತ್ಮನಿಂದ ಕೇಳುವಾಗ ಮತ್ತು ಆತನು ಕೇಳುವುದನ್ನು ಮಾಡುವಾಗ ನಾವು ಆತನ ಮಹಿಮೆಯನ್ನು ಪ್ರಕಟಿಸುತ್ತೇವೆ. ಆತನವುಗಳನ್ನು ಪವಿತ್ರಾತ್ಮನು ನಮಗೆ ಪ್ರಕಟಮಾಡುತ್ತಾನೆ. ಆತ್ಮನಲ್ಲಿ

*"ತನ್ನಲ್ಲೀ ಜ್ಞಾನ ವಿದ್ಯಾಸಂಬಂಧವಾದ ನಿಕ್ಷೇಪಗಳನ್ನೇಲ್ಲಾ ಅಡಗಿಸಿಕೊಂಡಿರುವ"* (ಕೊಲೊಸ್ಸೆಯವರಿಗೆ 2:3) ಪವಿತ್ರಾತ್ಮನು ಜ್ಞಾನ ಮತ್ತು ವಿದ್ಯಾನಿಕ್ಷೇಪಗಳನ್ನು ನಮಗೆ ಬಿಡುಗಡೆ ಮಾಡುವಾಗ, ನಮ್ಮ ದೇವರ ಮಹಿಮೆಯನ್ನು ನಾವು ಬಿಡುಗಡೆಗೊಳಿಸುತ್ತೇವೆ.

ಪ್ರತಿಯೊಂದು ಸ್ಥಳೀಯ ಸಭೆಯ ಅಂಗಗಳಾದ ದೇವ ಜನರು ತಮ್ಮ ಸುತ್ತಲಿನ ಲೋಕಕ್ಕೆಲ್ಲಾ ದೇವರ ಮಹಿಮೆಯನ್ನು ತೋರ್ಪಡಿಸಬೇಕು.

## ಆತನ ಮಹಿಮೆಯು ನಿರ್ಗಮಿಸುವಾಗ

ದುಃಖಕರವಾಗಿ ಹಳೇ ಒಡಂಬಡಿಕೆಯಲ್ಲಿ, ದೇವರ ಮಹಿಮೆಯು ದೇವಜನರ ಮಧ್ಯದಲ್ಲಿ ಹೆಚ್ಚು ಕಾಲ ಇಲ್ಲದಿರುವುದನ್ನು ಅನೇಕ ಸಮಯಗಳಲ್ಲಿ ನಾವು ನೋಡುತ್ತೇವೆ. ಒಂದು ಉದಾಹರಣೆಗೆ ಯಾಜಕನಾದ ಏಲಿಯ ಅವಧಿಯಲ್ಲಿನದು ಇಸ್ರಾಯೇಲ್ಯರು ಫಿಲಿಷ್ಟಿಯರಿಂದ ಸೋಲಲ್ಪಟ್ಟಿದ್ದರು. ಏಲಿಯ ಇಬ್ಬರು ಮಕ್ಕಳು ಮರಣಹೊಂದಿದರು ಮತ್ತು ದೇವರ ಮಂಜೂಷವು ಸೆರೆಹಿಡಿಯಲ್ಪಟ್ಟಿತ್ತು. ಏಲಿಯು ಈ ವಾರ್ತೆಯನ್ನು ಕೇಳಿದಾಗ ಅವನು ಸಹ ಸತ್ತು ಹೋದನು ಅವನ ಸೊಸೆಯು ಈ ಒಂದು ಸಮಯದಲ್ಲಿ ದುಡಿಮೆಗೆ ಹೋದಳು. ಒಬ್ಬ ಮಗನಿಗೆ ಜನ್ಮ ನೀಡಿದಳು ಅವನ ಹೆಸರನ್ನು ಅವನಿಗೆ ಕೊಟ್ಟಳು ಮತ್ತು ಆಕೆಯು ಸಹ ಸತ್ತುಹೋದಳು *"ದೇವರ ಮಂಜೂಷವು ಶತ್ರುವಶವಾದದರಿಂದಲೂ ಮಾವನೂ ಗಂಡನೂ ಮೃತಿ ಹೊಂದಿದರಿಂದಲೂ ಮಹಿಮೆಯು ಇಸ್ರಾಯೇಲ್ಯರನ್ನು ಬಿಟ್ಟು ಹೊಯಿತೆಂದು ಹೇಳಿ ಆ ಕೂಸಿಗೆ ಈಕಾಬೋದ ಎಂದು ಹೆಸರಿಟ್ಟಳು"* (1ಸಮುವೇಲನು 4:21)

## ದೇವರು ದೇವಾಲಯದ ಹೊರಗೆ ನಿಂತಾಗ

ಇಸ್ರಾಯೇಲ್ಯರು 70 ವರ್ಷಗಳು ಬ್ಯಾಬಿಲೋನಿಯರಿಂದ ಸೆರೆಯಾದಂತಹ ಅವಧಿಯಲ್ಲಿ ಪ್ರವಾದಿಯಾದ ಯೆಹೆಜ್ಕೇಲನು ಪ್ರವಾದಿಸಿದನು. ದೇವರು ಆಲಯದಲ್ಲಿ ಇರುವುದನ್ನು ತಿರಸ್ಕರಿಸಿದ ಮತ್ತೊಂದು ಸಮಯವು ಇಲ್ಲಿದೆ. ಯಾಜಕರು ವಿಗ್ರಹಾರಾಧನೆ ತಮ್ಮನ್ನು ಒಪ್ಪಿಸಿಕೊಟ್ಟಾಗ ಕರ್ತನು ಯೆಹೆಜ್ಕೇಲನೊಂದಿಗೆ ಮಾತಾಡಿದನು: *"ಆಗ ಆತನು ನನಗೆ ನರಪುತ್ರನೇ ಇವರು ಮಾಡುವುದನ್ನು ನೋಡಿದಿಯಾ? ಇಸ್ರಾಯೇಲ್ ವಂಶದವರು ಇಲ್ಲಿ ನಡಿಸುವ ಅಧಿಕದುರಾಚಾರಗಳನ್ನು ಕಂಡಿಯಾ? ಇದರಿಂದ ನಾನು ನನ್ನ ಪವಿತ್ರಾಲಯವನ್ನು ಬಿಟ್ಟು ದೂರ*

*ಹೋಗಬೇಕಾಯಿತು, ಬಾ, ಇವುಗಳಿಗಿಂತ ಇನ್ನು ಹೆಚ್ಚಾದ ದುರಾಚಾರಗಳನ್ನು ನೋಡುವಿ ಎಂದು ಹೇಳಿದನು''* (ಯೆಹೆಜ್ಕೇಲನು 8:6) ಮುಂದಿನ ಹತ್ತನೇ ಅಧ್ಯಾಯದಲ್ಲಿ ದೇವರು ಪುನಃ ಆಲಯವನ್ನು ಸಂಧಿಸುತ್ತಾನೆ, ಮತ್ತು ಆತನ ಮಹಿಮೆಯು ದೇವಾಲಯವನ್ನು ಬಿಟ್ಟು ಕೆರೂಬಿಗಳ ರೆಕ್ಕೆಯ ಮೇಲೆ ಪರಲೋಕಕ್ಕೆ ಎತ್ತಲ್ಪಟ್ಟಿತ್ತು. *''ಬಳಿಕ ಯೆಹೋವನ ತೇಜಸ್ಸು ದೇವಾಲಯದ ಹೊಸ್ತಲನ್ನು ಬಿಟ್ಟು ಕೆರೂಬಿಗಳ ಮೇಲೆ ನಿಂತಿತು. ಆಗ ನನ್ನ ಕಣ್ಣೆದುರಿಗೆ ಕೆರೂಬಿಗಳು ರೆಕ್ಕೆಗಳನ್ನು ಹರಡಿಕೊಂಡು ಚಕ್ರ ಸಮೇತವಾಗಿ ನೆಲದಿಂದ ಏರಿ ಹೊರಟು ಯೆಹೋವನ ಆಲಯದ ಮೂಡನ ಬಾಗಿಲ ಮುಂದೆ ನಿಂತವು''* (ಯೆಹೆಜ್ಕೇಲನು 10:18,19).

## ಭವಿಷ್ಯದ ದೇವಾಲಯ

ಯೆಹೆಜ್ಕೇಲನು 40ನೇ ಅಧ್ಯಾಯದ ನಂತರ ಪ್ರವಾದಿಯು ಹೊಸ ದೇವಾಲಯ ಮತ್ತು ಹೊಸ ನಗರದ ಬಗ್ಗೆ ವಿವರಣೆಯನ್ನು ತೋರಿಸುತ್ತಾನೆ. ಈ ಒಂದು ಹೊಸ ದೇವಾಲಯದ ದರ್ಶನದಲ್ಲಿ ದೇವರು ದೇವಾಲಯದಲ್ಲಿ ಆತನ ಮಹಿಮೆಯ ಪುನಃ ಸ್ಥಾಪಿಸುವೆನೆಂದು ತೋರಿಸುತ್ತಾನೆ.

ಯೆಹೆಜ್ಕೇಲನು 43:4-7

**ಆಗ ಯೆಹೋವನ ತೇಜಸ್ಸು ಮೂಡಣ ಬಾಗಿಲ ಮಾರ್ಗವಾಗಿ ದೇವಸ್ಥಾನವನ್ನು ಪ್ರವೇಶಿಸಿತು. ದೇವರಾತ್ಮವು ನನ್ನನ್ನು ಎತ್ತಿ ಒಳಗಣ ಪ್ರಾಕಾರಕ್ಕೆ ತರಲು ಆಹಾ, ಯೆಹೋವನ ತೇಜಸ್ಸು ದೇವಸ್ಥಾನವನ್ನು ತುಂಬಿಕೊಂಡಿತ್ತು. ಆಗ ದೇವಸ್ಥಾನದೊಳಗಿಂದ ನನ್ನನ್ನು ಸಂಬೋಧಿಸಿ ನುಡಿಯುವವನ ಶಬ್ದವು ನನ್ನ ಕಿವಿಗೆ ಬಿತ್ತು. ಆ ಪುರುಷನು ನನ್ನ ಪಕ್ಕದಲ್ಲಿ ನಿಂತಿದ್ದನು. ನುಡಿಯುವಾತನು ನನಗೆ ಹೀಗೆ ಹೇಳಿದನು ನರಪುತ್ರನೇ ಇದು ನಿನ್ನ ಸಿಂಹಾಸನ ಸ್ಥಾನ ನನ್ನ ಪಾದ ಸನ್ನಿಧಿ ಇಲ್ಲಿ ನಾನು ಇಸ್ರಾಯೇಲ್ಯರ ಮಧ್ಯೆ ಸದಾ ವಾಸಿಸುವೆನು.**

ಯೆಹೆಜ್ಕೇಲನು 44:4

**ಬಳಿಕ ಆ ಪುರುಷನು ಬಡಗಣ ಹೆಬ್ಬಾಗಿಲ ಮಾರ್ಗವಾಗಿ ನನ್ನನ್ನು ದೇವಸ್ಥಾನದ ಮುಂದುಗಡೆಗೆ ಕರತಂದನು ಆಹಾ ನಾನು ನೋಡಲಾಗಿ ಯೆಹೋವನ ತೇಜಸ್ಸು ಯೆಹೋವನ ಆಲಯವನ್ನು ತುಂಬಿಕೊಂಡಿತ್ತು.**

ದೇವಸ್ಥಾನವು ಆತನ ಸ್ಥಳವಾಗಿದೆ, ಇದು ಆತನ ಪಾದದ ಅಡಿಭಾಗದ ಸ್ಥಳವಾಗಿದೆ, ಆತನ ಜನರ ಮಧ್ಯದಲ್ಲಿ ದೇವರು ವಾಸಿಸುವಂತಹ ಸ್ಥಳವಾಗಿದೆ, ಆತನ ಮಹಿಮೆಯಿಂದ ತುಂಬಿರುವಂತಹ ಒಂದು ಮನೆಯಾಗಿದೆ. ಯೋಹಾನನು ಪ್ರಕಟನೆ ಪುಸ್ತಕದ ಮುಕ್ತಾಯದಲ್ಲಿ ಬರೆದಂತಹದ್ದನ್ನು ತುಂಬಾ ಪ್ರತಿಬಿಂಬಿಸುತ್ತದೆ.

*“ಪಟ್ಟಣದಲ್ಲಿ ನಾನು ದೇವಾಲಯವನ್ನು ಕಾಣಲಿಲ್ಲ ಯಾಕೆಂದರೆ ಸರ್ವಶಕ್ತನಾದ ದೇವರಾಗಿರುವ ಕರ್ತನೂ ಯಜ್ಞದ ಕುರಿಯಾದಾತನೂ ಅದರ ದೇವಾಲಯವಾಗಿದ್ದಾರೆ.”* (ಪ್ರಕಟನೆ 21:22)ಇವೆಲ್ಲವೂ ಆತನ ಜನರಿಗಾಗಿರುವ ದೇವರ ಹೃದಯವನ್ನು ಪ್ರಕಟಿಸುತ್ತದೆ ಮೂಡಣ ಲೋಕದ ಬಲಗಲನ್ನು ಅನುಭವಿಸುವವರು (ಇಬ್ರಿಯರಿಗೆ 6:5). ನಮ್ಮ ದಿನದಲ್ಲಿ ಮತ್ತು ಸಮಯದಲ್ಲಿ ಆತ್ಮಿಕ ನೆರವೇರಿಸುವಿಕೆಯನ್ನು ಅನುಭವಿಸಲು ಸವಲತ್ತು ಹೊಂದಿದವರು. ಸ್ಥಳೀಯ ಸಭೆ, ವಿಶ್ವಾಸಿಗಳ ಅಂಗವು ಹೊಸ ಒಡಂಬಡಿಕೆಯಲ್ಲಿ ದೇವರ ಆಲಯ ಎಂಬುದಾಗಿ ಉಲ್ಲೇಖಿಸಲಾಗಿದೆ ಸಮುದಾಯದ ಮಧ್ಯದಲ್ಲಿ ಆತನ ಸಿಂಹಾಸನದ ಸ್ಥಳವು ಇದಾಗಿದೆ. ಆತನ ರಾಜ್ಯವು ತೋರ್ಪಡಿಸಲ್ಪಡುವಂತಹ ಸ್ಥಳವೂ ಇದಾಗಿದೆ. ಇದು ಆತನ ಪಾದದ ತಳಭಾಗದ ಸ್ಥಳವಾಗಿದೆ ಆತನ ದೊರೆತನದ ಸ್ಥಳವೂ ಇದಾಗಿದೆ. ಆತನ ಜನರ ಮೂಲಕವಾಗಿ ದೇವರು ಆಳ್ವಿಕೆ ಮಾಡುತ್ತಾನೆ. ಇದು ಆತನ ಜನರ ಮಧ್ಯದಲ್ಲಿ ದೇವರು ವಾಸಿಸುವಂತಹ ಸ್ಥಳವಾಗಿದೆ. ಸ್ಥಳೀಯ ಸಭೆಯು ಆತನ ಮಹಿಮೆಯೊಡನೆ ತುಂಬಿರುವ ಮನೆಯಾಗಿದೆ.

## ಸಭೆ ದೇವರ ಆಲಯವಾಗಿದೆ

ನಾವು ಹಳೇ ಒಡಂಬಡಿಕೆಯಲ್ಲಿ ದೇವದರ್ಶನದ ಗುಡಾರ ಮತ್ತು ದೇವಾಲಯದ ಬಗ್ಗೆ ತ್ವರಿತ ಅವಲೋಕನವನ್ನು ನಾವು ಹಾದು ಹೋಗಿದ್ದೇವೆ ಆದ್ದರಿಂದ ನಮ್ಮ ಮಹತ್ವವನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಹೊಸ ಒಡಂಬಡಿಕೆಯ ವಿಶ್ವಾಸಿಗಳು ದೇವರ ಆಲಯ ಎಂಬುದಾಗಿ ಕರೆಯಲ್ಪಟ್ಟಿದ್ದಾರೆ. ಹೊಸ ಒಡಂಬಡಿಕೆಯ ವಿಶ್ವಾಸಿಗಳಾಗಿ, ಒಂದು ಹೊಸ ಮತ್ತು ಉತ್ತಮ ಒಡಂಬಡಿಕೆಯ ಕೆಳಗೆ ಜೀವಿಸುತ್ತಿದ್ದೇವೆ. ಆತ್ಮಿಕ ಅಂಗಗಳಾಗಿ ನಾವು ದೇವರ ಆಲಯವಾಗಿದ್ದೇವೆ. ದೇವರ ವಾಸಸ್ಥಳವಾಗಿದ್ದೇವೆ. ಇದು ಒಂದು ಭೌತಿಕವಾದಂತಹ ಡೇರೆ ಅಥವಾ ಕಟ್ಟಡ ಅಲ್ಲ ಆದರೆ ನಮ್ಮ ಬಗ್ಗೆದಾಗಿದೆ, ಸಮುದಾಯಗಳಲ್ಲಿರುವ ವಿಶ್ವಾಸಿಗಲ ಅಂಗ ಮತ್ತು ಪ್ರಪಂಚದ ಎಲ್ಲಾ ಪ್ರಾಂತ್ಯಗಳು ದೇವರ ವಾಸಸ್ಥಳಗಳಾಗಿವೆ. ಎಲ್ಲಿ ಇಬ್ಬರೂ ಅಥವಾ ಅಧಿಕವಾಗಿ ಆತನ ಜನರು ಕೂಡಿಬರುತ್ತಾರೋ ಅವರ ಮಧ್ಯದಲ್ಲಿ ನಾನಿರುತ್ತೇನೆಂಬುದಾಗಿ ಆತನು ವಾಗ್ದಾನ ಮಾಡಿದ್ದಾನೆ *“ಯಾಕೆಂದರೆ ಇಬ್ಬರು ಮೂವರು ನನ್ನ ಹೆಸರಿಸಲ್ಲಿ ಎಲ್ಲಿ ಕೂಡಿ ಬಂದಿರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ ಅಂದನು”* (ಮತ್ತಾಯ 18:20) ಅಪೊಸ್ತಲನಾದ ಪೌಲನು ಇದನ್ನು ಕೊರಿಂಥ ಸಭೆಯವರಿಗೆ ಬರೆಯುವಾಗ ಪುನರುಚ್ಚರಿಸಿದನು *“ನೀವೂ ನನ್ನಾತ್ಮನೂ*

*ಕರ್ತನಾದ ಯೇಸುವಿನ ಸಾಮರ್ಥ್ಯ ಸಹಿತ ಒಟ್ಟುಗೂಡಿ ಬಂದಿರಲಾಗಿ''* (1 ಕೊರಿಂಥದವರಿಗೆ 5:4).

ದೇವರ ಮನೆಮಂದಿಯ ಭಾಗವಾಗಿ, ನಾವುಗಳು ಪವಿತ್ರವಾದ ದೇವಾಲಯಕ್ಕೆ ಒಟ್ಟುಗೂಡಿಸಲ್ಪಟ್ಟಿದ್ದೇವೆ. ಆದ್ದರಿಂದ ಆತನ ಆತ್ಮನಿಂದ ನಾವು ದೇವರ ವಾಸಸ್ಥಾನದ ಸ್ಥಳಗಳಾಗಿರಬಹುದು ಆತನ ಮಹಿಮೆಯಿಂದ ತುಂಬಿರುವಂತಹ ಒಂದು ಮನೆ.

ಎಫೆಸದವರಿಗೆ 2:19-22

**ಹೀಗಿರಲಾಗಿ ನೀವು ಇನ್ನು ಮೇಲೆ ಪರದೇಶದವರೂ ಅನ್ಯರೂ ಆಗಿರದೆ ದೇವಜನರೊಂದಿಗೆ ಒಂದೇ ಸಂಸ್ಥಾನದವರೂ ದೇವರ ಮನೆಯವರೂ ಆಗಿದ್ದೀರಿ. ಅಪೊಸ್ತಲರೂ ಪ್ರವಾದಿಗಳೂ ಎಂಬ ಅಸ್ತಿವಾರದ ಮೇಲೆ ನೀವು ಮಂದಿರದೋಪಾದಿಯಲ್ಲಿ ಕಟ್ಟಲ್ಪಟ್ಟಿದ್ದೀರಿ. ಯೇಸುಕ್ರಿಸ್ತನೇ ಮುಖ್ಯವಾದ ಮೂಲೆಗಲ್ಲು ಆತನಲ್ಲಿ ಕಟ್ಟಡದ ಎಲ್ಲಾ ಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿ ಕಟ್ಟಡವು ವೃದ್ಧಿಯಾಗುತ್ತಾ ಕರ್ತನಲ್ಲಿ ಪರಿಶುದ್ಧ ದೇವಾಲಯವಾಗುತ್ತದೆ. ಆತನಲ್ಲಿ ನೀವು ಸಹ ಪವಿತ್ರಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನವಾಗುವದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ.**

## *ಆಧಿ ಸಭೆ*

ಆಧಿಸಭೆಯು ದೇವರು ನಮಗಾಗಿ ಉದ್ದೇಶಿಸಿರುವುದರ ಒಂದು ಮೂಲ ಮಾದರಿ ಅಥವಾ ಒಂದು ನಮೂನೆಯಾಗಿದೆ. ಆಧಿಸಭೆಯು ದೊಡ್ಡ ಬಲ, ದೊಡ್ಡ ಕೃಪೆ, ಮತ್ತು ದೊಡ್ಡ ಮಹಿಮೆಯನ್ನು ತೋರ್ಪಡಿಸಿತ್ತು.

ಅಪೊಸ್ತಲರ ಕೃತ್ಯಗಳು 4:33

**ಕರ್ತನಾದ ಯೇಸು ಜೀವಂತವಾಗಿ ಎದ್ದು ಬಂದನೆಂಬುದಕ್ಕೆ ಅಪೊಸ್ತಲರು ಬಹುಬಲವಾಗಿ ಸಾಕ್ಷಿ ಹೇಳುತ್ತಿದ್ದರು. ಬಹಳ ದಯವು ಅವರೆಲ್ಲರ ಮೇಲೆ ಇತ್ತು.**

ಅಪೊಸ್ತಲರ ಕೃತ್ಯಗಳು 6:8

**ಸ್ತೆಫನನು ದೇವರ ಕೃಪೆಯಿಂದಲೂ ಬಲದಿಂದಲೂ ತುಂಬಿದವನಾಗಿ ಜನರಲ್ಲಿ ಮಹಾ ಅದ್ಭುತಕಾರ್ಯಗಳನ್ನೂ ಸೂಚಕಕಾರ್ಯಗಳನ್ನೂ ಮಾಡುತ್ತಾ ಇದ್ದನು.**

ಅದು ಪ್ರಾರಂಭವಾಗಿತ್ತು. ಸ್ಥಳೀಯ ಸಭೆಗಳಾಗಿ ಮಹತ್ತಾದ ಬಲ, ಮಹತ್ತಾದ ಕೃಪೆ ಮತ್ತು ಮಹತ್ತಾದ ಮಹಿಮೆಯನ್ನು ಎಷ್ಟು ಹೆಚ್ಚು ತೋರ್ಪಡಿಸಬೇಕು ನಾವು ಏನಾಗಿರಬೇಕೆಂಬುದಾಗಿ ರಚಿಸಲ್ಪಟ್ಟ ಮತ್ತು ದೇವರು ಯಾವುದಕ್ಕಾಗಿ ನಮ್ಮನ್ನು ಕರೆದಿದ್ದಾನೆ ಎಂಬುದರ ಮೇಲೆ ಒತ್ತಿಕೊಂಡವರಾಗಿರೋಣ.

## *ದೇವಾಲಯವನ್ನು ಪವಿತ್ರವಾಗಿ ಇಡಬೇಕು*

ಬಹುಶಃ ಕೊರಿಂಥ ಸಭೆಯು, ಪೌಲನ ಬರವಣಿಗೆಯ ಮೂಲಕವಾಗಿ ಒಂದು ಉನ್ನತ ಆತ್ಮಿಕ ಸಭೆಯ ಅಂಗವಾಗಿ ಕಂಡುಬಂದಿತ್ತು. ಆದಾಗ್ಯೂ ಬಹುಶಃ ಅದೇ ಸಮಯದಲ್ಲಿ ಹೆಚ್ಚಿನ ಆಂತರಿಕ ಸಮಸ್ಯೆಗಳನ್ನು ಸಹ ಒಳಗೊಂಡಿತ್ತು ಅನೈತಿಕ ಮತ್ತು ಪಾಪವು ಸ್ಥಳೀಯ ಸಭೆಯ ಅಂಗದ ಒಳಗೆ ಸಾಗಿತ್ತು ಮತ್ತು ಪೌಲನು ಇತರ ಅನೇಕ ವಿಷಯಗಳ ಮಧ್ಯ ಇದನ್ನು ಪ್ರತಿಬಿಂಬಿಸಬೇಕಿತ್ತು. ಕೊರಿಂಥದ ವಿಶ್ವಾಸಿಗಳನ್ನು ಪವಿತ್ರವಾದ ಮತ್ತು ನಿರ್ಮಲವಾದ ಜೀವಿತವನ್ನು ಎಚ್ಚರಿಕೆಯಿಂದ ಪಾಲಿಸಬೇಕೆಂದು ಪೌಲನು ಎರಡು ಪತ್ರಿಕೆಗಳಲ್ಲಿ ಅವರು ದೇವರ ಆಲಯವಾಗಿದ್ದಾರೆ ಎಂಬುದಾಗಿ ನೆನಪಿಸುತ್ತಾನೆ.

2 ಕೊರಿಂಥದವರಿಗೆ 6:14-18

**ನೀವು ಕ್ರಿಸ್ತ ನಂಬಿಕೆಯಿಲ್ಲದವರೊಂದಿಗೆ ಸೇರಿ ಇಜ್ಜೋಡಾಗಬೇಡಿರಿ ಧರ್ಮಕ್ಕೂ ಅಧರ್ಮಕ್ಕೂ ಜೊತೆಯೇನು? ಬೆಳಕಿಗೂ ಕತ್ತಲೆಗೂ ಐಕ್ಯವೇನು? ಕ್ರಿಸ್ತನಿಗೂ ಸೈತಾನನಿಗೂ ಒಡನಾಟವೇನು? ನಂಬುವವನಿಗೂ ನಂಬದೆ ಇರುವವಾನಿಗೂ ಪಾಲುಗಾರಿಕೆ ಏನು? ದೇವರ ಮಂದಿರಕ್ಕೂ ವಿಗ್ರಹಗಳಿಗೂ ಒಪ್ಪಿಗೆ ಏನು? ನಾವು ಜೀವಸ್ವರೂಪನಾದ ದೇವರು ನಾನು ಅವರಲ್ಲಿ ವಾಸಿಸುತ್ತಾ ತಿರುಗಾಡುವೆನು ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು ಎಂದು ಹೇಳಿದ್ದಾನೆ ಆದದರಿಂದ ಅನ್ಯಜನರ ಮಧ್ಯದಲ್ಲಿಂದ ಹೊರಟು ಬಂದು ಪ್ರತ್ಯೇಕವಾಗಿರಿ, ಅಶುದ್ಧವಾದ ಯಾವದನ್ನೂ ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ. ಇದಲ್ಲದೆ ನಾನು ನಿಮ್ಮನ್ನು ಸೇರಿಸಿಕೊಂಡು ನಿಮಗೆ ತಂದೆಯಾಗಿರುವೆನು ನೀವು ನನಗೆ ಕುಮಾರ ಕುಮಾರಿಯರು ಆಗಿರುವಿರೆಂದು ಸರ್ವಶಕ್ತನಾದ ಕರ್ತನು ಹೇಳುತ್ತಾನೆ.**

2 ಕೊರಿಂಥದವರಿಗೆ 7:1

**ಪ್ರಿಯರೇ ಈ ವಾಗ್ದಾನಗಳು ನಮಗಿರುವದರಿಂದ ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ.**

ವಿಶ್ವಾಸಿಗಳಾಗಿ, ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಅಂಗಗಳಾಗಿ ನಾವು ದೇವರ ಆಲಯವಾಗಿದ್ದೇವೆಂಬುದನ್ನು ಅರ್ಥಮಾಡಿಕೊಂಡಾಗ ಪಾಪದೊಡನೆ ಒಳಗೊಳ್ಳುವಿಕೆಯು ನಮ್ಮ ಜೀವಿತದ ಮಾರ್ಗವಾಗಿರುವುದಿಲ್ಲ ಆತನು. ನಮ್ಮ ಮಧ್ಯದಲ್ಲಿ ವಾಸಿಸುತ್ತಾನೆ ಎಂಬ ಸಂಗತಿಯನ್ನು ನಾವು ನಿಧಿಸುತ್ತೇವೆ ಮತ್ತು ನಮ್ಮ ಮೂಲಕವಾಗಿ ಮತ್ತು ನಮ್ಮಲ್ಲಿ ಆತನ ಮಹಿಮೆ - ಹೆಚ್ಚಿನ ಮಹಿಮೆಯನ್ನು ತೋರ್ಪಡಿಸುವಂತದ್ದು ನಮ್ಮ ಸರದಿಯಾಗಿದೆ.

## ಇದನ್ನು ಸ್ಥಳೀಯ ಸಭೆಯು ಕಾರ್ಯಗತಗೊಳಿಸಲು ಪ್ರಯೋಗಿಕ ವಿಧಾನಗಳು

- ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ನಾವುಗಳು ದೇವರ ಆಲಯವಾಗಿದ್ದೇವೆ ಎಂಬುದರ ತಿಳುವಳಿಕೆ ನೀಡಬೇಕು.
- ನಾವು ಆತನ ನಿವಾಸಸ್ಥಳಗಳಾಗಿ, ಆತನ ಪ್ರಸನ್ನತೆಯ ವಾಸಸ್ಥಾನವಾಗಿ ಕಂಡುಬರುವಾಗ ನಾವು ಯಾವುದನ್ನು ಎದುರುನೋಡಬಹುದು ಎಂಬುದರ ತಿಳುವಳಿಕೆ ನೀಡಬೇಕು. ನಾವೆಲ್ಲರೂ ದೇವರ ಮನೆಯನ್ನು ಪವಿತ್ರವಾಗಿ ಮತ್ತು ಶುಚಿಯಾಗಿ ಇಡೋಣ ಮತ್ತು ಆತನು ನಾವು ಏನಾಗಿರಬೇಕೆಂಬುದಾಗಿ ಆತನು ಕರೆದಿದ್ದರಲ್ಲಿ ಒತ್ತಿಕೊಂಡಿರುವವರಾಗಿರಬೇಕು.
- ಎಲ್ಲಾ ವಿಶ್ವಾಸಿಗಳು ದೇವರ ಮಹಿಮೆಯನ್ನು ತೋರ್ಪಡಿಸಲು ಸಜ್ಜುಗೊಳಿಸಬೇಕು ಮತ್ತು ಅಧಿಕಾರ ಕೊಡಬೇಕು ನಾವುಗಳು ಅತೀ ಹೆಚ್ಚಿನ ಮಹಿಮೆಯನ್ನು ಬಯಸಬೇಕು ಮತ್ತು ಎದುರು ನೋಡಬೇಕು.

## ಸಿದ್ಧಪಡಿಸಬೇಕಾದ ಸವಾಲುಗಳು

- ಹಳೇ ಒಡಂಬಡಿಕೆಯು ಭೌತಿಕವಾದದ್ದನ್ನು ಪ್ರತಿಬಿಂಬಿಸುವಾಗ ಹೊಸ ಒಡಂಬಡಿಕೆಯಲ್ಲಿ ನಮ್ಮ ಪ್ರಾಮುಖ್ಯತೆಯು ದೇವರ ಆಲಯವಾಗಿರುವುದು ಆತ್ಮಿಕ ಅಂಶಗಳ ಮೇಲಿದೆ. ಇಲ್ಲದಿದ್ದರೆ ನಾವುಗಳು ಬಲವಿಲ್ಲದ ದೈವಿಕತೆಯ ರೂಪವನ್ನು ಹೊಂದಿರುವ, ಸತ್ತಂತಹ  ಧರ್ಮಕ್ಕೆ ನಾವೇ ಚಲಿಸುತ್ತೇವೆ.
- ಕೆಲಸವು ಈಗಾಗಲೇ ಮಾಡಿ ಮುಗಿದಿದೆ ಎಂಬ ತಿಳುವಳಿಕೆಯಿಂದ ನಾವು ಯಾವಾಗಲೂ ಕಾರ್ಯ ಮಾಡಬೇಕು ಮತ್ತು ಕ್ರಿಸ್ತನಲ್ಲಿ ದೇವರು ನಮಗಾಗಿ ಈಗಾಗಲೇ ಮಾಡಿ ಮುಗಿಸದಿದ್ದಲ್ಲಿ ಬದುಕಲು ಪ್ರಯತ್ನಿಸುತ್ತಿದ್ದೇವೆ. ನಾವು ಆತನ ವಾಸಸ್ಥಳಗಳಾಗಿದ್ದೇವೆ. ಇದು ಸ್ಥಾನಿಕವಾದ ಸತ್ಯ ಆತ್ಮನ ಕ್ಷೇತ್ರದಲ್ಲಿ ಕೆಲಸಗಳು ಮಾಡಿ ಮುಗಿದಿವೆ ನಾವು ಮಾಡಲೂ ಶ್ರಮಿಸುತ್ತಿರುವುದು, ನಮ್ಮ ದಿನನಿತ್ಯದ ಜೀವಿತದಲ್ಲಿ ಇಂತಹ ವಾಸ್ತವಿಕತೆಯಲ್ಲಿ ನಡೆಯಬೇಕು. ದೇವರು ನಮಗಾಗಿ ಮಾಡಿಲ್ಲವಾದುದರ ಏನಾದರೊಂದು ಆತ್ಮನಲ್ಲಿ ಕಂಡುಬರಲು ನಾವು ಶ್ರಮಿಸುತ್ತಿದ್ದೇವೆ. ಎಂಬ ತಪ್ಪಾದ ತಿಳುವಳಿಕೆಯನ್ನು ನಾವು ಹೊಂದಿರಬಾರದು.

## ಪರಿಗಣಿಸಲು ಪ್ರಶ್ನೆಗಳು

ಇಂದು ಸ್ಥಳೀಯ ಸಭೆಗಳು, ಅವರಲ್ಲಿ ದೇವರು ವಾಸಿಸದಿರುವ ಮತ್ತು ಅವರ ಮದ್ಯದಲ್ಲಿ ದೇವರ ಮಹಿಮೆ ತೋರ್ಪಡಿಸದಿರುವ ಸಭೆಗಳಾಗಿ ಕಾರ್ಯ ಮಾಡಲೂ ಸಾಧ್ಯಕರವಾಗಿದೆಯಾ?

ಒಂದು ಸ್ಥಳೀಯ ಸಭೆಯು, ದೇವರು ಅವರ ಮಧ್ಯದಲ್ಲಿ ವಾಸಿಸುವಂತಹ ಮತ್ತು ಅವರೊಳಗೆ ಮತ್ತು ಅವರ ಮೂಲಕವಾಗಿ ದೇವರ ಮಹಿಮೆಯು ತೋರ್ಪಡಿಸುವಂತದ್ದನ್ನು ಹೊಂದಿದ್ದರೆ ನೀವು ಹೇಳಬಹುದಾದ ಕೆಲವು ಮಾರ್ಗಗಳೇನು?

# 15

# ಸ್ಥಳೀಯ ಸಭೆ-ಚೀಯೋನ್:
# ದೇವರು ಆರಿಸಿಕೊಂಡ ಜನರು

## ಚಿಯೋನ್ ಪರ್ವತ, ಚೊಚ್ಚಲು ಸಭೆಗೆ ಸ್ವಾಗತ

ಇಬ್ರಿಯರಿಗೆ 12:22-24

**ಚೀಯೋನ್ ಪರ್ವತಕ್ಕೂ ಜೀವ ಸ್ವರೂಪನಾದ ದೇವರ ಪಟ್ಟಣವಾಗಿರುವ ಪರಲೋಕದ ಯೆರೂಸಲೇಮಿಗೂ ಉತ್ಸವಸಂಘದಲ್ಲಿ ಕೂಡಿರುವ ಕೋಟ್ಯಾನುಕೋಟಿ ದೇವದೂತರ ಒಳಗೂ ಪರಲೋಕದಲ್ಲಿ ಹೆಸರು ಬರೆಸಿಕೊಂಡಿರುವ ಚೊಚ್ಚಲು ಮಕ್ಕಳ ಸಭೆಗೂ ಎಲ್ಲರಿಗೆ ನ್ಯಾಯಾಧಿಪತಿಯಾಗಿರುವ ದೇವರ ಬಳಿಗೂ ಸಿದ್ಧಿಗೆ ಬಂದಿರುವ ನೀತಿವಂತರ ಆತ್ಮಗಳ ಬಳಿಗೂ ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿರುವ ಯೇಸುವಿನ ಬಳಿಗೂ ಹೇಬೆಲನ ರಕ್ತಕ್ಕಿಂತ ಹಿತಕರವಾಗಿ ಮಾತಾಡುವ ಪ್ರೋಕ್ಷಣ ರಕ್ತದ ಬಳಿಗೂ ಬಂದಿದ್ದೀರಿ.**

ಇಬ್ರಿಯ ಬರಹಗಾರನು ಕರ್ತನಾದ ಯೇಸುಕ್ರಿಸ್ತನಲ್ಲಿನ ವಿಶ್ವಾಸಿಗಳನ್ನೆಲ್ಲಾ ಕುರಿತು, ನಾವುಗಳು ಚಿಯೋನ್ ಪರ್ವತದ ಭಾಗ, ಜೀವಿಸುವ ದೇವರ ನಗರ, ಪರಲೋಕದ ಯೆರೂಸಲೇಮು, ಸಭೆ, ಮತ್ತು ಪರಲೋಕದಲ್ಲಿ ನೊಂದಣಿ ಮಾಡಿಕೊಂಡ ಜನರಾಗಿದ್ದೇವೆ ಎಂಬುದನ್ನು ನಾವು ತಿಳಿದುಕೊಳ್ಳಬೇಕೆಂಬುದಾಗಿ ತಿಳಿಸುತ್ತಾನೆ. ಹೊಸ ಒಡಂಬಡಿಕೆಯ ವಿಶ್ವಾಸಿಗಳು, ಹಳೇ ಒಡಂಬಡಿಕೆಯ ಅವಧಿಯ ಪದ ''ಚಿಯೋನ್ ಪರ್ವತ'' ಎಂಬುದಾಗಿ ಉಲ್ಲೇಖಿಸಲಾಗಿದೆ. ಹಳೇ ಒಡಂಬಡಿಕೆಯಲ್ಲಿನ ಚಿಯೋನ್ ಪರ್ವತವು ದಾವೀದನ ನಗರ ಮತ್ತು ಹಳೇ ಒಡಂಬಡಿಕೆಯಲ್ಲಿನ ದೇವರ ಜನರನ್ನು ಪ್ರತಿನಿಧಿಸುತ್ತದೆ. ಹೊಸ ಒಡಂಬಡಿಕೆಯಲ್ಲಿ ಚಿಯೋನ್ ಪರ್ವತವು ಜೀವಿಸುವ ದೇವರ ನಗರ ಮತ್ತು ದೇವರ ಜನರು, ಸಭೆಯನ್ನು ಪ್ರತಿನಿಧಿಸುತ್ತದೆ.

ಅಪೊಸ್ತಲನಾದ ಪೇತ್ರನು ಸಭೆಯನ್ನು ಚಿಯೋನ್ ಎಂಬುದಾಗಿ ವ್ಯಾಖ್ಯಾನಿಸುತ್ತಾನೆ ಮತ್ತು ಕರ್ತನಾದ ಯೇಸುಕ್ರಿಸ್ತನೇ ಸ್ವತಃ ಮುಖ್ಯವಾದ ಮೂಲೆಗಲ್ಲಾಗಿದ್ದಾನೆ.

1 ಪೇತ್ರನು 2:6

**ಇಗೋ ಚೀಯೋನಿನಲ್ಲಿ ಮೂಲೆಗಲ್ಲನ್ನು ಇಡುತ್ತೇನೆ. ಅದು ಆಯಲ್ಪಟ್ಟದ್ದು ಮಾನ್ಯವಾದದ್ದು ಅದರ ಮೇಲೆ ನಂಬಿಕೆಯಿಡುವವನು ಆಶಾಭಂಗಪಡುವದೇ ಇಲ್ಲ ಎಂದು ಶಾಸ್ತ್ರದಲ್ಲಿ ಬರೆದದೆ.**

ಚೀಯೋನ್ ಎಂಬುದು ಏನನ್ನು ಸೂಚಿಸುತ್ತದೆ ಎಂಬುದಾಗಿ ಪೇತ್ರನು ಮುಂದುವರೆಯುತ್ತಾ ವಿವರಿಸುತ್ತಾನೆ. ಚೀಯೋನ್ ಹಾಗೇ ನಾವು ದೇವರು ಆರಿಸಿಕೊಂಡ ಜನರಾಗಿದ್ದೇವೆ. ನಾವುಗಳು ದೇವರಿಗೆ ಯಾಜಕರಾಗಿರುವಂತಹ ಪವಿತ್ರ ಜನರ ಜನಾಂಗವಾಗಿದ್ದೇವೆ. ಆತನ ಸ್ತೋತ್ರಗಳನ್ನು ತೋರಿಸಲು ಆತನ ವಿಶೇಷವಾದ ಸ್ವಂತ ಜನರಾಗಿದ್ದೇವೆ. ಈ ಪ್ರಪಂಚದಲ್ಲಿನ ನಮ್ಮ ನಡವಳಿಕೆಯು, ನಾವು ಯಾರಾಗಿದ್ದೇವೆಂಬುದನ್ನು ಪ್ರತಿಬಿಂಬಿಸುತ್ತದೆ.

1 ಪೇತ್ರ 2:9-12

**ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ. ಮೊದಲು ನೀವು ಪ್ರಜೆಯಾಗಿರಲಿಲ್ಲ ಈಗ ದೇವರ ಪ್ರಜೆಯಾಗಿದ್ದೀರಿ ಮೊದಲು ವಾತ್ಸಲ್ಯ ಹೊಂದಿರಲಿಲ್ಲ, ಈಗ ವಾತ್ಸಲ್ಯ ಹೊಂದಿದವರಾಗಿದ್ದಾರಿ ಪ್ರಿಯರೇ ಪ್ರವಾಸಿಗಳೂ ಪರದೇಶಸ್ಥರೂ ಆಗಿರುವ ನೀವು ನಿಮ್ಮ ಆತ್ಮದ ಮೇಲೆ ಯುದ್ಧ ಮಾಡುವ ಶಾರೀರಿಕ ಅಭಿಲಾಷೆಗಳಿಗೆ ದೂರವಾಗಿರಬೇಕೆಂದು ನಿಮ್ಮನ್ನು ಎಚ್ಚರಿಸುತ್ತೇನೆ. ನಿಮ್ಮ ನಡವಳಿಕೆಯು ಅನ್ಯಜನರ ಮಧ್ಯದಲ್ಲಿ ಯೋಗ್ಯವಾಗಿರಲಿ; ಆಗ ಅವರು ಯಾವ ವಿಷಯದಲ್ಲಿ ನಿಮ್ಮನ್ನು ಅಕ್ರಮಗಾರರೆಂದು ನಿಂದಿಸುತ್ತಾರೋ ಆ ವಿಷಯದಲ್ಲಿಯೇ ನಿಮ್ಮ ಸತ್ಕ್ರಿಯೆಗಳನ್ನು ಕಣ್ಣಾರೆ ಕಂಡು ವಿಚಾರಣೆಯ ದಿನದಲ್ಲಿ ದೇವರನ್ನು ಕೊಂಡಾಡುವರು.**

## ಚೀಯೋನ್ - ದೇವರು ಆರಿಸಿಕೊಂಡ ಜನರು

ಚೀಯೋನ್ ಎಂಬುದು ಯೆರೂಸಲೇಮಿಗೆ ಸಮಾನಾರ್ಥಕವಾಗಿ ಆಗ್ಗಾಗ್ಗೆ ಉಪಯೋಗಿಸಲ್ಪಟ್ಟಿದೆ. ಈ ಪದವು ಮೊದಲ ಬಾರಿಗೆ 2 ಸಮುವೇಲನು 5:7 ರಲ್ಲಿ ಕಂಡುಬಂದಿದೆ ಇದು ಸಾಮಾನ್ಯವಾಗಿ ಒಂದು ನಿರ್ದಿಷ್ಟ ಯೆರೂಸಲೇಮಿನ ಸಮೀಪದ ಪರ್ವತವನ್ನು (ಚೀಯೋನ ಪರ್ವತ) ಕೋಟೆ ಮೇಲೆ ಅದು ನಿಂತಿರುವಂತದ್ದು ಎಂಬುದಾಗಿ ವಾಖ್ಯಾನಿಸಲಾಗಿದೆ ಮತ್ತು ದಾವೀದ ನಗರ ಎಂಬುದಾಗಿ ಹೆಸರು ಕೊಡಲ್ಪಟ್ಟಿದೆ. ದಾವೀದನು ''ಚೀಯೋನ್ ಭದ್ರವಾದ ನೆಲೆ'' ವಶಪಡಿಸಿಕೊಂಡಾಗ ಚೀಯೋನ್ ಆಮೇಲೆ ''ದಾವೀದನ ನಗರ'' ಎಂಬುದಾಗಿ ಕರೆಯಲ್ಪಟ್ಟಿತ್ತು (1 ಅರಸುಗಳು 8:1, 1 ಪೂರ್ವಕಾಲ ವೃತ್ತಾಂತ 11:5;2 ಪೂರ್ವಕಾಲವೃತ್ತಾಂತ 5:2).

ಸೊಲೋಮೋನನು ಯೆರೂಸಲೇಮಿನಲ್ಲಿ ದೇವಾಲಯವನ್ನು ಕಟ್ಟಿದಾಗ ''ಚೀಯೋನ್'' ದೇವಾಲಯ ಮತ್ತು ಅದರ ಸುತ್ತುವರೆದ ಪ್ರದೇಶ ಎಂಬ ವಿಸ್ತಾರವಾದ ಅರ್ಥವನ್ನು ಒಳಗೊಂಡಿದೆ.(ಕೀರ್ತನೆಗಳು 2:6, 48:2, 11-12: 132:13). ''ಚೀಯೋನ್'' ಅಂತಿಮವಾಗಿ ಯೆರೂಸಲೇಮ ನಗರ, ಯೆಹೂದದ ಭೂಮಿ, ಮತ್ತು ಒಟ್ಟಾರೆಯಾಗಿ ಇಸ್ರಾಯೇಲ್ ಜನರನ್ನು ಸೂಚಿಸಲು ಈ ಹೆಸರು ಉಪಯೋಗಿಸಲ್ಪಟ್ಟಿದೆ (ಯೆಶಾಯ 40:9 ಯೆರೆಮೀಯ 31:12; ಜೆಕರ್ಯ 9:13).

''ಚೀಯೋನ್'' ಎಂಬ ಪದದ ಹೆಚ್ಚು ಪ್ರಾಮುಖ್ಯವಾದ ಉಪಯೋಗವು ದೈವಶಾಸ್ತ್ರದ ಪ್ರಜ್ಞೆಯಲ್ಲಿ ''ಚೀಯೋನ್'' ಸಾಂಕೇತಿಕವಾಗಿ ಇಸ್ರಾಯೇಲ್ಯರು ದೇವರ ಜನರು ಎಂಬುದಾಗಿ ಉಪಯೋಗಿಸಲ್ಪಟ್ಟಿದೆ (ಯೆಶಾಉ 60:14). ''ಚೀಯೋನ್'' ಎಂಬುದರ ಆತ್ಮಿಕ ಅರ್ಥವು ಹೊಸ ಒಡಂಬಡಿಕೆಯಲ್ಲಿಯೂ ತನ್ನ ಚೊಚ್ಚಲ ಸಭೆಯ, ಚೀಯೋನ್ ಎಂಬುದಾಗಿ ವ್ಯಾಖ್ಯಾನಿಸಲ್ಪಟ್ಟ ಪರಲೋಕದ ಯೆರೂಸಲೇಮ ಎಂಬ ಅರ್ಥದೊಂದಿಗೆ ಮುಂದುವರೆದಿದೆ (ಇಬ್ರಿಯರಿಗೆ 12:22,23 ಪ್ರಕಟನೆ 14:1) ಪೇತ್ರನು ಕ್ರಿಸ್ತನನ್ನು ಚೀಯೋನಿನ ಮೂಲೆಗಲ್ಲು ಎಂಬುದಾಗಿ ವ್ಯಾಖ್ಯಾನಿಸುತ್ತಾನೆ (1 ಪೇತ್ರನು 2:6).

ಕ್ರಿಸ್ತನ ಆತ್ಮಿಕ ಅಂಗವು, ಸಭೆಯು ಚೀಯೋನ್ ಎಂಬುದಾಗಿ ಉಲ್ಲೇಖಿಸಿರುವುದರಿಂದ ಆಮೇಲೆ ಸಭೆಯು, ಆತ್ಮಿಕ ದೇಹದ ಭೌತಿಕ ಅಭಿವ್ಯಕ್ತತೆಯು ಚೀಯೋನ್ ಆಗಿದೆ, ದೇವರು ಆರಿಸಿಕೊಂಡ ಜನರು.

ಚೀಯೋನಿನ ಕುರಿತು ಹಳೇ ಒಡಂಬಡಿಕೆಯು ಅನೇಕ ಸತ್ಯಗಳನ್ನು ಪ್ರಕಟಿಸುತ್ತದೆ ಮತ್ತು ದೇವರು ಹೇಗೆ ಚೀಯೋನ್‌ಗೆ ಸಂಬಂಧಿಸುತ್ತಾನೆ ಎಂಬುದಾಗಿದೆ. ಕೆಲವುಗಳನ್ನು ನಾವು ಇಲ್ಲಿ ವಿಮರ್ಶಿಸೋಣ ಮತ್ತು ಸ್ಥಳೀಯ ಸಭೆಯು ಹೇಗೆ ಅದರ ಸಮುದಾಯ, ನಗರ ಮತ್ತು ಪ್ರಾಂತ್ಯದಲ್ಲಿ ಚೀಯೋನ್ ಎಂಬುದಾಗಿ ಕರೆಯಲ್ಪಡುವುದನ್ನು ನೆರವೇರಿಸುತ್ತದೆ ಎಂಬುದನ್ನು ಆಮೇಲೆ ನೋಡೋಣ.

## ದೇವರು ಚೀಯೋನಿನಲ್ಲಿ ವಾಸಿಸುತ್ತಾನೆ ಮತ್ತು ಆಳ್ವಿಕೆ ಮಾಡುತ್ತಾನೆ

ಜೆಕರ್ಯ 2:10

**ಯೆಹೋವನು ಇಂತೆನ್ನುತ್ತಾನೆ - ಚೀಯೋನ್ ನಗರಿಯೇ ಉಲ್ಲಾಸಗೊಳ್ಳು, ಹರ್ಷಧ್ವನಿಗೈ ಇಗೋ ನಾನು ಬಂದು ನಿನ್ನ ಮಧ್ಯದಲ್ಲಿ ವಾಸಿಸುವೆನು.**

ಕೀರ್ತನೆಗಳು 2:6-8

**ನಾನು ನೇಮಿಸಿದ ಅರಸನನ್ನು ಚೀಯೋನೆಂಬ ನನ್ನ ಪರಿಶುದ್ಧ ಪರ್ವತದಲ್ಲಿಯೇ ಸ್ಥಾಪಿಸಿದ್ದಾಯಿತು ಎಂದು ಹೇಳಿ ನಾನು ಯೆಹೋವನ ಆಜ್ಞೆಯನ್ನು ತಿಳಿಸುತ್ತೇನೆ ಕೇಳಿರಿ ಆತನು ನನಗೆ ನೀನು ಮಗನು ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ ನೀನು ಕೇಳಿಕೊಂಡರೆ ನಾನು ಅನ್ಯಜನಗಳನ್ನೆಲ್ಲಾ ನಿನಗೆ ಅಧೀನ ಮಾಡುವೆನು. ಭೂಮಿಯ ಕಟ್ಟಕಡೆಯವರೆಗೂ ಇರುವ ಎಲ್ಲಾ ದೇಶಗಳನ್ನೂ ನಿನಗೆ ಸ್ವಾಸ್ತ್ಯವಾಗಿ ಕೊಡುವೆನು.**

ದೇವರು ಆತನ ಜನರ ಮಧ್ಯದಲ್ಲಿ ವಾಸಿಸುತ್ತಾನೆ ಮತ್ತು ಆಳುತ್ತಾನೆ, ನಾವು ಆತನ ಜನರು ಮತ್ತು ಆತನು ನಮ್ಮ ಅರಸನು. ಎಲ್ಲಾ ಭೂಮಿಯ ಮೂಲಕ ಆತನ ರಾಜ್ಯವನ್ನು ಮತ್ತು ಆತನ ಆಳ್ವಿಕೆಯನ್ನು ವಿಸ್ತರಿಸುತ್ತಾನೆ ''ನೀನು ಕೇಳಿಕೊಂಡರೆ ನನು ಅನ್ಯಜನಗಳನ್ನೇಲ್ಲಾ ನಿನಗೆ ಅಧೀನ ಮಾಡುವೆನು ಭೂಮಿಯು ಕಟ್ಟಕಡೆಯವರೆಗೂ ಇರುವ ಎಲ್ಲಾ ದೇಶಗಳನ್ನೂ ನಿನಗೆ ಸ್ವಾಸ್ತ್ಯವಾಗಿ ಕೊಡುವೆನು'' ಆತನ ಜನರಾಗಿ ಆತನ ಆಳ್ವಿಕೆ ಮತ್ತು ದೇಶಗಳಿಗೆ, ಭೂಮಿಯ ಕಟ್ಟಕಡೆಯವರೆಗೂ ದೇವರ ರಾಜ್ಯವೂ ವಿಸ್ತಾರವಾಗುವುದನ್ನು ನೋಡಲೂ ನಾವು ಇಲ್ಲಿದ್ದೇವೆ.

## ಚೀಯೋನಿನಲ್ಲಿರುವ, ದೇವರು ಪ್ರಕಾಶಿಸುತ್ತಾನೆ.

ಕೀರ್ತನೆಗಳು 50:1,2

**ದೇವ ದೇವನಾದ ಯೆಹೋವನು ಪೂರ್ವದಿಂದ ಪಶ್ಚಿಮ ದಿಕ್ಕಿನ ವರೆಗೂ ಇರುವ ಭೂನಿವಾಸಿಗಳೆಲ್ಲರನ್ನೂ ತನ್ನ ಸನ್ನಿಧಿಯಿಂದ ಬರಬೇಕೆಂದು ಆಜ್ಞಾಪಿಸುತ್ತಾನೆ. ಅತ್ಯಂತ ರಮಣೀಯವಾದ ಚೀಯೋನಿನಲ್ಲಿರುವ ದೇವನು ಪ್ರಕಾಶಿಸುತ್ತಾನೆ.**

ದೇವರು ಚೀಯೋನಿನಿಂದ ವೈಭವ ಮತ್ತು ಆತನ ಮಹಿಮೆಯನ್ನು ತೋರಿಸುತ್ತಾನೆ.

## ಚೀಯೋನ್ ಪರ್ವತದ ಮೇಲೆ ಬಿಡುಗಡೆ

ಓಬದ್ಯ 1:17,21

**ಆದರೆ ಚೀಯೋನ್ ಪರ್ವತದಲ್ಲಿ ಅನೇಕರು ಉಳಿದಿರುವರು ಆ ಪರ್ವತವು ಮೀಸಲಾಗಿರುವರು ಯಾಕೋಬನ ವಂಶದವರು ತಮ್ಮ ಸ್ವಾಸ್ತ್ಯಗಳನ್ನು ಅನುಭವಿಸುವರು ರಕ್ಷಕರು ಚೀಯೋನ್ ಪರ್ವತದಲ್ಲಿ ಎದ್ದು ಏಸಾವಿನ ಪರ್ವತವನ್ನು ಆಳುವರು ಆಗ ರಾಜ್ಯವು ಯೆಹೋವನದಾಗಿರುವುದು.**

ಬಿಡುಗಡೆ ಮತ್ತು ಪವಿತ್ರತೆಯು ಚೀಯೋನಿನಲ್ಲದೆ, ದೇವರ ಜನರ ಮಧ್ಯದಲ್ಲಿದೆ. ದೇವ ಜನರು ಅವರ ಸ್ವಾಸ್ಥ್ಯವನ್ನು ಸ್ವಾಧೀನಪಡಿಸಿಕೊಳ್ಳುವರು. ಚೀಯೋನ್ ಪರ್ವತದ

ಮೇಲೆ ದೇವರು ಎಬ್ಬಿಸುವ ವಿಮೋಚಕರು ರಕ್ಷಿಸಲ್ಪಡದಿರುವವರು ಮತ್ತು ದೈವನಿಷ್ಠೆಯಿಲ್ಲದವರ ಮೇಲೆ ಆಳ್ವಿಕೆ ಮಾಡುವರು.

## ಕರ್ತನು ಚೀಯೋನಿನಿಂದ ಘರ್ಜಿಸುತ್ತಾನೆ

ಯೋವೇಲ 3:16

**ಯೆಹೋವನು ಚೀಯೋನಿನಿಂದ ಗರ್ಜಿಸುತ್ತಾನೆ ಯೆರೂಸಲೇಮಿನಿಂದ ದನಿಗೈಯುತ್ತಾನೆ. ಭೂಮ್ಯಕಾಶಗಳು ನಡುಗುತ್ತವೆ ಆದರೆ ಯೆಹೋವನು ತನ್ನ ಜನರಿಗೆ ಆಶ್ರಯವೂ ಇಸ್ರಾಯೇಲ್ಯರಿಗೆ ರಕ್ಷಣ ದುರ್ಗವೂ ಆಗುವನು.**

ಚೀಯೋನಿನಿಂದ ಕರ್ತನ ಸ್ವರವು ಬಿಡುಗಡೆಗೊಳ್ಳುತ್ತದೆ. ಆತನ ಜನರ ಮಧ್ಯದಲ್ಲಿ ಆತನ ಬಲವನ್ನು ಮುಂದಕ್ಕೆ ತೋರಿಸುತ್ತಾನೆ.

## ಆತನ ಬಲದ ಕೋಲನ್ನು ಬಿಡುಗಡೆಗೊಳಿಸುವುದು

ಕೀರ್ತನೆಗಳು 110:1,2

**ಯೆಹೋವನು ನನ್ನ ಒಡೆಯನಿಗೆ ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದ ಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ನುಡಿದನು ಯೆಹೋವನು ನಿನ್ನ ರಾಜದಂಡದ ಆಳ್ವಿಕೆಯನ್ನು ಚೀಯೋನಿನ ಹೊರಗೂ ಹಬ್ಬಿಸುವನು ನಿನ್ನ ವೈರಿಗಳ ಮಧ್ಯದಲ್ಲಿ ದೊರೆತನ ಮಾಡು.**

ಈ ವಚನಗಳು ಯೇಸುಕ್ರಿಸ್ತನನ್ನು ವ್ಯಾಖ್ಯಾನಿಸುತ್ತವೆ ಎಂಬುದು ನಮಗೆ ಗೊತ್ತು. (ಲೂಕ 20:42, ಅಪೊಸ್ತಲರ ಕೃತ್ಯಗಳು 2:34)ಆತನ ಆಳ್ವಿಕೆ ಮತ್ತು ದೊರೆತನ, ಆತನ ಬಲದ ರಾಜದಂಡವು ಚೀಯೋನಿನಿಂದ ಹೊರಡುತ್ತವೆ. ಅದು ಆತನ ಜನರ ಮೂಲಕವಾಗಿ, ಆತನ ವೈರಿಗಳ ಮಧ್ಯದಲ್ಲಿ ಆತನು ಆಳ್ವಿಕೆ ಮಾಡುತ್ತಾನೆ.

## ಸ್ಥಳೀಯ ಸಭೆಯು ಇದನ್ನು ಕಾರ್ಯಗತಗೊಳಿಸಲು ಪ್ರಯೋಗಿಕ ವಿಧಾನಗಳು

### *ದೇವರ ಸ್ವಂತ ಜನರು*

ಚೀಯೋನಾಗಿ ನಾವು ದೇವರ ಸ್ವಂತ ಜನರಾಗಿದ್ದೇವೆ. ನಾವು ಆತನ ವಿಶೇಷವಾದ ಜನರು. ನಾವು ಪರಲೋಕದ ನಾಗರೀಕತ್ವ ಹೊಂದಿದ್ದೇವೆ. ಆತನ ರಾಜ್ಯದ ಸಂಸ್ಕೃತಿ ಮತ್ತು ಮೌಲ್ಯಗಳಿಂದ ನಾವು ಜೀವಿಸುತ್ತೇವೆ ನಾವು ಪವಿತ್ರರಾಗಿರಲು ಕರೆಯಲ್ಪಟ್ಟಿದ್ದೇವೆ.

- ಈ ಲೋಕದಲ್ಲಿ ದೇವರ ರಾಜ್ಯದ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಪ್ರತಿನಿಧಿಸುವಂತಹ ಜನರುಗಳಾಗಿ ಪ್ರತಿಯೊಂದು ಸ್ಥಳೀಯ ಸಭೆಯು ಎಬ್ಬಿಸಲ್ಪಡಬೇಕು.
- ರೋಮಾಪುರದವರಿಗೆ 12:1,2 ರಲ್ಲಿ ಹೇಳಿರುವಂತಹ ರೂಪಾಂತರ ಹೊಂದಿದ ಜೀವಿಗಳನ್ನು ಜೀವಿಸುವುದು ಮತ್ತು ಶುದ್ಧೀಕರಣಗೊಂಡ, ಪವಿತ್ರರಾದ ಜನರನ್ನು ಪ್ರತಿಯೊಂದು ಸಭೆಯು ಎಬ್ಬಿಸಬೇಕು.

## ಆತನ ಸ್ತೋತ್ರಗಳನ್ನು ಮುಂದಕ್ಕೆ ತೋರಿಸಲು ಕರೆಯಲ್ಪಟ್ಟಿದ್ದೇವೆ

ದೇವರ ಸ್ವಂತ ಜನರುಗಳಾಗಿ, ದೇವರ ಶ್ರೇಷ್ಟತೆಯನ್ನು ನಾವುಗಳು ಇಲ್ಲಿ ತೋರಿಸುವಂತವರಾಗಿದ್ದೇವೆ. ಪ್ರಪಂಚವು ನಮ್ಮ ದೇವರ ಸದ್ಗುಣಗಳು, ಒಳ್ಳೆಯತನ ಶ್ರೇಷ್ಟತೆಯನ್ನು ನೋಡುವಂತೆ ಮಾಡಲೂ ನಾವು ಇಲ್ಲಿದ್ದೇವೆ.

- ಕತ್ತಲೆಯೊಳಗಿಂದ ಆತನ ಅದ್ಭುತವಾದ ಬೆಳಕಿಗೆ ಕರೆದಾತನಿಗೆ ಸ್ತೋತ್ರಗಳನ್ನು ಘೋಷಿಸುವಂತಹ ಜನರುಗಳನ್ನು ಪ್ರತಿಯೊಂದು ಸ್ಥಳೀಯ ಸಭೆಗಳು ಎಬ್ಬಿಸಬೇಕು.

## ಆತನ ರಾಜ್ಯವು ಬರುವುದನ್ನು ನೋಡಲು ಕರೆದಿದ್ದೇವೆ

ಆತನ ಜನರಾಗಿ, ನಮ್ಮ ಮೂಲಕವಾಗಿ ಆತನ ರಾಜ್ಯವನ್ನು ಬಿಡುಗಡೆಗೊಳಿಸಲು ಕರ್ತನು ಬಯಸುತ್ತಾನೆ. ಆತನ ರಾಜ್ಯವು ಬರುವುದನ್ನು ಮತ್ತು ಆತನ ಚಿತ್ತವು ನೆರವೇರುವುದನ್ನು ನೋಡಲು ನಾವು ಇಲ್ಲಿದ್ದೇವೆ.

- ದೇವರ ರಾಜ್ಯದ ಬಲ, ಅಧಿಕಾರ ಮತ್ತು ದೊರೆತನದಲ್ಲಿ ನಡೆಯುವಂತಹ ಜನರನ್ನು ಪ್ರತಿಯೊಂದು ಸ್ಥಳೀಯ ಸಭೆಯು ಎಬ್ಬಿಸಬೇಕು.

## ಸಿದ್ಧಗೊಂಡಿರಬೇಕಾಗಿರಲು ಸವಾಲುಗಳು

- ಯಥಾಸ್ಥಿತಿಯ ಕ್ರೈಸ್ತತ್ವವು ಇಂತಹ ರೀತಿಯ ಜೀವನ ಶೈಲಿಯನ್ನು ವಿರೋಧಿಸುತ್ತದೆ. ಇದು ಬಹಳ ಅಪಾಯಕಾರಿ ಇದು ಅನುಗುಣವಾಗಿಲ್ಲದಿರುವುದು. ನಾವುಗಳೂ ಪರಲೋಕದ ನಾಗರೀಕರಾಗಿ ಜೀವಿಸುತ್ತೇವೆಂಬುದು ಇದರರ್ಥ ಆದಾಗ್ಯೂ ಸಭಾಪಾಲಕರು/ನಾಯಕರುಗಳಾಗಿ ನಮಗೆ ಆಯ್ಕೆಯಿಲ್ಲ. ಆದರೆ ಸಂದೇಶ ನೀಡಬೇಕು ಮತ್ತು ಬೋಧಿಸಬೇಕು

ಆದ್ದರಿಂದ ಜನರುಗಳು ತಮ್ಮ ಮನಸ್ಸುಗಳನ್ನು ನವೀಕರಿಸುವುದರಿಂದ ರೂಪಾಂತರಗೊಳ್ಳುತ್ತಾರೆ.

## ಪರಿಗಣಿಸಲು ಪ್ರಶ್ನೆಗಳು

ಯಾಕೆ ಕೆಲವು ವಿಶ್ವಾಸಿಗಳು ದೇವರ ರಾಜ್ಯದ ಸಂಸ್ಕೃತಿ ಮತ್ತು ಮೌಲ್ಯಗಳಿಂದ ಜೀವಿಸಲು ಕಷ್ಟಕರವಾಗಿದೆಂಬುದಾಗಿ ಕಾಣುತ್ತಾರೆ ಮತ್ತು ದೇವರ ಮಕ್ಕಳಾಗಿರುವುದರ ಪ್ರಾಯೋಗಿಕ ಅನ್ವಯವನ್ನು ಪ್ರತಿರೋಧಿಸುತ್ತಾರೆ?

ದೇವರ ಸ್ವಂತ ವಿಶೇಷ ಜನರುಗಳಾಗಿ ಜೀವಿಸಲು ವಿಶ್ವಾಸಿಗಳು ಹೋರಾಟ ಮಾಡುವ ಕೆಲವು ಪ್ರಾಯೋಗಿಕ ಕ್ಷೇತ್ರಗಳು ಯಾವುವು ಮತ್ತು ಇಂತಹ ಕ್ಷೇತ್ರಗಳನ್ನು ಪ್ರತಿಬಿಂಬಿಸಲು ಹೇಗೆ ಸಹಾಯ ಮಾಡಬಹುದು?

# 16

# ಸ್ಥಳೀಯ ಸಭೆ-ದ್ರಾಕ್ಷೇಬಳ್ಳಿ ಮತ್ತು ಕೊಂಬೆಗಳಾಗಿದೆ

ಯೋಹಾನ 15:1-8

**ನಾನೇ ನಿಜವಾದ ದ್ರಾಕ್ಷೇಬಳ್ಳಿ ನನ್ನ ತಂದೆ ತೋಟಗಾರನು ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದುಹಾಕುತ್ತಾನೆ. ಫಲಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚು ಫಲಕೊಡುವ ಹಾಗೆ ಅದನ್ನು ಶುದ್ಧಿ ಮಾಡುತ್ತಾನೆ. ನಾನು ನಿಮಗೆ ಹೇಳಿದ ವಾಕ್ಯದ ದೆಸೆಯಿಂದ ಈಗ ಶುದ್ಧರಾಗಿದ್ದೀರಿ ನೀವು ನನ್ನಲ್ಲಿ ನೆಲೆಗೊಂಡಿರ್ರಿ ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ. ನಾನು ದ್ರಾಕ್ಷೇಬಳ್ಳಿ ನೀವು ಕೊಂಬೆಗಳು ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲ ಕೊಡುವನು. ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ, ಯಾವನು ನನ್ನಲ್ಲಿ ನೆಲೆಗೊಂಡಿರುವದಿಲ್ಲವೋ ಅವನು ಅ ಕೊಂಬೆಯಂತೆ ಹೊರಕ್ಕೆ ಬಿಸಾಡಲ್ಪಟ್ಟು ಒಣಗಿಹೊಗುವನು ಅಂಥ ಕೊಂಬೆಗಳನ್ನು ಕೂಡಿಸಿ ಬೆಂಕಿಯಲ್ಲಿ ಹಾಕುತ್ತಾರೆ. ಅವು ಸುಟ್ಟು ಹೋಗುತ್ತವೆ. ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ ಅದು ನಿಮಗೆ ದೊರೆಯುವದು ನೀವು ಬಹಳ ಫಲಕೊಡುವದರಿಂದಲೇ ನನ್ನ ತಂದೆಗೆ ಮಹಿಮೆ ಉಂಟಾಗುವದು ಮತ್ತು ನನ್ನ ಶಿಷ್ಯರಾಗುವಿರಿ.**

ಕರ್ತನಾದ ಯೇಸುವು, ಆತನ ಶಿಷ್ಯರೊಡನೆ ಆತನ ಸಂಬಂಧದ ಅದ್ಭುತವಾದ ಚಿತ್ರಣವನ್ನು ಕೊಟ್ಟಿದ್ದಾನೆ ಆತನು ದ್ರಾಕ್ಷಾಬಳ್ಳಿ ಮತ್ತು ನಾವು ಕೊಂಬೆಗಳು ಇದು ಸ್ಥಳೀಯ ಸಭೆಯ ಸಮುದಾಯವಾದ ವಿಶ್ವಾಸಿಗಳು ವೈಯಕ್ತಿಕವಾಗಿ ವಿಶ್ವಾಸಿಗಳಿಗೆ ಅನ್ವಯಿಸಲ್ಪಟ್ಟಿದೆ.

ಈ ವಚನ ಭಾಗದಿಂದ ಕೆಲವು ಪ್ರಮುಖ ಸತ್ಯಗಳನ್ನು ನಾವು ಸಂಕ್ಷಿಪ್ತವಾಗಿ ನೋಡೋಣ:

ನಾವು ಫಲಕೊಡುವುದಕ್ಕಾಗಿ ರಚಿಸಲ್ಪಟ್ಟಿದ್ದೇವೆ ಮತ್ತು ನಾವು ಬಹಳವಾಗಿ ಫಲಕೊಡಬೇಕೆಂಬುದಾಗಿ ದೇವರು ಅಪೇಕ್ಷಿಸುತ್ತಾನೆ. ಫಲದಾಯಕವಾಗಿರುವುದು ದ್ರಾಕ್ಷೇಬಳ್ಳಿಯ ಜೀವಿತವನ್ನು ತಿಳಿಯಪಡಿಸುವುದು ಅಥವಾ ತೋರ್ಪಡಿಸುವುದಾಗಿದೆ. ಯೇಸುವು ಯಾರು ಮತ್ತು ಆತನು ಯಾವುದನ್ನು ಮಾಡುತ್ತಾನೆ ಎಂಬುದನ್ನು ನಾವು ತೋರ್ಪಡಿಸಬೇಕು ನಾವೆಲ್ಲರೂ ತೋರ್ಪಡಿಸಬೇಕಾಗಿರುವದು ''ಪ್ರೀತಿ, ಸಂತೋಷ,

ಸಮಾಧಾನ ಧೀರ್ಘಶಾಂತಿ, ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆ ದಮೆ ಇಂಥವುದಳೇ'' (ಗಲಾತ್ಯದವರಿಗೆ 5:22,23). ಇವುಗಳು ನಮ್ಮಲ್ಲಿರುವವಂತಹ ಕ್ರಿಸ್ತನ ಜೀವಿತದ ನಿಜವಾದ ಅಭಿವ್ಯಕ್ತತೆಯಾಗಿದೆ. ವೈಯಕ್ತಿಕವಾಗಿ ನಮ್ಮ ಜೀವಿತಗಳಿಗೆ ದೇವರು ಹೊಂದಿರುವ ಕರೆ ಮತ್ತು ವರಗಳು ಪಾತ್ರ, ಕಾರ್ಯಗಳಲ್ಲಿ ಫಲವನ್ನು ನಾವೆಲ್ಲರೂ ಕೊಡಬೇಕು.

ಆತನಲ್ಲಿ ''ನೆಲೆಗೊಂಡಿರುವುದರಿಂದ'' ಮತ್ತು ಆತನು (ಆತನ ವಾಕ್ಯ) ನಮ್ಮಲ್ಲಿ ನೆಲೆಗೊಂಡಿರುವುದರಿಂದ ಫಲದಾಯಕತೆಯು ಜನಿಸುತ್ತದೆ. ನಿಕಟತೆಯಿಂದ ಫಲದಾಯಕತೆಯು ಜನಿಸುತ್ತದೆ.

ಫಲಭರಿತರಾಗಿರುವುದು ಶುದ್ಧೀಕರಿಸುವುದು (ತೊಳೆದುಕೊಳ್ಳುವುದು ಪವಿತ್ರಗೊಳಿಸಿಕೊಳ್ಳುವುದು) ಬಹುಮಾನವಾಗಿದೆ. ಆದ್ದರಿಂದ ನಾವುಗಳು ಇನ್ನು ಅಧಿಕವಾಗಿ ಫಲಭರಿತರಾಗಿರಬಹುದು.

2 ಪೇತ್ರನು 1:5-8

**ಈ ಕಾರಣದಿಂದಲೇ ನೀವು ಪೂರ್ಣಾಸಕ್ತಿಯುಳ್ಳವರಾಗಿ ನಿಮಗಿರುವ ನಂಬಿಕೆಗೆ ಸದ್ಗುಣವನ್ನೂ ಸುದ್ಗಣಕ್ಕೆ ಜ್ಞಾನವನ್ನು ಜ್ಞಾನಕ್ಕೆ ದಮೆಯನ್ನು ದಮೆಗೆ ತಾಳ್ಮೆಯನ್ನೂ ತಾಳ್ಮೆಗೆ ಭಕ್ತಿಯನ್ನೂ ಭಕ್ತಿಗೆ ಸಹೋದರ ಸ್ನೇಹವನ್ನೂ ಸಹೋದರ ಸ್ನೇಹಕ್ಕೆ ಪ್ರೀತಿಯನ್ನೂ ಕೂಡಿಸಿರಿ. ಇವು ನಿಮ್ಮಲ್ಲಿದ್ದು ಹೆಚ್ಚುತ್ತಾ ಬಂದರೆ ನಿಮ್ಮ ಕರ್ತನಾದ ಯೇಸುಕ್ರಿಸ್ತನ ಸಂಬಂಧವಾದ ಪರಿಜ್ಞಾನವನ್ನು ಹೊಂದುವ ವಿಷಯದಲ್ಲಿ ನಿಮ್ಮನ್ನು ಆಲಸ್ಯಗಾರರೂ ನಿಷ್ಫಲರೂ ಆಗದಂತೆ ಮಾಡುತ್ತದೆ.**

ನಂಬಿಕೆಗೆ ಸದ್ಗುಣ (ಗುಣನಡತೆ) ಜ್ಞಾನ, ದಮೆ, ತಾಳ್ಮೆ ಭಕ್ತಿ, ಸಹೋದರ ಸ್ನೇಹ, ಪ್ರೀತಿ ಫಲದಾಯಕವಾಗಿರುವ ಕ್ರಮದಲ್ಲಿ ನಾವು ಈ ಏಳು ಕ್ಷೇತ್ರಗಳಲ್ಲಿ ಬೆಳೆಯುತ್ತಿರಬೇಕು. ದೇವರು ನಮ್ಮೊಂದಿಗೆ ವ್ಯವಹರಿಸುತಾನೆ, ಶುದ್ಧೀಕರಿಸುತ್ತಾನೆ. ಮತ್ತು ನಮ್ಮನ್ನು ಪವಿತ್ರಗೊಳಿಸುತ್ತಾನೆ. ಈ ಏಳು ಕ್ಷೇತ್ರಗಳಲ್ಲಿ ಒಂದು ಅಥವಾ ಅಧಿಕವಾದವುಗಳಲ್ಲಿ ಆಗಾಗ್ಗೆ ಬೆಳವಣಿಗೆಯನ್ನು ಪ್ರತಿಬಿಂಬಿಸಬೇಕು.

## ಸ್ಥಳೀಯ ಸಭೆಯು ಇದನ್ನು ಕಾರ್ಯರೂಪಕ್ಕೆ ತರಲು ಪ್ರಾಯೋಗಿಕ ವಿಧಾನಗಳು

- ಸ್ಥಳೀಯ ಸಭೆಯಾಗಿ ನಾವು ಆತನೊಂದಿಗೆ ನಿಕಟತೆಯ ಸಂಬಂಧ ಮೇಲೆ ಒತ್ತು ಮತ್ತು ಗಮನ ಕೊಡಬೇಕು. ಆತನು ನಮ್ಮಲ್ಲಿಯೂ, ನಾವು ಆತನಲ್ಲಿಯೂ ನೆಲೆಗೊಂಡಿರುವುದರಿಂದ ಎಲ್ಲವೂ ಜನಿಸುವಂತದ್ದಾಗಿರಬೇಕು.

- ಒಂದು ಸ್ಥಳೀಯ ಸಭೆಯಾಗಿ ನಾವು ಫಲದಾಯಕತೆಯ ಮೇಲೆ ತಪಾಸಣೆ ಮಾಡಬೇಕು ಅದೇ ರೀತಿಯಲ್ಲಿ ಆತನು ನಮ್ಮ ಮೇಲೆ ತಪಾಸಣೆ ಮಾಡುತ್ತಾನೆ. ನಾವು ಬರೀ ಚಟುವಟಿಕೆಗಳನ್ನು ಅಳೆಯುತ್ತಿಲ್ಲ ಆದರೆ ಆತನು ಫಲವನ್ನು ನೋಡುವಂತವನಾಗಿದ್ದಾನೆ.
- ಪ್ರತಿಯೊಂದು ಕೊಂಬೆಯು (ವ್ಯಕ್ತಿ) ಫಲಭರಿತವಾಗಿರಬೇಕೆಂಬುದಾಗಿ ನಾವು ಪ್ರೋತ್ಸಾಹಿಸುವುದು ಅವಶ್ಯಕ.
- ಒಂದು ಸ್ಥಳೀಯ ಸಭೆಯಾಗಿ ಶುದ್ಧೀಕರಣದ ಪವಿತ್ರಗೊಳಿಸುವ ಋತುಗಳನ್ನು ಹಾದು ಹೋಗುವುದು ಅವಶ್ಯಕವಾಗಿದೆ. ಆದ್ದರಿಂದ ನಾವುಗಳು ದೊಡ್ಡದಾದ ಫಲದಾಯಕತೆಗೆ ಹೋಗಬಹುದು. ಕೆಲವೊಮ್ಮೆ ದೇವರು ನಿಮ್ಮನ್ನು ಸಭಾಪಾಲಕರಾಗಿ ಸಂದೇಶಿಸಲು/ಬೋಧಿಸಲು ಆತನು ಸ್ಥಳೀಯ ಸಭೆಗೆ ತರಲು ಅಪೇಕ್ಷಿಸುವಂತಹ ಶುದ್ಧೀಕರಣ ಮತ್ತು ಪವಿತ್ರಗೊಳಿಸುವಿಕೆಯ ನಿರ್ದಿಷ್ಟ ಕ್ಷೇತ್ರಗಳೊಡನೆ ಜೊತೆಯಾಗಿ ಸೇವೆ ಮಾಡಲು ದೇವರು ನಿಮ್ಮನ್ನು ನಡೆಸಬಹುದು. ಆದ್ದರಿಂದ ಫಲದಾಯಕತೆಯು ಒಂದು ಹೊಸ ಹಂತಕ್ಕೆ ಹೋಗುತ್ತದೆ.

## ಸಿದ್ಧಗೊಂಡಿರಬೇಕಾಗಿರಲು ಸವಾಲುಗಳು

- ಆತನಲ್ಲಿ ನೆಲೆಗೊಂಡಿರುವುದನ್ನು ಕಲಿಯುವುದು, ನಿಕಟತೆಯ ಮೇಲೆ ಗಮನಹರಿಸುವುದು ಕಾರ್ಯ-ಪ್ರಧಾನರಾದವರಿಗೆ ವಿಶೇಷವಾಗಿ ಸುಲಭವಾದುದಲ್ಲ. ಕೆಲವರು ಇದನ್ನು ಸಮಯದ ವ್ಯರ್ಥ ಎಂಬುದಾಗಿ ಪರಿಗಣಿಸುತ್ತಾರೆ. ಆದರೆ ಒಂದು ಸ್ಥಳೀಯ ಸಭೆಯು ಮೂಲಕವಾಗಿ ಮಾಡಲ್ಪಡುವಂತಹವುಗಳೆಲ್ಲವೂ ನಿಕಟತೆಯ ಸ್ಥಳದಿಂದ ಜನಿಸಿರುವವುಗಳಾಗಿ-ರಬೇಕೆಂಬುದರಲ್ಲಿ ಒತ್ತಿಕೊಂಡವರಾಗಿ ಮುಂದುವರೆಯುವವರಾಗಿರಬೇಕು.
- ನಾವು ಈಗಾಗಲೇ ಹೊಂದಿರುವ ಫಲಭರಿತತೆಯ ಅಳತೆಯೊಡನೆ ಸ್ಥಳೀಯ ಸಭೆಯ ಅಂಗ ಅಥವಾ ವೈಯಕ್ತಿಕವಾಗಿ. ತೃಪ್ತಿಯುಳ್ಳವರಾಗಿ ಕಂಡುಬರುವುದು ಬಹಳ ಸುಲಭಕರ ಎಲ್ಲವೂ ನಿಲ್ಲುತ್ತದೆ ಎಂಬುದು ನಮ್ಮ ಭಾವನೆಯಾಗಿರುತ್ತದೆ ಆದಾಗ್ಯೂ ಕರ್ತನು ಯಾವಾಗಲೂ ಒಂದು ದೊಡ್ಡದಾದ ಫಲಭರಿತರಾಗಿರುವಿಕೆಯ ಹಂತಗಳನ್ನು ನೋಡುತ್ತಾನೆ ಎಂಬುದನ್ನು ನಾವು ನೆನಪಿಸಿಕೊಳ್ಳಬೇಕು.

- ಕೆಲವರು ಶುದ್ಧಿಕರಣ ಮತ್ತು ಪವಿತ್ರಕರಿಸುವಿಕೆಯ ಹೊಸ ಹಂತಗಳನ್ನು ಹಾದು ಹೋಗಲು ಇಷ್ಟಪಡುವುದಿಲ್ಲ. ಮತ್ತು ಇದನ್ನು ವಿರೋಧಿಸುತ್ತೇವೆ. ಕೆಲವು ಸಂದರ್ಭಗಳಲ್ಲಿ ಫಲದಾಯಕವಾಗಿರುವುದನ್ನು ತಡೆಯುತ್ತಾರೆ ಮತ್ತು ದೂರವಾಗಿ ಹೋಗಲು ಇಚ್ಛಿಸುತ್ತಾರೆ. ಅದು ಹೋಗಲಿ ಎಂಬುದಾಗಿ ಸಿದ್ಧಗೊಂಡಿರಬೇಕು ಮತ್ತು ಮುಂದೆ ಪ್ರಯಾಣಿಸುತ್ತಿರಬೇಕು.

## ಪರಿಗಣಿಸಲು ಪ್ರಶ್ನೆಗಳು

''ನನ್ನಲ್ಲಿ ಫಲಕೊಡದಿರುವಂತಹ ಕೊಂಬೆಗಳನ್ನು ಹೊರಗೆ ತೆಗೆದುಹಾಕುತ್ತೇನೆ'' ಒಂದು ಸ್ಥಳೀಯ ಸಭೆಗೆ ಇದರ ಅರ್ಥ ಏನು?

ಒಂದು ಸ್ಥಳೀಯ ಸಭೆಯಲ್ಲಿ ಕರ್ತನು ತರುವಂತಹ ಶುದ್ದೀಕರಣ ಅಥವಾ ಪವಿತ್ರಗೊಳಿಸುವಿಕೆಯ ಕೆಲವು ಮಾರ್ಗಗಳು ಯಾವುವು?

# 17

# ಸ್ಥಳೀಯ ಸಭೆ-ದೀಪಸ್ತಂಭವಾಗಿದೆ

## ಹಳೇ ಒಡಂಬಡಿಕೆಯಲ್ಲಿನ ದೀಪಸ್ತಂಭ

ಮೋಶೆಗೆ ಕೊಡಲ್ಪಟ್ಟಂತಹ ದೇವದರ್ಶನದ ಗುಡಾರವು ಪರಲೋಕದಲ್ಲಿನ ನಿಜವಾದ ದೇವದರ್ಶನ ಗುಡಾರದ ತದ್ರೂಪ ಅಥವಾ ಛಾಯೆಯಾಗಿದೆ. (ಇಬ್ರಿಯರಿಗೆ 8:1-5). ದೇವದರ್ಶನದ ಗುಡಾರವು ಹೊರಗಿನ ಅಂಗಳ, ಪವಿತ್ರಸ್ಥಳ ಮತ್ತು ಅತೀ ಪರಿಶುದ್ಧವಾದ ಸ್ಥಳವನ್ನು ಹೊಂದಿದೆ. ಹೊರಗಿನ ಅಂಗಣವು ತಾಮ್ರದ ಬಲಿಪೀಠ (ಯಜ್ಞದ ಬಲಿಪೀಠ) ಮತ್ತು ತೊಳೆಯುವ ನೀರಿನೊಡನೆ ಗಂಗಾಳ (ಬೋಗುಣಿ) ಪರಿಶುದ್ಧ ಸ್ಥಳವೂ ಚಿನ್ನದ ದಿಾಪಸ್ತಂಭವನ್ನು ಹೊಂದಿತ್ತು. (ಸಪ್ತ ದೀಪಸ್ಥಂಭ) ನೈವೇದ್ಯವಾದ ರೊಟ್ಟಿಯ ಮೇಜು ಮತ್ತು ಧೂಪದ್ರವ್ಯದ ಬಲಿಪೀಠ. ಅತೀ ಪರಿಶುದ್ಧ ಸ್ಥಳವು ಮುಸುಕು ಮುಸುಕಿನಿಂದ ಪ್ರತ್ಯೇಕಿಸಲ್ಪಟ್ಟಿತು. ಹಿಂದೆ ಒಡಂಬಡಿಕೆಯ ಮಂಜೂಷ ಅದರ ಮೆಲೆ ಕೃಪಾಸನವಿತ್ತು.

ಚಿನ್ನದ ದೀಪಸ್ತಂಭವು ಮೋಶೆಯ ದೇವದರ್ಶನ ಗುಡಾರದ ಭಾಗವಾಗಿತ್ತು. (ವಿಮೋಚನಕಾಂಡ 25:31-40), ಮತ್ತು ಆನಂತರ ದೇವಾಲಯದ ಭಾಗವಾಗಿತ್ತು.

ಚಿನ್ನದ ದೀಪಸ್ತಂಭ (ಸಪ್ತ ದೀಪಸ್ತಂಭ ಎಂಬುದಾಗಿ ಸೂಚಿಸಲ್ಪಟ್ಟ) ನಿರಂತರವಾಗಿ ಉರಿಯುತ್ತಿರಬೇಕು (ವಿಮೋಚನಕಾಂಡ 27:20,21, ಯಾಜಕಕಾಂಡ 24:1-4). ಚಿನ್ನದ ದೀಪಸ್ತಂಭವು ಏಳು ಕವಲುಗಳನ್ನು (ಹಣತೆಗಳನ್ನು) ಆಲಿವ್ ಎಣ್ಣೆ ಮತ್ತು ಹೀರು ಬತ್ತಿಯನ್ನು ಹೊಂದಿತ್ತು. ಪ್ರತಿಯೊಂದು ಕವಲು ಮೊಗ್ಗುಗಳುಳ್ಳ, ಅರಳುವ ಮತ್ತು ಹೂವುಗಳುಳ್ಳ ಬಾದಾಮಿ ಮರದಂತೆ ಕಾಣಿಸುತ್ತಿದ್ದವು ಪರಿಶುದ್ಧ ಸ್ಥಳದಲ್ಲಿ ದಿಾಪಸ್ತಂಭ ಮಾತ್ರ ಬೆಳಕಿನ ಮೂಲವಾಗಿತ್ತು. ನೈವೆದ್ಯದ ರೊಟ್ಟಿಯ ಮೇಜಿನ ಮೇಲೆ (ಆತನ ಪ್ರಸನ್ನತೆಯ ರೊಟ್ಟಿ) ಮತ್ತು ಧೂಪದ್ರವ್ಯದ ಬಲಿಪೀಠದ ಮೇಲೆ ದೀಪಸ್ತಂಭದ ಬೆಳಕು ಪ್ರಕಾಶಿಸುತ್ತಿತ್ತು. ಯಾಜಕನು ಧೂಪದ್ರವ್ಯದ ಬಲಿಪೀಠದ ಮೇಲೆ ಕಾರ್ಯಮಾಡಲೂ ಮತ್ತು ನೈವೇದ್ಯದ ರೋಟ್ಟಿಯಲ್ಲಿ ಪಾಲು ತೆಗೆದುಕೊಳ್ಳಲು ಅಗತ್ಯವಾದ ಬೆಳಕನ್ನು ದೀಪಸ್ತಂಭವು ಒದಗಿಸುತ್ತಿತ್ತು.

ನೈವೇದ್ಯದ ರೊಟ್ಟಿಯ ಮೇಜು ದೇವರ ವಾಕ್ಯವನ್ನು ಮತ್ತು ಕರ್ತನೊಂದಿಗಿನ ಅನ್ಯೊನ್ಯತೆಯನ್ನು ಪ್ರತಿನಿಧಿಸುತ್ತದೆ ಮತ್ತು ಧೂಪದ್ರವ್ಯದ ಬಲಿಪೀಠವು ಪ್ರಾರ್ಥನೆ ಮತ್ತು ಆರಾಧನೆಯನ್ನು ಪ್ರತಿನಿಧಿಸುತ್ತದೆ. ಆದ್ದರಿಂದ ದೀಪಸ್ತಂಭವು ದೇವರ ವಾಕ್ಯವನ್ನು ಪಡೆದುಕೊಳ್ಳಲು ಶಕ್ತಗೊಳಿಸುವ, ದೇವರೊಂದಿಗೆ ಅನ್ಯೋನ್ಯತೆಯನ್ನು ಶಕ್ತಗೊಳಿಸುವ ಮತ್ತು ದೇವರ ಆರಾಧನೆ ಮತ್ತು ಪ್ರಾರ್ಥನೆಯನ್ನು ಶಕ್ತಗೊಳಿಸುವ ಪ್ರಕಾಶವನ್ನು ನಮಗೆ ಪ್ರತಿನಿಧಿಸುತ್ತದೆ.

## ಸ್ಥಳೀಯ ಸಭೆ - ಒಂದು ದೀಪಸ್ತಂಭ

ಯೋಹಾನನು ಪಡೆದುಕೊಂಡಂತಹ ಪ್ರಕಟನೆಯಲ್ಲಿ, ಏಳು ಚಿನ್ನದ ದೀಪಸ್ತಂಭಗಳ ಮಧ್ಯದಲ್ಲಿ ಕರ್ತನಾದ ಯೇಸು ನಡೆಯುವುದನ್ನು ಅವನು ನೋಡುತ್ತಾನೆ ಪ್ರತಿಯೊಂದು ದೀಪಸ್ತಂಭವು ಒಂದು ಸ್ಥಳೀಯ ಸಭೆಯ ಅಂಗವನ್ನು ಪ್ರತಿನಿಧಿಸುತ್ತದೆ. ಕರ್ತನಾದ ಯೇಸುವು ಪ್ರತಿ ಸ್ಥಳೀಯ ಸಭೆಯ ನಾಯಕರಿಗೆ ಸಂದೇಶ ಹೊಂದಿದ್ದಾನೆ.

ಪ್ರಕಟನೆ 1:12,13,20

**ನನ್ನ ಸಂಗಡ ಮಾತಾಡುತ್ತಿದ್ದ ಶಬ್ದವು ಯಾರದೆಂದು ನೋಡುವದಕ್ಕೆ ಹಿಂದಕ್ಕೆ ತಿರುಗಿದೆನು. ತಿರುಗಿದಾಗ ಏಳು ಚಿನ್ನದ ದೀಪಸ್ತಂಭಗಳನ್ನು ಆ ದೀಪಸ್ತಂಭಗಳ ಮಧ್ಯದಲ್ಲಿ ಮನುಷ್ಯಕುಮಾರನಂತೆ ಇರುವವನನ್ನೂ ಕಂಡೆನು ಆತನು ನಿಲುವಂಗಿಯನ್ನು ತೊಟ್ಟು ಚಿನ್ನದ ಪಟ್ಟಿಯನ್ನು ಎದೆಗೆ ಕಟ್ಟಿಕೊಂಡಿದ್ದನು. ನನ್ನ ಬಲಗೈಯನ್ನು ನೀನು ಕಂಡ ಏಳು ನಕ್ಷತ್ರಗಳ ಮತ್ತು ಏಳು ಚಿನ್ನದ ದಿಾಪಸ್ತಂಬಗಳ ಗೂಢಾರ್ಥವನ್ನು ವಿವರಿಸುತ್ತೇನೆ. ಆ ಏಳು ನಕ್ಷತ್ರಗಳು ಅಂದರೆ ಆ ಏಳು ಸಭೆಗಳ ದೂತನು ಆ ಏಳು ದೀಪಸ್ತಂಭಗಳು ಅಂದರೆ ಅ ಏಳು ಸಭೆಗಳು.**

ಪ್ರಕಟನೆ 2:1,5

**ಎಫೆಸದಲ್ಲಿರುವ ಸಭೆಯ ದೂತನಿಗೆ ಬರೆ ಏಳು ನಕ್ಷತ್ರಗಳನ್ನು ಬಲಗೈಯಲ್ಲಿ ಹಿಡಿದುಕೊಂಡು ಏಳು ಚಿನ್ನದ ದೀಪಸ್ತಂಭಗಳ ಮಧ್ಯದಲ್ಲಿ ತಿರುಗಾಡುವಾತನು ಹೇಳುವದೇನಂದರೆ ಆದದರಿಂದ ನೀನು ಎಲ್ಲಿಂದ ಬಿದ್ದಿದ್ದೀಯೋ ಅದನ್ನು ನಿನ್ನ ನೆನಪಿಗೆ ತಂದುಕೊಂಡು ದೇವರ ಕಡೆಗೆ ತಿರುಗಿಕೋ ನೀನು ಮೊದಲು ಮಾಡುತ್ತಿದ್ದ ಕೃತ್ಯಗಳನ್ನು ಮಾಡು ನೀನು ದೇವರ ಕಡೆಗೆ ತಿರುಗಿಕೊಳ್ಳದೆ ಹೋದರೆ ನಾನು ಬಂದು ನಿನ್ನ ದಿಾಪಸ್ತಂಭವನ್ನು ಅದರ ಸ್ಥಳದಿಂದ ತೆಗೆದುಹಾಕುವೆನು.**

ದೇವರು ದೀಪಸ್ತಂಭಗಳ ಮಧ್ಯದಲ್ಲಿ ಚಲಿಸುತ್ತಾನೆ ಮತ್ತು ಪ್ರತಿಯೊಂದು ದೀಪಸ್ತಂಭವು ಅದರ ಬೆಳಕು ಯಾವಾಗಲೂ ಪ್ರಕಾಶಿಸುತ್ತಿದೆಯಾ ಎಂಬುದನ್ನು ಖಚಿತಪಡಿಸಿಕೊಳ್ಳಲೂ ಪರೀಕ್ಷಿಸುತ್ತಾನೆ.

ಸ್ಥಳೀಯ ಸಭೆಯು, ಆತನ ಬೆಳಕು ಮತ್ತು ಪ್ರಕಟನೆಯನ್ನು ಭೂಲೋಕಕ್ಕೆ ತರುವ, ಪರಲೋಕದಲ್ಲಿ ಆತನ ಮುಂದಿರುವ ದೇವರ ದೀಪಸ್ತಂಭವಾಗಿದೆ ಸ್ಥಳೀಯ ಸಭೆಯು ಈ ಪ್ರಪಂಚದಲ್ಲಿನ ಹೃದಯಗಳೂ ಮತ್ತು ಮನಸ್ಸುಗಳಿಗೆ ಪ್ರಕಾಶತೆ ನೀಡುವ ದೀಪಸ್ತಂಭದ ಬೆಳಕಾಗಿರಬೇಕು ಆದ್ದರಿಂದ ಅವರು ದೇವರ ವಾಕ್ಯದ ಪ್ರಜ್ಞೆಯ ಸ್ಥಳಕ್ಕೆ ಬರಬಹುದು, ಅನ್ಯೋನ್ಯತೆಯ ಸ್ಥಳಕ್ಕೆ ಬರಬಹುದು. ಸ್ಥಳೀಯ ಸಭೆಯು ತಾನು ಮಾಡಬೇಕಾಗಿರುವುದನ್ನು ಮಾಡುತ್ತಿಲ್ಲವಾದರೆ ಎಫೆಸ ಸಭೆಯ ಸಂದರ್ಭದಲ್ಲಿರುವಂತೆ, ಕರ್ತನಾದ ಯೇಸು ಅವರು ವಿಷಯಗಳನ್ನು ಸರಿಯಾಗಿ ಇಡದಿದ್ದರೆ ಅವರ ದೀಪಸ್ತಂಭವು ಅದರ ಸ್ಥಳದಿಂದ ತೆಗೆದುಹಾಕಲ್ಪಡುತ್ತದೆ ಎಂಬುದಾಗಿ ಎಚ್ಚರಿಸಿದ್ದಾನೆ. ಆತನ ಪ್ರಸನ್ನತೆಯಿಂದ ದೀಪಸ್ತಂಭವು ತೆಗೆದುಹಾಕಲ್ಪಟ್ಟಾಗ, ಈ ಲೋಕಕ್ಕೆ ಪ್ರಕಟನೆಯನ್ನು ಮತ್ತು ಆತನ ಬೆಳಕನ್ನು ತರುವಂತಹ ಸಾಮರ್ಥ್ಯವನ್ನು ಇನ್ನು ಮುಂದೆ ಹೊಂದಿಲ್ಲದಿರುವುದಿಲ್ಲ ಇದು ತನ್ನ ಸುತ್ತಲಿರುವ ಕತ್ತಲೆಯ ಮೇಲೆ ಪ್ರಭಾವ ಬೀರುವುದಿಲ್ಲ.

ಕರ್ತನಾದ ಯೇಸುವು ಲೋಕಕ್ಕೆಲ್ಲಾ ಬೆಳಕಾಗಿರಲು ಬಂದನು (ಯೋಹಾನ 8:12 ಯೋಹಾನ 12:46) ವಿಶ್ವಾಸಿಗಳಾಗಿ ನಮಗೂ ಇಂತಹ ಸೇವೆಯು ಒಪ್ಪಿಸಲಾಗಿದೆ. ವಿಶ್ವಾಸಿಗಳಾಗಿ ನಮಗೂ ಇಂತಹ ಸೇವೆಯು ಒಪ್ಪಿಸಲಾಗಿದೆ. ವಿಶ್ವಾಸಿಗಳಾಗಿ ನಾವು ಇಂತಹ ಕತ್ತಲೆಗೆ ಬೆಳಕಾಗಿರಲೂ ಕರೆಯಲ್ಪಟ್ಟಿದ್ದೇವೆ. (ಮತ್ತಾಯ 5:14,16; ಎಫೆಸದವರಿಗೆ 5:8 ಫಿಲಿಪ್ಪಿಯವರಿಗೆ 2:14,15).

ನಮ್ಮ ಬೆಳಕು ಪ್ರಕಾಶಿಸಬೇಕು. ಆದ್ದರಿಂದ ಜನರು ನಮ್ಮ ಒಳ್ಳೆಯ ಕಾರ್ಯಗಳನ್ನು ನೋಡುತ್ತಾರೆ ಮತ್ತು ಪರಲೋಕದಲ್ಲಿರುವ ನಮ್ಮ ತಂದೆಯನ್ನು ಮಹಿಮೆಪಡಿಸುತ್ತಾರೆ. ನಮ್ಮ ಒಳ್ಳೆಯ ಕ್ರಿಯೆಗಳು ಯೇಸುಕ್ರಿಸ್ತನ ಕಡೆಗೆ ಗಮನ ಸೆಳೆಯದಿದ್ದರೆ ಆಮೇಲೆ ನಮ್ಮ ಬೆಳಕು ನಿಜವಾಗಿಯೂ ಪ್ರಕಾಶಿಸುತ್ತಿಲ್ಲ. ನಾವು ಏನಾಗಿರಬೇಕೆಂಬುದಾಗಿ ದೇವರು ಬಯಸುವ ದೀಪಸ್ತಂಭಗಳು ನಿಜವಾಗಿಯೂ ನಾವಾಗಿರುವುದಿಲ್ಲ.

ಮತ್ತಾಯ 5:14-16

**ನೀವು ಲೋಕಕ್ಕೆ ಬೆಳಕಾಗಿದ್ದೀರಿ ಗುಡ್ಡದ ಮೇಲೆ ಕಟ್ಟಿರುವ ಊರು ಮರೆಯಾಗಿರಲಾರದು ಮತ್ತು ದೀಪವನ್ನು ಹತ್ತಿಸಿ ಕೊಳಗದೊಳಗೆ ಇಡುವದಿಲ್ಲ ದೀಪಸ್ತಂಭದ ಮೇಲೆ ಇಡುತ್ತಾರಷ್ಟೆ ಆಗ ಅದು ಮನೆಯಲ್ಲಿರುವವರೆಲ್ಲರಿಗೆ ಬೆಳಕು ಕೊಡುವದು ಅದರಂತೆ ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು.**

ಬೆಳಕಿನ ಜನರುಗಳಾಗಿ ನಾವು ನಡೆಯಬೇಕು. ರಹಸ್ಯವಾಗಿ ಮಾಡಲ್ಪಡುವ ಸಂಗತಿಗಳಲ್ಲ, ಕತ್ತಲೆಯ ಕಾರ್ಯಗಳಲ್ಲಿ ನಾವು ಪಾಲು ತೆಗೆದುಕೊಳ್ಳುವುದಿಲ್ಲ (ಯೋಹಾನ 3:20) ಬದಲಾಗಿ ಕತ್ತಲೆಯ ಕಾರ್ಯಗಳು ನಿಜವಾಗಿ ಅವು ಏನಾಗಿವೆ ಎಂಬುದಾಗಿ ಬೆಳಕಿನ ಮಕ್ಕಳಾಗಿ ಬಹಿರಂಗಪಡಿಸುತ್ತೇವೆ.

ಎಫೆಸದವರಿಗೆ 5:8,11-13

**ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದೀರಿ ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ. ಕತ್ತಲೆಗೆ ಸಂಬಂಧವಾದ ಕೃತ್ಯಗಳಿಂದ ಯಾವ ಪ್ರಯೋಜನವೂ ಬರಲಾರದು. ಅವುಗಳಲ್ಲಿ ಪಾಲುಗಾರರಾಗಿರದೆ ಅವುಗಳನ್ನು ಬೈಲಿಗೆ ತಂದು ಖಂಡಿಸಿರಿ. ಆ ಜನರು ರಹಸ್ಯವಾಗಿನಡಿಸುವ ಕೆಲಸಗಳನ್ನು ಕುರಿತು ಮಾತಾಡುವದಾದರೂ ನಾಚಿಕೆಗೆ ಕಾರಣವಾಗಿದೆ. ಬೆಳಕಿನಿಂದ ಎಲ್ಲಾ ಕೃತ್ಯಗಳ ನಿಜಗುಣ ತೋರಿಬರುತ್ತದೆ ಆದ್ದರಿಂದ ಕೆಟ್ಟದ್ದು ಕೆಟ್ಟದ್ದೇ ಎಂದು ಕಾಣಿಸುವದು.**

ನಮ್ಮ ಜೀವಿತ ಮತ್ತು ಗುನನಡತೆಯು, ನಾವು ದೇವರ ಮಕ್ಕಳು ಮತ್ತು ಕತ್ತಲೆಯ ಲೋಕಕ್ಕೆ ಬೆಳಕನ್ನು ತೋರಿಸುತ್ತೇವೆಂಬುದನ್ನು ಪ್ರಕಟಿಸಬೇಕು.

ಫಿಲಿಪ್ಪಿಯವರಿಗೆ 2:14,15

**ಗುಣಗುಟ್ಟದೆಯೂ ವಿವಾದವಿಲ್ಲದೆಯೂ ಎಲ್ಲವನ್ನು ಮಾಡಿರಿ ಹೀಗೆ ನೀವು ನಿರ್ದೋಷಿಗಳೂ ಯದಾರ್ಥ ಮನಸ್ಸುಳ್ಳವರೂ? ಆಗಿದ್ದು ವಕ್ರಬುದ್ಧಿಯುಳ್ಳ ಮೂರ್ಖಜಾತಿಯ ಮಧ್ಯದಲ್ಲಿ ದೇವರ ನಿಷ್ಕಳಂಕರಾದ ಮಕ್ಕಳಾಗಿರುವಿರಿ.**

## ಒಂದು ಸ್ಥಳೀಯ ಸಭೆಯು ಇದನ್ನು ಕಾರ್ಯಗತಗೊಳಿಸಲು ಪ್ರಾಯೋಗಿಕ ವಿಧಾನಗಳು

- ನಮ್ಮ ಮೊದಲ ಪ್ರೀತಿಯನ್ನು ಪಾಲಿಸಬೇಕು ಆದ್ದರಿಂದ ನಮ್ಮ ದೀಪಸ್ತಂಭವು ಆತನ ಪ್ರಸನ್ನತೆಯಲ್ಲಿ ಬಲವಾಗಿ ಉರಿಯುತ್ತಿರುತ್ತದೆ. ಆ ಮೇಲೆ ನಾವುಗಳು ಆತನ ಬೆಳಕಿನೊಡನೆ ನಮ್ಮ ಪ್ರಪಂಚವನ್ನು ಪ್ರಭಾವಗೊಳಿಸುವ ಬಲವನ್ನು ಹೊಂದಬಹುದು.
- ಸ್ಥಳೀಯ ಸಭೆಯು ದೇವಜನರಿಗಾಗಿ ಪ್ರಕಾಶವನ್ನು ಒದಗಿಸಬೇಕು. ಆದ್ದರಿಂದ ಅವರು ದೇವರ ವಾಕ್ಯದ ತಿಳುವಳಿಕೆ, ಅನ್ಯೋನ್ಯತೆಯ ಸ್ಥಳ, ಕರ್ತನಾದ ಯೇಸುಕ್ರಿಸ್ತನ ಪ್ರಾರ್ಥನೆ ಮತ್ತು ಆರಾಧನೆಯ ಸ್ಥಳದಲ್ಲಿ ಇರಬಹುದು.

- ವಿಶ್ವಾಸಿಗಳು ಜೀವಿತಗಳನ್ನು ಜೀವಿಸಲು ಪ್ರೋತ್ಸಾಹಿಸಬೇಕು ಮತ್ತು ಕತ್ತಲೆಯಲ್ಲಿ ಇರುವುದನ್ನು ಬಹಿರಂಗಗೊಳಿಸುವ ಮತ್ತು ಕರ್ತನಿಗೆ ಜನರನ್ನು ಗೊತ್ತುಪಡಿಸುವಂತೆ ಒಳ್ಳೆಯ ಕಾರ್ಯಗಳನ್ನು ಮಾಡುವಂತೆಯೂ ಪ್ರೋತ್ಸಾಹಿಸಬೇಕು.

## ಸಿದ್ಧಗೊಂಡಿರಬೇಕಾಗಿರಲೂ ಸವಾಲುಗಳು

- ಯೇಸು ಕ್ರಿಸ್ತನಡೆಗೆ ಜನರನ್ನು ತೋರಿಸುವ ಮತ್ತು ಪ್ರಕಟಪಡಿಸದಿರುವಂತಹ ಸಾಮಾಜಿಕ ಸೇವೆಯ ಮಾದರಿಯ ಅಧಿಕವಾದ ಒಳ್ಳೇಯ ಕಾರ್ಯಗಳಲ್ಲಿ ವಿಶ್ವಾಸಿಗಳು ತೊಡಗಿಸಿಕೊಂಡಿರುವುದು. ಆಮೇಲೆ ರಕ್ಷಣೆಯಿಲ್ಲದವರು ಮಾಡುವ ಒಳ್ಳೆಯ ಕಾರ್ಯಗಳಿಂದ ಯಾವುದೇ ವ್ಯಾತ್ಯಾಸಕರವಿಲ್ಲದವರಂತೆ ನಾವು ಕಂಡುಬರುತ್ತೇವೆ.
- ಈ ಪ್ರಪಂಚದಲ್ಲಿ ಬೆಳಕಾಗಿರುವುದನ್ನು ಪ್ರಯತ್ನಿಸುವುದರಲ್ಲಿ ಅವರ ಮೊದಲ ಪ್ರೀತಿಯ ಮೇಲೆ ದೃಷ್ಟಿಹರಿಸುವುದನ್ನು ವಿಶ್ವಾಸಿಗಳು ಮರೆತುಬಿಡುತ್ತಾರೆ.

## ಪರಿಗಣಿಸಲು ಪ್ರಶ್ನೆಗಳು

ಪರಲೋಕದಲ್ಲಿನ ಅದರ ಸ್ಥಳದಿಂದ ದೀಪಸ್ತಂಭವು ತೆಗೆದುಹಾಕಲ್ಪಟ್ಟರೆ ಆದರೆ ಭೂಮಿಯ ಮೇಲೆ ಒಂದು ಸ್ಥಳೀಯ ಸಭೆಯ ಕಾರ್ಯಗಳಲ್ಲಿ ಮುಂದುವರೆಯುವಂತಿದ್ದರೆ ಏನು?

ಸ್ಥಳೀಯ ಸಭೆಯು ಮತ್ತು ವಿಶ್ವಾಸಿಗಳು ಸರಿಯಾದ ರೀತಿಯಲ್ಲಿ ಹೇಗೆ ಕತ್ತಲೆಯ ಕಾರ್ಯಗಳನ್ನು ಬಹಿರಂಗ ಗೊಳಿಸಬಹುದು?

# 18

# ದೇವರ ರಚನೆಗೆ ಅನುಸಾರವಾಗಿ ಕಟ್ಟುವುದು

## ಆದಿಸಭೆಯು, ನಮ್ಮ ಪ್ರಾರಂಭದ ಬಿಂದು

ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿನ ಸಭೆಯು ನಮ್ಮ ಪ್ರಾರಂಭದ ಒಂದು ಮತು ಆದ್ದರಿಂದ ಸಭೆಯ ಒಂದು ಮಾದರಿಯನ್ನು ಯೇಸು ಕಟ್ಟಲು ಪ್ರಾರಂಭಿಸಿದನು. ಆಧಿಸಭೆಯು ಸ್ಥಳೀಯ ಸಭೆಯ ನೀಲನಕ್ಷೆಯ ಎಲ್ಲಾ ಹತ್ತು ಅಂತಗಳ ಕೆಲವು ಅಳತೆಗಳಲ್ಲಿ ನಡೆದಿತ್ತು.

ಕ್ರಿಸ್ತನ ಅಂಗವಾಗಿ ಆತನ ಕೈಗಳು ಮತ್ತು ಪಾದವಾಗಿ ಅವರ ಪ್ರಪಂಚದಲ್ಲಿ ಕ್ರಿಸ್ತನನ್ನು ಬಲಯುತವಾಗಿ ಪ್ರತಿನಿಧಿಸಿದರು.

ದೇವರ ಕುಟುಂಬವಾಗಿ ಅವರು ಎಲ್ಲವುಗಳನ್ನು ಹಂಚಿಕೊಂಡರು ಮತ್ತು ಒಬ್ಬರಿಗೊಬ್ಬರು ಸಹಾಯ ಮಾಡಿದರು

ಸತ್ಯದ ಸ್ತಂಭವಾಗಿ ಅವರು ಸಂಪ್ರದಾಯಗಳು, ತತ್ವಜ್ಞಾನಗಳು ಮತ್ತು ಸುಳ್ಳುಧರ್ಮ ಒತ್ತಡದ ವಿರುದ್ಧ ಎದುರಾಳಿಯಂತೆ ನಿಂತುಕೊಂಡಿದ್ದರು.

ದೇವರ ಸೈನ್ಯವಾಗಿ ಅವರು ಬಲಯುತವಾಗಿ ಮುಂದುವರೆದರು ಮತ್ತು ಕತ್ತಲೆಯ ಕಾರ್ಯಗಳನ್ನು ಉರುಳಿಸಿದರು ಮತ್ತು ದುರಾತ್ಮನ ದೊರೆತನದಿಂದ ಪ್ರಾಂತ್ಯಗಳನ್ನು ಮತ್ತು ಜನರನ್ನು ಬಿಡುಗಡೆಗೊಳಿಸಿದರು.

ಕ್ರಿಸ್ತನ ಮದಲಗಿತ್ತಿಯಾಗಿ, ಆತನ ಕಾರಣಕ್ಕಾಗಿ ಸಾಯಲೂ ಅವರು ಸಿದ್ಧಗೊಂಡಿರುವ ಹಂತಕ್ಕೆ ಆತನಿಗಾಗಿ ಪ್ರತಿಷ್ಠಿಸಿಕೊಂಡು ಜೀವಿಸಿದ, ಆತನ ಬರುವಿಕೆಗಾಗಿ ನಿರೀಕ್ಷಿಸುತ್ತಾ ಜೀವಿಸುತ್ತಾ ಅವರು ಮದಲಿಂಗನಾದ ದೇವರೊಡನೆ ಆಳವಾದ ಪ್ರೀತಿಯಲ್ಲಿ ಅವರಿದ್ದರು.

ಪ್ರಾರ್ಥನೆ ಮತ್ತು ಆರಾಧನೆಯ ಮನೆಯಾಗಿ, ಅವರು ಬಲಯುತವಾದ ಪ್ರಾರ್ಥನೆ, ಆರಾಧನೆ ಮತ್ತು ಎಲ್ಲಾ ಸಮಯದಲ್ಲಿ ಮಧ್ಯಸ್ಥಿಕೆಯ ವಿಜ್ಞಾಪನೆಗಾಗಿ ಅವರನ್ನು ಮೀಸಲಾಗಿಸಿಕೊಂಡಿದ್ದರು.

ದೇವರ ಆಲಯುವಾಗಿ, ದೇವರ ಪ್ರಸನ್ನತೆ ಮತ್ತು ಮಹಿಮೆಯು ತೋರ್ಪಡಿಸಲ್ಪಟ್ಟಿದ್ದನ್ನು ಅವರು ನೋಡಿದರು.

ದೇವರ ಜನರುಗಳಾಗಿ, ಅವರು ತಮ್ಮ ಸುತ್ತಲಿನ ಪ್ರಪಂಚದಿಂದ ವಿಭಿನ್ನವಾಗಿರುವಂತಹ ಅಮೂಲಾಗ್ರವಾಗಿ ಜೀವಿಸಿದರು.

ನಿಜವಾದ ದ್ರಾಕ್ಷೇಬಳ್ಳಿಯ ಕೊಂಬೆಗಳಾಗಿ, ಅವರು ಫಲದಾಯಕತೆಯಲ್ಲಿ ಮತ್ತು ನಿಕಟತೆಯಲ್ಲಿ ಅವರು ನಡೆದರು.

ದೇವರಿಂದ ಇಡಲ್ಪಟ್ಟಂತಹ ದೀಪಸ್ತಂಭಗಳಾಗಿ, ಕತ್ತಲೆಯ ಮಧ್ಯದಲ್ಲಿ ಅವರ ಬೆಳಕು ಪ್ರಕಾಶಿಸುವಂತೆ ಮಾಡಿದರು.

## ಹತ್ತು ದೃಷ್ಟಿಕೋನ, ಒಂದು ನೀಲನಕ್ಷೆ

ಈ ಒಂದು ಭಾಗದಲ್ಲಿ ಬಲಿಷ್ಟ ಸ್ಥಳೀಯ ಸಭೆಗಳನ್ನು ಕಟ್ಟುವುದರಲ್ಲಿ ಒಂದು ನೀಲನಕ್ಷೆಯ ಹತ್ತು ಭಾಗಗಳನ್ನು ಒಳಗೊಂಡಿದೆ ಸಭಾಪಾಲಕರು/ನಾಯಕರುಗಳಾಗಿ ನಮ್ಮ ಸ್ಥಳೀಯ ಸಭಿಕರುಗಳಲ್ಲಿ ಇಂತಹ ಹತ್ತು ಕ್ಷೇತ್ರಗಳನ್ನು ನೋಡಬೇಕು ಮತ್ತು ಪ್ರತಿಯೊಂದರಲ್ಲಿ ಸ್ಥಳೀಯ ಸಭಿಕರು ಹೇಗೆ ಕಾರ್ಯಮಾಡುತ್ತಿದ್ದಾರೆಂಬುದನ್ನು ನೋಡಬೇಕು.

| ಸ್ಥಳೀಯ ಸಭೆಗಾಗಿರುವ ದೇವರ ನೀಲನಕ್ಷೆ | | | | |
|---|---|---|---|---|
| **ಮದಲಗಿತ್ತಿ**<br>ಮದಲಿಂಗನಾದ ದೇವರೊಡನೆ ಪ್ರೀತಿಯಲ್ಲಿರುವುದು | **ಪ್ರಾರ್ಥನೆ ಮತ್ತು ಆರಾಧನೆಯ ಒಂದು ಮನೆ**<br>ನಿರಂತರವಾದ ಪ್ರಾರ್ಥನೆ ಮತ್ತು ಆರಾಧನೆ | **ದೇವರ ಆಲಯ**<br>ದೇವರು ನಮ್ಮ ಮಧ್ಯದಲ್ಲಿ ವಾಸಿಸುತ್ತಾನೆ ಮತ್ತು ನಮ್ಮ ಮೂಲಕವಾಗಿ ಆತನ ಮಹಿಮೆಯು ಪ್ರಕಟಗೊಂಡಿದೆ | **ದ್ರಾಕ್ಷೇಬಳ್ಳಿ ಮತ್ತು ಕೊಂಬೆಗಳು**<br>ಫಲದಾಯ-ಕತೆಯನ್ನು ಹುಟ್ಟಿಸುವಂತಹ ನಿಕಟತೆ | **ದೀಪಸ್ತಂಭ**<br>ಆತನ ಮುಂದೆ ನಾವು ನಿಂತಿರುವಂತದ್ದು ಕತ್ತಲೆಯ ಪ್ರಪಂಚಕ್ಕೆ ನಮ್ಮನ್ನು ಬೆಳಕನ್ನಾಗಿಸುವುದಕ್ಕಾಗಿ |
| **ಕ್ರಿಸ್ತನ ಅಂಗ**<br>ಪ್ರತಿನಿಧಿಸುತ್ತೇವೆ ಮತ್ತು ಆತನ ಉದ್ದೇಶಗಳನ್ನು ಕೊಂಡೊಯ್ಯುತ್ತೇವೆ | **ದೇವರ ಕುಟುಂಬ**<br>ಭೂಮಿಯ ಮೇಲೆ ಆತನ ಕುಟುಂಬವಾಗಿ ನಾವು ಜೀವಿಸುತ್ತೇವೆ. | **ಸತ್ಯದ ಸ್ತಂಭ**<br>ಈ ಪ್ರಪಂಚದಲ್ಲಿ ನಾವು ಸತ್ಯವನ್ನು ಎತ್ತಿ ಹಿಡಿಯುತ್ತೇವೆ | **ದೇವರು ಆರಿಸಿಕೊಂಡ ಜನರು**<br>ನಾವು ದೇವರ ರಾಜ್ಯದ ಸಂಸ್ಕೃತಿ ಮತ್ತು ಮೌಲ್ಯಗಳನ್ನು ತೋರ್ಪಡಿಸುತ್ತೇವೆ. | **ಸೈನ್ಯ**<br>ಕತ್ತಲೆಯ ಬಲಗಳು ಮತ್ತು ಕಾರ್ಯಗಳನ್ನು ನಾವು ಉರುಳಿಸುತ್ತೇವೆ |
| ಆದಿಸಭೆ ಅನುಸರಿಸಲು ಮತ್ತು ಅತಿಕ್ರಮಿಸಲು ಒಂದು ಮೂಲ ಮಾದರಿ | | | | |

ಸ್ಥಳೀಯ ಸಭೆಗಾಗಿರುವ ನಮ್ಮ ಪ್ರಸಂಗಿಸುವಿಕೆ, ಬೋಧನೆ, ಮತ್ತು ಸೇವೆಗಳು, ದೇವರ ವಾಕ್ಯಗಳಲ್ಲಿ ನಮಗೆ ಕೊಡಲ್ಪಟ್ಟಂತಹ ಈ ಹತ್ತು ಕ್ಷೇತ್ರಗಳಲ್ಲಿನ ಪ್ರತಿಯೊಂದರಲ್ಲಿಯೂ ದೇವರ ಮನೆಯನ್ನು ನಿರಂತರವಾಗಿ ಕಟ್ಟಲೂ ರಚಿಸಲ್ಪಟ್ಟಿರಬೇಕು. ನಾವು ಇದನ್ನು ಮಾಡುವಾಗ, ನಾವುಗಳೂ ತಪ್ಪಾಗಿ ಹೋಗುವುದಿಲ್ಲ ಮತ್ತು ದೇವರ ನೀಲನಕ್ಷೆಗನುಸಾರವಾಗಿ ನಾವು ಕಟ್ಟುತ್ತಿದ್ದೇವೆ ಎಂಬ ಭರವಸೆಯನ್ನು ನಾವು ಹೊಂದಿಕೊಳ್ಳಬಹುದು.

ಈ ಹತ್ತು ಕ್ಷೇತ್ರಗಳು ಒಂದು ಪರಿಪೂರ್ಣವಾದ ಸಮತೋಲನವನ್ನು ಇವುಗಳಿಗೆ ಕೊಡುತ್ತದೆ (ಅ) ಕರ್ತನ ಕಡೆಗೆ ಮೇಲ್ಮುಖವಾದ ದೃಷ್ಟಿ (ಆ) ವಿಶ್ವಾಸಿಗಳ ಆಂತರಿಕ ಬಲಪಡಿಸುವಿಕೆ ಮತ್ತು (ಇ) ಹೊರ ಪ್ರಪಂಚಕ್ಕೆ ಸಂಧಿಸುವುದು.

ನಿಮ್ಮ ಸ್ಥಳೀಯ ಸಭೆಯ ಮೇಲೆ ವಿವಿಧ ಋತುಗಳಲ್ಲಿನ ದಯಪಾಲಿಸಿದ ಕೃಪೆಯನ್ನು ಅರ್ಥ ಮಾಡಿಕೊಳ್ಳಿರಿ

2 ಕೊರಿಂಥದವರಿಗೆ 8:1

**ಸಹೋದರರೇ ಮೆಕೆದೋನ್ಯದ ಸಭೆಗಳಲ್ಲಿ ದೇವರ ಕೃಪೆಯು ತೋರಿದ ಬಗೆಯನ್ನು ನಿಮಗೆ ತಿಳಿಸುತ್ತೇವೆ.**

ನಿಮ್ಮ ಸ್ಥಳೀಯ ಸಭೆಯನ್ನು ಇಂತಹ ವಿವಿಧ ಬೆಳವಣಿಗೆ ಮತ್ತು ಅಭಿವೃದ್ಧಿಯ ಋತುಗಳಲ್ಲಿ ನಡೆಸುವಾಗ ನಿಮ್ಮ ಸಭಿಕರ ಮೇಲೆ ಪ್ರತಿಯೊಂದು ಋತುವಿನಲ್ಲಿ ನಿರ್ದಿಷ್ಟ ಕೃಪೆಯು ದಯಪಾಲಿಸಿದೆ ಎಂಬುದನ್ನು ನೀವು ಗಮನಿಸುತ್ತೀರಿ. ಇದರ ಅರ್ಥ ಒಂದು ನಿರ್ದಿಷ್ಟ ಋತುಮಾನವಾಗಿದೆ. ದೇವರು ಸಭೆಯನ್ನು ನಿರ್ದಿಷ್ಟವಾದ ಕ್ಷೇತ್ರ ಅಥವಾ ಒಂದು ಗೊತ್ತುಪಡಿಸಿದ ನಿರ್ದಿಷ್ಟ ಕ್ಷೇತ್ರಗಳಲ್ಲಿ ಮುಂದಕ್ಕೆ ನಡೆಸುತ್ತಾನೆ ಜನರ ಹೃದಯಗಳು ನಿರ್ದಿಷ್ಟ ವಿಷಯಗಳ ಕಡೆಗೆ ತೆರೆದಿರುವುದನ್ನು ನೀವು ಗಮನಿಸುತ್ತೀರಿ ದೇವರು ಮಾಡುತ್ತಿರುವುದನ್ನು ಗುರ್ತಿಸುವುದು, ಆತನು ಅಲ್ಲಿ ನಡೆಸುತ್ತಿರುವಲ್ಲಿ ಮತ್ತು ಅದರೊಂದಿಗೆ ಹೋಗುವುದು ಪ್ರಾಮುಖ್ಯವಾಗಿದೆ.

## ಸಭೆ ಮೌಲ್ಯಮಾಪನ ಮತ್ತು ಬೆಳವಣಿಗೆಗೆ ಯೋಜನೆ

ನೀಲನಕ್ಷೆಯ ಈ ಹತ್ತು ಕ್ಷೇತ್ರಗಳಲ್ಲಿ ನಿಮ್ಮ ಸ್ಥಳೀಯ ಸಭೆಯ ಸಭಿಕರು ಎಲ್ಲಿದ್ದಾರೆ ಎಂಬುದನ್ನು ಸಮಯ ತೆಗೆದುಕೊಂಡು ಮೌಲ್ಯ ಮಾಪನ ಮಾಡಿರಿ. ಪವಿತ್ರಾತ್ಮನನ್ನು ಆಲಿಸಿರಿ ಮತ್ತು ಇಂತಹ ಕ್ಷೇತ್ರಗಳಲ್ಲಿ ನಿಮ್ಮ ಸ್ಥಳೀಯ ಸಭೆಯನ್ನು ಬೆಳೆಸಲು ಸಹಾಯ ಮಾಡಲು ಪ್ರಾಯೋಗಿಕ ಮಾರ್ಗಗಳನ್ನು ನಿರ್ಧರಿಸಿಕೊಳ್ಳಿರಿ. ಆಮೇಲೆ ಪವಿತ್ರಾತ್ಮನ ಸಹಾಯದಿಂದ ನಿಮ್ಮ ಪ್ರಸಂಗಿಸುವಿಕೆ, ಬೋಧನೆಗಳು ಮತ್ತು ಅಭ್ಯಾಸಗಳ ಮೂಲಕವಾಗಿ ನಿಮ್ಮ ಸಭಿಕರನ್ನು ಮುಂದಕ್ಕೆ ನಡೆಸಬಹುದಾಗಿದೆ.

| ನೀಲನಕ್ಷೆಯ ಕ್ಷೇತ್ರ | ನಾವು ಎಲ್ಲಿದ್ದೇವೆ | ಮುಂದಿನ ಹಂತದ ಬೆಳವಣಿಗೆಗಾಗಿ ಹೆಜ್ಜೆಗಳು |
|---|---|---|
| **ಕ್ರಿಸ್ತನ ದೇಹ**: ನಾವು ಆತನನ್ನು ಪ್ರತಿನಿಧಿಸುತ್ತೇವೆ ಮತ್ತು ಆತನ ಉದ್ದೇಶಗಳನ್ನುಕೊಂಡೊಯ್ಯುತ್ತೇವೆ | | |
| **ದೇವರ ಕುಟುಂಬ**: ಭೂಮಿಯ ಮೇಲೆ ಆತನ ಕುಟುಂಬವಾಗಿ ನಾವು ಜೀವಿಸುತ್ತೇವೆ. | | |
| **ಸತ್ಯದ ಸ್ತಂಭ**: ನಾವು ಈ ಪ್ರಪಂಚದಲ್ಲಿ ಸತ್ಯವನ್ನು ಎತ್ತಿಹಿಡಿಯುತ್ತೇವೆ. | | |
| **ಸೈನ್ಯ**: ಕತ್ತಲೆಯ ಬಲಗಳು ಮತ್ತು ಕಾರ್ಯಗಳನ್ನು ಉರುಳಿಸುತ್ತೇವೆ. | | |
| **ಮದಲಗಿತ್ತಿ**: ಮದಲಿಂಗನಾದ ದೇವರ ಜೊತೆ ಪ್ರೀತಿಯಲ್ಲಿದ್ದೇವೆ. | | |
| **ಪ್ರಾರ್ಥನೆ ಮತ್ತು ಆರಾಧನೆಯ ಒಂದು ಮನೆ**: ನಿರಂತರವಾದ ಪ್ರಾರ್ಥನೆ ಮತ್ತು ಆರಾಧನೆ | | |
| **ದೇವರು ಆರಿಸಿಕೊಂಡ ಜನರು**: ದೇವರ ರಾಜ್ಯದ ಸಂಸ್ಕೃತಿ ಮತ್ತು ಮೌಲ್ಯಗಳನ್ನು ತೋರಿಸುತ್ತೇವೆ. | | |
| **ದೇವರ ಆಲಯ**: ದೇವರು ನಮ್ಮ ಮಧ್ಯದಲ್ಲಿ ವಾಸಿಸುತ್ತಾನೆ ಮತ್ತು ನಮ್ಮ ಮೂಲಕವಾಗಿ ಆತನ ಮಹಿಮೆಯು ಪ್ರಕಟಗೊಂಡಿದೆ. | | |
| **ದ್ರಾಕ್ಷಾಬಳ್ಳಿ ಮತ್ತು ಕೊಂಬೆಗಳು**: ನಿಕಟತೆಯು ಹುಟ್ಟಿಸುತ್ತದೆ ಫಲದಾಯಕತೆಯನ್ನು | | |
| **ದೀಪಸ್ತಂಭ**: ಆತನ ಮುಂದೆ ನಾವು ನಿಂತು ಕೊಂಡಿರುವುದು ಒಂದು ಕತ್ತಲೆಯ ಪ್ರಪಂಚಕ್ಕೆ ನಮ್ಮನ್ನು ಬೆಳಕನ್ನಾಗಿ ಮಾಡುವುದಕ್ಕಾಗಿ. | | |

# ಭಾಗ 3

# ದೈವಿಕ ಕ್ರಮ



# 19

# ಸಭೆಯ ಸಂಸ್ಕಾರಗಳು

ಸಭೆಯ ಸಂಸ್ಕಾರಗಳಿಂದ ಅಥವಾ ಆದೇಶಗಳು, ಸಭೆಯಿಂದ ಶಾಶ್ವತವಾಗಿ ಗಮನಿಸಬಹುದಾದ ಕ್ರಿಸ್ತನಿಂದ ದೀಕ್ಷೆ ನೀಡಲ್ಪಟ್ಟ ಅಭ್ಯಾಸಗಳು ಎಂಬುದಾಗಿ ನಾವು ಉಲ್ಲೇಖಿಸುತ್ತೇವೆ. ನೀರಿನ ದೀಕ್ಷಾಸ್ನಾನ ಮತ್ತು ಕರ್ತನ ಭೋಜನಗಳು ಸಭೆಗಾಗಿ ನಮ್ಮ ಕರ್ತನಾದ ಯೇಸುಕ್ರಿಸ್ತನಿಂದ ಅಭಿಷೇಕಿಸಲ್ಪಟ್ಟ ಎರಡು ಸಂಸ್ಕಾರಗಳಿವೆ.

ಇಂತಹ ಆದೇಶಗಳು ವಿಶ್ವಾಸಿಗಳಿಂದ ಅಭ್ಯಾಸಿಸಲ್ಪಟ್ಟಿದ್ದ ಶಿಲುಬೆಯ ಮೇಲೆ ಕ್ರಿಸ್ತನು ಮಾಡಿ ಮುಗಿಸಿದ ಕಾರ್ಯದ ಬಲದಿಂದ ಕಂಡುಬಂದ ನಿಜವಾದ ಮತ್ತು ವಿಶ್ವಾಸಿಗಳ ಜೀವಿತದಲ್ಲಿನ ಪರಿಣಾಮಕಾರಿಯು ಸಹ ಅರ್ಥಕಾರಿಯಾಗಿದೆ.

ಪ್ರತಿಯೊಂದು ಸಮಯದಲ್ಲೂ ಇಂತಹ ಸಂಸ್ಕಾರಗಳಲ್ಲಿ ಭಾಗವಹಿಸಲು ಜನರನ್ನು ನಡೆಸಬೇಕು, ಅವರ ಜೀವಿತಗಳಿಗೆ ದೇವರ ಬಲವನ್ನು ಪಡೆದುಕೊಳ್ಳಲು ಅವರಿಗೆ ನಾವು ಪ್ರೋತ್ಸಾಹಿಸಬೇಕು.

## ನೀರಿನ ದೀಕ್ಷಾಸ್ನಾನ

1. ಪಶ್ಚಾತ್ತಾಪದ ಸೂಚಕವಾಗಿ ಭೂಮಿಯ ಮೇಲೆ ದೇವರ ರಾಜ್ಯದ ಬಗ್ಗೆ ಸಾರಿ ಹೇಳುವಾಗ ಸ್ನಾನಿಕನಾದ ಯೋಹಾನನಿಂದ ಪರಿಚಯಿಸಲ್ಪಟ್ಟಿದೆ. (ಮತ್ತಾಯ 28:19,20).
2. ಪಶ್ಚಾತ್ತಾಪ ಪಡಲು ಆತನಿಗೆ ಯಾವುದು ಇಲ್ಲದಿದ್ದರೂ ಎಲ್ಲಾ ನೀತಿವಂತಿಕೆಯನ್ನು ನೆರವೇರಿಸಲು ವಿಧೇಯತೆಯನ್ನು ತೋರ್ಪಡಿಸುವ ರೀತಿಯಲ್ಲಿ ಯೇಸುವು ದೀಕ್ಷಾಸ್ನಾನ ಹೊಂದಿದ್ದನು (ಮತ್ತಾಯ 3:13-16).
3. ದೀಕ್ಷಾಸ್ನಾನವು ಹೊಸ ಒಡಂಬಡಿಕೆಯಲ್ಲಿ ಒಂದು ಆಜ್ಞೆಯಾಗಿದೆ (ಮತ್ತಾಯ 28:19, 20).
4. ದೀಕ್ಷಾಸ್ನಾನವು, ಯೇಸುಕ್ರಿಸ್ತನೊಬ್ಬನನ್ನೇ ಹಿಂಬಾಲಿಸಲು ನಿಮ್ಮ ತೀರ್ಮಾನವನ್ನು ವ್ಯಕ್ತಪಡಿಸುವುದಾಗಿದೆ (ಅಪೊಸ್ತಲರ ಕೃತ್ಯಗಳು 2:38,39).

5. ದೀಕ್ಷಾಸ್ನಾನವು ಯೇಸುವಿನೊಡನೆ ಪುನರುತ್ಥಾನ, ಸಮಾಧಿ, ಮರಣದ ಒಳಗಿನ ಅನುಭವದ ಒಂದು ಚಿಹ್ನೆಯಾಗಿದೆ. (ರೋಮಾಪುರದವರಿಗೆ 6:4).

6. ದೇವರ ಮುಂದೆ ಸೂಕ್ತವಾದ ಆತ್ಮಸಾಕ್ಷಿಯನ್ನು ಪಾಲಿಸಲು ನಿಮ್ಮ ಆಶೆಯನ್ನು ವ್ಯಕ್ತಪಡಿಸುವಂತದ್ದು ದೀಕ್ಷಾಸ್ನಾನವಾಗಿದೆ (1 ಪೇತ್ರನು 3:21).

7. ದೀಕ್ಷಾಸ್ನಾನ ಹೊಂದಲು ಇರುವ ಒಂದೇ ಒಂದು ಅಗತ್ಯತೆಯೇನೆಂದರೆ ಕರ್ತನಾದ ಯೇಸುಕ್ರಿಸ್ತನಲ್ಲಿ ''ನಂಬಿಕೆ ಮತ್ತು ಪಶ್ಚಾತ್ತಾಪ ಪಡಬೇಕು'' (ಅಪೊಸ್ತಲರ ಕೃತ್ಯಗಳು 8:36,37).

8. ದೀಕ್ಷಾಸ್ನಾನವು ನೀರಿನಲ್ಲಿ ಮಾತ್ರ ಮುಳುಗಿ ತೆಗೆದುಕೊಳ್ಳುವುದಾಗಿದೆ (ಅಪೊಸ್ತಲರ ಕೃತ್ಯಗಳು 8:36,37).

9. ನೀವು ದೀಕ್ಷಾಸ್ನಾನ ಮಾಡಿಸಿಕೊಳ್ಳಲು ತುಂಬಾ ಪವಿತ್ರರಾಗಿ ನಿಮ್ಮನ್ನು ಮಾಡಿಕೊಳ್ಳಬೇಕಾಗಿಲ್ಲ ಜನರು ಪಶ್ಚಾತ್ತಾಪಪಟ್ಟು ಯೇಸುಕ್ರಿಸ್ತನಲ್ಲಿ ನಂಬಿಕೆಯಿಟ್ಟ ತಕ್ಷಣವೇ ದೀಕ್ಷಾಸ್ನಾನ ಮಾಡಿಸಿಕೊಂಡರು.

10. ನೀರಿನ ದೀಕ್ಷಾಸ್ನಾನವು ನಿಮ್ಮನುಸಿ ಒಬ್ಬ ಆತ್ಮಿಕ ದೈತ್ಯನಾಗಿ ಮಾಡುವುದಿಲ್ಲ. ಇನ್ನೂ ನೀವು ದೇವರ ವಾಕ್ಯ ಮತ್ತು ಪ್ರಾರ್ಥನೆಯ ಮೂಲಕವಾಗಿ ಆತ್ಮಿಕವಾಗಿ ಬೆಳೆಯಬೇಕು.

11. ದೀಕ್ಷಾಸ್ನಾನವು ವಿಧೇಯತೆಯ ಕಾರ್ಯವಾಗಿರುವುದರ ಕಾರಣದಿಂದ ನೀವು ಹೆಚ್ಚಿನ ಆಳತೆಯ ಆಶೀರ್ವಾದಗಳನ್ನು ಎದುರುನೋಡಬಹುದಾಗಿದೆ.

12. ದೀಕ್ಷಾಸ್ನಾನವು ಶಿಲುಬೆಯ ಘೋಷಣೆಯ ಚಿಹ್ನೆಯಾಗಿರುವುದರ ಕಾರಣದಿಂದ, ಶಿಲುಬೆಯ ಬಲವು ನಿಮ್ಮ ಜೀವಿತಗಳಲ್ಲಿ ಬಂಧನಗಳನ್ನು ಮುರಿಯುವುದು, ಚಟಗಳಿಂದ ಬಿಡುಗಡೆ, ಬಿಡುಗಡೆ ತರುವ ಮತ್ತು ಅಧಿಕವಾದ ಪರಿಣಾಮಗಳನ್ನು ದೀಕ್ಷಾಸ್ನಾನದ ಅವಧಿಯಲ್ಲಿ ನೀವು ಎದುರು ನೋಡಬಹುದು.

ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ, ಪ್ರತಿ ಸಮಯದಲ್ಲೂ ಜನರು ದೀಕ್ಷಾಸ್ನಾನ ಮಾಡಿಕೊಂಡಿದ್ದನ್ನು ನಾವು ನೋಡುತ್ತೇವೆ. ಅವರು ''ಯೇಸುವಿನ ಹೆಸರಿನಲ್ಲಿ'' ದೀಕ್ಷಾಸ್ನಾನ ಹೊಂದಿದ್ದರು ''ಯೇಸುವಿನಿಂದ ನಮಗೆ ಕೊಡಲ್ಪಟ್ಟ ಅಧಿಕಾರದಿಂದ'' ಎಂಬುದು ಇದರ ಅರ್ಥ ಎಂಬುದಾಗಿ ನಾವು ಅರ್ಥಮಾಡಿಕೊಳ್ಳುತ್ತೇವೆ.

''ಯೇಸುವಿನ ಹೆಸರಿನಲ್ಲಿ'' ಎಂಬುದರ ಅರ್ಥ ನಾವು ಇಲ್ಲಿ ಆತನ ಸ್ಥಳದಲ್ಲಿ ಆತನನ್ನು ಪ್ರತಿನಿಧಿಸುತ್ತೇವೆ. ಮತ್ತು ಆತನ ಪರವಾಗಿ ನಾವು ಕಾರ್ಯ ಮಾಡುತ್ತೇವೆ.

''ಯೇಸುವಿನ ಹೆಸರಿನಲ್ಲಿ ತಂದೆಯ, ಮಗನ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ನಾನು ನಿನಗೆ ದೀಕ್ಷಾಸ್ನಾನ ಕೊಡುತ್ತೇನೆ'' ಎಂಬುದಾಗಿ ಹೇಳುತ್ತಾ ನೀರಿನಲ್ಲಿ ನಾವು ದೀಕ್ಷಾಸ್ನಾನ ಮಾಡಿಸುತ್ತೇವೆ.

## ಕರ್ತನ ಭೋಜನದ ಮೇಜು

ಕರ್ತನ ಮೇಜು ಕರ್ತನಾದ ಯೇಸುವಿನಿಂದ ಸ್ವತಃ ಸ್ಥಾಪಿಸಲ್ಪಟ್ಟಿದೆ (ಮತ್ತಾಯ 26:18-30) ಕರ್ತನಾದ ಯೇಸು ಅಪೊಸ್ತಲನಾದ ಪೌಲನಿಗೆ ಪ್ರಕಟನೆಯಿಂದ ಇದರ ಸೂಚನೆಯನ್ನು ನಂತರದಲ್ಲಿ ನೀಡಿದ್ದನು. (1 ಕೊರಿಂಥದವರಿಗೆ 11:20-34; 1 ಕೊರಿಂಥದವರಿಗೆ 10:16-21).

ಕರ್ತನಾದ ಯೇಸುಕ್ರಿಸ್ತನಲ್ಲಿ ವಿಶ್ವಾಸಿಗಳಾಗಿರುವಂತಹವರೆಲ್ಲರೂ ಕರ್ತನ ಮೇಜಿನಲ್ಲಿ ಪಾಲುಗಾರರಾಗಬಹುದು.

ಕರ್ತನ ಮೇಜನ್ನು ಆಚರಿಸುವುದು:

1. ಕರ್ತನ ಮರಣ, ಸಮಾಧಿ, ಪುನರುತ್ಥಾನದಲ್ಲಿನ ನಮ್ಮ ವೈಯಕ್ತಿಕವಾದ ನಂಬಿಕೆಯ ಅಭಿವ್ಯಕ್ತತೆಯಾಗಿದೆ.
2. ಕ್ರಿಸ್ತನ ಶಿಲುಬೆಯ ಮೇಲೆ ಪೂರ್ಣಗೊಳಿಸಿದ ಕೆಲಸದ ಒಂದು ಸಾರೋಣವಾಗಿದೆ. ಪ್ರತಿಯೊಂದು ಘೋಷಣೆಯು ಆತ್ಮಿಕ ಕ್ಷೇತ್ರದಲ್ಲಿ ಬಹಳ ಬಲಯುತವಾಗಿದೆ ಮತ್ತು ಕರ್ತನ ಮೇಜಿನಲ್ಲಿ ಪಾಲು ತೆಗೆದುಕೊಳ್ಳುವುದರಲ್ಲಿ ನಮ್ಮ ಜೀವಿತದಲ್ಲಿ ಶಿಲುಬೆಯ ಬಲವನ್ನು ಪಡಿದುಕೊಳ್ಳುವುದನ್ನು ನಾವು ಎದುರುನೋಡಬಹುದಾಗಿದೆ.
3. ಆತನ ಹಿಂತುರುಗಿ ಬರೋಣದಲ್ಲಿ ನಮ್ಮ ನಂಬಿಕೆಯ ಅಭಿವ್ಯಕ್ತತೆಯಾಗಿದೆ.
4. ಯೇಸುವಿನೊಂದಿಗೆ ನಮ್ಮ ಐಕ್ಯತೆಯ ಅಭಿವ್ಯಕ್ತತೆಯಾಗಿದೆ. (ನಾವು ಯೇಸುವಿನ ರಕ್ತ ಮತ್ತು ದೇಹದೊಡನೆ - ಸ್ವತಃ ಕ್ರಿಸ್ತನೊಂದಿಗೆ ನಮ್ಮ ''ಸಹಭೋಗವನ್ನು'' ಘೋಷಿಸುತ್ತೇವೆ. 1 ಕೊರಿಂಥದವರಿಗೆ 10:16).
5. ಒಬ್ಬರಿಗೊಬ್ಬರೊಡನೆ ನಮ್ಮ ಐಕ್ಯತೆ (ಒಡಂಬಡಿಕೆ)ಯ ಅಭಿವ್ಯಕ್ತತತೆಯಾಗಿದೆ (1 ಕೊರಿಂಥದವರಿಗೆ 10:17).

ಒಡಂಬಡಿಕೆಯ ಸಂಬಂಧದಲ್ಲಿ, ನಾವು ಒಬ್ಬರಿಗೊಬ್ಬರು ಬದ್ಧತೆಯುಳ್ಳವರಾಗಿರುತ್ತೇವೆ ಮತ್ತು ದೇವರ ವಾಕ್ಯದಿಂದ ಹಾಕಲ್ಪಟ್ಟಂತಹ ಎಲ್ಲೆಗಳ ಅನುಗುಣವಾಗಿ ನಮ್ಮ ಜೀವಿತಗಳನ್ನು ನಾವು ಸಾಧ್ಯವಾದಷ್ಟು ಸಂಪೂರ್ಣವಾಗಿ ಹಂಚಬಹುದು.

ನಮ್ಮ ಹೃದಯಗಳನ್ನು ಇವುಗಳಿಂದ ಸಿದ್ಧಪಡಿಸಿಕೊಂಡಿರಬೇಕು:

- ನಮ್ಮ ಜೀವಿತಗಳನ್ನು ಪರೀಕ್ಷಿಸಿಕೊಳ್ಳಬೇಕು ಮತ್ತು ತಿಳಿದಂತಹ ಪಾಪವನ್ನು ತ್ಯಜಿಸಬೇಕು.
- ಪಾಲು ತೆಗೆದುಕೊಳ್ಳುವಾಗ ತಿಳುವಳಿಕೆ ಇರಬೇಕು ಮತ್ತು ಆತನ ಮರಣ ಮತ್ತು ಪುನರುತ್ಥಾನದ ಮೂಲಕವಾಗಿ ಶಿಲುಬೆಯ ಮೇಲೆ ಕ್ರಿಸ್ತನು ಮರಣವನ್ನು ನಾವು ಪ್ರತಿನಿಧಿಸುತ್ತಿದ್ದೇವೆ ಎಂಬುದನ್ನು ನಂಬಬೇಕು.

ಕರ್ತನ ಮೇಜನ್ನು ಆಚರಿಸುವಾಗ, ಶಿಲುಬೆಯ ಪರಿಪೂರ್ಣವಾದ ಆಶೀರ್ವಾದವನ್ನು ನಾವು ಎದುರುನೋಡಬೇಕು: ರಕ್ಷಣೆ, ಸ್ವಸ್ಥತೆ, ಬಂಧನಗಳನ್ನು ಮುರಿಯುವುದು, ಬಿಡುಗಡೆ, ಸಂಪೂರ್ಣತೆ, ಆಶೀರ್ವಾದ, ಹಂಚಿಕೆ ಮತ್ತು ಮೇಜಿನಲ್ಲಿ ನಾವು ಪ್ರತಿಬಾರಿ ಪಾಲು ತೆಗೆದುಕೊಳ್ಳುವಾಗ, ಪವಿತ್ರಾತ್ಮನ ಬಲದಿಂದ ನಮ್ಮ ಜೀವಿತಗಳನ್ನು ಪರಿಣಾಮಕಾರಿಯಾಗಿ ಮಾಡುವಂತಹ ಶಿಲುಬೆಯ ಬಲವನ್ನು ನಾವು ಆಹ್ವಾನಿಸಬೇಕು.

ಮೂಲಧಾತುವಾದ ರೊಟ್ಟಿ ಮತ್ತು ದ್ರಾಕ್ಷಾರಸವು ಸಾಂಕೇತಿಕವಾದುದು. ಕರ್ತನ ಬೋಜನದಲ್ಲಿ ನಾವು ಪಾಲುಗಳನ್ನು ತಿನ್ನುವಾಗ ಅವು ಯೇಸುವಿನ ನಿಜವಾದ ಅಥವಾ ವಾಸ್ತವಿಕ ರಕ್ತ ಮತ್ತು ದೇಹವಾಗಿ ಅತ್ಯದ್ಭುತಕರವಾಗಿ ಕಂಡುಬರುತ್ತದೆ ಎಂಬ ಪರಿವರ್ತನೆಯನ್ನು ನಾವು ನಂಬುವುದಿಲ್ಲ. ಇದು ಜರುಗುತ್ತದೆ ಎಂಬುದಾಗಿ ಕರ್ತನಾದ ಯೇಸುವು ಹೇಳಿಲ್ಲ.

## *ಯೋಗ್ಯವಾದ ರೀತಿಯಲ್ಲಿ ಪಾಲು ತೆಗೆದುಕೊಳ್ಳುವುದು*

ಪೌಲನು ತಿಳಿಸುತ್ತಿರುವಂತಹ ಸಮಸ್ಯೆಗಳಲ್ಲೊಂದು ಕೊರಿಂಥ ಸಭೆಯ ವಿಶ್ವಾಸಿಗಳು ನಡವಳಿಕೆ ಆಗಿದೆ. ಕರ್ತನ ಭೋಜನದ ಮೇಜನ್ನು ಅವರು ಎರಡು ಮಾರ್ಗಗಳಲ್ಲಿ ಉಲ್ಲಂಘಿಸುತ್ತಿದ್ದರು.

1) ಕರ್ತನ ಭೋಜನದಲ್ಲಿ ಅವರು ಪಾಲು ತೆಗೆದುಕೊಳ್ಳುತ್ತಿದ್ದರು (ಆರಾಧನೆಯ ಒಂದು ಕ್ರಿಯೆಯಾಗಿ) ಮತ್ತು ಪೌಲನು ವಿಗ್ರಹಾರಧನೆ ಎಂಬುದಾಗಿ ಕರೆದಂತಹ ವಿಗ್ರಹಗಳಿಗೆ ಸಮರ್ಪಿಸಿದಂತಹ ಆಹಾರವನ್ನು ಸಹ ವಿಗ್ರಹಗಳ ಕಡೆಗಿನ ಆರಾಧನೆಯ ಕ್ರಿಯೆಯಾಗಿ ತೆಗೆದುಕೊಳ್ಳುತ್ತಿದ್ದರು. (1 ಕೊರಿಂಥದವರಿಗೆ 10:14-33). ನಿಜವಾದ ಸಮಸ್ಯೆಯು ಆಹಾರದೊಡನೆ ಇರಲಿಲ್ಲ ಆದರೆ ವಿಗ್ರಹಗಳಿಗೆ ಸಮರ್ಪಿಸಿದಂತಹದ್ದನ್ನು ತಿನ್ನುವುದರಿಂದ ವಿಗ್ರಹಗಳಿಗೆ

ಕೊಡಲ್ಪಟ್ಟಿದ್ದಂತಹ ಪೂಜ್ಯತೆಯು ಇತರ ಹೊಸ ವಿಶ್ವಾಸಿಗಳಿಗೆ ಅಡಚಣೆಯಾಗಿ ಕಂಡುಬಂದಿತ್ತು.

2) ಕರ್ತನ ಮೇಜನ್ನು ಅವರು ಹಬ್ಬದ ರೀತಿಯಾಗಿ ತಿರುಗಿಸಿದರು. (1 ಕೊರಿಂಥದವರಿಗೆ 11:20-22) ಮತ್ತು ಆದ್ದರಿಂದ ದೇಹವನ್ನು ಗ್ರಹಿಸಲು ಎಚ್ಚರಿಕೆಯಿರಬೇಕು ಮತ್ತು ಯೋಗ್ಯವಾದ ರೀತಿಯಲ್ಲಿ ಪಾಲುತೆಗೆದುಕೊಳ್ಳಬೇಕು. ನಾವು ಇದನ್ನು ಯೋಗ್ಯವಾದ ರೀತಿಯಲ್ಲಿ ಮಾಡುವುದಾದರೆ, ಸ್ವಸ್ಥತೆಯನ್ನು ಒಳಗೊಂಡಿರುವಂತಹ ಸಂಪೂರ್ಣವಾದ ಶಿಲುಬೆಯ ಆಶೀರ್ವಾದಗಳನ್ನು ನಮ್ಮ ಜೀವಿತಗಳಿಗೆ ಪಡೆದುಕೊಳ್ಳುತ್ತೇವೆ. ನಾವು ಇದನ್ನು ನಿಜವಾಗಿ ಅರ್ಥಮಾಡಿಕೊಳ್ಳದೆ ಮಾಡಿದರೆ ಅಥವಾ ನಾವು ಮಾಡುತ್ತಿರುವಂತಹವುಗಳ ಪ್ರಾಮುಖ್ಯತೆಯ ಕಡೆಗೆ ಗಮನ ಹರಿಸದಿದ್ದರೆ ನಾವು ಶಿಲುಬೆಯ ಆಶೀರ್ವಾದಗಳನ್ನು ಪಡೆದುಕೊಳ್ಳುವುದನ್ನು ತಪ್ಪಿಸಿಕೊಳ್ಳುತ್ತೇವೆ ಮತ್ತು ನಮ್ಮ ದೇಹಗಳ ಸ್ವಸ್ಥತೆಗಾಗಿರುವ ಹಂಚಿಕೆಯನ್ನು ಪರಿಣಾಮಗಳಲ್ಲೊಂದಾಗಿ ನಾವು ಕಳೆದುಕೊಳ್ಳುತ್ತೇವೆ. ಆದ್ದರಿಂದ "... *ಈ ಕಾರಣದಿಂದಲೇ ನಿಮ್ಮಲ್ಲಿ ಬಹುಮಂದಿ ಬಲಹೀನರೂ ರೋಗಿಗಳೂ ಆಗಿದ್ದಾರೆ ಮತ್ತು ಸಾಯುತ್ತಾರೆ....*"

### *ಕೇವಲ ಅರ್ಹತೆ*

ಕರ್ತನ ಭೋಜನದಲ್ಲಿ ಪಾಲುತೆಗೆದುಕೊಳ್ಳುವ ಮೊದಲು ನೀರಿನ ದೀಕ್ಷಾಸ್ನಾನ ಹೊಂದಿರಬೇಕೆಂಬುದಾಗಿ ಯಾವುದೇ ರೀತಿಯ ಸ್ಪಷ್ಟವಾದ ಉಪದೇಶಗಳು ದೇವರ ವಾಕ್ಯದಲ್ಲಿ ಇಲ್ಲ. ಆದುದರಿಂದ ಆತ ಪೀಪಲ್ಸ್ ಸಭೆಯಲ್ಲಿ, ನಾವು ಹೊಸದಾಗಿ ಜನಿಸಿದ ವಿಶ್ವಾಸಿಗಳೆಲ್ಲರಿಗೂ ಕರ್ತನ ಭೋಜನದಲ್ಲಿ ಭಾಗವಹಿಸಲು ಎಲ್ಲರಿಗೂ ಅವಕಾಶ ಕಲ್ಪಿಸುತ್ತೇವೆ.

ಒಬ್ಬ ವ್ಯಕ್ತಿಯು ಯಾವಾಗ ನೀರಿನಿಂದ ದೀಕ್ಷಾಸ್ನಾನ ಹೊಂದಬೇಕು ಅಥವಾ ಕರ್ತನ ಭೋಜನದಲ್ಲಿ ಭಾಗವಹಿಸಲು ಒಬ್ಬ ವ್ಯಕ್ತಿಯು ಯಾವಾಗ ಪ್ರಾರಂಭಿಸಬೇಕು ಎಂಬ ಸ್ಪಷ್ಟವಾದ ವಯಸ್ಸಿನ ನಿರ್ಬಂಧವು ದೇವರ ವಾಕ್ಯದಲ್ಲಿ ಇಲ್ಲ. ಯೇಸು ಕ್ರಿಸ್ತನಲ್ಲಿ ವೈಯಕ್ತಿಕವಾಗಿ ನಂಬಿಕೆಯ ಮೂಲಕ ಹೊಸದಾಗಿ ಹುಟ್ಟಿದ (ವಿಶ್ವಾಸಿಯಾಗಿ ಕಂಡುಬಂದತಹ) ವ್ಯಕ್ತಿಯಾಗಿರಬೇಕೆಂಬುದು ಮಾತ್ರ ಅರ್ಹತೆಯಾಗಿದೆ. ಆದ್ದರಿಂದ ಜನರು ದೀಕ್ಷಾಸ್ನಾನಹೊಂದಲೂ ಅಥವಾ ಕರ್ತನ ಭೋಜನದಲ್ಲಿ ಪಾಲು ತೆಗೆದುಕೊಳ್ಳಲು ನಾವು ಈ ಮಾರ್ಗವನ್ನು ಸ್ವಾಗತಿಸುತ್ತೇವೆ.

## ಸಾಮಾನ್ಯ ಪ್ರಶ್ನೆಗಳು

**1) ಹೊಸದಾಗಿ ಹುಟ್ಟದೆ ''ಮುಳುಗಿಸುವಿಕೆ'' ಅಥವಾ ''ಚಿಮುಕಿಸುವಿಕೆಯ'' ಮೂಲಕವಾಗಿ ನಾನು ಹಿಂದೇ ''ದಿಕ್ಷಾಸ್ನಾನ'' ಮಾಡಿಸಿಕೊಂಡಿದ್ದರೆ, ಪುನಃ ದಿಕ್ಷಾಸ್ನಾನ ಮಾಡಿಸಿಕೊಳ್ಳುವುದು ಅಗತ್ಯವಾಗಿದೆಯಾ / ಸರಿಯಾದುದ?**

*ನೀವು ಈಗ ವಿಶ್ವಾಸಿಯಾಗಿದ್ದೀರ, ಹೌದು, ತಿರುಗಿ ದಿಕ್ಷಾಸ್ನಾನ ಮಾಡಿಸಿಕೊಳ್ಳುವುದು ಉತ್ತಮವಾಗಿದೆ ಮತ್ತು ಅದನ್ನು ಯೇಸುಕ್ರಿಸ್ತನಲ್ಲಿ ನಿಮ್ಮ ನಂಬಿಕೆಯ ಅಭಿವ್ಯಕ್ತತೆಯಾಗಿ ಮಾಡಿರಿ. ಅಪೊಸ್ತಲರ ಕೃತ್ಯಗಳು 19:1-6 ರಲ್ಲಿ ನಾವು ಒಂದು ಉತ್ತಮವಾದ ಉದಾಹರಣೆಯನ್ನು ಹೊಂದಿದ್ದೇವೆ. ಸ್ನಾನಿಕನಾದ ಯೋಹಾನನಿಂದ ದಿಕ್ಷಾಸ್ನಾನ ಹೊಂದಿದಂತಹ ಶಿಷ್ಯರುಗಳನ್ನು ಪೌಲನು ಸಂಧಿಸಿದಾಗ, ಅವನು ಯೇಸುಕ್ರಿಸ್ತನ ಬಗ್ಗೆ ಅವರಿಗೆ ನವೀಕರಿಸಿದನು ಮತ್ತು ಅವರು ನಂಬಿದ ಮೇಲೆ ಯೇಸುಕ್ರಿಸ್ತನ ಹೆಸರಿನಲ್ಲಿ ನೀರಿನಲ್ಲಿ ದಿಕ್ಷಾಸ್ನಾನ ಮಾಡಿಸಿಕೊಂಡರು.*

**2) ನೀರಿನಿಂದ ದಿಕ್ಷಾಸ್ನಾನ ಮಾಡಿಸಿಕೊಳ್ಳುವ ಮೊದಲು ಕೆಲವು ಆತ್ಮಿಕ ಹಂತ ಅಥವಾ ಆತ್ಮಿಕ ಪ್ರೌಢತೆಗೆ ನಾನು ತಲುಪುವುದು ಅಗತ್ಯವಾಗಿದೆಯಾ?**

*ಇಲ್ಲ. ಒಬ್ಬನು ಹೊಸದಾಗಿ ಹುಟ್ಟಬೇಕು, ಯೇಸು ಕ್ರಿಸ್ತನಲ್ಲಿ ಒಬ್ಬ ವಿಶ್ವಾಸಿಯಾಗಿ ಕಂಡುಬರಬೇಕು ಎಂಬ ಅರ್ಹತೆಯನ್ನು ಮಾತ್ರ ನಾವು ನೋಡುತ್ತೇವೆ. ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಕರ್ತನಾದ ಯೇಸುಕ್ರಿಸ್ತನಲ್ಲಿ ಅವರು ನಂಬಿಕೆಯಿಟ್ಟ ತಕ್ಷಣವೇ ಅವರಲ್ಲಿ ಹೆಚ್ಚಿನವರು ನೀರಿನಿಂದ ದಿಕ್ಷಾಸ್ನಾನ ಮಾಡಿಸಿಕೊಂಡರು.*

**3) ಒಬ್ಬ ವಿಶ್ವಾಸಿಯು ಮತ್ತೊಬ್ಬ ವಿಶ್ವಾಸಿಗೆ ನೀರಿನಲ್ಲಿ ದಿಕ್ಷಾಸ್ನಾನ ಮಾಡಿಸಬಹುದಾದ ಅಥವಾ ನೀರಿನ ದಿಕ್ಷಾಸ್ನಾನವು ಒಬ್ಬ ಸಭಾಪಾಲಕರು ಅಥವಾ ಕೆಲವು ಆತ್ಮಿಕ ನಾಯಕರುಗಳಿಂದ ಮಾತ್ರ ನೆಡೆಸಬೇಕಾ?**

*ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ, ಯೆರೊಸಲೇಮಿನ ಸಭೆಯಲ್ಲಿ ಡಿಕನ್ ಆಗಿದ್ದಂತಹ ಫಿಲಿಪ್ಪನು ಹೊಸ ವಿಶ್ವಾಸಿಗಳಿಗೆ ದಿಕ್ಷಾಸ್ನಾನ ನೀಡಿದ್ದನ್ನು ಅನನೀಯನೆಂಬುವವನು ಸೌಲನಿಗೆ ದಿಕ್ಷಾಸ್ನಾನ ಕೊಡಲು ಕಳುಹಿಸಲ್ಪಟ್ಟಿದ್ದನ್ನು ನಾವು ನೋಡುತ್ತೇವೆ. ಆದ್ದರಿಂದ ಹೌದು ಯಾವುದೇ ವಿಶ್ವಾಸಿಯು ಮತ್ತೊಬ್ಬ ವಿಶ್ವಾಸಿಯನ್ನು ನೀರಿನಿಂದ ದಿಕ್ಷಾಸ್ನಾನ ಮಾಡಿಸಬಹುದು.*

**4) ನಿಜವಾಗಿ ತಿಳುವಳಿಕೆಯಿಲ್ಲದೆ ಅಥವಾ ನಾನು ಮಾಡುತ್ತಿದ್ದವುಗಳಲ್ಲಿ ನಂಬಿಕೆಯಿಲ್ಲದ ''ಅನರ್ಹವಾದ ರೀತಿಯಲ್ಲಿ'' ಕರ್ತನ ಭೋಜನದಲ್ಲಿ ನಾನು ಪಾಲು ತೆಗೆದುಕೊಂಡರೆ - ನಾನು ಮರಣಕರ ರೋಗಗಳಲ್ಲಿ ಸಿಲುಕಿಹಾಕಿಕೊಳ್ಳುತ್ತೇನಾ?**

*ಇಲ್ಲ. ನೀನು ಇದನ್ನು ಬಹಳ ಹಗುರವಾಗಿ ತೆಗೆದುಕೊಂಡಿದ್ದೀಯಾ ಎಂಬುದನ್ನು ಗುರ್ತಿಸು ಕರ್ತನಿಗೆ ಕ್ಷಮಿಸು ಎಂಬುದಾಗಿ ನೀನು ಕೇಳಿಕೊ (ಅನರ್ಹವಾದ ರೀತಿಯಲ್ಲಿ ಇದನ್ನು ಮಾಡಿದ್ದಕ್ಕಾಗಿ ಪಶ್ಚಾತ್ತಾಪಪಡು) ಮತ್ತು ಮುಂದೆ ಸಾಗಲು ಇದನ್ನು ಸರಿಯಾದ ರೀತಿಯಲ್ಲಿ ಮಾಡು.*

**5) ತಾನು ಮಾಡುತ್ತಿರುವಂತಹದ್ದನ್ನು ನಂಬದಿರುವವನು ಸ್ವತಃ ಆಚರಣೆಯನ್ನು ನಡೆಸುತ್ತಿರುವವನಾಗಿರು. ವ್ಯಕ್ತಿಯಾಗಿದ್ದರೆ ನಾನು ಕರ್ತನ ಭೋಜನದಲ್ಲಿ ಪಾಲು ತೆಗೆದುಕೊಳ್ಳಬಹುದಾ?**

*ಸಾಮಾನ್ಯವಾಗಿ, ಆಚರಣೆಯನ್ನು ಮುನ್ನಡೆಸುತ್ತಿರುವಂತಹ ವ್ಯಕ್ತಿಯು ಏನು ಮಾಡಲಾಗುತ್ತಿದೆ ಎಂಬುದನ್ನು ನಂಬದಿದ್ದರೆ ಕರ್ತನ ಭೋಜನದಲ್ಲಿ ಪಾಲು ತೆಗೆದುಕೊಳ್ಳುವಂತದ್ದು ಯಾವುದೇ ಮೌಲ್ಯವನ್ನು ಹೊಂದಿಲ್ಲ ಆದ್ದಾಗ್ಯೂ ಈ ನಡುವೆಯೂ ನೀನು ಬೇರೆಯಾವುದೇ ಆಯ್ಕೆಯನ್ನು ಹೊಂದಿರದಿದ್ದರೆ, ಕರ್ತನಾದ ಯೇಸುಕ್ರಿಸ್ತನ ಮೇಲೆ ಆತನು ಮಾಡಿದ ಕಾರ್ಯವನ್ನು ನಿಮ್ಮ ವೈಯಕ್ತಿಕ ನಂಬಿಕೆಯ ಮೂಲಕವಾಗಿ ಇದು ಅರ್ಥಪೂರ್ಣವಾಗಿ ಮಾಡಲೂ ಆರಿಸಿಕೊಳ್ಳಬಹುದು ಅಂತಿಮವಾಗಿ ಇದು ಅರ್ಥಪೂರ್ಣವಾಗಿ ಮಾಡಲೂ ಆರಿಸಿಕೊಳ್ಳಬಹುದು. ಅಂತಿಮವಾಗಿ, ಪ್ರತಿಯೊಬ್ಬನು ತನ್ನನ್ನು ಪರೀಕ್ಷಿಸಿಕೊಳ್ಳಬೇಕು ಮತ್ತು ಸ್ವತಃ ಕರ್ತನ ದೇಹವನ್ನು ಗ್ರಹಿಸಬೇಕು.*

**6) ವಿಶ್ವಾಸಿಯಾಗಿ, ನಾನು ಮನೆಯಲ್ಲಿಯೇ ಕರ್ತನ ಭೋಜನದಲ್ಲಿ ಪಾಲು ತೆಗೆದುಕೊಳ್ಳಬಹುದಾ?**

*ಖಂಡಿತವಾಗಿ, ನೀನು ಕರ್ತನಿಗೋಸ್ಕರವೆಂದು, ಆತನ ನೆನಪಿಗೊಸ್ಕರವೆಂದು ನೀವು ಮಾಡುತ್ತಿರುವವರೆಗೂ ಒಬ್ಬರು ಅಥವಾ ಅಧಿಕವಾದ ವಿಶ್ವಾಸಿಗಳು ಮನೆಯಲ್ಲಿ ಅಥವಾ ಎಲ್ಲಿಯಾದರೂ ಸಹ ಕರ್ತನ ಭೋಜನವನ್ನು ಆಚರಿಸಬಹುದು.*

# 20

# ಸಭೆಯ ಶಿಸ್ತು

ಸ್ಥಳೀಯ ಸಭಿಕರಾದ ವಿಶ್ವಾಸಿಗಳನ್ನು ಮುನ್ನಡೆಸುವಾಗ ಅಲ್ಲಿ ಆಂತರಿಕ ತೊಂದರೆಗಳಿರುತ್ತವೆ. ಕೆಲವು ವಿಶ್ವಾಸಿಗಳಾದ ನಮ್ಮ ಮಧ್ಯದಲ್ಲಿ ಮಾಡಬೇಕಾಗಿರುವುಗಳಾಗಿರುತ್ತದೆ. ಕೆಲವು ವೈಯಕ್ತಿಕ ನಡವಳಿಕೆ, ನೈತಿಕತೆ ಮತ್ತು ಜೀವನಶೈಲಿಯ ಸಮಸ್ಯೆಗಳೊಂದಿಗೆ ಮಾಡುವಂತಹವುಗಳಾಗಿರುತ್ತವೆ. ನೇಮಿಸಲ್ಪಟ್ಟಂತಹ ನಾಯಕರುಗಳ ಮಧ್ಯದಲ್ಲಿಯೂ ಮತ್ತು ಸೇವಾಕ್ಷೇತ್ರದ ಮೇಲೆ ಒಪ್ಪಿಸಲ್ಪಟ್ಟಂತಹ ಜವಬ್ದಾರಿಯಲ್ಲೂ ಸಹ ಸಮಸ್ಯೆಗಳು ಇರಬಹುದು. ಸಭೆಯ ಶಿಸ್ತು ಎಂಬ ವಿಚಾರದಲ್ಲಿ ದೇವರ ವಾಕ್ಯವು ಏನನ್ನು ಹೇಳುತ್ತದೆ ಎಂಬುದರ ಕೆಲವನ್ನು ನಾವು ಕಲಿಯೋಣ.

## ಜಗಳಗಳನ್ನು ಬಗೆಹರಿಸುವುದು

ಮತ್ತಾಯ 18:15-22

**ಇದಲ್ಲದೆ ನಿನ್ನ ಸಹೋದರನು ತಪ್ಪು ಮಾಡಿದರೆ ನೀನು ಹೋಗಿ ನೀನೂ ಅವನೂ ಇಬ್ಬರೇ ಇರುವಾಗ ಅವನ ತಪ್ಪನ್ನು ಅವನಿಗೆ ತಿಳಿಸು. ಅವನು ನಿನ್ನ ಮಾತನ್ನು ಕೇಳಿದರೆ ನಿನ್ನ ಸಹೋದರನನ್ನು ಸಂಪಾದಿಸಿಕೊಂಡಿರುವಿ. ಅವನು ಕೇಳದೆ ಹೋದರೆ ಎರಡು ಮೂರು ಸಾಕ್ಷಿಗಳ ಬಾಯಿಂದ ಪ್ರತಿಯೊಂದು ಮಾತು ಸ್ಥಾಪನೆಯಾಗುವ ಹಾಗೆ ಇನ್ನೂ ಒಬ್ಬಬ್ಬರನ್ನು ನಿನ್ನ ಸಂಗಡ ಕರಕೊಂಡು ಹೋಗು ಅವನು ಅವರ ಮಾತನ್ನು ಕೇಳದೆ ಹೋದರೆ ಸಭೆಗೆ ಹೇಳು ಆದರೆ ಸಭೆಯ ಮಾತನ್ನು ಕೇಳದೆ ಹೋದರೆ ಅವನು ನಿನಗೆ ಅಜ್ಞಾನಿಯಂತೆಯೂ ಭ್ರಷ್ಟನಂತೆಯೂ ಇರಲಿ ಭೂಲೋಕದಲ್ಲಿ ನೀವು ಏನೇನು ಕಟ್ಟುತ್ತೀರೋ ಅದು ಪರಲೋಕದಲ್ಲಿಯೂ ಕಟ್ಟಿರುವದು ಮತ್ತು ಭೂಲೋಕದಲ್ಲಿ ನೀವು ಏನೇನು ಬಿಚ್ಚುತ್ತೀರೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಇದಲ್ಲದೆ ನಿಮ್ಮಲ್ಲಿ ಇಬ್ಬರು ತಾವು ಬೇಡಿಕೊಳ್ಳತಕ್ಕ ಯಾವದಾದರೂ ಒಂದು ಕಾರ್ಯದ ವಿಷಯವಾಗಿ ಭೂಲೋಕದಲ್ಲಿ ಒಂದೇ ಮನಸ್ಸುಳ್ಳವರಾಗಿದ್ದರೆ ಅದು ಪರಲೋಕದಲ್ಲಿರುವ ನನ್ನ ತಂದೆಯಿಂದ ಅವರಿಗೆ ಆಗುವದೆಂದು ನಿಮಗೆ ಹೇಳುತ್ತೇನೆ. ಯಾಕೆಂದರೆ ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲಿ ಕೂಡಿ ಬಂದಿರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ ಅಂದನು. ಆಗ ಪೇತ್ರನು ಆತನ ಬಳಿಗೆ ಬಂದು ಸ್ವಾಮೀ ನನ್ನ ಸಹೋದರನು ನನಗೆ ತಪ್ಪು ಮಾಡುತ್ತಾ ಬಂದರೆ ನಾನು ಎಷ್ಟು ಸಾರಿ ಅವನಿಗೆ ಕ್ಷಮಿಸಬೇಕು? ಏಳು ಸಾರಿಯೋ ಎಂದು ಕೇಳಲು ಯೇಸು ಅವನಿಗೆ ಏಳು ಸಾರಿ ಎಂದಲ್ಲ. ಏಳೆಪ್ಪತ್ತು ಸಾರಿ ಎಂದು ನಿನಗೆ ಹೇಳುತ್ತೇನೆ.**

ಸಭಾಪಾಲಕರು/ನಾಯಕರುಗಳಾಗಿ, ಜನರು ಅವರ ಮಧ್ಯದಲ್ಲಿ ತೊಂದರೆಗಳಿಗಾಗಿ ನಿಮ್ಮ ಬಳಿಗೆ ಬರುತ್ತಾರೆ. ಕರ್ತನಿಂದ ಕೊಡಲ್ಪಟ್ಟ ಉಪದೇಶಗಳನ್ನು ಜನರು ಪಾಲಿಸಲು ಪ್ರೋತ್ಸಾಹಿಸಬೇಕು. ಜನರುಗಳು ಶಾಂತಿಯುತವಾಗಿ ಅವರ ಮಧ್ಯದಲ್ಲಿಯೇ ಪರಿಹರಿಸಿಕೊಳ್ಳಲೂ ಪ್ರಯತ್ನಿಸಬೇಕು. ಅದು ಸಾಧ್ಯವಾಗದಿದ್ದರೇ, ಇಬ್ಬರ ನಡುವೆ ಮಧ್ಯಸ್ಥಿಕೆ ವಹಿಸಲು ಮತ್ತೊಬ್ಬ ವಿಶ್ವಾಸಿಯನ್ನು ಪಡೆಯಬೇಕು. ಅದು ಸಹ ಪ್ರಗತಿಯಾಗದಿದ್ದರೆ ಸಭೆಯ ನಾಯಕರುಗಳು ಅಂತಹ ವಿಷಯಗಳನ್ನು ಬಂದು ಬಗೆಹರಿಸಬೇಕು. ಎಲ್ಲಾ ವಿಷಯಗಳಲ್ಲಿ ಪ್ರೋತ್ಸಾಹ ಪಡಿಸುವದು ಅವಶ್ಯಕ ಮತ್ತು ಕ್ಷಮಾಪಣೆ ಮತ್ತು ಸಾಮರಸ್ಯ ತರುವುದರ ಕಡೆಗೆ ಕಾರ್ಯಮಾಡಬೇಕು. ಸಭೆಯ ನಾಯಕರುಗಳು ಸಲಹೆ ನೀಡುತ್ತಿರುವುದನ್ನು ಯಾರಾದರೂ ನಿರಾಕರಿಸಿದರೆ, ಕ್ಷಮಾಪಣೆ ಮುಂದುವರಿಯಲು ವಿಭಾಗಗಳು ಮತ್ತು ಜಗಳಗಳು ಯಾರಿಗೂ ಲಾಭದಾಯಕವಾಗಿಲ್ಲದರ ನಿಮಿತ್ತವಾಗಿ ಅವರು ಅನ್ಯೋನ್ಯತೆಯಿಂದ ಆಮೇಲೆ ಅವರನ್ನು ತೆಗೆದುಹಾಕಬೇಕು.

1 ಕೊರಿಂಥದವರಿಗೆ 6:1-8

**ನಿಮ್ಮಲ್ಲಿ ಒಬ್ಬನಿಗೆ ಮತ್ತೊಬ್ಬನ ಮೇಲೆ ವ್ಯಾಜ್ಯವಿದ್ದರೆ ನ್ಯಾಯವಿಚಾರಣೆಗೆ ದೇವಜನರ ಮುಂದೆ ಹೋಗದೆ ಅನ್ಯಜನರ ಮುಂದೆ ಹೋಗುವದಕ್ಕೆ ಅವನಿಗೆ ಧೈರ್ಯವುಂಟೋ? ದೇವಜನರು ಲೋಕಕ್ಕೆ ತೀರ್ಪು ಮಾಡುವರೆಂದು ನಿಮಗೆ ತಿಳಿಯದೋ? ಲೋಕವು ನಿಮ್ಮಿಂದ ತೀರ್ಪನ್ನು ಹೊಂದಬೇಕಾಗಿರುವಲ್ಲಿ ಅತ್ಯಲ್ಪ ಸಂಗತಿಗಳನ್ನು ಕುರಿತು ತೀರ್ಪು ಮಾಡುವದಕ್ಕೆ ಅಯೋಗ್ಯರಾಗಿದ್ದೀರೋ? ನಾವು ದೇವದೂತರಿಗೂ ತೀರ್ಪುಮಾಡುವೆವೆಂಬದು ನಿಮಗೆ ತಿಳಿಯದೋ? ಐಹಿಕ ಜೀವನ ಕಾರ್ಯಗಳನ್ನು ಕುರಿತು ನಾವು ತೀರ್ಪು ಮಾಡುವದು ದೊಡ್ಡದೋ? ಐಹಿಕ ಜೀವ ಸಂಬಂಧದಲ್ಲಿ ನಿರ್ಣಯಿಸತಕ್ಕ ಕಾರ್ಯಗಳು ನಿಮ್ಮಲ್ಲಿದ್ದರೆ ತೀರ್ಪು ಮಾಡುವದಕ್ಕೆ ಸಭೆಯಲ್ಲಿ ಗಣನೆಗೆ ಬಾರದವರನ್ನು ಕುಳ್ಳಿರಿಸಿಕೊಳ್ಳುತ್ತೀರೋ? ನಿಮ್ಮಲ್ಲಿ ನಾಚಿಕೆ ಹುಟ್ಟಿಸುವದಕ್ಕೆ ಇದನ್ನು ಹೇಳುತ್ತೇನೆ. ಏನು ತನ್ನ ಸಹೋದರರ ಮಧ್ಯದಲ್ಲಿ ನ್ಯಾಯವನ್ನು ಬಗೆಹರಿಸಬಲ್ಲ ಜಾಣನು ನಿಮ್ಮಲ್ಲಿ ಒಬ್ಬನಾದರೂ ಇಲ್ಲವೋ? ಸಹೋದರನು ಸಹೋದರನ ಮೇಲೆ ವ್ಯಾಜ್ಯವಾಡುವುದು ಅಲ್ಲದೆ ಅದನ್ನು ಕ್ರಿಸ್ತಭಕ್ತರಲ್ಲದವರ ಮುಂದೆ ತೆಗೆದುಕೊಂಡು ಹೋಗುವದು ಸರಿಯೋ? ನಿಮ್ಮ ನಿಮ್ಮಲ್ಲಿ ವ್ಯಾಜ್ಯವಾಡುವದೇ ನೀವು ಸೋತವರೆಂಬದಕ್ಕೆ ಗುರುತು. ಅದಕ್ಕಿಂತ ಅನ್ಯಾಯವನ್ನು ಯಾಕೆ ಸಹಿಸಬಾರದು? ಆಸ್ತಿಯ ನಷ್ಟವನ್ನು ಯಾಕೆ ತಾಳಬಾರದು? ಆದರೆ ನೀವು ಅನ್ಯಾಯ ಮಾಡುತ್ತೀರಿ ಆಸ್ತಿಯನ್ನು ಅಪಹರಿಸುತ್ತೀರಿ; ಸಹೋದರರಲ್ಲಿಯೇ ಹೀಗೆ ಮಾಡುತ್ತೀರಿ.**

ಕೆಲವು ಸಂದರ್ಭಗಳಲ್ಲಿ ತೊಂದರೆಗಳಿಗೆ ಅಧಿಕವಾಗಿ ಗಂಭೀರವಾದ ಹಸ್ತಕ್ಷೇಪದ ಅವಶ್ಯಕತೆಯಿರುತ್ತದೆ. ಉದಾಹರಣೆಗೆ, ವ್ಯಾಪಾರ ವಹಿವಾಟಿನ ವಿಷಯಗಳು, ಕುಟುಂಬ/ವಿಚ್ಛೇದನೆ ವಿಷಯಗಳು ರಿಯಲ್ ಎಸ್ಟೇಟ್, ಹಣಕಾಸಿನ ವಿಚಾರಗಳು

ಮತ್ತು ಇತರ ಸನ್ನಿವೇಶಗಳು ವಿಶಿಷ್ಟವಾಗಿ ಕಾನೂನು ಕ್ರಮಗಳ ಅಗತ್ಯತೆ ಇರುತ್ತದೆ. ದೇವರ ವಾಕ್ಯವು ಅಂತಹ ವಿಚಾರಗಳನ್ನು ಸಹ ದೇವರ ಜನರ ಬಳಿಗೆ ತನ್ನಿರಿ ಎಂಬುದಾಗಿ ಹೇಳುತ್ತದೆ, ವಿಶಿಷ್ಟವಾಗಿ ''ಏನು ತನ್ನ ಸಹೋದರರ ಮಧ್ಯದಲ್ಲಿ ನ್ಯಾಯವನ್ನು ಬಗೆಹರಿಸಬಲ್ಲವನಾದ ಜಾಣನು ನಿಮ್ಮಲ್ಲಿ ಒಬ್ಬನಾದರೂ ಇಲ್ಲವೋ?'' ಖಂಡಿತವಾಗಿ ಇದನ್ನು ನಾವು ಜನರ ಮೇಲೆ ಹೊರಿಸಲು ಸಾಧ್ಯವಿಲ್ಲ ಆದರೆ ನಾವು ಏನು ಮಾಡಬೇಕೆಂಬುದಾಗಿ ದೇವರ ವಾಕ್ಯವು ಉಪದೇಶಿಸುವುದನ್ನು ನಾವು ಜನರಿಗೆ ಬೋಧಿಸಿದರೆ, ಅವರು ಅದನ್ನು ಅನುಸರಿಸುತ್ತಾರೆ ಮತ್ತು ದೇವರ ವಾಕ್ಯಕ್ಕೆ ವಿಧೇಯರಾಗುತ್ತಾರೆ.

ಇಂತಹ ವಿಚಾರಗಳೊಂದಿಗೆ ವ್ಯವಹರಿಸುವಾಗ ಕೆಲವು ಮಾರ್ಗದರ್ಶನಗಳು:

ಅ) ಸಾಧ್ಯವಾದರೇ (ಅಥವಾ ಅಗತ್ಯವಾದರೇ) ಒಂದು ಅಥವಾ ಅಧಿಕವಾಗಿರುವಂತಹ ಅಥವಾ ಅರ್ಹತೆಯುಳ್ಳ ಜನರುಗಳು ಆತ್ಮಿಕತೆಯಲ್ಲಿ ಮತ್ತು ಪ್ರಾಯೋಗಿಕ ಅಂಶಗಳನ್ನು ಪರಿಸ್ಥಿತಿಗೆ ಸಂಬಂಧಿಸಿ, ತೊಂದರೆಗಳ ವಿಶ್ಲೇಷಣೆಯೊಡನೆ ಸಹಾಯ ಮಾಡುವಂತಹವರ ತಂಡಗಳನ್ನು ಹೊಂದಿರಬೇಕು.

ಆ) ಯಾವುದೇ ಪಕ್ಷಪಾತವಿಲ್ಲದೆ, ದೇವರ ವಾಕ್ಯದ ಮೇಲೆ ಆಧಾರಿತ ಮತ್ತು ನ್ಯಾಯ, ನೀತಿವಂತಿಕೆ, ಕ್ಷಮಾಪಣೆ ಮತ್ತು ಸಮನ್ವಯತೆಯ ಕಾರಣದಿಂದ ಎಲ್ಲಾ ತೀರ್ಮಾನಗಳು ಮಾಡಲ್ಪಡಬೇಕು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು.

ಇ) ಎಲ್ಲವನ್ನು ಬರವಣಿಗೆಯಲ್ಲಿ ಇಡಿರಿ, ಆದ್ದರಿಂದ ತದನಂತರ ಏನಾದರೊಂದನ್ನು ವ್ಯತ್ಯಾಸಕರವಾಗಿ ಯಾರು ಸಹ ಕೇಳಲೂ ಸಾಧ್ಯವಿಲ್ಲ.

ಸಭೆಯ ನಾಯಕರುಗಳು ತಮ್ಮ ತೀರ್ಮಾನಗಳನ್ನು ಒದಗಿಸಿದಾಗ, ವಿಶ್ವಾಸಿಗಳು ಸಹ ಅದರಲ್ಲಿ ಸೇರಬೇಕು ಅನುಸರಿಸಬೇಕು. ವಿಶ್ವಾಸಿಗಳು ಕಾನೂನು ನ್ಯಾಯಾಲಯಕ್ಕೆ ಹೋಗಲೂ ತೀರ್ಮಾನಿಸಿದರೆ, ತೀರ್ಮಾನವು ಅವರಿಗೆ ಬಿಟ್ಟದ್ದು. ಸಭೆಯ ನಾಯಕರುಗಳು ವಿಶ್ಲೇಷಣೆ ಒದಗಿಸುವ ಕಾರ್ಯದ ತಮ್ಮ ಭಾಗದ ಕಾರ್ಯ ಮಾಡಿರುತ್ತಾರೆ.

ಇವೆಲ್ಲವನ್ನು ಮಾಡುವುದರಿಂದ ನಾವುಗಳು ದೇವರ ವಾಕ್ಯದೊಡನೆ ರಾಜಿಮಾಡಿಕೊಳ್ಳದೇ ದೇಶದ ಕಾನೂನಿನಲ್ಲಿ ನೆಲೆಗೊಂಡಿರಬೇಕು.

## ತಿದ್ದುಪಡಿಯನ್ನು ತರುವುದು

ವೈಯಕ್ತಿಕವಾಗಿ ತಿದ್ದುಪಡಿಯನ್ನು ವ್ಯಕ್ತಿಗತವಾಗಿ ಉತ್ತಮವಾಗಿ ಮಾಡುವಂತದ್ದಾಗಿದೆ. ಸಾಮಾನ್ಯವಾದ ಮಾರ್ಗದರ್ಶನವಾಗಿ, ವೈಯಕ್ತಿಕವಾಗಿ ಖಾಸಗಿಯಾಗಿ ಮತ್ತು ವ್ಯಕ್ತಿಗತವಾಗಿ ತಿದ್ದುಪಡಿ ಮಾಡಿರಿ. ವೈಯಕ್ತಿಕವಾದ ವಿಷಯಗಳನ್ನು ಸಾರ್ವಜನಿಕವಾಗಿ ಮಾತಾಡಬೇಡಿರಿ ಅಗತ್ಯವಿದ್ದಾಗ ಮಾತ್ರವೇ ಸಮಸ್ಯೆಗಳನ್ನು ಪ್ರವಚನ ಪೀಠದಿಂದ ಮಾತಾಡಿರಿ.

### *ಸಾಂಸ್ಕೃತಿಕ ತೊಂದರೆಗಳು*

ಅಪೊಸ್ತಲರ ಕೃತ್ಯಗಳು 6:1-4

**ಆ ದಿವಸಗಳಲ್ಲಿ ಶಿಷ್ಯರು ಹೆಚ್ಚುತ್ತಾ ಬರಲಾಗಿ ಅವರೊಳಗೆ ಗ್ರೀಕ್ ಭಾಷೆಯವರು ಇಬ್ರಿಯ ಭಾಷೆಯವರ ಮೇಲೆ ದಿನದಿನದ ಉಪಚಾರದಲ್ಲಿ ನಮ್ಮ ವಿಧವೆಯನ್ನು ಸರಿಯಾಗಿ ಪರಾಂಬರಿಸುವದಿಲ್ಲವೆಂದು ಗುಣುಗುಟ್ಟಿದರು. ಆಗ ಹನ್ನೆರಡು ಮಂದಿ ಅಪೊಸ್ತಲರು ಶಿಷ್ಯಮಂಡಲಿಯನ್ನು ಕೂಡಿಸಿ ನಾವು ದೇವರ ವಾಕ್ಯೋಪದೇಶವನ್ನು ಬಿಟ್ಟು ಉಪಚಾರ ಮಾಡುತ್ತಿರುವದು ತಕ್ಕದಲ್ಲವಲ್ಲಾ ಆದದರಿಂದ ಸಹೋದರರೇ, ಸಂಭಾವಿತರೂ ಪವಿತ್ರಾತ್ಮಭರಿತರೂ ಜ್ಞಾನಸಂಪನ್ನರೂ ಆಗಿರುವ ಏಳು ಮಂದಿಯನ್ನು ನಿಮ್ಮೊಳಗಿಂದ ನೋಡಿ ಆರಿಸಿಕೊಳ್ಳಿರಿ ಅವರನ್ನು ಈ ಕೆಲಸದ ಮೇಲೆ ನೇಮಿಸುವೆವು ನಾವಾದರೋ ಪ್ರಾರ್ಥನೆಯನ್ನು ವಾಕ್ಯೋಪದೇಶವನ್ನು ಮಾಡುವದರಲ್ಲಿ ನಿರತರಾಗಿರುವೆವು ಎಂದು ಹೇಳಿದರು.**

ಅಪೊಸ್ತಲರ ಕೃತ್ಯಗಳು 6:1-4ರಲ್ಲಿ ಯೆರೂಸಲೇಮಿನ ಸಭೆಯಲ್ಲಿ ಇಬ್ರಿಯ ಭಾಷೆಯ ಯೆಹೂದಿ ವಿಶ್ವಾಸಿಗಳು ಮತ್ತು ಗ್ರೀಕ್ ಭಾಷೆಯ ಯೆಹೂದಿ ವಿಶ್ವಾಸಿಗಳ ನಡುವೆ ಇದ್ದಂತಹ ತೊಂದರೆಯ ಬಗ್ಗೆ ನಾವು ದಾಖಲೆ ಹೊಂದಿದ್ದೇವೆ. ಭಾಗಶಃ ರೀತಿಯಲ್ಲಿ ಆಹಾರವನ್ನು ಹಂಚುವ ಕೆಲಸವನ್ನು ನೋಡಿಕೊಳ್ಳಲು ಆತ್ಮನಿಂದ ತುಂಬಿದ ಏಳು ಜನ ದೈವಿಕ ಪುರುಷರನ್ನು ನೇಮಿಸುವುದರಿಂದ ಮತ್ತು ಆರಿಸಿಕೊಳ್ಳುವುದರಿಂದ ಸಭೆಯನ್ನು ಪರಾಂಬರಿಸಲಾಯಿತು.

### *ಕಲಾಕೃತಿಗಳು ಮತ್ತು ವಿಭಾಗಗಳು*

1 ಕೊರಿಂಥದವರಿಗೆ 3:3,4

**ಯಾಕೆಂದರೆ ಇನ್ನೂ ಶರೀರಾಧಿನ ಸ್ವಭಾವವುಳ್ಳವರಾಗಿದ್ದಾರಿ ನಿಮ್ಮೊಳಗೆ ಹೊಟ್ಟೇಕಿಚ್ಚು ಜಗಳಗಳು ಇರುವಲ್ಲಿ ನೀವು ಶರೀರಾಧೀನ ಸ್ವಭಾವವುಳ್ಳವರಾಗಿದ್ದು ಕೇವಲ ನರ ಪ್ರಾಣಿಗಳಂತೆ ನಡೆಯುತ್ತೀರಲ್ಲವೇ. ಒಬ್ಬನು ನಾನು ಪೌಲನವನು ಎಂದು ಮತ್ತೊಬ್ಬನು ನಾನು ಅಪೊಲ್ಲೋಸನವನು ಎಂದು ಹೇಳುತ್ತಿರುವಾಗ ನೀವು ಕೇವಲ ನರಪ್ರಾಣಿಗಳಾಗಿದ್ದೀರಲ್ಲವೇ**

1 ಕೊರಿಂಥದವರಿಗೆ 4:21

**ನಿಮ್ಮ ಇಷ್ಟವೇನು? ಬೆತ್ತ ತೆಗೆದುಕೊಂಡು ನಿಮ್ಮ ಬಳಿಗೆ ಬರಲೋ? ಪ್ರೀತಿಯಿಂದಲೂ ಸೌಮ್ಯಭಾವದಿಂದಲೂ ಕೂಡಿದವನಾಗಿ ಬರಲೋ?**

ಕೊರಿಂಥ ಸಭೆಯು ಹಲವಾರು ಆಂತರಿಕ ಸಮಸ್ಯೆಗಳನ್ನು ಹೊಂದಿತ್ತು. ಅದರಲ್ಲಿ ಒಂದು ಜಗಳ ಮತ್ತು ವಿಭಾಗಗಳು ಯಾಕೆಂದರೆ ಜನರು ವಿಭಿನ್ನವಾದ ದೇವರ ಸೇವಕರುಗಳ ದಾರಿಯನ್ನು ಹಿಡಿಯುತ್ತಿದ್ದರು. ಪ್ರತಿಕ್ರಿಯೆಗಾಗಿ, ಸರಿಯಾದ ನಡವಳಿಕೆಯಲ್ಲಿ ವಿಶ್ವಾಸಿಗಳಿರಬೇಕೆಂಬುದನ್ನು ಉಪದೇಶಿಸಿ ಮತ್ತು ಬೋಧಿಸಲೂ ಬರವಣಿಗೆಯಿಂದ ಸಮಸ್ಯೆಗಳನ್ನು ಪೌಲನು ಪರಾಂಭರಿಸಿದನು ತಿಳಿಯಪಡಿಸಿದನು. ಅವನು ಏನು ಹೇಳಬೇಕು ಎಂಬುದರ ಅವರ ಜೋಡಣೆಯಲ್ಲಿ ಅವನು ಪ್ರೋತ್ಸಾಹಿಸಿದನು ಮತ್ತು ಅಗತ್ಯವಿದ್ದರೆ ವೈಯಕ್ತಿಕವಾಗಿ ವ್ಯವಹರಿಸಲು ಸಿದ್ಧಗೊಂಡಿದ್ದನು.

## *ನೈತಿಕ ಸಮಸ್ಯೆಗಳು*

ಕೊರಿಂಥ ಸಭೆಯ ಅದರ ಸದಸ್ಯರುಗಳ ಕನಿಷ್ಟಪಕ್ಷ ಒಬ್ಬರ ಅನೈತಿಕ ನಡವಳಿಕೆಯ ನಿಮಿತ್ತ ಸಮಸ್ಯೆಗಳನ್ನು ಹೊಂದಿತ್ತು (1 ಕೊರಿಂಥದವರಿಗೆ 5:1-13; 2 ಕೊರಿಂಥದವರಿಗೆ 2:1-11) ಪೌಲನು ಇದನ್ನು ದೃಢವಾಗಿ ಪರಾಂಭರಿಸಿದನು, ''ಕರ್ತನಾದ ಯೇಸುವಿನ ಪ್ರತ್ಯಕ್ಷತೆಯ ದಿನದಲ್ಲಿ ಅಂಥವನ ಆತ್ಮವು ರಕ್ಷಣೆ ಹೊಂದುವದಕ್ಕಾಗಿ ಅವರ ಶರೀಭಾವವು ನಾಶವಾಗಬೇಕೆಂದು ನಮ್ಮ ಕರ್ತನಾದ ಯೇಸುವಿನ ಹೆಸರಿನಲ್ಲಿ ಅವನನ್ನು ಸೈತಾನನಿಗೆ ಒಪ್ಪಿಸಿಕೊಡಬೇಕೆಂಬದೇ'' (1 ಕೊರಿಂಥದವರಿಗೆ 5:5) ಮತ್ತು ''ಆ ದುಷ್ಟನನ್ನು ನಿಮ್ಮ ಮಧ್ಯದಿಂದ ತೆಗೆದುಹಾಕಬೇಕು''(1ಕೊರಿಂಥದವರಿಗೆ 5:13) ಎಂಬುದಾಗಿ ಅವರಿಗೆ ಉಪದೇಶಿಸಿದನು. ಒಂದು ಸಾರಿ ಇದನ್ನು ಅವರು ಮಾಡಿದರು ಮತ್ತು ವೈಯಕ್ತಿಕವಾಗಿ ಪಶ್ಚಾತ್ತಾಪದ ವಾರ್ತೆಯು ಪಡೆಯಲ್ಪಟ್ಟಿತ್ತು, ಅವನನ್ನು ಹಿಂತುರಿಗಿ ಸಭೆಗೆ ಸೇರಿಸಿಕೊಳ್ಳಬೇಕೆಂಬುದಾಗಿ ಪೌಲನು ಬರೆಯುತ್ತಾನೆ ''ಇಂಥವನಿಗೆ ನಿಮ್ಮಲ್ಲಿ ಹೆಚ್ಚಾದ ಜನರಿಂದುಂಟಾದ ಆ ಶಿಕ್ಷೆಯೇ ಸಾಕು ಇನ್ನು ಅವನನ್ನು ಶಿಕ್ಷಿಸದೆ ಮನ್ನಿಸಿರಿ, ಸಂತೈಸಿರಿ, ಇಲ್ಲವಾದರೆ ಅವನು ಅಧಿಕವಾದ ದುಃಖದಲ್ಲಿ ಮುಳುಗಿ ಹೋದಾನು. ಆದದರಿಂದ ಅವನಿಗೆ ನಿಮ್ಮ ಪ್ರೀತಿಯನ್ನು ನಿಶ್ಚಯಪಡಿಸಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ'' (2 ಕೊರಿಂಥದವರಿಗೆ 2:6-8).

## ಅಕ್ರಮ ನಡವಳಿಕೆ

2 ಥೆಸಲೋನಿಕದವರಿಗೆ 3:6-15

**ಸಹೋದರರೇ, ನಮ್ಮಿಂದ ಹೊಂದಿದ ಬೋಧನೆಯನ್ನು ಅನುಸರಿಸದೆ ಅಕ್ರಮವಾಗಿ ನಡೆಯುವ ಪ್ರತಿ ಸಹೋದರನಿಗೆ ನೀವು ದೂರವಾಗಿರಬೇಕೆಂದು ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮಗೆ ಆಜ್ಞಾಪಿಸುತ್ತೇವೆ. ನೀವು ನಮ್ಮನ್ನು ಅನುಸರಿಸಿ ಹೇಗೆ ನಡೆಯಬೇಕೆಂದು ನೀವೇ ಬಲ್ಲಿರಿ ನಾವು ನಿಮ್ಮಲ್ಲಿ ಅಕ್ರಮವಾಗಿ ನಡೆಯಲಿಲ್ಲ ನಾವು ಹಣಕೊಡದೆ ಯಾರ ಬಳಿಯಲ್ಲಿಯೂ ಊಟ ಮಾಡಲಿಲ್ಲ ನಿಮ್ಮಲ್ಲಿ ಒಬ್ಬರಿಗೂ ಭಾರವಾಗಬಾರದೆಂದು. ಹಗಲಿರುಳು ಕಷ್ಟದಿಂದಲೂ ಪ್ರಯಾಸದಿಂದಲೂ ದುಡಿದು ಜೀವನ ಮಾಡಿಕೊಂಡೆವು ನಿಮ್ಮಿಂದ ಪೋಷಣೆ ಹೊಂದುವದಕ್ಕೆ ನಮಗೆ ಹಕ್ಕಿಲ್ಲವೆಂದು ಹಾಗೆ ಮಾಡಲಿಲ್ಲ ನಿವು ನಮ್ಮನ್ನು ಅನುಸರಿಸುವುದಕ್ಕಾಗಿ ನಿಮಗೆ ಮಾದರಿಯಾಗಿರೋಣವೆಂದೇ ಮಾಡಿದೆವು ಇದಲ್ಲದೆ ನಾವು ನಿಮ್ಮ ಸಂಗಡ ಇದ್ದಾಗ ಕೆಲಸ ಮಾಡಲೊಲ್ಲದವನು ಊಟಮಾಡಬಾರದೆಂದು ನಿಮಗೆ ಆಜ್ಞಾಪಿಸಿದೆವಷ್ಟೆ ಆದರೆ ನಿಮ್ಮಲ್ಲಿ ಕೆಲವರು ಯಾವ ಕೆಲಸವನ್ನೂ ಮಾಡದೆ ಇತರರ ಕೆಲಸದಲ್ಲಿ ಮಾತ್ರ ತಲೆಹಾಕಿ ಆಕ್ರಮವಾಗಿ ನಡೆಯುತ್ತಾರೆಂದು ವರ್ತಮಾನ ಕೇಳಿದ್ದೇವೆ ಇಂಥವರು ತಮ್ಮ ಕೆಲಸವನ್ನು ನೋಡುತ್ತಾ ತಾವೇ ಸಂಪಾದಿಸಿದ್ದನ್ನು ಊಟಮಾಡಬೇಕೆಂದು ಕರ್ತನಾದ ಯೇಸುಕ್ರಿಸ್ತನಲ್ಲಿ ನಾವು ಆಜ್ಞಾಪಿಸಿ ಪ್ರಬೋಧಿಸುತ್ತೇವೆ. ಸಹೋದರರೇ ನೀವಾದರೋ ಒಳ್ಳೇದನ್ನು ಮಾಡುವದರಲ್ಲಿ ಬೇಸರಗೊಳ್ಳಬೇಡಿರಿ ಈ ಪತ್ರಿಕೆಯ ಮೂಲಕವಾಗಿ ಹೇಳಿರುವ ನಮ್ಮ ಮಾತಿಗೆ ಯಾವನಾದರೂ ಒಳಗಾಗದಿದ್ದರೆ ಅವನನ್ನು ಗುರುತು ಇಟ್ಟುಕೊಂಡು ಅವನಿಗೆ ನಾಚಿಕೆಯಾಗುವಂತೆ ಅವನ ಸಹವಾಸದಲ್ಲಿ ಸೇರಬೇಡಿರಿ ಆದರೂ ಅವನನ್ನು ವೈರಿಯೆಂದು ಎಣಿಸದೆ ಸಹೋದರನೆಂದು ಎಣಿಸಿಕೊಂಡು ಬುದ್ಧಿಹೇಳಿರಿ.**

ಸರಿಯಾಗಿ ಜೀವಿಸದಿರುವಂತಹ ವಿಶ್ವಾಸಿಗಳಿದ್ದಾರೆ ಉದಾಹರಣೆಗೆ ಅವರ ಜೀವನ ನಡೆಸಲೂ ಸಂಪಾದಿಸಲೂ ಕೆಲಸ ಮಾಡದಿರುವವರು, ಹರಟೆಹೊಡೆಯುವುದಲ್ಲಿ ತೊಡಗಿಸಿಕೊಳ್ಳುವುದು, ಇತರ ನಡವಳಿಕೆಗಳು ವಿಶ್ವಾಸಿಗಳಿಗೆ ಸೂಕ್ತವಲ್ಲ, ಅವರು ಎಚ್ಚರಿಸಲ್ಪಡಬೇಕು ಮತ್ತು ಸರಿಪಡಿಸಲ್ಪಡಬೇಕು. ಅವರು ಬದಲಾಗದಿದ್ದರೆ, ಆಮೇಲೆ ನಾವು ಅವರನ್ನು ಮುಂದುವರೆದು ಪ್ರೋತ್ಸಾಹಿಸುವುದಿಲ್ಲ ಮತ್ತು ಅವರೊಂದಿಗೆ ಸ್ನೇಹಿತರಾಗಿರುವುದಿಲ್ಲ ಆದ್ದರಿಂದ ಅವರು ಮಾಡುತ್ತಿರುವುದು ತಪ್ಪು ಎಂಬುದಾಗಿ ಅರ್ಥಮಾಡಿಕೊಳ್ಳುತ್ತಾರೆ.

## ಮೋಸಗೊಳಿಸುವ ಸಹೋದರರು

ಕೊರಿಂಥ ಮತ್ತು ಗಲಾತ್ಯದಲ್ಲಿ ಹೊಸ ಸಭೆಯ ಸ್ಥಾಪನೆಯಲ್ಲಿ ಪೌಲನು ಎದುರಿಸಿದ ಸವಾಲುಗಳಲ್ಲಿ ದೊಡ್ಡದಾದುದೆಂದರೆ ''ಸುಳ್ಳು ಅಪೊಸ್ತಲರು'' (2 ಕೊರಿಂಥದವರಿಗೆ 11:13) ಮತ್ತು ''ಸುಳ್ಳು ಸಹೋದರರು'' (ಗಲಾತ್ಯದವರಿಗೆ 2:4) ಸಭೆಗಳ ಒಳಗೆ ಸಾಗಿದರು ಮತ್ತು ಅವರ ಸಿದ್ಧಾಂತಗಳನ್ನು ಪ್ರಚಾರ ಮಾಡಲು ಪ್ರಾರಂಭಿಸಿದರು.

ಪೌಲನು ಸಹೋದರರಿಗೆ ಬರೆಯುವುದರಿಂದ ಇಂತಹ ಸವಾಲುಗಳನ್ನು ಪರಾಂಭರಿಸಿದನು. ಇಂತಹ ಜನರುಗಳ ಬಗ್ಗೆ ಎಚ್ಚರಿಸಿದನು ಮತ್ತು ಅವನು ಬೋಧಿಸಿದ್ದಂತಹ ಸತ್ಯವನ್ನು ಹಿಡಿದುಕೊಳ್ಳಲೂ ಪ್ರೋತ್ಸಾಹಿಸಿದನು. ಗಲಾತ್ಯದವರಿಗಿನ ಅವನ ಪತ್ರಿಕೆಯಲ್ಲಿ ಪೌಲನು ಕ್ರಿಸ್ತನಲ್ಲಿರುವ ನಮ್ಮ ಸ್ವಾತಂತ್ರ್ಯವನ್ನು ವರ್ಧಿಸಿದನು ಮತ್ತು ಕಾನೂನಿನಿಂದ ನಡೆಯದೆ ಆತ್ಮನಲ್ಲಿ ನಡೆಯಬೇಕೆಂಬುದಾಗಿ ಸಹೋದರರಿಗೆ ಸವಾಲು ನೀಡಿದನು.

## *ಎದುರಾಳಿ ಸಹೋದರರು*

1 ತಿಮೊಥೆಯನಿಗೆ 1:19,20

**ನಂಬಿಕೆಯನ್ನೂ ಒಳ್ಳೇ ಮನಸ್ಸಾಕ್ಷಿಯನ್ನೂ ಬಿಡದೆ ಹಿಡುಕೋ ಕೆಲವರು ಮನಸ್ಸಿನ ಒಳ್ಳೇ ಸಾಕ್ಷಿಯನ್ನು ತಳ್ಳಿಬಿಟ್ಟು ಕ್ರಿಸ್ತನಂಬಿಕೆಯ ವಿಷಯದಲ್ಲಿ ಹಡಗು ಒಡೆದು ನಷ್ಟ ಪಟ್ಟವರಂತೆ ಇದ್ದಾರೆ ಹುಮೆನಾಯನೂ ಅಲೆಕ್ಸಾಂಡರನೂ ಇಂಥವರೇ ಇವರು ದೇವದೂಷಣೆ ಮಾಡಬಾರದೆಂಬದನ್ನು ಕಲಿತುಕೊಳ್ಳುವಂತೆ ಇವರನ್ನು ಸೈತಾನನಿಗೆ ಒಪ್ಪಿಸಿಕೊಟ್ಟೇನು.**

2 ತಿಮೊಥೆಯನಿಗೆ 2:16-18

**ಪ್ರಾಪಂಚಿಕವಾದ ಆ ಹರಟೆ ಮಾತುಗಳಿಗೆ ದೂರವಾಗಿರು ಅವುಗಳಿಗೆ ಮನಸ್ಸು ಕೊಡುವವರು ಹೆಚ್ಚೆಚ್ಚಾಗಿ ಭಕ್ತಿಹೀನರಾಗುವರು ಅವರ ಮಾತು ಕೊಳಕು ಹುಣ್ಣಿನಂತೆ ಹರಡಿಕೊಳ್ಳುವುದು. ಅವರಲ್ಲಿ ಹುಮೆನಾಯನೂ ಫಿಲೇತನೂ ಇದ್ದಾರೆ. ಅವರು ಪುನರುತ್ಥಾನವು ಆಗಿಹೋಯಿತೆಂದು ಹೇಳುತ್ತಾ ಸತ್ಯಭ್ರಷ್ಟರಾಗಿ ಕೆಲವರ ನಂಬಿಕೆಯನ್ನು ಕೆಡಿಸುವವರಾಗಿದ್ದಾರೆ.**

2 ತಿಮೊಥೆಯನಿಗೆ 4:14,15

**ಕಂಚುಗಾರನಾದ ಅಲೆಕ್ಸಾಂದ್ರನು ನನಗೆ ಬಹಳ ಕೇಡು ಮಾಡಿದನು ಕರ್ತನು ಅವನ ಕೃತ್ಯಗಳಿಗೆ ಸರಿಯಾಗಿ ಅವನಿಗೆ ಪ್ರತಿಫಲವನ್ನು ಕೊಡುವನು ನೀನು ಸಹ ಅವನ ವಿಷಯದಲ್ಲಿ ಎಚ್ಚರಿಕೆಯಾಗಿರು ಅವನು ನಮ್ಮ ಮಾತುಗಳನ್ನು ಬಹಳವಾಗಿ ಎದುರಿಸಿದನು.**

ಎಫೆಸದಲ್ಲಿ, ಅಪೊಸ್ತಲನಾದ ಪೌಲನು, ಸ್ಥಳೀಯ ಸಭೆಯ ಅಂಗದಿಂದ ಮತ್ತು ವಿಶ್ವಾಸಿಗಳಾಗಿದ್ದಂತಹ ಕೆಲವು ಪುರುಷರಿಂದ ವಿರೋಧವನ್ನು ಎದುರಿಸಿದನು. ಅವರು ಬಹಳವಾಗಿ ಬಂಡಾಯಗಾರರು ಆಗಿ ಹೇಗಾದರೂ ಕಂಡುಬಂದರು ಮತ್ತು ಬಹಿರಂಗವಾಗಿ ಪೌಲನ ಬೋಧನೆಗಳಿಗೆ ಸವಾಲು ಹಾಕಿದರು ಮತ್ತು ಅವರು ತಪ್ಪಾದ ಬೋಧನೆಗಳನ್ನು ಪ್ರಚಾರ ಮಾಡಿದರು. ಅವರ ಬೋಧನೆಗಳೊಂದಿಗೆ ಚಲಿಸಬಾರದು ಮತ್ತು ಅವರನ್ನು ದೂರವಿರಿಸಬೇಕೆಂದು ವಿಶ್ವಾಸಿಗಳಿಗೆ ಪೌಲನು ಸಾರ್ವಜನಿಕವಾಗಿ ಉಪದೇಶಿಸಿ ಪರಾಂಭರಿಸಿದನು.

## ವಿಭಜಿಸುವ ವ್ಯಕ್ತಿಗಳು

3 ಯೋಹಾನನು 1:9-11

**ಸಭೆಯಲ್ಲಿರುವರಲ್ಲಿ ಪ್ರಮುಖನಾಗಬೇಕೆಂದಿರುವ ದಿಯೋತ್ರೇಫನು ನಮ್ಮ ಮಾತನ್ನು ಅಂಗೀಕರಿಸುವುದಿಲ್ಲ ಆದಕಾರಣ ನಾನು ಬಂದರೆ ಅವನು ಮಾಡುವ ಕೃತ್ಯಗಳ ವಿಷಯದಲ್ಲಿ ಎಲ್ಲರಿಗೂ ನೆನಪುಕೊಡುವೆನು ಅವನು ಹರಟೆಕೊಚ್ಚುವವನಾಗಿ ನಮ್ಮ ವಿಷಯದಲ್ಲಿ ಕೆಟ್ಟಕೆಟ್ಟ ಮಾತುಗಳನ್ನಾಡುತ್ತಾನೆ. ಇವೂ ಸಾಲದೆ ತಾನು ಸಹೋದರರನ್ನು ಸೇರಿಸಿಕೊಳ್ಳಬೇಕೆಂದಿರುವರಿಗೆ ಅಡ್ಡಿಮಾಡಿ ಅವರನ್ನು ಸಭೆಯೊಳಗಿಂದ ಬಹಿಷ್ಕರಿಸುತ್ತಾನೆ ಪ್ರಿಯನೇ ನೀನು ಕೆಟ್ಟ ನಡತೆಯನ್ನು ಅನುಸರಿಸದೆ ಒಳ್ಳೇ ನಡತೆಯನ್ನು ಅನುಸರಿಸು ಒಳ್ಳೇದನ್ನು ಮಾಡುವವನು ದೇವರಿಂದ ಹುಟ್ಟಿದವನಾಗಿದ್ದಾನೆ ಕೆಟ್ಟದ್ದನ್ನು ಮಾಡುವವನು ದೇವರನ್ನು ಕಂಡವನಲ್ಲ.**

ಸ್ಥಳೀಯ ಸಭೆಯು ದೇಮೇತ್ರಿಯನೆಂಬ ಹಿರಿಯುವನಿಂದ ನಡೆಸಲ್ಪಟ್ಟಿತ್ತು, ಅಪೊಸ್ತಲನಾದ ಯೋಹಾನನ್ನು ವಿರೋಧಿಸಿದ ಪ್ರಯಾಣಿಕ ಸೇವಕರುಗಳ ಸತ್ಕರಿಸುವಿಕೆಯುನ್ನು ವಿಶ್ವಾಸಿಗಳಿಂದ ತಡೆಗಟ್ಟಿದಂತಹ ದಿಯೋತ್ರೇಫನ ಎಂಬುವವನಿದ್ದನು. ಅವನು ವಿಶ್ವಾಸಿಗಳ ಮೇಲೆ ಬಹಳ ಪ್ರಭಾವಬೀರಿದನು ಮತ್ತು ಕೆಲವರನ್ನು ಸಭೆಯಿಂದ ಹೊರಹೋಗುವಂತೆ ಮಾಡಿದನು ಯೋಹಾನನು ಇಂತಹ ನಡೆತೆಯ ಬಗ್ಗೆ ಬಹಳ ಬಲವಾದ ಪದಗಳಿಂದ ವಿದುದ್ಧವಾಗಿ ಬರೆಯುತ್ತಾನೆ ಮತ್ತು ಅವನು ಸಭೆಗೆ ಬಂದಾಗ ವೈಯಕ್ತಿಕವಾಗಿ ಬಹಳ ದೃಢವಾಗಿ ಈ ವ್ಯಕ್ತಿಯೊಂದಿಗೆ ವ್ಯವಹರಿಸಲು ಭರವಸೆ ನೀಡುತ್ತಾನೆ.

## ನಾಯಕರುಗಳನ್ನು ಸರಿಪಡಿಸುವುದು

1 ತಿಮೊಥೆಯನಿಗೆ 5:19-22

**ಸಭೆಯ ಹಿರಿಯನ ಮೇಲೆ ಯಾರಾದರೂ ದೂರು ಹೇಳಿದರೆ ಇಬ್ಬರು ಮೂವರು ಸಾಕ್ಷಿಗಳಿದ್ದ ಹೊರತಾಗಿ ಅದನ್ನು ಮನಸ್ಸಿಗೆ ತೆಗೆದುಕೊಳ್ಳಬೇಡ ಪಾಪದಲ್ಲಿ ನಡೆಯುವವರನ್ನು ಎಲ್ಲರ ಮುಂದೆಯೇ ಗದರಿಸು ಇವರಿಂದ ಮಿಕ್ಕಾದವರಿಗೂ ಭಯವುಂಟಾಗುವದು ನೀನು ವಿಚಾರಿಸುವದಕ್ಕೆ ಮೊದಲೇ ತಪ್ಪು ಹೊರಿಸದೆಯೂ ಪಕ್ಷಪಾತದಿಂದ ಏನೂ ಮಾಡದೆಯೂ ನಾನು ಹೇಳಿರುವ ಮಾತುಗಳ ಪ್ರಕಾರವೇ ನಡೆಯಬೇಕೆಂದು ದೇವರ ಮುಂದೆಯೂ ಕ್ರಿಸ್ತಯೇಸುವಿನ ಮುಂದೆಯೂ ಆಯಲ್ಪಟ್ಟಿರುವ ದೇವದೂತರ ಮುಂದೆಯೂ ಖಂಡಿತವಾಗಿ ಹೇಳುತ್ತೇನೆ. ಅವಸರದಿಂದ ಯಾರ ತಲೆಯ ಮೇಲೆಯಾದರೂ ಹಸ್ತವನ್ನಿಟ್ಟು ಸಭೆಯ ಉದ್ಯೋಗಕ್ಕೆ ನೇಮಿಸಬೇಡ ಹಾಗೆ ನೇಮಿಸಿದರೆ ಮತ್ತೊಬ್ಬರು ಮಾಡಿದ ಪಾಪದಲ್ಲಿ ನೀನು ಪಾಲುಗಾರನೆಂದು ತೋರಿಬಂದೀತು ನೀನು ಶುದ್ಧನಾಗಿರುವ ಹಾಗೆ ನೋಡಿಕೋ.**

ಸಭಾಪಾಲಕರೂ/ನಾಯಕರುಗಳಾಗಿ, ನಮ್ಮೊಂದಿಗೆ ಸೇವೆಗೆ ನೇಮಿಸಲ್ಪಟ್ಟಂತಹ ನಾಯಕರುಗಳಿಗೆ ನಾವು ಜವಬ್ದಾರರಾಗಿರಬೇಕು. ನಾಯಕರುಗಳು ಸಹ ತಪ್ಪು

ಮಾಡಬಹುದು. ಆದಾಗ್ಯೂ ನಾವು ಅವರನ್ನು ''ಎರಡರಷ್ಟು ಗೌರವ'' ಕೊಟ್ಟು ಸತ್ಕರಿಸಬೇಕು (ವಚನ 17) ತಪ್ಪು ಮಾಡಿದಾಗಲೂ ಸಹ, ಮೊದಲು ಒಬ್ಬ ನಾಯಕನ ಬಗ್ಗೆ ಒಬ್ಬ ವ್ಯಕ್ತಿಯ ಆರೋಪವನ್ನು ಮಾತ್ರ ಆಧರಿಸಿ ಎಂದಿಗೂ ತೀರ್ಪು ಮಾಡಬಾರದು ತಪ್ಪಾಗಿ ಮಾಡುವಿಕೆಗೆ ಇಬ್ಬರು ಅಥವಾ ಮೂವರು ಸಾಕ್ಷಿಗಳನ್ನು ನಾವು ಹೊಂದಿರಬೇಕು.ನಂತರ ಗೌರವಯುತವಾದ ರೀತಿಯಲ್ಲಿ ಏಕಾಂತದಲ್ಲಿ ನಾಯಕನೊಂದಿಗೆ ವಿಷಯಗಳು ಕುರಿತು ಚರ್ಚಿಸಬೇಕು ನಾಯಕನು ತನ್ನ ತಪ್ಪುಗಳನ್ನು ಅಂಗೀಕರಿಸಿಕೊಂಡು ಆಕೆ/ಅವನು ತಮ್ಮ ಮಾರ್ಗಗಳನ್ನು ಸರಿಪಡಿಸಿಕೊಂಡರೆ ಬಹಳ ಒಳ್ಳೇಯದು ಆದಾಗ್ಯೂ ನಾಯಕನು ತಪ್ಪು ಮಾಡುವುದರಲ್ಲಿ ಮುಂದುವರೆಯುತ್ತಿದ್ದರೆ ಆಗ ಸಾರ್ವಜನಿಕವಾಗಿ ವಿಷಯವನ್ನು ಚರ್ಚಿಸಬೇಕು ''ಇವರಿಂದ ಮಿಕ್ಕಾದವರಿಗೂ ಭಯವುಂಟಾಗುವದು'' (ವಚನ 20) ನಾಯಕನು ಮಾಡುವಂತಹ ತಪ್ಪು ಉಳಿದ ಜನರುಗಳನ್ನು ದಾರಿತಪ್ಪಿಸಬಾರದು. ಅದು ನಮಗೆ ಬೇಡ ಇದೆಲ್ಲವನ್ನು ಗೌರವದೊಡನೆ ಮಾಡಬೇಕು.

## ಬಿದ್ದುಹೋದ ಸೇವಕರುಗಳನ್ನು ಪುನಃ ಸ್ಥಾಪಿಸುವುದು

ಗಲಾತ್ಯದವರಿಗೆ 6:1
**ಸಹೋದರರೇ ನಿಮ್ಮಲ್ಲಿ ಯಾರದರೂ ಯಾವದೋ ಒಂದು ದೋಷದಲ್ಲಿ ಸಿಕ್ಕಿದರೆ ಅಂಥವರನ್ನು ಆತ್ಮನಿಂದ ನಡಿಸಿಕೊಳ್ಳುವ ನೀವು ಶಾಂತದಂತೆ ನಿನ್ನ ವಿಷಯದಲ್ಲಿ ಎಚ್ಚರಿಕೆಯಾಗಿರು.**

ಯಾವುದೇ ಅವಧಿಯಲ್ಲಿ ದೇವರ ಸೇವೆ ಸಲ್ಲಿಸುತ್ತಿರುವಂತಹ ದೇವರ ಸೇವಕರುಗಳಾದ ಪುರುಷ ಅಥವಾ ಸ್ತ್ರೀಯರು ಕೆಲವು ಗಂಭೀರವಾದ ಪಾಪದಲ್ಲಿ ಬೀಳುವಂತದ್ದು ಸಾಧ್ಯಕರವಾಗಿದೆ. ಉದಾಹರಣೆಗೆ ಲೈಂಗಿಕ ಅನೈತಿಕತೆ, ಹಣದ ದುರುಪಯೋಗ ಜನರನ್ನು ನಿಂದಿಸುವುದು, ಅಥವಾ ಇತರ ಕ್ರಮವಿಲ್ಲದ ನಡವಳಿಕೆಗಳು. ಸಭಾಪಾಲಕರು/ನಾಯಕರುಗಳಾಗಿ ನೀವು ಮೇಲ್ವಿಚಾರಣೆ ಮಾಡುವಂತಹ ಅಥವಾ ನಿಮ್ಮೊಡನೆ ಜೊತೆಗಾರರಾದವರು ಪಾಪದಲ್ಲಿ ಬೀಳುವಾಗ, ಜರುಗುತ್ತಿರುವಂತಹವುಗಳನ್ನು ನಿರ್ಲಕ್ಷಿಸಿಸದೇ ಸ್ವಸ್ಥತೆಯನ್ನು ಮತ್ತು ಪುನಃ ಸ್ಥಾಪನೆಯನ್ನು ತರಲು ಪ್ರೀತಿಯಿಂದ ಹೆಜ್ಜೆಯನ್ನಿಡುವುದು ನಮ್ಮ ಜವಬ್ದಾರಿಯಾಗಿದೆ. ಬಿದ್ದುಹೋದ ಸೇವಕನನ್ನು ಪುನಃ ಕಟ್ಟಲೂ ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಅಥವಾ ಯಾವುದೇ ಪ್ರಕ್ರಿಯೆ ಜೋಡಣೆ ಇರುವುದಿಲ್ಲ ಸೇವಕನಾಗಿ, ತನ್ನ ಎಲ್ಲ ಬಗೆಯ ಸೇವೆಯಿಂದ ದೂರ ಉಳಿದುಕೊಳ್ಳುವಂತದ್ದನ್ನು ನಾವು ಸೇವಕನಲ್ಲಿ ಕೇಳುವುದು

ಸೂಕ್ತವಾಗಿದೆ. ಅವರು ದೇವರ ಪ್ರಸನ್ನತೆಯಲ್ಲಿ ಕಳೆಯಲು ಸಮಯ ತೆಗೆದುಕೊಳ್ಳಲಿ ಮತ್ತು ಸ್ವಸ್ಥತೆ ಮತ್ತು ಪುನಃ ಸ್ಥಾಪನೆಯ ಪ್ರಕ್ರಿಯೆಯಲ್ಲಿ ಸಹಾಯಿಸುವಂತಹ ಸೇವಕರುಗಳ ಜೊತೆಯಲ್ಲಿ ನಡೆಯಲಿ ಪಾಪಕ್ಕೆ ನಡೆಸಿದಂತಹ ನಡವಳಿಕೆಗೆ ಆಧಾರವಾಗಿರುವಂತಹ ಕಾರಣವನ್ನು ಗುರ್ತಿಸುವುವಂತದ್ದು ಅವಶ್ಯಕವಾಗಿದೆ. ತೊಂದರೆ ಬೇರಿಗೆ ಕೊಡಲಿ ಹಾಕಲೂ ಅವರೊಡನೆ ಕಾರ್ಯವಾಡುವುದು ಅವಶ್ಯಕ. ಗುಣನಡತೆಯನ್ನು ಬಲಗೊಳಿಸಬೇಕು ಮತ್ತು ಪುನಃ ಕಟ್ಟಬೇಕು ಸ್ವಸ್ಥತೆ ಮತ್ತು ಪುನಃ ಸ್ಥಾಪನೆಯನ್ನು ತರಬೇಕು. ಇದು ಕೆಲವು ತಿಂಗಳುಗಳು ಒಂದು ವರ್ಷ, ಎರಡು ವರ್ಷಗಳು ಅಥವಾ ಅಧಿಕವಾಗಿ ತೆಗೆದುಕೊಳ್ಳಬಹುದು ಸ್ವಸ್ಥತೆ ಮತ್ತು ಬಲವು ಪುನಃ ಸ್ಥಾಪನೆಯಾದದ್ದನ್ನು ಗುರ್ತಿಸಿದಾಗ, ಅವರು ತಿರುಗಿ ಸೇವೆಯಲ್ಲಿ ತೊಡಗಿಸಿಕೊಳ್ಳಲೂ ಬಿಡುಗಡೆಗೊಳಿಸಬೇಕು. ಕೆಲವು ಸಂದರ್ಭಗಳಲ್ಲಿ ಬಿದ್ದು ಹೋದ ಸೇವಕನು ಸ್ವಸ್ಥತೆ ಮತ್ತು ಪುನಃ ಸ್ಥಾಪನೆಯ ಸಹಾಯ ಪಡೆಯಲು ಇಷ್ಟವಿಲ್ಲದಿದ್ದರೆ ಅವರ ಆಯ್ಕೆಗೆ ನಾವುಗಳು ಜವಬ್ದಾರರಾಗಿರುವುದಿಲ್ಲ.

## ನಿಂದನೆ ಮಾಡದೇ ಅಧಿಕಾರವನ್ನು ಅಭ್ಯಾಸಿಸುವುದು

ವಿವಿಧ ತೊಂದರೆಗಳನ್ನು ಸಭೆಯೊಳಗಡೆಯೇ ವ್ಯವಹರಿಸುವಾಗ ತಿದ್ದುಪಡಿಯು ಅಗತ್ಯತೆಯಿರುತ್ತದೆ. ಸಭಾ ಪಾಲಕರು / ನಾಯಕರುಗಳಾಗಿ ದೇವರು ನಮಗೆ ಕೊಟ್ಟಂತಹ ಅಧಿಕಾರವನ್ನು ಉಪಯೋಗಿಸಲು ಹಿಂಜರಿಯಬಾರದು ಆದಾಗ್ಯೂ ಇದನ್ನು ನಾವು ಜನರನ್ನು ಸಂಪಾದಿಸುವುದಕ್ಕಾಗಿ ಮಾಡುತ್ತೇವೆ. ಅವರ ನಾಶನಕ್ಕಾಗಿ ಮಾಡುವುದಿಲ್ಲ.

2 ಕೊರಿಂಥದವರಿಗೆ 13:10

**ಇದಕ್ಕಾಗಿಯೇ ನಾನು ನಿಮ್ಮಲ್ಲಿ ಇಲ್ಲದಿರುವಾಗ ಈ ಮಾತುಗಳನ್ನು ನಿಮ್ಮನ್ನು ಕೆಡವಿಹಾಕುವುದಕ್ಕಲ್ಲ ಕಟ್ಟುವದಕ್ಕಾಗಿ ಕರ್ತನು ನನಗೆ ಕೊಟ್ಟಿರುವ ಅಧಿಕಾರದ ಪ್ರಯೋಗದಲ್ಲಿ ನಿಮ್ಮ ಬಳಿಗೆ ಬಂದಾಗ ಕಾಠಿಣ್ಯವನ್ನು ತೋರಿಸುವುದಕ್ಕೆ ಅವಕಾಶವಿರಬಾರದೆಂದು ಅಪೇಕ್ಷಿಸುತ್ತೇನೆ.**

2 ಕೊರಿಂಥದವರಿಗೆ 1:23,24

**ನಿಮ್ಮ ಮೇಲೆ ಕನಿಕರವಿದ್ದದರಿಂದಲೇ ನಾನು ಕೊರಿಂಥಕ್ಕೆ ಬರಬೇಕೆಂದು ಅಭಿಪ್ರಾಯವನ್ನು ಬಿಟ್ಟು ಬಿಟ್ಟೇನೆಂದು ನನ್ನ ಜೀವದಾಣೆ ಹೇಳುತ್ತೇನೆ. ಅದಕ್ಕೆ ದೇವರೇ ಸಾಕ್ಷಿಯಾಗಿರಲಿ. ನಾವು ನಂಬಿಕೆಯ ವಿಷಯದಲ್ಲಿ ನಿಮ್ಮ ಮೇಲೆ ದೊರೆತನ ಮಾಡುವವರೆಂದು ನನ್ನ ತಾತ್ಪರ್ಯವಲ್ಲ ನಿಮ್ಮ ಸಂತೋಷಕ್ಕೆ ನಾವು ಸಹಾಯಕರಾಗಿದ್ದೇವೆ. ನಂಬಿಕೆಯ ವಿಷಯದಲ್ಲಿ ದೃಢ ನಿಂತಿದ್ದೀರಿ.**

## ತಿದ್ದುಪಡಿಯ ವಿಭಿನ್ನ ಪ್ರತಿಕ್ರಿಯೆಗಳಿಗೆ ಸಿದ್ಧರಾಗಿರಿ

ನಾವು ತಿದ್ದುಪಡಿಯನ್ನು ತರುವಾಗ, ಕೆಲವು ಜನರು ಅದನ್ನು ಉತ್ತಮವಾಗಿ ಪಡೆದುಕೊಳ್ಳುತ್ತಾರೆ. ಕೆಲವರು ಅದನ್ನು ಸ್ವೀಕರಿಸುವುದಿಲ್ಲ. ಅವರು ನಕಾರಾತ್ಮಕವಾಗಿ ಪ್ರತಿಕ್ರಿಯಿಸಬಹುದು. ನೀವು ಪ್ರೀತಿಸುವಂತವರಿಂದ ನಕಾರಾತ್ಮಕವಾದ ಪ್ರತಿಕ್ರಿಯೆಗಳನ್ನು ಪಡೆಯುವಂತದ್ದು ದೇವರ ಸೇವಕರುಗಳಾಗಿ ನಮ್ಮ ಜೀವಿತಗಳಲ್ಲಿ ಬಹಳ ನೋವುಂಟು ಮಾಡುವ ಕ್ಷಣಗಳಾಗಿರುತ್ತವೆ. ನೀವು ಪಡೆಯುವಂತಹ ಕೆಲವು ಬಗೆಯ ನಕಾರಾತ್ಮಕ ಪ್ರತಿಕ್ರಿಯೆಗಳು ಇಲ್ಲಿವೆ:

(ಅ) ದೂರು ಹೇಳುವುದು: ತಿದ್ದುಪಡಿಯನ್ನು ಪಡೆದುಕೊಂಡಂತಹವರಿಗೆ ವೈಯಕ್ತಿಕವಾಗಿ ಇದ್ದಕ್ಕಿದ್ದಂತೆ ಪ್ರಪಂಚವು ಸಂಪೂರ್ಣವಾಗಿ ವ್ಯತ್ಯಾಸಕರವಾಗಿ ಕಂಡುಬರುತ್ತದೆ. ಬಹಳ ಸುಂದರವಾಗಿ ಮತ್ತು ಅತ್ಯದ್ಭುತಕರವಾಗಿರುವಂತಹದ್ದು ಇದ್ದಕ್ಕಿದ್ದಂತೆ ಬರಡಾದ ಅಥವಾ ಮರುಭೂಮಿಯ ಸ್ಥಳವಾಗಿ ಕಂಡುಬರುತ್ತದೆ. ವೈಯಕ್ತಿಕವಾಗಿ ಪ್ರತಿಯೊಂದು  ಚಿಕ್ಕ ವಿಷಯಗಳ ಬಗ್ಗೆ ದೂರು ಹೇಳಲೂ ಪ್ರಾರಂಭಿಸುತ್ತಾರೆ.

(ಆ) ಹಿಂಪಡೆಯುವಿಕೆ: ತಿದ್ದುಪಡಿಯನ್ನು ಪಡೆದಂತಹ ವ್ಯಕ್ತಿಗಳು ಹಿಂತೆಗೆದುಕೊಳ್ಳುತ್ತಾರೆ. ಸಂಪರ್ಕ ಕಡಿತಗೊಳಿಸಿಕೊಳ್ಳುತ್ತಾರೆ ಮತ್ತು ದೂರವಾಗಿ ತೊಗಟೆಯಲ್ಲಿ ಬಚ್ಚಿಟ್ಟುಕೊಳ್ಳುತ್ತಾರೆ.

(ಇ) ಪ್ರತೀಕಾರ: ಅವರ ತೊಂದರೆಗಳು, ನಿರುತ್ಸಾಹ ಅಥವಾ ಅತೃಪ್ತಿಯಗಾಗಿ ನಿಮ್ಮನ್ನು ದೂಷಿಸುವ ವ್ಯಕ್ತಿಗಳು ಪ್ರಾರಂಬಿಸುತ್ತಾರೆ. ಇದ್ದಕ್ಕಿದ್ದಂತೆ, ನಿಮ್ಮ ಮೇಲೆ ಇಟ್ಟಿದ್ದಂತಹ ಗೌರವ ಮತ್ತು ಘನತೆಯು ಹಿಂದಿನ ಒಂದು ವಿಷಯದಂತೆ ಕಂಡು ಬರುತ್ತದೆ.

(ಈ) ನಿರ್ಗಮಿಸುತ್ತಾರೆ: ವ್ಯಕ್ತಿಯು ಇದ್ದಕ್ಕಿದ್ದಂತೆ ಕಣ್ಮರೆಯಾಗುತ್ತಾರೆ ಮತ್ತು ಯಾವುದೇ ಮುಂಚಿತವಾಗಿ ಪ್ರಕಟನೆ ನೀಡದೆ ಮಾಯವಾಗುತ್ತಾರೆ.

## ಇಂತಹ ಪರಿಸ್ಥಿತಿಗಳಲ್ಲಿ ನಾವು ಏನು ಮಾಡುತ್ತೇವೆ?

(ಅ) ಇದನ್ನು ವೈಯಕ್ತಿಕವಾಗಿ ತೆಗೆದುಕೊಳ್ಳಬೇಡಿರಿ: ತಿದ್ದುಪಡಿಯನ್ನು ಸ್ವೀಕರಿಸುವಂತದ್ದು ಬೇರೆ ಯಾರೊಬ್ಬನ ಅಸಮರ್ಥತೆ ಅದು ನಿಮ್ಮ ತಪ್ಪಲ್ಲ.

(ಆ) ಯಾವುದೇ ಅಪರಾಧ ತೆಗೆದುಕೊಳ್ಳಬೇಡಿ: ನಿಮ್ಮ ಹೃದಯುವನ್ನು ಕಾಯ್ದುಕೊಳ್ಳಿರಿ.

(ಇ) ಜನರು ಬದಲಾಗಲು ಸಮಯ ಕೊಡಿರಿ: ವ್ಯವಹರಿಸಲು ಅವಶ್ಯವಿರುವ ವಿಷಯಗಳೊಡನೆ ಜನರು ನಿಯಮಗಳಿಗೆ ಬರಲು ಸಮಯ ಬೇಕಾಗುತ್ತದೆ.

(ಈ)ಶಾಂತಿಯಲ್ಲಿ ಚಲಿಸಲು ಅವರಿಗೆ ಅನುಮತಿಸು: ಅವರನ್ನು ದೇವರ ಕೈಗೆ ಒಪ್ಪಿಸು. ಬೆಳವಣಿಗೆ ಮತ್ತು ಪ್ರೌಢತೆಯನ್ನು ತರಲು ದೇವರು ತಾನೇ ಅವರಲ್ಲಿ ಕಾರ್ಯ ಮಾಡುವವನಾಗಿದ್ದಾನೆ.

## ಸಮಯಕ್ಕನುಗುಣವಾಗಿ ತಿದ್ದುಪಡಿ ಮಾಡಿರಿ – ತಡಮಾಡಬೇಡಿರಿ

ನಾವು ವಿಸ್ತರಿಸಲ್ಪಟ್ಟ ಕೃಪೆಯಲ್ಲಿದ್ದೇವೆಂದು ಕ್ಷಮೆಯೊಡನೆ ತಿದ್ದುಪಡಿಗೆ ತಡಮಾಡಬಾರದು. ಕೆಲವುಬಾರಿ ಸಂಬಂಧಗಳಲ್ಲಿ ನೋವುಂಟಾಗುವ ಸಾಧ್ಯತೆಯ ಅಪಾಯದಿಂದ ನಾವುಗಳು ಮುಖಾಮುಖಿಯಾಗುವುದನ್ನು ತಪ್ಪಿಸುತ್ತೇವೆ. ಆದಾಗ್ಯೂ ನಾವು ದೀರ್ಘವಾಗಿ ತಡಮಾಡಿದಷ್ಟು ಸಮಸ್ಯೆಗಳು ಉದ್ದವಾಗಿ ಕಂಡುಬರುತ್ತದೆ ಮತ್ತು ದೊಡ್ಡ ಹಂತದಲ್ಲಿ ಅವುಗಳೊಡನೆ ವ್ಯವಹರಿಸಲು ಅಧಿಕವಾಗಿ ನೋವುಂಟಾಗುತ್ತದೆ.

# 21

# ಸೇರಿಬರುವುದರಲ್ಲಿ ಸಭೆಯ ಕ್ರಮ

## ಯೋಗ್ಯವಾಗಿ ಮತ್ತು ಕ್ರಮವಾಗಿ

ಕೊರಿಂಥದ ಸಭೆಯಲ್ಲಿ ವಿಶ್ವಾಸಿಗಳು ಒಟ್ಟಾಗಿ ಆರಾಧನೆ ಮತ್ತು ಅನ್ಯೋನ್ಯತೆಯಲ್ಲಿ ಸೇರಿಬಂದಾಗ ಅಕ್ರಮವಾದ ರೀತಿಯಲ್ಲಿ ಅನೇಕ ಸಂಗತಿಗಳು ನಡೆಯುತ್ತಿದ್ದವು. ಕರ್ತನ ಭೋಜನದಲ್ಲಿ ಪಾಲುತೆಗೆದುಕೊಳ್ಳುವುದು ಅಕ್ರಮವಾದ ರೀತಿಯಲ್ಲಿತ್ತು ಆದ್ದರಿಂದ ಆತ್ಮಿಕ ವರಗಳ ಅಭ್ಯಾಸವು ಕ್ರಮಬದ್ಧವಾದ ರೀತಿಯಲ್ಲಿ ಮಾಡಬೇಕಾಗಿತ್ತು. ಇವುಗಳ ಕುರಿತು ಪೌಲನು ತನ್ನ ಪತ್ರಿಕೆಯಲ್ಲಿ ಪರಾಂಭರಿಸುತ್ತಾನೆ ಮತ್ತು ಅವನು ಕೊರಿಂಥ ಸಭೆಯನ್ನು ಮುಂದಿನ ದಿನಗಳಲ್ಲಿ ಸಂಧಿಸುವಾಗ ವಿಷಯಗಳನ್ನು ಕ್ರಮದಲ್ಲಿ ಇಡುತ್ತೇನೆ ಎಂಬುದನ್ನು ಸೂಚಿಸುತ್ತಾನೆ.

1 ಕೊರಿಂಥದವರಿಗೆ 11:34

**ಒಬ್ಬನು ಹಸಿದರೆ ಅವನು ಮನೆಯಲ್ಲೇ ಊಟ ಮಾಡಲಿ ನೀವು ಕೂಡಿ ಬಂದದ್ದು ನ್ಯಾಯ ತೀರ್ಪಿಗೊಳಗಾಗುವದಕ್ಕೆ ಕಾರಣವಾಗಬಾರದು ಮಿಕ್ಕಾದ ಸಂಗತಿಗಳನ್ನು ನಾನು ಬಂದಾಗ ಕ್ರಮಪಡಿಸುತ್ತೇನೆ.**

1 ಕೊರಿಂಥದವರಿಗೆ 14:33

**ದೇವರು ಸಮಾಧಾನಕ್ಕೆ ಕಾರಣನೇ ಹೊರತು ಗಲಿಬಿಲಿಗೆ ಕಾರಣನಲ್ಲ.**

1 ಕೊರಿಂಥದವರಿಗೆ 14:40

**ಆದರೆ ಎಲ್ಲವೂ ಮರ್ಯಾದೆಯಿಂದಲೂ ಕ್ರಮದಿಂದಲೂ ನಡೆಯಲಿ.**

ನಮ್ಮ ಆರಾಧನೆಯ ಸಮಯದಲ್ಲಿ ಮತ್ತು ಇತರ ಸಮಯಗಳಲ್ಲೂ ಸಹ ಎಲ್ಲಾ ವಿಷಯಗಳಲ್ಲಿ ಶ್ರೇಷ್ಟತೆಯೊಡನೆ, ಕ್ರಮದಲ್ಲಿ ಮತ್ತು ಯೋಗ್ಯವಾಗಿ ವಿಷಯಗಳು ಮಾಡಲ್ಪಡಬೇಕೆಂಬುದನ್ನು ನಾವು ಖಚಿತಪಡಿಸಿಕೊಳ್ಳುವುದು ಅವಶ್ಯಕವಾಗಿದೆ. ಇದು ಕರ್ತನನ್ನು ಗೌರವಿಸುತ್ತದೆ ಮತ್ತು ಮಹಿಮೆಪಡಿಸುತ್ತದೆ. ಕೆಲವು ಕ್ಷೇತ್ರಗಳಲ್ಲಿ ನಮ್ಮ ಆರಾಧನೆಯ ಶ್ರೇಷ್ಟತೆಗಾಗಿ ಶ್ರಮಿಸುತ್ತೇವೆ ಮತ್ತು ಕೂಟಗಳು, ಸಮಯಪಾಲನೆ, ಯೋಜನೆ ಉತ್ತಮ ಸಹಕಾರ, ಸಮಯ ವ್ಯರ್ಥ ಮಾಡದಿರುವುದು, ಅನಗತ್ಯ

ಪ್ರಕಟಣೆಗಳು ಇಲ್ಲದಿರುವುದು, ಶುದ್ಧತೆ, ದಕ್ಷತೆಯನ್ನು ಒಳಗೊಂಡಿರುತ್ತದೆ ಮತ್ತು ಅದನ್ನು ತೋರಿಸುವಂತಹ ವಿಷಯಗಳು ನಾವು ಕರ್ತನಿಗೆ ಉತ್ತಮವಾದದ್ದನ್ನು ನಾವು ಕೊಡುವಂತದ್ದಾಗಿದೆ. ನಮ್ಮ ಆರಾಧನೆಗಳಲ್ಲಿ ಮಾಡುತ್ತಿರುವಂತಹವುಗಳನ್ನು ಉತ್ತಮಗೊಳಿಸಲು ನಿರಂತರವಾಗಿ ಮಾರ್ಗಗಳನ್ನು ನೋಡುತ್ತಿರುತ್ತೇವೆ.

ಸಭಿಕರ ಗಾತ್ರದ ಆಧಾರದ ಮೇಲೆ ನಾವು ಕೆಲವು ನಿರ್ದಿಷ್ಟ ವಿಷಯಗಳನ್ನು ಮಾಡಬಹುದು ಅಥವಾ ಮಾಡದಿರಬಹುದು. ಉದಾಹರಣೆಗೆ: 10 ರಿಂದ 15 ಜನರು ಸೇರಿಬರುವಂತಹ ಒಂದು ಮನೆಯ ಕೂಟದಲ್ಲಿ ಪ್ರತಿಯೊಬ್ಬರು ಪ್ರವಾದಿಸಬಹುದು, ಪ್ರತಿಯೊಬ್ಬರು ಸಂದೇಶ ಹಂಚಬಹುದು, ಇತರರಿಗಾಗಿ ಪ್ರಾರ್ಥಿಸಬಹುದು ಮತ್ತು ಪ್ರಾರ್ಥನೆ ಮತ್ತು ವೈಯಕ್ತಿಕ ಸೇವೆಯನ್ನು ಪಡೆದುಕೊಳ್ಳಬಹುದು ಆದಾಗ್ಯೂ ನೂರಾರು ಜನರು ದೊಡ್ಡದಾಗಿ ಸೇರಿಬರುವುದರಲ್ಲಿ ಮತ್ತು 90 ನಿಮಿಷ ಅಥವಾ ಗರಿಷ್ಟ 120 ನಿಮಿಷಗಳ ಆರಾಧನೆ ಕೂಟದಲ್ಲಿ ಪ್ರವಚನ ಪೀಠದಿಂದ ಹೆಚ್ಚಿನ ಜನರುಗಳು ತೊಡಗಿಸಿಕೊಳ್ಳಲು ಸಾಮಾನ್ಯವಾಗಿ ಸಾಧ್ಯವಾಗುವುದಿಲ್ಲ. ಎಲ್ಲವನ್ನು ಕ್ರಮವಾಗಿ ಇಡುವುದರಲ್ಲಿ, ಜನರು ಅವರ ವರಗಳನ್ನು ಪೋಷಿಸಲು ಮತ್ತು ಅಭ್ಯಾಸಿಸಲು ಅವಕಾಶಗಳನ್ನು ಒದಗಿಸಲು ಉಪಯುಕ್ತವಾದ ಮಾರ್ಗಗಳನ್ನು ಆಮೇಲೆ ನಾವು ಗುರ್ತಿಸಬಹುದು.

## ಸಾಂಸ್ಥಿಕ ಕೂಟಗಳಲ್ಲಿ ವಾಣಿಯನ್ನಾಡುವುದನ್ನು ಬಳಸುವುದು

ಸಂಸ್ಥೆಯ ವ್ಯವಸ್ಥೆಯಲ್ಲಿ ಅನ್ಯಭಾಷೆಗಳನ್ನು ನಾವು ಉಪಯೋಗಿಸಬಹುದಾ? 1 ಕೊರಿಂಥದವರಿಗೆ 14 ರಲ್ಲಿ ವ್ಯವಹರಿಸಬೇಕಾದಂತಹ ಮುಖ್ಯ ಕಾಳಜಿಯು ವಿಷಯುವೇನೆಂದರೆ (ಅ) ನಾವು ಮಾಡುವಂತಹವುಗಳನ್ನು ಅರ್ಥಮಾಡಿಕೊಳ್ಳದಿರುವಂತಹವರಿಗೆ (ಆ) ಅನ್ಯಭಾಷೆಗಳಲ್ಲಿ ಒಂದು ಸಂದೇಶವನ್ನು ಕೊಡುವಾಗ (14:16-19,32,27,28) ಅನ್ಯ ಭಾಷೆಯಲ್ಲಿ ಸಂದೇಶದ ಅರ್ಥವಿವರಣೆಯನ್ನು ಕೊಡುವವರಿಲ್ಲದಿದ್ದರೆ, ಅವನು ''ನಿಶ್ಯಬ್ದತೆಯನ್ನು ಕಾಪಾಡಿಕೊಳ್ಳಲಿ'' ಆದ್ದರಿಂದ ಸಾರ್ವಜನಿಕವಾಗಿ ಅನ್ಯಭಾಷೆಯಲ್ಲಿ ಸಂದೇಶ ನೀಡಬಾರದು ಆದರೆ *''ತನ್ನೊಂದಿಗೆ ದೇವರೊಂದಿಗೆಯೂ ಮಾತಾಡಿಕೊಳ್ಳಲಿ''* (14:28) ಆದ್ದರಿಂದ ಒಂದು ಸಾರ್ವಜನಿಕ ವ್ಯವಸ್ಥೆಯಲ್ಲಿ ಕ್ರಮವಾದ ರೀತಿಯಲ್ಲಿ ಅನ್ಯಭಾಷೆಯನ್ನು ಮಾತಾಡುವಂತಹದ್ದರಲ್ಲಿ ಇರುವ ಅಗತ್ಯತೆಗಳನ್ನು ನೆರವೇರಿಸಿದರೆ ಒಂದು ಸಾಂಸ್ಥಿಕ ವ್ಯವಸ್ಥೆಯಲ್ಲಿ ಅನ್ಯಭಾಷೆಗಳಲ್ಲಿ ನಾವು ಮಾತಾಡಬಹುದು.

ವೈಯಕ್ತಿಕವಾಗಿ ಪ್ರತಿಯೊಬ್ಬ ವಿಶ್ವಾಸಿಯು ತನ್ನೊಂದಿಗೆಯೂ ಮತ್ತು ದೇವರ ನಡುವೆ ಒಂದು ಸಾಂಸ್ಥಿಕ ವ್ಯವಸ್ಥೆಯಲ್ಲಿ ಅನ್ಯಭಾಷೆಗಳಲ್ಲಿ ಮಾತಾಡುವಂತದ್ದು ಪರಿಪೂರ್ಣವಾಗಿ ಸರಿಯಾದುದಾಗಿದೆ. ಅವರು ಸಾರ್ವಜನಿಕವಾಗಿ ಅನ್ಯಭಾಷೆಗಳಲ್ಲಿ ಸಂದೇಶ ಕೊಡದಿರುವುದರಿಂದ ಮತ್ತು ಅನ್ಯಭಾಷೆಗಳಲ್ಲಿ ಮಾತಾಡುತ್ತಿರುವಂತಹದ್ದರ ಕುರಿತು ಅರ್ಥ ಮಾಡಿಕೊಳ್ಳದೆ ಇರುವಂತಹವರಿಗೆ ಯಾವುದೇ ಪರಿಣಾಮ ಬೀರುವುದಿಲ್ಲ.ಅವರು ಕರ್ತನೊಂದಿಗೆ ಮತ್ತು ತನ್ನೊಂದಿಗೆಯೂ ಮಾತಾನಾಡುವಂತವರಾಗಿರುತ್ತಾರೆ. ಇದೇ ಧಾಟಿಯಲ್ಲಿ ಅನ್ಯಭಾಷೆಯಲ್ಲಿ ಮಾತಾಡುತ್ತಿರುವುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳುವಂತಹ ವ್ಯವಸ್ಥೆಯಲ್ಲಿದ್ದರೆ, 1 ಕೊರಿಂಥದವರಿಗೆ 14 ರಲ್ಲಿ ಹೇಳಿದಂತದ್ದನ್ನು ಅನುಸರಿಸಿರಿ. ನಾವು ಮಾಡುತ್ತಿರುವಂತದ್ದು ನಮಗೆ ಗೊತ್ತಿರುವುದರಿಂದ ಎಲ್ಲರೂ ಗಟ್ಟಿಯಾದ ಶಬ್ಧದಿಂದ ಅನ್ಯಭಾಷೆಗಳಲ್ಲಿ ಮಾತಾಡುವುದು ಪರಿಪೂರ್ಣವಾಗಿ ಸರಿಯಾದುದಾಗಿದೆ. ಅಪೊಸ್ತಲರ ಕೃತ್ಯಗಳು 2,10,19ನೇ ಅಧ್ಯಾಯದಲ್ಲಿ ಏಕಕಾಲದಲ್ಲಿ ಅನ್ಯಭಾಷೆಗಳಲ್ಲಿ ಮಾತಾಡಿದಂತಹ ಜನರುಗಳ ಗುಂಪುಗಳನ್ನು ಉದಾಹರಣೆಯಾಗಿ ನಾವು ನೋಡುತ್ತೇವೆ.

## ಕ್ರಮ ಮತ್ತು ದೈವಿಕ ಅವ್ಯವಸ್ಥೆ

ಯೋಹಾನ 3:8

**ಗಾಳಿಯು ಮನಸ್ಸು ಬಂದಕಡೆ ಬೀಸುತ್ತದೆ ಅದರ ಸಪ್ಪಳವನ್ನು ಕೇಳುತ್ತೀ; ಆದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು ಆತ್ಮನಿಂದ ಹುಟ್ಟಿದವರೆಲ್ಲರು ಅದರಂತೆಯೇ ಅಂದನು.**

ಕೀರ್ತನೆಗಳು 115:3

**ನಮ್ಮ ದೇವರು ಪರಲೋಕದಲ್ಲಿದ್ದಾನೆ ಆತನು ತನಗೆ ಬೇಕಾದದ್ದನ್ನೆಲ್ಲಾ ಮಾಡುತ್ತಾನೆ.**

ನಾವು ದೇವರನ್ನು ಅನುಸರಿಸುವಾಗ, ದೇವರು ಅತಿಕ್ರಮಿಸುವಂತೆ ನಾವು ಅವಕಾಶ ನೀಡಬೇಕು ಮತ್ತು ಆತನು ಮೆಚ್ಚುವಂತಹ ಮಾರ್ಗಗಳಲ್ಲಿ ಚಲಿಸಬೇಕು. ನಮ್ಮ ಕ್ರಮವು ದೇವರನ್ನು ಹೊರಗೆ ಇರಿಸಬಾರದು. ನಾವು ಯೋಚಿಸದೇ ಇರುವಂತಹ ಮಾರ್ಗದಲ್ಲಿ ಕರ್ತನು ನಮ್ಮನ್ನು ನಡೆಸುತ್ತಿದ್ದಾನೆ. ಎಂಬುದಾಗಿ ಅನಿಸುತ್ತಿದ್ದರೆ ನಾವುಗಳು ಪವಿತ್ರಾತ್ಮನ ಚಲಿಸುವಿಕೆಗೆ ನಮ್ಮ ಯೋಜನೆಗಳನ್ನು ಒಪ್ಪಿಸಿಕೊಡಬೇಕು.

ಕರ್ತನ ಪ್ರಸನ್ನತೆಯು ಆಗಾಧ ಪ್ರಮಾಣದಲ್ಲಿದೆ ಎಂಬುದಾಗಿ ಅನಿಸಿದಾಗ ನಾವುಗಳು ಆರಾಧನೆಯಲ್ಲಿಯೇ ಸಂಪೂರ್ಣವಾಗಿ ಸಮಯ ಕಳೆದಂತಹ ಸಮಯಗಳಿವೆ. ನಾವು

ಯೋಚಿಸಿದಂತಹವುಗಳನ್ನು ಆರಾಧನೆಯ ನಿಗದಿಪಡಿಸಿದ ಕ್ರಮ, ಸಂದೇಶ ಮತ್ತು ಇತರ ವಿಷಯಗಳನ್ನು ಪಕ್ಕಕ್ಕೆ ಹಾಕುತ್ತೇವೆ. ನಮ್ಮ ಯೋಜನೆಗಳಿಗಿಂತ ಮಿಗಿಲಾಗಿ ದೇವರನ್ನು ಗೌರವಿಸುವ ಆಯ್ಕೆ ಮಾಡುತ್ತೇವೆ.

## ಶಾರೀರಿಕ ತೋರ್ಪಡಿಸುವಿಕೆಗಳ ನಿರ್ವಹಣೆ

ಆತ್ಮನ ಸ್ವಾಭಾವಿಕವಾದ ಕಾರ್ಯಗಳನ್ನು ಆಹ್ವಾನಿಸುವಾಗ ಕೆಲವು ಜನರು ಅವರು ಸ್ವಂತ  ಶಾರೀರಿಕ ಉತ್ಸಾಹದ ಮೂಲಕವಾಗಿ ಆತ್ಮನ ಕಾರ್ಯ ಅನುಕರಣೆ ಮಾಡಲು ಪ್ರಯತ್ನಿಸುವುದರಲ್ಲಿ ತೊಡಗಿಸಿಕೊಳ್ಳುವುದು ಸಾಧ್ಯಕರವಾಗಿದೆ. ಸಭಾಪಾಲಕರು ಅಂತಹ ಪರಿಸ್ಥಿತಿಗಳಲ್ಲಿ ನಡೆಸಲು ಸಭಾಪಾಲಕರಿಗೆ ಜ್ಞಾನ ಮತ್ತು ಕೃಪೆಯನ್ನು ಇದು ತೆಗೆದುಕೊಳ್ಳುತ್ತದೆ. ನಮ್ಮ ಮಾರ್ಗವು ಯಾವಾಗಲೂ ಪ್ರೋತ್ಸಾಹದೊಂದಿಗೆ ಇರಬೇಕು ತಪ್ಪುಗಳನ್ನು ಮಾಡಲು ಜನರಿಗೆ ಜಾಗ ಕೊಡಿರಿ ಅವರಿಗೆ ನಿರುತ್ಸಾಹಗೊಳಿಸದೆ ಅಥವಾ ಅವರನ್ನು ಖಂಡಿಸದೇ ಪ್ರೀತಿಯಿಂದ ತಿದ್ದಿರಿ. ಕೆಲವು ನಿರ್ದಿಷ್ಟ ವ್ಯಕ್ತಿಗಳು ಅಕ್ರಮವಾಗಿ ಪ್ರೇರಣೆಹೊಂದಿದ್ದರೆ ಮತ್ತು ಆತ್ಮನ ಬದಲಾಗಿ ಶಾರೀರಿಕವಾಗಿ ಕಾರ್ಯಗಳನ್ನು ಮಾಡುತ್ತಿದ್ದರೆ ಅವರ ಜೊತೆ ಖಾಸಗಿಯಾಗಿ ವ್ಯವಹರಿಸಬೇಕು ಹೃದಯದ ಪ್ರೇರಣೆಗಳೊಡನೆ ವ್ಯವಹರಿಸಬೇಕು ಪರಿಪೂರ್ಣವಾದ ಸ್ಥಳೀಯ ಸಭೆ ಇಲ್ಲ ಎಂಬುದು ಸತ್ಯಕರವಾಗಿದೇ ಆದ್ದರಿಂದ ನೀವು ಒಂದು ಹಂತ ಅಥವಾ ಇತರ ಹಂತದಲ್ಲಿ ಕೆಲವು ಮೊತ್ತದ ಶಾರೀರಿಕ ತೋರ್ಪಡಿಸುವಿಕೆಗಳನ್ನು ನೀವು ಹೊಂದಿರುವಂತ ಹೆಚ್ಚಿನ ಸಾಧ್ಯತೆಯಿರುತ್ತದೆ. ಆತ್ಮನ ಕಾರ್ಯಗಳನ್ನು ತಗ್ಗಿಸದಂತೆ ನಾವು ಎಚ್ಚರಿಕೆಯಿಂದ ಇರಬೇಕು ಕೇವಲ ಯಾಕೆಂದರೆ  ಶರೀರಕ್ಕೆ ಸಂಬಂಧಪಟ್ಟದ್ದನ್ನು ಪೂರ್ಣವಾಗಿ ತೊಡೆದುಹಾಕಲೂ ನಾವು ಪ್ರಯತ್ನಿಸುತ್ತಿರುತ್ತೇವೆ.

# 22

# ಸೇವೆಯಲ್ಲಿ ಸ್ತ್ರೀಯರು

ಈ ಅಧ್ಯಾಯದಲ್ಲಿ ಸೇವೆಯಲ್ಲಿರುವಂತಹ ಸ್ತ್ರೀಯರ ಪಾತ್ರವನ್ನು ನಾವು ಪರಿಗಣಿಸುತ್ತೇವೆ.

## ಸೇವೆಯಲ್ಲಿ ಸ್ತ್ರೀಯರು - ಅವಲೋಕನ

ದೇವರ ವಾಕ್ಯದ ಉದ್ದಕ್ಕೂ, ಅನೇಕ ಮಾರ್ಗಗಳಲ್ಲಿ ದೇವರ ಆತ್ಮನು ಸ್ತ್ರೀಯರ ಮೂಲಕವಾಗಿ ಕಾರ್ಯಮಾಡಿದ್ದಾನೆ. ಸ್ತ್ರೀಯರು ಮುನ್ನೆಡೆಸಲು, ಪ್ರವಾದಿಸಲೂ ಬಿಡುಗಡೆ ತರಲೂ ಮತ್ತು ಮುಂತಾದವುಗಳಲ್ಲಿ ಪವಿತ್ರಾತ್ಮನು ಚಲಿಸುವಂತೆ ಮಾಡಿದ್ದಾನೆ ಕೆಲವು ಉದಾಹರಣೆಗಳು ಇಲ್ಲಿವೆ:

## ಮಿರ್ಯಾಮಳು

ವಿಮೋಚನಕಾಂಡ 15:20,21

**ಆರೋನನ ಅಕ್ಕನಾದ ಮಿರ್ಯಾಮಳು ಪ್ರವಾದಿಯಾಗಿದ್ದು ದಮ್ಮಡಿಯನ್ನು ಕೈಯಲ್ಲಿ ತೆಗೆದುಕೊಂಡಳು ಸ್ತ್ರೀಯರೆಲ್ಲರೂ ದಮ್ಮಡಿಗಳನ್ನು ಹಿಡಿದು ನಾಟ್ಯವಾಡುತ್ತಾ ಆಕೆಯ ಹಿಂದೆ ಹೋಗುತ್ತಿರಲು ಮಿರ್ಯಾಮಳು ಅವರ ಹಾಡಿಗೆ ಹೀಗೆ ಪಲ್ಲವಿ ಹಾಡಿದಳು ಯೆಹೋವನನ್ನು ಗಾನ ಮಾಡಿರಿ ಆತನು ಮಹಾ ಜಯಶಾಲಿಯಾದನು ಕುದುರೆಗಳನ್ನು ರಾಹುತರನ್ನು ಸಮುದ್ರದಲ್ಲಿ ಕೆಡವಿ ನಾಶಮಾಡಿದ್ದಾನೆ.**

## *ದೆಬೋರಳು*

ನ್ಯಾಯಸ್ಥಾಪಕರು 4:4,5

**ಆ ಕಾಲದಲ್ಲಿ ಲಪ್ಪೀದೋತನ ಹೆಂಡತಿಯಾದ ದೆಬೋರಳೆಂಬ ಪ್ರವಾದಿನಿಯು ಇಸ್ರಾಯೇಲ್ಯರಲ್ಲಿ ನ್ಯಾಯತೀರಿಸುತ್ತಿದ್ದಳು ಆಕೆಯು ಎಫ್ರಾಯಿಮ್ ಬೆಟ್ಟದ ಸೀಮೆಯಲ್ಲಿ ರಾಮಕ್ಕೂ ಬೇತೇಲಿಗೂ ಮಧ್ಯದಲ್ಲಿರುವ ದೆಬೋರಲ ಖರ್ಜೂರ ವೃಕ್ಷವೆಂದು ಹೆಸರುಗೊಂಡ ಮರದ ಕೆಳಗೆ ಆಸೀನಳಾಗಿರವಲ್ಲಿ ಇಸ್ರಾಯೇಲ್ಯರು ನ್ಯಾಯ ನಿರ್ಣಯಕ್ಕೋಸ್ಕರ ಆಕೆಯ ಬಳಿಗೆ ಬರುತ್ತಿದ್ದರು.**

## ಹುಲ್ದಳು

2 ಅರಸುರುಗಳು 22:14,15 (2 ಪೂರ್ವಕಾಲ ವೃತ್ತಾಂತ 34:22,23 ಸಹ ನೋಡಿರಿ)

**ಆಗ ಯಾಜಕನಾದ ಹಿಲ್ಕೀಯನು ಅಹೀಕಾಮ್, ಅಕ್ಬೋರ್, ಶಾಫಾನ್, ಅಸಾಯ ಎಂಬವರು ಹುಲ್ದ ಎಂಬ ಪ್ರವಾದಿನಿಯ ಬಳಿಗೆ ಹೋಗಿ ಆಕೆಯ ಹತ್ತಿರ ವಿಚಾರಿಸಿದರು. ಹರ್ಹಸನ ಮೊಮ್ಮಗನೂ ತಿಕ್ವನ ಮಗನೂ ರಾಜ ವಸ್ತ್ರಗಾರದ ಅಧಿಪತಿಯೂ ಆಗಿದ್ದ ಶಲ್ಲೂಮನು ಈಕೆಯ ಗಂಡನು ಈಕೆಯ ಯೆರೂಸಲೇಮಿನ ಎರಡನೆಯ ಕೇರಿಯಲ್ಲಿ ವಾಸವಾಗಿದ್ದಳು ಹುಲ್ದಳು ಅವರಿಗೆ ನಿಮ್ಮನ್ನು ಕಳುಹಿಸಿದವನಿಗೆ ಇಸ್ರಾಯೇಲ್ ದೇವರಾದ ಯೆಹೋವನ ಮಾತುಗಳನ್ನು ತಿಳಿಸಿರಿ.**

ಯೆಶಾಯನ ಹೆಂಡತಿಯು ಸಹ ಒಬ್ಬ ಪ್ರವಾದಿನಿ ಎಂಬುದಾಗಿ ಕರೆಯಲ್ಪಟ್ಟಿದ್ದಳು ಆದ್ದಾಗ್ಯೂ ಆಕೆಯು ಮಾಡಿದಂತಹ ಸೇವೆಯ ಬಗ್ಗೆ ಯಾವುದೇ ದಾಖಲೆಯಿಲ್ಲ (ಯೆಶಾಯ 8:1-3).

## ಎಸ್ತೇರಳು

ಆತನ ಜನರನ್ನು ಬಿಡುಗಡೆಗೊಳಿಸಲು ದೇವರು ಎಸ್ತೇರಳನ್ನು ಉಪಯೋಗಿಸಿದರು.

## ಅನ್ನಳು

ಲೂಕ 2:36-38

**ಇದಲ್ಲದೆ ಅಸೇರನ ಕುಲದ ಫನುವೇಲನ ಮಗಳಾದ ಅನ್ನಳೆಂಬ ಒಬ್ಬ ಪ್ರವಾದಿನಿ ಇದ್ದಳು ಆಕೆ ಬಹಳ ಮುಪ್ಪಿನವಳು ಆಕೆ ತನ್ನ ಕನ್ಯಾವಸ್ಥೆ ಕಳೆದ ತರುವಾಯ ಗಂಡನ ಕೂಡ ಏಳು ವರುಷ ಬಾಳುವೆ ಮಾಡಿ ಎಂಭತ್ತು ನಾಲ್ಕು ವರುಷ ವಿಧವೆಯಾಗಿದ್ದಳು ಆಕೆ ದೇವಾಲಯವನ್ನು ಬಿಟ್ಟು ಹೋಗದೆ ಉಪವಾಸ ವಿಜ್ಞಾಪನೆಗಳಿಂದ ರಾತ್ರಿ ಹಗಲೂ ದೇವರ ಸೇವೆಯನ್ನು ಮಾಡುತ್ತಿದ್ದಳು ಆಕೆ ಅದೇ ಗಳಿಗೆಯಲ್ಲಿ ಹತ್ತಿರಕ್ಕೆ ಬಂದು ದೇವರಿಂದಾದ ಉಪಕಾರವನ್ನು ನೆನಸಿ ಕೊಂಡಾಡಿದ್ದಲ್ಲದೆ ಯೆರೂಸಲೇಮಿನ ಬಿಡುಗಡೆಯನ್ನು ಹಾರೈಸುತ್ತಿದ್ದವರೆಲ್ಲರ ಸಂಗಡ ಆತನ ವಿಷಯವಾಗಿ ಮಾತಾಡುವವಳಾದಳು.**

## ಫಿಲಿಪ್ಪನ ಹೆಣ್ಣುಮಕ್ಕಳು

ಅಪೊಸ್ತಲರ ಕೃತ್ಯಗಳು 21:8,9

**ಒಂದು ದಿವಸ ಇದ್ದು ಮರುದಿನ ಹೊರಟು ಕೈಸರೈಯಕ್ಕೆ ಬಂದು ಸೌವಾರ್ತಿಕನಾದ ಫಿಲಿಪ್ಪನ ಮನೆಗೆ ಹೋಗಿ ಅವನ ಬಳಿಯಲ್ಲಿಯೇ ಇಳುಕೊಂಡೆವು. ಅವನು ಆ ಏಳ್ವರಲ್ಲಿ ಒಬ್ಬನು ಅವನಿಗೆ ಮದುವೆಯಾಗದ ನಾಲ್ಕುಮಂದಿ ಹೆಣ್ಣುಮಕ್ಕಳಿದ್ದರು.**

## ಒಬ್ಬ ಸ್ತ್ರೀಯು ಸಹ ಸೇವಕರಾಗಿರಬಹುದು?

ಮೊದಲು ಎರಡು ಲಿಂಗದವರಿಗೂ ಕೊಡಲ್ಪಟ್ಟಂತಹ ಕೃಪೆಯಲ್ಲಿ ಸಮಾನತೆ ಕ್ರಿಸ್ತನಲ್ಲಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು.

ಗಲಾತ್ಯದವರಿಗೆ 3:28
**ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ.**

1 ಪೇತ್ರನು 3:7
**ಅದೇ ರೀತಿಯಾಗಿ ಪುರುಷರೇ ಸ್ತ್ರೀಯು ಪುರುಷನಿಗಿಂತ ಬಲಹೀನಳೆಂಬದನ್ನು ಜ್ಞಾಪಕ ಮಾಡಿಕೊಂಡು ನಿಮ್ಮ ಹೆಂಡತಿಯರ ಸಂಗಡ ವಿವೇಕದಿಂದ ಒಗೆತನ ಮಾಡಿರಿ ಅವರು ಜೀವವರಕ್ಕೆ ನಿಮ್ಮೊಂದಿಗೆ ಬಾಧ್ಯರಾಗಿದ್ದಾರೆಂದು ತಿಳಿದು ಅವರಿಗೆ ಮಾನವನ್ನು ಸಲ್ಲಿಸಿರಿ ಹೀಗೆ ನಡೆದರೆ ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿಯಿರುವುದಿಲ್ಲ.**

ಎರಡನೆಯದು ಹೊಸ ಒಡಂಬಡಿಕೆಯ ಸೇವೆಯು ''ಪುರುಷರಿಗೆ'' ಮಾತ್ರ ಎಂಬುದಾಗಿ ನಿರ್ಬಂಧಿಸಲಾಗಿಲ್ಲ.

ಮತ್ತಾಯ 4:4
**''ಮನುಷ್ಯನು ರೊಟ್ಟಿತಿಂದ ಮಾತ್ರದಿಂದ ಬದುಕುವದಿಲ್ಲ''**

ಗ್ರೀಕ್ ಭಾಷೆಯ ಆಂಥ್ರೋಪೊಸ್ (Mnyhtpqp) ಲಿಂಗವು ಅಸ್ಪಷ್ಟವಾಗಿದೆ.

2 ತಿಮೊಥೆಯನಿಗೆ 2:2
**''ನೀನು ನಿನ್ನಿಂದ ಅನೇಕ ಸಾಕ್ಷಿಗಳ ಮುಂದೆ ಕೇಳಿದ ಉಪದೇಶವನ್ನು ಇತರರಿಗೆ ಬೋಧಿಸ ಶಕ್ತರಾದ ನಂಬಿಗಸ್ತ ಮನುಷ್ಯರಿಗೆ (ಆಂಥ್ರೂ ಪೊಯಿಸ್) ಒಪ್ಪಿಸಿಕೊಡು''**

ಗ್ರೀಕ್‌ನಲ್ಲಿ ''ಆಂಥೋಪ್ರೊಯಿಸ್'' ಎಂಬುದು ''ಆಂಥ್ರೋಪೊಸ್'' ಎಂಬ ಪದದ ಬಹುವಚನದ ಅರ್ಥವು ''ಒಬ್ಬ ಮನುಷ್ಯ''ಗಂಡು ಅಥವಾ ಹೆಣ್ಣು ಆಗಿರಬಹುದು. ಪೌಲನು ಮನುಷ್ಯನಿಗೆ ಗ್ರೀಕ ಪದವಾದಂತಹ ''ಅನೆರ್'' (Aner) ಸಂಪೂರ್ಣವಾಗಿ ಪುಲ್ಲಿಂಗವಾಗಿರುವುದನ್ನು ಉಪಯೋಗಿಸಿಲ್ಲ ಆದರೆ ''ಆಂಥ್ರೂಪೊಯಿಸ್'' ಎಂಬ ಪದದ ಲಿಂಗವು ತಟಸ್ಥವಾಗಿದೆ.

ಎಫೆಸದವರಿಗೆ 4:8,11

**ಮನುಷ್ಯರಿಗೆ ದಾನಗಳನ್ನು ಮಾಡಿದನು (ಆಂಥ್ರೊಪೊಯಿಸ್) ಆತನು ಕೆಲವರನ್ನು (''ಕೆಲವರು'' ಅವನು ಅಥವಾ ಅವಳು)**

ಆತ್ಮನ ಸುರಿಸುವಿಕೆಯು ಪುರುಷ ಮತ್ತು ಸ್ತ್ರೀಯರು ಇಬ್ಬರಿಗೂ ಇದೆ (ಅಪೊಸ್ತಲರ ಕೃತ್ಯಗಳು 2:17,18) ಪವಿತ್ರಾತ್ಮನ ದೀಕ್ಷಾಸ್ನಾನದ ಉದ್ದೇಶವು ಸುವಾರ್ತೆಯನ್ನು ಸಾರುವುದು, ಮತ್ತು ಪಶ್ಚಾತ್ತಾಪದ ಘೋಷಣೆ ಮತ್ತು ಪಾಪಗಳ ವಿಮೋಚನೆಯಿಂದ (ಅಪೊಸ್ತಲರ ಕೃತ್ಯಗಳು 24:27) ಯೇಸುಕ್ರಿಸ್ತನಿಗಾಗಿ ಸಾಕ್ಷಿಯಾಗಿರುವುದರ ಬಲವನ್ನು ಪಡೆದುಕೊಳ್ಳುವುದಾಗಿದೆ. (ಅಪೊಸ್ತಲರ ಕೃತ್ಯಗಳು 1:8 ಲೂಕ 24: 49) ಪುರುಷರು ಮಾಡುವಂತಹ ಸೇವೆಯ ರೀತಿಯಲ್ಲಿಯೇ ಮಾಡಲೂ ಸ್ತ್ರೀಯರು ಪುರುಷರ ರೀತಿಯಲ್ಲಿಯೇ ಬಲದೊಡನೆ ಕೊನೆಗೊಳ್ಳುತ್ತಾರೆ.

1 ಕೊರಿಂಥದವರಿಗೆ 12:1-7 ರಲ್ಲಿನ ಆತ್ಮಿಕ ವರಗಳ ಅಭ್ಯಾಸದಲ್ಲಿ ಪುರುಷರಿಗೆ ಮಾತ್ರ ಎಂಬುದಾಗಿ ಯಾವುದೇ ಮಿತಿಯಿಲ್ಲ ಕಾರ್ಯಸ್ಥಾನದಲ್ಲಿ ಬರೀ ಪುರುಷರಿಗೆ ಮಾತ್ರ ಎಂಬ ನಿರ್ಬಂಧವಿಲ್ಲ (1 ಕೊರಿಂಥದವರಿಗೆ 12:28)

ಹೊಸ ಒಡಂಬಡಿಕೆಯಲ್ಲಿ, ಸೇವೆಯ ಕಾರ್ಯಸ್ಥಾನದಲ್ಲಿ ಮತ್ತು ಆತ್ಮಿಕ ವರಗಳ ಅಭ್ಯಾಸದಲ್ಲಿ ಆತ್ಮಿಕ ಬಲ ಮತ್ತು ಕೃಪೆಯನ್ನು ಪಡೆದುಕೊಳ್ಳುವುದರಲ್ಲಿ ಪುರುಷ ಮತ್ತು ಸ್ತ್ರೀಯರು ಇಬ್ಬರ ನಡುವೆ ಅಮಾನತೆಯನ್ನು ನಾವು ಗಮನಿಸುತ್ತೇವೆ. ಆದ್ದರಿಂದ ಪುರುಷರು ಸೇವೆ ಮಾಡುವ ರೀತಿಯಲ್ಲಿಯೇ ಸ್ತ್ರೀಯರು ಮಾಡಬಹುದು. ಪೌಲನು ಅಕ್ವಿಲನೂ ಮತ್ತು ಅವನ ಹೆಂಡತಿಯಾದ ಪ್ರಿಸ್ಕಿಲ್ಲಳೂ ಪೌಲನ ಸೇವೆಯ ಭಾಗವಾಗಿ ಇದ್ದರು ಮತ್ತು ಇಬ್ಬರು ಸೇವೆ ಸಲ್ಲಿಸಿದರು. ಪೌಲನು ಪೊಯಿಬೆ ಎಂಬ ಸ್ತ್ರೀಯನ್ನು ಒಬ್ಬ ಸೇವಕ ಎಂಬುದಾಗಿ (ಮಹಿಳಾ ಡೀಕನ್) ಕರೆಯುತ್ತಾನೆ. (ರೋಮಾಪುರದವರಿಗೆ 16:1) ಮತ್ತು ಮತ್ತೊಬ್ಬ ಸ್ತ್ರೀಯಾದ ಯೂನ್ಯಳು ಪ್ರಸಿದ್ಧ ಅಪೊಸ್ತಲ ಎಂಬುದಾಗಿ ಹೊಗಳುತ್ತಾನೆ. (ರೋಮಾಪುರದವರಿಗೆ 16:7) ಮತ್ತು ಸೇವೆ ಮಾಡುತ್ತಿದ್ದವರ ಭಾಗವಾಗಿ ಇತರರ ಮಧ್ಯದಲ್ಲಿ ಅನೇಕ ಸ್ತ್ರೀಯರ ಪಟ್ಟಿಯನ್ನು ನೋಡುತ್ತೇವೆ.

## ನಾಯಕತ್ವದಲ್ಲಿ ಸ್ತ್ರೀಯರು

ರೋಮಾಪುರದವರಿಗೆ 12:4-8

**ಯಾಕೆಂದರೆ ನಮಗೆ ಒಂದೇ ದೇಹದಲ್ಲಿ ಬಹಳ ಅಂಗಗಳಿರಲಾಗಿ ಆ ಎಲ್ಲಾ ಅಂಗಗಳಿಗೆ ಹೇಗೆ ಒಂದೇ ಕೆಲಸ ಇರುವುದಿಲ್ಲವೋ ಹಾಗೆಯೇ ನಾವೆಲ್ಲರು ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು**

**ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ. ದೇವರು ನಮಗೆ ಕೃಪೆ ಮಾಡಿದ ಪ್ರಕಾರ ನಾವು ಬೇರೆ ಬೇರೆ ವರಗಳನ್ನು ಹೊಂದಿದ್ದೇವೆ ಹೊಂದಿದ ವರವು ಪ್ರವಾದನೆಯ ರೂಪವಾಗಿದ್ದರೆ ನಮ್ಮ ವಿಶ್ವಾಸ ವರಕ್ಕೆ ತಕ್ಕ ಹಾಗೆ ಪ್ರವಾದನೆ ಹೇಳೋಣ ಅದು ಸಭಾಸೇವೆಯ ರೂಪವಾಗಿದ್ದರೆ ಸಭಾಸೇವೆಯನ್ನು ಮಾಡುತ್ತಾ ಇರೋಣ, ಬೋಧಿಸುವವನು ಬೋಧಿಸುವದರಲ್ಲಿಯೂ ಬುದ್ಧಿ ಹೇಳುವವನು ಬುದ್ಧಿ ಹೇಳುವದರಲ್ಲಿಯೂ ನಿರತನಾಗಿರಲಿ ದಾನ ಕೊಡುವವನು ಯಥಾರ್ಥ ಮನಸ್ಸಿನಿಂದ ಕೊಡಲಿ ಹಿರೀತನ ನಡಿಸುವವನು ಆಸಕ್ತಿಯಿಂದ ನಡಿಸಲಿ ಕಷ್ಟದಲ್ಲಿರುವವರಿಗೆ ಉಪಕಾರ ಮಾಡುವವನು ಸಂತೋಷವಾಗಿ ಮಾಡಲಿ.**

ಇಲ್ಲಿ ಪಟ್ಟಿ ಮಾಡಿರುವಂತ ಇತರ ವರಗಳಂತೆ ಪುರುಷ ಮತ್ತು ಸ್ತ್ರೀ ಇಬ್ಬರಿಗೂ ನಾಯಕತ್ವ ವರವು ಕೊಡಲ್ಪಟ್ಟಿದೆ ಇಂತಹ ವರಗಳು ಅಂಗದಲ್ಲಿ ಕಾರ್ಯ ನಿರ್ವಹಿಸಲು ಮತ್ತು ವಿಶ್ವಾಸಿಗಳ ಪಾತ್ರ ಕೈಗೊಳ್ಳಲೂ ಅಧಿಕಾರ ಕೊಡುವುದಾಗಿದೆ. ಆದ್ದರಿಂದ ಒಬ್ಬ ಸ್ತ್ರೀಯು ಸಹ ಒಂದು ಪಾತ್ರದಲ್ಲಿ ಇರಬೇಕು ಮತ್ತು ನಾಯಕತ್ವದಲ್ಲಿ ಕಾರ್ಯ ಮಾಡಬೇಕು ಅದುದರಿಂದ ನಾಯಕತ್ವದ ಒಂದು ವರದ ಮೂಲಕವಾಗಿ ಕಾರ್ಯ ನೆರವೇರಿಸಲೂ ಅಧಿಕಾರ ಹೊಂದಿದವರಾಗಿದ್ದಾರೆ.

ನಾವು ಹಿಂದಿನ ವಿಭಾಗದಲ್ಲಿ ನೋಡಿದಂತೆ ಎಫೆಸದವರಿಗೆ 4:11 ಮತ್ತು 1 ಕೊರಿಂಥದವರಿಗೆ 12:28 ರಲ್ಲಿ ಪಟ್ಟಿ ಮಾಡಿದಂತಹ ಸೇವಾಕಾರ್ಯಸ್ಥಾನಗಳಾದ ಅಪೊಸ್ತಲರು, ಪ್ರವಾದಿ, ಸಭಾಪಾಲಕ, ಬೋಧಕ ಅಥವಾ ಸುವಾರ್ತಿಕ ಇವುಗಳು ಪುರುಷ ಮತ್ತು ಸ್ತ್ರೀಯರು ಇಬ್ಬರಿಗೂ ಕೊಡಲ್ಪಟ್ಟಿದೆ. ಇಂತಹ ಯಾವುದೇ ಒಂದು ಕಾರ್ಯಸ್ಥಾನದಲ್ಲಿ ಯಾವುದೇ ಸ್ತ್ರೀಯು ಸೇವೆ ಮಾಡುತ್ತಿದ್ದರೆ ಸಾಮಾನ್ಯವಾಗಿ ಆಕೆಯು ಒಬ್ಬ ನಾಯಕಳಾಗಿ ಸೇವೆ ಸಲ್ಲಿಸುತ್ತಿರುತ್ತಾಳೆ. ಸಭೆಯಲ್ಲಿ ಸ್ತ್ರೀಯರನ್ನು ಅವರ ಸೇವೆಗಳ ಮುಖ್ಯಸ್ಥರಾಗಿ ಉಪಯೋಗಿಸುವುದನ್ನು ಮತ್ತು ಅನೇಕ ಸ್ತ್ರೀಯರನ್ನು ದೇವರು ಎಬ್ಬಿಸಿರುವುದನ್ನು ಮತ್ತು ಅವರ ಸೇವೆಗಳ ಮುಖ್ಯಸ್ಥರಾಗಿ ಉಪಯೋಗಿಸುವುದನ್ನು ನಾವು ನೋಡುತ್ತೇವೆ. ಉದಾಹರಣೆಗೆ: ಕ್ಯಾಥರಿನ ಕುಹ್ಲ್ಮನ್, ಆಮಿ ಸೆಮಲ್, ಮೆಕೊಫೆರ್ಸನ್, ಇವರು ಸುವಾರ್ತಿಕರಾಗಿದ್ದರು ಮತ್ತು ಪೊರ್ ಸ್ಕ್ವೊಯರ್ ಸಭೆಯ ಸಂಸ್ಥಾಪಕರು, ಮರಿಯಾ ವುಡ್ವರ್ಥ್ ಇತ್ತೆರ್, ಜಾಯ್ಸ್ ಮೆಯರ್ ಮತ್ತು ಇತರರು.

## ತಲೆ ಮತ್ತು ಮುಖಂಡತ್ವ

1 ಕೊರಿಂಥದವರಿಗೆ 11:3

**ಆದರೂ ಒಂದು ಸಂಗತಿಯನ್ನು ನೀವು ತಿಳಿಯಬೇಕೆಂದು ನನ್ನ ಇಷ್ಟ ಅದೇನಂದರೆ ಪ್ರತಿ ಪುರುಷನಿಗೂ ಕ್ರಿಸ್ತನು ತಲೆ, ಸ್ತ್ರೀಗೆ ಪುರುಷನು ತಲೆ ಕ್ರಿಸ್ತನಿಗೆ ದೇವರು ತಲೆ ಆಗಿದ್ದಾನೆ.**

ತಂದೆ ಮತ್ತು ಮಗನು ಸಹ ಸಮಾನರಾಗಿದ್ದಾರೆ. ಅವರು ದೇವರಾಗಿದ್ದಾರೆ ಆದಾಗ್ಯೂ ದೇವರ ವ್ಯವಹಾರದಲ್ಲಿ ಮತ್ತು ದೇವರ ಯೋಜನೆಯಲ್ಲಿ, ಮಗನು ಚಿತ್ತಪೂರ್ವಕವಾಗಿ ತಂದೆಗೆ ಒಪ್ಪಿಸುತ್ತಾನೆ ಆದ್ದರಿಂದ ಕ್ರಿಸ್ತನ ತಲೆಯು ದೇವರಾಗಿದ್ದಾನೆ.

1 ಕೊರಿಂಥದವರಿಗೆ 11:11,12

**ಆದರೂ ಕರ್ತನ ಸಂಬಂಧದಲ್ಲಿ ಪುರುಷರಿಲ್ಲದೆ ಸ್ತ್ರೀಯರೂ ಸ್ತ್ರೀಯರಿಲ್ಲದೆ ಪುರುಷರೂ ಸಂಪೂರ್ಣರಲ್ಲ ಸ್ತ್ರೀಯು ಪುರುಷನಿಂದ ಉತ್ಪತ್ತಿಯಾದಳು ಹಾಗೆಯೇ ಪುರುಷನು ಸ್ತ್ರೀ ಮೂಲಕವಾಗಿ ಹುಟ್ಟುತ್ತಾನೆ. ಸಮಸ್ತಕ್ಕೂ ದೇವರೇ ಕಾರಣನು.**

ಅದೇ ರೀತಿಯಾಗಿ, ಪುರುಷ ಮತ್ತು ಸ್ತ್ರೀಯರು ಸಹ ಸಮಾನರಾಗಿದ್ದಾರೆ ಮತ್ತು ಒಟ್ಟಾಗಿ ದೇವರ ಕೃಪೆಯ ವಾರಸುದಾರರಾಗಿದ್ದಾರೆ. (ಗಲಾತ್ಯದವರಿಗೆ 3:28 1 ಪೇತ್ರ 3:7) ದೇವರ ಸರ್ಕಾರದಲ್ಲಿ ಪುರುಷನು ತಲೆಯಾಗಿದ್ದಾನೆ ಉದಾಹರಣೆಗೆ, ಕುಟುಂಬದ ದೇವರ ಸರ್ಕಾರದಲ್ಲಿ ಹೆಂಡತಿಗೆ ಗಂಡನು ತಲೆಯಾಗಿದ್ದಾನೆ

ಪುರುಷನು ಇಲ್ಲದಂತಹ ಪರಿಸ್ಥಿತಿಗಳಲ್ಲಿ ಒಬ್ಬ ಸ್ತ್ರೀಯನ್ನು ನಿರಂಕುಶವಾಗಿ ಒಬ್ಬ ಪುರುಷನ ''ಅಡಿಯಲ್ಲಿ'' ಬರಲು ಒತ್ತಾಯಿಸುವಂತದ್ದು ಸರಿಯಾದುದಲ್ಲ. ಉದಾಹರಣೆ ಮದುವೆಯಾಗದಿರುವಂತಹ ಒಬ್ಬ ಸ್ತ್ರೀಯು ಸೇವೆಯನ್ನು ನಡೆಸುತ್ತಿದ್ದರೆ, ದೇವರು ಆಕೆಯನ್ನು ಒಬ್ಬ ಸೇವಕರಾಗಿಯೂ ಮಾತ್ರವಲ್ಲದೆ ಒಬ್ಬ ನಾಯಕನಾಗಿ/ ಆಕೆಯ ಸೇವೆಯ ತಲೆಯಾಗಿ ದೇವರು ಆಕೆಯನ್ನು ಎಬ್ಬಿಸಿದ್ದಾನೆ ಎಂಬುದಾಗಿ ನಾವು ಅಂಗೀಕರಿಸಬೇಕು ಗಂಡನನ್ನು ಕಳೆದುಕೊಂಡಂತಹ ಒಬ್ಬ ಸ್ತ್ರೀಯು ಸೇವೆಯನ್ನು ಮುನ್ನೆಡುಸುತ್ತಿದ್ದರೆ, ಆಕೆಯನ್ನು ಒಬ್ಬ ಸ್ತ್ರೀ ಸೇವಕರು ಮತ್ತು ಆ ಒಂದು ಸೇವೆಯ ನಾಯಕರು ಎಂಬುದಾಗಿ ಅಂಗೀಕರಿಸಬೇಕು.

ಮುಖಂಡತ್ವದ ಎಲ್ಲೆಗಳನ್ನು ಸಹ ನಾವು ಅರ್ಥಮಾಡಿಕೊಳ್ಳಬೇಕು, ಗಂಡನು ತನ್ನ ಹೆಂಡತಿಯ ಮೇಲೆ ತಲೆಯಾಗಿದ್ದಾನೆ. ಆದ್ದರಿಂದ ಒಂದು ಸ್ಥಳೀಯ ಸಭೆಯ ಸನ್ನಿವೇಶದಲ್ಲಿ ಒಬ್ಬ ಪುರುಷ ಸಭಾಪಾಲಕನು, ಗಂಡನು ಅವನ ಹೆಂಡತಿಯ ಮೇಲೆ ತಲೆಯಾಗಿರುವಂತಹ ಕ್ಷೇತ್ರಗಳಲ್ಲಿ ಹೆಜ್ಜೆಯನ್ನಿಡಬಾರದು. ಆದ್ದರಿಂದ ಸಭಾಪಾಲಕರಾಗಿ, ನಿಮ್ಮ ಎಲ್ಲೆಗಳನ್ನು ನೀವು ತಿಳಿದುಕೊಂಡಿರಬೇಕು ಮತ್ತು ಗಂಡನ ಅಧಿಕಾರ ವ್ಯಾಪ್ತಿಯಲ್ಲಿರುವಂತಹ ಆಕೆಯ ಕ್ಷೇತ್ರಗಳಿಗೆ ಹೆಜ್ಜೆಯನ್ನಿಡಬಾರದು. ನೀವು ಆಕೆಗೆ ಸಲಹೆಗಳನ್ನು ಕೊಡಬಹುದು ಮತ್ತು ಸೇವೆಯ ಕ್ಷೇತ್ರದ ಬಗ್ಗೆ ಬಂದಾಗ ಮಾರ್ಗದರ್ಶನ ಕೊಡಬಹುದು ಆದರೆ ಇತರೆ ಎಲ್ಲಾ ಕ್ಷೇತ್ರಗಳಲ್ಲಿ ಆಕೆಯ ಗಂಡನು

ಆಕೆಗಾಗಿ ಜವಬ್ದಾರನಾಗಿದ್ದಾನೆ. ಸಭಾಪಾಲಕರು ಇಂತಹ ಕ್ಷೇತ್ರಗಳಲ್ಲಿ ಜಾಗರೂಕನಾಗಿರದಿದ್ದರೆ ಮತ್ತು ಸ್ತ್ರೀಯ ಗಂಡನು ಒದಗಿಸಬೇಕಾದಂತಹ ಮಾರ್ಗದರ್ಶನಗಳಲ್ಲಿ ಹಸ್ತಕ್ಷೇಪ ಮಾಡಿ ವಿಷಯಗಳನ್ನು ಮಾಡಲೂ ಪ್ರಾರಂಭಿಸಿದರೆ, ಸ್ತ್ರೀಯು ಸಭಾಪಾಲಕ ಅಥವಾ ಆಕೆಯ ಸ್ವಂತ ಗಂಡನಿಗೆ ಗಂಡನನ್ನು ಆಲಿಸಬೇಕಾ ಎಂಬುದರಲ್ಲಿ ಗೊಂದಲಕ್ಕೆ ಒಳಗಾಗುತ್ತಾರೆ. ಆದಾಗ್ಯೂ ಸತ್ಯವೇದವು ಬಹಳ ಸ್ಪಷ್ಟವಾಗಿದೆ ''ಸ್ತ್ರೀಯರೇ ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮ ನಿಮ್ಮ ಗಂಡಂದಿರಿಗೆ ಅಧೀನರಾಗಿರ್ರಿ'' (ಎಫೆಸದವರಿಗೆ 5:22).

## ನಿಮ್ಮ ಸ್ತ್ರೀಯು ನಿಶ್ಯಬ್ದತೆಯನ್ನು ಕಾಪಾಡಲಿ

ಈ ಎರಡು  ವಚನಭಾಗಗಳ ಅರ್ಥವಿವರಣೆಯು ಇವುಗಳು ಬರೆಯಲ್ಪಟ್ಟಂತಹ ಸನ್ನಿವೇಶ ಇನ್ನುಳಿದ ವಚನ ಭಾಗಗಳೊಡನೆ ಸ್ಥಿರವಾಗಿರಬೇಕು.

1 ಕೊರಿಂಥದವರಿಗೆ 14:34,35

**ದೇವಜನರ ಎಲ್ಲಾ ಸಭೆಗಳ ಮರ್ಯಾದೆಯ ಪ್ರಕಾರ ಸ್ತ್ರೀಯರು ಸಭೆಯ ಕೂಟಗಳಲ್ಲಿ ಸುಮ್ಮಗಿರಬೇಕು. ಮಾತಾಡುವುದಕ್ಕೆ ಅವರಿಗೆ ಅಪ್ಪಣೆಯಿಲ್ಲ ಅವರು ಅಧೀನದಲ್ಲಿರಬೇಕು ಧರ್ಮಶಾಸ್ತ್ರದಲ್ಲಿಯೂ ಹೀಗೆ ಹೇಳಿಯದೆಯಲ್ಲಾ ಅವರು ಏನಾದರೂ ತಿಳುಕೊಳ್ಳುವದಕ್ಕೆ ಅಪೇಕ್ಷಿಸಿದರೆ ಮನೆಯಲ್ಲಿ ತಮ್ಮ ಗಂಡಂದಿರನ್ನು ಕೇಳಲಿ ಸ್ತ್ರೀಯರು ಸಭೆಯಲ್ಲಿ ಮಾತಾಡುವದು ನಾಚಿಗೆಗೆಟ್ಟ ಕೆಲಸವಾಗಿದೆ.**

1 ಕೊರಿಂಥದವರಿಗೆ 14ನೇ ಅಧ್ಯಾಯದ ಪ್ರಾಥಮಿಕ ಗುರಿಯು ಸಭೆಯ ಕೂಡುವಿಕೆಯಲ್ಲಿ ಆತ್ಮಿಕ ವರಗಳನ್ನು ಉಪಯೋಗಿಸಲು ಪ್ರೋತ್ಸಾಹಿಸುವಂತದ್ದು ಆಗಿದೆ. ಆದರೆ ಕ್ರಮ ಮತ್ತು ಸಭ್ಯತೆಯನ್ನು ಪಾಲಿಸಬೇಕು.

ಈ ಒಂದು ಅಧ್ಯಾಯದಲ್ಲಿ, ಪೌಲನು ''ನಿಶ್ಯಬ್ದತೆ ಕಾಪಾಡಿರಿ'' ಎಂಬ ತಡೆಯಾಜ್ಞೆಯನ್ನು ಮೂರು ವಿಭಿನ್ನ ಪರಿಸ್ಥಿತಿಗಳನ್ನು ಪರಿಗಣಿಸಿ ಕೊಡುತ್ತಾನೆ: ಅನ್ಯಭಾಷೆಗಳಲ್ಲಿ ಮಾತಾಡುವುದು, ಪ್ರವಾದನೆ ಮತ್ತು ಸ್ತ್ರೀಯರು

- ಅರ್ಥವಿವರಣೆ ಹೇಳುವವರಿದ್ದರೆ ಮಾತ್ರ ಸಭೆಯ ಕೇಳುಗರಿಗೆ ಅನ್ಯಭಾಷೆಗಳಲ್ಲಿ ಮಾತನಾಡಬೇಕು ಇಲ್ಲದಿದ್ದರೆ ''*ಸುಮ್ಮಗಿರಬೇಕು*'' (1 ಕೊರಿಂಥದವರಿಗೆ 14:27,28)

- ಪ್ರವಾದನೆ ಹೇಳಲು ಅವಕಾಶ ತೆಗೆದುಕೊಳ್ಳಿರಿ, ನಿಮ್ಮ ಪ್ರವಾದನೆಯನ್ನು ನುಡಿದ ನಂತರ ಆಮೇಲೆ ಬೇರೆ ಯಾರಾದರೊಬ್ಬರು ಪ್ರವಾದಿಸಲು ಪ್ರೇರಿಸಲ್ಪಟ್ಟರೆ ನೀವು ''ಸುಮ್ಮನೆ ಇರ್ರಿ'' (1 ಕೊರಿಂಥದವರಿಗೆ 14:29,30).
- ಸ್ತ್ರೀಯರೇ ನಿಮಗೆ ಪ್ರಶ್ನೆಗಳಿದ್ದರೆ ಸಭೆಯಲ್ಲಿ ''ಸುಮ್ಮನೆ ಇರ್ರಿ'' ನಂತರ ಮನೆಯಲ್ಲಿ ನಿಮ್ಮ ಗಂಡಂದಿರ ಬಳಿಯಲ್ಲಿ ಕೇಳಿರಿ (1ಕೊರಿಂಥದವರಿಗೆ 14:34,35).

ಆದೇಶವು ಗುರಿಯಾಗಿದೆ, ಆತ್ಮಿಕ ವರಗಳನ್ನು ಅಭ್ಯಾಸಿಸುವುದನ್ನು ನಿಲ್ಲಿಸುವುದಲ್ಲ. ಅನ್ಯಭಾಷೆಯಲ್ಲಿ ಮಾತಾನಾಡುವುದು ಅಥವಾ ಪ್ರವಾದನೆಯನ್ನು ತಡೆಯಲು ತಡೆಯಾಜ್ಞೆಯಾಗಿ ''ನಿಶ್ಯಬ್ದವಾಗಿರಿ'' ಎಂಬುದನ್ನು ನಾವು ಬಳಸುವುದಿಲ್ಲ. ಆದ್ದರಿಂದ ಸಭೆಯಲ್ಲಿ ಇಂತಹ ತಡೆಯಾಜ್ಞೆಯನ್ನು ನೀಡಿ ಸ್ತ್ರೀಯರು ಪ್ರಸಂಗಿಸುವುದನ್ನು ನಾವು ಯಾಕೆ ತಡೆಯುತ್ತೇವೆ? ಈ ಒಂದು ವಚನ ಭಾಗದ ಸರಿಯಾದ ಅರ್ಥವು, ಸ್ತ್ರೀಯರು ಪ್ರಶ್ನೆಗಳನ್ನು ಹೊಂದಿದ್ದರೆ ಅದನುಸಿ ಸಭೆಯ ಆರಾಧನೆಯ ಸಮಯದಲ್ಲಿ ಕೇಳದೆ ಸೂಕ್ತವಾದ ಸಮಯದಲ್ಲಿ ಕೇಳಬೇಕು.

## ''ಒಬ್ಬ ಸ್ತ್ರೀಯು ಬೋಧಿಸುವುದನ್ನು ನಾನು ಅನುಮತಿಸುವುದಿಲ್ಲ''

1 ತಿಮೊಥೆಯನಿಗೆ 2:11-15

**ಸ್ತ್ರೀಯರು ಮೌನವಾಗಿದ್ದು ಪೂರ್ಣ ವಿಧೇಯರಾಗಿ ಉಪದೇಶವನ್ನು ಕೇಳಬೇಕು ಉಪದೇಶಮಾಡುವದಕ್ಕಾಗಲಿ ಪುರುಷರ ಮೇಲೆ ಅಧಿಕಾರ ನಡಿಸುವದಕ್ಕಾಗಲಿ ಪುರುಷರ ಮೇಲೆ ಅಧಿಕಾರ ನಡಿಸುವದಕ್ಕಾಗಲಿ ಸ್ತ್ರೀಯರಿಗೆ ನಾನು ಅಪ್ಪಣೆ ಕೊಡುವುದಿಲ್ಲ ಅವರು ಮೌನವಾಗಿರಬೇಕು ಮೊದಲು ನಿರ್ಮಿತನಾದವನು ಆದಾಮನಲ್ಲವೇ ಆಮೇಲೆ ಹವ್ವಳು ಇದಲ್ಲದೆ ಆದಾಮನು ವಂಚನೆಗೆ ಒಳಬೀಳಲಿಲ್ಲ ಸ್ತ್ರೀಯು ವಂಚನೆಗೆ ಒಳಬಿದ್ದು ಅಪರಾಧಿಯಾದಳು ಆದರೂ ಸ್ತ್ರೀಯರು ಮಾನಸ್ಥೆಯರಾಗಿ ನಂಬಿಕೆಯಲ್ಲಿಯೂ ಪ್ರೀತಿಯಲ್ಲಿಯೂ ಪರಿಶುದ್ಧತೆಯಲ್ಲಿಯೂ ನೆಲೆಗೊಂಡಿದ್ದರೆ ಮಕ್ಕಳನ್ನು ಹೆರುವುದರಲ್ಲಿ ರಕ್ಷಣೆ ಹೊಂದುವರು.**

ಈ ಒಂದು ವಚನಭಾಗವು, ಸ್ತ್ರೀಯರು ಉಪದೇಶ ಮಾಡುವುದನ್ನು ಸಂಪೂರ್ಣವಾಗಿ ತಡೆಗಟ್ಟಿರುವುದು ಕಾಣಿಸುತ್ತದೆ ನಾವು ಇದನ್ನು ಪೌಲನ ಸ್ವಂತ ಸೇವೆಯ ಅಭ್ಯಾಸಗಳು, ಯಾವ ಸನ್ನಿವೇಶದಲ್ಲಿ ತಿಮೊಥೆಯನಿಗೆ ಬರೆಯಲ್ಪಟ್ಟ ಪೌಲನ ಪತ್ರಿಕೆಯ ಸನ್ನಿವೇಶ ಮತ್ತು ಉಳಿದ ಇತರ ವಚನಭಾಗಗಳ ಬೆಳಕಿನಲ್ಲಿ ಅರ್ಥ ವಿವರಣೆ ಮಾಡಬೇಕು.

ರಿಚರ್ಡ ಮತ್ತು ಕ್ಯಾಥರೀನ್ ಕ್ಲಾರ್ಕ್ ಕ್ರೋಜರ್ ತಮ್ಮ ನಾನು ಬಳಲುತ್ತೇನೆ ಒಂದು ಸ್ತ್ರೀ ಅಲ್ಲ ಎಂಬ ಪುಸ್ತಕದಲ್ಲಿ ಮೊದಲ ಶತಮಾನದ ಸಭೆಯು ಸ್ತ್ರೀ ಯಾಜಕಿಯಾದ

ಡಯಾನಾ ನಿರ್ದಿಷ್ಟ ಸಾಂಸ್ಕೃತಿಕ ಪೂಜೆ ಆಚರಣೆಗಳನ್ನು ಆಕ್ರಮಣ ಮಾಡಿದ್ದರ ಕುರಿತು ವಿವರಿಸುತ್ತಾರೆ. ಈ ಯಾಜಕಿಯರು ಲೈಂಗಿಕತೆ ಮತ್ತು ಆತ್ಮಿಕತೆಯ ಬಗ್ಗೆ ಧರ್ಮ ನಿಂದೆಯ ಕಲ್ಪನೆಗಳನ್ನು ಪ್ರಚಾರ ಮಾಡಿದರು ಮತ್ತು ಕೆಲವು ಬಾರಿ ಸ್ತ್ರೀಯ ಶ್ರೇಷ್ಟತೆ ಘೋಷಿಸುವ ಮತ್ತು ಪುರುಷರ ಮೇಲೆ ಶಾಪಗಳನ್ನು ಅವರು ಉಚ್ಚರಿಸುವ ಧರ್ಮಾಚಾರಣೆಗಳನ್ನು ಮಾಡಿದರು. ಪೌಲನು ಎಫೆಸದವರಿಗೆ ಹೆಚ್ಚಾಗಿ ಹೇಳುತ್ತಿರುವಂತಹದ್ದು ಇದೇ'' ಸ್ತ್ರೀಯರು ಇಂತಹ ತಪ್ಪಾದ ಸಾಂಸ್ಕೃತಿಕ ಧರ್ಮ ದ್ರೋಹಿ ಉಪದೇಶಗಳನ್ನು ನಾನು ಅನುಮತಿಸುವುದಿಲ್ಲ. ವಿಗ್ರಹಾರಾಧಕ ಆಚರಣೆಗಳನ್ನು ಮಾಡುವ ಮೂಲಕ ಪುರುಷರಿಂದ ಅಧಿಕಾರವನ್ನು ಪಡೆದುಕೊಳ್ಳಲು ನಾನು ಅವರಿಗೆ ಅನುಮತಿಸುವುದಿಲ್ಲ'' ಕೆಲವು ಕ್ರೈಸ್ತರು ಊಹಿಸಿದಂತೆ ಅವನು ಹೇಳುತ್ತಿಲ್ಲ ''ನಾನು ದೈವಿಕ ಕ್ರೈಸ್ತ ಸ್ತ್ರೀಯರು ಸಹ ಸತ್ಯವೇದದ ಉಪದೇಶ ಮಾಡಲು ಅನುಮತಿ ನೀಡುವುದಿಲ್ಲ ಜೆ, ಲಿ ಗ್ರೇಡಿ, ಸಭೆಯು ಸ್ತ್ರೀಯರಿಗೆ ಹೇಳುವ ಹತ್ತು ಸುಳ್ಳುಗಳು ಲೇಖನ 20050204105114 ಸ್ಟ್ರಾಂಗ್ ಕಮ್ಯುನಿಕೇಷನ್ ನಿಂದ www.spiritledwoman.comನಲ್ಲಿ ಇಲ್ಲಿರುವಂತಹ ಸಮಸ್ಯೆಯು ಅಧಿನತೆ ಮತ್ತು ಸ್ತ್ರೀಯರ ಶ್ರೇಷ್ಟತೆಯ ಮೇಲೆ ಸಾಂಸ್ಕೃತಿಕ ಉಪದೇಶದ ಬೆಳಕಿನಲ್ಲಿ ನಾಯಕತ್ವ ಮತ್ತು ಬೋಧನೆಗೆ ಬರುವಾಗ ಪುರುಷರಿಗೆ ಕೊಡಬೇಕು. ''ಆದಾಮನು ಮೊದಲೂ ಸೃಷ್ಟಿಸಲ್ಪಟ್ಟನು'' ಎಂಬುದನ್ನು ತಿಳಿಸುವ ದೇವರ ಸರ್ಕಾರದಲ್ಲಿ ಪುರುಷನ ಮುಖಂಡತ್ವವನ್ನು ಪೌಲನು ನೆನಪಿಸುತ್ತಾನೆ. ಆದುದರಿಂದ ದೇವರ ಸೇವೆ ಮಾಡುವುದರಲ್ಲಿ ಸ್ತ್ರೀಯರಿಗೆ ಇದು ಒಂದು ನಿಷೇಧವಲ್ಲ ಆದರೆ ಪುರುಷರಿಗೆ ಸಕ್ರಿಯ ಸಲ್ಲಿಕೆ ಮತ್ತು ಸ್ಥಳೀಯ ಸಭೆಯ ವ್ಯವಸ್ಥೆಯಲ್ಲಿ ಸಾಂಸ್ಕೃತಿಕ ಸನ್ನಿವೇಶದಲ್ಲಿ ಒಂದು ಕ್ರಮವಾದ ನಡವಳಿಕೆಯ ಸಂಕೇತವಾಗಿದೆ.

1 ತಿಮೊಥೆಯನಿಗೆ 2:14

**ಇದಲ್ಲದೆ ಆದಾಮನು ವಂಚನೆಗೆ ಒಳಬೀಳಲಿಲ್ಲ ಸ್ತ್ರೀಯು ವಂಚನೆಗೆ ಒಳಬಿದ್ದು ಅಪರಾಧಿಯಾದಳು.**

ಈ ವಚನವು ಸ್ತ್ರೀಯರು ಬಹಳ ಸುಲಭವಾಗಿ ವಂಚನೆಗೆ ಒಳಗಾಗುತ್ತಾರೆ ಎಂಬುದಾಗಿ ಸೂಚಿಸುವುದಿಲ್ಲ. ಅಪೊಸ್ತಲನಾದ ಪೌಲನು ಆದಿಕಾಂಡ 3:1-7 ರಲ್ಲಿ ಜರುಗಿದದ್ದನ್ನು ಸರಳವಾಗಿ ಹೇಳುತ್ತಾನೆ. ಸರ್ಪವು ನೇರವಾಗಿ ಹವ್ವಳೊಡನೆ ಮಾತಾಡಿತು, ಅವಳಿಗೆ ಸುಳ್ಳು ಹೇಳಿತು, ದೇವರು ಅವಳಿಗೆ ಹೇಳಿದ್ದನ್ನು ತಿರುಚಿ ಹಾಕಿತು. ಆಕೆಯನ್ನು ವಂಚಿಸಿತು (2 ಕೊರಿಂಥದವರಿಗೆ 11:3) ಮತ್ತು ಮೊದಲು ಆಕೆಯು ತಿನ್ನುವಂತೆ ಮಾಡಿತು. ಹವ್ವಳು ಆದಾಮನಿಗೆ ಹಣ್ಣನ್ನು ಕೊಟ್ಟಳು ಮತ್ತು ಪ್ರಶ್ನೆಮಾಡದೆ ಅವನು

ಹಣ್ಣನ್ನು ತಿಂದನು ಇಬ್ಬರು ದೇವರಿಗೆ ಅವಿಧೇಯರಾದರು ಇಬ್ಬರು ಪಾಪ ಮಾಡಿದರು ಮತ್ತು ಇಬ್ಬರು ಬಿದ್ದು ಹೋದರು.

1 ತಿಮೊಥೆಯನಿಗೆ 2:15

**ಆದರೂ ಸ್ತ್ರೀಯರು ಮಾನಸ್ಥೆಯರಾಗಿ ನಂಬಿಕೆಯಲ್ಲಿಯೂ ಪ್ರೀತಿಯಲ್ಲಿಯೂ ಪರಿಶುದ್ಧತೆಯಲ್ಲಿಯೂ ನೆಲೆಗೊಂಡಿದ್ದರೆ ಮಕ್ಕಳನ್ನು ಹೆರುವುದರಲ್ಲಿ ರಕ್ಷಣೆ ಹೊಂದುವರು.**

ಆದಿಕಾಂಡ 3:16ರ ಬೆಳಕಿನಲ್ಲಿ ಹೆಂಡತಿಯು ಮಗುವಿಗೆ ಜನನ ಕೊಡುವ ಅವಧಿಯಲ್ಲಿ ಸುರಕ್ಷಿತವಾಗಿಟ್ಟಲ್ಪಟ್ಟಿರುತ್ತಾರೆ. ಎಂಬುದು ಸರಳವಾದ ಅರ್ಥವಾಗಿದೆ.

## ಸಮಾರೋಪ

ಯಾವುದೇ ರೀತಿಯಲ್ಲಿ ಸ್ತ್ರೀಯು ಸೇವೆ ಮಾಡದಿರುವ ಒಂದು ಸಭೆಯನ್ನು ಊಹಿಸಿಕೊಳ್ಳಿರಿ! ಆತನ ರಾಜ್ಯದ ಉದ್ದೇಶಗಳಿಗಾಗಿ ದೇವರು ಸ್ತ್ರೀಯರನ್ನು ವಿಭಿನ್ನವಾದ ರೀತಿಗಳಲ್ಲಿ ಯಾವಾಗಲೂ ನಿರಂತರವಾಗಿ ಉಪಯೋಗಿಸುತ್ತಾನೆ ಎಂಬುದನ್ನು ನಾವು ಗುರ್ತಿಸಬೇಕು.

## ಹೆಚ್ಚಿನ ಅಧ್ಯಯನಕ್ಕಾಗಿ:

ರಿಚರ್ಡ ಮತ್ತು ಕ್ಯಾಥರಿನ್ ಕ್ಲಾರ್ಕ್ ಕ್ರೋಜರ್ ರವರ ''ನಾನು ಬಳಲುತ್ತೇನೆ, ಸ್ತ್ರೀಯಲ್ಲ'' ಎಂಬುದನ್ನು ಓದಿರಿ.

'ಗೌರವದ ಸಂಕೇತ' ಆಶಿಷ್ ರಾಯ್ ಚೂರ್‌ರವರ ಆಲ್ ಪೀಪಲ್ಸ್ ಸಭೆಯ ಉಚಿತವಾದ ಪ್ರಕಾಶನ ('ಸ್ತ್ರೀಯರು' ಎಂಬ ಅಧ್ಯಾಯವನ್ನು ಓದಿರಿ.)

# ಭಾಗ 4

# ಸೇವಾ ಸಂಘಸಂಸ್ಥೆ ಮತ್ತು ಅಭಿವೃದ್ಧಿ



# 23

# ಸ್ಥಳೀಯ ಸಭೆಗಳೊಳಗೆ ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳು

ಈ ಭಾಗದಲ್ಲಿ, ಸೇವಾ ಸಂಘ ಸಂಸ್ಥೆಗಳ ಸೇವೆಯ ಪ್ರಾಯೋಗಿಕ ಅಂಶಗಳ ಕುರಿತ ಚರ್ಚಿಸೋಣ. ಸೇವೆಗಾಗಿ ಸ್ಥಳೀಯ ಸಭೆಯು ಸಂಘಟಿಸಬೇಕಾದ ಕೆಲವು ಮಾರ್ಗಗಳೇನು ಮತ್ತು ಸಂಘಸಂಸ್ಥೆಗಳನ್ನು ಹೇಗೆ ಬೆಳೆಸಬೇಕು ಅಥವಾ ಅಭಿವೃದ್ಧಿಗೊಳಿಸಬೇಕು? (ಅ) ಶ್ರೇಷ್ಠತೆ ಹೊಂದಲೂ (ಆ) ಕ್ರಮವಾದ ಕಾರ್ಯನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು (ಇ) ಏನು ಮಾಡಲಾಗುತ್ತಿದೆ ಅದರಲ್ಲಿ ಹೆಚ್ಚಳ ಮತ್ತು ಅಪವರ್ತಿಸುವುದರಲ್ಲಿ ಕ್ರಮವಾಗಿರಲೂ ಕ್ರಮವಾದ ಸಂಘಸಂಸ್ಥೆಯು ಪ್ರಾಮುಖ್ಯವಾಗಿದೆ. ವಿಷಯಗಳು ಕ್ರಮಬದ್ಧವಾಗಿ ಇರದಿದ್ದರೆ, ಆಮೇಲೆ ಅತ್ಯದ್ಭುತಕರವಾದ ಎಲ್ಲಾ ವರಗಳು, ಅಭಿಷೇಕ ಮತ್ತು ದೇವರ ಕೊಡುವಂತಹ ಕೃಪೆಯು ಸುಲಭವಾಗಿ ವ್ಯರ್ಥವಾಗುತ್ತದೆ. ಕ್ರಮವಾದ ಸಂಘಸಂಸ್ಥೆಯ ಮೂಲಕವಾಗಿ ನಾವು ಪರಿಣಾಮಕಾರಿಯಾಗಿ ಪ್ರಭಾವವನ್ನು ದ್ವಿಗುಣಗೊಳಿಸಬಹುದು ಮತ್ತು ಒಂದು ಸ್ಥಳೀಯ ಸಭೆಯ ಅಂಗಕ್ಕೆ ದೇವರು ಬಿಡುಗಡೆಗೊಳಿಸುತ್ತಿರುವುದನ್ನು ಸಂಧಿಸಬಹುದು.

ಸೇವಾ ಸಂಘಸಂಸ್ಥೆಯಲ್ಲಿ ನಮ್ಮ ಪ್ರೇರಣೆಯು ಮತ್ತು ಸಂಘಸಂಸ್ಥೆಯನ್ನು ಅಭಿವೃದ್ಧಿಗೊಳಿಸುವುದು ನಾವು ಸ್ಥಳೀಯ ಸಭೆಗಳನ್ನು ದೇವರ ನೀಲನಕ್ಷೆಗನುಸಾರವಾಗಿ ಕಟ್ಟುತ್ತೇವೆ ಮತ್ತು ಇದರ ಮೂಲಕವಾಗಿ ಯೇಸುಕ್ರಿಸ್ತನಿಗೆ ಮಹಿಮೆ ಉಂಟಾಗುತ್ತದೆ. ಆದ್ದರಿಂದ ನಾವು ದೇವರ ವಾಕ್ಯದಲ್ಲಿ ದೇವರು ನಮಗೆ ಕೊಟ್ಟಂತಹ ನೀಲನಕ್ಷೆಯ ಸುತ್ತಲೂ ನಾವು ಸಂಘಟಿಸುತ್ತೇವೆ.

ನಾವು ಇಲ್ಲಿ ಉಪಯೋಗಿಸಬಹುದಂತಹ ಕೆಲವು ವಿಚಾರಗಳು ಮತ್ತು ಪ್ರಾಯೋಗಿಕ ವಿಧಾನಗಳನ್ನು ಪ್ರಸ್ತುತಪಡಿಸುತ್ತೇವೆ. ಇವುಗಳು ಒಂದು ಸ್ಥಳೀಯ ಸಭೆಯ ಸೇವೆಯನ್ನು ಸಂಘಟಿಸುವ ವಿಧಾನಗಳು ಮಾತ್ರವಾಗಿಲ್ಲ ದೇವರು ನಿಮ್ಮ ಸಂಘಟಿಸಲು ನಡೆಸಬಹುದು ಮತ್ತು ವಿಷಯಗಳನ್ನು ವಿಭಿನ್ನವಾಗಿ ಇಡಬಹುದು ಮತ್ತು ಅದು ಸಂಪೂರ್ಣವಾಗಿ

ಉತ್ತಮವಾದುದು ನಾವು ಸರಳವಾಗಿ ನಮ್ಮ ಸ್ವಂತ ಕಲಿಯುವಿಕೆ ಮತ್ತು ವಿಚಾರಗಳನ್ನು ಇತರ ಸ್ಥಳೀಯ ಸಭೆಗಳಲ್ಲಿ ಅಳವಡಿಸಿಕೊಳ್ಳಲು ಮತ್ತು ಹೊಂದಿಕೊಳ್ಳಲು ಹಂಚಿಕೊಳ್ಳಲು ಅಪೇಕ್ಷಿಸುತ್ತೇನೆ.

ಮಾನವ ದೇಹಕ್ಕೆ ಹೋಲುವಂತೆ ಸಭೆಯು ಒಂದು ‘‘ದೇಹವಾಗಿದೆ’’ ಮಾನವನ ದೇಹವು ವಿವಿಧ ವ್ಯವಸ್ಥೆಗಳನ್ನು ಹೊಂದಿದೆ ಒಟ್ಟಾರೆ ಒಂಭತ್ತು. ಎಲ್ಲಾ ವ್ಯವಸ್ಥೆಗಳಿಗೆ ಗಮನಹರಿಸುವುದು ಆರೋಗ್ಯ, ಸಾಮರ್ಥ್ಯ ಮತ್ತು ಉತ್ಪಾದಕತೆಯು ಅವಶ್ಯಕವಾದುದಾಗಿದೆ. ಮಾನವನ ದೇಹದಿಂದ ಆಸಕ್ತಿಕರವಾದ ಸಮಾನಾಂತರವಾದವುಗಳನ್ನು ಎಳೆದುಕೊಳ್ಳೋಣ ಮತ್ತು ಇದೇ ಉದ್ದೇಶಗಳನ್ನು ಪೂರೈಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಕಾರ್ಯವಿಧಾನಗಳನ್ನು ಮತ್ತು ಸ್ಥಳೀಯ ಸಭೆಯ ವ್ಯವಸ್ಥೆಯೊಡನೆ ಸಂಘಟಿಸೋಣ ಒಂಭತ್ತರಲ್ಲಿ ಪ್ರತಿಯೊಂದನ್ನು ನಾವು ಪರಿಗಣಿಸೋಣ.

## ರಕ್ತ ಪರಿಚಲನಾ ವ್ಯವಸ್ಥೆ: ಆರೈಕೆ ಮತ್ತು ಪೋಷಣೆ

ಪ್ರತಿಯೊಬ್ಬ ವ್ಯಕ್ತಿಯು ಆರೈಕೆ ಪೋಷಣೆಯನ್ನು ಪಡೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳಬೇಕು. ಹೆಚ್ಚು ರಕ್ತನಾಳಗಳು ಅಪಧಮನಿಗಳು ಮತ್ತು ಕ್ಯಾಪಿಲರೀಸ್‌ಗಳು ಬೆಳವಣಿಗೆ ಹೊಂದಬೇಕು ಪ್ರತಿಯೊಬ್ಬ ವ್ಯಕ್ತಿಗೂ ಆರೈಕೆ ಮತ್ತು ಪೋಷಣೆಯನ್ನು ಸಾಕಷ್ಟು ಕೊಡಬೇಕು.

- ಒಬ್ಬಬ್ಬರಾಗಿ ಮಾರ್ಗದರ್ಶನ
- ಸಣ್ಣ ಗುಂಪುಗಳು
- ಸದಸ್ಯರ ಆರೈಕೆ ತಂಡ
- ವೈಯಕ್ತಿಕ ಅಗತ್ಯತೆಗಳನ್ನು ಪ್ರತಿನಿಧಿಸಲು ಪರಿಣಿತ ಸಲಹೆಗಾರರು.
- ವಿಶೇಷ ಅಗತ್ಯತೆಗಳನ್ನು ತಿಳಿಸುವಂತಹ ವಿಷಯಾಂಶಗಳ ನಿಯಮಿತ ವಿಚಾರ ಸಂಕೀರ್ಣಗಳು ಉದಾಹರಣೆಗೆ ಮದುವೆ, ಪರಿಪಾಲನೆ, ಹಣಕಾಸು ಕೆಲಸದ ಸ್ಥಳ.

## ಅಸ್ಥಿಪಂಜರ ವ್ಯವಸ್ಥೆ: ಆಕಾರ ಮತ್ತು ರಚನೆ

ಕ್ರಮವಾದ ನಾಯಕತ್ವ, ಸಂಘಸಂಸ್ಥೆ ಮತ್ತು ಆಡಳಿತವನ್ನು ಸರಿಯಾದ ಸ್ಥಳದಲ್ಲಿ ಹೊಂದಿರುವುದರಿಂದ ಸಹಾಯ ಆಕಾರ ಮತ್ತು ರಚನೆಯನ್ನು ಖಚಿತಪಡಿಸಿಕೊಳ್ಳಬೇಕು.

ನಾಯಕರು ಸಭೆಯಲ್ಲಿ ಸ್ತಂಭಗಳಾಗಿದ್ದಾರೆ.

ಪವಿತ್ರಾತ್ಮನು ನಿಮ್ಮ ಸ್ಥಳೀಯ ಸಭೆಗೆ ಸೇರಿಕೊಳ್ಳಲೂ ಜನರುಗಳನ್ನು ಕಳುಹಿಸುತ್ತಾನೆ. ನೀವು ಅವರನ್ನು ಆಹ್ವಾನಿಸಬೇಕು ಮತ್ತು ಪಡೆದುಕೊಳ್ಳಬೇಕು.

ಹೆಚ್ಚಿನ ಸಂದರ್ಭಗಳಲ್ಲಿ ನಿಮ್ಮ ಸ್ಥಳೀಯ ಸಭೆಗಳೋಳಗೆ ಬಲಿಷ್ಟ ನಾಯಕರುಗಳನ್ನು ಎಬ್ಬಿಸಬೇಕು.

- ಆತ್ಮಿಕ ಮಾರ್ಗದರ್ಶನ
- ಅವಕಾಶಗಳನ್ನು ಸೃಷ್ಟಿಸಿರಿ ಮತ್ತು ಜವಾಬ್ದಾರಿಗಳನ್ನು ಜನರು ತೆಗೆದುಕೊಳ್ಳಲು, ಕಲಿಯಲು ಮತ್ತು ಬೆಳೆಯಲು ಸಮಯವನ್ನು ಕೊಡಿರಿ. ಅವರು ಸೇವೆ ಮಾಡಲೂ ತರಬೇತಿಯನ್ನು ಕೊಡಿರಿ
- ಉತ್ತಮ ಆಡಳಿತದ ಬೆಂಬಲದ ಸಿಬ್ಬಂದಿ
- ಸಭೆಯ ಧ್ವನಿ ನಿರ್ವಹಣೆ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಉದ್ಯೋಗ ನೀಡಿರಿ

## ಸ್ನಾಯು ವ್ಯವಸ್ಥೆ: ಸಾಮರ್ಥ್ಯ ಮತ್ತು ಚಲನಶೀಲತೆ

ಪ್ರತಿಯೊಬ್ಬ ವಿಶ್ವಾಸಿಯು ಒಬ್ಬ ಸೇವಕನಾಗಿ ಕಂಡುಬರುವುದನ್ನು ಖಚಿತಪಡಿಸಿಕೊಳ್ಳುವುದರಿಂದ ಸಾಮರ್ಥ್ಯ, ಚಳುವಳಿ ಮತ್ತು ದೇಹದಲ್ಲಿ ಚಲನಶೀಲತೆಯನ್ನು ಖಾತರಿಪಡಿಸಿಕೊಳ್ಳಬೇಕು.

ವಿಶ್ವಾಸಿಗಳನ್ನು ಸಜ್ಜುಗೊಳಿಸುವಂತದ್ದು ಅನೇಕ ಕಾರ್ಯವಿಧಾನಗಳ ಮೂಲಕ ಸಂಭವಿಸುತ್ತದೆ. ಇದರ ಸ್ಥಿರತೆಯನ್ನು ಇಟ್ಟುಕೊಳ್ಳುವುದು ಕೀಲಿಯಾಗಿದೆ.

- ತರಬೇತಿ, ಮಾರ್ಗದರ್ಶನ ಮತ್ತು ಸಣ್ಣ ಗುಂಪುಗಳ ನಾಯಕರುಗಳನ್ನು ಬಿಡುಗಡೆಗೊಳಿಸುವುದು.
- ಉದ್ದೇಶಪೂರ್ವಕವಾದ ಬೋಧನೆಗಳು ಮತ್ತು ಪ್ರವಚನ ಪೀಠದಿಂದ ಪ್ರಸಂಗಿಸುವುದು.
- ಪ್ರತಿಯೊಬ್ಬರು ಸೇವೆ ಮಾಡಲೂ ಅವಕಾಶ ನೀಡುವುದು.

- ಪ್ರತಿಯೊಬ್ಬರು ಸೇವೆ ಮಾಡಲೂ ಪ್ರೋತ್ಸಾಹಗೊಂಡಂತಹ ಒಂದು ಸಂಸ್ಕೃತಿಯನ್ನು ಸೃಷ್ಟಿಸುವುದು.
- ಜನರನ್ನು ಚಲನಶೀಲಗೊಳಿಸುವ ಮತ್ತು ಸಜ್ಜುಗೊಳಿಸುವ ನಿಯಮಿತ ಕಾರ್ಯಕ್ರಮಗಳು ಉದಾಹರಣೆಗೆ: ತರಬೇತಿಗಾಗಿ ವಾರಾಂತ್ಯದ ಶಾಲೆಗಳು.

## ಜೀರ್ಣಕಾರಿ ವ್ಯವಸ್ಥೆ: ಬಲವಾದ ಪೋಷಣೆ

ಒಂದು ಬಲಿಷ್ಟ, ಅಭಿಷೇಕದ ಮತ್ತು ಸಕಾಲಿಕ ವಾಕ್ಯದ ಸೇವೆಯನ್ನು ಖಾತರಿಪಡಿಸಿಕೊಳ್ಳಬೇಕು ಆದ್ದರಿಂದ ಜನರು ಪಡೆದುಕೊಳ್ಳುತ್ತಾರೆ. ಜೀರ್ಣ ಮತ್ತು ಗಟ್ಟಿಯಾದ ಆತ್ಮಿಕ ಪೋಷಣೆಯನ್ನು ಹೀರಿಕೊಳ್ಳುತ್ತಾರೆ.

- ಪ್ರವಚನ ಪೀಠದಿಂದ ಸ್ಥಿರವಾದ ಬಲವಾದ ವಾಕ್ಯದ ಸೇವೆ
- ಜನರಿಗಾಗಿ ಕಲಿಯಲು ಹೆಚ್ಚುವರಿ ಉತ್ಪನ್ನಗಳನ್ನು ದೊರೆಯುವಂತೆ ಮಾಡಿರಿ
- ಇತರ ಸೇವಕರುಗಳಿಂದ ಜನರು ಕಲಿಯಲು ಮತ್ತು ಪಡೆದುಕೊಳ್ಳಲೂ ಪ್ರೋತ್ಸಾಹಿಸಿರಿ
- ಒಂದು ಕಲಿಯುವಂತಹ ಸಂಸ್ಕೃತಿಯನ್ನು ಸೃಷ್ಟಿಸಿರಿ
- ಸಣ್ಣ ಗುಂಪುಗಳ ಮೂಲಕವಾಗಿ ಒತ್ತು ನೀಡಿ ಮತ್ತು ಮನವಿಗಳನ್ನು ಬಲಪಡಿಸಿರಿ.

## ಉಸಿರಾಟದ ವ್ಯವಸ್ಥೆ : ನೂತನ ಸ್ಫೂರ್ತಿ

ನಿರಂತರವಾದ, ನೂತನವಾದ, ಉಸಿರು, ಸ್ಫೂರ್ತಿ ಮತ್ತು ಆತ್ಮನ ಕಾರ್ಯಗಳನ್ನು ಖಾತರಿಪಡಿಸಿಕೊಳ್ಳಬೇಕು.

- ವೈಯಕ್ತಿಕ ಮತ್ತು ಸಾಂಸ್ಥಿಕ ಪ್ರಾರ್ಥನೆ ಮತ್ತು ಆರಾಧನೆ ಒತ್ತು ಕೊಡಿರಿ
- ವಿಸ್ತರಿಸಲ್ಪಟ್ಟ ಪ್ರಾರ್ಥನೆ ಮತ್ತು ಆರಾಧನೆಗೆ ಸಮಯವನ್ನು ಗೊತ್ತುಪಡಿಸಿರಿ
- ಆತ್ಮನ ಕಾರ್ಯ ಮತ್ತು ನಡೆಸುವಿಕೆಗೆ ಉಳಿದುಕೊಂಡಿರಿ
- ಆತ್ಮಿಕ ವರಗಳು, ಪ್ರವಾದನೆ, ಅನ್ಯಭಾಷೆಗಳು ಮತ್ತು ಎಲ್ಲಾ ಇತರವಾದವುಗಳನ್ನು ಉಪಯೋಗಿಸಲು ಪ್ರೋತ್ಸಾಹಿಸಬೇಕು.

## ನರಗಳ ವ್ಯವಸ್ಥೆ: ಸೂಕ್ಷ್ಮತೆ ಮತ್ತು ಪ್ರತಿಕ್ರಿಯೆ

ಸ್ಥಳೀಯ ಅಂಗದಲ್ಲಿ ಏನು ಜರುಗುತ್ತಿದೆ ಎಂಬುದರ ಗ್ರಹಿಕೆ ಮತು ತೀವ್ರ ಸೂಕ್ಷತೆಯನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಸಕಾಲಿಕ ಪ್ರತಿಕ್ರಿಯೆಯನ್ನು ಒದಗಿಸಬೇಕು.

ಉದಾಹರಣೆಗೆ, ದುರಾತ್ಮನ ಕೆಲವು ಕಾರ್ಯಗಳನ್ನು (ಹರಟೆ ಹೊಡೆಯುವ ತರಂಗ) ಪ್ರಾರ್ಥನೆ ಮತ್ತು ಸತ್ಯವೇದಕನುಸಾರವಾದ ಉಪದೇಶದೊಡನೆ ತಡೆಯೊಡ್ಡುವುದು.

- ಜನರು ನೇರವಾಗಿ ನಾಯಕತ್ವದಲ್ಲಿರುವವರಿಗೆ ಪ್ರತಿಕ್ರಿಯೆ ತೋರಿಸುವುದನ್ನು ಒದಗಿಸಿಕೊಡುವುದರಿಂದ ಕಾರ್ಯವಿಧಾನಗಳನ್ನು ಸೃಷ್ಟಿಸಬೇಕು.
- ಸಣ್ಣ ಗುಂಪುಗಳ ನಾಯಕರುಗಳಿಂದ ನಿಯಮಿತ ವರದಿಗಳು
- ಸ್ಥಳೀಯ ಸಭೆಯ ಅಂಗದಲ್ಲಿ ನೀವು ಕೇಳುವುದು ಮತ್ತು ನೋಡುವುದರಲ್ಲಿ ಸೂಕ್ಷ್ಮತೆಯುಳ್ಳವರಾಗಿರಿ ಆದ್ದರಿಂದ ನೀವು ಬೇಗನೆ ಪ್ರತಿಕ್ರಿಯೆ ತೋರಿಸಬಹುದು.
- ಬೇಗನೆ ಕ್ರಮವನ್ನು ತೆಗೆದುಕೊಳ್ಳಿರಿ
- ಅಗತ್ಯವಿರುವಾಗ ಸಮಯಕ್ಕೆ ಮುಂಚೆಯೇ ನಿಮ್ಮನ್ನು ಎಚ್ಚರಿಸುವ ಪವಿತ್ರಾತ್ಮನಿಗೆ ಸೂಕ್ಷ್ಮತೆಯುಳ್ಳವರಾಗಿರಿ.

## ಅಂತಃಸ್ರಾವಕ ವ್ಯವಸ್ಥೆ: ಸರಳ ನಿಯಂತ್ರಣಗಳು

ದರ್ಶನ, ಮೂಲ ಮೌಲ್ಯಗಳು, ತಂಡದ ಕೆಲಸ, ಸಭೆಯ ಸಂಸ್ಕೃತಿ, ಸೃಜನಶೀಲತೆ, ಸಮಕಾಲೀನ ವಾಗಿರುವುದು, ಜನರನ್ನು ಬಲಪಡಿಸುವುದು ಆತ್ಮಿಕ ಮಾರ್ಗದರ್ಶನ ಮುಂತಾದವುಗಳ ಬಗ್ಗೆ ಸಕಾಲಿಕವಾಗಿ ಜ್ಞಾಪಕವಮಾಡಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳಬೇಕು. ಸಣ್ಣ ಪ್ರಮಾಣದಲ್ಲಿ ಕಂಡು ಬಂದರೂ, ಬೆಳವಣಿಗೆ, ಆರೋಗ್ಯ ಮತ್ತು ಸಮತೋಲನವನುಸಿ ಉತ್ತೇಜಿಸುವ ‘‘ರಾಸಾಯನಿಕ ನಿಯಂತ್ರಣ ವ್ಯವಸ್ಥೆಯಾಗಿ’’ ಇವು ಕಾರ್ಯನಿರ್ವಹಿಸುತ್ತವೆ.

- ಇದನ್ನು ಅತಿಯಾಗಿ ಮಹತ್ವದ್ದಾಗಿದೆ ಅನ್ನದೆ ಪ್ರವಚನ ಪೀಠದಿಂದ ಮತ್ತು ಇತರ ರೀತಿಯಾಗಿ ಕಾಲದಿಂದ ಕಾಲಕ್ಕೆ ಇದರ ಬಗ್ಗೆ ಜ್ಞಾಪಕಕ್ಕೆ ತನ್ನಿರಿ ಉದಾಹರಣೆಗೆ: ಕೈಪಿಡಿಗಳು ವೆಬ್‌ಸೈಟ್, ವಿಡಿಯೋ ಘೋಷಣೆಗಳು.

## ವಿಸರ್ಜನೆ ವ್ಯವಸ್ಥೆ : ತ್ಯಾಜ್ಯವನ್ನು ತೆಗೆದುಹಾಕುವುದು

ವೈಯಕ್ತಿಕವಾಗಿ ಮತ್ತು ಸಾಂಸ್ಥಿಕವಾಗಿ, ಸಭೆಯು ಅನಾರೋಗ್ಯಕರ ವಿಷಯಗಳನ್ನು ಪರಿಣಾಮಕಾರಿಯಾಗಿ ತೆಗೆದುಹಾಕುತ್ತದೆ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು.

- ಹರಟೆ ಮಾತು, ಹಿಂದೆ ಮಾತಾಡುವುದು, ವಿಭಾಗಗಳು, ಜಗಳ ಸ್ಪರ್ಧೆ, ಸ್ವಾರ್ಥ ಆಸಕ್ತಿಗಳು, ಸ್ವಪದನ್ನೊತಿ ಮತ್ತು ಇದೇ ತರಹದ ವಿಷಯಗಳು ತಪ್ಪಾದವು ಎಂಬುದಾಗಿ ಜನರಿಗೆ ಬೋಧಿಸಬೇಕು, ಸ್ಥಳೀಯ ಸಭೆಯ ಅಂಗದಲ್ಲಿ ಇವುಗಳು ಇರಬಾರದು.
- ಪ್ರಾರ್ಥನೆಯ ಸಮಯಗಳು, ಪಶ್ಚಾತ್ತಾಪ ಮತ್ತು ಅನ್ಯೋನ್ಯತೆಯ ಮೂಲಕವಾಗಿ ಇಂತಹ ವಿಷಯಗಳನ್ನು ಸ್ಥಳೀಯ ಸಭೆಯ ಅಂಗದಿಂದ ನಿಯಮಿತವಾಗಿ ಸೋಸಿರಿ ಅಥವಾ ಹೊರಹಾಕಿರಿ.

## ಪುನರುತ್ಪಾದಕ ವ್ಯವಸ್ಥೆ : ನಿರಂತರ ಹೆಚ್ಚಳತೆ

ವೈಯಕ್ತಿಕವಾಗಿ ಮತ್ತು ಸ್ಥಳೀಯ ಸಭೆಯಾಗಿ ಆತ್ಮಗಳನ್ನು ಗೆಲ್ಲುವುದು, ಶಿಷ್ಯತ್ವ, ಸಭೆಗಳನ್ನು ಕಟ್ಟುವುದರಿಂದ ಪುನರುತ್ಪಾದಿಸುವುದನ್ನು ಖಚಿತಪಡಿಸಿಕೊಳ್ಳಬೇಕು.

- ಆತ್ಮಗಳನ್ನು ಗೆಲ್ಲುವುದು, ಸೇವೆಗಳು ಮತ್ತು ಶಿಷ್ಯತ್ವದಲ್ಲಿ ಜನರನ್ನು ಪ್ರೇರಿಸಬೇಕು ಮತ್ತು ತೊಡಗಿಸಿಕೊಳ್ಳುವಂತೆ ಮಾಡಬೇಕು.
- ಸ್ಥಳೀಯವಾಗಿ ಮತ್ತು ಪ್ರದೇಶಗಳಿಗೆ ಮೀರಿ ಎಲ್ಲಾ ಬಗೆಯ ಸಂಧಿಸುವಿಕೆಗಳನ್ನು ಮಾಡುವಂತೆ ಪ್ರೋತ್ಸಾಹಿಸಬೇಕು ಮತ್ತು ನಡೆಸಬೇಕು.
- ಸಭೆಯ ಸ್ಥಾಪನೆ ಮತ್ತು ಸೇವೆಗಳಿಗಾಗಿ ಜನರನ್ನು ಸಜ್ಜುಗೊಳಿಸಬೇಕು ಮತ್ತು ಬಿಡುಗಡೆಗೊಳಿಸಬೇಕು.

## ಸ್ಥಳೀಯ ಸಭೆ ಸೇವೆಗಳು ಮತ್ತು ಸೇವಾ ತಂಡಗಳು

ಆಲ್ ಪೀಪಲ್ಸ್ ಸಭೆಯಲ್ಲಿ, ಸ್ವಯಂ ಸೇವಕರಾಗಿ ಸೇವೆ ಮಾಡಲೂ ಜನರನ್ನು ನಾವು ಪ್ರೋತ್ಸಾಹಿಸುತ್ತೇವೆ. ಹಾಗೆಯೇ ಪೂರ್ಣಾವಧಿಗೆ ಪಾವತಿಸಿದ ಉತ್ತಮ ಸಂಖ್ಯೆಯ ಸಿಬ್ಬಂದಿಗಳು ಇದ್ದಾರೆ ಏಕೆಂದರೆ ನಿರ್ದಿಷ್ಟ ವಿಷಯಗಳಿಗಾಗಿ ತಮ್ಮ ಸಮಯವನ್ನು ಸಮರ್ಪಿಸಿ ಕೊಳ್ಳುವಂತಹ ಜನರುಗಳ ಅಗತ್ಯತೆ ನಮಗಿದೆ, ಸ್ವಯಂ ಸೇವಕರಾಗಿ ಸೇವೆ ಮಾಡುವ ದೊಡ್ಡ ಸಂಖ್ಯೆಯ ಜನರನ್ನು ನಾವು ಹೊಂದಿದ್ದೇವೆ. ನಿಶ್ಚಿತ ಸೇವೆಗಳಲ್ಲಿ ಸೇವೆ ಮಾಡಲೂ ಜನರನ್ನು ತಂಡಗಳಿಗೆ ಸಂಘಟಿತ್ತೇವೆ. ತಂಡದ ಕೆಲಸವನ್ನು ನಾವು

ಒತ್ತಿ ಹೇಳುತ್ತೇವೆ. ಪ್ರತಿಯೊಂದು ತಂಡವು, ಮೇಲ್ವಿಚಾರಣೆ ಮಾಡುವ ಒಬ್ಬ ನಾಯಕನನ್ನು ಪ್ರತಿ ತಂಡವು ಹೊಂದಿರುತ್ತದೆ.

ಸೇವಾ ತಂಡಗಳು, ಸಂಬಂಧಗಳನ್ನು ಕಟ್ಟಲು, ಸಮುದಾಯವನ್ನು ಅಭಿವೃದ್ಧಿಪಡಿಸಲು, ಮತ್ತು ಒಬ್ಬರಿಗೊಬ್ಬರು ಆತ್ಮಿಕವಾಗಿ ಸಹಾಯ ಮಾಡಲೂ ಒಂದು ದೊಡ್ಡ ಮಾರ್ಗವಾಗಿ ಕಂಡುಬರುತ್ತವೆ. ಏಕೆಂದರೆ ಜನರು ಒಟ್ಟಾಗಿ ಕೆಲಸಮಾಡುತ್ತಾರೆ. ಒಬ್ಬರಿಗೊಬ್ಬರೂ ನಿಯಮಿತವಾಗಿ ಮತ್ತು ಆಗಾಗ್ಗೆ ಪರಸ್ಪರ ಸಂಭಾಷಣೆ ಮಾಡುತ್ತಾರೆ. ತಂಡಗಳು, ತಮ್ಮ ಕಾರ್ಯಗಳನ್ನು ಮಾಡುವುದು ಮಾತ್ರವಲ್ಲದೆ, ಪ್ರಾರ್ಥನೆಯೊಡನೆ ಮತ್ತು ಆತ್ಮಿಕ ಮಹತ್ವದೊಡನೆ ಮಾಡಲೂ ನಾವು ತಂಡಗಳನ್ನು ಪ್ರೋತ್ಸಾಹಿಸುತ್ತೇವೆ. ಆದ್ದರಿಂದ ಸೇವೆಯು ಜರುಗುತ್ತಿರುವಾಗ ಸೇವಾ ತಂಡಗಳು ಆತ್ಮಿಕ ಪೋಷಣೆಯ ಸ್ಥಳವಾಗಿ ನಿಜವಾಗಿ ಕಂಡುಬರುತ್ತವೆ.

ಕೆಲವು ತಂಡಗಳು ಇತರ ತಂಡಗಳಿಗಿಂತ ಅಧಿಕವಾಗಿ ತರಬೇತಿ ಬೇಕಾಗಿರುತ್ತದೆ. ಆದ್ದರಿಂದ ನಾವು ಸಾಕಷ್ಟು ತರಬೇತಿ ನೀಡುವಿಕೆಯನ್ನು ನಾವು ಖಚಿತಪಡಿಸಿಕೊಳ್ಳುತ್ತೇವೆ. ನಾವು ಮಾಡುವಂತಹ ಎಲ್ಲದರಲ್ಲಿಯೂ ಅತ್ಯುತ್ತಮತೆಯನ್ನು ನೋಡುತ್ತೇವೆ. ಮತ್ತು ನಿರಂತರವಾಗಿ ಮಾರ್ಗದರ್ಶಿಸುತ್ತೇವೆ. ಮತ್ತು ಪ್ರತಿಕ್ರಿಯೆ ಒದಗಿಸುತ್ತೇವೆ ಆದ್ದರಿಂದ ಮಾಡುತ್ತಿರುವಂತ ಎಲ್ಲಾ ಕೆಲಸಗಳು ಉತ್ತಮಗೊಳಿಸಲ್ಪಡುತ್ತವೆ.

ಅಂತಹ ಕ್ಷೇತ್ರಗಳಲ್ಲಿ ಸೇವೆ ಮಾಡುವ ತಂಡಗಳು ಮತ್ತು ವಿವಿಧ ಬಗೆಯ ಸ್ಥಳೀಯ ಸಭಾ ಸೇವೆಗಳನ್ನು ನಾವು ಹೊಂದಿದ್ದೇವೆ:

- ಸೇವೆಗಳು ಮತ್ತು ಸೇವೆಯ ಸುತ್ತಲೂ ಕಾರ್ಯನಿರತವಾಗಿರುವಂತಹ ಕೇಂದ್ರಿಕರಿಸಲ್ಪಟ್ಟಂತಹ ತಂಡಗಳು.
- ಸೇವೆಗಳು ಮತ್ತು ಅಗತ್ಯವಿರುವ ಅಗತ್ಯಗಳನ್ನು ಕೇಂದ್ರೀಕರಿಸಿದ ತಂಡಗಳು
- ಸೇವೆಗಳು ಮತ್ತು ನಿರ್ಧಿಷ್ಟ ಕಾರ್ಯಕ್ರಮಗಳಿಂದ ಕೇಂದ್ರೀಕರಿಸಿದ ತಂಡಗಳು.

ಕೆಳಗೆ ಕೊಟ್ಟಿರುವಂತಹ ಕೆಲವು ಸೇವಾ ಕ್ಷೇತ್ರಗಳನ್ನು ನಾವು ಪರಾಂಭರಿಸುತ್ತೇವೆ ಮತ್ತು ಸಮಯವು ಹೋದಂತೆ ಕೆಲವನ್ನು ನಾವು ಪರಾಂಭರಿಸಲು ನಾವು ಅಪೇಕ್ಷಿಸುತ್ತೇವೆ. ಇಂತಹ ಕೆಲವು ಕ್ಷೇತ್ರಗಳಲ್ಲಿ ನಾವು ಉತ್ತಮ ಅಭಿವೃದ್ಧಿಯ ತಂಡಗಳನ್ನು ಹೊಂದಿದ್ದೇವೆ ಮತ್ತು ಕೆಲವು ಇತರ ಸೇವಾಕ್ಷೇತ್ರಗಳ ತಂಡಗಳು ಇನ್ನೂ

ಸುಧಾರಣೆಗೊಳ್ಳುತ್ತಿವೆ. ಮುಂದಿನ ದಿನಗಳಲ್ಲಿ ಹೊಸ ಸೇವೆಯ ಕ್ಷೇತ್ರವು ಎಬ್ಬಿಸಲ್ಪಡಬಹುದು ಮತ್ತು ಆ ಒಂದು ಸೇವಾಕ್ಷೇತ್ರದಲ್ಲಿ ಸೇವೆ ಮಾಡಲೂ ಒಂದು ತಂಡವನ್ನು ರಚಿಸುವ ಸಾಧ್ಯತೆಯಿರುತ್ತದೆ.

***ಸಭಾ ಸೇವೆಗಳು, ಸೇವಾ ಕಾರ್ಯವಿಧಾನಗಳ ಸುತ್ತಲೂ ಕೇಂದ್ರೀಕೃತವಾಗಿವೆ***

ಆರಾಧನಾ ತಂಡಗಳು

ಪ್ರಾರ್ಥನೆ ಮತ್ತು ಮಧ್ಯಸ್ಥಿಕೆ ತಂಡಗಳು

ಲೈಫ್ ಗ್ರೂಪ್ಸ್, ಅಲ್ಪಾ ಗ್ರೂಪ್ಸ್

ಸೇವಾ ತಂಡಗಳು

ಕಲಾ ಪ್ರದರ್ಶನ ತಂಡಗಳು

ಶಾಲೆಯ ಸಂಧಿಸುವ ತಂಡಗಳು (ಕ್ಯಾಟ್ ಲಿಸ್ಟ್)

ಕಾಲೇಜು ಔಟರೀಚ್ ತಂಡಗಳು (ಕ್ಯಾಂಪಸ್ ಎಲಿವೇಟ್ಸ್)

ಸಮಾಲೋಚನೆಗಳು (ಕ್ರಿಸ್ ಲಿಸ್ ಸಮಾಲೋಚನೆ ಸೇವೆ)

ಸದಸ್ಯರ ಕಾಳಜಿ

ಮಾಧ್ಯಮ

ದೂರದರ್ಶನ

ಇಂಟರ್‌ನೆಟ್

ಪ್ರಕಾಶನಗಳು

ಸುವಾರ್ತಿಕ ತಂಡಗಳು

ಸ್ವಸ್ಥತೆ ಮತ್ತು ಬಿಡುಗಡೆಯ ತಂಡಗಳು

ಪ್ರವಾದನಾ ಸೇವಾ ತಂಡಗಳು

ಮಾರುಕಟ್ಟೆ (ಮಾರ್ಕೇಟ್ ಪ್ಲೇಸ್) ಸೇವೆ

ಸಾಮಾಜಿಕ ಕ್ರಿಯೆಯ ತಂಡಗಳು

ಬಿಕ್ಕಟ್ಟು ಪರಿಹಾರ ತಂಡಗಳು (ಕರುಣಾಲಯ)

ಚೇತರಿಕೆ ಮತ್ತು ಪುನಃ ಸ್ಥಾಪನೆ

- ಎಲ್ಲಾ ವಯಸ್ಸಿನ ಎಲ್ಲಾ ಜನರು ತಂಡದಲ್ಲಿ ಒಟ್ಟಾಗಿ ಕೆಲಸ ಮಾಡುತ್ತಾರೆ
- ನಾವು ಅನೇಕ ತಂಡಗಳನ್ನು ಹೊಂದಿರಬಹುದು (ಉದಾಹರಣೆಗೆ ಅನೇಕ ಸುವಾರ್ತಿಕ ತಂಡಗಳನ್ನು, ಅನೇಕ ಪ್ರಾರ್ಥನಾ ತಂಡಗಳು, ಮುಂತಾದವು) ಮತ್ತು ಅಧಿಕವಾದ ಜನರು ನಾಯಕತ್ವದಲ್ಲಿನ ಸ್ಥಾನಕ್ಕೆ ಜಾಗ ಮಾಡಿಕೊಡುತ್ತವೆ.
- ಸೂಕ್ತವಿರುವಾಗ, ಪ್ರತಿಯೊಂದು ಸೇವಾ ಕಾರ್ಯಗಳಿಗಾಗಿ ಕೆಲಸದ ತರಬೇತಿಯ ಮೇಲೆ ಔಪಚಾರಿಕವನ್ನು ಒದಗಿಸುತ್ತೇವೆ.
- ಸಾಮಾನ್ಯವಾದ ಆತ್ಮಿಕ ಆಸಕ್ತಿ ಅಥವಾ ಆ ಒಂದು ಸೇವಾ ಕ್ಷೇತ್ರದಲ್ಲಿ ವರವನ್ನು ಹೊಂದಿರುವುದರಿಂದ ಜನರು ಸಂಪರ್ಕ ಹೊಂದುತ್ತಾರೆ

## *ಸಭಾ ಸೇವೆಗಳು ವಯಸ್ಸು ಮತ್ತು ಅಗತ್ಯತೆಗಳನ್ನು ಭಾವಿಸಿದ ಸುತ್ತಲೂ ಕೇಂದ್ರಿತವಾಗಿದೆ*

ಮಕ್ಕಳ ಸಭೆ

ಯೌವನಸ್ಥರ ಸೇವೆ

ಯುವ ವಯಸ್ಕರು

ಮದುವೆ ಪುಷ್ಟೀಕರಣ

ಪುರುಷರ ಸೇವೆ

ಸ್ತ್ರೀಯರ ಸೇವೆ

ತಾಯಂದಿರು

ಒಬ್ಬರೇ ಪೋಷಕರು

- ಅಗತ್ಯತೆಯಿಂದ ಭಾವಿಸಿದವುಗಳನ್ನು ನೇರವಾಗಿ ಪರಾಂಭರಿಸಬೇಕು.
- ಸಾಮಾನ್ಯವಾಗಿ ತೋರಿಸುವಂತಹವುಗಳಾದ ವಯಸ್ಸು, ಜೀವಿತದ ಹಂತ ಮತ್ತು ಸಾಮಾನ್ಯ ತೊಂದರೆಗಳನ್ನು ಉಳ್ಳ ಜನರ ಮಧ್ಯದಲ್ಲಿ ಅವರು ಇರುವುದರಿಂದ ಜನರು ಉತ್ತಮವಾಗಿ ಸಂಪರ್ಕಿಸಲು ಒಲವು ತೋರುತ್ತಾರೆ.

## *ನಿರ್ದಿಷ್ಟ ಕಾರ್ಯಕ್ರಮಗಳ ಸುತ್ತಲೂ ಕೇಂದ್ರಿತವಾದ ಸಭಾ ಸೇವೆಗಳು*

ಭಾನುವಾರದ ಆರಾಧನೆಗಳು ಮತ್ತು ಇತರ ಸೇರಿಬರುವಿಕೆ (ಇದನ್ನು ನಿರ್ವಹಿಸಲು ಅನೇಕ ಚಿಕ್ಕ ತಂಡಗಳು ರೂಪುಗೊಂಡಿವೆ)

ಸಾರಿಗೆ

ಆತಿಥ್ಯ ಮತ್ತು ಶುಭಾಷಯಗಾರರು

ವಾಹನ ನಿಲುಗಡೆ

ಧ್ವನಿ ಮತ್ತು ವೇದಿಕೆಯ ವ್ಯವಸ್ಥೆ

ಸ್ಥಳದ ನಿರ್ವಹಣೆ

ಸಂಪನ್ಮೂಲ ಮೇಜು

ಮಾಹಿತಿಯ ಮೇಜು

ಪ್ರತೀಹಾರಿ - ಮೊದಲ ಬಾರಿ ಬರುವವರನ್ನು ಆಹ್ವಾನಿಸುವುದು, ಕಾಣಿಕೆ, ಕರ್ತನ ಭೋಜನ

ಭಾನುವಾದರ ಸಭೆಯ ಪ್ರಕಟನೆಗಳು

ದೃಶ್ಯ ಸಾಧನಗಳು, ಪ್ರಸ್ತುತಿ

ಸಂದರ್ಶಕರ ಸುಸ್ವಾಗತ ಕೋಣೆ

ಕಾಣಿಕೆ ಸಂಗ್ರಹ ಮತ್ತು ದಾಖಲೆ

ಯೌವನಸ್ಥರ ಶಿಬಿರ

ಸಭೆಯಶಿಬಿರ

## ರಚನೆ ಎದುರಾಗಿ ಸ್ವಾಭಾವಿಕತೆ

ಜೆಕರ್ಯ 4:6

**ಆಗ ಅವನು ನನಗೆ ಪ್ರತ್ಯುತ್ತರವಾಗಿ ಹೀಗೆ ಹೇಳಿದನು ಪರಾಕ್ರಾಮದಿಂದಲ್ಲ, ಬಲದಿಂದಲ್ಲ ನನ್ನ ಆತ್ಮದಿಂದಲೇ ಎಂಬದು ಸೇನಾಧೀಶ್ವರ ಯೆಹೋವನ ನುಡಿ ಎಂಬೀ ಮಾತನ್ನು ಯೆಹೋವನು ಜೆರುಬ್ಬಾಬೆಲನಿಗೆ ದಯಪಾಲಿಸಿದ್ದಾನೆ.**

ಹಾಗೆಯೇ ರಚನೆಯುನ್ನು ಒದಗಿಸುವುದು ಪ್ರಾಮುಖ್ಯವಾಗಿದೆ, ನಾವು ಮಾಡುವಂತಹವುಗಳೆದರಲ್ಲಿಯು ಪವಿತ್ರಾತ್ಮನಿಂದ ಜನಿಸಿದ ಸ್ವಾಭಾವಿಕತೆಯನ್ನು ನಾವು ಪ್ರೋತ್ಸಾಹಿಸಬೇಕು. ಸ್ಥಳೀಯ ಸಭೆಯನ್ನು ಕಟ್ಟುವಂತದ್ದು ಪ್ರಾರ್ಥಮಿಕವಾಗಿ ಒಂದು ಆತ್ಮಿಕ ಕೆಲಸವಾಗಿದೆ ಮತ್ತು ನಿರ್ವಹಣೆ ಮತ್ತು ನಾಯಕತ್ವ ಕೌಶಲ್ಯಗಳಲ್ಲಿ ಕೇವಲ ವ್ಯಾಯಾಮವಲ್ಲ. ನಾವು ಸೂಕ್ಷ್ಮವಾಗಿರಬೇಕು ಎಲ್ಲಾ ಸಮಯದಲ್ಲಿ ಪವಿತ್ರಾತ್ಮನಿಗೆ ಫಲಕೊಡುವವರಾಗಿ ಮತ್ತು ಅವಲಂಬಿಸಿದವರಾಗಿರಬೇಕು.

ನಾವು ಕಾರ್ಯಗತಗೊಳಿಸುವ ರಚನೆ ಮತ್ತು ಸಂಸ್ಥೆಯು ಆತನ ಮಾರ್ಗದರ್ಶನ ಮತ್ತು ನಾಯಕತ್ವದ ಕೆಳಗೆ ಪವಿತ್ರಾತ್ಮನಿಂದ ಜನಿಸಿದವುಗಳಾಗಿರಬೇಕು. ನಾವು ಇವುಗಳನ್ನು ಪ್ರಾರ್ಥನೆಯ ಮೂಲಕ ಮತ್ತು ಪವಿತ್ರಾತ್ಮನಿಂದ ನಮಗೆ ಕೊಡಲ್ಪಟ್ಟ ಜ್ಞಾನದಿಂದ ಏಕೀಕರಿಸಬೇಕು.

ಕಾರ್ಯಗಳನ್ನು ಮಾಡಲೂ ಪವಿತ್ರಾತ್ಮನು ಸ್ಥಳೀಯ ಸಭೆಯಲ್ಲಿ ಜನರ ಮೇಲೆ ಚಲಿಸುತ್ತಾನೆ. ಆತನು ಕೆಲವು ಜನರನ್ನು ನಿರ್ದಿಷ್ಟ ಸೇವೆ ಮಾಡಲೂ, ನಿರ್ದಿಷ್ಟವಾದ ಜನರನ್ನು ಸಂಧಿಸಲು ಮುಂತಾದವುಗಳಲ್ಲಿ ಸ್ಪೂರ್ತಿ ನೀಡುತ್ತಾನೆ. ನಾವು ಸ್ಥಾಪಿಸಿದ ರಚನೆಗೆ ಇದು ಹೊಂದಿಕೊಳ್ಳದಿರಬಹುದು ಆದಾಗ್ಯೂ ಆತ್ಮನಿಂದ ಇರುವುದಾದರೆ ನಾವು ಅದನ್ನು ಅಳಿಸಬಾರದು. ಬದಲಿಗೆ ಸಭಾಪಾಲಕರು / ನಾಯಕರುಗಳಾಗಿ ಇದನ್ನು ಪ್ರೋತ್ಸಾಹಿಸಬೇಕು. ಸ್ವಾಭಾವಿಕತೆಯನ್ನು ಪ್ರೋತ್ಸಾಹಿಸಿರಿ. ಪವಿತ್ರಾತ್ಮನು ಆತನ ಮಾರ್ಗವನ್ನು ಹೊಂದಿಕೊಳ್ಳಲಿ! ನಮ್ಮ ಸಂಘ ಸಂಸ್ಥೆ ಅಥವಾ ರಚನೆಯು ಜನರೊಳಗೆ ಮತ್ತು ಅವರ ಮೂಲಕವಾಗಿ ಪವಿತ್ರಾತ್ಮನು ಮಾಡಲು ಬಯಸುವಂತಹವುಗಳಲ್ಲಿ ಹರಿಯುವುದರಿಂದ ಜನರಿಗೆ ಯಾವುದೇ ರೀತಿಯಲ್ಲಿ ಅಡ್ಡಿಯಾಗಬಾರದು.

# 24

# ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು ಮತ್ತು ಪೋಷಣೆ

ಎಫೆಸದವರಿಗೆ 4:11-13

**ಆತನು ಕೆಲವರನ್ನು ಅಪೊಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು ನಾವೆಲ್ಲರು ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನೂ ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ.**

ಸಭಾಪಾಲಕರು/ನಾಯಕರುಗಳಾಗಿ ಸ್ಥಳೀಯ ಸಭೆಯಲ್ಲಿ ಇರುವಂತಹ ಒಂದು ಪ್ರಾಮುಖ್ಯವಾದ ದೃಷ್ಟಿಯನ್ನಿಡಬೇಕಾದ ಕ್ಷೇತ್ರವು ''ಸೇವೆಯ ಕಾರ್ಯಗಳಿಗಾಗಿ'' ವಿಶ್ವಾಸಿಗಳನ್ನು ಸಜ್ಜುಗೊಳಿಸಬೇಕು ಮತ್ತು ಪೋಷಿಸಬೇಕು. ಜನರು ಹೊಸ ವಿಶ್ವಾಸಿಗಳಿಂದ ಶಿಷ್ಯರುಗಳಾಗಿ ಕಂಡುಬರಲೂ ಪೋಷಿಸಲ್ಪಡಬೇಕು ಮತ್ತು ಆಮೇಲೆ ದೇವರ ಮನೆಯಲ್ಲಿ ಸೇವಕರುಗಳಾಗಿ ಕಂಡುಬರಬೇಕು ಕೆಲವರು ಇನ್ನೂ ಬೆಳೆದು ಸ್ಥಳೀಯ ಸಭೆಯ ನಾಯಕರುಗಳಾಗಿ ಕಂಡುಬರುತ್ತಾರೆ. ಈ ಒಂದು ಅಧ್ಯಾಯದಲ್ಲಿ, ದೇವ ಜನರನ್ನು ಸಜ್ಜುಗೊಳಿಸುವುದು ಮತ್ತು ಪೋಷಿಸುವುದರ ಬಗ್ಗೆ ಸರಳವಾದ ಪ್ರಾಯೋಗಿಕ ಮಾರ್ಗದರ್ಶನಗಳನ್ನು ನಾವು ಹಂಚಿಕೊಳ್ಳುತ್ತೇವೆ.

## ಪ್ರತಿಯೊಬ್ಬ ವಿಶ್ವಾಸಿಯನ್ನು ಒಬ್ಬ ಸೇವಕನಾಗಲೂ ಸಜ್ಜುಗೊಳಿಸಬೇಕು

ಪ್ರತಿಯೊಬ್ಬ ವಿಶ್ವಾಸಿಯನ್ನು ಒಬ್ಬ ಭವಿಷ್ಯತ್ತಿನ ದೇವರ ಸೇವಕನಾಗಿ ನಾವು ನೋಡಬೇಕು. ಸೇವಕರೆಂದರೆ, ಅವರ ಕೆಲಸವನ್ನು ಬಿಟ್ಟುಬಿಡಬೇಕು ಮತ್ತು ''ಪೂರ್ಣಾವಧಿ ಸಂದೇಶಕರಾಗಿ ಕಂಡುಬರುವಂತಹದೆಂಬುದಾಗಿ ಅರ್ಥವಲ್ಲ ಒಂದು ಅಥವಾ ಅಧಿಕವಾದಂತಹ ಮಾರ್ಗಗಳಲ್ಲಿ ಕರ್ತನಾದ ಯೇಸುವಿನ ಸೇವೆ ಮಾಡುವಂತಹದ್ದು ನಮ್ಮ ಸಂಕಲ್ಪವಾಗಿದೆ.

ನಾವು ನಿರಂತರವಾಗಿ ಪ್ರತಿಯೊಬ್ಬ ವಿಶ್ವಾಸಿಯು ಒಬ್ಬ ಸೇವಕ ಎಂಬುದಾಗಿ ಒತ್ತಿ ಹೇಳಬೇಕು. ಪ್ರತಿಯೊಬ್ಬರು ಸೇವೆ ಮಾಡಲು ನಾವು ಪ್ರೋತ್ಸಾಹಿಸಬೇಕು. ನಮ್ಮ

ವೈಯಕ್ತಿಕ ಅಭದ್ರತೆಯನ್ನು ಬದಿಗೊತ್ತಬೇಕು ಮತ್ತು ಸೇವೆಯ ಕೆಲಸಗಳಿಗಾಗಿ ವಿಶ್ವಾಸಿಗಳನ್ನು ನಮಗಾಗಿ ಸಜ್ಜುಗೊಳಿಸುವಂತಹ ದೇವರ ವಾಕ್ಯಕ್ಕೆ ವಿಧೇಯರಾಗಬೇಕು.

## ವಿಶ್ವಾಸಿಗಳು, ಅವರ ವರಗಳು, ಸ್ಥಳ ಮತ್ತು ಕಾರ್ಯ ಕಂಡುಹಿಡಿಯಲು ಸಹಾಯ ಮಾಡಿರಿ

ಪ್ರತಿಯೊಬ್ಬ ವಿಶ್ವಾಸಿಗೂ ದೇವರಿಂದ ಕೊಡಲ್ಪಟ್ಟಂತಹ ವರಗಳಿವೆ. ಅದರ ಜೊತೆಗೆ, ಕರ್ತನು ಅವರಿಗಾಗಿ ಹೊಂದಿರುವ ಒಂದು ಸ್ಥಳ ಒಂದು ಕಾರ್ಯ ಇದೆ. ಜನರು ಅವರ ವರಗಳನ್ನು ಗುರ್ತಿಸಲು ಅವರ ಸ್ಥಳಕ್ಕೆ ಚಲಿಸಲು ಮತ್ತು ಅವರ ಕ್ರಿಯೆಯನ್ನು ಕೊಂಡೊಯ್ಯಲೂ ಸಹಾಯ ಮಾಡಬೇಕು. ಇದು ಒಂದು ಪ್ರಯಾಣ ಮತ್ತು ಕೇವಲ ಒಂದು ಹೆಜ್ಜೆಯ ವಿಷಯವಲ್ಲ ಆದ್ದರಿಂದ ಇಂತಹ ಪ್ರಯಾಣವನ್ನು ಮಾಡಲೂ ಜನರಿಗೆ ಶಕ್ತಿಶಾಲಿಯಾಗಿ ನಾವುಗಳು ಸಹಾಯ ಮಾಡಬೇಕು. ಸಭಾಪಾಲಕರು/ನಾಯಕರುಗಳಾಗಿ ಅನೇಕ ರೀತಿಗಳಲ್ಲಿ ಜನರಿಗೆ ಸಹಾಯ ಮಾಡಬಹುದು. ಕೆಲವುಬಾರಿ ಪವಿತ್ರಾತ್ಮನಿಂದ ದೇವರ ಯೋಜನೆ ಮತ್ತು ಒಬ್ಬ ವ್ಯಕ್ತಿಯ ಸಂಭವನೀಯತೆಯನ್ನು ನಾವು ಕೇಳುತ್ತೇವೆ ಕೆಲವು ಬಾರಿ ಅವರನ್ನು ವಿಭಿನ್ನವಾದ ವಿಷಯಗಳನ್ನು ಮಾಡಲು ಪ್ರೋತ್ಸಾಹಿಸುತ್ತೇವೆ. ಅಂತಿಮವಾಗಿ ಅವರು ಮಾಡಲೂ ಶಕ್ತವಾದಂತಹ ಒಂದು ಅಥವಾ ಅಧಿಕವಾದಂತಹ ಕಾರ್ಯಗಳನ್ನು ಜನರು ಕಂಡುಹಿಡಿಯುತ್ತಾರೆ. ಕೆಲವು ಜನರಿಗೆ ಈಗಾಗಲೇ ಅವರ ವರಗಳು ಗೊತ್ತಿದೆ ಮತ್ತು ಸೇವೆ ಮಾಡಲೂ ಪ್ರಾರಂಭಿಸಲು ಅವಕಾಶಗಳಿಗಾಗಿ ಕಾಯುತ್ತಿದ್ದಾರೆ. ಕೆಲವು ಜನರು ಭಯವುಳ್ಳವರಾಗಿದ್ದಾರೆ ಮತ್ತು ಹಿಂಜರಿಯುತ್ತಾರೆ. ಮತ್ತು ಅವರು ಹೊರಗೆ ಬರಲು ಪ್ರೋತ್ಸಾಹಿಸುವುದು ಅಗತ್ಯವಾಗಿದೆ.

ಅವರ ಪ್ರಯಾಣದಲ್ಲಿ, ಅವರ ಸ್ಥಳವನ್ನು ಮತ್ತು ಕಾರ್ಯವೈಖರಿಯನ್ನು ಗುರ್ತಿಸಲು ಜನರು ತಪ್ಪುಗಳನ್ನು ಮಾಡುತ್ತಾರೆ ಅವರು ವಿಭಿನ್ನವಾದ ವಿಷಯಗಳನ್ನು ಮಾಡಲೂ ಪ್ರಯತ್ನಿಸುತ್ತಾರೆ ಮತ್ತು ಕೆಲವುಗಳಲ್ಲಿ ಫಲದಾಯಕರಾಗಿರುತ್ತಾರೆ ಮತ್ತು ಇತರ ಕ್ಷೇತ್ರಗಳಲ್ಲಿ ಇರುವುದಿಲ್ಲ. ಕೆಲವರು ಅವರು ಸೇವೆ ಸಲ್ಲಿಸಲು ದೇವರು ಅಪೇಕ್ಷಿಸುವ ಸ್ಥಳವನ್ನು ತಲುಪುವ ಮೊದಲೇ ಅನೇಕ ವಿಭಿನ್ನವಾದ ಪಾತ್ರಗಳ ಮೂಲಕವಾಗಿ ಪರಿವರ್ತನೆಯನ್ನು ಹೊಂದುತ್ತಾರೆ. ಕೆಲವರು ಕೇವಲ ಒಂದು ಋತುವಿನಲ್ಲಿ ಮಾತ್ರ ಸೇವೆ ಸಲ್ಲಿಸುತ್ತಾರೆ ಮತ್ತು ಮುಂದೆ ಸಾಗುತ್ತಾರೆ. ಆದ್ದರಿಂದ ಜನರು ಈ ಒಂದು ಪ್ರಯಾಣ ಮಾಡುವ ಅನೇಕ ವಿಭಿನ್ನವಾದ ವಿಷಯಗಳು ಜರುಗುತ್ತವೆ ಹಾಗಿದ್ದರೂ

ಅವರ ಪ್ರಯಾಣದೊಂದಿಗೆ ನಾವು ಸಹ ದಾರಿಯುದ್ದಕ್ಕೂ ಸಹಾಯ ಮಾಡಬೇಕು, ಯಾವಾಗಲೂ ಪ್ರೋತ್ಸಾಹಿಸಬೇಕು ಮತ್ತು ಅವರಿಗೆ ಬೆಂಬಲ ನೀಡುತ್ತಿರಬೇಕು.

## ವಿಶ್ವಾಸಿಗಳು ಅವರ ಜೀವಿತದ ನಿಯೋಜನೆ ಕಂಡುಹಿಡಿಯಲು ಸಹಾಯ ಮಾಡಿರಿ

ದೇವರು ಒಂದು ಯೋಜನೆಯನ್ನು ಹೊಂದಿದ್ದಾನೆ ಮತ್ತು ನಮ್ಮಲ್ಲಿ ಪ್ರತಿಯೊಬ್ಬರಿಗಾಗಿ ದೇವರು ಉದ್ದೇಶಗಳನ್ನು ನೆರವೇರಿಸುತ್ತಾನೆ. ಇಂತಹ ನಿರ್ದಿಷ್ಟ ಉದ್ದೇಶಗಳಿಗಾಗಿ ದೇವರು ನಮ್ಮನ್ನು ರಚಿಸಿದ್ದಾನೆ. ನಾವು ನೆರವೇರಿಸಬೇಕಾದಂತಹ ಒಳ್ಳೆಯ ಕಾರ್ಯಗಳನ್ನು ಆತನು ಯೋಚಿಸಿದ್ದಾನೆ. ಸಭಾಪಾಲಕರು /ನಾಯಕರುಗಳಾಗಿ ನಮ್ಮ ಗುರಿಯು ಜನರು ತಮ್ಮ ಜೀವಿತಗಳಿಗಿರುವ ದೇವರ ಉದ್ದೇಶವನ್ನು ನೆರವೇರಿಸಲು ಮತ್ತು ಅವರು ಕಂಡು ಹಿಡಿಯಲು ದೇವಜನರನ್ನು ಸಜ್ಜುಗೊಳಿಸುವುದಾಗಿರಬೇಕು ಆದ್ದರಿಂದ ದೇವಜನರಿಗೆ ನಾವು ಬೊಧಿಸಬೇಕು ಮತ್ತು ದೇವರು ಒಂದು ಯೋಜನೆ ಮತ್ತು ಉದ್ದೇಶ ಹೊಂದಿದ್ದಾನೆ. ಎಂಬುದಾಗಿ ಅವರಿಗೆ ತಿಳುವಳಿಕೆ ಕೊಡಬೇಕು ಆಮೇಲೆ ಅವರಿಗಾಗಿ ಇರುವ ದೇವರ ಜೀವಿತದ ನಿಯೋಜನೆಯುನ್ನು ಕಂಡುಹಿಡಿಯುವುದು ಹೇಗೆ ಅವರು ಹೇಗೆ ಸಿದ್ಧಗೊಂಡಿರಬೇಕು ಮತ್ತು ಅದಕ್ಕೆ ಹೇಗೆ ಹೆಜ್ಜೆಯನ್ನಿಡಬೇಕು ಎಂಬುದರ ತಿಳುವಳಿಕೆಯ ಮೂಲಕವಾಗಿ ಅವರನ್ನು ಕೊಂಡೊಯ್ಯಬೇಕು. ನಾವು ಇದನ್ನು ಮಾಡುವಾಗ, ಕ್ರಿಸ್ತನ ಅಂಗವು ಕಟ್ಟಲ್ಪಡುತ್ತದೆ ಮತ್ತು ಬಲಗೊಳ್ಳುತ್ತದೆ.

## ಸೇವಾ ಅವಕಾಶಗಳನ್ನು ಒದಗಿಸಿ ಮತ್ತು ಹೊಸ ಸೇವೆಗಳನ್ನು ಪ್ರಾರಂಭಿಸಿರಿ

ಸ್ಥಳೀಯ ಸಭೆಯೊಳಗೆ ವಿಶ್ವಾಸಿಗಳು ಸೇವಾ ಅವಕಾಶಗಳನ್ನು ಒಪ್ಪಿಸಿಕೊಡಬೇಕು. ಸ್ಥಳೀಯ ಸಭೆಗಳೊಗಿನ ಹೆಚ್ಚಿನ ಸೇವೆಗಳು ಜನರು ನಿರ್ದಿಷ್ಟ ಸೇವಾ ಕ್ಷೇತ್ರಗಳಿಗೆ ಕರೆಯಲ್ಪಟ್ಟ ಮತ್ತು ವರಗಳನ್ನು ಹೊಂದಿದಂತಹವರಿಂದ ಪ್ರಾರಂಭಗೊಂಡಿದ್ದನ್ನು ನಾವು ಗುರ್ತಿಸುತ್ತೇವೆ. ಕೆಲವು ಸಂದರ್ಭಗಳಲ್ಲಿ ಪ್ರಾರಂಭದಲ್ಲಿ ನಾವು ನಿರ್ದಿಷ್ಟವಾದ ಸೇವಾ ಕ್ಷೇತ್ರಗಳಿಗೆ ಹೋಗಲೂ ಯೋಜನೆಗಳಿಲ್ಲದಿದ್ದರೂ, ಅಂತಹ ವರ ಮತ್ತು ಕರೆಯಲ್ಲಿ ಜನರನ್ನು ದೇವರು ಎಬ್ಬಿಸುವುದನ್ನು ನಾವು ನೋಡುವಾದ, ಅವಕಾಶಗಳು ಮತ್ತು ಜನ್ಮತಾಳಿದ ಸೇವಾಕ್ಷೇತ್ರ ಮತ್ತು ಅವರ ವರಗಳನ್ನು ಅಭ್ಯಾಸಿಸಲು ಪ್ರೋತ್ಸಾಹಪಡಿಸಬೇಕು.

## ಕೆಲವು ವಿಶ್ವಾಸಿಗಳು ಮಾರುಕಟ್ಟೆ ಕ್ಷೇತ್ರದಲ್ಲಿ ಸೇವಕರುಗಳಾಗಿರಬಹುದು.

ಕೆಲವು ವಿಶ್ವಾಸಿಗಳಿಗೆ ಅವರ ಸೇವೆಯು ಬರೀ ಒಂದು ಸ್ಥಳೀಯ ಸಭೆಯಲ್ಲಿ ಮಾತ್ರವಿರುವುದಿಲ್ಲ ಆದರೆ ಅವರು ಸಂಪೂರ್ಣವಾಗಿ ಅಥವಾ ಪ್ರಾಥಮಿಕವಾಗಿ, ವ್ಯಾಪಾರ, ಸರ್ಕಾರ, ವಿದ್ಯಾಭ್ಯಾಸ ಮನರಂಜನೆ, ಕಲೆ ಮಾಧ್ಯಮ, ಕ್ರೀಡೆ ಮುಂತಾದ ಕ್ಷೇತ್ರಗಳಲ್ಲಿ ಸ್ಥಳೀಯ ಸಭೆಯ ಹೊರಗಡೆ ಸೇವೆ ಮಾಡುತ್ತಾರೆ. ಅವರು ಮಾರುಕಟ್ಟೆಯ ಕ್ಷೇತ್ರದಲ್ಲಿ ಸೇವಕರುಗಳಾಗಿರುತ್ತಾರೆ ಅವರುಗಳು ದೇವರ ರಾಜ್ಯಕ್ಕಾಗಿ ಹೊಸ ಮಾರ್ಗಗಳಲ್ಲಿ ಜನರ ಮೇಲೆ ಪ್ರಭಾವಬೀರುವವರಾಗಿ ಕಂಡು ಬರಬಹುದು. ವಿಶಿಷ್ಟವಾಗಿ ಪ್ರಸಂಗಿಗಳು ಪ್ರವೇಶ ಹೊಂದಲೂ ಆಗದಿರುವಂತಹ ಮಾರುಕಟ್ಟೆಯಲ್ಲಿನ ಕ್ಷೇತ್ರಗಳಿಗೆ ಅವರು ಹೋಗಬಹುದು ಅವರು ಪ್ರಾರ್ಥನಾ ಗುಂಪುಗಳನ್ನು ಪ್ರಾರಂಭಿಸಬಹುದು, ಸತ್ಯವೇದ ಬೋಧನೆ ತರಗತಿಗಳು ಅಥವಾ ಇತರ ಬಗೆಯ ಸೇವೆಗಳನ್ನು ಮಾರುಕಟ್ಟೆಯ ಕ್ಷೇತ್ರದಲ್ಲಿ ಪ್ರಾರಂಭಿಸಬಹುದು. ಸಭಾಪಾಲಕರು/ನಾಯಕರುಗಳಾಗಿ ನಾವು ಪ್ರೋತ್ಸಾಹಿಸಬೇಕು, ಸಹಾಯ ಮಾಡಬೇಕು, ಆದ್ದರಿಂದ ದೇವರು ಅವರಿಗೆ ಕೊಟಲ್ಪಟ್ಟಂತಹವುಗಳಲ್ಲಿ ಫಲದಾಯಕವಾಗಿರಬಹುದು.

## ಅಪ್ರಾಕೃತವಾದುದರಲ್ಲಿ ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು

ವಿಶ್ವಾಸಿಗಳು, ಕತ್ತಲೆಯ ಕಾರ್ಯಗಳನ್ನು ನಾಶಗೊಳಿಸಲು, ಸೂಚಕ ಕಾರ್ಯ, ಅದ್ಭುತಕಾರ್ಯಗಳು, ಮಹತ್ಕಾರ್ಯಗಳನ್ನು ಮಾಡಲೂ, ಆತ್ಮನ ವರಗಳಲ್ಲಿ ಪ್ರವಹಿಸಲು, ಅಪ್ರಾಕೃತ ಬಲವನ್ನು ತೋರ್ಪಡಿಸಲು, ಪವಿತ್ರಾತ್ಮನ ಬಲದಲ್ಲಿ ನಡೆಸಲು ಅಧಿಕಾರ ಹೊಂದಿದವರಾಗಿರಬೇಕು. ನಮ್ಮ ಸ್ಥಳೀಯ ಸಭೆಗಳನ್ನು ಶಿಶುವಿಹಾರಗಳಾಗಿರುವುದರ ಬದಲಾಗಿ, ಸಜ್ಜುಗೊಳಿಸುವ ಮತ್ತು ಸಿದ್ಧಪಡಿಸುವ ವಿಶ್ವಾಸಿಗಳು ದೇವರ ಬಲದೊಡನೆ ಸಜ್ಜುಗೊಂಡ ಮತ್ತು ಪರಿಣಾಮ ಬೀರಲೂ ಸಿದ್ಧಗೊಂಡ ಮತ್ತು ಯೇಸುಕ್ರಿಸ್ತನಿಗಾಗಿ ಪ್ರಪಂಚದ ಮೇಲೆ ಪ್ರಭಾವ ಬೀರುವ ಸಜ್ಜುಗೊಳಿಸುವ ಮತ್ತು ಸಿದ್ಧಪಡಿಸುವ ಕೇಂದ್ರಗಳಾಗಿ ಕಂಡುಬರುವಂತಹವುಗಳಾಗಿ ನಮ್ಮ ಸ್ಥಳೀಯ ಸಭೆಗಳನ್ನು ನಾವು ರೂಪಾಂತರಿಸಬೇಕು.

## ನಾಯಕತ್ವ ಒದಗಿಸಿರಿ, ಅಗತ್ಯವಿರುವಾಗ ಹೋಗಲಿ

ಸಭಾಪಾಲಕರು/ನಾಯಕರುಗಳಾಗಿ ಹೇಗೆ ಮಾರ್ಗದರ್ಶನ ನೀಡಬೇಕು, ರಕ್ಷಿಸಬೇಕು, ಜ್ಞಾನ ಮತ್ತು ವಿವೇಚನೆಯಿಂದ ಆಡಳಿತ ನಡೆಸಬೇಕು ಎಂಬುದನ್ನು ನಾವು

ಕಲಿಯಬೇಕು ನಾವು ಯಾವಾಗ ಮಾರ್ಗದರ್ಶಿಸಬೇಕು, ಯಾವಾಗ ಮರಳಿ ಹೊಂದಿಸಬೇಕು ಎಂಬುದು ನಮಗೆ ಗೊತ್ತಿರುವುದು ಅವಶ್ಯಕ ಮತ್ತು ಜನರು ಸ್ವತಃಹ ತಾವೇ ಕಂಡುಹಿಡಿಯಲಿ ಜನರು ತಪ್ಪುಗಳನ್ನು ಮಾಡುವುದರಿಂದ ಸಂರಕ್ಷಣೆ ಮಾಡಲೂ ಮತ್ತು ಅವರು ಯಾವಾಗ ತಪ್ಪುಗಳಿಂದ ಕಲಿಯುವುದು ಮತ್ತು ಅವರು ಪ್ರಯೋಗ ಮಾಡಬೇಕಾಗಿರುವುದು ಯಾವಾಗ ಎಂಬುದನ್ನು ನಾವು ತಿಳಿದುಕೊಂಡಿರಬೇಕು. ಯಾವಾಗ ಆಡಳಿತ  ನಡೆಸಬೇಕು ಮತ್ತು ಸ್ಪಷ್ಟ ನಿರ್ದೇಶನಗಳನ್ನು ಒದಗಿಸಬೇಕು ಮತ್ತು ಜನರು ಸ್ವಂತ ತೀರ್ಮಾನಗಳನ್ನು ತೆಗೆದುಕೊಳ್ಳಲು ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಯಾವಾಗ ಅವಕಾಶ ನೀಡುತ್ತಾರೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ನಮ್ಮ ನಾಯಕತ್ವವು ಅವರ ಪ್ರಗತಿಗೆ ಅಡಚಣೆಯಾಗಿ ಕಂಡುಬರದಂತೆ ಅವಕಾಶವಿಲ್ಲದಂತ ದಾರಿ ಮಾಡಿಕೊಡದಂತೆ ನಾವು ಮುನ್ನೆಡೆಸಬೇಕು ಸಮಯವು ಬರುವಾಗ ''ಹೋಗಲಿ'' ಎಂಬುದಾಗಿ ತಿಳಿದುಕೊಳ್ಳಬೇಕು ಹದ್ದು ಗೂಡಿನಿಂದ ಹೊರಗೆ ಹಾರಲು ಸಿದ್ದವಾಗಿದೆ ಮತ್ತು ಅದನ್ನು ಮಾಡಲು ಅವರು ಸ್ವಾತಂತ್ರ್ಯವನ್ನು ಹೊಂದಿರಬೇಕು ಆವಾಗ ಮಾತ್ರ, ದೇವರ ರಾಜ್ಯದಿಂದ ಲೋಕವು ಬಾಧಿತಗೊಳ್ಳುತ್ತದೆ.

['ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು' ಎಂಬ ಆಲ್ ಪೀಪಲ್ಸ್ ಸಭೆಯ ಪುಸ್ತಕವನ್ನು ಓದಿರಿ.]

# 25

# ನಾಯಕರುಗಳನ್ನು ಪೋಷಣೆ ಮಾಡುವುದು ಮತ್ತು ಅಭಿವೃದ್ಧಿಪಡಿಸುವುದು

ಅಂತಿಮವಾಗಿ ನಮ್ಮೊಂದಿಗೆ ಅನೇಕ ನಾಯಕರುಗಳನ್ನು ಎಬ್ಬಿಸಬೇಕು, ಸೇವಾ ಕಾರ್ಯಗಳನ್ನು ನಂಬಿಗಸ್ತಿಕೆಯಿಂದ ಮಾಡುತ್ತಿರುವಂತಹ ವಿಶ್ವಾಸಿಗಳು ಈಗ ನಾಯಕರುಗಳಾಗಿ ಪೋಷಿಸಲ್ಪಡಬೇಕು. ನಾಯಕರುಗಳನ್ನು ಅಭಿವೃದ್ಧಿಶೀಲರಾಗಿ ಮಾಡಲೂ ಕೆಲವು ಪ್ರಯೋಗಿಕ ಮಾರ್ಗದರ್ಶನಗಳು ಇಲ್ಲಿವೆ.

## ಸಂಭಾವ್ಯ ನಾಯಕರುಗಳಲ್ಲಿ ಏನು ಹುಡುಕಬೇಕು

ಸಂಭಾವ್ಯ ನಾಯಕರುಗಳಲ್ಲಿ ಹಲವಾರು ಪ್ರಮುಖ ಗುಣಲಕ್ಷಣಗಳನ್ನು ನಾವು ನೋಡಬೇಕು.

- ವೈಯಕ್ತಿಕ ಜೀವಿತದ ಮಾದರಿ: ಅವರು ಪ್ರತಿದಿನ ಏನನ್ನು ನಂಬುತ್ತಾರೋ ಅದರಲ್ಲಿ ಜೀವಿಸುವಂತಹ ಜನರು. ಒಳ್ಳೇಯ ಸಾಕ್ಷಿ ಮತ್ತು ಒಂದು ದೈವಿಕವಾದ ಜೀವಿತದ ಮೂಲಕವಾಗಿ ಕಂಡುಬರುವಂತಹ ದೇವರೊಂದಿಗೆ ವೈಯಕ್ತಿಕವಾದ ಸ್ಥಿರವಾದ ಒಂದು ನಡೆಗಿಂತ ಬೇರೆ ಯಾವುದೂ ಮುಖ್ಯವಾಗಿರುವುದಿಲ್ಲ.
- ಆತ್ಮಿಕ ಮತ್ತು ಭಾವನಾತ್ಮಕ ಪರಿಪಕ್ವತೆ: ನಾಯಕರುಗಳು ಪ್ರೌಢರಾಗಿರಬೇಕು. ಆತ್ಮಿಕವಾಗಿ ಮತ್ತು ಭಾವನಾತ್ಮಕವಾಗಿ ಇತರರನ್ನು ಮತ್ತು ತಮ್ಮನ್ನು ನೋಡಿಕೊಳ್ಳುವಂತಹ ಬಗ್ಗೆ ಕಾಳಜಿ ವಹಿಸುವ ಜನರು ಅವರು  ಇತರೆ ಬಾಲಿಶ ವಿಷಯಗಳು ಮತ್ತು ಸ್ವಯಂ ಪ್ರಚಾರ, ಜನಪ್ರಿಯತೆಯ ಅವಶ್ಯಕತೆಗಳಿಗಿಂತ ಹೆಚ್ಚಾಗಿ ಬೆಳೆದವರಾಗಿರಬೇಕು.
- ಜೋಡಣೆ: ದರ್ಶನ, ಮಾರ್ಗದರ್ಶನ, ಬೋಧನೆಗಳು ಮತ್ತು ಸ್ಥಳೀಯ ಸಭೆಯ ಗುಣಮಟ್ಟಗಳಿಗೆ ಸಮಾನಾಂತರವಾಗಿರುವಂತಹ ಜನರು. ಒಬ್ಬ ನಾಯಕನು ಜನರು ತಾವು ಹೋಗಲೂ ಅಪೇಕ್ಷ ಪಡದಂತಹ ಮಾರ್ಗದರ್ಶನದಲ್ಲಿ ನಡೆಸಿದರೆ ಅದು ಬಹಳ ಅಪಾಯಕಾರಿಯಾದುದಾಗಿರುತ್ತದೆ.

- *ಜವಾಬ್ದಾರಿ:* ಗಂಭೀರತೆ ಮತ್ತು ಲಘುವಾಗಿ ಪರಿಗಣಿಸದಿರುವಂತಹ ಮತ್ತು ಬದ್ಧತೆಯ ಪ್ರಜ್ಞೆಯೊಡನೆ ಅವರ ಪಾತ್ರಗಳನ್ನು ನಿರ್ವಹಿಸುವಂತಹ ನಾಯಕರುಗಳಾದಂತಹ ಜನರು.
- *ವಿಶ್ವಾಸಾರ್ಹತೆ:* 100 ರಷ್ಟು ಸಮಯ ಅವರ ಮೇಲೆ ಅವಲಂಬಿಸಿರುವಂತಹ ಜನರು. ಅವರು ಕೆಲಸಗಳನ್ನು ಸರಿಯಾಗಿ ಮಾಡುತ್ತಾರೆ, ಅವರು ವೈಯಕ್ತಿಕವಾಗಿ ಹೆಚ್ಚುವರಿ ಮೈಲಿಯಷ್ಟು ಹೋಗುತ್ತಾರೆ ಮತ್ತು ಅವರು ಮನ್ನಿಸುವಂತದ್ದನ್ನು ಮಾಡುವುದಿಲ್ಲವೆಂಬುದು ನಿಮಗೆ ಗೊತ್ತಿರುತ್ತದೆ.
- *ಶ್ರೇಷ್ಟತೆ:* ತುಂಬಾ ಉತ್ತಮವಾದುದನ್ನು ಕೊಡುವಂತಹ ಮತ್ತು ಅವರಿಗೆ ಒಪ್ಪಿಸಲಾಗಿರುವಂತದ್ದರಲ್ಲಿ ಅಧಿಕವಾದದ್ದಂತದ್ದನ್ನು ಮಾಡುವಂತಹ ಜನರು ಅವರು ಬಹಳ ಕಷ್ಟಪಟ್ಟು ಕೆಲಸ ಮಾಡುತ್ತಿದ್ದಾರೆ ಎಂದು ನಿಮಗೆ ತಿಳಿದಿದೆ ಮತ್ತು ಶ್ರೇಷ್ಟತೆಯೆಡೆಗೆ ಅವರನ್ನು ಮುಂದುವರಿಸಿರಿ.
- *ನಿರಂತರ ಬೆಳವಣಿಗೆ:* ವ್ಯಕ್ತಿಯಾಗಿ ವೈಯಕ್ತಿಕ ಜೀವಿತದಲ್ಲಿ ಎಲ್ಲಾ ರೂಪಗಳಲ್ಲಿ ತಾವೇ ಬೆಳೆಯುತ್ತಿರುವಂತಹ ಜನರು ಒಬ್ಬ ನಾಯಕನು ಹೊಸ ಹಂತಗಳಲ್ಲಿ ಬೆಳೆಯುತ್ತಿರಬೇಕು. ಆಗ ಮಾತ್ರ ಇತರರನ್ನು ಸಹ ಉನ್ನತ ಹಂತಗಳಿಗೆ ತೆಗೆದುಕೊಂಡು ಹೋಗಲೂ ಸಾಧ್ಯವಾಗುತ್ತದೆ.
- *ವೈಯಕ್ತಿಕವಾದ ಅಜೆಂಡಾ ಇಲ್ಲ:* ವೈಯಕ್ತಿಕವಾದ ಅಜೆಂಡಾಗಳನ್ನು ಹೊಂದಿಲ್ಲದ ಜನರು ಅವರು ಕಾಣುವಂತಿರುವಿಕೆ ಗೋಚರತೆ ಪಡೆಯುವ ಒಬ್ಬ ನಾಯಕನಾಗಿ ಕಂಡುಬರುವುದನ್ನು ಅವರು ಹುಡುಕುವುದಿಲ್ಲ. ಆದ್ದರಿಂದ ಆಮೇಲೆ ಅವರು ಅದನ್ನು ತಮ್ಮ ಸ್ವಂತ ಆಸಕ್ತಿಗಾಗಿ ಉಪಯೋಗಿಸಬಹುದು ಅವರು ಅಂತಹ ವಿಷಯಗಳಿಂದ ಸ್ವತಂತ್ರರಾಗಿರುತ್ತಾರೆ.
- *ವರ ಮತ್ತು ಕರೆ:* ಸೂಕ್ತವಾದ ವರಗಳನ್ನು ಹೊಂದಿರುವ ಜನರು ಮತ್ತು ನಾಯಕರುಗಳಾಗಿ ಅವರು ನೇಮಕಗೊಳ್ಳುವಂತಹ ಕರೆಯಲ್ಪಟ್ಟಂತಹ ಕ್ಷೇತ್ರಗಳು.
- *ಒಳ್ಳೆಯ ಹಿಂಬಾಲಕರು:* ನಾಯಕರುಗಳು ಒಳ್ಳೆಯ ಹಿಂಬಾಲಕರು ಆಗಿದ್ದಾರೆ ಅವರು ಉಪದೇಶಗಳನ್ನು ತೆಗೆದುಕೊಳ್ಳಬಹುದು, ಹೊಲಸಾದ ಕಾರ್ಯ ಮಾಡಬಹುದು, ಸಹಾಯದ ಮೌಲ್ಯವು ಅವರಿಗೆ ತಿಳಿದಿರುವುದರಿಂದ ಇತರ ನಾಯಕರುಗಳ ಅಡಿಯಲ್ಲಿ ಸೇವೆ ಮಾಡುವಾಗ ಕೆಳಮಟ್ಟಕ್ಕೆ ಹೋಗಬಹುದು.

- ಉತ್ತಮ ಪೋಷಕರು: ಇತರ ನಾಯಕರುಗಳನ್ನು ಪೋಷಿಸುವಂತಹ ಹೃದಯವಂತ ಜನರು. ಅಂತಿಮವಾಗಿ ಒಬ್ಬ ನಾಯಕನು ಇತರ ನಾಯಕರುಗಳನ್ನು ಎಬ್ಬಿಸಬೇಕು.

## ಅವರ ಬೆಳವಣಿಗೆಯನ್ನು ಪೋಷಿಸುವುದು

ಸಭಾಪಾಲಕರು/ನಾಯಕರುಗಳಾಗಿ, ಇತರ ನಾಯಕರುಗಳನ್ನು ಪೋಷಿಸುವಂತದ್ದು ಮತ್ತು ಅವರ ಬೆಳವಣಿಗೆಯನ್ನು ಪೋಷಿಸುವಂತದ್ದಕ್ಕೆ ನಾವು ಜವಬ್ದಾರರಾಗಿದ್ದೇವೆ. ಒಬ್ಬ ನಾಯಕನ ಬೆಳವಣಿಗೆಯು ಅನೇಕ ಹಂತಗಳ ಮೂಲಕವಾಗಿ ಜರುಗುತ್ತದೆ.

*ಸಿದ್ಧತೆ ಹಂತ:* ಪ್ರಾರಂಭಿಕ ಅವಧಿಯಲ್ಲಿ, ನಿಮ್ಮ ದರ್ಶನವನ್ನು ಒಂದು ನಿರ್ದಿಷ್ಟ ಸೇವಾಕ್ಷೇತ್ರದಲ್ಲಿ ಮಾಡಲ್ಪಟ್ಟಂತಹ ಸೇವೆಯನ್ನು ನೀವು ಹಂಚಿಕೊಳ್ಳುತ್ತೀರಿ ಮತ್ತು ಅದನ್ನು ಉತ್ತಮವಾಗಿ ಹೇಗೆ ಹೋಗಬಹುದೆಂಬುದನ್ನು ಸಹ ನೀವು ಹಂಚಿಕೊಳ್ಳುತ್ತೀರಿ. ನೀನು, ಗುಣನಡತೆ, ಜವಬ್ದಾರಿ ಮತ್ತು ನಾಯಕರಿಂದ  ನೀವು ಅಪೇಕ್ಷಿಸುವಂತಹ ಇತರ ವಿಷಯಗಳ ಬಗ್ಗೆ ಮಹತ್ವ ನೀಡಿರಿ.

*ಆರಂಭಿಕ ಹಂತ:* ಸೂಕ್ತ ಸಮಯದಲ್ಲಿ ನಾಯಕತ್ವದ ಪಾತ್ರಕ್ಕೆ ವೈಯಕ್ತಿಕವಾಗಿ ಅವರು ಹೆಜ್ಜೆಯನ್ನಿಡಲು ಅವಕಾಶ ನೀಡಿರಿ ನೀವು ಆರಂಭಿಕವಾಗಿ ಅಗತ್ಯವಾದ ಮಾರ್ಗದರ್ಶನ, ತರಬೇತಿ ಸಜ್ಜುಗೊಳಿಸುವುದು ಮತ್ತು ನಿರ್ದೇಶನ ನೀಡುವುದರಲ್ಲಿ ಸಾಕಷ್ಟು ತೊಡಗಿಸಿಕೊಂಡಿದ್ದೀರಿ. ಅವರೊಂದಿಗೆ ಕೆಲಸ ಮಾಡುವ ಇತರರನ್ನು ಗುರ್ತಿಸಲು ಅವರಿಗೆ ಸಹಾಯ ಮಾಡಿರಿ ಮತ್ತು ಅವರ ತಂಡವನ್ನು ರಚಿಸಲು ಸಹಾಯ ಮಾಡಿರಿ. ಪರಸ್ಪರ ಕೆಲಸ ಮಾಡುವುದರೊಡನೆ ಆರಂಭಿಕ ಕಲಿಯುವಿಕೆ ಸವಾಲುಗಳ ಮೂಲಕವಾಗಿ ತಂಡವು ಕಾರ್ಯ ಮಾಡುತ್ತದೆ. ತಿದ್ದುಪಡಿಯನ್ನು ಮತ್ತು ಮರುಜೋಡಣೆಯನ್ನು ಮಾಡಬೇಕಾದಂತಹ ಸಮಯಗಳು ಇರುತ್ತದೆ.

*ಹಂತದಲ್ಲಿ ನೆಲೆಸುವುದು:* ನಿಧಾನವಾಗಿ, ನಾಯಕನು ಅವನ ಪಾತ್ರದಲ್ಲಿ ನಡೆಸಲು ಮತ್ತು ಉತ್ತಮವಾಗಿ ಕಾರ್ಯಮಾಡಲೂ ಪ್ರಾರಂಭಿಸುತ್ತಾನೆ. ನಾಯಕನು ಅವನ ತಂಡದೊಡನೆ ಸ್ವಂತವಾಗಿ ತಿರ್ಮಾನಗಳನ್ನು ಮಾಡಲೂ ಶಕ್ತನಾಗುತ್ತಾನೆ. ಆಮೇಲೆ ನೀವು ಹೆಜ್ಜೆಯನ್ನು ಹಿಂದಕ್ಕೆ ತೆಗೆದುಕೊಳ್ಳಿರಿ ಮತ್ತು ಅವರು ಮುಂದೆ ಸಾಗಲಿ ಅವರ ಸೇವಾಕ್ಷೇತ್ರಗಳಲ್ಲಿ ಅವರು ಹಿತಕರವಾಗಿರುತ್ತಾರೆ. ಇಂತಹ ಅವಧಿಯಲ್ಲಿ ನೀವು

ನಿರಂತರ ಪ್ರತ್ಯಾದಾನ ಪಡೆದುಕೊಳ್ಳುತ್ತೀರಿ ಮತ್ತು ಅಗತ್ಯವಿದ್ದಾಗ ಸೇರಿಸುವಿಕೆ ಒದಗಿಸಿರಿ, ಅದು ತಿದ್ದುಪಡಿ ಅಥವಾ ಮಾರ್ಗದರ್ಶನವಾಗಿರಲಿ.

*ಬೆಳವಣಿಗೆಯ ಹಂತ:* ಬೇಗನೆ ನಾಯಕನು ವಿಷಯಗಳನ್ನು ಹೊಸ ಹಂತಗಳಿಗೆ ತೆಗೆದುಕೊಂಡು ಹೋಗಲೂ ಶಕ್ತನಾಗುತ್ತಾನೆ. ಅವರು ಇರಬೇಕಾದುದ್ದಕ್ಕಿಂತಲೂ ಎತ್ತರವಾಗಿ ಸಂಗತಿಗಳನ್ನು ಬೆಳೆಸುತ್ತಾರೆ. ತಂಡವು ಒಟ್ಟಾಗಿ ಉತ್ತಮವಾಗಿ ಕೆಲಸ ಮಾಡುತ್ತಿರುತ್ತದೆ. ನೀವು ಅವರ ಬೆಳವಣಿಗೆಯನ್ನು ಗಮನಿಸುತ್ತೀರಿ ಆದರೆ ನಿಮ್ಮ ತೊಡಗಿಸಿಕೊಳ್ಳುವಿಕೆ ಬಹಳ ವಿರಳವಾಗಿರುತ್ತದೆ. ನೀವು ಉನ್ನತ ಮಟ್ಟದ ದರ್ಶನ ಮತ್ತು ಮಾರ್ಗದರ್ಶನ ಒದಗಿಸುತ್ತೀರಿ, ನೀವು ನಿಗದಿ ಮಾಡಿದ ಚೌಕಟ್ಟಿನೊಳಗೆ ವಿಷಯಗಳನ್ನು ಅದರಲ್ಲಿ ಸೇರಿಸಿರಿ.

*ಪರಿಪಕ್ವತೆಯ ಹಂತ:* ಕೆಲವು ಹಂತದಲ್ಲಿ ನಾಯಕರು ಅವರ ತಂಡದಲ್ಲಿ ಇತರ ನಾಯಕರುಗಳನ್ನು ಎಬ್ಬಿಸಲು ಪ್ರಾರಂಬಿಸುತ್ತಾರೆ ಮತ್ತು ಅವರ ಜವಬ್ದಾರಿಯನ್ನು ಪ್ರತಿನಿಧಿಸುವ ಭಾಗಗಳನ್ನು ಪ್ರಾರಂಭಿಸುತ್ತಾರೆ. ಉನ್ನತ ಮಟ್ಟದ ಶ್ರೇಷ್ಟತೆಯಲ್ಲಿ ಸಂಗತಿಗಳನ್ನು ಅನೇಕರು ಅಧಿಕವಾಗಿ ಮಾಡುತ್ತಿರುವುದರಿಂದ ಸೇವೆಯು ಬೆಳೆಯಲು ಪ್ರಾರಂಭಗೊಳ್ಳುತ್ತದೆ. ಒಂದು ಹೊಸ ಸೇವಾಕ್ಷೇತ್ರ ಅಥವಾ ಅದೇ ಸೇವಾಕ್ಷೇತ್ರದಲ್ಲಿ ಒಂದು ದೊಡ್ಡದಾದ ಮಟ್ಟಕ್ಕೆ ಹೆಜ್ಜೆಯನ್ನಿಡಲು, ಬೇರೆಡೆ ದೊಡ್ಡದಾದ ಪಾತ್ರದ ಬಗ್ಗೆ ನಾಯಕರುಗಳೊಂದಿಗೆ ಮಾತನಾಡಲು ಪ್ರಾರಂಭಿಸಿರಿ.

*ಪರಿವರ್ತನೆಯ ಹಂತ:* ಕೆಲವು ಸಮಯದ ಬಳಿಕ, ನಾಯಕರು, ಅವರ ಪಾತ್ರಗಳಲ್ಲಿ ಪುನರಾವರ್ತಿತರಾಗಿ ಕಂಡು ಬರುತ್ತಾರೆ ಯಾಕೆಂದರೆ ಅವರ ತಂಡದ ಅನೇಕ ಇತರರು ವಾಸ್ತವವಾಗಿ ಸೇವೆಯನ್ನು ಸಾಗಿಸುತ್ತಿರುತ್ತಾರೆ. ನೀವು ಅವರಿಗಾಗಿ ಸಿದ್ಧ ಮಾಡಿರುವಂತಹ ಹೊಸ ಪಾತ್ರಕ್ಕೆ ನಾಯಕರು ಹೆಜ್ಜೆಯನ್ನಿಡಲು ಸಹಾಯ ಮಾಡಿರಿ ಮತ್ತು ಬೇರೊಬ್ಬರು ಅವರ ಪ್ರಸಕ್ತ ನಾಯಕತ್ವದ ಪಾತ್ರದಲ್ಲಿ ಹೆಜ್ಜೆಯನ್ನಿಡಲಿ.

## ಬೆಳವಣಿಗೆ ಅವಕಾಶಗಳನ್ನು ಸೃಷ್ಟಿಸುವುದು

ನಾಯಕರನ್ನು ಬೆಳೆವಣಿಗೆಗೊಳಿಸಲು ಇರುವ ಒಂದು ಉತ್ತಮ ಮಾರ್ಗವು, ಅವರು ನಾಯಕರುಗಳಾಗಿರಲು ಅವಕಾಶಗಳನ್ನು ಸೃಷ್ಟಿ ಮಾಡುವುದಾಗಿದೆ. ಆದ್ದರಿಂದ ಜಾಗಗಳನ್ನು ಮಾಡಿಕೊಡುವುದರಲ್ಲಿ ಮತ್ತು ಜನರನ್ನು ನಾಯಕತ್ವದ ಪಾತ್ರದಲ್ಲಿ ಇರಿಸಲು ಭಯಪಡಬೇಡಿರಿ ಅನೇಕ ಜನರು ಹಿಂಜರಿಯುತ್ತಾರೆ ಆದರೆ ಅಗತ್ಯವಾದ

ಪ್ರೋತ್ಸಾಹವನ್ನು ಒದಗಿಸಿರಿ ಮತ್ತು ಬೆಂಬಲ ನೀಡಿರಿ ಮತ್ತು ಅವುಗಳ ಒಳಗೆ ಹೋಗಲು ಸಹಾಯ ಮಾಡಿರಿ.

ಮತ್ತೊಂದು ಪ್ರಾಮುಖ್ಯವಾದ ಮಾರ್ಗವೇನೆಂದರೆ, ಜನರನ್ನು ನಿಮ್ಮ ಜೊತೆ ಪ್ರಮಾಣಿಸಲು ಸೇವೆಮಾಡಲೂ ಮತ್ತು ನಿಮ್ಮ ಜೊತೆಗೆ ಸುವಾರ್ತೆ ಸೇವೆ ಮಾಡಲೂ ಮತ್ತು ನಿಮ್ಮ ಜೊತೆಗೆ ಸುವಾರ್ತೆ ಸೇವೆ ಮಾಡಲೂ ಕರೆದುಕೊಂಡು ಹೋಗಿರಿ. ಇದನ್ನು ಮಾಡುವಾಗ, ಅವರು ನಿಮ್ಮ ಜೀವಿತದ ಮಾದರಿ ನೀವು ಹೇಗೆ ವರ್ತಿಸುತ್ತೀರಿ, ಹೇಗೆ ನಿಮ್ಮನ್ನು ಗುಣನಡತೆಯಲ್ಲಿ ತೋರಿಸುತ್ತೀರಾ ನೀವು ಹೇಗೆ ಸೇವೆ ಮಾಡುತ್ತೀರಿ, ನೀವು ಕಠಿಣ ಪರಿಸ್ಥಿತಿಗಳನ್ನು ಹೇಗೆ ನಿಭಾಯಿಸುತ್ತೀರಿ ಎಂಬುದನ್ನು ಅವರು ನಿಮ್ಮಲ್ಲಿ ನೋಡುತ್ತಾರೆ. ಇದು ನಾಯಕರುಗಳನ್ನು ಬೆಳೆಸಲು  ಒಂದು ಉನ್ನತ ಮಾರ್ಗವಾಗಿದೆ. ಜನರು ನಿಮ್ಮ ಜೊತೆಗೆ ಸೇವೆ ಮಾಡಲೂ ಅವಕಾಶಗಳನ್ನು ಸೃಷ್ಟಿಸಿರಿ, ಅವರು ಬೇಗನೆ ಬೆಳವಣಿಗೆ ಹೊಂದುತ್ತಾರೆ.

## ಪ್ರತಿಕ್ರಿಯೆ, ಪ್ರೋತ್ಸಾಹ ಮತ್ತು ತಿದ್ದುಪಡಿ

ನಾಯಕರುಗಳು ಬೆಳವಣಿಗೆ ಹೊಂದಲೂ ಮತ್ತು ಅವರು ಮಾಡುತ್ತಿರುವಂತಹವುಗಳಲ್ಲಿ ಉತ್ತಮವಾಗಿರುವಂತದ್ದಾಗಿ ಕಂಡು ಬರಲು ಪ್ರೋತ್ಸಾಹ, ತಿದ್ದುಪಡಿ ಮತ್ತು ಪ್ರತಿಕ್ರಿಯೆ ಒದಗಿಸುವುದು ಅಗತ್ಯವಾಗಿದೆ. ಇವೆಲ್ಲವೂ ಪ್ರೀತಿ ಪ್ರೋತ್ಸಾಹ ಮತ್ತು ಬೆಂಬಲದ ಪರಿಸರದಲ್ಲಿ ಮಾಡಲ್ಪಡಬೇಕು. ನಾವು ಸೇವೆ ಸಲ್ಲಿಸುತ್ತಿರುವಂತಹ ಜನರ ಹಿತಕ್ಕಾಗಿ ಜೊತೆಗೆ ನಾಯಕರುಗಳ ಹಿತಕ್ಕಾಗಿ ಮತ್ತು ದೇವರ ಮಹಿಮೆಗಾಗಿ ಮಾಡುತ್ತಿದ್ದೇವೆಂಬುದನ್ನು ನಾವು ತಿಳಿದವರಾಗಿರಬೇಕು. ಮೌಲ್ಯಮಾಡಿಸಲು ಸ್ವತಂತ್ರತೆ ಪರಿಸರವಿರುವಂತಹ ಮತ್ತು ಕಟ್ಟಲ್ಪಡುವಂತಹ ಪ್ರತಿಕ್ರಿಯೆಗಳನ್ನು ಒದಗಿಸುವಾಗ ಜನರು ಬೇಗನೆ ಬೆಳವಣಿಗೆ ಹೊಂದುತ್ತಾರೆ ಜನರಿಗೂ ಸಹ ಭದ್ರತೆಯನ್ನು ನಾವು ಅವರಿಂದ ಕಲಿಯುವವರೆಗೂ ತಪ್ಪನ್ನು ಮಾಡುವುದರ ಸ್ವೀಕಾರಾರ್ಹ ಎಂಬುದಾಗಿ ತಿಳಿದವರಾಗಿ ಮುಂದೆ ಹೋಗುವುದನ್ನು ತಿಳಿದ ಭಾವನೆ ಹೊಂದಿರುತ್ತಾರೆ.

## ಪೌಲ – ತಿಮೊಥೆಯನಿಂದ ಪಾಠಗಳು

ಅಪೊಸ್ತಲನಾದ ಪೌಲನು ಲುಸ್ತ್ರದಲ್ಲಿ ಯುವಕನಾದ ತಿಮೊಥೆಯನ್ನು ಗುರ್ತಿಸುತ್ತಾನೆ (ಅಪೊಸ್ತಲರ ಕೃತ್ಯಗಳು 16:1-3) ಪೌಲನು ತಿಮೊಥೆಯನನ್ನು ಜೊತೆಗೆ ಕರಕೊಂಡನು ಮತ್ತು ಹೆಚ್ಚುವರಿ ಸಮಯ ಅವನನ್ನು ಪೋಷಣೆ ಮಾಡುವುದರೊಂದಿಗೆ ಜೊತೆ

ಕೆಲಸದವನಾಗಿ ಮಾಡಿಕೊಂಡನು ಮತ್ತು ಪೌಲನು ಮಾಡಿದಂತಹ ರೀತಿಯಲ್ಲೇ ಸೇವೆ ಕಾರ್ಯ ಮಾಡಲೂ ಶಕ್ತನಾದವನಾದವನು ಇವನೇ (1 ಕೊರಿಂಥದವರಿಗೆ 16:10) ಪೌಲನು ತಿಮೊಥೆಯನನ್ನು ಪೋಷಿಸಲು ಸಹಾಯ ಮಾಡಿದ ಕೆಲವು ಮುಖ್ಯ ಅಂಶಗಳು ಇಲ್ಲಿವೆ.

- ಒಂದು ವಿಶೇಷ ಸಂಕೋಲೆ: ಪೌಲನು ತಿಮೊಥೆಯ ಕಡೆಗೆ ಹೃದಯವುಳ್ಳವನಾಗಿದ್ದನು. ನಂಬಿಕೆಯಲ್ಲಿ ತಿಮೊಥೆಯನನ್ನು ಅವನ ಸ್ವಂತ ಮಗ ಎಂಬುದಾಗಿ ಉಲ್ಲೇಖಿಸುತ್ತಾನೆ. ಒಂದು ವಿಶೇಷವಾದ ಸಂಕೋಲೆ ಇತ್ತು.
- ನಿಕಟನೆ ಮತ್ತು ಪಾರದರ್ಶಕತೆ: ತಿಮೊಥೆಯನ್ನು ಪೌಲನೊಡನೆ ಪ್ರಮಾಣಿಸಿದನು ಮತ್ತು ಅವನ ಜೀವಿತವನ್ನು ನಿಕಟವಾಗಿ ನೋಡಿದನು ಪೌಲನನ್ನು ಗಮನಿಸುವ ಮೂಲಕವಾಗಿ ತಿಮೊಥೆಯನು ಬಹಳಷ್ಟು ಗಳಿಸಿಕೊಂಡನು.
- ನಿರ್ದಿಷ್ಟವಾದ ವಿಷಯಗಳನ್ನು ಕಲಿಸಿದನು: ಪೌಲನು ನಿರ್ದಿಷ್ಟವಾದ ವಿಷಯಗಳನ್ನು ತಿಮೊಥೆಯನಿಗೆ ಕಲಿಸಿದನು ಆದ್ದರಿಂದ ತಿಮೊಥೆಯನು ಅದೇ ವಿಷಯಗಳನ್ನು ಮಾಡಿದನು.
- ಪ್ರೋತ್ಸಾಹಿಸಿದನು ಮತ್ತು ತಿದ್ದುಪಡಿ ಮಾಡಿದನು: ಪೌಲನು ತಿಮೊಥೆಯನನ್ನು ಸರಿಪಡಿಸಿದನು ಮತ್ತು ಪ್ರೋತ್ಸಾಹಿಸಿದನು.
- ವೆಚ್ಚಗಳನ್ನು ಸ್ಪಷ್ಟಪಡಿಸಿದನು: ಕರ್ತನ ಸೇವೆ ಮಾಡುವಂತೆ ಯಾವಾಗಲೂ ಸುಲಭವಾದುದಲ್ಲ ಎಂಬುದನ್ನು ತಿಮೊಥೆಯನು ತಿಳಿಯುವಂತೆ ಪೌಲನು ಮಾಡಿದನು ಮತ್ತು ಪಾವತಿಸಬೇಕಾದಂತಹ ಬೆಲೆಯಿದೆ.
- ಅವನನ್ನು ಹೆಚ್ಚು ಗೌರವಿಸಲಾಯಿತು: ತಿಮೊಥೆಯನನ್ನು ತನ್ನ ಸ್ವಂತ ಮಗ ಎಂಬುದಾಗಿ ಕರೆಯುವ ಮೂಲಕವಾಗಿ ಇತರರೊಂದಿಗೆ ಪೌಲನು ಹೆಚ್ಚು ಗೌರವದಿಂದ ಮಾತಾಡಿದನು. ಒಬ್ಬ ಸಾಮಾನ್ಯ ಸಹಾಯಕ ಅಥವಾ ಯಾರು ಅಲ್ಲ ಎಂಬುದಾಗಿ ಪೌಲನು ತಿಮೊಥೆಯನನ್ನು ಕಾಣಲಿಲ್ಲ.
- ನಿಯೋಜಿತ ಜವಬ್ದಾರಿ: ನಿರ್ದಿಷ್ಟವಾದ ನಿಯೋಜನೆಗಳಿಗಾಗಿ ಪೌಲನು, ತಿಮೊಥೆಯನನ್ನು ತನ್ನ ಸ್ವಂತದಂತೆ ಹೋಗಲು ಕಳುಹಿಸಿದನು.
- ಸಕಾರಾತ್ಮಕ ಶಿಫಾರಸ್ಸು: ತಿಮೊಥೆಯನನ್ನು ಹೊರಗೆ ಸೇವೆಗೆಂದು ಕಳುಹಿಸಿದಾಗ ಪೌಲನು ಪೂರ್ಣ ಹೃದಯದಿಂದ ಶಿಫಾರಸ್ಸು ಮಾಡಿದನು.

- ಸೇವೆಗಾಗಿ ಬಿಡುಗಡೆ ಮಾಡಿದನು: ಸಮಯವು ಬಂದಾಗ ಸ್ವಂತವಾಗಿ ಸೇವೆ ಮಾಡಲೂ ಮತ್ತು ಸೇವೆಯಲ್ಲಿ ನಿಂತುಕೊಳ್ಳಲೂ ಪೌಲನೂ ತಿಮೊಥೆಯನನ್ನು ಬಿಡುಗಡೆಗೊಳಿಸಿದನು.

[ಪೌಲ ತಿಮೊಥೆಯನ ವಿವರಣಾ ಅಧ್ಯಯನಕ್ಕಾಗಿ - ಆಲ್ ಪೀಪಲ್ಸ್ ಸಭೆಯ ದೇವರ ರಾಜ್ಯ ಕಟ್ಟುವವರು ಎಂಬ ಪುಸ್ತಕದ ಅಧ್ಯಾಯ 7 - ದೇವರ ರಾಜ್ಯದ ಸೇವೆಗಾಗಿ ಮುಂದಿನ ಪೀಳಿಗೆಯನ್ನು ಎಬ್ಬಿಸುವುದು ಎಂಬುದನ್ನು ಓದಿರಿ.]

## ಪೋಷಣೆ ಪ್ರಕ್ರಿಯೆಯನ್ನು ದ್ವಿಗುಣಗೊಳಿಸುವುದು

ನಾಯಕರುಗಳು, ನಾಯಕರನ್ನು ಬೆಳೆಸಬೇಕು ಮತ್ತು ಹೊಸ ನಾಯಕರುಗಳು ಅಧಿಕವಾಗಿ ನಾಯಕರುಗಳನ್ನು ಬೆಳೆಸಬೇಕು. ನಾಯಕರುಗಳು ಅಧಿಕವಾದ ನಾಯಕರುಗಳನ್ನು ಬೆಳೆಸಲು ಪ್ರೋತ್ಸಾಹಪಡಿಸುವಂತಹ ಸಂಸ್ಕೃತಿಯನ್ನು ಸೃಷ್ಟಿಸಿರಿ.

## ಎಲ್ಲಾ ಐವಡಿ ಸೇವೆಗಳನ್ನು ಬೆಳೆಸುವುದು

ಸ್ಥಳೀಯ ಸಭೆಯ ಎಲ್ಲಾ ಬಗೆಯ ಸೇವೆಗಳು ಪ್ರೋತ್ಸಾಹಗೊಂಡ ಮತ್ತು ಜನ್ಮ ತಾಳುವಂತಹ ಸ್ಥಳಗಳಾಗಬೇಕು. ಇದು ಎಲ್ಲಾ ಐವಡಿ ಸೇವೆಯುನ್ನು ಪೋಷಿಸುವಂತದ್ದನ್ನು ಸಹ ಒಳಗೊಂಡಿದೆ: ಅಪೊಸ್ತಲರು, ಪ್ರವಾದಿಗಳು, ಸಭಾಪಾಲಕರು, ಉಪದೇಶಕರು ಮತ್ತು ಸುವಾರ್ತಿಕರು.

ಐವಡಿ ಸೇವೆಗಳ ಬೆಳವಣಿಗೆಯು ಒಂದು ಪ್ರಕ್ರಿಯೆಯಾಗಿದೆ. ಮತ್ತು ಇದು ದೇವರ ಕರೆ ಮತ್ತು ನೇಮಕದ ಮೂಲಕವಾಗಿ ಜರುಗುತ್ತದೆ. ಸ್ಥಳೀಯ ಸಭೆಯು ಇಂತಹ ಐವಡಿ ಸೇವೆಗೆ ಕರೆಯಲ್ಪಟ್ಟಂತಹ ಮಾದರಿಯ ಪರಿಸರವನ್ನು ಒದಗಿಸಬೇಕು.

ಇತರೆ ನಂಬಿಗಸ್ತ ಸೇವಕರುಗಳು ಒಂದು ಸೇವೆ ಸಲ್ಲಿಸಲು ಸ್ಥಳೀಯ ಸಭೆಗಳು ತೆರದವುಗಳಾಗಿರಬೇಕು. ಇತರ ಐವಡಿ ಸೇವೆ ಮಾಡುವವರು ಸಹ ಬರಲಿ ಮತ್ತು ಸೇವೆ ಮಾಡಲಿ, ಅವರು ತಮ್ಮ ಜೀವಿತದ ವರ ಮತ್ತು ಅಭಿಷೇಕದ ಪಾಲು ನೀಡುತ್ತಾರೆ ಮತ್ತು ಬಿಡುಗಡೆ ನೀಡುತ್ತಾರೆ. (ರೋಮಪುರದವರಿಗೆ 1:11)

ಸಭಾಪಾಲಕರು/ನಾಯಕರುಗಳಾಗಿ ಅಂತಹ ಐವಡಿ ಸೇವಾ ಕಾರ್ಯಗಳಿಗೆ ದೇವರು ಕರೆದಿರುವವರನ್ನು ನೀವು ಗುರ್ತಿಸುವುದು ಅವಶ್ಯಕ. ಅವರೊಟ್ಟಿಗೆ ನಡೆಯಿರಿ ಮತ್ತು

ಅವರನ್ನು ಪೋಷಣೆ ಮಾಡಿರಿ ಸ್ಥಳೀಯ ಸಭೆಯು ಅವರು ಬರುವಂತಹ ಮತ್ತು ತಂಪುಗೊಳಿಸುವಂತಹ ಒಂದು ಮನೆ ಮತ್ತು ಪೋಷಿಸುವಂತಹ ನೆಲವು ಆಗಿರಲಿ.

ನಿಗದಿತ ಸಮಯದಲ್ಲಿ, ಸ್ಥಳೀಯ ಸಭೆಯಲ್ಲಿ ಎಬ್ಬಿಸಲ್ಪಟ್ಟಂತಹ ಅನೇಕ ಐವಡಿ ಸೇವೆಯ ವರಗಳುಳ್ಳವರು ಇರುತ್ತಾರೆ. ಕೆಲವರು ತಮ್ಮ ಸ್ವಂತ ಸಭೆಗಳು ಮತ್ತು ಸೇವೆಗಳನ್ನು ಸ್ಥಾಪಿಸಲೂ ಬಿಡುಗಡೆಗೊಳ್ಳಬಹುದು ಇತರರು ಸ್ಥಳೀಯ ಸಭೆಯ ಅಂಗಳದಲ್ಲಿ  ಮತ್ತು ಹೊರಗಡೆ ಸೇವಾಕಾರ್ಯ ಮಾಡಬಹುದು ಹಿರಿಯ ಸಭಾಪಾಲಕರು ನಾಯಕರುಗಳು ನಿರಂತರವಾಗಿ ಮುನ್ನಡೆಸುತ್ತೀರಿ ಮತ್ತು ಎಲ್ಲಾ ಸೇವೆಗಳು ಪೋಷಣೆ ಹೊಂದಲೂ, ಎಬ್ಬಿಸಲ್ಪಡಲು ಮತ್ತು ಸ್ಥಳೀಯ ಸಭೆಯ ಅಂಗಕ್ಕೆ ಬಿಡುಗಡೆಹೊಂದಲೂ ಮೇಲ್ವಿಚಾರಣೆ ಒದಗಿಸಿರಿ.

# 26

# ಸಭಾ ಆಡಳಿತ

ಉತ್ತಮವಾದ ಒಂದು ಒಳ್ಳೆಯ ಸ್ಥಳೀಯ ಸಭಾ ಸೇವೆಗೆ ಕ್ರಮವಾದ ಆಡಳಿತವು ಬಹಳ ಪ್ರಾಮುಖ್ಯವಾಗಿದೆ. ಆಡಳಿತವು ಮರೆಮಾಡಲಾದ ಬೆನ್ನುಮೂಳೆಯಾಗಿದೆ. ಆದರೆ ಸ್ಥಳೀಯಾ ಸಭಾ ಸೇವೆಯ ಕ್ರಮಬದ್ಧವಾದ ಕಾರ್ಯನಿರ್ವಹಣೆಗೆ ಮತ್ತು ಬಲಕ್ಕಾಗಿ ಇದು ಬಹಳ ಅಗತ್ಯವಾಗಿದೆ.

ನಮ್ಮಲ್ಲಿ ಅನೇಕರು ಉತ್ತಮವಾದ ಆಡಳಿತವು ಶಾರೀರಿಕವಾಗಿ ಮಾಡುವಂತಹ ವಿಷಯವಾಗಿದೆ ಎಂಬುದಾಗಿ ವಿರೋಧಗಳನ್ನು ಹೊಂದಿದ್ದಾರೆ. ಆದಾಗ್ಯೂ ಕೊರಿಂಥದವರಿಗೆ 12:28ರಲ್ಲಿ ಪಟ್ಟಿ ಮಾಡಿದ ಸೇವಾ ಕಾರ್ಯವಿಧಾನಗಳಾದ ''ಸಹಾಯಗಳು ಮತ್ತು ಆಡಳಿತಗಳನ್ನು'' ಈ ವಚನ ಭಾಗದಲ್ಲಿ ನಾವು ನೋಡುತ್ತೇವೆ ಮತ್ತು ಆದ್ದರಿಂದ ಕೆಲವರು ಕರೆಯಲ್ಪಟ್ಟ, ವರ ಹೊಂದಿದ ಮತ್ತು ಅಭಿಷೇಕ ಹೊಂದಿದವರಾಗಿ ಅಂಗದಲ್ಲಿ ಒಂದು ಮಾನ್ಯವಾದ ಕರೆಯಿದೆ. ನಾವು ಸೇವೆ ಮಾಡುವಂತಹ ದೇವರು, ಯೋಜನೆ, ಕ್ರಮ ಮತ್ತು ರಚನೆ ಹೊಂದಿರುವ ದೇವರಾಗಿದ್ದಾನೆ. ದೇವರು ಯೋಜನೆಗಳಿಲ್ಲದೆ ಅಥವಾ ಮುನ್ನೆಚ್ಚರಿಕೆಯಿಲ್ಲದೆ ಗೊತ್ತು ಗುರಿಯಿಲ್ಲದೆ ನಿರಂಕುಶವಾಗಿ ಕೆಲಸ ಮಾಡುವುದಿಲ್ಲ ಬದಲಾಗಿ ದೇವರು ಕ್ರಮವುಳ್ಳ, ರಚನೆಯುಳ್ಳ, ಯೋಜನೆಯುಳ್ಳ ಮುನ್ನೆಚ್ಚರಿಯೊಡನೆ ಕಾರ್ಯ ಮಾಡುವಂತಹ ಮತ್ತು ನಿಗದಿತ ಋತುವಿನಲ್ಲಿ ವಿಷಯಗಳನ್ನು ಸಂಪೂರ್ಣತೆಗೆ ತರುವಂತಹ ರೀತಿಯಲ್ಲಿ ಸಕಾಲಿಕವಾಗಿ ಕಾರ್ಯಮಾಡುವ ದೇವರಾಗಿದ್ದಾನೆ ಎಂಬುದಾಗಿ ದೇವರ ವಾಕ್ಯವು ಪ್ರಕಟಿಸುತ್ತದೆ.

ಸ್ಥಳೀಯ ಸಭೆಯ ಸೇವೆಯಲ್ಲಿ ನೀವು ಮಾಡಲೂ ಪ್ರೋತ್ಸಾಹಿಸುವಂತಹ ಕೆಲವು ಪ್ರಾಯೋಗಿಕ ವಿಷಯಗಳು ಇಲ್ಲಿವೆ:

## ನಿಮ್ಮ ಸೇವೆಗಾಗಿ ಒಂದು ಯೋಜನೆಯನ್ನು ಬೆಳೆಸಿರಿ

ಪ್ರಾರ್ಥನಾ ಪೂರ್ವಕವಾಗಿ ಪವಿತ್ರಾತ್ಮನಿಗೆ ಕೇಳಿರಿ ಮತ್ತು ಸ್ಥಳೀಯ ಸಭಾ ಅಂಗವಾಗಿ ಏನನ್ನು ಮಾಡಬೇಕೆಂಬುದಾಗಿ ದೇವರು ಕರೆದಿರುವುದರಲ್ಲಿ ಒಂದು ಯೋಜನೆಯನ್ನು ಅಭಿವೃದ್ಧಿ ಪಡಿಸಿರಿ.

- ದರ್ಶನ ಮತ್ತು ಸೇವೆ: ದೇವರು ನಿಮಗೆ ಕೊಡಲ್ಪಟ್ಟಂತಹ ಉದ್ದೇಶ ಮತ್ತು ದರ್ಶನವನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಿರಿ.
- ಗುರಿಗಳನ್ನು ಅಭಿವೃದ್ಧಿಪಡಿಸಿ: ನೀವು ಕೆಲಸ ಮಾಡುತ್ತಿರುವುಗಳ ಕಡೆಗೆ ನಿರ್ದಿಷ್ಟವಾದ ಗುರಿಗಳನ್ನು ಹೇಳಿರಿ.
- ಒಂದು ಕಾರ್ಯತಂತ್ರದ ಸೇವಾ ಯೋಜನೆ ಅಭಿವೃದ್ಧಿಪಡಿಸಿ: ಅಂತಹ ಗುರಿಗಳನ್ನು ಹೇಗೆ ಪೂರೈಸಬಹುದೆಂಬುದಾಗಿ ಯೋಜನೆಗಳನ್ನು ಹೊಂದಿರಿ. ನೀವು ಅದರ ಜೊತೆಯಲ್ಲಿ ಹೋಗುವಾಗ ಮತ್ತು ವಿಷಯಗಳನ್ನು ಅಭಿವೃದ್ಧಿ ಹೊಂದುವಾಗ ಇವುಗಳು ಪರಿಷ್ಕರಿಸಲ್ಪಡಬಹುದು.
- ಹಣಕಾಸಿನ ಯೋಜನೆಗಳು/ಅಂದಾಜು ಪಟ್ಟಿ: ನೀವು ಮಾಡಬೇಕೆಂಬುದಾಗಿ ದೇವರು ಬಯಸುವಂತಹವುಗಳನ್ನು ಕೊಂಡ್ಯೊಯ್ಯಲು ಹಣಕಾಸನ್ನು ನೋಡಬೇಕು. ಒಳ್ಳೆಯ ಮನೆವಾರ್ತೆಯವನಾಗಿರು ಮತ್ತು ಹಣವನ್ನು ಜ್ಞಾನವಂತರಾಗಿ ಉಪಯೋಗಿಸಿರಿ.

## ದೇವರಿಗಾಗಿ ಸ್ಫೋಟಕ ಶಕ್ತಿಯಾಗಿ ಕಂಡುಬರಲು ಸಂಘಟಿಸಿರಿ

ಕ್ರಮವಾದ ಸಂಘಸಂಸ್ಥೆ ಮತ್ತು ಆಡಳಿತವು, ಕಾನೂನುಬದ್ಧ ಮತ್ತು ಪ್ರಾಯೋಗಿಕ ದೃಷ್ಟಿಕೋನದಿಂದ ಮಾತ್ರವಲ್ಲದೆಯು ಪ್ರಾಮುಖ್ಯವಾಗಿದೆ. ಆದರೆ ಸೇವೆಯು ಪರಿಣಾಮಕಾರಿಯಾಗಿರಲು ಮತ್ತು ದ್ವಿಗುಣಗೊಳ್ಳಲು ಸಹಾಯಿಸಬೇಕು.


- ಒಂದು ಕಾನೂನುಬದ್ಧ ಸಂಘಸಂಸ್ಥೆ ರಚಿಸಿರಿ: ಸ್ಥಳೀಯ ಸರ್ಕಾರದ ಅಧಿಕಾರಿಗಳಿಗೆ ನಾವು ಲೆಕ್ಕ ಒಪ್ಪಿಸುವವರಾಗಿರಬೇಕು. ಆದ್ದರಿಂದ ಒಂದು ಸರಿಯಾದ ನೋಂದಣಿ ಟ್ರಸ್ಟ್ ಅಥವಾ ಸಂಘ-ಸಂಸ್ಥೆಯನ್ನು ಹೊಂದಿರಿ.
- ಒಂದು ಸಾಂಸ್ಥಿಕ ರಚನೆಯನ್ನು ಅಭಿವೃದ್ಧಿ ಪಡಿಸಿರಿ: ನಿಮ್ಮ ಸ್ಥಳೀಯ ಸಭೆಯ ಸೇವೆಗೆ ಉತ್ತಮವಾಗಿರುವ ಸಾಂಸ್ಥಿಕ ರಚನೆಯನ್ನು ವ್ಯಾಖ್ಯಾನಿಸಿರಿ. ಸಮಯವು ಹೋದಂತೆ ಇಂತಹ ಸಾಂಸ್ಥಿಕ ರಚನೆಯನ್ನು ನೀವು ಬದಲಾಯಿಸಬಹುದು ಅಥವಾ ಮಾರ್ಪಾಟು ಮಾಡಬಹುದು. ಸರಳವಾಗಿ ಪ್ರಾರಂಭಿಸಿರಿ. ಅದು

ಅಲ್ಲಿಂದ ಬೆಳೆಯಲಿ ಸಾಧ್ಯವಾದಷ್ಟು ಸಾಂಸ್ಥಿಕ ರಚನೆಯನ್ನು ಬಹಳ ಸರಳವಾಗಿ ಇಡಿರಿ.

- ವ್ಯವಸ್ಥೆಗಳು, ಜನರು, ಕಾರ್ಯವಿಧಾನಗಳು: ಸಾಂಸ್ಥಿಕ ರಚನೆಯೊಳಗೆ ನಿಖರವಾಗಿ ವ್ಯವಸ್ಥೆ (ವಿಷಯಗಳು ಜರಗುವ ರೀತಿ) ಜನರು (ಏನನ್ನು ಮಾಡಲೂ ಯಾರಾರು ಜವಾಬ್ದಾರರು) ಮತ್ತು ಕಾರ್ಯವಿಧಾನಗಳು (ಇಂತಹ ವಿಷಯಗಳು ಹೇಗೆ ಮಾಡಲ್ಪಡುತ್ತವೆ) ಎಂಬುದನ್ನು ನಿಖರವಾಗಿ ವ್ಯಾಖ್ಯಾನಿಸಬೇಕು.
- ಕೆಲಸ/ಪಾತ್ರದ ವಿವರಣೆಗಳನ್ನು ಸಿದ್ಧಮಾಡಿರಿ: ನೀವುಗಳು ವಿಭಿನ್ನವಾದ ಸೇವೆಯಲ್ಲಿ/ಜನರುಗಳು ವಿಭಿನ್ನವಾದ ಪಾತ್ರಗಳನ್ನು ಹೊಂದಿರುವಾಗ ನಾಯಕತ್ವದ ಪಾತ್ರದಲ್ಲಿರುವಂತಹವರಿಂದ ಅಪೇಕ್ಷಿಸುವುದು ಏನು ಎಂಬುದನ್ನು ನಿಖರವಾಗಿ ಬರೆಯಬೇಕು. ಪೂರ್ಣ ಸಮಯ ಸಿಬ್ಬಂದಿಗಳಿಗಾಗಿ ಪ್ರತಿಯೊಬ್ಬ ಸಿಬ್ಬಂದಿಯು ಅವರ ಜವಾಬ್ದಾರಿಯ ಕ್ಷೇತ್ರದಲ್ಲಿ, ಅವರು ಏನು ಮಾಡಬೇಕು ಮತ್ತು ಅವರ ಕೆಲಸಕ್ಕೆ ಸಂಬಂಧಿಸಿದ ನಿರ್ದಿಷ್ಟ ಮಾರ್ಗದರ್ಶನಗಳ ಕುರಿತು ವಿವರಿಸುವಂತಹ ಪಾತ್ರದ ವಿವರಣೆ ಹೊಂದಿರಬೇಕು.
- ಸಾಂಸ್ಥಿಕ ಮಾರ್ಗಸೂಚಿಗಳು ಮತ್ತು ಕಾರ್ಯನೀತಿಗಳನ್ನು ಸ್ಥಾಪಿಸುವುದು: ವಿಭಿನ್ನ ಸೇವಾ ಕ್ಷೇತ್ರಗಳನ್ನು ಸಂಸ್ಥೆಯು ಯಾವ ರೀತಿ ನಿರ್ವಹಿಸಬೇಕೆಂಬುದಕ್ಕೆ ಕಾರ್ಯಾ ನೀತಿಗಳ ಮತ್ತು ಮಾರ್ಗಸೂಚಿಕೆಗಳನ್ನು ಬರೆಯಿರಿ. ಪೂರ್ಣವಧಿಯಲ್ಲಿ ಕೆಲಸ ಮಾಡುವವರಿಗಾಗಿ ಸಿಬ್ಬಂದಿ ಮಾರ್ಗಸೂಚಿ, ಸ್ವಯಂಸೇವಕರಾಗಿ ಸೇವೆ ಮಾಡುವಂತವರಿಗಾಗಿ ಸ್ವಯಂ ಸೇವಕ ಮಾರ್ಗಸೂಚಿ, ಸೇವೆಯಲ್ಲಿ ನಿರಂತರವಾಗಿ ಜರುಗುತ್ತಿರುವಂತಹ ವಿವಿಧ ವಿಷಯಗಳ ಕಾರ್ಯನೀತಿಗಳು; ಹಣಕಾಸು - ಖರ್ಚು ಮಾಡಲೂ ಯಾವ ರೀತಿ ಹಣವು ಅನುಮೋದಿಸಲ್ಪಡಬೇಕು, ವಿವಿಧ ಕ್ಷೇತ್ರಗಳಲ್ಲಿ ಎಷ್ಟು ಹಣ ಖರ್ಚಾಗಬಹುದು ಮುಂತಾದವು.
- ಯೋಜನೆ ಮತ್ತು ನಿರ್ವಹಣೆಯ ಪುನರವಲೋಕನ: ಎಲ್ಲಾ ನಾಯಕರುಗಳು ಮತ್ತು ಸಭೆಯ ಸಿಬ್ಬಂದಿಗಳು ಅವರ ಕೆಲಸ ಮತ್ತು ಸೇವೆಯ ವಾರ್ಷಿಕ ಯೋಜನೆಗಳನ್ನು ಬರೆಯುವಂತೆ ಪ್ರೋತ್ಸಾಹಿಸಿರಿ. ನಿಯತಕಾಲಿಕವಾಗಿ (ಪ್ರತಿ 6 ತಿಂಗಳಿಗೊಮ್ಮೆ) ಬೆಳವಣಿಗೆಯನ್ನು ಪುನರವಲೋಕನ ಮಾಡಿರಿ. ಸಭಾ ಸಿಬ್ಬಂದಿಗಳಿಗಾಗಿ ಕೆಲಸ ಮಾಡಿ ತೋರಿಸುವುದರ ಪುನರವಲೋಕನ ನಡೆಸಿರಿ ಆದ್ದರಿಂದ ಕೆಲಸವು ಮೇಲ್ವಿಚಾರಣೆಯಲ್ಲಿರುತ್ತದೆ ಪ್ರತಿಕ್ರಿಯೆಗಳನ್ನು ಕೊಡಲಾಗುತ್ತದೆ ಮತ್ತು ಸುಧಾರಣೆಗಳನ್ನು ಮಾಡಲಾಗುತ್ತದೆ.

- ನಿರ್ಧಾರ ಮಾಡುವ ಅಧಿಕಾರ: ಮೇಲಿನ ಎಲ್ಲವುಗಳನ್ನು ಸರಿಯಾದ ಸ್ಥಳದಲ್ಲಿರಿಸಿದಾಗ, ಜವಾಬ್ದಾರಿಗಳನ್ನು ನಿಯೋಜಿಸಲು ಸುಲಭ ಮತ್ತು ಜನರು ನಿರ್ಧಾರ ಮಾಡಲೂ ಅಧಿಕಾರ ನೀಡಿರಿ ಅವರು ಕಾರ್ಯ ಪ್ರವೃತ್ತಿಯನ್ನು ಹಿಂಬಾಲಿಸಲಿ ಮತ್ತು ನಿಗದಿಪಡಿಸಿದ ಮಾರ್ಗಸೂಚಿಗಳನ್ನು ಹಿಂಬಾಲಿಸಲಿ ಮತ್ತು ಅವರು ತೀರ್ಮಾನಗಳನ್ನು ಸುರಕ್ಷತೆಯಿಂದ ಮತ್ತು ಸಂರಕ್ಷಣೆಯಿಂದ ಮಾಡಲಿ.
- ಬದಲಾವಣೆಗೆ ಹೊಂದಿಕೊಳ್ಳಿ: ಸ್ಥಳೀಯ ಸಭೆಯ ಸೇವೆಯು ಬೆಳೆಯುವಾಗ ಸುರಕ್ಷಿತವಾಗಿ ಮತ್ತು ದಕ್ಷತೆಯಿಂದ ಕಾರ್ಯಗಳನ್ನು ಮಾಡುವುದಕ್ಕಾಗಿ ಯಾವ ರೀತಿ ಕಾರ್ಯಗಳು ಜರುಗುತ್ತಿವೆ ಎಂಬುದನ್ನು ನೀವು ಪರಿಶೀಲಿಸಬೇಕು ಮತ್ತು ವಿಮರ್ಶೆ ಮಾಡಬೇಕು. ಬದಲಾವಣೆ ಜರುಗುವಾಗ ಹೊಂದಿಕೊಳ್ಳುತ್ತೀರಿ ಮೂಲ ಸಾಂಸ್ಥಿಕ ರಚನೆಯ ಉದಾಹರಣೆ.

**ಮೂಲ ಸಾಂಸ್ಥಿಕ ರಚನೆಯ ಉದಾಹರಣೆ**




## ಸಭಾಪಾಲಕರ ತಂಡ

ಸಭೆಯಲ್ಲಿ ಆತ್ಮಿಕ ಸೇವೆಯ ಮೇಲೆ ದೃಷ್ಟಿಯನ್ನಿರಿಸುವ ಸಭಾ ಪಾಲಕರುಗಳ ಒಂದು ತಂಡ ಒಳಗೊಂಡಿದೆ. ಸಭಾಪಾಲಕ ತಂಡವು ಹೆಚ್ಚಾಗಿ ಪೂರ್ಣವಧಿ ಮತ್ತು ಕೆಲವು ದ್ವಿ-ವೃತ್ತಿಪರ ಸಿಬ್ಬಂದಿಗಳನ್ನು ಒಳಗೊಂಡಿದೆ. ಪ್ರಸಂಗ, ಬೋಧನೆ, ಪ್ರಾರ್ಥನೆ, ಆರಾಧನೆ, ಮಕ್ಕಳ ಸೇವೆ, ಯೌವ್ವನಸ್ಥರ ಸೇವೆ, ಸುವಾರ್ತ ಸೇವೆಗಳು, ಸೇವೆಗಳು ಮುಂತಾದ ಕ್ಷೇತ್ರಗಳಿಗೆ ಮುಖ್ಯವಾಗಿ ಜವಾಬ್ದಾರರಾಗಿರುತ್ತಾರೆ.

## ಸ್ವಯಂಸೇವಕ ತಂಡಗಳು

ಸ್ಥಳೀಯ ಸಭೆಯ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕೆಲವು ನಿರ್ದಿಷ್ಟ ಅಂಶಗಳಲ್ಲಿ ಕಾರ್ಯ ಮಾಡುವುದಕ್ಕಾಗಿ ಜವಾಬ್ದಾರಿಯುಳ್ಳ ಸ್ವಯಂಸೇವಕ ತಂಡಗಳು ಇವಾಗಿವೆ. ಪ್ರತಿಯೊಂದು ಸ್ವಯಂ ಸೇವಕ ತಂಡವು ಒಬ್ಬ ಸ್ವಯಂ ಸೇವಕ ನಾಯಕನಿಂದ ನಡೆಸಲ್ಪಡುತ್ತದೆ. ಒಬ್ಬರು ಸಹಾಯಕ ನಾಯಕರಿರುತ್ತಾರೆ ಮತ್ತು ಇತರೆ ಅನೇಕ ಸ್ವಯಂ ಸೇವಕ ತಂಡದ ಸದಸ್ಯರುಗಳಿರುತ್ತಾರೆ. ಸ್ವಯಂಸೇವಕ ತಂಡವು ಪ್ರಾಕೃತಿಕವಾಗಿ ಆಡಳಿತದ ಸೇವೆಯ ಜವಾಬ್ದಾರಿಯನ್ನು ಸಾಮಾನ್ಯವಾಗಿ ಹೊಂದಿರುತ್ತಾರೆ.

ಉದಾಹರಣೆಗೆ: ಭಾನುವಾರ ಆರಾಧನೆಗಳ-ಶುಭಾಶಯಗಾರರು, ವಾಹನ ನಿಲುಗಡೆ ನೋಡುವವರು, ಸಾರಿಗೆ, ಧ್ವನಿ ವ್ಯವಸ್ಥೆ, ಸಭಾಮಂಟಪ ವ್ಯವಸ್ಥೆ, ಮಾಹಿತಿ ಮೇಜು ಪುಸ್ತಕ ಮೇಜು, ಸಂದರ್ಶಕರನ್ನು ಆಹ್ವಾನಿಸುವವರು, ಮಾರ್ಗದರ್ಶಿ, ಕಾಣಿಕೆ ಸಂಗ್ರಹ, ಮಾಧ್ಯಮ.

## ಸೇವಾ ತಂಡಗಳು

ಸೇವಾ ತಂಡಗಳು ಸ್ವಾಭಾವಿಕವಾಗಿ ವಿಶ್ವಾಸಿಗಳ ಆತ್ಮಿಕ ಬೆಳವಣಿಗೆಯ ಪ್ರಾಕೃತಿಕವಾಗಿ ಆತ್ಮಿಕವಾದ ಸೇವೆಯ ಮೇಲೆ ದೃಷ್ಟಿಯನ್ನಿರಿಸುವ ಕೆಲವು ಮಾರ್ಗಗಳಲ್ಲಿ ಒಂದು ಸಭಾಪಾಲಕ ಸೇವೆಯ ನೇರ ವಿಸ್ತರಣೆಯಾಗಿರುತ್ತದೆ. ಸೇವಾ ತಂಡಗಳು ಕೆಲವು ಸಂದರ್ಭಗಳಲ್ಲಿ ಸ್ವಯಂ ಸೇವಕರುಗಳಿಂದ ಒಳಗೊಂಡಿರುತ್ತದೆ. ಪ್ರತಿಯೊಂದು ಸೇವಾ ತಂಡವು ಒಬ್ಬ ತಂಡದ ನಾಯಕನನ್ನು ಹೊಂದಿರುತ್ತದೆ. ಸಹಾಯಕ ತಂಡ ನಾಯಕ ಮತ್ತು ಅನೇಕ ಸೇವಾ ಸದಸ್ಯರುಗಳನ್ನು ಒಳಗೊಂಡಿರುತ್ತದೆ. ಕೆಲವು ಸಂದರ್ಭಗಳಲ್ಲಿ ಮುನ್ನಡಸಲ್ಪಡುತ್ತದೆ ಅಥವಾ ಸಭಾಪಾಲಕರು ಸೇವಾ ತಂಡದ ಭಾಗಗಳಾಗಿ ಸಹಾಯಕರಾಗಿರುತ್ತಾರೆ. ಉದಾಹರಣೆಗೆ ಬಲಿಪೀಠದ ಕರೆಯ ಪ್ರಾರ್ಥನಾ ತಂಡ, ಸದಸ್ಯರ ಕಾಳಜಿ, ಲೈಫ್‌ಗ್ರೂಪ್ ನಾಯಕರುಗಳು, ಪುರುಷರ ಸೇವೆ, ಸ್ತ್ರೀಯರ ಸೇವೆ, ಸತ್ಯವೇದ ಅಧ್ಯಯನ ಶಾಲೆ.

## ಸಭೆಯ ಸಿಬ್ಬಂದಿ

ಸಭೆಯ ವಿವಿಧ ಆಡಳಿತ ಕಾರ್ಯಗಳಿಗೆ ಸಹಾಯ ಮಾಡುವಂತಹವರಿಗೆ ಪೂರ್ಣವಧಿ ಸಂಬಳದ ಸಿಬ್ಬಂದಿ ಅಥವಾ ಪಾವತಿ ಸಲಹೆಗಾರರನ್ನು ಸಭೆಯ ಸಿಬ್ಬಂದಿ

ಒಳಗೊಂಡಿರುತ್ತಾರೆ. ಉದಾಹರಣೆಗೆ ಸಂದರ್ಶಕ ಮಾಹಿತಿ, ಸಭಾ ದಾಖಲೆಗಳು (ದೀಕ್ಷಾಸ್ನಾನಗಳು, ಮದುವೆಗಳು, ಅಂತ್ಯಕ್ರಿಯೆಗಳು, ಮಗುವಿನ ಸಮರ್ಪಣೆಗಳು) ಲೆಕ್ಕಾಚಾರ, ಹೆಚ್.ಆರ್ ವೇತನದಾರರ ಪಟ್ಟಿ, ಸ್ಥಳ ಕಾದಿರುಸುವವರು, ಆಡಿಯೋ/ವಿಡಿಯೋ/ನಿರ್ಮಾಣಗಳು ಪ್ರಕಾಶನಗಳು, ಪ್ರಚಾರಗಳು.

## ಒಬ್ಬ ಪ್ರಬಲವಾದ ನಾಯಕನಾಗಿರಿ

ಒಬ್ಬ ಪ್ರಬಲ ನಾಯಕ ಮತ್ತು ಒಳ್ಳೆಯ ನಾಯಕತ್ವದ ಕೆಲವು ಪ್ರಾಮುಖ್ಯವಾದ ಸಾಂಸ್ಥಿಕ ಕೌಶಲ್ಯಗಳು.

- *ದರ್ಶನ* - ದೇವರಿಂದ ಕೇಳಿಸಿಕೊಳ್ಳುವಂತಹ ಸಾಮರ್ಥ್ಯ.
- *ಜ್ಞಾನ* - ಸರಿಯಾದ ತೀರ್ಮಾನಗಳನ್ನು ಮಾಡುವಂತಹ ಸಾಮರ್ಥ್ಯ.
- *ಸಂಪರ್ಕ* - ಜನರು ದರ್ಶನವನ್ನು ಗ್ರಹಿಸಲು ಸಹಾಯ ಮಾಡುವಂತಹ ಸಾಮರ್ಥ್ಯ.
- *ನಿಯೋಜನೆ* - ದರ್ಶನದಲ್ಲಿ ಜನರು ತೊಡಗಿಸಿಕೊಳ್ಳಲು ಅಧಿಕಾರ ಕೊಡಲೂ ಸಾಮರ್ಥ್ಯ.
- *ಜನರ ಪ್ರಗತಿ* - ವೈಯಕ್ತಿಕ ಬೆಳವಣಿಗೆಯ ಉನ್ನತ ಮಟ್ಟಗಳಿಗೆ ಜನರನ್ನು ಎಬ್ಬಿಸಲು ಸಹಾಯ ಮಾಡಲೂ ಸಾಮರ್ಥ್ಯ.
- *ಜನರ ನಿರ್ವಹಣೆ* - ಜನರುಗಳು ಹೃದಯ, ವರಗಳು, ಕರೆಗಳನ್ನು ಗ್ರಹಿಸುವಂತಹ ಮತ್ತು ಸರಿಯಾದ ಸಮಯದಲ್ಲಿ ಸರಿಯಾದ ಸ್ಥಳದಲ್ಲಿ ಅವರನ್ನು ಇರಿಸುವಂತಹ ಸಾಮರ್ಥ್ಯ. ವ್ಯಕ್ತಿಗಳ ನಡುವಣ ಜಗಳಗಳನ್ನು ಬಗೆಹರಿಸುವ ಸಾಮರ್ಥ್ಯ.
- *ಯೋಜನೆ* - ಬಯಸಿದ ಫಲಿತಾಂಶವನ್ನು ಸಾಧಿಸಲು ಕಾಲಕಾಲಕ್ಕೆ ಸಂಪನ್ಮೂಲಗಳನ್ನು ಹೇಗೆ ಬಳಸುವುದನ್ನು ನಿರ್ಧರಿಸುವಂತಹ ಸಾಮರ್ಥ್ಯ.

  *ಕಾರ್ಯಗತಗೊಳಿಸುವಿಕೆ* - ಯೋಜನೆಯನ್ನು ಕೈಗೊಳ್ಳಲು ಸಾಮರ್ಥ್ಯ.
- *ಸ್ಥಿರತೆ* - ಸಾಗುವಂತದ್ದು ಕಠಿಣವಾಗಿದ್ದರು, ಮುಂದೆ ಹೋಗುವಂತಹ ಸಾಮರ್ಥ್ಯ.
- *ಮೌಲ್ಯಮಾಪನ* - ವಸ್ತುನಿಷ್ಟವಾಗಿ ಪರಿಸ್ಥಿತಿಗಳನ್ನು ನೋಡುವಂತಹ, ಬಲಹೀನತೆಯನ್ನು ಗುರುತಿಸುವ ಮತ್ತು ಸರಿಪಡಿಸುವ ಕ್ರಿಯೆಗಳನ್ನು ಮಾಡುವಂತಹ ಸಾಮರ್ಥ್ಯ.

- *ತೊಂದರೆ ಬಗೆಹರಿಸುವುದು* - ಒಬ್ಬ ನಾಯಕನು ತೊಂದರೆಗಳ ಮಧ್ಯದಲ್ಲಿ ಪರಿಹಾರಗಳಿಗಾಗಿ ನೋಡುತ್ತಾನೆ.
- *ನಿರಂತರ ಕಲಿಕೆ* - ನಿರಂತರವಾಗಿ ಸುಧಾರಿಸಲು ಮಾರ್ಗಗಳನ್ನು ನೋಡುತ್ತಿರುವುದು, ದೇವರ ಪ್ರಸಕ್ತ ಯೋಜನೆಗಳೊಡನೆ ಸಂಪರ್ಕದಲ್ಲಿರುವುದು.
- *ಹೊಂದಿಕೊಳ್ಳುವಿಕೆ* - ಬದಲಾಗಲು, ಅಗತ್ಯವಿದ್ದರೆ ಮರು ಹೊಂದಿಕೊಳ್ಳಲೂ ಸಾಮರ್ಥ್ಯ.
- *ಹಿಂಬಾಲಿಸು* - ಒಬ್ಬ ದೊಡ್ಡ ನಾಯಕನು ಸಹ ಒಬ್ಬ ದೊಡ್ಡ ಹಿಂಬಾಲಕನಾಗಿರುತ್ತಾನೆ.
- *ಉತ್ತರಾಧಿಕಾರಿಗಳನ್ನು ಎಬ್ಬಿಸುವುದು* - ದರ್ಶನವನ್ನು ಮುಂದುವರೆಸುಕೊಂಡು ಹೋಗುವಂತಹ ಜನರನ್ನು ಎಬ್ಬಿಸಲು ಸಾಮರ್ಥ್ಯವುಳ್ಳವರಾಗಿರಬೇಕು.

**ಫಲದಾಯಕರಾಗಿರಿ - ಕೇವಲ ಕಾರ್ಯನಿರತರಾಗಿರುವುದಲ್ಲ.**

ಸಂಘಟಿಸುವಂತಹ ಮತ್ತು ಸರಿಯಾದ ರೀತಿಯಲ್ಲಿ ಸೇವೆ ಮಾಡುವಂತದ್ದರ ಗುರಿಯು ಎಲ್ಲರೂ ಕಾರ್ಯನಿರತರಾಗಿರಬೇಕೆಂಬುದಲ್ಲ, ಬದಲಾಗಿ ನಾವುಗಳು ಫಲಕೊಡುವವರಾಗಿರಬೇಕು. ಆದ್ದರಿಂದ ದೇವರ ರಾಜ್ಯಕ್ಕಾಗಿ ನಾವು ಫಲಭರಿತವಾಗಿದ್ದೇವಾ ಎಂಬುದನ್ನು ನೋಡಲೂ ನಾವು ಮಾಡುತ್ತಿರುವವಗಳ ಮೌಲ್ಯಮಾಪನ ಮಾಡಿಕೊಳ್ಳಬೇಕು. ವಿಭಿನ್ನ ಸೇವೆಗಳಿಗಾಗಿ ಸರಿಯಾದ ಜನರನ್ನು ಸರಿಯಾದ ಸ್ಥಳದಲ್ಲಿ ನೇಮಿಸಿರಿ, ಪ್ರತಿಯೊಂದು ಸೇವೆಯ ಪರಿಣಾಮಕಾರಿತನವನ್ನು ನಿರಂತರವಾಗಿ ಮೌಲ್ಯಮಾಪಿಸುತ್ತೀರಿ. ಅನೇಕ ಕಾರಣಗಳ ನಿಮಿತ್ತವಾಗಿ ಯಾವುದಾದರೂ ನಿರ್ದಿಷ್ಟ ಸೇವೆಯು ಫಲದಾಯಕವಾಗಿಲ್ಲದಿದ್ದರೆ ನೀವು ಅದಕ್ಕೆ ಕಾರಣಗಳೇನು ಎಂಬುದನ್ನು ತಿಳಿದುಕೊಳ್ಳಬೇಕು. ಬಹುಶಃ ಸರಿಯಾದ ವ್ಯಕ್ತಿಯು ಮುನ್ನೆಡಸುತ್ತಿಲ್ಲದಿರಬಹುದು, ಅಂತರ ಸಂದರ್ಭದಲ್ಲಿ ಸರಿಯಾದ ವ್ಯಕ್ತಿಯನ್ನು ಒಳಗೆ ತರಬೇಕು. ಆದ್ದರಿಂದ ಸೇವೆಯನ್ನು ಮುನ್ನಡೆಸುವ ವ್ಯಕ್ತಿಗೆ ಸಹಾಯ ಮತ್ತು ತರಬೇತಿಯು ಅವಶ್ಯಕತೆಯಿರುತ್ತದೆ. ಇಂತಹ ಸಂದರ್ಭದಲ್ಲಿ ಇದನ್ನು ಒದಗಿಸಬೇಕಾಗುತ್ತದೆ. ಒಂದು ವೇಳೆ ತಂಡವು ಒಟ್ಟಾಗಿ ಸರಿಯಾಗಿ ಕಾರ್ಯ ಮಾಡುತ್ತಿಲ್ಲವಾದರೆ ಇಂತಹ ಸಂದರ್ಭದಲ್ಲಿ ತಂಡದೊಳಗಿನ ತೊಂದರೆಗಳನ್ನು ಗುರುತಿಸಬೇಕು ಮತ್ತು ಬಗೆಹರಿಸಬೇಕು. ಇದು ಏನೇ ಹಾಗಿದ್ದರೂ, ಸಭಾಪಾಲಕರು/

ನಾಯಕರುಗಳಾಗಿ ನೀವು ಫಲಭರಿತವಾಗಿರುವಿಕೆಯನ್ನು ನೋಡಿಕೊಳ್ಳಬೇಕು ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳಬೇಕು.

ಕೆಲವು ಬಾರಿ ಕೆಲವು ನಿರ್ದಿಷ್ಟ ಸೇವಾ ಕ್ಷೇತ್ರಗಳನ್ನು ಮುಚ್ಚುವಂತಹ ಅಗತ್ಯವಿರುತ್ತದೆ. ಸೇವೆಯು ಅದರ ಸಮಯ ಮತ್ತು ಉದ್ದೇಶಗಳೆರಡರಲ್ಲೂ ಸೇವೆ ಸಲ್ಲಿಸಿದ್ದರು ವಿಷಯಗಳು ಬದಲಾಗಬೇಕು ಅಥವಾ ಇತರೆ ಬೇರೆ ಯಾವ ಕಾರಣವಾದರೂ ಇರಬಹುದು. ಆದಾಗ್ಯೂ ಪವಿತ್ರಾತ್ಮನ ನಡೆಸುವಿಕೆಯಲ್ಲಿ ಮತ್ತು ದೇವರ ಜ್ಞಾನದ ಅಡಿಯಲ್ಲಿ ನೀವು ಕಠಿಣವಾದ ತೀರ್ಮಾನಗಳನ್ನು ಮಾಡಬೇಕು ಆದ್ದರಿಂದ ಆ ಸಮಯದಲ್ಲಿ ಶಕ್ತಿ ಮತ್ತು ಸಂಪನ್ಮೂಲಗಳು ನಿರುಪಯೋಗವಾಗುವುದಿಲ್ಲ ನಮ್ಮ ಗುರಿಯು ಅವಿಶ್ರಾಂತರಾಗಿರುವುದರಲ್ಲಿ ಆದರೆ ದೇವರ ರಾಜ್ಯಕ್ಕಾಗಿ ಫಲಭರಿತವಾಗಿರುವುದಾಗಿದೆ.

## ನಿಮ್ಮ ಹಣಕಾಸನ್ನು ಕ್ರಮದಲ್ಲಿ ಇರಿಸಿರಿ

ಹಣಕಾಸು ಸ್ಥಳೀಯ ಸಭೆಯ ಒಂದು ಪ್ರಾಮುಖ್ಯವಾದ ಭಾಗವಾಗಿದೆ. ಹಣಕಾಸಿನ ದುರುಪಯೋಗವು ಸೇವೆಗೆ ಅಪಾಯಕಾರಿಯಾದುದು ಮತ್ತು ಸೇವೆಯು / ಸ್ಥಳೀಯ ಸಭೆಯು ಮುಚ್ಚಿ ಹೋಗಲೂ ಕಾರಣವಾಗಬಹುದು. ಇದಲ್ಲದೇ ತಪ್ಪಾದ ಹಣಕಾಸಿನ ಉಪಯೋಗವು ಕರ್ತನ ಹೆಸರಿಗೆ ಅಗೌರವ ತರುತ್ತದೆ. ಆದ್ದರಿಂದ ಸ್ಥಳೀಯ ಸಭೆಯ ಸೇವೆಯ ಇಂತಹ ಕ್ಷೇತ್ರಗಳನ್ನು ಅತ್ಯಂತ ಜಾಗರೂಕತೆಯಿಂದ ನಿರ್ವಹಿಸುವಂತದ್ದು ಅತೀ ಪ್ರಾಮುಖ್ಯವಾದದ್ದು.

- ಕ್ರಮಬದ್ಧವಾದ ಲೆಕ್ಕಚಾರಗಳನ್ನಿಡಿರಿ.
- ಕಾನೂನು ಅವಶ್ಯಕತೆಗಳನ್ನು ಹಿಂಬಾಲಿಸಿರಿ.
- ನಿಮಗಿಲ್ಲದಿರುವಾಗ, ಹಣವನ್ನು ವೆಚ್ಚ ಮಾಡದಿರಿ - ನಿಯಂತ್ರಿಸಲಾಗದ ಸಾಲವನ್ನು ತಪ್ಪಿಸಿರಿ.
- ಅವಸರಪಡಬೇಡಿರಿ, ನಿಮ್ಮಲ್ಲಿರುವಂತದ್ದರಲ್ಲಿ ಪ್ರಾರಂಭಿಸಿ, ದೇವರ ಸಮಯದಲ್ಲಿ ಕಟ್ಟಿರಿ.
- ಒಂದು ಆಯವ್ಯಯಪತ್ರ ಹೊಂದಿರಿ ಮತ್ತು ಪಾಲಿಸಿರಿ
- ದೇವರ ಮುನ್ನಡೆಸುವಿಕೆಯಲ್ಲಿ ನಂಬಿಕೆಯಿಂದ ಹೆಜ್ಜೆಯನ್ನಿಡಿರಿ.

## ಖಾತೆಗಳನ್ನು ನಿರ್ವಹಿಸುವುದು

- ಇದನ್ನು ಸರಿಯಾಗಿ ಮಾಡಲೂ ಅಗತ್ಯವಿದ್ದರೆ, ವಿಶ್ವಾಸಾರ್ಹ ಲೆಕ್ಕಿಗರ ಸಹಾಯವನ್ನು ಪಡೆದುಕೊಳ್ಳಿರಿ.
- ಎಲ್ಲಾ ಆದಾಯದ ಮತ್ತು ನಿಖರವಾದ ವೆಚ್ಚಗಳ ದಾಖಲೆಗಳನ್ನು ಇಡಲೂ ಒಂದು ಒಳ್ಳೆಯ ಲೆಕ್ಕಚಾರ ವ್ಯವಸ್ಥೆಯನ್ನು ಪಾಲಿಸಿರಿ.
- ನಷ್ಟವಾಗಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲೂ ಸಾಕಷ್ಟು ಕಾರ್ಯ ವಿಧಾನಗಳಿದೆ ಎಂಬುದನ್ನು ತಿಳಿದುಕೊಳ್ಳಿರಿ.
- ನಿರಂತರವಾಗಿ ಹಣಕಾಸಿನ ಫಲಿತಾಂಶಗಳನ್ನು ಕಾರ್ಯಕ್ಷಮತೆಯನ್ನು ನಿರ್ಣಯಿಸಲು ಅಳತೆ ಮಾಡುತ್ತೀರಿ.

## *ಒಂದು ಧಾರ್ಮಿಕ ಟ್ರಸ್ಟ್‌ನ ಕಾನೂನು ಮತ್ತು ಹಣಕಾಸಿನ ಹೊಣೆಗಾರಿಕೆಗಳು*

ಸಭೆಯನ್ನು ಒಂದು ಧಾರ್ಮಿಕ ಟ್ರಸ್ಟ್ ಆಗಿ ನೋಂದಣಿ ಮಾಡಿದ ಮೇಲೆ ಕಾನೂನು ಮತ್ತು ಹಣಕಾಸಿನ ಅವಶ್ಯಕತೆಗಳನ್ನು ಹಿಂಬಾಲಿಸಬೇಕು. (ವಿಶ್ವಾಸಾಹ ಲೆಕ್ಕ ಪರಿಶೋಧಕರ ಸಹಾಯವನ್ನು ಪಡೆದುಕೊಳ್ಳಿರಿ)

- ಶಾಶ್ವತವಾದ ಖಾತೆಯ ಸಂಖ್ಯೆಗೆ ಅರ್ಜಿಹಾಕಿರಿ (ಪಾನ್) (PAN)
- ತೆರೆಗೆ ಖಾತೆ ಸಂಖ್ಯೆಗೆ ಅರ್ಜಿ ಹಾಕಿರಿ (ಟಾನ್) (TAN).
- 12ಎ ವಿಭಾಗದ ಕೆಳಗೆ ನೋಂದಣಿ ಮಾಡಿರಿ ಮತ್ತು ಆದಾಯ ತೆರಿಗೆ ಆಯುಕ್ತರಿಂದ ಆದಾಯ ತೆರಿಗೆ ವಿನಾಯಿತಿ ಪಡೆದುಕೊಳ್ಳಿರಿ.
- ವೃತ್ತಿಪರ ತೆರಿಗೆಯನ್ನು ನೋಂದಣಿ ಮಾಡಿರಿ.
- ಅನ್ವಯವಾದಲ್ಲಿ ಧಾರ್ಮಿಕ ಸ್ಥಳಗಳ ನೋಂದಣಿಯ ಅಡಿಯಲ್ಲಿ ನೋಂದಣಿ ಮಾಡಿರಿ.
- ಟ್ರಸ್ಟಿಗಳ ಸಭೆಗಳ ಚರ್ಚಾ ವಿಷಯದ ನಿಮಿಷಗಳನ್ನು ದಾಖಲಿಸಿ ಮತ್ತು ಕಡತಗಳಲ್ಲಿಡಿರಿ.
- ನಿಯಮಿತ ಶಾಸನಬದ್ಧ ಲೆಕ್ಕ ಪರಿಶೋಧನೆಗಳನ್ನು ನಡೆಸುತ್ತಿರಬೇಕು.
- ಅಗತ್ಯವಾದ ತೆರಿಗೆಗಳನ್ನು ಸಲ್ಲಿಸಬೇಕು.

## ಎಲ್ಲವನ್ನು ಬರವಣಿಗೆಯಲ್ಲಿ ಇಡಿರಿ. ಕಾನೂನು ಅಂಶಗಳನ್ನು ಒಳಗೊಂಡಿರಲಿ

ಭೂಭಾಗದ ಕಾನೂನು ನಿಮಗಾಗಿ ಅಥವಾ ನಿಮಗೆ ವಿರುದ್ಧವಾಗಿ ಕೆಲಸಮಾಡಬಹುದು. ಇದು ನೀವು ಯಾವ ಪಕ್ಕದ ಸಾಲಿನಲ್ಲಿ ನಿಂತುಕೊಳ್ಳುತ್ತೀರ ಎಂಬುದರ ಮೇಲೆ ಆತುಕೊಂಡಿದೆ. ನೀವು ಆಸ್ತಿ ಮಾಲೀಕರೊಂದಿಗೆ ಮಾರಾಟಗಾರರು ಮತ್ತು ಇತರೆ ಗುತ್ತಿಗೆದಾರರೊಂದಿಗೆ ಮಾಡಿಕೊಳ್ಳುವ  ಎಲ್ಲಾ ಗುತ್ತಿಗೆಗಳು ಮತ್ತು ಒಪ್ಪಂದಗಳು ಬರವಣಿಗೆಯಲ್ಲಿಡುವುದು ಮತ್ತು ಇಬ್ಬರೂ ವ್ಯಕ್ತಿಗಳು ಸಹಿ ಮಾಡುವುದು ಬಹಳ ಜ್ಞಾನವುಳ್ಳದ್ದಾಗಿದೆ. ಇನ್ನೊಬ್ಬನ ಮಾತಿನ ಮೇಲೆ ದೊಡ್ಡ ವ್ಯವಹಾರಗಳನ್ನು ಮಾಡಬೇಡಿರಿ. ಅವರು ಹೇಳುವುದರಲ್ಲಿ ಅವರು ಬದಲಾಗಬಹುದು ಮತ್ತು ಪರಿಸ್ಥಿತಿಗಳು ಬಹಳ ಕಠಿಣವಾಗಿ ಕಂಡುಬರುತ್ತವೆ.

# 27

# ಸಣ್ಣ ಗುಂಪುಗಳನ್ನು ಸಂಘಟಿಸುವುದು

ವಿಶೇಷವಾಗಿ ಸ್ಥಳೀಯ ಸಭೆಯ ಸಂಖ್ಯೆಯು ಹೆಚ್ಚಳವಾಗುವಾಗ ಸಣ್ಣ ಗುಂಪುಗಳ ಕೂಟಗಳು ಬಹಳ ಪ್ರಾಮುಖ್ಯವಾದವುಗಳಾಗಿರುತ್ತವೆ. ಜನರು ಅನ್ಯೋನ್ಯತೆಯಾಗಿರಲು ಹಂಚಿಕೊಳ್ಳಲೂ ಮತ್ತು ಅರ್ಥಪೂರ್ಣವಾದ ರೀತಿಯಲ್ಲಿ ಒಟ್ಟಾಗಿ ಜೀವನ ಮಾಡುವುದಕ್ಕೆ ಸಣ್ಣಗುಂಪುಗಳು ಸಹಾಯ ಮಾಡುತ್ತವೆ. ಸಣ್ಣ ಗುಂಪುಗಳು ಅನೇಕ ಜನರು ಸೇವೆ ಮಾಡಲೂ ಅವರ ವರಗಳನ್ನು ಉಪಯೋಗಿಸಲು ಅವಕಾಶಗಳನ್ನು ಒದಗಿಸುತ್ತದೆ. ಸುವಾರ್ತೆ ಸಾರಲೂ, ಆತ್ಮಗಳನ್ನು ಗೆಲ್ಲಲು ಮತ್ತು ಶಿಷ್ಯರುಗಳನ್ನು ಮಾಡಲು ಸಣ್ಣ ಗುಂಪುಗಳು ದೊಡ್ಡ ಮಾರ್ಗಗಳಾಗಿವೆ. ಅನೇಕ ಹೊಸ ಜನರು ಸಣ್ಣ ಪರಿಚಿತ ವ್ಯವಸ್ಥೆಗಳಲ್ಲಿ ಆರಾಮದಾಯಕರಾಗಿರುತ್ತಾರೆ. ಅಲ್ಲದೆ, ದೊಡ್ಡ ಗುಂಪುಗಳ ಕೂಟಗಳ ಗುರಿಯಾಗಿಸಿಕೊಂಡ ಹಿಂಸೆಗಳುಳ್ಳ ಕ್ಷೇತ್ರಗಳಲ್ಲಿಯು, ಜನರು ನಿರಂತರವಾಗಿ ಸಣ್ಣ ಗುಂಪುಗಳಲ್ಲಿ ಸಂಧಿಸಬಹುದು ಮತ್ತು ಸಭೆಯು ನಿರಂತರವಾಗಿ ಹಸನಾಗಿ ಬೆಳೆಯಬಹುದು.

ವಿಶಾಲವಾಗಿ ಹೇಳುವುದಾದರೆ ನಾವು ಎರಡು ಬಗೆಯ ಸಣ್ಣ ಗುಂಪುಗಳನ್ನು ಹೊಂದಿರಬಹುದು.

- *ಲೈಫ್ ಗುಂಪುಗಳು:* ಒಂದು ಸ್ಥಳೀಯ ಸಭೆಯ ಅಂಗದ ಭಾಗಗಳಾಗಿರುವಂತಹವರಿಗೆ ಶಿಷ್ಯತ್ವ ಮತ್ತು ಅನ್ಯೂನತೆಯ ಪ್ರಾಥಮಿಕ ಉದ್ದೇಶವನ್ನು ಸಣ್ಣಗುಂಪುಗಳು ಹೊಂದಿವೆ. ಇವುಗಳನ್ನು ನಾವು ''ಲೈಫ್ ಗುಂಪುಗಳು'' ಎಂಬುದಾಗಿ ಕರೆಯುತ್ತೇವೆ.
- *ಆಲ್ಫಾ ಗುಂಪುಗಳು:* ಸಣ್ಣಗುಂಪುಗಳ ಪ್ರಾಥಮಿಕ ಉದ್ದೇಶವು ಆತ್ಮಗಳನ್ನು ಗೆಲ್ಲುವುದು ಮತ್ತು ಹೊಸ ವಿಶ್ವಾಸಿಗಳನ್ನು ಪೋಷಿಸುವುದಾಗಿದೆ, ಆದ್ದರಿಂದ ನಂತರದ ಹಂತದ್ದಲ್ಲಿ ಅವರು ಸ್ಥಳೀಯ ಸಭೆಯ ಅಂಗಗಳಾಗಿ ಕಂಡುಬರುತ್ತಾರೆ ನಾವು ಇದನ್ನು ಆಲ್ಫಾ ಗುಂಪುಗಳು ಎಂಬುದಾಗಿ ಕರೆಯುತ್ತೇವೆ

## ಲೈಫ್ ಗುಂಪುಗಳು

ನಿರಂತರವಾಗಿ ಸಂಧಿಸುವ, ಅರ್ಥಪೂರ್ಣವಾದ ಸ್ನೇಹವನ್ನು ಅಭಿವೃದ್ಧಿಪಡಿಸುವ, ಒಟ್ಟಾಗಿ ಬೆಳೆಯುವ ಮತ್ತು ದೇವರ ಉದ್ದೇಶದಲ್ಲಿ ಒಟ್ಟಾಗಿ ಸೇವೆ ಮಾಡುವ 12 ಜನರ ತನಕ (ವಯಸ್ಕರು) ಇರುವ ಒಂದು ಸಣ್ಣ ಗುಂಪು.

## *ಉದ್ದೇಶ*

ಲೈಫ್ ಗ್ರೂಪ್‌ನ ಉದ್ದೇಶವು ಜನರನ್ನು ಇವುಗಳಲ್ಲಿ ಬೆಳೆಸುವುದಾಗಿದೆ:

#1. ಅನ್ಯೋನ್ಯತೆ, #2. ಶಿಷ್ಯತ್ವ, #3. ಸದಸ್ಯರ ಕಾಳಜಿ, #4. ಸುವಾರ್ತೆ, #5. ಸೇವೆ

## ಲೈಫ್ ಗುಂಪು ಕೂಟ

ವಾರದಲ್ಲಿ ಅಥವಾ ಎರಡು ವಾರದಲ್ಲಿ ಒಮ್ಮೆ 1.5 ರಿಂದ 2 ಗಂಟೆಗಳು. ಅಲ್ಲಿ ಆಹ್ವಾನ, ಆರಾಧನೆ, ಸಾಕ್ಷಿಗಳನ್ನು ಹಂಚುವುದಕ್ಕೆ ಸಮಯವಿರುತ್ತದೆ, ದೇವರ ವಾಕ್ಯದ ಚರ್ಚೆ (ಸಾಮಾನ್ಯವಾಗಿ ಭಾನುವಾರದ ಆರಾಧನೆಯಲ್ಲಿ ಸಂದೇಶದ ಅನ್ವಯದ ಮೇಲೆ ಚರ್ಚೆ) ಪ್ರಾರ್ಥನೆ ಮತ್ತು ಸೇವೆಗೆ ಸಮಯ, ನಂತರ ಊಟ/ತಿಂಡಿಗಳು/ ಉಪಹಾರವಿರುತ್ತದೆ. ಇವುಗಳನ್ನು ಮಾಡುವಂತಹ ನಿಜವಾದ ಕ್ರಮವು ಬದಲಾಗಬಹುದು. ಕೆಲವು ಲೈಫ್ ಗುಂಪುಗಳು ಪ್ರಾರಂಭದಲ್ಲಿ ಬರೀ ತಿಂಡಿಗಳನ್ನು ಮಾತ್ರ ಕೊಡಬಹುದು.

## *ಲೈಫ್ ಗ್ರೂಪ್ ನಾಯಕರ ಜೀವಿತದ ಜವಾಬ್ದಾರಿಗಳು*

ಸಭೆಯಲ್ಲಿ ಹೊಸ ಜನರನ್ನು ಲೈಫ್ ಗ್ರೂಪ್‌ಗೆ ಸಂಪರ್ಕ ಹೊಂದಲೂ ಆಹ್ವಾನಿಸುವುದು.

ವಾರದಲ್ಲಿ ಲೈಫ್ ಗ್ರೂಪ್‌ಗೆ ಬರುವಂತಹವರನ್ನು ಅನುಸರಿಸುವುದು ಮುನ್ನಡೆಸುವುದು.

ಲೈಫ್ ಗ್ರೂಪ್‌ನಲ್ಲಿ ಇರುವಂತಹವರ ಜೀವಿತದಲ್ಲಿ ಆತ್ಮಿಕ ಅಭಿವೃದ್ಧಿಯ ಮೇಲ್ವಿಚಾರಣೆ ಮಾಡುವುದು ಮತ್ತು ಪ್ರಾರ್ಥಿಸುವುದು.

ಸದಸ್ಯರ ಕಾಳಜಿ, ಸುವಾರ್ತೆ ಮತ್ತು ಸೇವೆಯು ಲೈಫ್ ಗ್ರೂಪ್‌ನಲ್ಲಿಯೇ ಜರುಗುವುದನ್ನು ಪ್ರೋತ್ಸಾಹಿಸಬೇಕು ಸಭಾಪಾಲಕರಿಗೆ ವಾರಕ್ಕೊಮ್ಮೆ ಇ-ಮೇಲ್‌ನಲ್ಲಿ ವರದಿ ಕಳುಹಿಸುವುದು.

## *ಲೈಫ್‌ಗ್ರೂಪ್ ಡೈನಾಮಿಕ್ಸ್: ಅನ್ಯೋನ್ಯತೆ*

ಜೀವಿತವನ್ನು ಹಂಚಿಕೊಳ್ಳುವುದು - ಸಾಂದರ್ಭಿಕವಾದುದಕ್ಕಿಂತ ಮೇಲೆ ಹೋಗುವುದು.

ಪ್ರಶ್ನೆಗಳನ್ನು ಕೇಳುವುದು ಮತ್ತು ಉತ್ತರಿಸುವುದು.

ಆತ್ಮಿಕ ಬೆಳವಣಿಗೆಗೆ ಪ್ರೋತ್ಸಾಹಿಸುವುದು ಮತ್ತು ಬೆಂಬಲಿಸುವುದು.

## *ಲೈಫ್‌ಗ್ರೂಪ್ ಡೈನಾಮಿಕ್ಸ್: ಶಿಷ್ಯತ್ವ*

ಕ್ರಿಸ್ತನ - ಸಾರೂಪ್ಯಕ್ಕೆ ಪರಿಪಕ್ವತೆಗೊಳ್ಳಲೂ ಒಬ್ಬರಿಗೊಬ್ಬರು ಸಹಾಯ ಮಾಡುವುದು.

ಪಾಪ, ಗುಣನಡತೆ ಅಭಿವೃದ್ಧಿ, ಜೀವಿತದ ಯೋಜನೆ, ಪ್ರೌಢತೆ ಮುಂತಾದ ಸಮಸ್ಯೆಗಳೊಂದಿಗೆ ವ್ಯವಹರಿಸುವುದು.

ಅಗತ್ಯವಿರುವಾಗ ಸಲಹೆಗಾರರು ಅಥವಾ ಸಭಾಪಾಲಕರಿಂದ ಸಹಾಯ ಪಡೆಯಲು ಜನರನ್ನು ನಡೆಸುವುದು.

## *ಲೈಫ್‌ಗ್ರೂಪ್ ಡೈನಾಮಿಕ್ಸ್: ಸದಸ್ಯರ ಕಾಳಜಿ*

ಯಥಾರ್ಥವಾದ ಪ್ರೀತಿ, ಕಾಳಜಿ, ಆಸಕ್ತಿಯನ್ನು ಒಬ್ಬರಿಗೊಬ್ಬರೂ ತೋರ್ಪಡಿಸಿರಿ.

ಬೆಂಬಲಕ್ಕಾಗಿ ಒಟ್ಟಾಗಿ ಸೇರಿ ಬನ್ನಿರಿ ಮತ್ತು ಅಗತ್ಯತೆಯ ಸಮಯದಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡಿರಿ

ವಿಶೇಷ ಅಗತ್ಯತೆ ಅಥವಾ ತುರ್ತುಪರಿಸ್ಥಿತೆಗಳಿದ್ದರ ಸಭಾಪಾಲಕರಿಗೆ ಮಾಹಿತಿ ಕೊಡಿರಿ.

ಅವಲಂಬನೆಯನ್ನು ತಪ್ಪಿಸಿ (ತಪ್ಪಾದ ಜೀವನಶೈಲಿ)

## *ಲೈಫ್‌ಗ್ರೂಪ್ ಡೈನಾಮಿಕ್ಸ್: ಸುವಾರ್ತೆ*

ಆತ್ಮಗಳನ್ನು ಗೆಲ್ಲುವುದು ಮತ್ತು ಶಿಷ್ಯರನ್ನಾಗಿ ಮಾಡುವುದರ ಮೇಲೆ ದೃಷ್ಟಿಯನ್ನಿಡಿರಿ.

ಪ್ರತಿಯೊಬ್ಬರ ಪ್ರಭಾವದ ವೃತ್ತದಿಂದ ಹೊಸ ಜನರನ್ನು ಆಹ್ವಾನಿಸಿರಿ.

ವಿಶೇಷ ಸುವಾರ್ತಾಕೂಟಗಳನ್ನು ಮತ್ತು ಹೊರ ಸುವಾರ್ತಾಚಾಚುವಿಕೆಗಳನ್ನು ಕರ್ತನಿಗಾಗಿ ಹೊಸ ಆತ್ಮಗಳನ್ನು ಗೆಲ್ಲಲು ಮಾಡಿರಿ.

## ಲೈಫ್‌ಗ್ರೂಪ್ ಡೈನಾಮಿಕ್ಸ್: ಸೇವೆ

ಲೈಫ್ ಗ್ರೂಪ್‌ನ ಸದಸ್ಯರುಗಳು ವರಗಳನ್ನು ಗುರುತಿಸಲು ಮತ್ತು ಸಭೆಯಲ್ಲಿ ಸೇವೆಸಲ್ಲಿಸಲು ಪ್ರೋತ್ಸಾಹ ಮಾಡಿರಿ.

ಸಭೆಯ ಸುವಾರ್ತೆಗೆ ಹೊರಗೆ ಹೋಗುವಿಕೆ ಮತ್ತು ಸೇವೆಗಳ ಪಯಣಗಳಿಗೆ ಹೋಗಿರಿ.

ಸ್ಥಳೀಯ ಸೇವೆಯಲ್ಲಿ ತೊಡಗಿಸಿರಿ (ಕೊಳಚೆಗೇರಿಗಳು, ವಯಸ್ಸಾದವರ ಮನೆಗಳು, ಶಾಲೆಗಳ ಸಂಧಿಸುವಿಕೆ ಮತ್ತು ಮುಂತಾದವು)

## ಸಾಮಾನ್ಯ ಮಾರ್ಗದರ್ಶನಗಳು

ಲೈಫ್ ಗ್ರೂಪ್‌ನ ನಾಯಕರುಗಳು, ಬೇರೊಬ್ಬರಿಗೆ ನಾಯಕತ್ವವನ್ನು ಹಸ್ತಾಂತರಿಸಬೇಡಿ ಸಮುದಾಯಗಳನ್ನು ಬೆಳೆಸಿರಿ, ಗುಂಪುಗಳು ಅಥವಾ ಬಣಗಳನ್ನು ಬೆಳೆಸಬೇಡಿರಿ.

ಪ್ರತಿ ಲೈಫ್‌ಗ್ರೂಪ್‌ನಲ್ಲಿ 12 ಜನರಷ್ಟು ಮಾತ್ರ ಇರಲಿ.

ಜನರು ಆತ್ಮಿಕ ಶಿಶುಗಳಾಗಿ ಇರಬಾರದು. ಅವರು ಬೆಳೆಯಲು ಸಹಾಯಮಾಡಿರಿ. ಜಗಳಗಳು, ವಾದಗಳು, ವಿವಾದಾತ್ಮಕ ವಿಷಯಗಳು ಚರ್ಚೆಯ ಸಮಯದಲ್ಲಿ ತ್ವರಿತವಾಗಿ ದ್ವಿಗುಣಗೊಳ್ಳುವಂತಹವುಗಳನ್ನು ತಪ್ಪಿಸಿರಿ ಮತ್ತು ಹೊಸ ಲೈಫ್‌ಗ್ರೂಪ್‌ಗಳನ್ನು ಪ್ರಾರಂಭಿಸಲು ಪರಿಪಕ್ವತೆಯುಳ್ಳ ಸದಸ್ಯರುಗಳನ್ನು ಕಳುಹಿಸಿರಿ. ಹೊಸ ಲೈಫ್‌ಗ್ರೂಪ್ಸ್ ನಾಯಕರುಗಳನ್ನು ಪೋಷಿಸಿರಿ ಮತ್ತು ಬಿಡುಗಡೆ ಮಾಡಿರಿ.

# 28

# ಮಹಾಸಭೆ ಮತ್ತು ಬಹುಪ್ರದೇಶದ ಸಭೆ (ಮೆಗಾ ಸಭೆ ಮತ್ತು ಮಲ್ಟಿಸೈಟ್ ಸಭೆ)

## ಮೆಗಾ (ಬೃಹತ್) ಸಭೆಗಳು

ಇತ್ತೀಚಿನ ದಿನಗಳಲ್ಲಿ ಒಂದು ಹೊಸ ವರ್ಗದ ಸಭೆಯು ಹೊರಹೊಮ್ಮಿದೆ: ಅತೀ ದೊಡ್ಡದಾದ ಸಭೆ ಒಂದು ''ಮೆಗಾ ಸಭೆ'' (ದೊಡ್ಡ ಸಭೆ) ಎಂದು ಕರೆಯುತ್ತಾರೆ. ಇಂತಹ ಸ್ಥಳೀಯ ಸಭೆಗಳು ವಿಶಿಷ್ಟವಾಗಿ 2,000 ಸಭಿಕರನ್ನು ಅಥವಾ ಇನ್ನೂ ಅಧಿಕವಾದ ಹಾಜರಾತಿಯನುಸಿ ಹೊಂದಿರುತ್ತವೆ.

ಹಾಗೆಯೇ ಮೆಗಾ ಸಭೆಯ (ದೊಡ್ಡ) ಕಲ್ಪನೆಯಿಂದ ಅನೇಕ ಜನರು ದೂರ ಸರಿಯುತ್ತಾರೆ. ಮೆಗಾ (ದೊಡ್ಡ) ಸಭೆಯ ಲಾಭಗಳು ಮತ್ತು ಅಗತ್ಯತೆಗಳನ್ನು ನಾವು ಅರ್ಥಮಾಡಿಕೊಳ್ಳಬೇಕು. ಹೆಚ್ಚಿನ ನಗರ ಕೇಂದ್ರಗಳಲ್ಲಿ ಅನೇಕ ಮಿಲಿಯನ್ ಜನರುಗಳೊಡನೆ ಕೆಲವು ಜನರುಗಳೊಡನೆ ಇರುವ ಸ್ಥಳೀಯ ಸಭೆಯು ''ಚಿಕ್ಕ ಮತ್ತು ಸ್ನೇಹಶೀಲವಾಗಿ'' ಉಳಿಯಲು ಬಯಸುವಂತಹ ಸಭೆಗಳಿಗೆ ಸರಿಯಿಲ್ಲದಂತೆ ಅನ್ನಿಸುತ್ತದೆ. ಕರ್ತನಾದ ಯೇಸುವು ನಗರದಲ್ಲಿನ ಎಲ್ಲಾ ವ್ಯಕ್ತಿಗಳಿಗಾಗಿ ಮರಣ ಹೊಂದಿದ್ದಾನೆ ಮತ್ತು ನಾವು ಆತ್ಮಗಳನ್ನು ಗೆಲ್ಲಲು ಮತ್ತು ಅವರಿಗೆ ಶಿಷ್ಯತ್ವ ನೀಡುವುದರೊಂದಿಗೆ ತಲುಪಬೇಕು. ಎರಡನೆಯದಾಗಿ ಮೆಗಾ(ದೊಡ್ಡ) ಸಭೆಗಳು ಜನರ ಸಂಗ್ರಹಿಸಲಾದ ಸಂಪನ್ಮೂಲಗಳು, ಬಲ, ಸಮಯ ಮತ್ತು ಹಣಕಾಸಿನೊಡನೆ ಬಹಳಷ್ಟು ಹೆಚ್ಚು ಮಾಡಬಹುದು ಮೂರನೇಯದಾಗಿ ಮೆಗಾ(ದೊಡ್ಡ) ಸಭೆಗಳು ಮಾಧ್ಯಮಗಳ ದೊಡ್ಡ ಮಟ್ಟದ ಅಧಿಕಾರಿಗಳ ಗಮನ ಸೆಳೆಯುವುದರಿಂದ ಗಮನಾರ್ಹ ರೀತಿಯಲ್ಲಿ ಸಮಾಜದ ಮೇಲೆ ಪರಿಣಾಮ ಬೀರಬಹುದು ಮತ್ತು ಅಗತ್ಯವಿರುವ ಕಡೆಯಲ್ಲಿ ಧ್ವನಿ ಎತ್ತಬಹುದು. ನಾಲ್ಕನೆಯದಾಗಿ ಮೆಗಾ ಸಭೆಗಳು ದೊರೆಯುವಂತಹ ಮೂಲ ಸೌಕರ್ಯಗಳನ್ನು ಉಪಯೋಗಿಸುವುದರಿಂದ ಚಿಕ್ಕ ಸಭಿಕರುಗಳಿಗಿಂತ ಅಧಿಕವಾದಂತಹ ಸುವಾರ್ತಾ ಸೇವೆ ಪ್ರಯಾಣಗಳಲ್ಲಿ ತೊಡಗಿಸಿಕೊಳ್ಳಬಹುದು. ಕೊನೆಯದಾಗಿ ಮೆಗಾ(ದೊಡ್ಡ) ಸಭೆಗಳು, ಸಣ್ಣ ಗುಂಪು ಉಪಯೋಗದ ಪರಿಣಾಮದ

ಮೂಲಕವಾಗಿ ಅನ್ಯೋನ್ಯತೆ ಮತ್ತು ನಿಕಟತೆಯನ್ನು ಒದಗಿಸಬಹುದಾಗಿದೆ. ಹೀಗಾಗಿ ಸಮುದಾಯಗಳಿಗಾಗಿ ದೊಡ್ಡ ಸಭಿಕರುಗಳು ಮತ್ತು ಸಣ್ಣ ಗುಂಪುಗಳ ಲಾಭವನ್ನು ಹೊಂದಿರುತ್ತದೆ.

ಸಂಶೋಧನಾ ವರದಿಗಳು, ಮೆಗಾ ಸಭೆಯಲ್ಲಿ / ನಾಯಕತ್ವದಲ್ಲಿನ ನಾಯಕನು ಎಲ್ಲಾ ವ್ಯತ್ಯಾಸಕರವಾದುದ್ದನ್ನು ಮಾಡುತ್ತಾನೆಂಬುದಾಗಿ ತೋರಿಸುತ್ತದೆ. ಅನೇಕ ಮಾರ್ಗಗಳಲ್ಲಿ ಮೆಗಾ ಸಭೆಯ ನಾಯಕನು ಒಂದು ಗಮನಾರ್ಹ ವ್ಯತ್ಯಾಸವನ್ನು ಮಾಡುತ್ತಾರೆ. ಹಿರಿಯ ಸಭಾಪಾಲಕರುಗಳು ವಿಶಿಷ್ಟವಾಗಿ ಒಂದು ದಾರ್ಶನಿಕ ನಾಯಕರು ಮತ್ತು ಧ್ವನಿಯನ್ನು ಹೊಂದಿಸುತ್ತಾರೆ ಮತ್ತು ಸಭಿಕರ ಆತ್ಮಿಕ ಅಭಿವೃದ್ಧಿಗಾಗಿ ಮಾರ್ಗದರ್ಶನ, ಗಮನವನ್ನು ಅಧಿಕವಾಗಿ ಸೃಷ್ಟಿಸುತ್ತಾರೆ.

ಹೆಚ್ಚಿನ ಮೆಗಾ(ದೊಡ್ಡ) ಸಭೆಗಳು ಬಹು ಆರಾಧನಾ ಆಯ್ಕೆಗಳನ್ನು ಒದಗಿಸುತ್ತವೆ. ಇದು ಅನೇಕ ಆರಾಧನಾ ಸಮಯಗಳು ಜೊತೆಗೆ ಭಾಷೆಯ ಆಯ್ಕೆಗಳನ್ನು ಹೊಂದಿರುತ್ತವೆ.

## ಮಲ್ಟಿಸೈಟ್ (ಬಹುಜಾಗ) ಸಭೆಗಳು

ಒಂದು ಮಲ್ಟಿಸೈಟ್ ಸಭೆಯು ಒಂದು ಮುಖ್ಯವಾದ ಸಭೆಯು ಅನೇಕ ಸ್ಥಳಗಳಲ್ಲಿ ನಗರಗಳೊಳಗೆ ಅಥವಾ ನಗರದ ಆಚೆಗೆ ಆರಾಧನೆಕೂಟಗಳನ್ನು ನಡೆಸುವಂತದ್ದಾಗಿರುತ್ತದೆ. ಮಲ್ಟಿಸೈಟ್‌ಗಳ (ಬಹುಜಾಗಗಳು) ಆವರಣಗಳನ್ನು ವಿವಿಧ ರೀತಿಗಳಲ್ಲಿ ನಡೆಯುತ್ತವೆ. ಒಂದು ಸಾಮಾನ್ಯವಾದ ವಿಧಾನವು ಉಪಗ್ರಹದ ಆವರಣಗಳಲ್ಲಿ ವಿಡಿಯೋ ಬೋಧನೆಗಳನ್ನು ಹೊಂದಿರುವುದು. ವಿಡಿಯೋ ಬೋಧನೆಗಳು ಮುಂಚಿತವಾಗಿ ಚಿತ್ರಿಕರಿಸಿ ದಾಖಲಿಸಲಾಗಿರುತ್ತದೆ ಅಥವಾ ಆರಾಧನೆಗೆ ನೇರವಾಗಿ ಪ್ರಸಾರವಾಗುತ್ತವೆ. ಇತರ ಮಲ್ಟಿಸೈಟ್ (ಬಹುಜಾಗ) ಆವರಣಗಳು ಸಭಾ ಪಾಲಕ ತಂಡದ ಒಬ್ಬ ಸದಸ್ಯನಿಂದ ಸ್ವತಃ ಬೋಧಿಸಲ್ಪಡುತ್ತದೆ. ಕೆಲವೊಮ್ಮೆ ಒಬ್ಬ ಆವರಣ ಸಭಾಪಾಲಕ ಎಂಬುದಾಗಿ ಕರೆಯಲ್ಪಡುತ್ತಾರೆ.

ಬೆಂಗಳೂರಿನಲ್ಲಿರುವ ಆಲ್ ಪೀಪಲ್ಸ್ ಸಭೆಯು ಮಲ್ಟಿಸೈಟ್ (ಬಹುಜಾಗ) ಮಾದರಿಯನ್ನು ಹಿಂಬಾಲಿಸುತ್ತಿದೆ. ನಾವು ಅನೇಕ ಆರಾಧನಾ ಸ್ಥಳಗಳು ಅಥವಾ ಅನೇಕ ಸಭಿಕರುಗಳನ್ನು ಹೊಂದಿರುವ ಒಂದೇ ಸಭೆಯಾಗಿದ್ದೇವೆ. ನಾವು ಮುಖ್ಯವಾದ ಎ.ಪಿ.ಸಿ ಕೇಂದ್ರ (ಸೆಂಟ್ರಲ್) ಸಭಿಕರನ್ನು ಹೊಂದಿದ್ದೇವೆ. ಕಾಲಾ ನಂತರದಲ್ಲಿ ನಾಲ್ಕು ಇತರೆ

ಆರಾಧನಾ ಸ್ಥಳಗಳಲ್ಲಿಯೂ ಸಭೆ ಸ್ಥಾಪಿಸಲ್ಪಟ್ಟಿದೆ. ಏ.ಪಿ.ಸಿ - ಉತ್ತರ, ಏ.ಪಿ.ಸಿ - ಪೂರ್ವ, ಏ.ಪಿ.ಸಿ - ಪಶ್ಚಿಮ, ಏ.ಪಿ.ಸಿ - ದಕ್ಷಿಣ ಸಭಿಕರುಗಳನ್ನು ಹೊಂದಿದ್ದೇವೆ. ನಮ್ಮ ಕೇಂದ್ರ ಸಭೆಯಿಂದ ಸ್ಥಾಪಿಸಲ್ಪಟ್ಟಂತಹ ಪ್ರತಿಯೊಂದು ಸಭೆಯು ಸಹಾಯಕ ಸಭಾಪಾಲಕರ ನಡೆಸುವಿಕೆಯೊಂದಿಗೆ ವ್ಯಕ್ತಿಗತವಾದ ಬೋಧನೆಗಳನ್ನು ಹೊಂದಿರುವಂತದ್ದನ್ನು ನಾವು ಆಯ್ಕೆ ಮಾಡಿಕೊಂಡಿದ್ದೇವೆ.

ಸ್ಥಾಪನೆ ಮಾಡುವುದರಲ್ಲಿರುವಂತಹ ನಮ್ಮ ಪ್ರಾಥಮಿಕ ಪ್ರೇರಣೆಯು ಪ್ರವೇಶಿಸುವಿಕೆ ಮತ್ತು ಹೊರ ಚಾಚುವಿಕೆಯಾಗಿದೆ. ದೊಡ್ಡದಾದಂತಹ ಮತ್ತು ವಿಸ್ತಾರವಾದ ನಗರಗಳಲ್ಲಿ ತಮ್ಮ ಸಮೀಪದ ಸ್ಥಳಗಳಿಗೆ ಜನರುಗಳು ಹೋಗಲೂ ಅನುಕೂಲಕರವಾಗಿದೆ. ಅನೇಕ ಸ್ಥಳಗಳನ್ನು ಹೊಂದಿರುವಂತದ್ದು ಅದರ ನೆರೆಹೊರೆಯವರನ್ನು ಆಯಕಟ್ಟಿನಿಂದ ಸಂಧಿಸಲು ಮತ್ತು ಅದು ಸ್ಥಾಪಿಸಲ್ಪಟ್ಟಂತಹ ಪ್ರತಿಯೊಂದು ಸ್ಥಳದ ಸಾಂಸ್ಕೃತಿಕ ಸನ್ನಿವೇಶದಲ್ಲಿ ತಕ್ಕಂತಿರಲು ನಮಗೆ ಅನುಮತಿಸುತ್ತದೆ

## ಒಂದು ಸಭೆ, ಅನೇಕ ಸ್ಥಳಗಳು

| ಏ.ಪಿ.ಸಿ ದಕ್ಷಿಣ | ಏ.ಪಿ.ಸಿ ಕೇಂದ್ರ | ಏ.ಪಿ.ಸಿ ಉತ್ತರ |
|---|---|---|
| ತಂಡ<br>ಸಹಾಯಕ ಸಭಾಪಾಲಕರು<br>ಸಭಾಪಾಲಕರು<br>ಸ್ವಯಂ ಸೇವಕ ತಂಡ<br>ನಾಯಕರು<br>ಎಲ್.ಜಿ. ನಾಯಕರು<br>ಯೌವನಸ್ಥ ನಾಯಕರು<br>ಸ್ವಯಂ ನಾಯಕರು | ತಂಡ<br>ಸಹಾಯಕ ಸಭಾಪಾಲಕರು<br>ಸಭಾಪಾಲಕರು<br>ಸ್ವಯಂ ಸೇವಕ ತಂಡ<br>ನಾಯಕರು<br>ಎಲ್.ಜಿ. ನಾಯಕರು<br>ಯೌವನಸ್ಥ ನಾಯಕರು<br>ಸ್ವಯಂ ನಾಯಕರು | ತಂಡ<br>ಸಹಾಯಕ ಸಭಾಪಾಲಕರು<br>ಸಭಾಪಾಲಕರು<br>ಸ್ವಯಂ ಸೇವಕ ತಂಡ<br>ನಾಯಕರು<br>ಎಲ್.ಜಿ. ನಾಯಕರು<br>ಯೌವನಸ್ಥ ನಾಯಕರು<br>ಸ್ವಯಂ ನಾಯಕರು |
| ಸೇವೆ<br>ಭಾನುವಾರದ ಆರಾಧನೆಗಳು<br>ಪ್ರಾರ್ಥನೆ<br>ಲೈಫ್ ಗ್ರೂಪ್ಸ್<br>ಸದಸ್ಯರ ಕಾಳಜಿ<br>ಸುವಾರ್ತಾ ಸೇವೆ | ಸೇವೆ<br>ಭಾನುವಾರದ ಆರಾಧನೆಗಳು<br>ಪ್ರಾರ್ಥನೆ<br>ಲೈಫ್ ಗ್ರೂಪ್ಸ್<br>ಸದಸ್ಯರ ಕಾಳಜಿ<br>ಸುವಾರ್ತಾ ಸೇವೆ | ಸೇವೆ<br>ಭಾನುವಾರದ ಆರಾಧನೆಗಳು<br>ಪ್ರಾರ್ಥನೆ<br>ಲೈಫ್ ಗ್ರೂಪ್ಸ್<br>ಸದಸ್ಯರ ಕಾಳಜಿ<br>ಸುವಾರ್ತಾ ಸೇವೆ |

| ಏ.ಪಿ.ಸಿ ನಾಯಕತ್ವ ಮತ್ತು ಆಡಳಿತಾತ್ಮಕ ತಂಡ |
|---|
| **ಪ್ರವಚನ ಯೋಜನೆ, ನೀರಿನ ದೀಕ್ಷಾಸ್ನಾನ, ವಾರಾಂತ್ಯ ಶಾಲೆಗಳು, ಸತ್ಯವೇದ ಶಾಲೆ, ಮಕ್ಕಳ ಸಮಾವೇಶ, ಯೌವನಸ್ಥರ ಶಿಬಿರ, ಸಭಾ ಶಿಬಿರ, ಕ್ಯಾಂಪಸ್ ಎಲಿವೇಟ್ಸ್ ಕಾಫಿಟಾಕ್, ಕರುಣಾಲಯ, ಸೇವೆಗಳು, ಅಂತರ್ಜಾಲ/ಮಾಧ್ಯಮ, ಆಡಳಿತ ಪ್ರಕಾಶನಗಳು, ಅಧ್ಯಯನ ಕೇಂದ್ರ ಇತ್ಯಾದಿ, ಇತ್ಯಾದಿ.** |

ಪ್ರತಿಯೊಂದು ಸ್ಥಳವು ತನ್ನದೇ ಆದ ಸಭಾಪಾಲಕರು, ಸೇವಾ ನಾಯಕರುಗಳು ಮತ್ತು ಸ್ವಯಂಸೇವಕರುಗಳ ಸ್ವಂತ ತಂಡ ಹೊಂದಿದೆ. ನಿರ್ದಿಷ್ಟ ಸೇವಾ ಕ್ಷೇತ್ರಗಳು ಬೆಳವಣಿಗೆಯನ್ನು ನಾವು ಪ್ರತಿಯೊಂದು ಸ್ಥಳಗಳಲ್ಲಿಯೂ ಪ್ರೋತ್ಸಾಹಿಸುತ್ತೇವೆ. ಎಲ್ಲಾ ಸಭಾ ಸ್ಥಳಗಳಿಗೆ ಬೆಂಬಲವಾಗಿರುವುದನ್ನು ಹಿರಿಯ ಸಭಾಪಾಲಕರು, ಸಾಮಾನ್ಯ ಸಭಾಪಾಲಕ ತಂಡವು ಒಳಗೊಂಡಿರುತ್ತದೆ. (ಉದಾಹರಣೆಗೆ ಆರಾಧನಾ ಸಭಾಪಾಲಕ, ಮಕ್ಕಳ ಸಭಾಪಾಲಕ, ಯೌವನಸ್ಥರ ಸಂಯೋಜಕ) ಮತ್ತು ಆಡಳಿತಾತ್ಮಕ ತಂಡಗಳು.

ಸಾಮಾನ್ಯವಾಗಿ, ಸಹಾಯಕ ಸಭಾಪಾಲಕರುಗಳಿಂದ ಭಾನುವಾರದ ಸಂದೇಶವು ಎಲ್ಲಾ ಸ್ಥಳಗಳಲ್ಲಿ ಒಂದೇ ಮಾದರಿಯ ಸಂದೇಶ ಪ್ರಸಂಗಿಸಲ್ಪಡುತ್ತದೆ. ಸಂದರ್ಶಕ / ಅತಿಥಿ ಸಂದೇಶಕರು ಎರಡು ಆರಾಧನೆಯ ಸ್ಥಳಗಳಲ್ಲಿ ಪ್ರಸಂಗಿಸುತ್ತಾರೆ ಮತ್ತು ಸಹಾಯಕ ಸಭಾಪಾಲಕರು ಉಳಿದ ಇತರೆ ಸ್ಥಳಗಳಲ್ಲಿ ವಿಭಿನ್ನವಾದ ಸಂದೇಶಗಳನ್ನು ಪ್ರಸಂಗಿಸುತ್ತಾರೆ.

ಎಲ್ಲಾ ಹಣಕಾಸು ಸಾಮಾನ್ಯವಾಗಿರಿಸಲಾಗಿದೆ ಮತ್ತು ದೊಡ್ಡ ತೀರ್ಮಾನಗಳು ಕೇಂದ್ರ ಸಭೆಯಲ್ಲಿ ಮಾಡಲ್ಪಡುತ್ತವೆ.

ಅನೇಕ ಸೇವೆಗಳು, ಹೊರಸೇವೆ ಸಂಧಿಸುವಿಕೆಗಳು ಮತ್ತು ಎಲ್ಲಾ ಸ್ಥಳಗಳಿಂದ ಜನರುಗಳು ಒಟ್ಟಾಗಿ ಸೇವಾ ಪ್ರಯಾಣ ಮಾಡುವುದರ ಮೂಲಕವಾಗಿ ನಾವು ಒಂದೇ ಸಭೆಯಾಗಿ ಕಾರ್ಯಮಾಡುತ್ತೇವೆ. ನಾವು ಅನೇಕ ವಿಭಿನ್ನ ಸ್ಥಳಗಳಲ್ಲಿ ಸೇರಿ ಬರುವವರಾಗಿದ್ದಾಗಲೂ ನಾವು ಒಂದೇ ಸಭೆಗೆ ಸೇರಿದವರೆಂಬ ಪ್ರಜ್ಞೆಯೊಡನೆ ಸಂಯೋಜಿತ ಕಾರ್ಯಕ್ರಮಗಳಲ್ಲಿ ಒಬ್ಬರಿಗೊಬ್ಬರು ಸಂಪರ್ಕ ಹೊಂದಿರುವಂತದ್ದರಲ್ಲಿ ನಾವು ನಿಯಮಿತವಾಗಿ ಸೇರಿ ಬರುತ್ತೇವೆ.

ಮೆಗಾ (ದೊಡ್ಡ) ಸಭೆಗಳು ಮತ್ತು ಮಲ್ಟಿ ಸೈಟ್ (ಬಹುಜಾಗ) ಸಭೆಗಳ ಉಪಯುಕ್ತ ಮಾಹಿತಿಗಳು: Leadership Netowrk www.leadnet.orgಯಲ್ಲಿ ದೊರೆಯುತ್ತವೆ.

# ಭಾಗ 5

# ಹೊರ ಸಂಧಿಸುವಿಕೆ



# 29

## ಸ್ಥಳೀಯ ಸಭೆ ಇತರೆ ಸಭೆಗಳೊಂದಿಗಿನ ಸಂಬಂಧದಲ್ಲಿ

ಸ್ಥಳೀಯ ಸಭೆಯು ಬಾಹ್ಯದೃಷ್ಟಿಯನ್ನು ಹೊಂದಿರುವುದು ಅತೀ ಪ್ರಾಮುಖ್ಯವಾಗಿದೆ ಮತ್ತು ಕ್ರೈಸ್ತ ಸೇವೆಗಳು ಮತ್ತು ಸಮುದಾಯಕ್ಕೆ, ಅದರ ಸಮೀಪದಲ್ಲಿನ ಅಥವಾ ಪ್ರದೇಶಗಳನ್ನು ಮೀರಿ, ಇತರೆ ಸಭೆಗಳಿಗೂ ಆಶೀರ್ವಾದವಾಗಿರಬೇಕು. ಇದರ ಕುರಿತು ಅನೇಕ ಉದಾಹರಣೆಗಳನ್ನು ಹೊಸ ಒಡಂಬಡಿಕೆಯಲ್ಲಿ ನಾವು ನೋಡುತ್ತೇವೆ.

ಯೆರೂಸಲೇಮಿನ ಸಭೆಯು ಸಂಧಿಸಲ್ಪಟ್ಟಿತ್ತು ಮತ್ತು ಫಿಲಿಪ್ಪನ ಸೇವೆಯಿಂದ ಫಲಿತಾಂಶವಾದ ಸಮಾರ್ಯದ ಸಭೆಗೂ ಸೇವೆ ಸಲ್ಲಿಸಿತು (ಅಪೊಸ್ತಲರ ಕೃತ್ಯಗಳ 8:14-17, 25) ಪೇತ್ರ ಮತ್ತು ಯೋಹಾನರು ಹೋದರು ಮತ್ತು ಸಮಾರ್ಯದಲ್ಲಿನ ಹೊಸ ವಿಶ್ವಾಸಿಗಳಿಗೆ ಸೇವೆ ಸಲ್ಲಿಸಿದರು.

ಯೆರೂಸಲೇಮಿನ ಸಭೆಯು ಸಂದಿಸಲ್ಪಟ್ಟಿತ್ತು ಮತ್ತು ಅತಿಯೋಕ್ಯದ ಸಭೆಗೆ ಸೇವೆ ಸಲ್ಲಿಸಿತು (ಅಪೊಸ್ತಲರ ಕೃತ್ಯಗಳು 11:19-30) ಬಾರ್ನಬನನ್ನು ಆ ಸಭೆಯ ಸಭಾಪಾಲಕನಾಗಿರಲು ಕಳುಹಿಸಿತು. ತದನಂತರ, ಪ್ರವಾದನೆಯ ಒಂದು ತಂಡವು ಅಂತಿಯೋಕ್ಯದ ಸಭೆಗೆ ಸೇವೆ ಸಲ್ಲಿಸಲು ಕಳುಹಿಸಲ್ಪಟ್ಟಿತು.

ಅಂತಿಯೋಕ್ಯದಲ್ಲಿನ ಸಭೆಯು, ನಂತರ ಆ ಸಮಯದಲ್ಲಿ ಕ್ಷಾಮದಿಂದ ಬಾಧಿತಗೊಂಡಿದ್ದ ಯೂದಾಯದಲ್ಲಿನ ವಿಶ್ವಾಸಿಗಳಿಗೆ ನೆರವು ನೀಡಿ ಸಹಾಯ ಕಳುಹಿಸಿದರು. ಕೊರಿಂಥ ಮತ್ತು ಮಕೆದೋನ್ಯ ಸಭೆಗಳು ಸಹ (ಫಿಲಿಪ್ಪಿ, ಥೆಸಲೋನಿಕ, ಅಖಾಯ) ಸಂಗ್ರಹ ಮಾಡಿ ಯೆರೂಸಲೇಮಿನಲ್ಲಿ ಬಡವರಾಗಿದ್ದ ವಿಶ್ವಾಸಿಗಳಿಗಾಗಿ ಸಹಾಯ ಕಳುಹಿಸಿತ್ತು (2 ಕೊರಿಂಥದವರಿಗೆ 8:1-14, ರೋಮಾಪುರದವರಿಗೆ 15:26)

ಪ್ರಯಾಣಿಕ ಸೇವಕರುಗಳಾದ, ಪೇತ್ರ, ಪೌಲನು ಮತ್ತು ಅನೇಕ ಇತರರು ಇಂತಹ ಸ್ಥಳೀಯ ಸಭೆಗಳಿಗೆ ಪ್ರಯಾಣಿಸಿ ಅವರನ್ನು ಆತ್ಮಿಕವಾಗಿ ಬಲಪಡಿಸಿದರು.

**ಕಾರ್ಯಗತಗೊಳಿಸಲು ಪಾಠಗಳು:**

- ಪ್ರಬುದ್ಧ ಸಭೆಗಳು ಸಹಾಯದ ಬೆಂಬಲ ಮತ್ತು ಹೊಸ ಸಭೆಯ ವಿಶ್ವಾಸಿಗಳನ್ನು ಆತ್ಮಿಕವಾಗಿ  ಬಲಪಡಿಸಬಹುದು.
- ಸ್ಥಳೀಯ ಸಭೆಗಳು ಒಂದಕ್ಕೊಂದು ವಸ್ತುಗಳನ್ನು ಹಂಚಿಕೊಳ್ಳುವುದರಲ್ಲಿ ಸಂಬಂಧಿಸಿಕೊಳ್ಳಬೇಕು ಮತ್ತು ಅಗತ್ಯವಿರುವ ಸಮಯದಲ್ಲಿ ಇತರರಿಗೆ ಸಹಾಯ ಮಾಡುವಂತದ್ದಾಗಿರಬೇಕು.
- ಸ್ಥಳೀಯ ಸಭೆಗಳಲ್ಲಿನ ಸಂಬಂಧಗಳು, ಸ್ಥಳೀಯ ನಾಯಕರುಗಳು ಒಬ್ಬರಿಗೊಬ್ಬರು ಸಂಬಂಧಿಸಿಕೊಳ್ಳುವುದರಿಂದ ಅಥವಾ ದೈವಿಕ ಸಂಬಂಧಗಳ ಮೂಲಕವಾಗಿ ಇಂತಹ ಸಭೆಗಳು ಸಂಪರ್ಕ ಹೊಂದಲೂ ಸಹಾಯ ಮಾಡುವ ಅಪೊಸ್ತಲರು/ಪ್ರವಾದಿಗಳ ಮೂಲಕವಾಗಿ ಪ್ರೋತ್ಸಾಹಿಸಬಹುದಾಗಿದೆ.
- ಸ್ಥಳೀಯ ಸಭೆಗಳು ಪ್ರಯಾಣ ಸೇವಕರುಗಳ ಮೂಲಕವಾಗಿ ಕ್ರಿಸ್ತನು ಅಂಗದಲ್ಲಿ ಸ್ಥಾಪಿಸಿದ್ದನ್ನು ಪಡೆದುಕೊಳ್ಳಬೇಕು. ಆದ್ದಾಗ್ಯೂ ಇದು ಬಹಳ ಎಚ್ಚರಿಕೆಯಿಂದ ಮಾಡಲ್ಪಡಬೇಕು. ಆದ್ದರಿಂದ ತಪ್ಪು ಸೇವಕರುಗಳು ಸ್ಥಳೀಯ ಸಭೆಗೆ ಪ್ರವೇಶಿಸಲು ಅನುಮತಿಸಲಾಗುವುದಿಲ್ಲ.
- ಒಟ್ಟಾಗಿ ಕೆಲಸ ಮಾಡುವಾಗ ದೈವಿಕ ಕ್ರಮವನ್ನು ಪಾಲಿಸಬೇಕು. ಇತರ ಸ್ಥಳೀಯ ಸಭೆಗಳನ್ನು ಸಂಘಸಂಸ್ಥೆಗಳನ್ನು/ಪಕ್ಷಗಳನ್ನು ಗೌರವಿಸುವುದರೊಂದಿಗೆ ನಾವು ಒಟ್ಟಾಗಿ ಕೆಲಸ ಮಾಡಬೇಕು. ಪ್ರತಿಯೊಬ್ಬರುಗಳ ಸ್ಥಳೀಯ ಸಭೆಗಳ ನಾಯಕತ್ವವನ್ನು ನಾವು ಗೌರವಿಸಬೇಕು. ವಿಶ್ವಾಸಿಗಳು ಇತರೆ ಸ್ಥಳೀಯ ಸಭೆಗಳೊಂದಿಗೆ ಸರಿಯಾಗಿ ಸಂಬಂಧ ಕಲ್ಪಿಸಿಕೊಳ್ಳಲು ಕಲಿಸಬೇಕು.

[ಹೆಚ್ಚಿನ ಮಾಹಿತಿಗಾಗಿ, ಆಲ್ ಪೀಪಲ್ಸ್ ಸಭೆಯ ''ದೈವಿಕ ಕ್ರಮ'' ಎಂಬ ಪುಸ್ತಕವನ್ನು ಓದಿರಿ]

# 30

# ನಗರವನ್ನು ಕುರುಬನಂತೆ ಪಾಲನೆ ಮಾಡುವುದು

ಹೊರಗಡೆ ಕಾಣುತ್ತಿರುವಂತದ್ದರ ಭಾಗವಾಗಿ ಸ್ಥಳೀಯ ಸಭೆಗಳು ಅವರ ಜವಾಬ್ದಾರಿಗಳನ್ನು ಗುರುತಿಸಬೇಕು ಮತ್ತು ಅವರು ನೆಲೆಗೊಂಡಿರುವಂತಹ ನಗರಕ್ಕೆ ಕರೆ ನೀಡಬೇಕು (ಪಟ್ಟಣ, ಹಳ್ಳಿ ಅಥವಾ ಎಲ್ಲಿ). ಪ್ರಪಂಚದ ಜನಸಂಖ್ಯೆಯ ಅರ್ಧದಷ್ಟು ಜನರು ನಗರ ಕೇಂದ್ರಗಳಲ್ಲಿ ವಾಸಿಸುತ್ತಾರೆ. ಪ್ರಪಂಚದ ಜನಸಂಖ್ಯೆಯ ಸುಮಾರು 75ರಷ್ಟು ನಗರಗಳಲ್ಲಿ ವಾಸಿಸುತ್ತಾರೆ. ಆದ್ದರಿಂದ ನಾವು ನಗರಗಳನ್ನು ಗೆಲ್ಲಬೇಕಾದರೆ ನಾವು ಅವರ ನಗರಗಳನ್ನು ಗೆಲ್ಲಬೇಕು.

ಸಭಾಪಾಲಕರು/ನಾಯಕರುಗಳಾಗಿ ನಾವುಗಳು ನಮ್ಮ ಸ್ಥಳೀಯ ಸಭೆಗಳಿಗಿಂತ ಇನ್ನೂ ಮುಂದಕ್ಕೆ ನೋಡಬೇಕು ಮತ್ತು ನಾವು ವಾಸಿಸುವಂತಹ ನಗರ/ಸಮುದಾಯಗಳಿಗಾಗಿ ಆತ್ಮಿಕ ಜವಾಬ್ದಾರಿ ತೆಗೆದುಕೊಳ್ಳಬೇಕು. ದೇವರು ನಮ್ಮನ್ನು ನಗರದ ಕುರುಬ ಎಂಬುದಾಗಿ ಕರೆಯುತ್ತಾನೆ. ನಾವು ನಗರಕ್ಕಾಗಿ ಮಾಲೀಕತ್ವ ತೆಗೆದುಕೊಳ್ಳಬೇಕು ಮತ್ತು ನಗರದ ರೂಪಾಂತರಕ್ಕಾಗಿ ಒಟ್ಟಾಗಿ ಕೆಲಸ ಮಾಡಬೇಕು.

## ನಗರವ್ಯಾಪ್ತಿ ಸಭೆ ಮತ್ತು ನಗರ ರೂಪಾಂತರ

ನಗರ ವ್ಯಾಪ್ತಿ ಸಭೆಗಳು ಒಂದು ನಗರ ವ್ಯಾಪ್ತಿ ಹೋರಾಟಗಳು ಗೆಲ್ಲಲ್ಲು ಇದು ತೆಗೆದುಕೊಳ್ಳುತ್ತದೆ. ಆದಾಗ್ಯೂ ನಗರದಲ್ಲಿನ ಅನೇಕ ಸಭೆಗಳು ಒಟ್ಟಾಗಿ ಸೇರಿ ಬಂದು ಮತ್ತು ಒಗ್ಗಟ್ಟಾಗಿ ಕೆಲಸ ಮಾಡಿದರೆ ನಾವು ನಗರದ ರೂಪಾಂತರ ನೋಡಬಹುದು ಮತ್ತು ಮಾಡಬಹುದಾಗಿದೆ.

ಏಳು ಪ್ರಭಾವದ ಗೋಳಗಳಿವೆ ಅಥವಾ ನಮ್ಮ ಸಮಾಜವನ್ನು ಆಕಾರಗೊಳಿಸುವ ಏಳು ಪರ್ವತಗಳಿವೆ: ಧರ್ಮ, ವಿದ್ಯಾಭ್ಯಾಸ, ಸರ್ಕಾರ, ಕುಟುಂಬ, ವ್ಯಾಪಾರ, ಮಾಧ್ಯಮ ಮತ್ತು ಕಲೆ, ಮನರಂಜನೆ(ಕ್ರೀಡೆಯನ್ನು ಒಳಗೊಂಡಿದೆ) ನಾವು ವಾಸಿಸುವಂತಹ ಸಮಾಜವನ್ನು ಆಕಾರಗೊಳಿಸುವ ನಮ್ಮ ಸಮಾಜವನ್ನು ನಿಶ್ಚಯಪಡಿಸುವ ಏಳು ಕ್ಷೇತ್ರಗಳು ಅಥವಾ ಗೋಳಗಳು ಇವಾಗಿವೆ. ''ಮಾರುಕಟ್ಟೆಯ

ಸ್ಥಳ'' ಎಂಬ ಪದವು ಎಲ್ಲಾ ಏಳು ಪ್ರಭಾವದ ಗೋಳಗಳನ್ನು ಅಳವಡಿಸಿಕೊಳ್ಳುತ್ತದೆ. ನಾವು ಪ್ರಪಂಚಕ್ಕೆ ಬೆಳಕು ಮತ್ತು ಉಪ್ಪಾಗಿರಬೇಕಾದರೆ, ನಾವು ಈ ಏಳು ಪ್ರಭಾವದ ಗೋಳಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳಬೇಕು. ಪ್ರಭಾವದ ಈ ಏಳು ಗೋಳಗಳಲ್ಲಿ ಆತನ ಜನರು ಇರಬೇಕೆಂಬುದಾಗಿ ದೇವರು ಬಯಸುತ್ತಾನೆ. ಈ ಏಳು ಪ್ರಭಾವದ ಗೋಳಗಳಿಗೆ ದೇವರ ರಾಜ್ಯವನ್ನು ತರುವಂತಹ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳಬೇಕು. ನಗರ ವ್ಯಾಪ್ತಿ ಸಭೆಗಳು ಸಮಾಜದ ಈ ಏಳು ಗೋಳಗಳ ಮೇಲೆ ಪರಿಣಾಮ ಮತ್ತು ಪ್ರಭಾವ ಬೀರಲು ಪ್ರಾರಂಭಿಸಿದಾಗ ನಾವು ನಗರ ರೂಪಾಂತರವನ್ನು ನೋಡುತ್ತೇವೆ.

## ನಗರವ್ಯಾಪ್ತಿ ಸಭೆಗಳಲ್ಲಿ ಐಕ್ಯತೆ

ಮಾರ್ಕ 3:24,25

**ಒಂದು ರಾಜ್ಯದಲ್ಲಿ ಭೇದಹುಟ್ಟಿದರೆ ಆ ರಾಜ್ಯವು ಉಳಿಯಲಾರದು. ಒಂದು ಮನೆಯಲ್ಲಿ ಭೇದ ಹುಟ್ಟಿದರೆ ಆ ಮನೆಯು ನಿಲ್ಲಲಾರದು.**

ಒಂದು ಮನೆ ಅಥವಾ ರಾಜ್ಯದಲ್ಲಿ ಭೇದ ಹುಟ್ಟಿದರೆ ಅದು ಉಳಿಯಲಾರದು ಎಂಬುದಾಗಿ ಕರ್ತನಾದ ಯೇಸುವು ನಮಗೆ ಬೋಧಿಸಿದ್ದಾನೆ. ವಿಷಾದಕರವಾಗಿ ಹೆಚ್ಚಿನ ನಗರ ವ್ಯಾಪ್ತಿ ಸಭೆಗಳು ಬಲವಾದ ಸಂಘಸಂಸ್ಥೆ ಮತ್ತು ಸ್ಥಳೀಯ ಸಭೆಯ ಗಡಿಗಳ ಜೊತೆಗೆ ವಿಂಗಡಿಸಲ್ಪಟ್ಟಿವೆ. ಸ್ಥಳೀಯ ಸಭಾಪಾಲಕರು/ನಾಯಕರುಗಳಾಗಿ ನಾವು, ನಗರಕ್ಕಾಗಿ ಮತ್ತು ನಗರದಲ್ಲಿ ದೇವರ ರಾಜ್ಯದ ಮನೋರೂಢಿಯನ್ನು ಬೆಳೆಸಿಕೊಳ್ಳುವಂತದ್ದು ಅವಶ್ಯಕವಾಗಿದೆ. ದೇವರ ರಾಜ್ಯವು ಬರುವುದನ್ನು ಮತ್ತು ನಗರದಲ್ಲಿ ಆತನ ರಾಜ್ಯದ ಮುನ್ನಡೆಗಳನ್ನು ಪ್ರತಿಯೊಂದು ಸಮಯವನ್ನು ನಾವು ಆಚರಿಸಬೇಕು ಮತ್ತು ನೋಡಲೂ ಅಪೇಕ್ಷಿಸಬೇಕು. ಸಭಾಪಾಲಕರು ಮತ್ತು ಕ್ರೈಸ್ತ ನಾಯಕರುಗಳು ಒಟ್ಟಾಗಿ ಹೃದಯಗಳು ಮತ್ತು ಕೈಗಳನ್ನು ಜೋಡಿಸಿ ಒಟ್ಟಾಗಿ ಕೆಲಸ ಮಾಡಿದರೆ ಆ ಮೇಲೆ ನಗರವ್ಯಾಪ್ತಿ ಸಭೆಗಳು ಬಲಿಷ್ಟವಾಗಿರುತ್ತವೆ ಮತ್ತು ನಗರದ ಮೇಲೆ ಬಲಯುತವಾದ ಪರಿಣಾಮ ಬೀರುತ್ತವೆ.

ನಗರವ್ಯಾಪ್ತಿ ಸಭೆಗಳು ಸತ್ಯವಾಗಿ ಗೋಡೆಗಳಿಲ್ಲದ ಒಂದು ಸಭೆಯಾಗಿದೆ. ಸಭೆಯು ಎಲ್ಲಾ ಕಡೆಗಳಲ್ಲಿವೆ. ನಗರವ್ಯಾಪ್ತಿ ಸಭೆಗಳನ್ನು ವಿಭಾಗಿಸುವಂತಹ ಸಂಘಸಂಸ್ಥೆಗಳೆಂಬ ಅಡೆತಡೆಗಳು ಅಗೋಚರವಾದ ಮನೋರೂಢಿಯ ಗೋಡೆಗಳನ್ನು ಮತ್ತು

ಆದ್ದರಿಂದಲೇ ನಗರದ ಮೇಲೆ ಪರಿಣಾಮ ಬೀರಲು ಬಲಹೀನಗೊಳಿಸುವಂತದ್ದನ್ನು ನಾವು ಉರುಳಿಸುವಂತದ್ದು ಪ್ರಾಮುಖ್ಯ.

## ನಗರ ರೂಪಾಂತರಕ್ಕಾಗಿ ಸಭೆ ಸುಧಾರಣೆ

ನಗರ ವ್ಯಾಪ್ತಿ ಸಭೆಗಳು ಅವರ ನಿಯಮಿತ ಭಾನುವಾರದ ಕೂಟಗಳಿಗಿಂತ ಅಧಿಕವಾಗಿ ಆಗ್ಗಾಗ್ಗೆ ವ್ಯಾಪಾರ ಮಾರುಕಟ್ಟೆಯ ಸ್ಥಳದಲ್ಲಿ ಭೇಟಿಯಾಗುತ್ತವೆ. ಬೇರೆ ಬೇರೆ ಸ್ಥಳೀಯ ಸಭೆಗಳಿಂದ ವಿಶ್ವಾಸಿಗಳು, ವಾರದ ಐದರಿಂದ ಆರುದಿನಗಳು ಮಾರುಕಟ್ಟೆ ಕ್ಷೇತ್ರಗಳಲ್ಲಿ ಒಟ್ಟಾಗಿ ಸಂಧಿಸುತ್ತಾರೆ, ಅವರು ಹಾಗೆಯೇ ತಮ್ಮ ಸ್ವಂತ ಸ್ಥಳೀಯ ಸಭೆಗಳಲ್ಲಿ ಒಂದು ವಾರಕ್ಕೆ ಒಮ್ಮೆ ಅಥವಾ ಎರಡು ಬಾರಿ ಸೇರಿ ಬರುತ್ತಾರೆ. ಎಲ್ಲಾ ವಿಶ್ವಾಸಿಗಳು ಮಾರುಕಟ್ಟೆ ಕ್ಷೇತ್ರದಲ್ಲಿ ದೇವರನ್ನು ತೋರ್ಪಡಿಸಲು ಸಜ್ಜುಗೊಳಿಸಲ್ಪಟ್ಟರೆ ನಾವು ಒಂದು ಮಹತ್ತಾದ ಪರಿಣಾಮವನ್ನು ಬೀರುತ್ತೇವೆ. ಪ್ರಪಂಚಕ್ಕೆಲ್ಲಾ ದೇವರ ಮಹಿಮೆಯನ್ನು ತರುವುದಕ್ಕಾಗಿ ಮಾರುಕಟ್ಟೆಯ ಕ್ಷೇತ್ರದಲ್ಲಿ ಸಂಯೋಜಿತ ಉಪಕ್ರಮ ನಡೆಸಲು ಸಭೆಯ ಮಧ್ಯದಲ್ಲಿ ದೇವರು ದೀಕ್ಷೆ ನೀಡಿದ ನಾಯಕರುಗಳು ಎಬ್ಬಿಸಲ್ಪಡಲು ನಾವು ಪ್ರೋತ್ಸಾಹಿಸಬೇಕು. ನಾವು ಇದನ್ನು ಮಾಡುವಾಗ ನಗರದ ಮೇಲೆ ಸ್ಥಳೀಯ ಸಭೆಗಳು ಪರಿಣಾಮ ಬೀರಲು ಪೂರಕವಾದ ಸಂಪನ್ಮೂಲಗಳೊಂದಿಗೆ ಸಂಯೋಜಿತ ಉಪಕ್ರಮವನ್ನು ನಾವು ನೋಡುತ್ತೇವೆ. ನಗರದಲ್ಲಿ ಬರೀ ಒಂದು ಸ್ಥಳೀಯ ಸಭೆ ಮಾತ್ರ ಕಾರ್ಯ ಮಾಡುತ್ತಿರುವುದಾಗಿ ಇದೇ ಅನ್ನುವಂತದ್ದು ಇನ್ನು ಮುಂದೆ ಇರುವುದಿಲ್ಲ.

ದೇವ-ನೇಮಿತ ಅಪೊಸ್ತಲತ್ವದ ನಾಯಕತ್ವದ ಪ್ರತಿ ಪ್ರಾರಂಭವನ್ನು ಮಾರ್ಗದರ್ಶಿಸುವುದರೊಡಗೆ ಸ್ಥಳೀಯ ಸಭೆಗಳಲ್ಲಿನ ವಿಶ್ವಾಸಿಗಳ ಸಂಯೋಜಿತ ಸಂಪನ್ಮೂಲಗಳೊಡನೆ ನಗರ ವ್ಯಾಪ್ತಿ ಉಪಕ್ರಮವು ಕಾರ್ಯಗತಗೊಂಡರೆ ನಮ್ಮ ನಗರದ ಮೇಲೆ ಎಂತಹ ಬಲಯುತವಾದ ಪರಿಣಾಮ ಬೀರಬಹುದು.

ನಗರವ್ಯಾಪ್ತಿ ಸಭೆಗಳು ಆಮೇಲೆ ಒಂದು ಬಲವಾದ ಧ್ವನಿಯನ್ನು ಸಮಾಜದಲ್ಲಿ ಹೊಂದಿರುತ್ತವೆ ಮತ್ತು ನಗರದ ಮೇಲೆ ರೂಪಾಂತರದ ಪರಿಣಾಮವನ್ನು ಬೀರುತ್ತವೆ. ಯಾವಾಗ ನಗರವ್ಯಾಪ್ತಿ ಸಭೆಗಳು ರೂಪಾಂತರಗೊಂಡಾಗ, ನಗರವು ರೂಪಾಂತರಗೊಳ್ಳುತ್ತದೆ.

## ದೇವರರಾಜ್ಯದ - ಮನೋರೂಢಿಯನ್ನು ಬೆಳೆಸುವುದು

ನಗರವ್ಯಾಪ್ತಿ ಸಭೆಯ ಸಂಪೂರ್ಣ ವಿಶ್ವಾಸಿಗಳು, ಸಭೆಯ ಸೇವೆಗಾಗಿ ಬಿಡುಗಡೆಗೊಂಡ ಮತ್ತು ಸಜ್ಜುಗೊಂಡಂತಹವರಾಗಿರಲೂ ಜೊತೆ ಕೆಲಸದವರಾಗಿ ನಾವು ಹೇಗೆ ಅವರನ್ನು ಎಬ್ಬಿಸಬಹುದು?

ನಾವು ಹಿಂದೆಯೇ ಹೇಳಿದಂತೆ, ಬೇರೆ ಬೇರೆ ಸಭೆಗಳ ವಿಶ್ವಾಸಿಗಳು ಸಾಮಾನ್ಯ ಸ್ಥಳವಾದ - ಕೆಲಸದ ಸ್ಥಳದಲ್ಲಿ ಭೇಟಿ ಮಾಡುತ್ತಾರೆ. ಅವರು ನನ್ನ ಸಭೆ ಬಹಳ ಉತ್ತಮವಾದುದೆಂಬ ಮನೋಭಾವನೆ, ಒಂದು ಪಂಥೀಯರೆಂಬುದನ್ನು ಕೊಂಡ್ಯೊಯ್ಯುವ ಬದಲಿಗೆ ಅವರು ತಂಡವಾಗಿ ಅವರ ಕೆಲಸದ ಸ್ಥಳದಲ್ಲಿ ಪರಿಣಾಮ ಬೀರಲು ಕೆಲಸ ಮಾಡಬೇಕೆಂಬುದಾಗಿ ಪ್ರೋತ್ಸಾಹಿಸಲ್ಪಡಬೇಕು. ನಗರ ವ್ಯಾಪ್ತಿ ಸಭೆಗಳಲ್ಲಿ ದೈವಿಕ ಕ್ರಮವನ್ನು ಭಂಗ ಪಡಿಸದೇ ಕೆಲಸದ ಸ್ಥಳದಲ್ಲಿ ಇತರ ಸ್ಥಳೀಯ ಸಭೆಗಳಿಂದ ವಿಶ್ವಾಸಿಗಳೊಡನೆ ಜೊತೆ - ಕೆಲಸದವರಾಗಿರುವುದರ ಬಗ್ಗೆ ತರಬೇತಿಯನ್ನು ಮತ್ತು ಬೋಧನೆಯನ್ನು ಹೊಂದಿಕೊಳ್ಳದಿದ್ದರೆ ಆಮೇಲೆ ದೇವರ ರಾಜ್ಯದ ಉದ್ದೇಶವು ಮುಂದುವರಿಯುವುದಿಲ್ಲ.

ಅಪೊಸ್ತಲತ್ವದ ನಾಯಕರುಗಳು, ನಗರದಲ್ಲಿ ದೇವರ ರಾಜ್ಯವು ಸ್ಥಾಪಿಸಲ್ಪಡುವುದನ್ನು ನೋಡುವಂತಹ ಏಕೈಕ ಉದ್ದೇಶದೊಡನೆ ಸ್ಥಳೀಯ ಸಭೆಯ ಅಡೆತಡೆಗಳನ್ನು ದಾಟಲೂ ಸಂಗ್ರಹಿಸಲ್ಪಟ್ಟ ಸಂಪನ್ಮೂಲಗಳನ್ನು (ಜನರು, ಸಮಯ, ಹಣ) ನಗರದಾದ್ಯಂತ ಉಪಕ್ರಮದಲ್ಲಿರುವಂತಹ ನಾಯಕತ್ವ ಒದಗಿಸಲು ಸಿದ್ಧರಾಗಿರಬೇಕು. ಇದು ಒಬ್ಬ ವ್ಯಕ್ತಿ, ಸೇವೆ ಅಥವಾ ಸ್ಥಳೀಯ ಸಭೆ ಒಂದು ಮೇಲೆತ್ತಲ್ಪಡಬೇಕೆಂಬುದು ಇಲ್ಲದೆ ಮಾಡಲ್ಪಡಬೇಕು.

ಆತ್ಮಗಳು ರಕ್ಷಿಸಲ್ಪಡುವಾಗ ಮತ್ತು ಇಂತಹ ಸಹಕಾರಿ ಪ್ರಯತ್ನಗಳಿಂದ ಜೀವಿತಗಳು ರೂಪಾತರಗೊಳ್ಳುವಾಗ, ಇಂತಹ ಹೊಸ ವಿಶ್ವಾಸಿಗಳು, ಅವರು ಸಜ್ಜುಗೊಳ್ಳುವ ಮತ್ತು ಶಿಷ್ಯತ್ವ ಹೊಂದಿಕೊಳ್ಳುವಂತಹ, ಅವರಿಗೆ ಹೆಚ್ಚಾಗಿ ಸೂಕ್ತವಾಗಿರುವಂತಹ ಒಂದು ಉತ್ತಮ - ಸತ್ಯವೇದವನ್ನು- ನಂಬುವ ಸ್ಥಳೀಯ ಸಭೆಯ ಅಂಗಗಳಾಗಿ ಕಂಡು ಬರಲು ಪ್ರೋತ್ಸಾಹಿಸಬೇಕು. ಅವರು ಯಾವ ಸ್ಥಳೀಯ ಸಭೆಗೆ ಸಂಪರ್ಕ ಹೊಂದಿಕೊಳ್ಳುತ್ತಾರೆ ಎಂಬುದು ಅತೀ ಪ್ರಾಮುಖ್ಯವಾದುದಲ್ಲ ಯಾಕೆಂದರೆ ನಾವು ಜನರ ಹೃದಯದಲ್ಲಿ ಮತ್ತು ಜನರ ಜೀವಿತದಲ್ಲಿ ಆತನ ರಾಜ್ಯದ ವಿಸ್ತಾರವನ್ನು

ನೋಡುತ್ತಿರುತ್ತೇವೆ. ಎಲ್ಲಾ ಸ್ಥಳೀಯ ಸಭೆಗಳ ಬೆಳವಣಿಗೆ ಮತ್ತು ವಿಸ್ತರಣೆಯು ಒಂದು ಸ್ವಾಭಾವಿಕ ಫಲಿತಾಂಶವಾಗಿರುತ್ತದೆ.

## ರಚನೆಯ ಬದಲಿಗೆ ಸಂಬಂಧದ ಮೂಲಕ ಐಕ್ಯತೆ

ನಗರ ವ್ಯಾಪ್ತಿ ಸಭೆಯು ವೇಗವಾಗಿ ಕಾರ್ಯಕ್ರಮಗಳು/ಸಮಾವೇಶಗಳು/ಕೂಟಗಳನ್ನು ಮಾಡಲೂ ಮೂಲಭೂತ ಸಹಕಾರ ಹಿಡಿದವರಾಗಿ ವೇಗವಾಗಿ ಚಲಿಸಬೇಕು ಮತ್ತು ಆತ್ಮನಲ್ಲಿ ಐಕ್ಯತೆಯ ಸ್ಥಳಕ್ಕೆ ಬರಬೇಕು. ಆತ್ಮನಲ್ಲಿ ಐಕ್ಯತೆಯು ಕಾರ್ಯಕ್ರಮ/ಸಮಾವೇಶ/ಕೂಟಗಳನ್ನು ಏರ್ಪಡಿಸುವುದರ ಮೇಲೆ ಅವಲಂಬಿಸಿಲ್ಲ. ಇದು ಹೃದಯದ ಮತ್ತು ಮನಸ್ಸಿನ ಬದಲಾವಣೆಯಾಗಿದೆ. ಈ ಒಂದು ಸ್ಥಳದಲ್ಲಿ ಐಕ್ಯತೆಯಿಂದ ಜೀವಿಸುವಂತದ್ದು ನಗರದ ರೂಪಾಂತರದ ಕಡೆಗೆ ಅಗತ್ಯವಿರುವ ಹೆಜ್ಜೆಯನ್ನು ತೆಗೆದುಕೊಳ್ಳಲೂ ಶಕ್ತರನ್ನಾಗಿ ಮಾಡುತ್ತದೆ.

ನಗರವ್ಯಾಪ್ತಿ ಸಭೆಗಳು ಆತ್ಮನ ಐಕ್ಯತೆಯಲ್ಲಿ ಜೀವಿಸಿದರೆ ಮತ್ತು ಕಾರ್ಯ ವೈಖರಿಯಲ್ಲಿದ್ದರೆ ಮತ್ತು ಇದು ಮಾರುಕಟ್ಟೆ ಕ್ಷೇತ್ರದಲ್ಲಿ ಸೇವೆ ಸಲ್ಲಿಸಲು ವಿಶ್ವಾಸಿಗಳೊಡನೆ ಸಂಯೋಜಿಸಲ್ಪಟ್ಟಿದೆ. - ಕರ್ತನಾದ ಯೇಸುಕ್ರಿಸ್ತನಿಗಾಗಿ ನಮ್ಮ ನಗರಗಳು ಬಲಯುತವಾಗಿ ಸ್ಪರ್ಶಿಸಲ್ಪಟ್ಟಿರುವುದನ್ನು ನಾವು ನೋಡುತ್ತೇವೆ.

ದೇವರ ರಾಜ್ಯದ - ಮನಸ್ಸುಳ್ಳ ಸಂಬಂಧವು ನಾಯಕರುಗಳು ಮತ್ತು ನಗರದಲ್ಲಿನ ವಿಶ್ವಾಸಿಗಳ ಮಧ್ಯ ಸ್ಥಾಪಿಸಲ್ಪಟ್ಟಿದ್ದರೆ, ಅಗತ್ಯವಿದ್ದರೆ ರಚನೆಯನ್ನು ಅನುಸರಿಸಬಹುದಾಗಿದೆ.

## ನಗರದಲ್ಲಿ ದೇವರ ಮನೆಯನ್ನು ಸ್ಥಾಪಿಸುವುದು

ನಗರದಲ್ಲಿ ದೇವರ ಮನೆಯನ್ನು ಸ್ಥಾಪಿಸಲು ಸ್ಥಳೀಯ ಸಭೆಯ ನಾಯಕರುಗಳು ಮತ್ತು ಸಭಿಕರುಗಳು ಒಟ್ಟಾಗಿ ಆರಾಧನೆ ಮತ್ತು ಪ್ರಾರ್ಥನೆಯ ಸಮಯದಲ್ಲಿ ಸೇರಿಬರಲೂ ನಾವು ಪ್ರೋತ್ಸಾಹಿಸಬೇಕು. ನಗರದ ಮೇಲಿನ ಕತ್ತಲೆಯ ಶಕ್ತಿಗಳ ಮೇಲೆ ಒಟ್ಟಾಗಿ ನಾವು ಹೋರಾಡುತ್ತೇವೆ. ಒಟ್ಟಾಗಿ ಕರ್ತನಾದ ಯೇಸುವಿನ ಹೆಸರನ್ನು ನಗರದ ಮೇಲೆ ಮೇಲಕ್ಕೆತ್ತುತ್ತೇವೆ. ನಾವು ಇದನ್ನು ಮಾಡುವಾಗ, ನಗರದ ಮೇಲೆ ಒಂದು ಬಲಯುತವಾದ ಆತ್ಮಿಕ ರೂಪಾಂತರವಿರುತ್ತದೆ.

# 31

# ನಗರ ಸುವಾರ್ತೀಕರಣ

ನಗರಗಳು ತಮ್ಮದೇ ಆದಂತಹ ಅದ್ವಿತೀಯ ಅವಕಾಶಗಳನ್ನು ಹೊಂದಿವೆ ಮತ್ತು ಆತ್ಮಗಳ ರಕ್ಷಣೆಗಾಗಿ ಸವಾಲುಗಳನ್ನು ಎದುರಿಸುತ್ತವೆ.

## ದೇವರು ನಗರಗಳಲ್ಲಿ ಆಸಕ್ತಿ ಹೊಂದಿದ್ದಾನೆ

ನಗರದ ಕೂಗುಗಳು ದೇವರ ಮುಂದೆ ಬರುತ್ತವೆ. ನಗರದ ಒಳಗೆ ಜರುಗುತ್ತಿರುವಂತಹವುಗಳನ್ನು ದೇವರು ಅರಿತುಕೊಂಡಿದ್ದಾನೆ ಉದಾಹರಣೆಗೆ: ಸೊದೋಮ್ ಮತ್ತು ಗೊಮೋರ (ಆದಿಕಾಂಡ 13:13 ಆದಿಕಾಂಡ 18:17, 18, 20, 21). ನಿನೆವೆ (ಯೋನ 1:2)

ನಗರದಲ್ಲಿ ನೀರಿಕ್ಷೆಯಿಲ್ಲದಿರುವುದರ ಮೇಲೆ ದೇವರು ಕರುಣೆ ಹೊಂದಿದ್ದಾನೆ.

ಯೋನ 4:11

**ಎಡಗೈ ಬಲಗೈ ತಿಳಿಯದ ಒಂದು ಲಕ್ಷ ಇಪ್ಪತ್ತು ಸಾವಿರ ನರ ಪ್ರಾಣಿಗಳೂ ಬಹು ಪಶುಗಳೂ ಉಳ್ಳ ಆ ದೊಡ್ಡ ಪಟ್ಟಣವಾದ ನಿನೆವೆಗಾಗಿ ನಾನು ಕನಿಕರ ಪಡಬಾರದೋ ಅಂದನು.**

ನಗರದ ನೆಮ್ಮದಿಯನ್ನು ಆತನ ಜನರು ಹುಡುಕಬೇಕೆಂಬುದಾಗಿ ಮತ್ತು ನಗರಕ್ಕಾಗಿ ಪ್ರಾರ್ಥನೆ ಮಾಡಬೇಕೆಂಬುದಾಗಿ ದೇವರು ಅಪೇಕ್ಷಿಸುತ್ತಾನೆ.

ಯೆರೆಮೀಯ 29:7

**ನಾನು ಯಾವ ಪಟ್ಟಣಕ್ಕೆ ನಿಮ್ಮನ್ನು ಸಾಗಿಸಿದೆನೋ ಅದರ ಕ್ಷೇಮವನ್ನು ಹಾರೈಸಿ ಅದಕ್ಕಾಗಿ ಯೆಹೋವನ್ನು ಪ್ರಾರ್ಥಿಸಿರಿ ಅದರ ಕ್ಷೇಮವೇ ನಿಮ್ಮ ಕ್ಷೇಮ.**

ನಗರದ ಕೂಗುಗಳಿಗಾಗಿ ಪ್ರತಿಕ್ರಿಯೆ ತೋರಿಸುವಂತಹ ಜನರನ್ನು ದೇವರು ಹುಡುಕುತ್ತಿದ್ದಾನೆ.

ಯೆಹೆಜ್ಕೇಲನು 9:4
ಅವನಿಗೆ ನೀನು ಯೆರೂಸಲೇಮ್ ಪಟ್ಟಣದಲ್ಲೆಲ್ಲಾ ತಿರುಗಿ ಅದರೊಳಗೆ ನಡೆಯುವ ಸಮಸ್ತ ಅಸಹ್ಯ ಕಾರ್ಯಗಳಿಗಾಗಿ ಸರಳ ಗೋಳಾಡುತ್ತಿರುವ ಜನರ ಹಣೆಯ ಮೇಲೆ ಗುರುತು ಮಾಡು ಎಂದು ಅಪ್ಪಣೆ ಕೊಟ್ಟನು

## ಭಾರತ

ಒಂದು ಮಿಲಿಯನ್ ಅಥವಾ ಅಧಿಕವಾಗಿ ಜನಸಂಖ್ಯೆಯೊಡನೆ ಇರುವ 48 ನಗರಗಳ ಒಟ್ಟುಗೂಡುವಿಕೆಯು ಭಾರತದಲ್ಲಿದೆ.

ಶ್ರೇಣಿ I
ದೆಹಲಿ/ಎನ್.ಸಿ.ಆರ್, ಮುಂಬೈ, ಕೋಲ್ಕತಾ, ಚೈನ್ನೈ, ಹೈದ್ರಾಬಾದ್, ಬೆಂಗಳೂರು

ಶ್ರೇಣಿ II (17 ಪ್ರಮುಖ ಶ್ರೇಣಿ II ನಗರಗಳು)
ಪುಣೆ, ಭುವನೇಶ್ವರ, ಚಂಢಿಗರ್, ಲಕ್ನೋ, ಸೂರತ್, ಜೈಪುರ, ವಿಶಾಖಪಟ್ನಂ, ಇಂದೂರ್, ನಾಗ್‌ಪುರ್, ಕೊಚ್ಚಿ, ಲುಧಿಯಾನಾ, ಭೂಪಾಲ್, ಅಮೃತಸರ್, ಗ್ವಾಲಿಯರ್.

ಶ್ರೇಣಿ III (33 ಪ್ರಮುಖ ಶ್ರೇಣಿ III ನಗರಗಳು)
ಅಲಹಾಬಾದ್, ಉದಯ್‌ಪುರ್, ಆಗ್ರಾ, ಆಜ್ಮೀರ್, ಕೋಟಾ, ಮೀರತ್, ಶಿಲ್ಲಾಂಗ್, ಧನ್ಬಾದ್, ಹೋಶಿಯಾಪುರ್, ಅಂಬಾಲಾ, ವಿಜಯವಾಡ, ಜಲಂಧರ್, ರಾಯ್‌ಪುರ್.

ಭಾರತದ ಸುಮಾರು 70 ಜನರು ಇನ್ನೂ ಗ್ರಾಮೀಣ ಪ್ರದೇಶಗಳಲ್ಲಿ ಜೀವಿಸುತ್ತಿದ್ದಾರೆ, ಗ್ರಾಮದಿಂದ ನಗರಗಳಿಗೆ ಸ್ಥಿರವಾದ ವಲಸೆಯು ಇದೆ.

ಸ್ಥಳೀಯ ಸಭೆಯಾಗಿ, ನಮ್ಮ ನಗರದ ಮೇಲೆ ಪರಿಣಾಮ ಬೀರುವುದು ಮಾತ್ರವಲ್ಲದೆ, ನಮ್ಮ ದೇಶದಲ್ಲಿನ ಇತರೆ ನಗರಗಳ ಮೇಲೂ ಪರಿಣಾಮ ಬೀರಲು ನಾವು ಒಂದು ತಂತ್ರಗಳನ್ನು ರೂಪಿಸುವುದು ಅಗತ್ಯವಾಗಿದೆ.

ಸ್ಥಳೀಯ ಸಭೆಯು ಹೇಗೆ ನಗರವನ್ನು ಸಂಧಿಸಬಹುದು?

## ಆತ್ಮಿಕ, ಕಾರ್ಯತಂತ್ರದ, ನವೀನ

ನಗರ/ಪಟ್ಟಣದ ಸಮುದಾಯಗಳನ್ನು ಸಂಧಿಸಲು ಮೂರು ಕಡೆಯ ವಿಧಾನವನ್ನು ತೆಗೆದುಕೊಳ್ಳುತ್ತದೆ.

| ಆತ್ಮಿಕ | ಕಾರ್ಯತಂತ್ರದ | ನವೀನ |
|---|---|---|
| • ನಗರದ ಆತ್ಮಿಕ ಸ್ವಭಾವ ಮತ್ತು ನಗರದ ವಿವಿಧ ಭಾಗಗಳನ್ನು ಅರ್ಥ ಮಾಡಿಕೊಳ್ಳುವುದು.<br>• ದೇವರ ಆತ್ಮನ ಬಲದೊಡನೆ ತೊಡಗಿಸಿ-ಕೊಂಡಿರುವುದು | • ನಗರದಾದ್ಯಂತ ಜನಸಂಖ್ಯಾಶಾಸ್ತ್ರವನ್ನು ಅರ್ಥ ಮಾಡಿಕೊಳ್ಳುವುದು. (ಸಾಮಾಜಿಕ ವಿತರಣೆ, ಕಾರ್ಖಾನೆಗಳು, ವಿದ್ಯಾಭ್ಯಾಸ ಮುಂತಾದವು)<br>• ಸಾಮಾನ್ಯ ತೊಂದರೆಗಳು ಮತ್ತು ಸಮುದಾಯದಲ್ಲಿನ ಸವಾಲುಗಳು ಮತ್ತು ಸಾಧ್ಯಕರ ವಿಧಾನಗಳು | • ನಗರದಲ್ಲಿನ ಜನರುಗಳನ್ನು ಸಂಧಿಸಲು ಹೊಸ ವಿಧಾನಗಳನ್ನು ಅನ್ವೇಷಿಸುವುದು.<br>• ಸಂಪರ್ಕ<br>• ಸುವಾರ್ತೆಗೊಳಿಸು<br>• ಏಕೀಕರಿಸುವುದು |

ಜನರು, ಜನರನ್ನು ಸಂಧಿಸುವುದು ಹೆಚ್ಚು ಪರಿಣಾಮಕಾರಿಯಾದ ವಿಧಾನವಾಗಿದೆ. ಸ್ಥಳೀಯ ಸಭೆಗಳು ಸುವಾರ್ತೆ ಸಾರಲೂ, ಆತ್ಮಗಳನ್ನು ಗೆಲ್ಲಲು ಮತ್ತು ಹೊಸ ವಿಶ್ವಾಸಿಗಳನ್ನು ಪೋಷಿಸಲು ದೇವ ಜನರನ್ನು ಸಜ್ಜುಗೊಳಿಸಬೇಕು. ಇದು ಹೆಚ್ಚು ಸಮರ್ಥನೀಯ, ಅಧಿಕವಾದ ಫಲಗಳನ್ನು ಕೊಡುವ ದೀರ್ಘಾವಧಿಯ ನಡೆಯುತ್ತಿರುವ ಪ್ರಕ್ರಿಯೆಯಾಗಿದೆ.

### ಹೊಸ ವಿಧಾನಗಳು - ಉದಾಹರಣೆಗಳು

### *1) ಕಾರ್ಯತಂತ್ರದ ಸಭಾ ಕಟ್ಟುವಿಕೆ*

ನಗರದ ವಿವಿಧ ಭಾಗಗಳಲ್ಲಿ ಸಭೆಯ ಸ್ಥಾಪನೆ - ಪ್ರತಿಯೊಂದು ವಿಭಿನ್ನವಾದ ಜನರುಗಳನ್ನು ಸಂಧಿಸುವುದು. ನಗರಗಳಲ್ಲಿ ಸಭೆ ಸ್ಥಾಪಿಸುವ ಅಥವಾ ದೇವರ ರಾಜ್ಯವು ಆಕ್ರಮಣ ಮಾಡುವಂತಹ ನಗರದ ಭಾಗಗಳಲ್ಲಿ ನಗರದ ಸೇವೆಗಳ ಬಗ್ಗೆ ನಾವು ಉದ್ದೇಶ ಪೂರ್ವಕವಾದವರಾಗಿರಬೇಕು. ವಿವಿಧ ಭಾಷೆಯ ಗುಂಪುಗಳನ್ನು

ಸಂಧಿಸುವುದು ಸಭಿಕರುಗಳನ್ನು ಸ್ಥಾಪಿಸುವುದು/ಪ್ರಾರಂಭಿಸುವುದನ್ನು ನಾವು ಪರಿಗಣಿಸಬೇಕು.

## *2) ಸಾಂಸ್ಥಿಕ ಪ್ರಾರ್ಥನಾ ಅನ್ಯೋನ್ಯತೆ*

ರಕ್ಷಿಸಲ್ಪಡದಿರುವಂತಹವರನ್ನು ಸಂಧಿಸುವ ರೀತಿಯಲ್ಲಿ ಸೇವೆ ಮಾಡಲೂ ಕೆಲಸದ ಸ್ಥಳಕ್ಕೆ ಹತ್ತಿರದಲ್ಲಿ ಅಥವಾ ಕೆಲಸದ ಸ್ಥಳಗಳಲ್ಲಿ ಪ್ರಾರ್ಥನೆಗಾಗಿ ಜನರು ಸೇರಿ ಬರುವುದು.

## *3) ಕಾಫಿ ಟಾಕ್ಸ್ (ಕಾಫಿ ಸಮಯದ ಮಾತುಗಳು)*

ವಿಶ್ವಾಸಿಗಳು (ಯೌವ್ವನಸ್ಥ ಜನರು) ತಮ್ಮ ರಕ್ಷಣೆ ಹೊಂದಿರದ ಸ್ನೇಹಿತರುಗಳನ್ನು ಆಹ್ವಾನಿಸಿ ಕಾಫಿ ಅಂಗಡಿಗಳಲ್ಲಿ ಸೇರಿ ಬರುವುದು. ಯೌವ್ವನಸ್ಥ ಜನರಿಗೆ ಅನ್ವಯಿಸುವಂತಹ ಜೀವಿತದ ಸಮಸ್ಯೆಗಳ ಬಗ್ಗೆ ಮಾತಾಡಬೇಕು.

## *4) ಕ್ಯಾಟ್‌ಲಿಸ್ಟ್ (ವೇಗವರ್ಧಕ)*

ಶಾಲೆಗಳಲ್ಲಿನ ವಿದ್ಯಾರ್ಥಿಗಳಿಗೆ ಸತ್ಯವೇದದ ಮೌಲ್ಯಗಳು ಮತ್ತು ವಚನಭಾಗಗಳನ್ನು ಬೋಧಿಸುವಂತಹ ವಿಶ್ವಾಸಿಗಳ ತಂಡ ಬಹುತೇಕ ವಿದ್ಯಾರ್ಥಿಗಳು ರಕ್ಷಣೆ ಹೊಂದದಿರುವಂತಹವರು ಮತ್ತು ಆತ್ಮಗಳನ್ನು ಗೆಲ್ಲಲು ಮತ್ತು ಶಿಷ್ಯರನ್ನಾಗಿ ಮಾಡಲೂ ಒಂದು ದೊಡ್ಡ ಅವಕಾಶ. ಸಂಪೂರ್ಣ ಶಾಲೆಗಳನ್ನು ‘‘ಶಿಷ್ಯರನ್ನಾಗಿಸುವುದು ಎಂಬುದಾಗಿ ನಾವು ಪರಿಗಣಿಸುತ್ತೇವೆ.

## *5) ಕ್ಯಾಂಪಸ್ ಎಲಿವೇಟ್ಸ್*

ಕಾಲೇಜಿ/ಶಾಲೆಯು ಆವರಣಗಳಲ್ಲಿ ಜೀವಿತದ ಸಮಸ್ಯೆಗಳನ್ನು ಕುರಿತು ಪ್ರತಿಬಿಂಬಿಸುವಂತಹ ‘‘ಯೌವನಸ್ಥ ಕೂಟಗಳು’’

## *6) ಕ್ರೈಸಾಲಿಸ್ ಕಾರ್ಯಾಗಾರಗಳು*

ಜನರುಗಳ ಅಗತ್ಯತೆಗಳ ಕುರಿತು ಪ್ರತಿಬಿಂಬಿಸುವಂತದ್ದು ಉದಾಹರಣೆಗೆ: ಪೋಷಕರ ಕಾರ್ಯಾಗಾರಗಳು, ವೃತ್ತಿಪರ ಕ್ರೈಸ್ತ ಸಲಹೆಗಾರರಿಂದ ಮದುವೆಯ ಕಾರ್ಯಗಾರಗಳು ಸಾಮಾನ್ಯ ಸಾರ್ವಜನಿಕರಿಗೆ ಮುಕ್ತವಾಗಿವೆ.

## *7) ನಗರ ಯೌವನಸ್ಥರ ಸಮಾವೇಶಗಳು*

ನಗರದ ಯುವಕರಿಗೆ ಸಂಬಂಧಿತ ಜೀವಿತದ ಸಮಸ್ಯೆಗಳ ಕುರಿತು ಪ್ರತಿಬಿಂಬಿಸುವ ಸಮಾವೇಶಗಳು.

## *8) ವಿಶೇಷ ಸಂದರ್ಭಗಳಲ್ಲಿ ಸನ್ನೆ ಮಾಡುವಿಕೆ*

ಅಪಾರ್ಟ್‌ಮೆಂಟ್, ಮಾಲ್ಸ್ ಮುಂತಾದ ಕಡೆ ಕ್ರಿಸ್‌ಮಸ್ ಸಂಧಿಸುವಿಕೆ ಸಾಂಸ್ಥಿಕ ಕ್ರಿಸ್‌ಮಸ್ ಬೆಳಗಿನ ಉಪಹಾರ.

## *9) ದೊಡ್ಡ ಭಾನುವಾರಗಳು*

ರಕ್ಷಿಸಲ್ಪಡದಿರುವಂತಹವರನ್ನು ಪ್ರತಿಬಿಂಬಿಸುವ ಆಸಕ್ತಿಕರ ವಿಷಯಾಂಶಗಳು ಕಡೆಗೆ ಸಜ್ಜಾದಂತಹ ಮೂರು ತಿಂಗಳಿಗೊಮ್ಮೆಯ ''ವಿಶೇಷ ಭಾನುವಾರಗಳು'' ಆರಾಧನೆ ನಡೆಸುವುದು. ವಿಶ್ವಾಸಿಗಳು ರಕ್ಷಣೆ ಹೊಂದದಿರುವ ತಮ್ಮ ಸ್ನೇಹಿತರುಗಳನ್ನು ಆಹ್ವಾನಿಸಲು ಇಂತಹ ಅವಕಾಶಗಳನ್ನು ಉಪಯೋಗಿಸಿರಿ.

## *10) ಅದ್ಭುತ ಮತ್ತು ಸ್ವಸ್ಥತಾ ಕೂಟಗಳು*

ಸ್ವಸ್ಥತೆ ಮತ್ತು ಬಿಡುಗಡೆಯ ಸೇವೆಗಾಗಿ ಸಜ್ಜಾದ ವಿಶೇಷ ಭಾನುವಾರ ಆರಾಧನೆ ಕೂಟಗಳು.

# 32

# ಸಭೆ ಸ್ಥಾಪಿಸುವುದು ಮತ್ತು ಸೇವೆಗಳು

‘‘ಸೇವೆಗಳು’’ ಎಂಬ ಪದವನುಸಿ ನಾವು ಉಪಯೋಗಿಸುವಾಗ ನಾವು ಮಾತನಾಡುತ್ತಿರುವಂತದ್ದು ಯಾವುದೆಂದರೆ:

- ಇನ್ನೂ ಕೇಳಿಲ್ಲದ್ದಂತಹವರ ಬಳಿಗೆ ಯೇಸು ಕ್ರಿಸ್ತನ ಸಂದೇಶವನ್ನು ತೆಗೆದುಕೊಂಡು ಹೋಗುವುದು ಮತ್ತು ಅವರ ಮಧ್ಯದಲ್ಲಿ ಹೊಸ ಸ್ಥಳೀಯ ಸಭೆಗಳನ್ನು ಸ್ಥಾಪಿಸುವುದು.
- ನಂಬಿರುವಂತಹವರನ್ನು ಸಜ್ಜುಗೊಳಿಸುವುದು ಮತ್ತು ಶಿಷ್ಯತ್ವಗೊಳಿಸುವುದು, ಆದ್ದರಿಂದ ಅವರ ಸ್ವಂತ ಜನರು/ಸಮುದಾಯಗಳ ಮಧ್ಯದಲ್ಲಿ ಸ್ವಾವಲಂಬಿ ಸಭೆಯ ಬೆಳವಣಿಗೆಯ ಚಳುವಳಿಯನ್ನು ಅವರು ಹೊಂದಿರಲಿ.
- ಮೇಲಿನವುಗಳಲ್ಲಿ ತೊಡಗಿಸಿಕೊಂಡಿರುವವರ ಜೊತೆಗೆ ಕೆಲಸಮಾಡುವುದು/ಬಲಕೊಡುವುದು.

ಸ್ಥಳೀಯ ಸಭೆಯು ಪುನರುತ್ಪಾದಿಸಬೇಕು, ಸ್ಥಳೀಯ ಸಭೆಯು ಪುನರುತ್ಪಾದಿಸುವಂತಹ ಮಾರ್ಗವಾದ ಸೇವೆಯ ಕಾರ್ಯಾಚರಣೆಗಳಲ್ಲಿ ತೊಡಗಿಸಿಕೊಳ್ಳಬೇಕು.

## ಸೇವಾ ಕಾರ್ಯಾಚರಣೆಗಳಲ್ಲಿ ಒಂದು ಸ್ಥಳೀಯ ಸಭೆಯು ತೊಡಗಿಸಿಕೊಳ್ಳಲು ಮಾರ್ಗಗಳು

ಸೇವೆಯ ಕಾರ್ಯಾಚರಣೆಗಳಲ್ಲಿ ಸ್ಥಳೀಯ ಸಭೆಯ ಸಭಿಕರಾದ ವಿಶ್ವಾಸಿಗಳು ತೊಡಗಿಸಿಕೊಳ್ಳಲು ವಿವಿಧ ರೀತಿಗಳಿವೆ. ಇವುಗಳು ಸೇರಿವೆ:

1. ಸಭಾ ಸ್ಥಾಪನೆ: ಸಭೆಯ ಸ್ಥಾಪನೆಗೆ ಒಂದು ದರ್ಶನವನ್ನು ಬೀರಿರಿ.
2. ಹೊಸ ವಿಶ್ವಾಸಿಗಳನ್ನು ಮತ್ತು ಸ್ಥಳೀಯ ಸಭೆಗಳನ್ನು ಬಲಪಡಿಸುವುದು.
3. ಇತರ ಸ್ಥಳೀಯ ಸಭೆಗಳು/ವಿಶ್ವಾಸಿಗಳ ಸಮುದಾಯದ ನಿರ್ದಿಷ್ಟ ದೈಹಿಕ ಅಗತ್ಯತೆಗಳ ಸೇವೆ ಸಲ್ಲಿಸುವುದು.

4. ಸುವಾರ್ತೆಯ ಪ್ರಗತಿಗಾಗಿ ಪ್ರಾರ್ಥನೆ ಮಾಡುವುದು.

5. ಸೇವೆ ಕಾರ್ಯಾಚರಣೆಗಳಲ್ಲಿ ತೊಡಗಿಸಿಕೊಂಡಿರುವವರೊಂದಿಗೆ ಪಾಲುಗಾರರಾಗುವುದು. ಹಣಕಾಸಿನ ಸಹಾಯ ಮಾಡಿರಿ ಮತ್ತು ಸೇವೆಗೆ ತೊಡಗಿಸಿಕೊಂಡಿರುವಂತಹವರಿಗೆ ಇತರ ಮಾರ್ಗಗಳಲ್ಲಿಯೂ ಸಹಾಯ ಮಾಡಿರಿ.

6. ಹೊಸ ಸಮುದಾಯಗಳಿಗೆ ಯೇಸುಕ್ರಿಸ್ತನ ಸೇವೆ ಸಲ್ಲಿಸಲು ಇತರೆ ವಿಧಾನಗಳನ್ನು ಉಪಯೋಗಿಸುವುದು. ಉದಾಹರಣೆಗೆ ವೈದ್ಯಕೀಯ ಸೇವಾಕಾರ್ಯಾಚರಣೆ, ಸಾಮಾಜಿಕ ಕ್ರಿಯೆ ಮತ್ತು ಇತರೆ.

   ಪ್ರತಿಯೊಬ್ಬ ವಿಶ್ವಾಸಿಯು ಒಂದು ಅರ್ಥದಲ್ಲಿ ''ಒಬ್ಬ ಕಳುಹಿಸಲ್ಪಟ್ಟವನು'' ನಾವೆಲ್ಲರು ಕಳುಹಿಸಲ್ಪಟ್ಟಿದ್ದೇವೆ. (ಯೋಹಾನ 20:21). ನಾವು ಆತನ ರಾಯಭಾರಿಗಳಾಗಿದ್ದೇವೆ. (2 ಕೊರಿಂಥದವರಿಗೆ 5:20). ಪ್ರತಿಯೊಬ್ಬ ವಿಶ್ವಾಸಿಯು ಅವರ ಪ್ರಸ್ತುತ ವೃತ್ತಿ ಜೀವನದ ಸನ್ನಿವೇಶದೊಳಗೆ ಅಪೊಸ್ತಲತ್ವದ ಮತ್ತು ಪ್ರವರ್ತಕಗೊಳಿಸಲು, ಕಟ್ಟಲೂ ಮತ್ತು ಆಡಳಿತ ನಡೆಸಲೂ ಅಪೊಸ್ತಲತ್ವದ ಸ್ವಭಾವ ತೋರ್ಪಡಿಸಬಹುದು.

## ಒಂದು ಸಭೆ ಸ್ಥಾಪನೆಗಾಗಿ ಸಿದ್ಧತೆ

ಒಂದು ಸಭಾ ಸ್ಥಾಪನೆಯ ಸೇವಾಕಾರ್ಯಗಳಿಗೆ ಹೋಗಲೂ ತಮ್ಮನ್ನು ಸಿದ್ಧಪಡಿಸಿಕೊಂಡಿರಲೂ ನಾವು ವಿಶ್ವಾಸಿಗಳಿಗೆ ಸಹಾಯ ಮಾಡಬಹುದಾದ ಕೆಲವು ಮೂಲಭೂತ ಕ್ಷೇತ್ರಗಳು ಇಲ್ಲಿವೆ.

- ಕರೆಯನ್ನು ಗುರುತಿಸಿರಿ : ಇಂತಹ ಸಭಾ ಸ್ಥಾಪನೆಯ ಸೇವಾಕಾರ್ಯಚರಣೆಗಳಿಗೆ ಕರ್ತನು ನಿಮ್ಮನ್ನು ಮಾರ್ಗದರ್ಶಿಸುತ್ತಿದ್ದಾನೆ ಎಂಬುದರ ಬಗ್ಗೆ ಖಚಿತಪಡಿಸಿಕೊಳ್ಳಿರಿ.
- ಆತ್ಮಿಕವಾಗಿ ಸಿದ್ಧವಾಗಿರಿ: ದೇವರ ವಾಕ್ಯ ಮತ್ತು ಆತ್ಮನ ಕಾರ್ಯಗಳೊಡನೆ ನಿಮ್ಮನ್ನು ಸಜ್ಜುಗೊಳಿಸಿಕೊಳ್ಳಿರಿ.
- ಭೂಪ್ರದೇಶ ಅರ್ಥ ಮಾಡಿಕೊಳ್ಳಿರಿ: ಆತ್ಮಿಕವಾಗಿ, ಕಾರ್ಯತಂತ್ರದ: ನೀವು ಹೋಗುವಂತಹ ಪ್ರದೇಶಗಳ ಸಮೀಕ್ಷೆ ಮಾಡಿರಿ. ಜನರನ್ನು ಬಾಧಿಸುತ್ತಿರುವಂತಹ ಇತರೆ ಅಂಶಗಳು, ಆತ್ಮಿಕತೆ, ಜನಸಂಖ್ಯಾ ಶಾಸ್ತ್ರದ ಬಗ್ಗೆ ಅರ್ಥಮಾಡಿಕೊಳ್ಳಿರಿ.

- ಒಂದು ಯೋಜನೆ ಅಭಿವೃದ್ಧಿ ಪಡಿಸಿ, ಅಳವಡಿಸಿಕೊಳ್ಳಲು ಸಿದ್ಧವಾಗಿರಿ: ಪ್ರಾರ್ಥನಾ ಪೂರ್ವಕವಾಗಿ ಪವಿತ್ರಾತ್ಮನಿಂದ ಕೇಳಿರಿ ಮತ್ತು ಆ ಒಂದು ಕ್ಷೇತ್ರದಲ್ಲಿ ನೀವು ಹೇಗೆ ಸಭೆಯನ್ನು ಸ್ಥಾಪಿಸಲು ಹೋಗಬೇಕೆಂಬುದರ ಒಂದು ಯೋಜನೆಯನ್ನು ಅಭಿವೃದ್ಧಿ ಪಡಿಸಿ. ಪ್ರಯಾಣ ಮಾಡುವಾಗ ಅಳವಡಿಸಿಕೊಳ್ಳಲೂ ಸಿದ್ಧವಾಗಿರಿ.
- ಒಂದು ತಂಡವಾಗಿ ಹೋಗಿರಿ: ಸಾಧ್ಯಕರವಾದರೆ ತಂಡವಾಗಿ ಹೋಗಿರಿ. ಎರಡು ಅಥವಾ ಅಧಿಕವಾದಂತಹ ಕುಟುಂಬಗಳು ಮೊದಲಿನ ಸಭಾ ಸ್ಥಾಪಿಸುವ ತಂಡವನ್ನು ಮಾಡಿಕೊಂಡರೆ ಅದು ಅದ್ಭುತಕರವಾಗಿರುತ್ತದೆ.

## ಒಂದು ಸ್ಥಳೀಯ ಸಭೆಯ ಪ್ರವರ್ತಕರಾಗಿರುವುದು

### *ಡೇರೆ ಹಾಕುವುದನ್ನು ಪರಿಗಣಿಸಿರಿ*

ಸೇವಾ ಕಾರ್ಯಾಚರಣೆಗೆ ಕರೆಯುವುದೆಂದರೆ ನಮ್ಮ ವೃತ್ತಿಪರ ವ್ಯಕ್ತಿಗಳನ್ನು ಬಿಟ್ಟು ಎಲ್ಲೋ ಒಂದು ಕಡೆಗೆ ಒಬ್ಬ ಪೂರ್ಣಾವಧಿ ಸುವಾರ್ತಿಕನಾಗಿ ಹೋಗಬೇಕೆಂಬುದಾಗಿ ನಾವು ಊಹಿಸುತ್ತೇವೆ. ಇದನ್ನು ಮಾಡಲೂ ಕೆಲವರನ್ನು ದೇವರು ಕರೆದಿದ್ದಾನೆ ಎಂಬುದು ಸತ್ಯವಾದದು ಹಾಗೆಯೇ ನಮ್ಮ ಉದ್ಯೋಗವನ್ನು ಸಹ ಸೇವಾಕಾರ್ಯಾಚರಣೆಯ ಜೀವಿತದಲ್ಲಿ ದೇವರು ಉಪಯೋಗಿಸುತ್ತಾನೆ ಎಂಬುದನ್ನು ಸಹ ನಾವು ಅರ್ಥಮಾಡಿಕೊಳ್ಳಬೇಕು.

ಅಪೊಸ್ತಲನಾದ ಪೌಲನು, ಸಭೆಯು ಸ್ಥಾಪನೆಯೊಡನೆ ಅವನ ವ್ಯಾಪಾರದ ಉದ್ಯೋಗವನ್ನು ಸಂಯೋಜಿಸಿದ್ದು ಒಂದು ದೊಡ್ಡ ಉದಾಹರಣೆಯಾಗಿದೆ. ಅವನು ಇದರ ಅನುಸರಿಸುವಿಕೆಯನ್ನು ಮೂರು ಸ್ಥಳಗಳಲ್ಲಿ ತೆಗೆದುಕೊಳ್ಳುತ್ತಾನೆ. ಕೊರಿಂಥದಲ್ಲಿ ಅಕ್ವಿಲನೂ ಮತ್ತು ಪ್ರಿಸ್ಕಿಲ್ಲಳೊಂದಿಗೆ (ಅಪೊಸ್ತಲರ ಕೃತ್ಯಗಳು 18:1-11), ಎಫೆಸದಲ್ಲಿ (ಅಪೊಸ್ತಲರ ಕೃತ್ಯಗಳು 20:33-35) ಮತ್ತು ಥೆಸಲೋನಿಕದಲ್ಲಿ (1 ಥೆಸಲೋನಿಕದವರಿಗೆ 2:9-12).

ಕೆಲವು ವಿಶ್ವಾಸಿಗಳು ತಮ್ಮ ಉದ್ಯೋಗದೊಡನೆ ಭಾರತದಲ್ಲಿ ಬೇರೆ ಯಾವುದಾದರೂ ನಗರಕ್ಕೆ ಹೋಗಬಹುದು ಮತ್ತು ಅಲ್ಲಿ ಸಭೆ ಸ್ಥಾಪಿಸಬಹುದು ಅಥವಾ ಸೇವಾಕಾರ್ಯಾಚರಣೆಯಲ್ಲಿ ಕಾರ್ಯತಂತ್ರದ ಕೆಲವು ಮಾರ್ಗಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಹುದು

## ಆ ಸ್ಥಳದಲ್ಲಿ ದೇವರು ಸ್ಪರ್ಶಿಸಿದ್ದಂತಹ ಜನರನ್ನು ಗುರುತಿಸಿರಿ ಮತ್ತು ಅವರೊಂದಿಗೆ ಕೆಲಸ ಮಾಡಿರಿ

ಸಾಮಾನ್ಯವಾಗಿ ಈಗಾಗಲೇ ದೇವರು ಸಿದ್ಧಮಾಡಿರುವಂತಹ ಜನರುಗಳು ಇದ್ದಾರೆ ಮತ್ತು ಹೀಗಾಗಿ ಸುವಾರ್ತೆಯನ್ನು ಗ್ರಹಿಸುವಂತವರಾಗಿದ್ದಾರೆ.

ಕೊರಿಂಥದಲ್ಲಿ, ಪೌಲನು ಮತ್ತು ಅವನ ತಂಡವು ಅಕ್ವಿಲ ಮತ್ತು ಪ್ರಿಸ್ಕಿಲಾಳೊಂದಿಗೆ, ಯೂಸ್ತನೊಡನೆ ಮತ್ತು ನಂತರ ದೇವರು ಅಪೊಲ್ಲೋಸನನ್ನು ಅವರೊಂದಿಗೆ ಸೇರಿಸಿದ್ದನ್ನು ನೋಡುತ್ತೇವೆ (ಅಪೊಸ್ತಲರ ಕೃತ್ಯಗಳು 18:24-28)

ಫಿಲಿಪ್ಪಿಯಲ್ಲಿ ಪೌಲನು ಮತ್ತು ಅವನ ತಂಡದವರು, ಆ ನಗರಕ್ಕೆ ಅವರನ್ನು ಆಹ್ವಾನಿಸಿದ್ದಂತಹ ಮತ್ತು ವ್ಯಾಪಾರಸ್ಥ ಸ್ತ್ರೀಯಾದ ಲುದ್ಯಳನ್ನು ಗುರುತಿಸಿದಳು (ಅಪೊಸ್ತಲರ ಕೃತ್ಯಗಳು 16:12-15)

ಎಫೆಸದಲ್ಲಿ, ಪೌಲನು ತುರನ್ನನ ತರ್ಕ ಶಾಲೆಯನ್ನು ಉಪಯೋಗಿಸಿದನು (ಅಪೊಸ್ತಲರ ಕೃತ್ಯಗಳು - 19:9)

## ಸುವಾರ್ತೆಯ ಬಲವನ್ನು ತೋರ್ಪಡಿಸುವುದು

ನಾವು ಆಗ್ಗಾಗ್ಗೆ ನಗರದ ಮೇಲೆ ಒಂದು ಬಲಯುತವಾಗಿ ಪರಿಣಾಮ ಬೀರಲು ಅದು ಏನನ್ನು ತೆಗೆದುಕೊಳ್ಳುತ್ತದೆ. ನಾವು ಆಶ್ಚರ್ಯಚಕಿತರಾಗುತ್ತೇವೆ? ನಗರದಲ್ಲಿನ ಜನರುಗಳ ಕೀಲಿಕೈ ಮಾರುಕಟ್ಟೆ ಕ್ಷೇತ್ರದಲ್ಲಿ ದೇವರ ಬಲವನ್ನು ತೋರ್ಪಡಿಸುವುದಾಗಿದೆ. ಯೇಸುವು ಗ್ರಾಮಗಳಲ್ಲಿಯೂ, ಊರು ಹಳ್ಳಿಗಳಲ್ಲಿಯೂ, ಪೇಟೆಗಳಲ್ಲಿಯೂ ದೇವರ ಬಲವನ್ನು ತೋರ್ಪಡಿಸಿದನು. (ಮಾರ್ಕ 6:56)

ನಗರಗಳಲ್ಲಿ ಬಲಯುತವಾದ ಕಾರ್ಯಗಳನ್ನು ತೋರ್ಪಡಿಸಲೂ ಪಶ್ಚಾತ್ತಾಪವನ್ನು ಫಲಿತಾಂಶದಂತೆ ಕರ್ತನಾದ ಯೇಸು ಎದುರು ನೋಡುತ್ತಾನೆ (ಮತ್ತಾಯ 11:20-24)

ಹೆಚ್ಚಿನ ನಗರಗಳಲ್ಲಿ ತಪ್ಪಾದ ಧರ್ಮಗಳು ಜನರ ಜೀವಿತಗಳನ್ನು ಆಳುತ್ತವೆ. ದೇವರ ಬಲವನ್ನು ತೋರ್ಪಡಿಸುವ ಮೂಲಕವಾಗಿ ಅವರನ್ನು ಸಂಧಿಸುವಂತದ್ದು ನಮ್ಮ ವಿಧಾನವಾಗಿರಬೇಕು. ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಈ ಕೆಳಗಿನ ಉದಾಹರಣೆಗಳನ್ನು ನೋಡುತ್ತೇವೆ.

- ಪೌಲನು ಪಾಪೋಸ್‌ನಲ್ಲಿ (ಅಪೊಸ್ತಲರ ಕೃತ್ಯಗಳು 13:6-12): ದೇವರ ಬಲದ ತೋರ್ಪಡಿಸುವಿಕೆಯನ್ನು ಅವನು ನೋಡಿದಾಗ ನಗರದ ನಾಯಕನು ಬಾಧಿತನಾದನು.
- ಪೌಲನು ಫಿಲಿಪ್ಪಿಯಲ್ಲಿ (ಅಪೊಸ್ತಲರ ಕೃತ್ಯಗಳು 16:16-19): ನಗರದಲ್ಲಿನ ಜನರುಗಳ ಮೇಲೆ ಪ್ರಾಬಲ್ಯ ಹೊಂದಿದ್ದ ದುರಾತ್ಮನ ಬಲವು ಉರುಳಿಸಲ್ಪಟ್ಟಾಗ ನಗರವು ಬಾಧಿಸಲ್ಪಟ್ಟಿತ್ತು.
- ಪೌಲನು ಎಫೆಸದಲ್ಲಿ (ಅಪೊಸ್ತಲರ ಕೃತ್ಯಗಳು 19:8-20): ಅದ್ಭುತಗಳ ಮೂಲಕವಾಗಿ ತೋರ್ಪಡಿಸಲ್ಪಟ್ಟಂತಹ ದೇವರ ಬಲವು ನಗರದ ಮೇಲೆ ಪರಿಣಾಮ ಬೀರಿತು.

## ಯೇಸುಕ್ರಿಸ್ತನ ಸುವಾರ್ತೆ ಸೇವೆ ಮಾಡಲೂ ಹೆಚ್ಚುವರಿ ವಿಧಾನಗಳನ್ನು ಉಪಯೋಗಿಸುವುದು

- ಸಮೂಹ ಮಾಧ್ಯಮ (ವೃತ್ತ ಪತ್ರಿಕೆ, ದೂರದರ್ಶನ ಮುಂತಾದವು)
- ಚಾಲ್ತಿಯಲ್ಲಿರುವ ಅಗತ್ಯತೆಗಳು/ದುರಾಭ್ಯಾಸವನುಸಿ ಉದ್ದೇಶಿಸುವುದು (ಉದಾಹರಣೆಗೆ: ಡ್ರಗ್ಸ್‌ನ ಚಟ(ಉದ್ದೀಪನ ಸೇವನೆ) ಮದ್ಯಪಾನ ಮುಂತಾದವು)
- ಸಾಮಾಜಿಕ ಕೆಲಸ/ಸಮುದಾಯ ರೂಪಾಂತರ
- ವಿದ್ಯಾಭ್ಯಾಸ
- ಸಾರ್ವಜನಿಕ ಆರೋಗ್ಯ ಸುಧಾರಣೆ

## ಸಭಾ ಸ್ಥಾಪನೆ: ಪ್ರಾಯೋಗಿಕ ಮಾರ್ಗದರ್ಶನ

ಹೊಸ ಸ್ಥಳ/ಕ್ಷೇತ್ರಗಳಿಗೆ ಹೋಗಿ ಒಂದು ಸ್ಥಳೀಯ ಸಭೆ ಅಥವಾ ಒಂದು ಹೊಸ ಸೇವೆಯನ್ನು ಪ್ರಾರಂಭಿಸುವಾಗ ಹಿಂಬಾಲಿಸಬೇಕಾದ ಕೆಲವು ಪ್ರಾಮುಖ್ಯವಾದ ಮಾರ್ಗದರ್ಶನಗಳು ಕೆಳಕಂಡಂತಿವೆ.

## ಪ್ರಾರ್ಥನೆ, ಸಮೀಕ್ಷೆ ಮತ್ತು ಕ್ರಿಯೆಯ ಯೋಜನೆ

1. ಪ್ರದೇಶವನ್ನು ಸಮೀಕ್ಷೆ ಮಾಡಲೂ ಸಮಯ ತೆಗೆದುಕೊಳ್ಳಿರಿ ಆ ಪ್ರದೇಶ ಮತ್ತು ಅಲ್ಲಿರುವ ಜನರ ಮೇಲೆ ಪ್ರಾರ್ಥಿಸಿರಿ. ಸಾಧ್ಯವಾದಷ್ಟು ನೀವು ಯೋಜನೆ ಮಾಡಿರಿ ಎಂಬುದಾಗಿ ನಾವು ಪ್ರೋತ್ಸಾಹಿಸುತ್ತೇವೆ ಮತ್ತು ದೇವರ ಆತ್ಮನಿಂದ ತಕ್ಷಣದ

ನಿರ್ದೇಶನಕ್ಕಾಗಿ ಮತ್ತು ಸ್ಪಷ್ಟವಾದ ವಿನಾಯಿತಿಗಳೊಂದಿಗೆ ಪ್ರದೇಶ ಮತ್ತು ಕ್ಷೇತ್ರದ ಭೌತಿಕ ಸಮೀಕ್ಷೆ ಮತ್ತು ಪ್ರಾರ್ಥನೆಯಲ್ಲಿ ಒಂದು ಹೊಸ ಸಭೆ ಸ್ಥಾಪನೆಗಾಗಿ ಮುನ್ನಡೆದು ಉತ್ತಮವಾಗಿ ಸಿದ್ಧವಾಗಿರಿ.

2. ಪ್ರಾರ್ಥನೆ ಮತ್ತು ಸಮೀಕ್ಷೆಯ ಮೂಲಕವಾಗಿ ಒಂದು ಸ್ಪಷ್ಟವಾದ ಯೋಜನೆಯ ಕ್ರಿಯೆಯನ್ನು ರೂಪಿಸಿರಿ. ಹೆಚ್ಚಿಗೆಯ ಕಾಲದಲ್ಲಿ ಕ್ರಿಯೆಯ ಯೋಜನೆಯು ಬದಲಾಗಬಹುದು ಆದರೆ ನೀವು ಪ್ರಾರಂಭಿಸಲು ಕನಿಷ್ಟ ನೀವು ಏನನ್ನಾದರೂ ಹೊಂದಿರುತ್ತೀರಿ.

3. ಮುಂದಿನ ಮಾರ್ಗದರ್ಶನ ಮತ್ತು ಸಲಹೆಗಳನ್ನು ಪಡೆಯಲು ನಿಮ್ಮ ಪ್ರಸಕ್ತವಾದ ಸ್ಥಳೀಯ ಸಭೆಯ ನಾಯಕತ್ವದಲ್ಲಿರುವವರೊಡನೆ ಇದನ್ನುಸಿ ಚರ್ಚಿಸಿರಿ ಮತ್ತು ಹಂಚಿಕೊಳ್ಳಿರಿ. ಅವರ ಮಾರ್ಗದರ್ಶನ ಮತ್ತು ಆಶೀರ್ವಾದದೊಂದಿಗೆ ಹೊರ ಹೆಜ್ಜೆ ಹಾಕಿರಿ.

## *ಪ್ರದೇಶದಲ್ಲಿನ ಸ್ಥಳೀಯ ಕ್ರೈಸ್ತ ನಾಯಕರೊಂದಿಗೆ ಸಂಬಂಧಿಸಿಕೊಳ್ಳುವುದು*

1. ಏನಾದರೂ ಇದ್ದಲ್ಲಿ ಕ್ರೈಸ್ತ ಸೇವೆಗಳ ನಾಯಕರುಗಳು ಮತ್ತು ಅಸ್ತಿತ್ವದಲ್ಲಿರುವ ಸ್ಥಳೀಯ ಸಭೆಯ ಸಭಾಪಾಲಕರೊಂದಿಗೆ ಉತ್ತಮ ಸಂಬಂಧಗಳನ್ನು ಸ್ಥಾಪಿಸಿಕೊಳ್ಳಿರಿ ಮತ್ತು ಸಂದರ್ಶಿಸಿರಿ. ಸ್ಥಳೀಯ ಕ್ರೈಸ್ತ ನಾಯಕರುಗಳೊಂದಿಗೆ ಉತ್ತಮವಾದ ಬಾಂಧವ್ಯವನ್ನು ಯಾವಾಗಲೂ ಇಟ್ಟುಕೊಂಡಿರಿ.

2. ಆ ಒಂದು ಪ್ರದೇಶಕ್ಕೆ ನೀವು ಚಲಿಸಿದಾಗ, ಸ್ಥಳೀಯ ಸಭಾಪಾಲಕರುಗಳ ಸೇರಿ ಬರುವಿಕೆ ಮತ್ತು ಅನ್ಯೋನ್ಯತೆಯಲ್ಲಿ ಭಾಗಗಳಾಗಿ ಕಂಡು ಬನ್ನಿರಿ.

## *ನಿಮ್ಮ ಪ್ರಾಥಮಿಕ ಉದ್ದೇಶವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿರಿ*

1. ನೀವು ಮಾಡಬೇಕೆಂಬುದಾಗಿ ಯೋಜಿಸಲ್ಪಟ್ಟಿರವುಗಳ ಬಗ್ಗೆ ಪ್ರಾಥಮಿಕ ಉದ್ದೇಶವನ್ನು ಯಾವಾಗಲೂ ಸ್ಪಷ್ಟವಾಗಿ ತಿಳಿಸಿರಿ. ನೀವು ಒಂದು ಸ್ಥಳೀಯ ಸಭೆಯನ್ನು ಸ್ಥಾಪಿಸಬೇಕೆಂದಿದ್ದರೆ ಎಲ್ಲರಿಗೂ ಸ್ಪಷ್ಟವಾಗಿ ನೀವು ಒಂದು ಸ್ಥಳೀಯ ಸಭೆಯನ್ನು ಪ್ರಾರಂಭಿಸುವ ಯೋಜನೆಯಲ್ಲಿದ್ದೇನೆ ಎಂಬುದಾಗಿ ಹೇಳಿರಿ.

2. ಒಂದು ಪ್ರಾರ್ಥನಾ ಕೂಟ, ಒಂದು ಮನೆಯ ಕೂಟ, ಒಂದು ಸ್ವಸ್ಥತಾ ಕೂಟ, ಒಂದು ಸಣ್ಣ ಅನ್ಯೋನ್ಯತೆ ಕೂಟ ಮುಂತಾದವುಗಳನ್ನು ಪ್ರಾರಂಭಿಸುತ್ತಿದ್ದೇವೆ ಎಂಬುದಾಗಿ ನಿಮ್ಮ ಅಭಿಪ್ರಾಯವನ್ನು ಹೇಳಬೇಡಿರಿ. ನೀವು ಒಂದು ಬಲವಾದ ಸ್ಥಳೀಯ ಸಭೆಯನ್ನು ಸ್ಥಾಪಿಸಲು ಮತ್ತು ಅದು ಬೆಳೆಯುವುದನ್ನು ನೋಡಲು

ಮತ್ತು ಅನೇಕ ಜೀವಿತಗಳ ಮೇಲೆ ಪರಿಣಾಮಕಾರಿಯಾಗಿರಲು ಯೋಜನೆ ಮಾಡಿಕೊಂಡಿದ್ದೇನೆ ಎಂಬುದಾಗಿ ಹೇಳಿರಿ.

## ಪ್ರಾರಂಭದ ಅವಧಿ

1. ನೀವು ಆ ಪ್ರದೇಶಕ್ಕೆ ಹೋದ ನಂತರ ತಡ ಮಾಡದೇ ಕೆಲಸವನ್ನು ಪ್ರಾರಂಭಿಸಿರಿ. ಕೆಲಸ ಮಾಡಲೂ ಪ್ರಾರಂಭಿಸಲು ತಡ ಮಾಡುವುದು ಇತರ ವಿಷಯಗಳೊಡನೆ ಕಾರ್ಯಭಂಗ ಮಾಡಬಹುದು ಮತ್ತು ಪ್ರಾಥಮಿಕ ದರ್ಶನದಿಂದ ದೂರವಾಗಿ ಇತರ ಮಾರ್ಗದರ್ಶನಗಳಲ್ಲಿ ಚಲಿಸುವ ಪ್ರವೃತ್ತಿ ಉಂಟಾಗಬಹುದು. ಆದ್ದರಿಂದ ಆ ಪ್ರದೇಶಕ್ಕೆ ಚಲಿಸಿದ ತಕ್ಷಣವೇ ಸಾಧ್ಯವಾದಷ್ಟು ಮಟ್ಟಿಗೆ ಬೇಗನೇ ಕೆಲಸ ಪ್ರಾರಂಭಿಸಿರಿ.

2. ಕೆಲಸವನ್ನು ಪ್ರಾರಂಭ ಮಾಡಲೂ ಅನೇಕ ಮಾರ್ಗಗಳಿವೆ. ನೀವು ಸುವಾರ್ತಾ ಸೇವೆ (ಬೀದಿಗಳು, ಬಾಗಿಲಿಂದ-ಬಾಗಿಲಿಗೆ) ಮಾಡಲೂ ಸ್ವಲ್ಪ ಸಮಯ ಕಳೆಯಬೇಕು ಮತ್ತು ಆಮೇಲೆ ಭಾನುವಾರದ ಆರಾಧನೆ ಪ್ರಾರಂಭಿಸಬೇಕು. ನೀವು ಸುವಾರ್ತಿಕ ಕೂಟಗಳ ಸರಣಿಯನ್ನು ಹೊಂದಿರಬಹುದು. ನಿಮ್ಮ ಕ್ರಿಯೆಯ ಯೋಜನೆಯನ್ನು ರೂಪಿಸುವಾಗ ಇದನ್ನು ನಿರ್ಧರಿಸಲಾಗುತ್ತದೆ.

3. ಪ್ರಾರಂಭದಲ್ಲಿ ಕೂಟಗಳನ್ನು ಮತ್ತು ನಿಮ್ಮ ಮನೆಯಲ್ಲಿಯೇ ಭಾನುವಾರದ ಆರಾಧನೆಗಳನ್ನು ಆರಂಭಿಸಬಹುದು ಮತ್ತು ಆನಂತರ ವಿಷಯಗಳು ಬೆಳವಣಿಗೆ ಹೊಂದುವಾಗ ದೊಡ್ಡ ಸಭಾಂಗಣಕ್ಕೆ ಹೋಗಬಹುದು ಅಥವಾ ಒಂದು ಸಭಾಂಗಣದಲ್ಲಿ ಪ್ರಾರಂಭ ಮಾಡಬಹುದು. ಈ ಆಯ್ಕೆಗಳಲ್ಲಿ ಯಾವುದಾದರೂ ಉತ್ತಮವಾಗಿದೆ.

4. ನೀವು ಗೃಹ ಸಭೆ ಎಂಬ ಸ್ವರೂಪವನ್ನು ಉಪಯೋಗಿಸಲೂ ಆರಿಸಿಕೊಳ್ಳಬಹುದು ಮತ್ತು ತಿಂಗಳಿಗೊಮ್ಮೆ ಒಂದು ದೊಡ್ಡ ಸಂಯೋಜಿಸಿದ ಕೂಟಗಳನ್ನು ಮಾಡಲೂ ಕರೆಯಬಹುದು ಅಥವಾ ವಾರದಲ್ಲಿ ಇತರೆ ಕೂಟಗಳೊಂದಿಗೆ ಸಂಯೋಜಿಸಲ್ಪಟ್ಟಂತಹ ವಿಶಿಷ್ಟವಾದ ಭಾನುವಾರದ ದೊಡ್ಡ ಸಭೆಯಾಗಿ ಇದನ್ನು ಮಾಡಲೂ ಆರಿಸಿಕೊಳ್ಳಬಹುದು.

5. ಬೇರೆ ಸಭೆಯ ಸದಸ್ಯರುಗಳಾಗಿರುವವರಿಗೆ ಸೇವೆ ಸಲ್ಲಿಸುವಾಗ ಬಹಳ ಜಾಗರೂಕರಾಗಿರಿ ಸಾಧ್ಯವಾದಷ್ಟು ಮಟ್ಟಿಗೆ ಇದನ್ನು ತಪ್ಪಿಸಿರಿ. ಇದು ಸಂಭವಿಸಿದರೆ ಅಂತಹ ಜನರುಗಳು ಯಾವಾಗಲೂ ಅವರ ಸ್ಥಳೀಯ ಸಭೆಗೆ ಹಿಂತಿರುಗಲು ಮಾರ್ಗದರ್ಶನ ನೀಡಿರಿ ಮತ್ತು ಅವರ ನಾಯಕತ್ವಕ್ಕೆ

ನಂಬಿಗಸ್ತರಾಗಿರಲೂ ತಿಳಿಸಿರಿ. ಅಂತಹ ಜನರು ತಮ್ಮ ಸ್ವಂತ ಸಭಾಪಾಲಕರನ್ನು ಬರುವಂತೆ ಕರೆದು ಅವರಿಗೆ ಸೇವೆ ಸಲ್ಲಿಸುವಂತೆ ಕರೆಯಲಿ.

6. ಬೇರೆ ಸಭೆಯ ವಿಶ್ವಾಸಿಗಳಾಗಿರುವಂತಹ ವಿಶ್ವಾಸಿಗಳ ಮನೆಯಲ್ಲಿ ನಿಮ್ಮ ಸೇವೆಯನ್ನು ಪ್ರಾರಂಭಿಸ ಬೇಡಿರಿ.

7. ಇಂತಹ ಅವಧಿಯಲ್ಲಿ ನಿಮ್ಮೊಂದಿಗೆ ಅನೇಕ ಜನರು ಸಂಪರ್ಕ ಹೊಂದಬಹುದು ಮತ್ತು ನೀವು ಹೊಂದಿರುವ ದರ್ಶನವನ್ನು ಅವರೊಂದಿಗೆ ಹಂಚಿಕೊಳ್ಳಿರಿ. ದೇವರು ಈಗಾಗಲೇ ನಿಮಗಾಗಿ ಅಂತಹ ಜನರನ್ನು ಸಿದ್ಧ ಮಾಡಿರಬಹುದು. ಅವರಿಗೆ ತೆರೆದವರಾಗಿರಿ ಮತ್ತು ಅವರು ದೇವರಿಂದ ಯರ್ಥಾರ್ಥವಾಗಿ ಕಳುಹಿಸಲ್ಪಟ್ಟವರಾಗಿರುವುದರಿಂದ ಮತ್ತು ನಿಮ್ಮ ದರ್ಶನಕ್ಕೆ ಬದ್ಧತೆಯಿಂದಿರುವುದರಿಂದ ಅವರ ಒಳಗೆ ಹೆಜ್ಜೆಯನ್ನಿಡಲು ಅವಕಾಶ ಮಾಡಿಕೊಡಿರಿ. ಮತ್ತೊಂದೆಡೆ ತಪ್ಪಾದ ಕಾರಣಗಳಿಗಾಗಿ ನಿಮ್ಮೊಂದಿಗೆ ಸಂಪರ್ಕ ಹೊಂದಲೂ ಇರುವ ಜನರು ಇರಬಹುದು. ಆದ್ದರಿಂದ (ಅ) ಗ್ರಹಿಸುವವರಾಗಿರಿ ಮತ್ತು ವಿಷಯಗಳನ್ನು ನಿಧಾನವಾಗಿ ತೆಗೆದುಕೊಂಡು ಹೋಗಿರಿ (ಆ) ನಾಯಕತ್ವದ ಸ್ಥಾನಮಾನಗಳು, ಸಂಬಳ, ಟ್ರಸ್ಟ್‌ನ ಸದಸ್ಯತ್ವ ಮುಂತಾದವುಗಳ ಕುರಿತ ಈ ಸಂದರ್ಭದಲ್ಲಿ ಭರವಸೆ ನೀಡದಿರಿ. (ಇ) ನಿರಂತರವಾಗಿ ಅವರ ಪ್ರಚೋದನೆಗಳನ್ನು ಮತ್ತು ನೀರಿಕ್ಷೆಯನ್ನಿಡಲೂ ಮತ್ತು ಅವರ ಮೇಲೆ ಆತುಕೊಳ್ಳಲೂ ನಿಮ್ಮನ್ನು ಒಪ್ಪಿಸಿಕೊಡುವ ಮೊದಲು ಅವರ ಮನೋಭಾವಗಳನ್ನು ಮೌಲ್ಯಮಾಪನ ಮಾಡಿರಿ.

8. ನಿಮ್ಮ ಮನೆಯಲ್ಲಿ ಕೂಟಗಳನ್ನು ಪ್ರಾರಂಭಿಸುತ್ತಿದ್ದರೆ, ನಿಮ್ಮ ನೆರೆಹೊರೆಯವರಿಗೆ ಉಪದ್ರವ ಕೊಡುವವರಾಗಿ ಕಂಡುಬರದಿರುವುದನ್ನು ದಯವಿಟ್ಟು ಖಚಿತಪಡಿಸಿಕೊಳ್ಳಿರಿ. ನೀವು ಅನಗತ್ಯವಾಗಿ ನಿಮಗೆ ತೊಂದರೆಗಳನ್ನು ಮಾಡಿಕೊಳ್ಳುತ್ತೀರಿ. ನೀವು ಗಟ್ಟಿಯಾಗಿ ಹಾಡುವುದು, ಪ್ರಾರ್ಥಿಸುವುದು, ಪ್ರಸಂಗಿಸುವುದು ಮತ್ತು ಹೆಚ್ಚಿನ ಜನರು ಬರುತ್ತಿದ್ದಾರೆ ನಿಮಗನ್ನಿಸುತ್ತಿದ್ದರೆ ಬಂದು ಹೋಗುವುದು. ನಿಮ್ಮ ನೆರೆಹೊರೆಯವರಿಗೆ ಅಡಚಣೆಯನ್ನುಂಟು ಮಾಡಬಹುದು, ಸ್ವತಂತ್ರವಾದ ಸ್ಥಳ (ಸಭಾಂಗಣ ಅಥವಾ ಹತ್ತಿರದ ನೆರೆಹೊರೆಯವರಿಂದ ದೂರವಿರುವ ಒಂದು ಮನೆ) ಹುಡುಕಿ ಅಲ್ಲಿ ಕೂಟಗಳನ್ನು ನಡೆಸಿರಿ.

## ಸ್ಥಳೀಯ ಸಭೆಯ ಕೂಟಗಳಿಗಾಗಿ ಒಂದು ಸ್ಥಳ ಗುರುತಿಸುವುದು

1. ನೀವು ಸಭಾಂಗಣದಲ್ಲಿ ಕೂಟಗಳನ್ನು ಮಾಡಲೂ ತೀರ್ಮಾನಿಸಿದರೆ ಸುಲಭವಾಗಿ ಪ್ರವೇಶಿಸಬಹುದಾದ ಸ್ಥಳವನ್ನು ನೋಡಿರಿ ಮತ್ತು ನಿಮ್ಮ ಗುರಿಯುಳ್ಳ ಕೇಳುಗರ ಸಮೀಪದಲ್ಲಿ ಮಾಡಿರಿ ಉದಾಹರಣೆಗೆ: ಕಾಲೇಜುಗಳು, ಕೆಫೆ/ರೆಸ್ಟೋರೆಂಟ್ ಮಾರುಕಟ್ಟೆಯ ಕ್ಷೇತ್ರ ಮುಂತಾದವು.

2. ಕ್ರೈಸ್ತ ಶಾಲೆಗಳು ಅಥವಾ ವಿದ್ಯಾಸಂಸ್ಥೆಗಳ ಸಭಾಂಗಣ ಉಪಯೋಗಿಸುವ ಸಾಧ್ಯತೆಗಳನ್ನು ಮೊದಲು ಪರಿಶೋಧಿಸಿರಿ ಎಂಬುದಾಗಿ ನಾವು ಸೂಚಿಸುತ್ತೇವೆ. ಇದು ಸಾಮಾನ್ಯವಾಗಿ ವಾಣಿಜ್ಯ ಸ್ಥಳವನ್ನು ಬಾಡಿಗೆಗೆ ತೆಗೆದುಕೊಳ್ಳುವುದಕ್ಕಿಂತ ವೆಚ್ಚವು ಕಾರ್ಯಕಾರಿಯಾಗಿರುತ್ತದೆ. ಇದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಒಂದು ಆಯ್ಕೆಯಾಗಿದೆ.

3. ಸೂಕ್ತವಾದ ಶಾಲೆಯನ್ನು ಗುರುತಿಸುವುದು ಅನುಕೂಲವಾಗಿರದಿದ್ದರೆ. ವಾಣಿಜ್ಯ ಸಭಾಂಗಣವನ್ನು ಬಾಡಿಗೆಗೆ ತೆಗೆದುಕೊಳ್ಳಿರಿ.

4. ನೀವು ಭೂಮಾಲೀಕರು/ಮಾಲೀಕರೊಂದಿಗೆ ಚರ್ಚಿಸುವಾಗ ಸಭೆ/ ಪ್ರಾರ್ಥನಾಕೂಟಗಳು, ಪ್ರಾರ್ಥನೆಗಳನ್ನು ನಡೆಸಲು ತೆಗೆದುಕೊಳ್ಳುತ್ತಿದ್ದೇವೆ. ಅನೇಕ ಜನರು ಬರುತ್ತಾರೆ ಮತ್ತು ಹೋಗುತ್ತಾರೆ ಎಂಬುದನ್ನು ಸ್ಪಷ್ಟವಾಗಿ ಯಾವಾಗಲೂ ಹೇಳಿರಿ. ಇದರ ಬಗ್ಗೆ ಯಾವುದೇ ತಪ್ಪುತಿಳುವಳಿಕೆ ಇರುವುದಿಲ್ಲ.

5. ಯಾವಾಗಲೂ ಭೂಮಾಲೀಕರೊಂದಿಗೆ ಅಥವಾ ಶಾಲಾ ಅಧಿಕಾರಿಗಳೊಂದಿಗೆ, ಬಾಡಿಗೆ ಹಣವೆಷ್ಟು ಮತ್ತು ಠೇವಣಿ ಇಡುವುದು ಎಷ್ಟು ಎಂಬುದನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಿ ಕಾನೂನು ಮುದ್ರೆಯ ಛಾಪಾ ಕಾಗದದಲ್ಲಿ ಬರೆಸಿ ಸಹಿ ಮಾಡಿರಿ. ಜನರು ಮರೆತು ಹೋಗುವುದರಿಂದ ಅಥವಾ ಹೇಳಿದ್ದನ್ನು ಸುಲಭವಾಗಿ ಜನರು ಬದಲಾಯಿಸುವುದರಿಂದ ಬಾಯಿ ಮಾತಿನ ಬದ್ಧತೆಯ ಮೇಲೆ ಯಾವುದೇ ಕಾರಣಕ್ಕೂ ಹೋಗಬೇಡಿರಿ.

## ಔಪಚಾರಿಕ ಸೇವೆಗಳ ಪ್ರಾರಂಭ ಮತ್ತು ಕೂಟಗಳು

1. ಸಭೆಯ ಆರಾಧನೆ/ಕೂಟಗಳು ನಡೆಸುವ ರೀತಿಯಲ್ಲಿ ಅತ್ಯುತ್ತಮತೆಯನ್ನು ಖಚಿತಪಡಿಸಿಕೊಳ್ಳಿರಿ. ಸರಿಯಾದ ಸಮಯಕ್ಕೆ ಪ್ರಾರಂಭಿಸಿ, ವಿಷಯಗಳು ಕ್ರಮಬದ್ಧವಾಗಿ ಸಂಘಟಿಸಿರಿ.

2. ನಿಮ್ಮ ಸಭೆಯ ಆರಾಧನೆಗೆ ಇತರೆ ಸಭೆಯ ಸದಸ್ಯರುಗಳು ಸಂದರ್ಶಿಸಿದರೆ ನೀವು ಅದನ್ನು ತಡೆಯಲು ಸಾಧ್ಯವಿಲ್ಲ, ‘‘ನೀವು ಈಗಾಗಲೇ ರಾಜಿಯಾಗದ

ದೇವರ ವಾಕ್ಯವು ಕಲಿಸಲ್ಪಡುವಂತಹ ಬೇರೆ ಸ್ಥಳೀಯ ಸಭೆಯ ಭಾಗವಾಗಿದ್ದರೆ ದಯವಿಟ್ಟು ನಿಷ್ಠಾವಂತರಾಗಿ ಅಲ್ಲಿಯೇ ಉಳಿದುಕೊಳ್ಳಿರಿ ಆದಾಗ್ಯೂ ನೀವು ಒಂದು ಗೃಹ ಸಭೆಯನ್ನು ಹುಡುಕುತ್ತಿದ್ದರೆ ನೀವು ಮತ್ತೆ ಭೇಟಿ ಮಾಡಲೂ ನಾವು ನಿಮ್ಮನ್ನು ಸ್ವಾಗತಿಸುತ್ತೇವೆ'' ಎಂಬುದಾಗಿ ನಿಯಮಿತವಾಗಿ ಘೋಷಿಸಿರಿ.

# ಭಾಗ 6

# ಮುಕ್ತಾಯದ ಆಲೋಚನೆಗಳು



# 33

# ತಡೆಗಟ್ಟಲು ಮೋಸಗಳು: ಏಳು ಸಭೆಗಳಿಂದ ಪಾಠಗಳು

ಸತ್ಯವೇದದ ಕೊನೆಯ ಪುಸ್ತಕವಾದ ಪ್ರಕಟನೆ ಪುಸ್ತಕವು ಏಷ್ಯಾದಲ್ಲಿನ ಏಳು ಸಭೆಗಳಿಗೆ, ಸಭೆಯ ಮುಖ್ಯಸ್ಥನಾದ ಕರ್ತನಾದ ಯೇಸುಕ್ರಿಸ್ತನ ಸಂದೇಶದೊಡನೆ ಪ್ರಾರಂಭವಾಗುತ್ತದೆ. ಈ ಸಭೆಗಳಿಗೆ ಕರ್ತನು ಮಾತಾಡಿದಂತಹವುಗಳಿಂದ ನಾವು ಕಲಿಯಬೇಕಾದ ಕೆಲವು ಪಾಠಗಳಿವೆ.

## ಎಫೆಸ ಸಭೆಗೆ (ಪ್ರಕಟಣೆ 2:1-7) ಮೊದಲ ಪ್ರೀತಿಯನ್ನು ಪಾಲಿಸು

ಮೊದಲು ನಿನಗಿದ್ದ ಪ್ರೀತಿಯನ್ನು ಬಿಟ್ಟುಬಿಟ್ಟದ್ದಿ.

ಸ್ಥಳೀಯ ಸಭೆಯಾಗಿ, ನಮ್ಮ ದೃಷ್ಟಿಯು ಕರ್ತನ ಮೇಲಿರಬೇಕು ಆತನನ್ನು ಪ್ರೀತಿಸಬೇಕು, ಆತನನ್ನು ಆರಾಧಿಸಬೇಕು ಮತ್ತು ಆತನಿಗೆ ಸೇವೆ ಸಲ್ಲಿಸಬೇಕು.

## ಸ್ಮುರ್ನದಲ್ಲಿನ ಸಭೆ (ಪ್ರಕಟನೆ 2:8-11): ಸಾಯಬೇಕಾಗಿದರೂ ನಂಬಿಗಸ್ತನಾಗಿರು

ಸಾಯುವವರೆಗೂ ನಂಬಿಗಸ್ತನಾಗಿರು.

ಸ್ಥಳೀಯ ಸಭೆಯಾಗಿ ಹಿಂಸೆಯಲ್ಲಿ ಮಧ್ಯದಲ್ಲಿಯೂ ಬಲವಾಗಿ ನಿಂತುಕೊಳ್ಳಲೂ ಸಿದ್ಧವಾಗಿರಬೇಕು.

## ಪೆರ್ಗಮದಲ್ಲಿರುವ ಸಭೆ (ಪ್ರಕಟನೆ 2:12-17): ದುರ್ಬೋಧನೆಗಳ ವಿರುದ್ಧವಾಗಿ ಸಂರಕ್ಷಣೆ

ಸಭೆಯಲ್ಲಿನ ಜನರು ''ಬಿಳಾಮನು ಬಾಲಕನಿಗೆ ಹೇಳಿದ ಸಿದ್ಧಾಂತ'' ಮತ್ತು ''ನಿಕೊಲಾಯಿತರ ಸಿದ್ಧಾಂತ'' ಇವುಗಳನ್ನು ಸಮರ್ಥಿಸುತ್ತಿದ್ದರು.

ವಿಗ್ರಹಾರಾಧನೆ ಮತ್ತು ಜಾರತ್ವವನ್ನು ಒಂದು ಜೀವದ ಶೈಲಿಯಾಗಿ ಸಮರ್ಥಿಸಿಕೊಳ್ಳುತ್ತಿದ್ದಂತಹ ಎರಡು ಗುಂಪುಗಳ ಜನರು

ಸ್ಥಳೀಯ ಸಭೆಯಾಗಿ ನಾವುಗಳು ದೇವರ ಮನೆ/ಜನರನ್ನು ಶುದ್ಧಕರವಾಗಿ ಇಡಬೇಕು. ವಿಗ್ರಹಾರಾಧನೆ ಮತ್ತು ಜಾರತ್ವದಲ್ಲಿ ಜೀವಿಸುವಂತೆ ಮಾಡುವ ಬೋಧನೆಗಳಿಗೆ ವಿರುದ್ಧವಾಗಿ ಸಂರಕ್ಷಣೆ ಮಾಡಿಕೊಳ್ಳಬೇಕು.

## ಥುವತ್ತೈರದಲ್ಲಿನ ಸಭೆ (ಪ್ರಕಟನೆ 2:18-29): ದುರಾತ್ಮಗಳ ವಿರುದ್ಧವಾಗಿ ಸಂರಕ್ಷಿಸಿಕೊಳ್ಳುವುದು.

ಸ್ವ ಪ್ರವಾದಿನಿಯೆಂದು ಹೇಳಿಕೊಂಡು ದೇವರ ಜನರನ್ನು ವಿಗ್ರಹಾರಾಧನೆಗೂ ಮತ್ತು ಜಾರತ್ವವೆಂಬ ತಪ್ಪುದಾರಿ ಎಳೆಯುತ್ತಿರುವ ಒಬ್ಬ ಸ್ತ್ರೀಯಾದ ಯೆಜೆಬೇಲೆಂಬುವಳಿಗೆ ಅನುಮತಿಸಿರುವುದು.

ಇಂತಹ ಕೊನೆಯ ದಿನಗಳ ವಿದ್ಯಮಾನಗಳ ಬಗ್ಗೆ ಪೌಲನು ಎಚ್ಚರಿಕೆ ನೀಡುತ್ತಾನೆ.

1 ತಿಮೊಥೆಯನಿಗೆ 4:1

**ಆದರೂ ಮುಂದಣ ದಿನಗಳಲ್ಲಿ ಕೆಲವರು ವಂಚಿಸುವ ಆತ್ಮಗಳ ನುಡಿಗಳಿಗೂ ದೆವ್ವಗಳ ಬೋಧನೆಗಳಿಗೂ ಲಕ್ಷ್ಯ ಕೊಟ್ಟು ಕ್ರಿಸ್ತ ನಂಬಿಕೆಯಿಂದ ಭ್ರಷ್ಟರಾಗುವರೆಂದು ದೇವರಾತ್ಮನು ಸ್ಪಷ್ಟವಾಗಿ ಹೇಳುತ್ತಾನೆ.**

### *ಯೆಜೆಬೇಲೆಂಬ ಆತ್ಮ*

ಯೆಜೆಬೇಲೆಂಬ ಒಬ್ಬ ಸ್ತ್ರೀಯು ತನ್ನನ್ನು ಪ್ರವಾದಿಸಿ ಎಂದು ಹೇಳಿಕೊಂಡು ''ಆಳವಾದ ಸತ್ಯಗಳನ್ನು'' (ಇದು ಏನೂ ಅಲ್ಲ ಆದರೆ ''ಸೈತಾನನ ಆಳಗಳು'' ಅಥವಾ ದುರಾತ್ಮಗಳ ಸಿದ್ಧಾಂತಗಳು) ಕಲ್ಪಿಸಿಕೊಂಡು ಸಾರುತ್ತಿದ್ದಳು ಮತ್ತು ಜಾರತ್ವ ಮತ್ತು ವಿಗ್ರಹಾರಾಧನೆಗೆ ದೇವ ಜನರನ್ನು ದಾರಿ ತಪ್ಪಿಸುವ ''ಬೋಧನೆ ಮತ್ತು ತಪ್ಪಾದ ಮಾರ್ಗದಲ್ಲಿ'' ನಡೆಸುತ್ತಿದ್ದಳು. ಜಾರತ್ವ ಮತ್ತು ವಿಗ್ರಹಾರಾಧನೆಯು ನೈಸರ್ಗಿಕವಾದುದಕ್ಕೆ ಬದಲಾಗಿದ್ದ ಜಾರತ್ವ ಮತ್ತು ವಿಗ್ರಹಾರಾಧನೆಯ ಮಾದರಿಯ ಅಧಿಕವಾದಂತಹ ''ಆತ್ಮಿಕವಾಗಿರುವಂತೆ ಕಾಣಿಸುತ್ತಿತ್ತು ಅರ್ಥವೇನೆಂದರೆ ಜೀವಿಸುವ ದೇವರಿಗೆ ಬದಲಾಗಿ ಈ ಜನರು ಬೇರೆ ಏನಾದರೊಂದನ್ನು ಅಪ್ಪಿಕೊಳ್ಳುತ್ತಿದ್ದರು. ಭ್ರಷ್ಟಗೊಳಿಸು ಅಂದರೆ ತಪ್ಪಾದ ದಾರಿಗೆ ನಡೆಸುವುದು.

ಯೆಜೆಬೇಲಳ ಆತ್ಮ ಒಬ್ಬ ಪುರುಷ ಅಥವಾ ಸ್ತ್ರೀಯ ಮೂಲಕವಾಗಿ ಕೆಲಸ ಮಾಡಬಹುದು. ಯೆಜೆಬೇಲ ಹಳೇ ಒಡಂಬಡಿಕೆಯಲ್ಲಿ ಅಹಾಬನನ್ನು ತಪ್ಪಾದ ದೇವತೆಗಳನ್ನು ಆರಾಧಿಸಲು ನಡೆಸಿತ್ತು (1 ಅರಸುಗಳು 16:31, 1 ಅರಸುಗಳು 21:25). ಆಕೆಯು ಸತ್ಯವಾದ ದೇವರ ಪ್ರವಾದಿಗಳನ್ನು ಕೊಂದು ಹಾಕಿದ್ದಳು. (1 ಅರಸುಗಳು 18:4) ಸುಳ್ಳು ಪ್ರವಾದಿಗಳಿಗೆ ಸಹಾಯಿಸಿದಳು (1 ಅರಸುಗಳು 18:19) ದೇವರ ಸತ್ಯ ಪ್ರವಾದಿಗಳನ್ನು ಬೆದರಿಸಿದಳು/ಹೆದರಿಕೆ ಹಾಕಿದಳು (1 ಅರಸುಗಳು 19:2), ಆಸ್ತಿಗಾಗಿ ಕೊಲೆಯನ್ನು ಮಾಡಿದಳು (1 ಅರಸುಗಳು 21:5-15) ಮತ್ತು ಮಾಟಮಂತ್ರಗಳನ್ನು ಉತ್ತೇಜಿಸಿದಳು (2 ಅರಸುಗಳು 9:22).

ಸ್ಥಳೀಯ ಸಭೆಯಾಗಿ, ದಾರಿತಪ್ಪಿಸುವಂತಹ ಬೋಧನೆಗಳಿಗೆ ಅನುಮತಿ ನೀಡದಂತೆ ಸಂರಕ್ಷಿಸಿಕೊಳ್ಳಬೇಕು - ಜೀವಿಸುವ ದೇವರು ಮತ್ತು ಸತ್ಯವಾದ ದೇವರ ಬದಲಿಗೆ ಜನರುಗಳ ಅಕ್ಕರೆಯು (ಜಾರತ್ವ) ಮತ್ತು ಆರಾಧನೆ (ವಿಗ್ರಹಾರಾಧನೆಯು) ಸ್ಥಳ ತೆಗೆದುಕೊಂಡಿರುವಂತಹ ಜಾರತ್ವ ಮತ್ತು ವಿಗ್ರಹಾರಾಧನೆ ಜನರನುಸಿ ದಾರಿತಪ್ಪಿಸುವಂತಹ ಕಡೆಗೆ ನಡೆಸುವ ಉಪದೇಶಗಳಿಂದಲೂ ಸುರಕ್ಷಿತರಾಗಿರಬೇಕು.

## ಧಾರ್ಮಿಕವಾದ ಆತ್ಮ

ಯೇಸುವಿನ ಸಮಯದಲ್ಲಿ ಧಾರ್ಮಿಕ ನಾಯಕರುಗಳು/ಫರಿಸಾಯರುಗಳ ಮೂಲಕವಾಗಿ ಇದು ಕಾರ್ಯ ನಿರ್ವಹಿಸುತ್ತಿದ್ದುದ್ದನು ನಾವು ನೋಡುತ್ತೇವೆ.

ಯೇಸುವು, ವಾಕ್ಯವೆಂಬುವನು ದೇಹಧಾರಿಯಾಗಿ ಕಂಡು ಬಂದವನಾಗಿದ್ದಾನೆ. ಆತನು ದೇವರ ಮಗನು ಆದಾಗ್ಯೂ ಫರಿಸಾಯರು ಧಾರ್ಮಿಕ ಜನರುಗಳು ಆತನನ್ನು ಗುರುತಿಸಲಿಲ್ಲ ವಾಸ್ತವವಾಗಿ ಅವರು ಆತನನ್ನು ವಿರೋಧಿಸಿದರು.

ಧಾರ್ಮಿಕ ಆತ್ಮವು ಅನೇಕ ಗುಣಲಕ್ಷಣಗಳನ್ನು ಹೊಂದಿದೆ:

- ಸ್ವಯಂ-ಮೋಸಗೊಳಿಸುವಿಕೆ: ಸತ್ಯವನ್ನು ಸುಳ್ಳು ಎಂಬುದಾಗಿ ಕರೆಯುವುದು (ಯೋಹಾನ 7:40-49). ಸತ್ಯವನ್ನು ಹಿಡಿದಿಟ್ಟುಕೊಳ್ಳುವುದರಿಂದ ದೂರವಿರಿಸುವ ಮೋಸದ ಭಯವು ಸ್ವತಹ ದೊಡ್ಡ ವಂಚನೆಯಾಗಿದೆ.

- ಕಪಟವೇಷದ: ಇತರ ವ್ಯಕ್ತಿಗಳಲ್ಲಿ ರವೆಯನ್ನು ಹುಡುಕುವವರು, ಹಾಗೆಯೇ ತನ್ನ ಸ್ವತಃಹ ಕಣ್ಣಿನೊಳಗಿರುವ ತೊಲೆಯನ್ನು ಯೋಚಿಸದಿರುವವರು (ಮತ್ತಾಯ 7:3-5).
- ಮನುಷ್ಯನನ್ನು - ಮೆಚ್ಚಿಸುವವನು: ದೇವರಿಂದ ಬರುವ ಮಾನಕ್ಕೆ ಬದಲಾಗಿ ಮಾನವನ ಮಾನವನ್ನು ಹುಡುಕುವವರು (ಯೋಹಾನ 5:44).
- ಧರ್ಮನಿಷ್ಠೆಯ ಒಂದು ಭ್ರಮೆಯ ಮೇಲೆ ಇರಿಸುವುದು, ಸ್ವ-ನೀತಿವಂತಿಕೆ ಅಥವಾ ಸೂಪರ್ ಆತ್ಮಿಕತೆ (ಮತ್ತಾಯ 23) ಶುದ್ಧವಾದ ಧರ್ಮವನ್ನು ಹಿಂಬಾಲಿಸುವುದಕ್ಕೆ ಬದಲಾಗಿ (ಯಾಕೋಬನು 1:26-27).

ಪೌಲನು ಎಚ್ಚರಿಕೆ ನೀಡಿದಂತಹ ''ವಂಚನೆಯ ಆತ್ಮಗಳು ಮತ್ತು ದುರಾತ್ಮಗಳ ಸಿದ್ಧಾಂತಗಳಿಗೆ'' ವಿರುದ್ಧವಾಗಿ ಸ್ಥಳೀಯ-ಸಭೆಗಳನ್ನು ನಾವು ಸಂರಕ್ಷಿಸಬೇಕು.

## ಸಾರ್ದಿಸಿನಲ್ಲಿರುವ ಸಭೆ (ಪ್ರಕಟನೆ 3:1-6): ಪ್ರಸಿದ್ಧಿಯಿಂದ ಮೂರ್ಖರಾಗಬೇಡಿರಿ.

ನೀನು ಜೀವಿಸುವವನು ಎಂಬ ಹೆಸರುವಾಸಿ ನಿನಗಿದೆ ಆದರೆ ನೀನು ಸತ್ತವನಾಗಿದ್ದೀ.

ಸ್ಥಳೀಯ ಸಭೆಯಾಗಿ, ನಾವು ದೇವರ ಮುಂದೆ ಸರಿಯಾಗಿದ್ದೇವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಮನುಷ್ಯನ ಅಭಿಪ್ರಾಯ ಮುಖ್ಯವಲ್ಲ. ದೇವರು ನಮ್ಮ ಬಗ್ಗೆ ಏನು ಹೇಳುತ್ತಾನೆ ಎಂಬುದು ಪ್ರಾಮುಖ್ಯವಾದುದು.

## ಫಿಲದೆಲ್ಫಿಯದಲ್ಲಿರುವ ಸಭೆ (ಪ್ರಕಟನೆ 3:7-13) ಸತತ ನಿಷ್ಠನಾಗಿರು, ಹಿಡಿದುಕೊಂಡಿರು.

ಸತತ ನಿಷ್ಠನಾಗಿರು, ನಿನಗಿರುವುದನ್ನು ಹಿಡಿದುಕೊಂಡಿರು.

## ಲವೊದಿಕೀಯದಲ್ಲಿರುವ ಸಭೆ (ಪ್ರಕಟನೆ 3:14-22): ಬೆಂಕಿಯ ಮೇಲೆ, ಕೆಂಪು ಬಿಸಿಯಾಗಿರು

ನೀನು ತಣ್ಣಗೂ ಅಲ್ಲ, ಬೆಚ್ಚಗೂ ಅಲ್ಲ.

ಸ್ವಯಂ ಪೂರ್ಣತೆ, ಸೌಕರ್ಯಗಳ ಬಗ್ಗೆ ಜಾಗರೂಕರಾಗಿರಿ! ಆತನ ಮನೆಯಿಂದ ಯೇಸುವನ್ನು ಇದು ಹೊರಗಿರಿಸುತ್ತದೆ! ಕರ್ತನಿಗಾಗಿ ಭಾವೋದ್ರೇಕದೊಡನೆ ಬೆಂಕಿಯ ಮೇಲೆ ಯಾವಾಗಲೂ ''ಬಿಸಿ'' ಆಗಿರಬೇಕು.

# ನೀವು ಹೊಂದಿಕೊಳ್ಳಲು ಮಾದರಿಗಳು

ಆಲ್ ಪೀಪಲ್ಸ್ ಸಭೆಯು ಉಚಿತವಾಗಿ ವಿದ್ಯುನ್ಮಾನ ಪ್ರತಿಗಳನ್ನು(ಮೈಕ್ರೋಸಾಫ್ಟ್ ಪದ ದಾಖಲೆಗಳನ್ನು) ಯಾವುದಾದರೂ ಅಥವಾ ನಾವು ಉಪಯೋಗಿಸುವಂತಹ ಕೆಳಕಂಡ ದಾಖಲೆಗಳನ್ನು ಒದಗಿಸಲು ಸಂತೋಷವುಳ್ಳವರಾಗಿದ್ದೇವೆ.

ಸಭಾ ಸಿಬ್ಬಂದಿ ಮಾರ್ಗದರ್ಶಿ

ಸಭಾ ಸಿಬ್ಬಂದಿ ಕಾರ್ಯ ನಿರ್ವಹಣೆ ವಿಮರ್ಶೆ ದಾಖಲೆ

ಸಭಾ ಸ್ವಯಂ ಸೇವಕ ಮಾರ್ಗದರ್ಶಿ

ಲೈಫ್‌ಗ್ರೂಪ್ ನಾಯಕರುಗಳು ತರಬೇತಿ ಕೈಪಿಡಿ

ಸಭಾ ಸದಸತ್ವ ಕಿರುಪುಸ್ತಕ

ಮಾರ್ಗದರ್ಶನದ ಮಾರ್ಗದರ್ಶಿ

ಪಾತ್ರ ವಿವರಣೆಯ ಮಾದರಿ

contact@apcwo.orgಗೆ ನೀವು ಇ-ಮೇಲ್ ಕಳುಹಿಸುವ ಮೂಲಕವಾಗಿ ವಿನಂತಿಸಿ-ಕೊಳ್ಳಬಹುದಾಗಿದೆ.

ನಿಮ್ಮ ಸೇವೆಗೆ ಮತ್ತು ಸಭೆಗೆ ಸರಿ ಹೊಂದುತ್ತಿರುವಂತೆ ಉಪಯೋಗಿಸಿ ಮತ್ತು ಮಾರ್ಪಡಿಸಿಕೊಳ್ಳಲು ನೀವು ಸ್ವತಂತ್ರವಾಗಿ ಮಾಡಿರಿ ಉಪಯೋಗಿಸಿರಿ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

### ಉಚಿತ ಇ-ಪುಸ್ತಕಗಳು

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

### ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು

'ಲಿವಿಂಗ್ ಸ್ಟ್ರಾಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ  ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಆಲ್‌ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್‌ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು "ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ" ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

## ಟಿಪ್ಪಣಿಗಳು

## DOWNLOAD THE FREE APP!

*Search for*
**"All Peoples Church Bangalore"**
**in the App or Google play stores.**




***A daily 5-minute video devotional.***
***A daily Bible reading and prayer guide.***
***5-minute Sermon summary.***
***Toolkit with Scriptures on various topics to build faith and information to share the Gospel.***
***Resources with sermons, sermon notes, TV programs, books, music and more.***

***IF YOU LOVE IT, TELL OTHERS ABOUT IT!***

## ನೀಲನಕ್ಷೆ

ನೀಲನಕ್ಷೆಯು ಏನಾದರೊಂದನ್ನು ಮಾಡುವುದಕ್ಕೆ ಮಾರ್ಗದರ್ಶಿಯಾಗಿದೆ. ಇದು ಒಂದು ರಚನೆ ಅಥವಾ ಅನುಸರಿಸುವ ಒಂದು ಮಾದರಿಯಾಗಿದೆ. ನಾವು ಏನಾದರೊಂದನ್ನು ಕಟ್ಟಲು ಕುಳಿತುಕೊಂಡರೆ, ನಾವು ಸಾಮಾನ್ಯವಾಗಿ ಅದರ ನೀಲನಕ್ಷೆಯನ್ನು ಹಾಕುತ್ತೇವೆ. ಎಳೆಯುತ್ತೇವೆ ಮತ್ತು ಆಮೇಲೆ ಎಚ್ಚರಿಕೆಯಿಂದ ಅದರ ವಿನ್ಯಾಸವನ್ನು ಅನುಸರಿಸುತ್ತೇವೆ. ನೀಲನಕ್ಷೆಯು ಏನನ್ನು ಮಾಡಬೇಕೆಂಬುದನ್ನು ನಿಶ್ಚಯಿಸುತ್ತದೆ. ಈ ಸ್ಥಳೀಯ ಸಭೆಗಳು ವಿಶ್ವಾಸಿಗಳ ಸ್ಥಳೀಯ ಸಮುದಾಯಗಳಿಗಾಗಿ ದೇವರ ನೀಲನಕ್ಷೆಯನ್ನು ದೇವರ ಮನೆ ಎಂಬ ಈ ಒಂದು ಕೈಪಿಡಿಯಲ್ಲಿ ಕಂಡು ಹಿಡಿಯಬಹುದಾಗಿದೆ ದೇವರ ನೀಲನಕ್ಷೆಗನುಸಾರವಾಗಿ ಸ್ಥಳೀಯ ಸಭೆಗಳನ್ನು ಕಟ್ಟುವ ಪ್ರಾಯೋಗಿಕ ಮಾರ್ಗಗಳನ್ನು ಸಹ ನಾವು ಹಂಚಿಕೊಳ್ಳುತ್ತೇವೆ.

ನಮ್ಮ ಗುರಿಯು, ವಿಧಾನಗಳು ಮತ್ತು ತಂತ್ರಗಳನ್ನು ಪ್ರಸ್ತುತ ಪಡಿಸುವುದಲ್ಲ ಆದರೆ ಬದಲಾಗಿ ಸ್ಥಳೀಯ ಸಭೆಯು ಯಾವ ರೀತಿ ಇರಬೇಕೆಂಬುದಾಗಿ ದೇವರು ಅಪೇಕ್ಷಿಸುವುದನ್ನು ಕಂಡುಹಿಡಿಯುವುದಾಗಿದೆ. ನಮ್ಮ ಸ್ಥಳೀಯ ಸಭೆಗಳನ್ನು ದೇವರ ನೀಲನಕ್ಷೆಗನುಸಾರವಾಗಿ ಅಭಿವೃದ್ಧಿಪಡಿಸುವಾಗ, ನಮ್ಮಲ್ಲಿ ಪ್ರತಿಯೊಬ್ಬರೂ ದೇವರೊಂದಿಗೆ ನಮ್ಮ ವೈಯಕ್ತಿಕ ಪ್ರಯಾಣ ಮಾಡಬೇಕು. ಪ್ರತಿಯೊಬ್ಬರು ನಮ್ಮ ಸ್ಥಳೀಯ ಸಮುದಾಯಗಳಲ್ಲಿ ಈ ಒಂದು ನೀಲನಕ್ಷೆಯ, ನಮ್ಮ ಸ್ವಂತ ಅಭಿವ್ಯಕ್ತತೆಯನ್ನು ಕಂಡುಹಿಡಿಯಬೇಕು. ದೇವರು ಸೃಜನಾತ್ಮಕನಾಗಿರುವುದರಿಂದ ಆತನು ನೀಲನಕ್ಷೆಯ ಬಗ್ಗೆ ಅನೇಕ ಅಭಿವ್ಯಕ್ತತೆಯನ್ನು ಹೊಂದಿದ್ದಾನೆ.

ಒಂದು ಸಾಮಾನ್ಯ ಗುಣವೇನೆಂದರೆ, ನಾವೆಲ್ಲರು ಸ್ಥಳೀಯ ಸಭೆಗಳಿಗಾಗಿ ಅದೇ ನೀಲನಕ್ಷೆಯನ್ನು ಮುಂದುವರಿಸುತ್ತಿರುವುದಾಗಿದೆ. ನೀಲನಕ್ಷೆಯು ದೇವರ ವಿನ್ಯಾಸವನ್ನು ವಿವರಿಸುತ್ತದೆ. ಇದು ದೇವರ ಒಂದು ಮೂಲ ಉದ್ದೇಶ. ಮುಖ್ಯ ಗುಣಲಕ್ಷಣಗಳು ಇದರ ಮುಖ್ಯಾಂಶಗಳಾಗಿವೆ. ಪ್ರಮುಖ ಲಕ್ಷಣಗಳನ್ನು ಇದು ವಿವರಿಸುತ್ತದೆ. ಇದು ಪ್ರಮುಖವಾಗಿ ದೃಷ್ಟಿಸುವ ಕ್ಷೇತ್ರಗಳನ್ನು ಇದು ತೋರಿಸುತ್ತದೆ. ನಾವು ಆತನ ನೀಲನಕ್ಷೆಯನ್ನು ಹಿಂಬಾಲಿಸುವಾಗ, ನಾವು ಸರಿಯಾದ ಮಾರ್ಗದಲ್ಲಿ ಚಲಿಸುವವರಾಗಿರುತ್ತೇವೆ. ಮತ್ತು ನಮ್ಮ ಸ್ಥಳೀಯ ಸಭೆಗಳಿಗಾಗಿರುವ ಸರಿಯಾದ ನಿರ್ದಿಷ್ಟ ಸ್ಥಳಕ್ಕೆ ಅಂತಿಮವಾಗಿ ಬರುತ್ತೇವೆ.

### ನಿಮ್ಮ ಸೇವೆ ಮತ್ತು ದೇವರ ನೀಲನಕ್ಷೆ

ಒಳಗಡೆ ನಿಮ್ಮ ಸೇವೆಯು ಏನು ಎಂಬುದನ್ನು ಲೆಕ್ಕಿಸದೆ ಅಥವಾ ಸ್ಥಳೀಯ ಸಭೆಯ ಸಂಬಂದದಲ್ಲಿ, ನೀವು ಮಾಡುತ್ತಿರುವಂತಹವುಗಳು ಆತನ ಜನರಿಗಾಗಿ ಇರುವ ದೇವರ ನೀಲನಕ್ಷೆಗೆ ಸಮನಾಂತರವಾಗಿರಬೇಕು. ಸಭಾಪಾಲಕರು/ಹಿರಿಯ ಸಭಾಪಾಲಕರುಗಳಾಗಿ, ಸ್ಥಳೀಯ ಸಭೆಯು ದೇವರ ನೀಲನಕ್ಷೆಗನುಗುಣವಾಗಿ ಎಲ್ಲಾ ಆಯಾಮಗಳಲ್ಲಿ ಅಭಿವೃದ್ಧಿಯಾಗುತ್ತಿದೆಯಾ ಮತ್ತು ಬೆಳೆಯುತ್ತಿದೆಯಾ ಎಂಬುದನ್ನು ಖಚಿತಪಡಿಸಿಕೊಳ್ಳುವ ಜವಬ್ದಾರಿಯನ್ನು ವಹಿಸಿಕೊಳ್ಳಬೇಕು.

ಸಂಚಾರಿ ಸುವಾರ್ತಿಕರು, ಬೋಧಕರು, ಪ್ರವಾದಿಗಳು, ಅಥವಾ ಅಪೊಸ್ತಲರುಗಳಾಗಿ, ನೀವು ಸಭಿಕರಿಗೆ ಸೇವೆ ಸಲ್ಲಿಸುವಾಗ ನಿಮ್ಮ ಗುರಿಯು, ಸ್ಥಳೀಯ ಸಭೆಗಾಗಿ ಇರುವ ದೇವರ ವಿನ್ಯಾಸಕ್ಕನುಸಾರವಾಗಿ ಹಲವು ರೀತಿಗಳಲ್ಲಿ ಸಭಿಕರನ್ನು ಹೆಚ್ಚಳಗೊಳಿಸುವುದು ಮತ್ತು ಭಾಗ ಕೊಡುವುದಾಗಿರಬೇಕು. ಯೌವ್ವನಸ್ಥರ ಸಭಾಪಾಲಕರಾಗಿ ಆರಾಧನಾ ನಾಯಕರು, ಮಕ್ಕಳ ಸಭೆಯಲ್ಲಿ, ಸ್ತ್ರೀಯರ ಸೇವೆಯಲ್ಲಿ, ಪುರುಷರ ಸೇವೆಯಲ್ಲಿ ಅಥವಾ ಸಣ್ಣಗೋಪುರಗಳಲ್ಲಿ ಸೇವೆಸಲ್ಲಿಸುತ್ತಿರಲಿ ಆದಾಗ್ಯೂ ಆ ಸ್ಥಳೀಯ ಸಭೆಯಲ್ಲಿನ ಆತನ ಜನರುಗಳ ಜೀವಿತಗಳಲ್ಲಿ ದೇವರ ನೀಲನಕ್ಷೆಯನ್ನು ಸ್ಥಾಪಿಸುವ ಕಡೆಗೆ ನೀವು ಕಾರ್ಯ ಮಾಡುತ್ತಿದ್ದಿರಿ.

ನಿಕಟವಾಗಿ ದೇವರ ವಿನ್ಯಾಸವನ್ನು ಅನುಸರಿಸಿರಿ ಮತ್ತು ನೀವು ತಪ್ಪಾಗಿ ಹೋಗುವುದಿಲ್ಲ!

**All Peoples Church & World Outreach**
#319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: www.apcwo.org